# ಸತ್ಯಸಾಯಿ ವಾಹಿನಿ

ತೆಲುಗು ಮೂಲ

**ಭಗವಾನ್ ಶ್ರೀ ಸತ್ಯಸಾಯಿ ಬಾಬಾ**

ಇಂಗ್ಲಿಷ್ ಸಂಕಲನ

**ನಾ. ಕಸ್ತೂರಿ**

ಕನ್ನಡ ಅನುವಾದ

**ಆರ್. ಎಲ್. ಅನಂತರಾಮಯ್ಯ**

**ಶ್ರೀ ಸತ್ಯಸಾಯಿ ಪಬ್ಲಿಕೇಷನ್ಸ್ ಸೊಸೈಟಿ (ರಿ)**
'ಸುಧಾಮ ಹೌಸ್', ಚಿಕ್ಕಪೇಟೆ, ಬೆಂಗಳೂರು ೫೬೦ ೦೫೩
೨೦೧೮

*Satyasai Vahini*—by Bhagawan Sri Satya Sai Baba in Telugu, compiled to English by N. Kasturi, translated to Kannada by R.L. Anantharamaiah. Published by Sri Sathya Sai Publications Society (R), 'Sudhama House', Chickpet, Bengaluru 560 053, India. Demy octavo, Pages x+210; First impression: 1998.

© 2018
Sri Sathya Sai Publications Society, Bengaluru, India

೦೬/೨೦೧೮ (೨೦೦೦ ಪ್ರತಿಗಳು)

ಪುಟಗಳು : ೨೨೦

**ಬೆಲೆ : ₹ 55**

ಮುದ್ರಣ : ಪದ್ಮ ಶೇಖರ್ ಪ್ರಿಂಟರ್ಸ್, ಮೈಸೂರು; ✆ 98865 05878

ಬೇರೆ ಬೇರೆ ಧರ್ಮಗಳೆಲ್ಲ ಇರಲಿ,
ಎಲ್ಲ ಧರ್ಮಗಳೂ ವರ್ಧಿಸಲಿ,
ಭಗವಂತನ ಮಹಿಮೆಯನ್ನು ಎಲ್ಲ ಭಾಷೆಗಳಲ್ಲೂ
ವಿವಿಧ ರಾಗಗಳಲ್ಲೂ ಹಾಡಲಿ.
ಧರ್ಮ ಧರ್ಮಗಳ ವ್ಯತ್ಯಾಸ ವೈಶಿಷ್ಟ್ಯಗಳನ್ನು ಗೌರವಿಸಿ.
ಭಾವೈಕ್ಯತೆಯ ಬೆಳಕನ್ನು ನಂದಿಸದಿರುವ
ಧರ್ಮಗಳೆಲ್ಲ ಸತ್ವಯುತ ಎಂದು ಮನ್ನಿಸಿ.

**ಶ್ರೀ ಸತ್ಯಸಾಯಿ ಬಾಬಾ**

ಓಂ ಬ್ರಹ್ಮಾಂಡಕ್ಕೆ ಮೂಲವಾದ ಆದಿಮ ಶಬ್ದ. ಓಂಕಾರವು ಅನಾಹತ ಶಬ್ದ. ನಿಮ್ಮ ಹೃದಯದಲ್ಲೂ ವಿಶ್ವದ ಹೃದಯದಲ್ಲೂ ಸದಾ ನಿನದಿಸುತ್ತಿರುವ ಅದನ್ನು ಆಲಿಸಿರಿ.

ಅಹಂಕಾರವನ್ನು ಕತ್ತರಿಸಿ. ಅದು ಶಿಲುಬೆಯ ಮೇಲೆ ಅಳಿದು ಹೋಗಲಿ. ನಮಗೆ ಅಮರತ್ವವನ್ನು ತರಲಿ.

ಕಾರಣ–ಪರಿಣಾಮ, ಕಾರ್ಯ–ಅದರ ಫಲ—ಇವುಗಳ ಚಕ್ರವನ್ನು ಸದಾ ನೆನಪಿನಲ್ಲಿಡಿ.

ಚಂದ್ರನಿಂದ ದೂರ ಸರಿಯದ ನಕ್ಷತ್ರದ ಹಾಗೆ ನೀವೂ ಭಗವಂತನಿಂದ ಅತ್ತಿತ್ತ ಅಲುಗದೆ ಸ್ಥಿರವಾದ ಶ್ರದ್ಧೆಯನ್ನು ಬೆಳೆಸಿಕೊಳ್ಳಿರಿ.

ಬದುಕಿನ ಕಹಿಯೆಲ್ಲವನ್ನು ಈ ಪವಿತ್ರಾಗ್ನಿಯಲ್ಲಿ ಸಮರ್ಪಿಸಿ ಭವ್ಯರಾಗಿ, ಮಹಾನ್ ಆಗಿ ಪರಿಣಮಿಸಿರಿ.

# ಪರಿವಿಡಿ


ಮುನ್ನುಡಿ . . . . . . . . . . . . . . . . . . . . . . . . . . . . vii
೧ ಪರಮೋನ್ನತ ಸತ್ಯ ೧
೨ ಸತ್ಯದಿಂದ ಸತ್ಯದ ಕಡೆಗೆ ೭
೩ ಅವನೊಬ್ಬನೇ ೧೪
೪ ಪವಾಡಗಳ ಪವಾಡ ೨೧
೫ ಮೂಲ ನಂಬಿಕೆ ೨೭
೬ ಧರ್ಮವು ಒಂದು ಅನುಭವ ೩೪
೭ ನೀವೇ ಆಗಿರಿ ೪೦
೮ ಬಂಧನ ೪೬
೯ ಒಂದರೊಡನೆ ಒಂದಾಗುವುದು ೫೧
೧೦ ಯೋಗಿಗಳು ೫೫
೧೧ ವೇದಗಳಲ್ಲಿ ಮೌಲ್ಯಗಳು ೭೦
೧೨ ಮುಂದಿನ ಸಾಹಿತ್ಯಗಳಲ್ಲಿ ಮೌಲ್ಯಗಳು ೭೬
೧೩ ಗುರುವಾಗಿ ಅವತಾರ ಪುರುಷ ೮೬
೧೪ ಇದು ಮತ್ತು ಅದು ೧೦೦
೧೫ ಮಟ್ಟಗಳು ಮತ್ತು ಹಂತಗಳು ೧೦೫
೧೬ ಮಾನವ ಮತ್ತು ದೇವ ೧೧೦
೧೭ ವರ್ಣ ಮತ್ತು ಜಾತಿ? ೧೧೭
೧೮ ಕಾರ್ಯ ಮತ್ತು ಕರ್ಮ ೧೨೪
೧೯ ಪ್ರಾರ್ಥನೆ ೧೩೧
೨೦ ಮೂಲ ಉದ್ದೇಶ ೧೩೯
೨೧ ಅಂತರಂಗದ ಅನ್ವೇಷಣೆ ೧೫೨
೨೨ ನಿತ್ಯ ಸತ್ಯಗಳು ೧೬೫
೨೩ ಪೂಜಾ ವಿಧಾನಗಳು ೧೮೫
೨೪ ಪುರುಷೋತ್ತಮನ ದೇಹ ೧೯೯

# ಮುನ್ನುಡಿ

ಪ್ರಿಯ ಸಾಧಕ

ಭಗವಾನರು ತಮ್ಮನ್ನು ಸತ್ಯ–ಶಿವ–ಸುಂದರಗಳನ್ನು ಬೋಧಿಸುವ ದಿವ್ಯ ಗುರು ಎಂಬುದಾಗಿ ಘೋಷಿಸಿದ್ದಾರೆ. ತಮ್ಮ ಬರವಣಿಗೆಗಳು ಮತ್ತು ಪ್ರವಚನಗಳ ಮೂಲಕ, ಪತ್ರಗಳು ಮತ್ತು ಸಂಭಾಷಣೆಗಳ ಮೂಲಕ, ಮಾದರಿಯನ್ನು ಹಾಕಿ ಕೊಟ್ಟು, ಅತ್ಯುನ್ನತ ಜ್ಞಾನವನ್ನು ಅವರು ಉದ್ದೀಪಿಸುತ್ತಿದ್ದಾರೆ. ಅದನ್ನು ಧರ್ಮಯುತ ಜೀವನವಾಗಿ, ಅಂತರಂಗದ ಶಾಂತಿಯಾಗಿ ಹಾಗೂ ವಿಶ್ವಾತ್ಮಕ ಪ್ರೇಮವಾಗಿ ಅನುವದಿಸಿಕೊಳ್ಳುವಂತೆ ಬೋಧಿಸುತ್ತಿದ್ದಾರೆ. ರಾಮ ಕಥೆಯ ವಿಶಿಷ್ಟ, ಅಧಿಕೃತ, ಅಮೃತ ಪ್ರವಾಹವಾದ ರಾಮಕಥಾರಸ ವಾಹಿನಿಯು ಸನಾತನ ಸಾರಥಿಯಲ್ಲಿ ಧಾರವಾಹಿಯಾಗಿ ಪ್ರಕಟವಾದ ನಂತರ ಭಗವಾನರು ಓದುಗರಿಗೆ ಇನ್ನೊಂದು ಹೊಸ ಸರಣಿಯನ್ನು ಅನುಗ್ರಹಿಸಿದರು. ಅದಕ್ಕೆ 'ಭಾರತೀಯ ಪರಮಾರ್ಥ ವಾಹಿನಿ' (ಭಾರತೀಯ ಆಧ್ಯಾತ್ಮಿಕ ಮೌಲ್ಯಗಳ ವಾಹಿನಿ) ಎಂದು ಹೆಸರಿಟ್ಟರು. ಇತಿಹಾಸ ಪೂರ್ವಕಾಲದಿಂದಲೂ ಭಾರತೀಯ ಸಂಸ್ಕೃತಿಯನ್ನು ಪೋಷಿಸುತ್ತಿರುವ ಮೂಲ ಸತ್ಯ ಗಳನ್ನು ಕುರಿತ ಈ ಅಮೂಲ್ಯ ಪ್ರಬಂಧಗಳು ಪ್ರಕಟವಾಗುತ್ತಿದ್ದಾಗ ಬೆಳಕಿನ ಹಾಗೂ ಬೋಧನೆಯ ಈ ಹೊಳೆಯನ್ನು ಇನ್ನೂ ಹೆಚ್ಚು ಸಮಗ್ರವೂ ಅರ್ಥಪೂರ್ಣವೂ ಆದ ಹೆಸರಿನಿಂದ ಮುಂದುವರಿಸಲು ಭಗವಾನರು ನಿರ್ಧರಿಸಿದರು. ಅದೇ 'ಸತ್ಯಸಾಯಿ ವಾಹಿನಿ'. ಇದು ಭಗವಂತನ ಚರಣಕಮಲಗಳಿಂದ ಹರಿದು ಬಂದ ಗಂಗೆ, ದಿವ್ಯ ಸಾಯಿ ಕೃಪೆಯ ಪ್ರವಾಹ. ಆದ್ದರಿಂದ, ಈ ಪುಸ್ತಕವು ಒಂದೇ ಪ್ರವಾಹದಲ್ಲಿ ಹರಿದು ಬಂದ ಎರಡೂ ಅಮೃತ ವಾಹಿನಿಗಳನ್ನು ಒಳಗೊಂಡಿದೆ.

ಈ ಸರಣಿಯನ್ನು ಆರಂಭಗೊಳಿಸುವಾಗ, ಸನಾತನ ಸಾರಥಿಯಲ್ಲಿ ಪ್ರಕಟಿಸುವ ಸಲುವಾಗಿ ಹೀಗೆ ಬರೆದರು: "ಸಂಘರ್ಷದ ಪಾಪವನ್ನು ಶಮನಗೊಳಿಸಿ, ನೀವು ಹಂಬಲಿಸುತ್ತಿರುವ ಆತ್ಮಜ್ಞಾನದ ಕೃಪೆಯನ್ನು ತೃಪ್ತಿಪಡಿಸುವ ಸಲುವಾಗಿ, ಇದೋ ಇಲ್ಲಿ ಸತ್ಯಸಾಯಿ ವಾಹಿನಿಯು ಹರಿದು ಬರುತ್ತಿದೆ, ಅಲೆಯಾದ ಮೇಲೆ ಅಲೆಯಂತೆ ಸನಾತನ ಸಾರಥಿಯೊಂದಿಗೆ ನಿಮ್ಮ ಮತ್ತು ನನ್ನ ನಡುವೆ ಸಂಪರ್ಕವಾಗಿ ಬರುತ್ತಿದೆ." ಸರ್ವಜ್ಞ ಭಗವಂತನ ಈ ಸತ್ಯಸಾಯಿ ಅವತಾರವು ಎಲ್ಲಾ ದೇಶಗಳ ಲಕ್ಷಲಕ್ಷ ಜನರಿಗೆ ರೋಗ, ಹತಾಶೆ, ಮಾದಕ ವಸ್ತು ಚಟ, ಆತ್ಮಶ್ಲಾಘನೆ ಹಾಗೂ ಶೂನ್ಯವಾದಗಳಿಂದ ಬಿಡುಗಡೆ ಕೊಡುತ್ತಿದೆ. ಇಚ್ಛಾಪೂರ್ವಕವಾಗಿ ಕುರುಡಾಗಿರುವವರಿಗೆ, ಪ್ರೇಮದ ದೀಪವನ್ನು ಹಚ್ಚಿ ತಮ್ಮನ್ನು ನೋಡಲು ಅವರು ಕರೆ ಕೊಡುತ್ತಾರೆ. "ಇದು ಮರುಳುಗೊಳಿಸುವ ಸತ್ಯ ಮಿಥ್ಯಾ ಜಗತ್ತು; ಅದರ ತೋರಿಕೆಯ ವೈವಿಧ್ಯವು ಒಂದು ಭ್ರಮೆ; ಇದು ಏಕವಾದದ್ದು. ಆದರೆ ಮಾನವರ ವಿಕಲ ದೃಷ್ಟಿಗೆ ಅನೇಕವಾಗಿ ಕಾಣುತ್ತಿದೆ," ಎನ್ನುತ್ತಾರೆ ಭಗವಾನರು. ಈ ಕೃತಿಯು ಅವರು ನಮಗಾಗಿ ರೂಪಿಸಿಕೊಟ್ಟ ಜೋಡಿ ದೀಪ.

ಸುಪ್ರಸಿದ್ಧ ಕ್ಷತ್ರಿಯ ವೀರನಾದ ಅರ್ಜುನನು ದೇಹಬಲದ ಎದುರಾಗಿ ಧರ್ಮದ ಬಲದ ಪರವಾಗಿ ನಿಂತು ಹೋರಾಡುವ ಕರೆಯು ಬಂದ ಹೊತ್ತಿನಲ್ಲಿ ಮನಸ್ಸಿನಲ್ಲಿ ಕವಿದ ವಿಷಾದದಿಂದ ಕುಸಿದಿದ್ದಾಗ ಭಗವಾನ್ ಕೃಷ್ಣನು ಅವನನ್ನು ಸೂಕ್ತವಾಗಿ ಎಚ್ಚರಿಸಿದನು, ಅವನ ಕಣ್ಣು ತೆರೆಯಿಸಿದನು. ಅರ್ಜುನನಿಗೆ ಅವನ ನಿಜಸ್ವರೂಪವಾದ ಆತ್ಮದ ನೆನಪು ಮಾಡಿ ಕೊಟ್ಟು, ಆ ಆತ್ಮವು ತಾನೇ ಎಂದು ತೋರಿಸಿಕೊಟ್ಟು ಕೃಷ್ಣನು ಅವನಿಗೆ ಈ ಚಿಕಿತ್ಸೆ ಮಾಡಿದನು. ನಾವೆಲ್ಲರೂ ಬಹು ಸುಲಭವಾಗಿ ಜಾಣತನದ ಸುಳಿಗಳು ಮತ್ತು ತರ್ಕದ ಬಲೆಗಳಲ್ಲಿ

ತೊಡರಿಕೊಳ್ಳುತ್ತೇವೆ. ಆಧ್ಯಾತ್ಮ ಸಾಧನೆಯ ಯಶಸ್ಸಿಗೆ ಕೀಲಿಕೈ (ಆ ಉನ್ನತ ಸಾಧನೆಗೆ ತನ್ನನ್ನು ಒಪ್ಪಿಸಿಕೊಳ್ಳದಿದ್ದರೆ ಅಂತಹ ಬದುಕಿಗೆ ಬೆಲೆಯೆಲ್ಲಿಯದು?) ತತ್ತ್ವ ಶಾಸ್ತ್ರೀಯ ವಿಚಾರ ಮತ್ತು ನೈತಿಕ ಪ್ರಗತಿ. ಸಕಲ ಕಾರ್ಯ ಚಟುವಟಿಕೆ ಹಾಗೂ ಶಕ್ತಿಗಳ ಮೂಲವಾದ ಆತ್ಮದ ಅರಿವಿನಲ್ಲಿ ಅದು ಶಿಖರಕ್ಕೇರುತ್ತದೆ. ನಾವೆಲ್ಲರೂ ಅರ್ಜುನನಂತೆಯೇ ಭೀತಿ, ಸಂದೇಹ, ಮೋಹಗಳಿಂದ ಚೋದಿತರಾಗುತ್ತೇವೆ. ಇದು ಅದು, ಅಲೆ ಮತ್ತು ಸಾಗರಗಳ ನಡುವಣ ಕೂಡುರಸ್ತೆಯಲ್ಲಿ ಸಂದೇಹಕ್ಕೊಳಗಾಗಿ ನಿಂತಿದ್ದೇವೆ.

ಆದರೆ ಅವನಿಂದ ಸೃಷ್ಟಿಗೊಂಡಂತೆ ನಾವು ಪವಾಡಗಳ ಪವಾಡವಾಗಿದ್ದೇವೆ. "ಮನುಷ್ಯನಲ್ಲಿ ಏನಿಲ್ಲವೋ ಅದು ಅವನಿಂದ ಹೊರಗೆ ಬೇರೆಲ್ಲಿಯೂ ಇಲ್ಲ; ಅವನಿಂದ ಹೊರಗೆ ಏನು ಗೋಚರಿಸುತ್ತದೋ ಅದು ನಿಜವಾಗಿ ಅವನ ಒಳಗಿರುವುದರ ಸ್ಥೂಲ ಪ್ರತಿಬಿಂಬ ಅಷ್ಟೆ," ಎಂದು ಭಗವಾನರು ಹೇಳುತ್ತಾರೆ. "ಆತ್ಮವು ಮುಕ್ತ, ಅದು ಪರಿಶುದ್ಧ, ಅದು ಪೂರ್ಣ, ಅದು ಬಂಧನ ರಹಿತ. ಅದರ ಕೇಂದ್ರವು ದೇಹವಾಗಿದೆ, ಆದರೆ ಅದರ ಪರಿಧಿಯು ಅತೀತದ ಅತೀತವಾಗಿದೆ." ಮನುಷ್ಯನಲ್ಲಿ ಆತ್ಮದ ಅಸ್ತಿತ್ವವನ್ನು ಗುರುತಿಸಬಲ್ಲ ಒಂದು ಉನ್ನತ ಪ್ರಜ್ಞೆಯಿದೆ. ಅದನ್ನು ಅವನ ಅರಿವಿಗೆ ತರಲು ಯತ್ನಿಸಿ ಯಶಸ್ವಿಯಾಗುತ್ತದೆ.

ಆದರೆ ತಾವು ಯಾರು, ಏಕೆ ಇಲ್ಲಿದ್ದಾರೆ, ಎಲ್ಲಿಂದ ಬಂದಿದ್ದಾರೆ, ಇಲ್ಲಿಂದ ಎಲ್ಲಿಗೆ ಹೋಗುತ್ತಾರೆ ಎಂಬುದನ್ನು ತಿಳಿದುಕೊಳ್ಳಲು ಬಯಸುವ ಜನರು ಅತಿ ವಿರಳ. ಅನಿತ್ಯವೂ ನಿತ್ಯ ಪರಿವರ್ತನಶೀಲವೂ ಆದ ದೇಹಗಳಲ್ಲಿ ಕೋಶಸ್ಥವಾಗಿ ತಾತ್ಕಾಲಿಕವಾದ ನಾಮಗಳಿಂದ ಅವರು ಓಡಾಡುತ್ತಾರೆ. ಆದ್ದರಿಂದ ಭಗವಾನರು ನಮ್ಮನ್ನು ಎಚ್ಚರಿಸುತ್ತಾರೆ, "ಕೇಳಿ, ಅಮೃತ ಪುತ್ರರೇ ಕೇಳಿ! ಮಾಯಾತೀತನಾಗಿರುವ, ಅತ್ಯಂತ ಉದಾತ್ತನಾದ, ಅಗ್ರೇಸರನಾದ, ಅಗ್ರಗಣ್ಯನಾದ ಪುರುಷೋತ್ತಮನ ದರ್ಶನವನ್ನು ಪಡೆದಿದ್ದ ಋಷಿಗಳು ನೀಡಿರುವ ಸಂದೇಶ ವನ್ನು ಆಲಿಸಿರಿ! ಓ ಮಾನವ ಜೀವಿಗಳೇ, ನೀವು ಸಹಜವಾಗಿ ಸದಾ ಪೂರ್ಣರು. ನಿಜವಾಗಿ ನೀವು ಭೂಮಿಯ ಮೇಲೆ ನಡೆದಾಡುವ ಭಗವಂತ! ನಿಮ್ಮನ್ನು ಪಾಪಿಗಳೆಂದು ಕರೆಯುವು ದಕ್ಕಿಂತ ಮಹತ್ತರವಾದ ಪಾಪವು ಬೇರೊಂದುಂಟೆ? ಆ ಮಾತನ್ನು ಒಪ್ಪಿಕೊಂಡರೆ ನಿಮಗೆ ನೀವೇ ಅಪಕೀರ್ತಿ ತಂದು ಕೊಳ್ಳುತ್ತೀರಿ. ಮೇಲೇಳಿ! ನೀವು ಕುರಿ ಎಂಬ ಕೀಳ್ಮೆಯ ಭಾವನೆಯನ್ನು ಕಿತ್ತೆಸೆಯಿರಿ. ಆ ಭಾವನೆಯಿಂದ ಭ್ರಮಿತರಾಗಬೇಡಿ. ನೀವು ಆತ್ಮ, ನೀವು ಅಮೃತ, ಅಮರವಾದ ಸತ್ಯ, ಶಿವ ಹಾಗೂ ಸುಂದರ. ನಿಮಗೆ ಆದಿಯೂ ಇಲ್ಲ, ಅಂತ್ಯವೂ ಇಲ್ಲ. ಲೌಕಿಕವೆನಿಸಿಕೊಳ್ಳುವ ವಸ್ತುಗಳೆಲ್ಲವೂ ನಿಮ್ಮ ಗುಲಾಮರು; ನೀವು ಅವುಗಳಿಗೆ, ಈಗ ಕಲ್ಪಿಸಿಕೊಂಡಿರುವಂತೆ, ಗುಲಾಮರಲ್ಲ."

ಭಗವಾನರು ಹೇಳುತ್ತಾರೆ, "ಎಡೆ ಬಿಡದೆ ಸತ್ಯ, ಧರ್ಮ, ಸಹನೆಗಳನ್ನು ಅಭ್ಯಾಸ ಮಾಡುವು ದರ ಮೂಲಕ, ವ್ಯಕ್ತಿಯಲ್ಲಿ ಸುಪ್ತವಾಗಿರುವ ದೈವತ್ವವು ದಿನ ನಿತ್ಯದ ಬದುಕಿನಲ್ಲಿ ವ್ಯಕ್ತವಾಗಿ ಅದನ್ನು ಪ್ರೇಮಿಸುವ ವಸ್ತುವನ್ನಾಗಿ ಪರಿವರ್ತಿಸುವಂತೆ ಮಾಡಬೇಕು. ಸರ್ವೋನ್ನತ ಸತ್ಯವನ್ನು ಅರಿತುಕೊಳ್ಳಿ; ಅದನ್ನು ಉಸಿರಾಡಿ, ಅದರಲ್ಲಿಯೇ ಮೀಯಿರಿ, ಅದರಲ್ಲೇ ಬದುಕಿರಿ; ಆಗ ಅದು ನೀವಾಗುತ್ತದೆ, ನೀವು ಅದಾಗುವಿರಿ." ಲೌಕಿಕ ವಸ್ತುವು ಸ್ವಯಂ ವ್ಯಕ್ತ ಅಥವಾ ಸ್ವತಃ ಪ್ರಕಾಶವಲ್ಲ. ಜೀವಾತ್ಮವು ತನ್ನನ್ನು ಪ್ರಕಟಪಡಿಸಿಕೊಳ್ಳಲು ಅಗತ್ಯವಾದ ಚಿತ್ ಶಕ್ತಿಯನ್ನು ಅವಲಂಬಿಸಿದೆ. ವಸ್ತುವನ್ನು ಇನ್ನೂ ಒಳಹೊಕ್ಕು ಪರೀಕ್ಷಿಸಿದರೆ, ಬಹುತ್ವದ ನಿಜವಾದ ಆಧಾರವನ್ನು ಗ್ರಹಿಸಿದ್ದೇ ಆದರೆ ತಾರ್ಕಿಕ ಅವಶ್ಯಕತೆಯಾಗಿ ಬ್ರಹ್ಮವನ್ನು ಅಥವಾ ಪ್ರಥಮತತ್ತ್ವವನ್ನು ಒಪ್ಪಿಕೊಳ್ಳಲು ಸಾಧ್ಯವಾಗುತ್ತದೆ. ಆಮೇಲೆ ಇಂದ್ರಿಯ ನಿಗ್ರಹ, ಮನಶ್ಶುದ್ಧಿ, ಏಕಾಗ್ರತೆ ಮತ್ತು ಅಂತರಿಕ ನಿಶ್ಶಬ್ದಗಳನ್ನು ಸಾಧಿಸಿದಾಗ ಮೊದಲು ಯಾವುದು

ತಾರ್ಕಿಕ ಅವಶ್ಯಕತೆಯಾಗಿ ತೋರಿತ್ತೋ ಅದು ಪರಿಶುದ್ಧ ಪ್ರಜ್ಞೆಯಲ್ಲಿ ಇತ್ಯಾತ್ಮಕ ಶಾಶ್ವತ ಭಗವದಿಚ್ಛೆಯಾಗಿ ಮೂಡುತ್ತದೆ (ಪ್ರಜ್ಞಾನಂ ಬ್ರಹ್ಮ). ಅದರ ಅಭಿವ್ಯಕ್ತಿಯೇ ಇದೆಲ್ಲವೂ.

ಮನುಷ್ಯನಲ್ಲಿರುವ ಆತ್ಮವು ಪರಮಾತ್ಮ ಅಥವಾ ಭಗವಂತ ಅಲ್ಲದೆ ಬೇರೇನೂ ಅಲ್ಲ ಎಂಬುದನ್ನು ತಪ್ಪಿಗೆಡೆಯಿಲ್ಲದ ಮಾತುಗಳಲ್ಲಿ ಸ್ಪಷ್ಟವಾಗಿ ಸತ್ಯಸಾಯಿ ವಾಹಿನಿಯು ನಮಗೆ ತೋರಿಸಿಕೊಡುತ್ತದೆ. ಮಾನವ ಮಾತ್ರನಲ್ಲ, ಒಂದೊಂದು ಕಡೆಯೂ ಎಲ್ಲಾ ಕಡೆಯೂ ಇರುವ ಸಕಲ ಜೀವಿಗಳಲ್ಲೂ ಇದು ಸತ್ಯ ಎಂದು ನಮಗೆ ತಿಳಿಸಿಕೊಡುತ್ತದೆ. ಏಕೈಕನಾದ ಅವನ ಇಚ್ಛೆಯೇ ಅವನ ಮೇಲೆ ಈ ಬ್ರಹ್ಮಾಂಡವೆಂಬ ಮಿಥ್ಯಾ ಬಹುಳತೆಯನ್ನು ಕೊನೆಗೊಳಿಸಲೂ ಬಲ್ಲನು. "ಇರುವಿಕೆಯು (ದೇವರು) ಆಗುವಿಕೆಯ ಹಿಂದಿದೆ ಮತ್ತು ಆಗುವಿಕೆಯು ಇರುವಿಕೆಯಲ್ಲಿ ವಿಲೀನವಾಗುತ್ತದೆ," ಎಂದು ಭಗವಾನರು ಹೇಳುತ್ತಾರೆ.

ಭಗವಾನರು ಬರೆಯುವಂತೆ, "ಶಿಕ್ಷಣದ ಪರಮೋನ್ನತ ಲಕ್ಷ್ಯವು, ವಿದ್ಯಾಭ್ಯಾಸದ ಅತ್ಯಂತ ಶ್ರೇಷ್ಠ ಉದ್ದೇಶವು ಈ ವಿಶ್ವಾಂತರ್ಗತ ಭಗವಂತನನ್ನು ಅರಿಯಲು ನೆರವಾಗುವುದೇ ಆಗಿದೆ." ಗುರುಗಳ ಗುರುವಾಗಿ ಸತ್ಯಸಾಯಿ ಇಲ್ಲಿ ಆತ್ಮದ ಈ ಸರ್ವೋನ್ನತ ಸಾಹಸವನ್ನು ಬೋಧಿಸುತ್ತಿದ್ದಾರೆ. ಈ ಯಾತ್ರೆಯನ್ನು ಕೈಗೊಳ್ಳುವ ಸಾಧಕರಿಗೆ ಇಲ್ಲಿ ಕರುಣೆ ತುಂಬಿದ ಮಾರ್ಗದರ್ಶಿಯೂ ಪೋಷಕನೂ ಇದ್ದಾರೆ. ಏಕೆಂದರೆ ಅವರು ಈ ನಾಟಕವನ್ನು ರಚಿಸಿದ ಆ ಇಚ್ಛೆಯ ಸಾಕಾರವೇ ತಾನೆ!

ಈ ವಾಹಿನಿಯ ಕಣಿವೆಯಲ್ಲಿ ಭಗವಾನರು ನಮ್ಮ ಕೈಹಿಡಿದು ಕರೆದೊಯ್ಯುತ್ತಾರೆ; ಈ ಕ್ಷೇತ್ರದಲ್ಲಿ ಮೊದಲ ನಡೆಯಿಟ್ಟು, ದಾರಿಯನ್ನು ಗುರುತಿಸಿ, ಅದಕ್ಕೆ ತಕ್ಕ ಸಾಧನೆಗಳನ್ನೂ ಆಚರಣೆಗಳನ್ನೂ ವಿಧಿಸಿ, ದಾರಿಯನ್ನು ಸುಗಮವಾಗುವಂತೆ ಮಾಡಿದ ಹಲವು ನಾಡುಗಳ ಋಷಿ ಮುನಿಗಳ, ಸಾಧು ಸತ್ಪುರುಷರ ಮಹಿಮೆಯನ್ನು ಕೊಂಡಾಡಬೇಕೆಂದು ನಮಗೆ ಕಲಿಸಿಕೊಡುತ್ತಾರೆ. ವೇದಗಳು ಮತ್ತು ಅನಂತರದ ಆಧ್ಯಾತ್ಮಿಕ ಕೃತಿಗಳ ಬಗೆಗೆ, ಶತಶತಮಾನಗಳ ಕಾಲ ಪರೀಕ್ಷೆಯಲ್ಲಿ ಗೆದ್ದುನಿಂತ ಪ್ರಜಾವಿಧಾನಗಳ ಬಗೆಗೆ, ಮಾನವ ಜೀವನದ ನಾಲ್ಕು ಹಂತಗಳು ಹಾಕಿ ಕೊಟ್ಟಿರುವ ಸಾಧನಾ ಸಂಹಿತೆಯ ಬಗೆಗೆ ಬರೆಯುತ್ತಾರೆ. ಲಂಬವಾಗಿ, ಉದ್ಧರಿಸುವ ಶಕ್ತಿಯುಳ್ಳ ಸಾತ್ವಿಕ ಗುಣ, ಕ್ಷೇತ್ರೀಯವಾಗಿ ವ್ಯಾಪಕವಾದ ರಾಜಸಿಕ ಗುಣ ಹಾಗೂ ಮಂಕಾದ ಅವನತಿಗೆಳೆಯುವ ತಾಮಸಿಕ ಗುಣ—ಈ ಗುಣ ಲಕ್ಷಣಗಳನ್ನುಳ್ಳ ಮಾನವ ಜೀವಿಗಳಿಗೆ ವಿಧಿಸಿದ ಸಾಧನೆಯ ಹಂತಗಳನ್ನು ಕುರಿತು ಸ್ಪಷ್ಟಪಡಿಸುತ್ತಾರೆ. "ಭಯಂಕರ ಚಂಡಮಾರುತವು ಎದ್ದಿರುವ ಸಾಗರದ ಮೇಲೆ ತೇಲುವ ದುರ್ಬಲ ನೌಕೆಯಂತೆ ಮನುಷ್ಯನು ಅಸಾಧ್ಯವಾದ ಅಲೆಯ ಮೇಲೆ ತುತ್ತ ತುದಿಗೆ ಏರುತ್ತಾನೆ, ಮರುಕ್ಷಣವೇ ಅಗಾಧವಾದ ಕುಳಿಗೆ ಎಸೆಯಲ್ಪಡುತ್ತಾನೆ, ಮತ್ತೆ ಮೇಲೇಳುವ ಸಲುವಾಗಿಯೇ. ಈ ಏರು ಮತ್ತು ಇಳಿವು ಎರಡೂ ಆತನದೇ ಕೃತ್ಯಗಳ ಪರಿಣಾಮಗಳು. ಅವು ಮನುಷ್ಯನಿಗಾಗಿ ಅರಮನೆಯನ್ನೋ ಬಂದೀಖಾನೆಯನ್ನೋ ರೂಪಿಸುತ್ತವೆ. ದುಃಖವಾಗಲಿ ಸಂತೋಷವಾಗಲಿ ವ್ಯಕ್ತಿಯ ಕರ್ಮಗಳ ಪ್ರತಿಧ್ವನಿ, ಪ್ರತಿಬಿಂಬ ಅಥವಾ ಪ್ರತಿಕ್ರಿಯೆ. ಜೀವಿಯು ತಾನು ನಿರ್ವಹಿಸಬೇಕಾದ ಚಟುವಟಿಕೆಗಳಲ್ಲಿ ಆಪ್ತನಾಗದೆ ಹೋದರೆ ಸಾಕ್ಷಿ ಮನೋಭಾವವನ್ನು ಬೆಳೆಸಿಕೊಂಡು ಎರಡರಿಂದಲೂ ತಪ್ಪಿಸಿಕೊಳ್ಳಬಹುದು. ಜೀವಾತ್ಮ ಪರಮಾತ್ಮರು ಒಂದುಗೂಡುವ ಪ್ರಕ್ರಿಯೆಯಾಗಿ ಯೋಗವನ್ನು ಕುರಿತು ಬರೆಯುತ್ತಾರೆ. ಪ್ರೇಮದ ಮಾರ್ಗ (ಭಕ್ತಿ), ಅಥವಾ ನಿಸ್ವಾರ್ಥ ಚಟುವಟಿಕೆ (ಕರ್ಮ), ಮನಸ್ಸಿನ ಮೇಲೆ ಹತೋಟಿ (ರಾಜ), ಪ್ರಜ್ಞೆಯ ಉನ್ನತಿಕೆ (ಜ್ಞಾನ) ಮಾರ್ಗಗಳನ್ನು ವಿಸ್ತರಿಸುತ್ತಾರೆ. ವ್ಯಕ್ತಿ ಹಾಗೂ ಸಮಾಜದ

ಹಕ್ಕುಗಳನ್ನೂ ಹೊಣೆಗಾರಿಕೆಗಳನ್ನೂ ವಿಶ್ಲೇಷಿಸಿ ಅವುಗಳ ತಳದಲ್ಲಿ ಆಧ್ಯಾತ್ಮಿಕ ಪರಿಪೂರ್ಣತೆಯ ಒಂದು ಉದ್ದೇಶವಿದೆ ಎಂಬುದನ್ನು ತೋರಿಸಿ ಕೊಡುತ್ತಾರೆ.

ಒಟ್ಟಿನಲ್ಲಿ, ನಮ್ಮ ಇಂದ್ರಿಯಗಳು, ಮನಸ್ಸು, ಪ್ರಜ್ಞೆ ಅಹಂಕಾರ ಮತ್ತು ಬುದ್ಧಿಗಳ ಕಡಿವಾಣವನ್ನು ಹಿಡಿಯಲು ಆಸಕ್ತನಾಗಿ, ಸನಾತನ ಸಾರಥಿಯಾಗಿ, ಸಕಲ ಮಾನವ ಜನಾಂಗದ ಪರಮಗುರಿಯಾದ ಪರಮಶಾಂತಿಯ ನೆಲೆವೀಡಾದ ಪ್ರಶಾಂತಿ ನಿಲಯಕ್ಕೆ ಕ್ಷೇಮವಾಗಿ ನಮ್ಮನ್ನು ಕರೆದೊಯ್ಯಲು ಸಿದ್ಧರಾಗಿ ನಿಂತಿರುವ ಭಗವಂತನು ನಮಗೆ ನೀಡಿರುವ ಗೀತೆಯೇ ಸತ್ಯಸಾಯಿ ವಾಹಿನಿ. ನಾವೆಲ್ಲರೂ ಅವರ ಪ್ರೇಮ ಮತ್ತು ಕರುಣೆಗಳನ್ನು ಪಡೆದು ಧನ್ಯರಾಗೋಣ.

ಪ್ರಶಾಂತಿ ನಿಲಯಂ

**ನಾ. ಕಸ್ತೂರಿ**

ಅಧ್ಯಾಯ ೧

# ಪರಮೋನ್ನತ ಸತ್ಯ

ಪರತತ್ತ್ವವನ್ನು ಗಳಿಸುವುದೇ ಬದುಕೆಂಬ ಪ್ರಕ್ರಿಯೆಯ ಉದ್ದೇಶ ಮತ್ತು ಅರ್ಥ. ಪರತತ್ತ್ವ ಎಂದರೆ ಆತ್ಮ. ಭಾರತೀಯ ಸಂಸ್ಕೃತಿಯಲ್ಲಿ ಬೆಳೆದ ಎಲ್ಲರೂ ಭಾರತೀಯರು ಆತ್ಮ ಎಲ್ಲೆಲ್ಲೂ ಇದೆ ಎಂಬುದನ್ನು ತಿಳಿದುಕೊಂಡಿದ್ದಾರೆ. ಇದನ್ನು ಅವರು ಹೇಗೆ ತಿಳಿದುಕೊಂಡರು ಎಂದು ಕೇಳಿದರೆ ಕೆಲವರು ವೇದಗಳು ಕಲಿಸಿಕೊಟ್ಟಿವೆ ಎನ್ನುತ್ತಾರೆ, ಮತ್ತೆ ಕೆಲವರು ಶಾಸ್ತ್ರಗಳನ್ನು ಉದ್ಧರಿಸುತ್ತಾರೆ, ಇನ್ನು ಕೆಲವರು ಮಹಾತಪಸ್ವಿಗಳ ಅನುಭವಯುತ ಸಮರ್ಥನೆಯನ್ನು ಆಧಾರವಾಗಿ ಕೊಡುತ್ತಾರೆ. ಪ್ರತಿಯೊಬ್ಬನೂ ತನ್ನ ಬುದ್ಧಿಯು ಎಷ್ಟುಮಟ್ಟಿಗೆ ಹರಿತವಾಗಿದೆಯೋ ಅದನ್ನವಲಂಬಿಸಿ ನಿರ್ಣಯಕ್ಕೆ ಬರುತ್ತಾನೆ, ಹಾಗೂ ಅದರ ವಿಹಿತತೆಯನ್ನು ಸಮರ್ಥಿಸುತ್ತಾನೆ. ಅನೇಕ ಮಹಾಪುರುಷರು ಸರ್ವವ್ಯಾಪಿಯಾದ ಆತ್ಮದ ಸಂಶೋಧನೆಗೆ ತಮ್ಮ ಬುದ್ಧಿಶಕ್ತಿಯನ್ನು ಪ್ರಯೋಗಿಸಿ ಪ್ರಯತ್ನಿಸಿದ್ದಾರೆ. ಆ ದೈವೀ ತತ್ತ್ವದ ದರ್ಶನ ಪಡೆದು ಧನ್ಯರಾಗಿದ್ದಾರೆ. ಭಾರತದಲ್ಲಿ ಅನೇಕಾನೇಕ ಬೋಧಕರು, ಪಂಡಿತರು, ಸಾಧಕರು ಮತ್ತು ಸನ್ಯಾಸಿಗಳು ತಾವು ಎದುರಿಗಿರಿಸಿಕೊಂಡ ಲಕ್ಷ್ಯವನ್ನು ಪ್ರಾಮಾಣಿಕ ಪರಿಶ್ರಮದಿಂದ ಯಶಸ್ವಿಯಾಗಿ ಸಾಧಿಸಿರುವುದಕ್ಕೆ ಸಾಕ್ಷ್ಯಾಧಾರಗಳಿವೆ. ಆದರೂ ಲಕ್ಷೋಪಲಕ್ಷ ಮಾನವರಲ್ಲಿ ಹಾಗೆ ವಿಶ್ವಾತ್ಮ ದರ್ಶನ ಪಡೆದುಕೊಂಡಿರುವವರು ಕೇವಲ ಎಣಿಸಿಬಿಡಬಹುದಾದಷ್ಟು ಕಡಿಮೆ ಜನ.

ಆತ್ಮದರ್ಶನಕ್ಕೆ ಸಹಾಯಕವಾಗುವಂತೆ ಬುದ್ಧಿಶಕ್ತಿಯೂ ವಿವೇಚನಾ ಸಾಮರ್ಥ್ಯವೂ ಮಾನವರಲ್ಲಿರುವಷ್ಟು ಎತ್ತರದ ಮಟ್ಟದಲ್ಲಿ ಬೇರೆ ಯಾವ ಜೀವಿಯಲ್ಲೂ ಇಲ್ಲ. ಮನುಷ್ಯನನ್ನು ಸೃಷ್ಟಿಯ ಮಕುಟವೆಂದು ಕರೆಯಲು ಇದೇ ಕಾರಣ. ಆದ್ದರಿಂದಲೇ ಶಾಸ್ತ್ರಗಳು ಮಾನವನಾಗಿ ಜನಿಸುವುದೇ ಸುದೈವ ಎಂದು ಸಾರುವುದು. ಸೃಷ್ಟಿಯ ಕಾರಣವನ್ನು ಅರಸುವುದಕ್ಕೆ ಬೇಕಾದ ಅರ್ಹತೆ ಮಾನವನಿಗಿದೆ; ಅವನಲ್ಲಿ ಆ ಪ್ರೇರಣೆ ಇದೆ, ಸಾಮರ್ಥ್ಯವೂ ಇದೆ. ಸೃಷ್ಟಿಗೊಂಡಿರುವ ಈ ಜಗತ್ತನ್ನು ಅವನು ತನ್ನ ಶಾಂತಿಗಾಗಿ, ಸಮೃದ್ಧಿ ಸಂರಕ್ಷಣೆಗಳಿಗಾಗಿ ಬಳಸಿಕೊಳ್ಳುತ್ತಾನೆ. ತನ್ನ ಸುಖ ಸಂತೋಷಗಳನ್ನು ಹೆಚ್ಚಿಸಿಕೊಳ್ಳಲು ನಿಸರ್ಗದ ವಸ್ತುಗಳನ್ನೂ ಶಕ್ತಿಗಳನ್ನೂ ಬಳಸಿಕೊಳ್ಳುತ್ತಿದ್ದಾನೆ. ಇದನ್ನು ವೇದಗಳೇ ಅಂಗೀಕರಿಸಿವೆ.

ಲಕ್ಷಾಂತರ ಜನರ ಧರ್ಮಕ್ಕೆ ವೇದಗಳೇ ಪ್ರಮಾಣ. ಅವು ಸಾಕ್ಷಾತ್ ಭಗವಂತನ ವಾಣಿಯೇ ಆಗಿವೆ. ವೇದಗಳು ಅನಾದಿ ಎಂದು ಹಿಂದೂಗಳು ನಂಬುತ್ತಾರೆ, ಆದ್ದರಿಂದ ಅವುಗಳಿಗೆ ಅಂತ್ಯವೂ ಇಲ್ಲ. ಇಲ್ಲಿ ದೇವರು ಮನುಷ್ಯನೊಂದಿಗೆ ಮಾತನಾಡಿದ್ದಾನೆ. ಅವು ವಿದ್ವಾಂಸರು ಬರೆದ ಪುಸ್ತಕಗಳಲ್ಲ. ಪರಮೋನ್ನತ ಲಕ್ಷ್ಯವನ್ನು ಸಾಧಿಸುವ ವಿಧಾನಗಳನ್ನು ಕುರಿತು ಅನೇಕ ಋಷಿ ಮುನಿಗಳಿಗೆ ಭಗವಂತನ ಕೃಪೆಯಿಂದುಂಟಾದ ದರ್ಶನಗಳು. ವಿಹಿತವಾದ ಸಾಧನ ಪಥಗಳೆಂದು ಪ್ರಕಟವಾಗುವುದಕ್ಕಿಂತ ಮೊದಲೂ ಅವಿದ್ದುವು. ಕಾಲಮಾನದ ಯಾವುದೇ ಒಂದು ಹಂತದಲ್ಲಿ ಅವು ಉದಯಿಸಲಿಲ್ಲ; ಮತ್ತೆ ಮುಂದೆ ಇನ್ಯಾವುದೋ ಹಂತದಲ್ಲಿ ಅವುಗಳನ್ನು ತೊಡೆದು ಹಾಕುವುದೂ ಸಾಧ್ಯವಿಲ್ಲ. ವೇದಗಳು ಹೊಳಹುಗಾಣಿಸುವ ಧರ್ಮವೂ ಆದಿ ಮತ್ತು ಅಂತ್ಯ ರಹಿತವಾದದ್ದು. ಏಕೆಂದರೆ ಅದು ಪರಮೋನ್ನತ ಲಕ್ಷ್ಯವನ್ನು ಕುರಿತಾಗಿದೆ.

ಸರ್ವೋನ್ನತ ಲಕ್ಷ್ಯಕ್ಕೆ ಸಂಬಂಧಪಟ್ಟ ಧರ್ಮವು ಅಂತ್ಯವಿಲ್ಲದ್ದು ಎಂದು ಒಂದು ವೇಳೆ ಒಪ್ಪಿಕೊಂಡರೂ ಅದಕ್ಕೆ ಆದಿಯಂತೂ ಇರಲೇ ಬೇಕು ಎಂದು ಕೆಲವರು ವಾದಿಸಬಹುದು. ಸೃಷ್ಟಿ ಪ್ರಳಯ—ಈ ಚಕ್ರಕ್ಕೆ ಆದಿ ಅಥವಾ ಅಂತ್ಯ ಬಿಂದುಗಳಿಲ್ಲ, ಅದು ನಿರಂತರವಾಗಿ ಸುತ್ತುತ್ತಲೇ ಇರುವ ಚಕ್ರ ಎಂದು ವೇದಗಳು ಸಾರುತ್ತವೆ. ವಿಶ್ವ ಶಕ್ತಿಯ ಪ್ರಮಾಣದಲ್ಲಿ ಹೆಚ್ಚಾಗಲಿ ಕಡಿಮೆಯಾಗಲಿ ಯಾವುದೇ ತೆರನಾದ ವ್ಯತ್ಯಾಸವಾಗುವುದಿಲ್ಲ; ಅದು ಎಂದೆಂದಿಗೂ ಒಂದೇ ಆಗಿ ಉಳಿದಿರುತ್ತದೆ. ಸೃಷ್ಟಿ ಮತ್ತು ಸೃಷ್ಟಿಕರ್ತ ಎರಡೂ ಎಲ್ಲಿ ಪ್ರಾರಂಭವಾದುವೆಂದು ತಿಳಿಯದ, ಎಲ್ಲಿ ಮುಗಿಯುತ್ತವೆಂಬುದನ್ನು ತಿಳಿದುಕೊಳ್ಳಲು ಸಾಧ್ಯವೇ ಇಲ್ಲದ ಎರಡು ಸಮಾನಾಂತರ ರೇಖೆಗಳ ಹಾಗೆ. ಎರಡೂ ಪರಸ್ಪರ ಸಮಾನ ದೂರದಲ್ಲಿ ಚಲಿಸುತ್ತಲೇ ಇವೆ, ಎಂದೂ ಎಂದೆಂದೂ. ಭಗವಂತನು ಸದಾ ಕಾರ್ಯಶೀಲನಾಗಿದ್ದರೂ ಸಹ ಅವನ ಇಚ್ಛೆಯಾಗಲಿ ಶಕ್ತಿಯಾಗಲಿ ಮಾನವ ಮತಿಗೆ ಸ್ಪಷ್ಟವಾಗುವುದಿಲ್ಲ.

ಭಾರತೀಯರ ಪ್ರಕಾರ ಪರತತ್ತ್ವವು ವ್ಯಾಪಕತೆಯೇ ಆಗಿದೆ. ಎತ್ತರದ ಅಗಸದವರೆಗೆ ಏರಿ ಆ ವಿಶಾಲಾವಕಾಶದಲ್ಲಿ ಸ್ವತಂತ್ರವಾಗಿ ಚಲಿಸುತ್ತದೆ. ಐತಿಹಾಸಿಕ ಕಾಲಕ್ಕಿಂತಲೂ ಬಹಳ ಹಿಂದೆಯೇ ಇದನ್ನು ಬಹು ಸ್ಪಷ್ಟವಾದ ಮಾತುಗಳಲ್ಲಿ ಘೋಷಿಸಲಾಗಿದೆ. ಇತಿಹಾಸದ ಗತಿಯಲ್ಲಿ ಈ ಪರಮೋನ್ನತ ತತ್ತ್ವದ ಅಧ್ಯಯನ ಮತ್ತು ಪ್ರಸಾರ ಅನೇಕ ಹಿನ್ನಡೆಗಳನ್ನು ಅನುಭವಿಸಿರುವುದುಂಟು. ಆದರೆ ಅಂತಹ ಸಂದರ್ಭಗಳನ್ನು ಹಾದು, ಗೆದ್ದು, ಇಂದು ಸಜೀವವಾಗಿ ಚುರುಕಾಗಿ ಸಾಗಿದೆ. ಈ ದರ್ಶನದ ಅಂತಃಸತ್ವಕ್ಕೆ ಇದೇ ಸಾಕ್ಷಿ. ಯಹೂದ್ಯ ಧರ್ಮ, ಕ್ರೈಸ್ತ ಧರ್ಮ, ಜೊರಾಸ್ಟ್ರಿಯನ್ ಧರ್ಮಗಳಲ್ಲಿನ ಪರತತ್ತ್ವದ ಕಲ್ಪನೆಯು ತನ್ನೊಳಕ್ಕೆ ಭಾರತೀಯ ಕಲ್ಪನೆಯನ್ನೂ

ಅಳವಡಿಸಿಕೊಂಡು ತಮ್ಮವೇ ಎಂಬಂತೆ ಅರಗಿಸಿಕೊಂಡಿರುವುದು ವ್ಯಕ್ತವಾಗುತ್ತದೆ. ಭಾರತೀಯ ಕಲ್ಪನೆಯು ಅವುಗಳಿಗೆ ವಿರೋಧೀ ನೆಲೆಯಲ್ಲಿ ನಿಲ್ಲಲಿಲ್ಲ. ಬದಲಿಗೆ ಆ ಧರ್ಮಗಳು ತಮ್ಮ ಅಂತಿಮ ಲಕ್ಷ್ಯದ ಕಲ್ಪನೆಯನ್ನು ಸ್ಪಷ್ಟಪಡಿಸಿಕೊಳ್ಳಲು ನೆರವು ನೀಡಿತು. ಎಲ್ಲ ದೃಷ್ಟಿಕೋನಗಳ ಐಕ್ಯತೆಯನ್ನು ಒತ್ತಿ ಹೇಳಿತು. ವ್ಯತ್ಯಾಸಗಳಿಲ್ಲ ಎಂದು ತೋರಿಸಿಕೊಟ್ಟು ಅವುಗಳೊಂದಿಗೆ ವಿಶ್ವಾಸವನ್ನು ಸ್ಥಾಪಿಸಿಕೊಂಡಿತು. ಭಾರತೀಯ ಋಷಿಗಳು ಕಂಡುಕೊಂಡ, ಪರಮೋನ್ನತ ಲಕ್ಷ್ಯವನ್ನು ಕುರಿತ ಜ್ಞಾನವಾಹಿನಿಯು ಹೊಳೆಯಾಗಿ ಹರಿಯುತ್ತಿರಲು ಆ ಇತರ ಧರ್ಮಗಳ ಕಲ್ಪನೆಗಳು ಅದರ ಪಕ್ಕದಲ್ಲಿ ಅಲ್ಲಲ್ಲೇ ಕೊಳಗಳಾಗಿ ನಿಂತುವು.

ಭಾರತದಲ್ಲಿಯೇ ಮುಖ್ಯ ಧರ್ಮದಿಂದ ಅನೇಕಾನೇಕ ಮತ ಪಂಥಗಳು ನಾಯಿ ಕೊಡೆಗಳಂತೆ ಹುಟ್ಟಿಕೊಂಡವು. ಅವು ಪರಮೋನ್ನತ ಸತ್ಯವನ್ನು ಕುರಿತ ಹಿಂದೂ ಧರ್ಮದ ಮೂಲ ಕಲ್ಪನೆಗೆ ಹಾನಿಯುಂಟುಮಾಡಲು, ಅದರ ಬೇರು ಕಡಿಯಲು ಪ್ರಯತ್ನಿಸಿದುದೂ ಉಂಟು. ಆದರೆ ಭೂಮಿಯು ನಡುಗಿದಾಗ, ಸಾಗರದ ನೀರು ಆ ಕ್ಷಣಕ್ಕೆ ಸ್ವಲ್ಪ ಹಿಂದಕ್ಕೆ ಸರಿದಂತೆ ಕಂಡರೂ ಮರುಕ್ಷಣದಲ್ಲಿ ಸಾವಿರ ಪಟ್ಟು ಅಧಿಕ ಶಕ್ತಿಯಿಂದ ಭೋರ್ಗರೆದು ಧಾವಿಸಿ ಬಂದು ಕರಾವಳಿಗೆ ಅಪ್ಪಳಿಸುವ ಹಾಗೆ, ಭಾರತೀಯ ಜ್ಞಾನ ವಾಹಿನಿಯು ಮತ್ತೆ ಮತ್ತೆ ಥಳ ಥಳಿಸಿ ನಿಂತಿದೆ. ಇತಿಹಾಸದ ಎಲ್ಲ ಗೊಂದಲಗಳನ್ನೂ ಘರ್ಷಣೆಗಳನ್ನೂ ಮೀರಿ ನಿಂತಿದೆ. ಕಲಕಾಟ, ಕ್ಷೋಭೆ ಶಮನಗೊಂಡ ಮೇಲೆ ಮನುಷ್ಯನ ಮನಸ್ಸನ್ನು ಬೇರೆ ಕಡೆಗೆ ಸೆಳೆದಿದ್ದ ವಿವಿಧ ಪಂಥಗಳನ್ನು ಮತ್ತೆ ತನ್ನತ್ತ ಸೆಳೆದು ತನ್ನ ಅಗಾಧ ವ್ಯಾಪಕತೆಯಲ್ಲಿ ವಿಲೀನಗೊಳಿಸಿಕೊಂಡಿದೆ. ಭಾರತೀಯರ ಆತ್ಮ ತತ್ತ್ವವು ಸರ್ವವ್ಯಾಪಿ, ಸರ್ವ ದರ್ಶಿ, ಸರ್ವವಿವರಣಾತ್ಮಕ, ಮತ್ತು ಸರ್ವ ಸಮರ್ಥ.

ಆತ್ಮತತ್ತ್ವದಲ್ಲಿ ನಂಬಿಕೆಯನ್ನು ಬೆಳೆಸಿಕೊಂಡು ಅದನ್ನು ಆಳವಾಗಿ ಪ್ರೀತಿಸುವುದೇ ನಿಜವಾದ ಪೂಜೆ. ಮನುಷ್ಯನು ಪ್ರೀತಿಸಬೇಕಾದ ಏಕೈಕ ವಸ್ತು ಆತ್ಮ. ಈ ಲೋಕದಲ್ಲಾಗಲಿ ಪರದಲ್ಲಾಗಲಿ ಯಾವುದೇ ವಸ್ತುವಿಗಿಂತ ಅಧಿಕವಾಗಿ ಪ್ರೀತಿ ಪಾತ್ರವಾಗಬೇಕಾದದ್ದು ಅದು. ಭಗವಂತನಿಗೆ ಮಾನವನು ಸಲ್ಲಿಸಬಹುದಾದ ನಿಜವಾದ ಆರಾಧನೆ ಆತ್ಮವನ್ನು ಪ್ರೀತಿಸುವುದು. ವೇದಗಳು ಬೋಧಿಸುವುದೂ ಇದನ್ನೇ. ಎದೆ ನಡುಗಿಸುವ ನಿಯಮ ನಿಬಂಧನೆಗಳ ಹೊರೆಯನ್ನು ಒಪ್ಪಿಕೊಳ್ಳ ಬೇಕೆಂದು ವೇದಗಳು ಹೇಳುವುದಿಲ್ಲ. ಕಾರಣ ಪರಿಣಾಮಗಳೆಂಬ ಕಂಬಿಗಳ ಹಿಂದೆ ಮಾನವನು ಬಂಧಿತವಾಗಬೇಕಾದ ಒಂದು ಕಾರಾಗೃಹದ ಚಿತ್ರವನ್ನು ಅವನೆದುರಿಗೆ ಹಿಡಿಯುವುದಿಲ್ಲ. ಈ ಎಲ್ಲ ನಿಯಮ ನಿಬಂಧನೆಗಳ ಹಿಂದೆ ಪರಮ ಪ್ರಭುವಾದ ಒಂದು ವಸ್ತುವಿದೆ. ಅದು ಪ್ರತಿಯೊಂದು ವಸ್ತುವಿನ ಸಾರ,

ಪ್ರತಿಯೊಂದು ಶಕ್ತಿಯ, ಪ್ರತಿಯೊಂದು ಪರಮಾಣುವಿನ ಸತ್ವ. ಯಾರ ಆದೇಶ ಮಾತ್ರದಿಂದ ಪಂಚಭೂತಗಳು—ಆಕಾಶ, ವಾಯು, ಅಗ್ನಿ, ಜಲ ಮತ್ತು ಪೃಥ್ವಿ—ವರ್ತಿಸುತ್ತವೆಯೋ ಆ ಒಂದು ಪರ ವಸ್ತುವಿದೆ. ಅದನ್ನು ಪ್ರೀತಿಸಿ, ಪೂಜಿಸಿ, ಸ್ತುತಿಸಿ—ಹೀಗೆಂದು ವೇದಗಳು ಹೇಳುತ್ತವೆ. ಅಲ್ಲಿ ವಿಸ್ತರಿಸುವ ಅದ್ಭುತವಾದ ಪ್ರೇಮ ದರ್ಶನ ಇದೇಯೆ.

ಮಾನವನು ಈ ಜಗತ್ತಿನಲ್ಲಿ ತಾವರೆಯ ಎಲೆಯ ಹಾಗೆ ಬದುಕಬೇಕು. ಇದೇ ಪರಮ ರಹಸ್ಯ. ನೀರಿನಲ್ಲಿಯೇ ಹುಟ್ಟಿದ್ದರೂ ಅದರಿಂದ ಯಾವ ಪರಿಣಾಮಕ್ಕೂ ಒಳಗಾಗದೆ, ತೇವಗೊಳ್ಳದೆ ತೇಲುತ್ತಿರುತ್ತದೆ. ಇಹದಲ್ಲೋ ಪರದಲ್ಲೋ ಅಮೂಲ್ಯ ವಾದ ಏನೋ ಒಂದು ಫಲವನ್ನು ಪಡೆಯುವ ಸಲುವಾಗಿ ಭಗವಂತನನ್ನು ಪ್ರೇಮಿಸುವುದು, ಸ್ತುತಿಸುವುದು ಕೂಡ ಒಳ್ಳೆಯದೇ. ಆದರೆ ಭಗವಂತನಿಗಿಂತ ಅಮೂಲ್ಯವಾದ ವಸ್ತು, ಅವನಿಗಿಂತ ಹೆಚ್ಚಾಗಿ ಪಡೆಯಲರ್ಹವಾದ ವಸ್ತು ಬೇರೊಂ ದಿಲ್ಲವಾದ್ದರಿಂದ, ವೇದಗಳು ಮನಸ್ಸಿನಲ್ಲಿ ಯಾವುದೇ ಆಸೆಯನ್ನು ಇಟ್ಟುಕೊಳ್ಳದೆ ಭಗವಂತನನ್ನು ಪ್ರೇಮಿಸಬೇಕೆಂದು ಆದೇಶಿಸುತ್ತವೆ. ಪ್ರೇಮಕ್ಕಾಗಿ ಪ್ರೇಮಿಸಬೇಕು; ಭಗವಂತನನ್ನು ಪ್ರೇಮಿಸಬೇಕು, ಏಕೆಂದರೆ ಅವನು ಕೊಡುವ ಯಾವುದೇ ಒಂದು ವಸ್ತುವು ಅವನಿಗಿಂತ ಕಡಮೆಯಾಗಿರುತ್ತದಾದ್ದರಿಂದ ಅವನನ್ನು ಮಾತ್ರವೇ ಪ್ರೇಮಿ ಸಬೇಕು, ಯಾವುದೇ ಅಪೇಕ್ಷೆ ಅಥವಾ ಬೇಡಿಕೆ ಇಲ್ಲದೆ.

ಇದು ಭಾರತೀಯರು ನೀಡಿರುವ ಅತ್ಯುನ್ನತ ಬೋಧನೆ. ಪಾಂಡವ ಸೋದರರಲ್ಲಿ ಮೊದಲನೆಯವನಾದ ಧರ್ಮಜನು ಮಹಾಭಾರತದಲ್ಲಿ ಚಿತ್ರಿತನಾಗಿರುವಂತೆ ಈ ಬಗೆಯ ಆದರ್ಶ ಪ್ರೇಮಿ. ಇಡೀ ಭಾರತದಷ್ಟು ವಿಶಾಲ ರಾಜ್ಯವನ್ನು ಕಳೆದುಕೊಂಡು ಹಿಮಾಲಯದ ಕಾಡುಗಳಲ್ಲಿ ವಾಸಮಾಡಬೇಕಾಗಿ ಬಂದಾಗ ಒಂದು ದಿನ ಅವನ ಪತ್ನಿ ದ್ರೌಪದಿ ಅವನನ್ನು ಕೇಳಿದಳು: "ಸ್ವಾಮಿ! ಧರ್ಮಾಚರಣೆಯಲ್ಲಿ ನೀವು ಸಂದೇಹವಿಲ್ಲದೆ ಅಗ್ರಗಣ್ಯರಾಗಿದ್ದೀರಿ. ಆದರೂ ನಿಮಗೇಕೆ ಈ ದುರ್ದಶೆ ಪ್ರಾಪ್ತ ವಾಯಿತು?" ಅವಳಿಗೆ ತುಂಬಾ ದುಃಖವಾಗಿತ್ತು.

ಧರ್ಮಜನು ಉತ್ತರ ಕೊಟ್ಟನು, "ದ್ರೌಪದಿ, ದುಃಖಿಸಬೇಡ. ಈ ಹಿಮಾಚಲ ಪರ್ವತ ಶ್ರೇಣಿಯನ್ನು ನೋಡು, ಎಷ್ಟು ಭವ್ಯ! ಎಷ್ಟು ಸುಂದರ! ಎಂಥ ಅದ್ಭುತ! ಇದೆಷ್ಟು ಮನೋಹರವಾಗಿದೆಯೆಂದರೆ ನಾನಿದನ್ನು ಕೊನೆಯೇ ಇಲ್ಲದಷ್ಟು ಪ್ರೀತಿಸು ತ್ತೇನೆ. ಅದು ನನಗೆ ಏನನ್ನೂ ಕೊಡುವುದಿಲ್ಲ; ಆದರೂ ಸುಂದರವಾದುದನ್ನು ಪ್ರೀತಿಸುವುದು, ಭವ್ಯವಾದುದನ್ನು ಪ್ರೀತಿಸುವುದು ನನ್ನ ಸ್ವಭಾವ. ಆದ್ದರಿಂದ ಈ ಕಾಡಿನಲ್ಲೂ ನಾನು ಸಂತೋಷದಿಂದ ಪ್ರೇಮಯುತನಾಗಿದ್ದೇನೆ. ಈ ಭವ್ಯ

ಸೌಂದರ್ಯದ ಸಾಕಾರವೇ ಭಗವಂತ. ಇದೇ ಭಗವತ್ ಪ್ರೇಮದ ಅರ್ಥ ಮತ್ತು ಮಹತ್ವ.

ಪ್ರೀತಿಸಲ್ಪಡಬೇಕಾದ ಏಕೈಕ ವಸ್ತು ಭಗವಂತ. ಭಾರತೀಯರು ಯುಗಯುಗಾಂತರಗಳಿಂದ ಹುಡುಕಿ ಕಂಡುಕೊಂಡಿರುವ ಪಾಠ ಇದು. ಆದ್ದರಿಂದ ಅವನನ್ನು ನಾನು ಪ್ರೇಮಿಸುತ್ತೇನೆ. ಯಾವುದೇ ವರವನ್ನು ಕೇಳುವುದಿಲ್ಲ. ನನ್ನನ್ನು ಎಲ್ಲಿ ಹೇಗೆ ಇಡಲು ಅವನಿಗೆ ಪ್ರೀತಿಯೋ ಅಲ್ಲಿ, ಹಾಗೆ ಇಡಲಿ. ನನ್ನ ಪ್ರೇಮಕ್ಕೆ ದೊರಕುವ ಅತ್ಯುತ್ತಮ ಪ್ರತಿಫಲ ಅವನ ಪ್ರೇಮವೇ. ದ್ರೌಪದಿ! ನನ್ನ ಪ್ರೇಮವು ಮಾರುಕಟ್ಟೆಯಲ್ಲಿರುವ ಒಂದು ವಸ್ತುವಲ್ಲ." ಪ್ರೇಮವೊಂದು ದೈವಿಕ ಗುಣವೆಂದೂ ಅದನ್ನು ಹಾಗೆಯೇ ಪರಿಗಣಿಸಬೇಕೆಂದೂ ಧರ್ಮಜನು ಅರ್ಥ ಮಾಡಿಕೊಂಡಿದ್ದನು. ಸದಾ ಆತ್ಮದ ಅರಿವನ್ನು ಹೊಂದಿರುವವರ ಸಹಜ ಸ್ವಭಾವ ಪ್ರೇಮ ಎಂಬುದನ್ನು ಅವನು ದ್ರೌಪದಿಗೆ ಬೋಧಿಸಿದನು.

ಆತ್ಮವನ್ನು ಆಧಾರವಾಗಿ ಉಳ್ಳ ಪ್ರೇಮವು ಪರಿಶುದ್ಧ ಹಾಗೂ ಭವ್ಯವಾಗಿರುತ್ತದೆ. ಆದರೆ ಮನುಷ್ಯನು ಪ್ರೇಮದ ಹಲವಾರು ನಕಲಿ ರೂಪಗಳಿಂದ ಬದ್ಧನಾಗಿರುವುದರಿಂದ ತಾನು ಜೀವಮಾತ್ರನು, ಪ್ರತ್ಯೇಕನಾದ, ಒಂಟಿಯಾದ, ಜೀವಿಯೆಂದು ನಂಬುತ್ತಾನೆ. ಅದರಿಂದಾಗಿ ದಿವ್ಯ ಪ್ರೇಮದ ಪೂರ್ಣತೆಯಿಂದಲೂ ವಿಶಾಲತೆಯಿಂದಲೂ ಅವನು ವಂಚಿತನಾಗುತ್ತಾನೆ. ಆದ್ದರಿಂದ ಮೊದಲು ಮನುಷ್ಯನು ಭಗವಂತನ ಕೃಪೆಯನ್ನು ಗಳಿಸಬೇಕು. ಆ ಅನುಗ್ರಹವನ್ನು ಪಡೆದಾಗ, ಜೀವಿಯು ದೇಹದೊಂದಿಗೆ ತನ್ನನ್ನು ಸಮೀಕರಿಸಿಕೊಂಡಿರುವುದನ್ನು ಬಿಟ್ಟು ಆತ್ಮದೊಂದಿಗೆ ಸಮೀಕರಿಸಿಕೊಳ್ಳುತ್ತಾನೆ. ಈ ಪರಾಕಾಷ್ಠೆಯನ್ನು ವೇದಗಳು ಕಟ್ಟುಗಳನ್ನು ಕಳಚುವುದು, ಬಂಧ ವಿಚ್ಛೇದ ಅಥವಾ ಮೋಕ್ಷ ಎಂದು ಕರೆದಿದೆ. ದೇಹ ಸಮೀಕರಣ ಪ್ರವೃತ್ತಿಯ ವಿರುದ್ಧ ಹೋರಾಡಲು ಜಯದ ಏಕೈಕ ಸಾಧನವಾಗಿ ದೈವಾನುಗ್ರಹವನ್ನು ಸಂಪಾದಿಸಲು ಆಧ್ಯಾತ್ಮಿಕ ಸಾಧನೆಗಳನ್ನು ನಿಯಮಿಸಲಾಗಿದೆ. ತತ್ತ್ವ ವಿಚಾರ, ಇಂದ್ರಿಯ ನಿಯಂತ್ರಣ (ದಮ) ಮತ್ತಿತರ ಆರು ಮುಖ್ಯ ಸಾಧನೆಗಳಿವು. ಇವುಗಳನ್ನು ಆಚರಿಸುವುದರಿಂದ ಚಿತ್ತ ಶುದ್ಧಿಯುಂಟಾಗುತ್ತದೆ. ಆಗ ಅದು ವಸ್ತುವನ್ನು ಸ್ಪಷ್ಟವಾಗಿ ಪ್ರತಿಬಿಂಬಿಸಬಲ್ಲ ನಿರ್ಮಲವಾದ ಕನ್ನಡಿಯಂತಾಗುತ್ತದೆ. ಆಗ ಆತ್ಮವು ಅಲ್ಲಿ ಸ್ಪಷ್ಟವಾಗಿ ಪ್ರಕಟವಾಗುತ್ತದೆ. ಜ್ಞಾನಸಿದ್ಧಿಗೆ ಚಿತ್ತಶುದ್ಧಿಯೇ ರಾಜಮಾರ್ಗ. ಶುದ್ಧ ಹೃದಯವುಳ್ಳವರಿಗೆ ಇದನ್ನು ಸಾಧಿಸುವುದು ಸುಲಭ. ಭಾರತೀಯರು ಅನ್ವೇಷಿಸಿ ಕಂಡುಕೊಂಡ ಪರಮ ಸತ್ಯವಿದು. ಬೋಧನೆಯ ಮೂಲ ಸತ್ವವು ಇದಿಷ್ಟೇಯೆ.

ಚರ್ಚೆಗಳಲ್ಲಿ ಮತ್ತು ವಿಚಾರರಹಿತ ಸಿದ್ಧಾಂತಗಳಲ್ಲಿ ಸಮಯವನ್ನು ಪೋಲು ಮಾಡುವುದು ಭಾರತೀಯ ವಿಧಾನವಲ್ಲ. ಸಮುದ್ರದ ದಂಡೆಯಲ್ಲಿ ಬಿದ್ದಿರುವ ಕಪ್ಪೆ ಚಿಪ್ಪುಗಳನ್ನು ನೋಡಿ ಅವರು ಸಂತೋಷಪಡುವುದಿಲ್ಲ, ಸಾಗರದ ಆಳದಲ್ಲಿರುವ ಮುತ್ತುಗಳನ್ನು ಹುಡುಕಿ ತೆಗೆಯಲು ಅವರು ಬಯಸುತ್ತಾರೆ. ಸಂತೋಷವಾಗಿ ಹಾಗೂ ಧೈರ್ಯವಾಗಿ ಸಾಗರದಾಳಕ್ಕೆ ಅವರು ಮುಳುಗುತ್ತಾರೆ, ಹುಡುಕುತ್ತಾರೆ. ವೇದಗಳು ಅವರಿಗೆ ಅನುಸರಿಸಬೇಕಾದ ಆದರ್ಶವನ್ನು, ಸಾಕ್ಷಾತ್ಕಾರದ ದಾರಿ ಯನ್ನು ತೋರಿಸಿಕೊಡುತ್ತವೆ. ಇಂದ್ರಿಯಗಳ ಮೂಲಕ ಬರುವ ಜ್ಞಾನದಿಂದ ಆಚೆಗಿರುವ ಪರಮೋನ್ನತ ಸತ್ಯವನ್ನು ಅರಿಯುವುದೇ ಆದರ್ಶ. ದೇಹವಲ್ಲದ ಆತ್ಮವು ದೇಹವಾದ ಅವನಲ್ಲಿ ಇದೆ, ಸತ್ಯದ ಆ ಸ್ವರೂಪವೇ ಪರಮಾತ್ಮ ಎಂದು ವೇದಗಳು ನೆನಪು ಕೊಡುತ್ತವೆ. ಅದೊಂದೇ ಸತ್ಯ ಮತ್ತು ನಿತ್ಯ; ಉಳಿದುವೆಲ್ಲ ಅನಿತ್ಯ ಮತ್ತು ಮಿಥ್ಯ. ವೇದಗಳು ರೂಪುದಳೆದದ್ದೇ ಭಗವಂತನ ಅಸ್ತಿತ್ವವನ್ನು ಪ್ರಯೋಗತಃ ತೋರಿಸುವ ಮತ್ತು ಒತ್ತಿ ಹೇಳುವ ಸಲುವಾಗಿ. ಹಿಂದೂ ಸಿದ್ಧ ಪುರುಷರು ವೈದಿಕ ಮಾರ್ಗದಲ್ಲಿ ನಡೆದು ಆ ಬೋಧನೆಗಳಿಗನುಗುಣವಾಗಿ ತಮ್ಮ ಸಂಶೋಧನೆಗಳನ್ನು ನಿರ್ವಹಿಸಿದ್ದಾರೆ. ಶಾಸ್ತ್ರಗಳು ಅವರ ಅನುಭವಗಳ ಮತ್ತು ಅವರು ಗಳಿಸಿದ ಆನಂದದ ಅಧಿಕೃತ ನಿರೂಪಣೆಗಳು. ಶಾಸ್ತ್ರಗಳಲ್ಲೂ ಉಪನಿಷತ್ತುಗಳಲ್ಲೂ, "ನಾವು ಆತ್ಮ ಅರಿವನ್ನು ಪಡೆದೆವು," ಎಂದು ಅವರು ಸ್ಥಿರೀಕರಿಸುತ್ತಾರೆ. ಯಾವುದೋ ಒಂದು ವಿಚಾರರಹಿತ ಸಿದ್ಧಾಂತವನ್ನೋ ಚಿಂತನೆಯನ್ನೋ ಎದುರಿಸಿ ಅದರ ಮೇಲೆ ವಿಜಯಗಳಿಸುವ ಉದ್ದೇಶ ಹಿಂದೂಗಳಿಗಿಲ್ಲ. ಆ ಸಿದ್ಧಾಂತವನ್ನೇ ವಿಚಾರವನ್ನೇ ವಾಸ್ತವ ಆಚರಣೆಯಲ್ಲಿ ಪರೀಕ್ಷೆಗೊಡ್ಡಲು ಅವರು ಬಯಸುತ್ತಾರೆ. ಅವರ ಗುರಿ ಪೊಳ್ಳು ನಂಬಿಕೆಯಲ್ಲ, ಅದೊಂದು ಸ್ಥಿತಿ ಹಾಗೂ ಸಿದ್ಧಿ. ಭಾರತೀಯರ ಬದುಕಿನ ಗುರಿ, ನಿರಂತರ ಸಾಧನೆಯ ಮುಖಾಂತರ ಪರಿಪೂರ್ಣತೆಯನ್ನು ಪಡೆಯುವುದು. ವ್ಯಕ್ತಿಯು ತನ್ನ ದಿವ್ಯತೆಯನ್ನು ಅರಿಯುವುದರಿಂದ ಬರುವ ಪೂರ್ಣತೆಯನ್ನು ಗಳಿಸುವುದು. ಭಾರತೀಯರಿಗೆ ಇದೇ ಮಹೋನ್ನತ ವಿಜಯ.

ಅಧ್ಯಾಯ ೨

# ಸತ್ಯದಿಂದ ಸತ್ಯದ ಕಡೆಗೆ

ಒಬ್ಬ ವ್ಯಕ್ತಿಯು ಪರಿಪೂರ್ಣತೆಯನ್ನು ಸಾಧಿಸಿದ ಮೇಲೆ, ಅಂದರೆ ಅರಿವಿನ ಪೂರ್ಣತೆಯನ್ನು ಪಡೆದ ಮೇಲೆ ಅವನ ಸ್ಥಿತಿ ಹೇಗಿರುತ್ತದೆ ಎನ್ನುವ ವಿಚಾರವಾಗಿ ಹಲವರು ಪ್ರಶ್ನೆಗಳನ್ನು ಕೇಳಬಹುದು, ಸಂದೇಹಗಳನ್ನು ವ್ಯಕ್ತಿಪಡಿಸಬಹುದು. ಅವನ ಜೀವನವು ಅಮಿತಾನಂದದಿಂದ ಪರ್ಯಾಪ್ತವಾಗಿರುತ್ತದೆ. ಇತರ ಎಲ್ಲರೊಂದಿಗೂ ಚಿಂತನೆ, ಭಾವನೆ, ಜ್ಞಾನಗಳ ಏಕತೆಯನ್ನು ಹಂಚಿಕೊಳ್ಳುತ್ತಾನೆ. ಅವನು ಸದಾ ಏಕೈಕ ವಸ್ತುವಿನಲ್ಲಿ ನಿತ್ಯ ದಿವ್ಯ ತತ್ತ್ವದಲ್ಲಿ ಮುಳುಗಿ ಹೋಗಿದ್ದು ಆನಂದೋನ್ಮತ್ತನಾಗಿರುತ್ತಾನೆ. ಏಕೆಂದರೆ ಬದುಕಿನಲ್ಲಿ ಅದೊಂದೇ ಸಂತೋಷವನ್ನು ನೀಡುವಂಥದು ಎಂದು ಆತ ಬಲ್ಲನು. ಅದೇ ನಿಜವಾದ ಸಂತೋಷ, ಬೇರೆ ಯಾವುದೂ ಅಲ್ಲ.  ಭಗವಂತನು ನಿತ್ಯ ಪರಿಪೂರ್ಣ ಆನಂದ ಸ್ವರೂಪ. ಭಾರತೀಯ ಸಂಸ್ಕೃತಿಯಲ್ಲಿ ವಿಶ್ವಾಸವುಳ್ಳವರು, ಅವರ ಮತ ಪಂಥಗಳು ಯಾವುದೇ ಇರಲಿ, "ಭಗವಂತನೇ ಅತ್ಯುನ್ನತ ಆನಂದದ ಮೂಲ," ಎಂಬ ಹೇಳಿಕೆಯನ್ನು ಒಪ್ಪುತ್ತಾರೆ. ಈ ಮತವನ್ನು ತಮ್ಮ ಅಭಿಮತವೆಂದು ಅಂಗೀಕರಿಸುತ್ತಾರೆ.

ಪೂರ್ಣತ್ವವೆಂದರೆ ಅಖಂಡತೆ, ಅಖಂಡತೆ ಎಂದಾಗ ಇರುವುದು ಒಂದು ಎಂದಾಗುತ್ತದೆಯೇ ಹೊರತು ಎರಡಾಗಲಿ ಮೂರಾಗಲಿ ಅಲ್ಲ. ಆಗ ವ್ಯಕ್ತಿಯೊಬ್ಬನಿರಲು ಅವಕಾಶವೇ ಇರುವುದಿಲ್ಲ.  ನಿರ್ದಿಷ್ಟ ಆತ್ಮ ಅಥವಾ ಜೀವಿಯು, ಜೀವಾತ್ಮವು ಪೂರ್ಣ, ಅಖಂಡ ಆದಾಗ ಮತ್ತೆ ವಸ್ತು ಜಗತ್ತಿನ ಪ್ರಜ್ಞೆಗೆ ಅವನು ಇಳಿಯುವ ಸಾಧ್ಯತೆಯೇ ಇಲ್ಲ. ಅನೇಕರ ಮನಸ್ಸಿನಲ್ಲಿ ಈ ಕೆಲವು ಸಂದೇಹಗಳು ಏಳಬಹುದು.

ಆದರೆ ಈ ಬಗೆಯ ಆಲೋಚನಾ ಸರಣಿ ಸರಿಯಲ್ಲ.  ವ್ಯಷ್ಟಿಗತ ಜೀವಿಯು ಸಮಷ್ಟಿಯ ಪೂರ್ಣತೆಯಲ್ಲಿ ನೆಲೆಗೊಂಡಾಗ ಅವನು ಪ್ರತ್ಯೇಕತೆಯ ಎಲ್ಲಾ ಭಾವನೆಗಳನ್ನು ಕಳೆದುಕೊಳ್ಳುತ್ತಾನೆ, ಸದಾಕಾಲವೂ ಪೂರ್ಣತೆಯ ಅರಿವನ್ನು ಹೊಂದಿರುತ್ತಾನೆ, ಅನೇಕವನ್ನು ಒಳಗೊಂಡ ಏಕವನ್ನು ಅವನು ಅರಿಯುತ್ತಾನೆ. ಪ್ರತಿಯೊಂದು ಬಿಡಿಯ ಸತ್ಯವು ಒಂದು ಅಖಂಡ ಆತ್ಮದ ಸತ್ಯವೇಯೆ ಎಂದು ಆಗ ಅವನು ಅರ್ಥ ಮಾಡಿಕೊಳ್ಳುತ್ತಾನೆ. ಅವನು ವ್ಯಕ್ತಿಗಳ ನಡುವೆ ಪ್ರತ್ಯೇಕತೆಯ ಭಾವನೆಯನ್ನೇ ತೋರಿಸುವುದಿಲ್ಲ.

ಪ್ರತಿಯೊಂದು ವಸ್ತುವಿನ ಮತ್ತು ಜೀವಿಯ ತಿರುಳು ಎಂಬುದಾಗಿ ಅವನು ತಿಳಿದುಕೊಂಡ ದೈವತ್ವವು ತಾನೇ ಆಗಿರುವ ದೈವತ್ವವೇ ಎಂದು ಅವನಿಗೆ ಈಗ ಅರ್ಥವಾಗುತ್ತದೆ. ಆದ್ದರಿಂದ ಅವನ ಆನಂದ ಇನ್ನೂ ಹೆಚ್ಚು ಆಳವಾಗುತ್ತದೆ. ಆಗ ಅವನಿಗೆ ಪ್ರತ್ಯೇಕತೆಯು ಹೇಗೆ ತಾನೇ ಅನುಭವಕ್ಕೆ ಬಂದೀತು? ಇಲ್ಲ, ಸಾಧ್ಯವೇ ಇಲ್ಲ. ಆ ಆನಂದದ ಕಿರಣಗಳು ಎಲ್ಲ ವಲಯಗಳನ್ನೂ ಬೆಳಗುತ್ತವೆ. ಋಷಿಗಳು ತಪಸ್ವಿಗಳು ಆನಂದವನ್ನು ಅರಿತರು. ಸುಲಭವಾಗಿ ಅರ್ಥವಾಗುವ ಭಾಷೆಯಲ್ಲಿ ಆ ಅನುಭವವನ್ನು ಅವರು ಜಗತ್ತಿಗೆ ತಿಳಿಯಪಡಿಸಿದರು. ತಲುಪಲು ಸಾಧ್ಯವಿಲ್ಲದ ಚಂದ್ರನನ್ನು ಅದು ಕಾಣುತ್ತಿರುವ ಕಡೆಗೆ ಬೆರಳು ಮಾಡಿ ತೋರಿಸಿ ತಿಳಿಯಪಡಿಸಲು ಸಾಧ್ಯವಿದೆ! ಹಾಗೆಯೇ ಮನಸ್ಸಿಗೂ ಮಾತಿಗೂ ನಿಲುಕದಂತೆ ಇರುವ ಸತ್ಯವನ್ನು, ಜನರ ಗಮನಕ್ಕೆ, ಅವರವರ ಪ್ರಜ್ಞಾ ಸ್ಥಿತಿಗೆ ಅನುಗುಣವಾಗಿ ಒದಗಿಸಿಕೊಟ್ಟರು. ಅವರ ಬೋಧನೆಗಳು ಸರಳವಾಗಿದ್ದುದು ಮಾತ್ರವಲ್ಲ, ಅರಿವಿನ ಎಲ್ಲ ಹಂತಗಳ ಎಲ್ಲಾ ಶಿಕ್ಷಣ ಕೊಟ್ಟು ಮೇಲೇರಿಸಬೇಕಾಗಿದ್ದುದರಿಂದ ವೈವಿಧ್ಯ ಪೂರ್ಣವಾಗಿದ್ದುವು.

ಒಂದು ಸಣ್ಣ ಉದಾಹರಣೆ. ವ್ಯಕ್ತಿಗೆ ಈ ಪುಟ್ಟ ಶರೀರವು ತನ್ನದು ಎಂಬ ತಿಳಿವು ಬಂದಾಗ ಸಂತೋಷವಾಗುತ್ತದಲ್ಲವೆ? ಆಮೇಲೆ ತನಗೆ ಒಂದಲ್ಲ ಎರಡು ಶರೀರಗಳಿವೆ ಎಂದು ತಿಳಿದಾಗ ಸಂತೋಷವೂ ಎರಡರಷ್ಟಾಗಬೇಡವೆ? ಅದೇ ರೀತಿಯಲ್ಲಿ ತನಗೆ ಇನ್ನೂ ಅನೇಕಾನೇಕ ದೇಹಗಳಿವೆ ಎಂದು ತಿಳಿದುಕೊಂಡಾಗ ಅಷ್ಟಷ್ಟು ಅವನ ಸಂತೋಷ ಅಧಿಕವಾಗುತ್ತಲೇ ಹೋಗುತ್ತದೆ. ಇಡೀ ವಿಶ್ವವೇ ಒಂದು ದೇಹವೆನಿಸಿ, ವಿಶ್ವ ಪ್ರಜ್ಞೆಯು ತನ್ನ ಅರಿವಿನ ಭಾಗವಾದಾಗ ಆ ಆನಂದವು ಪೂರ್ಣವಾಗುತ್ತದೆ. ಈ ಬಹುಳತಾ ಪ್ರಜ್ಞೆಯನ್ನು ಪಡೆಯಬೇಕಾದರೆ ಅಹಂಕಾರ ತುಂಬಿದ ಸೀಮಿತ ಕಾರಾಗೃಹದ ಗೋಡೆಗಳನ್ನು ಒಡೆದುಹಾಕಬೇಕು. ಅಹಂ ತನ್ನನ್ನು ಆತ್ಮದೊಂದಿಗೆ ಸಮೀಕರಿಸಿದಾಗ ಮೃತ್ಯುವು ನಾಶವಾಗುತ್ತದೆ. ಅಹಂ ಏಕೈಕ ಪರಿಪೂರ್ಣದೊಂದಿಗೆ ಸಂವಾದಿತ್ವನ್ನು ಸಾಧಿಸಿದಾಗ ದುಃಖವು ಮಾಯ ವಾಗುತ್ತದೆ. ಅದು ಜ್ಞಾನದೊಂದಿಗೆ ವಿಲೀನಗೊಂಡಾಗ ಭ್ರಮೆಯು ಪರಿಹಾರವಾಗು ತ್ತದೆ. "ಭೌತಿಕ ವ್ಯಕ್ತಿ ತತ್ತ್ವವು ಭ್ರಮೆಯಿಂದ ಉತ್ಪನ್ನವಾಗುತ್ತದೆ; ಆ ಭಾವನೆಯನ್ನು ಉಂಟುಮಾಡುವ ಈ ದೇಹವು ಮೇರೆಯಿಲ್ಲದ ಸಾಗರದಲ್ಲಿ ಸದಾ ವಿಕಾಸಗೊಳ್ಳು ತ್ತಿರುವ ಒಂದು ಪರಮಾಣು ಮಾತ್ರ. ನನ್ನಲ್ಲಿರುವ ಎರಡನೆಯ ವಸ್ತುವು ಇನ್ನೊಂದು ರೂಪ, ಅಂದರೆ ದೇಹಸ್ಥವಾದ ಆತ್ಮ. ನನ್ನ ಅಹಂಕಾರವು ನನ್ನೊಳಗಿರುವ ಆತ್ಮದಲ್ಲಿ ವಿಲೀನಗೊಂಡಾಗ ಅಜ್ಞಾನವು ತನಗೆ ವಿರುದ್ಧವಾದ ಜ್ಞಾನವು ಉದಿಸಿದುದರಿಂದಾಗಿ ಮಾಯವಾಗುತ್ತದೆ." ಕಾಲ ಉರುಳಿದಂತೆ ಮನು

ಷ್ಯನ ಆಲೋಚನಾ ಶಕ್ತಿಯು ಪಕ್ವವಾದ ಹಾಗೆ ಎಲ್ಲ ಚಿಂತನೆಗಳೂ ಈ ನಿರ್ಣಯಕ್ಕೆ ಬರಬೇಕೆನ್ನುವುದರಲ್ಲಿ ಸಂದೇಹವಿಲ್ಲ.

ಒಂದು ಮರದ ಹಣ್ಣುಗಳನ್ನು ಗಮನದಲ್ಲಿರಿಸಿಕೊಂಡು ಅದರ ಮೌಲ್ಯವನ್ನು ಅಂದಾಜು ಮಾಡಲಾಗುತ್ತದೆ. ನಿದರ್ಶನಕ್ಕೆ ವಿಗ್ರಹಾರಾಧನೆಯನ್ನು ತೆಗೆದುಕೊಳ್ಳಿ, ನೀತಿವಾದಿಗಳು, ತತ್ತ್ವ ಶಾಸ್ತ್ರಜ್ಞರು, ಅನುಭವಿಗಳು, ಭಕ್ತಿಮಾರ್ಗದ ಸಾಧಕರು, ಜಗತ್ತಿನ ಎಲ್ಲಾ ಭಾಗಗಳಲ್ಲಿರುವ ಸಜ್ಜನರು ಎಲ್ಲರೂ ವಿಗ್ರಹಾರಾಧನೆಯು ತುಂಬಾ ಪ್ರಯೋಜನಕರವಾದದ್ದು ಎಂದು ಒಪ್ಪಿಕೊಂಡಿದ್ದಾರೆ. ಎಲ್ಲಿಯವರೆಗೆ ಭೌತಿಕ ದೇಹ ಮತ್ತು ವಸ್ತುಗಳ ಬಗೆಗೆ ಮೋಹವುಳಿದಿರುತ್ತದೋ ಅಲ್ಲಿಯವರೆಗೆ ಕುರು ಹೊಂದನ್ನು ಪೂಜಿಸುವುದು ಅತ್ಯಗತ್ಯವಾಗುತ್ತದೆ. ಅದು ಒಂದು ದಾರಿ. ಆದರೆ ಅದನ್ನು ಅನೇಕರು ಮೂಢನಂಬಿಕೆಯೆಂದು ಹೀಯಾಳಿಸುತ್ತಾರೆ. ಅದು ಸರಿಯಲ್ಲ. ಹಾಗೆ ನಿರಾಕರಿಸುವುದು ಸರಿಯಾದ ಕ್ರಮವಲ್ಲ. ಅದು ಅವಿವೇಕದ ಪ್ರದರ್ಶನ ಅಷ್ಟೆ.

ವ್ಯಕ್ತಿಯು ತಾನು ದೇಹವೆಂದು ನಂಬುವುದೂ ಕುರುಡು ನಂಬಿಕೆಯೇ ತಾನೆ? ದೇಹವು ಶಾಶ್ವತವಾಗಿ ಎಂದೆಂದಿಗೂ ಇರುತ್ತದೇನು? ಅದು ಒಂಬತ್ತು ರಂಧ್ರಗಳಿ ರುವ ಒಂದು ಚರ್ಮದ ಬೊಂಬೆಯಲ್ಲವೆ? ಜೀವವು ಇದರೊಳಗೆ ಎಂತಹ ಅಪಾಯಕರ ಪರಿಸ್ಥಿತಿಯಲ್ಲಿ ಸಿಲುಕಿರುತ್ತದೆಯೆಂದರೆ ದೇಹವು ಕುಸಿದುಬೀಳುವು ದಕ್ಕೆ ಕೇವಲ ಒಂದು ಸೀನು ಕಾರಣವಾಗಬಹುದು. ಈ ಜಗತ್ತಿನ ಸತ್ಯವನ್ನು ನಂಬಿಕೊಂಡು ಜನರು ನಡೆಸುವ ಬದುಕನ್ನು ಇನ್ನೊಂದು ಕುರುಡು ನಂಬಿಕೆ ಎಂದು ಕರೆಯಬೇಡವೆ? ಅಧಿಕಾರವೋ ಹೇರಳವಾದ ಧನಸಂಪತ್ತಿಯೋ ಇರುವ ಜನರು ತಮಗೆ ತಾವೇ ಕೊಟ್ಟುಕೊಳ್ಳುವ ಪ್ರಾಮುಖ್ಯವೂ ಇನ್ನೊಂದು ಮೂರ್ಖತನ ವಲ್ಲವೆ? ಆದರೆ ಒಳಗಿರುವ ಸತ್ಯವಾದ ಆತ್ಮದಲ್ಲಿ ನಂಬಿಕೆಯ ಆಧಾರದಿಂದ ಮಾಡಿದ ಕೆಲಸಗಳನ್ನು ಅವಿವೇಕದ ಕೆಲಸವೆಂದು ಭಾವಿಸಬಾರದು, ಕುರುಡು ನಂಬಿಕೆಯೆಂದು ಹೇಳಲಾಗದು. ವ್ಯಕ್ತಿಯು ಕೊಡುವ ಪ್ರತಿಯೊಂದು ಅಭಿಪ್ರಾ ಯಕ್ಕೂ ಸೂಕ್ತ ಕಾರಣಗಳನ್ನು ಕೊಟ್ಟ ಪಕ್ಷದಲ್ಲಿ ಎಲ್ಲರೂ ಸಂತೋಷಪಡುತ್ತಾರೆ. ತನಗೆ ಇಷ್ಟವಾಗದ ಎಲ್ಲವನ್ನೂ ಮೂಢನಂಬಿಕೆಗಳೆಂದು ತಳ್ಳಿಹಾಕುವುದು ಅವಿವೇ ಕದ, ದುರಹಂಕಾರದ ಕುರುಹು.

ಭಗವಂತನ ಒಂದು ರೂಪವನ್ನು ಕುರಿತು ಧ್ಯಾನ ಮಾಡದೆಯೇ ಭಗವಂತನನ್ನು ಪ್ರೇಮಿಸುವುದಾಗಲಿ, ಸ್ತುತಿಸುವುದಾಗಲಿ ನಮಗೆ ಅಸಾಧ್ಯವಾಗುತ್ತದೆ. ಇದು ಬದುಕಿ ರಲು ಉಸಿರಾಟವಿರುವಷ್ಟೇ ಮುಖ್ಯವಾಗಿದೆ. ಅದು ಜೀವನ ಎಂಬ ಪ್ರಕ್ರಿಯೆಯಲ್ಲಿ

ಒಂದು ಅಗತ್ಯ ಹಂತ. ಅದನ್ನು ಅಷ್ಟು ಮಟ್ಟಿಗೆ ಒಪ್ಪಿಕೊಳ್ಳಲೇಬೇಕು. ಬಾಲ್ಯವು ವಾರ್ಧಕ್ಯದ ತಂದೆ. ಮುಪ್ಪು ಶೈಶವವನ್ನಾಗಲಿ ಬಾಲ್ಯವನ್ನಾಗಲಿ ಕೆಟ್ಟುದೆಂದು ಹೀಯಾಳಿಸಬಹುದೇನು? ದಿವ್ಯ ತತ್ತ್ವವನ್ನು ಅನುಭವಕ್ಕೆ ತಂದುಕೊಳ್ಳಬೇಕಾದರೆ ಅನೇಕರಿಗೆ ವಿಗ್ರಹಾರಾಧನೆಯು ತುಂಬಾ ದೊಡ್ಡ ಸಹಾಯವಾಗಿದೆ. ಅಂದ ಮೇಲೆ ಆಧ್ಯಾತ್ಮಿಕ ಸಾಧಕನೂ ತಾನೇ ಆ ಹಂತವನ್ನು ಹಾದು, ಅದರಿಂದ ಪ್ರಯೋಜನಗಳನ್ನು ಪಡೆದು ಬಂದಿರುತ್ತಾ ವಿಗ್ರಹಾರಾಧನೆಯನ್ನು ಹೇಗೆ ತಾನೆ ಹಳಿಯಲು ಸಾಧ್ಯ? ಅದು ನಿಜವಾಗಿಯೂ ತಪ್ಪಾಗುತ್ತದೆ, ಅನುಚಿತವಾಗುತ್ತದೆ.

ಪರತತ್ತ್ವದ ಕಡೆಗೆ ಸಾಗುವ ಭಾರತೀಯ ಯಾತ್ರೆಯು ಅಸತ್ಯದಿಂದ ಸತ್ಯದ ಕಡೆಗೆ ಹೋಗುವುದಿಲ್ಲ. ಅದು ಸತ್ಯದಿಂದ ಪರಸತ್ಯದ ಕಡೆಗೆ ಹೋಗುವ ಯಾತ್ರೆ. ಅಸಮಗ್ರ ಸತ್ಯದಿಂದ ಸಮಗ್ರ ಸತ್ಯದ ಕಡೆಗೆ, ಖಂಡ ಸತ್ಯದಿಂದ ಪೂರ್ಣ ಸತ್ಯದ ಕಡೆಗೆ ಸಾಗುವುದು. ಕಾಡಿನ ದೂರದ ಮೂಲೆಗಳಲ್ಲಿ ವಾಸಿಸುವ ಅಸಂಸ್ಕೃತ ಬುಡಕಟ್ಟು ಜನರೂ ದೈವದ ಅತಿಸ್ಥೂಲ ರೂಪಗಳನ್ನು ಪೂಜಿಸುತ್ತಾರೆ. ಅವರಿಂದ ಮೊದಲುಗೊಂಡು, ಅತ್ಯಂತ ಉನ್ನತ ನೆಲೆಯನ್ನು ತಲುಪಿ ಪರಿಪೂರ್ಣ ತತ್ತ್ವವನ್ನು ಆರಾಧಿಸುವ ಸಾಧಕನವರೆಗೆ ಪ್ರತಿಯೊಬ್ಬರ ಪರಿಶ್ರಮವೂ ಸಾಧನೆಯೇ. ಅಂತಹ ಒಂದೊಂದು ಪ್ರಯತ್ನವೂ ಪ್ರಗತಿಯಲ್ಲಿ ಒಂದು ಹೆಜ್ಜೆ ಮುಂದಕ್ಕೆ ಒಯ್ಯುತ್ತದೆ.

ಪ್ರತಿಯೊಬ್ಬ ಜೀವಿಯನ್ನೂ ಒಂದು ಪಕ್ಷಿಗೆ ಹೋಲಿಸಬಹುದು. ಅದು ದೀರ್ಘವಾಗಿ ಎತ್ತರಕ್ಕೆ ಆಕಾಶದಲ್ಲಿ ಹಾರಾಡಬಹುದು. ಕೊನೆಗೆ ಸೂರ್ಯನ ವೈಭವೋಪೇತ ಮಂಡಲದವರೆಗೂ ಹಾರಿಹೋಗುವ ಹಂತವೂ ಬರಬಹುದು.

ನಿಸರ್ಗದ ಮೂಲಭೂತ ಸತ್ಯವೆಂದರೆ, ಅನೇಕದಲ್ಲಿ ಏಕತೆ. ಅದೇ ಅರಿವಿಗೆ ಕೀಲಿಕೈ. ಭಾರತೀಯರು ಈ ಸತ್ಯವನ್ನು ಅರಿತರು. ಈ ಕೀಲಿಕೈಯನ್ನು ಭದ್ರವಾಗಿ ಹಿಡಿದರು. ಬೇರೆ ದೇಶಗಳ ಜನರು ಕೆಲವು ಸೂತ್ರಗಳನ್ನು ಹಾಕಿ ಅವುಗಳನ್ನು ನಂಬಲೇಬೇಕೆಂದು ಹೇಳಿದರು. ಅವುಗಳಿಗನುಗುಣವಾದ ನಿಯಮ ನಿಬಂಧನೆ ಯನ್ನು ಅನುಸರಿಸಲೇಬೆಕೆಂದು ಕಡ್ಡಾಯ ಮಾಡಿದರು. ಒಂದು ಕೋಟು ಸಿದ್ಧ ಪಡಿಸಿ ಜನರೆದುರಿಗೆ ಹಿಡಿದು ಪ್ರತಿಯೊಬ್ಬರೂ ಆ ಕೋಟನ್ನೇ ಧರಿಸತಕ್ಕದ್ದು ಎಂದು ಅಪೇಕ್ಷಿಸಿದರು. ಯಾರಿಗಾದರೂ ಅದರ ಅಳತೆಯು ಸರಿಹೊಂದದಿದ್ದರೆ ಅಂಥವರಿಗಾಗಿ ಬೇರೊಂದು ಅಂಗಿ ಇರಲಿಲ್ಲ. ಅಂಥವರು ಕೊರೆಯುವ ಚಳಿ ಯಿಂದ ತಮಗೆ ರಕ್ಷಣೆ ಕೊಡಲು ಕೋಟೇ ಇಲ್ಲದೆ ಬದುಕಿರಬೇಕಾಗಿತ್ತು.

ಭಾರತೀಯ ಮಾರ್ಗ ಬೇರೆ ರೀತಿಯದು. ಪ್ರತಿಯೊಂದು ಭಾವನೆ, ಆಲೋಚನೆ ಗಳಿಗೂ ಇಚ್ಛೆ ಮತ್ತು ಕಾರ್ಯವಿಧಾನಗಳಿಗೂ ಅವರು ನಿರ್ದಿಷ್ಟ ನಾಮ ರೂಪವನ್ನು ಒದಗಿಸಿದರು; ಸಾಧಕರ ಮತ್ತು ಭಕ್ತರ ಬೌದ್ಧಿಕ ಸಾಮರ್ಥ್ಯ ಹಾಗೂ ಭಾವಾತ್ಮಕ ಅಗತ್ಯಗಳಿಗನುಗುಣವಾಗಿ ಪೂಜಾ ವಿಧಾನವನ್ನು, ಸ್ತುತಿಕ್ರಮವನ್ನು ರೂಪಿಸಿದರು. ಕೆಲವರಿಗೆ ಆ ರೀತಿ ವಿಶೇಷ ಪರಿಗಣನೆ, ವ್ಯವಹರಣೆಗಳ ಅಗತ್ಯವಿರಲಿಲ್ಲವೆನ್ನಿ. ಆದರೆ ಬಹುಮಂದಿ ಈ ರಿಯಾಯಿತಿಯ ಪ್ರಯೋಜನವನ್ನು ಪಡೆದು ಜ್ಞಾನ ಮತ್ತು ಮೋಕ್ಷಗಳ ಕಡೆಗಿನ ನಡಗೆಯಲ್ಲಿ ಪ್ರಗತಿ ಹೊಂದಿದರು.

ಒಂದು ವಿಷಯ, ಭಾರತೀಯ ಆಧ್ಯಾತ್ಮಿಕಾನ್ವೇಷಣೆಯ ಅಂಗವಾಗಿ ಎಂದೂ ವಿಗ್ರಹಾರಾಧನೆಯನ್ನು ಕಡ್ಡಾಯವೆಂದಾಗಲಿ, ದಾಟಿ ಹೋಗಲೇಬೇಕಾದ ಹಂತ ಎಂದಾಗಲಿ ನಿಗದಿಪಡಿಸಿಲ್ಲ. ಆದರೆ ಈ ಒಂದು ಅಂಶವನ್ನು ಪ್ರತಿಯೊಬ್ಬರೂ ನೆನಪಿನಲ್ಲಿಡಬೇಕು. ಭಾರತೀಯರು ತಮ್ಮ ದೇಹದ ಮೇಲೆ ಮಮತೆ ಹೊಂದಿದವ ರಾಗಿರಬಹುದು; ತಮ್ಮ ಜೀವನಮಟ್ಟವನ್ನು ಉತ್ತಮಪಡಿಸಿಕೊಳ್ಳಲು, ಸುಧಾರಿಸಲು ಆಸಕ್ತರಾಗಿಬಹುದು. ಆದರೆ ಅವರು ಎಂದಿಗೂ ಇನ್ನೊಬ್ಬರ ಕೊರಳು ಕೊಯ್ಯುವು ದಕ್ಕಾಗಿ ಹಂಬಲಿಸಿಲ್ಲ. ತನ್ನ ಧರ್ಮದ ವಿಷಯದಲ್ಲಿ ಅಂಧಶ್ರದ್ಧೆಯುಳ್ಳವನಾದ ಭಾರತೀಯನೂ ಕೂಡ ಸಂದರ್ಭ ಬಂದರೆ ತಾನೇ ಬೆಂಕಿಯೊಟ್ಟಿಕೊಂಡು ಅದ ರೊಳಗೆ ಬಿದ್ದು ಪ್ರಾಣಾರ್ಪಣೆ ಮಾಡಿಕೊಳ್ಳಲು ಸಿದ್ಧನಾಗಿರುತ್ತಾನೆಯೇ ಹೊರತು, ತನ್ನ ಧರ್ಮವನ್ನು ಒಪ್ಪದ, ಗೌರವಿಸದ ಇತರರನ್ನು ದ್ವೇಷಿಸಿ ಅವರನ್ನು ಸಜೀವ ವಾಗಿ ಸುಡಲು ಹೋಗುವುದಿಲ್ಲ. ಭಾರತೀಯ ಆಧ್ಯಾತ್ಮಿಕತೆಯು ಏಕೈಕ ಅವಿನಾಶಿ ಸತ್ಯವಾದ ಆತ್ಮದ ವಿನಾಶಕ್ಕೆ ಕೈ ಹಾಕುವುದನ್ನು ನಿಷೇಧಿಸಿದೆ.

ಏಕೆಂದರೆ, ಭಾರತೀಯ ಧರ್ಮವು ಮನುಷ್ಯನಲ್ಲಿರುವ ಆತ್ಮವೂ ಪರಮಾತ್ಮ ಅಥವಾ ಭಗವಂತ ಅಲ್ಲದೆ ಬೇರೆಯಲ್ಲ ಎಂಬ ನಂಬಿಕೆಯನ್ನು ಬೆಳೆಸಿಕೊಂಡು ಬಂದಿದೆ. ಎಲ್ಲಾ ಪುರುಷರು, ಸ್ತ್ರೀಯರು, ವಿವಿಧ ಪಥಗಳಲ್ಲಿ, ಅನೇಕಾನೇಕ ಪರಿ ಸ್ಥಿತಿಗಳಿಂದ ನಿಯಂತ್ರಣಗೊಂಡೂ ಹಲವು ನಂಬಿಕೆಗಳಿಂದ ಪ್ರೋತ್ಸಾಹ ಪಡೆದು, ಬೆಳಕು ಪಡೆದು ಭಗವತ್ ಪ್ರಜ್ಞೆಯ, ದೈವಿಕತೆಯ ಅರಿವಿನ ಕಡೆಗೆ ಸುದೀರ್ಘ ಪ್ರಯಾಣವನ್ನು ಕೈಗೊಳ್ಳಲು ಆದೇಶಿಸುತ್ತದೆ. ವಿವಿಧ ಆಚರಣೆಗಳು, ವಿಧಿವಿಧಾನ ಗಳು ಮೇಲು ನೋಟಕ್ಕೆ ಬಹಳ ಒರಟಾಗಿ ಕಂಡುಬಂದರೂ ಅವು ಅಂತಿಮ ಸತ್ಯಕ್ಕೆ ವಿರುದ್ಧವಾದುದುವಂತೂ ಅಲ್ಲ. ಮೇಲೆ ತೋರುವ ವಿರೋಧಗಳು ವಿಭಿನ್ನ ಬೌದ್ಧಿಕ, ನೈತಿಕ, ಆರ್ಥಿಕ ಮತ್ತು ಸಾಮಾಜಿಕ ಹಿನ್ನೆಲೆಯಿರುವ ಜನರಿಗೆ ಸ್ಫೂರ್ತಿ ತುಂಬಲು ಅಗತ್ಯವಾದ್ದರಿಂದ ಸಾಂದರ್ಭಿಕವಾಗಿ ಹಾಗೆ ತೋರಿಕೊಂಡಿವೆ ಎಂದು ವಿವರಿಸಬೇಕಾಗುತ್ತದೆ. ನಿದರ್ಶನಕ್ಕೆ ಹೇಳುವುದಾದರೆ, ಪುಟ್ಟದೊಂದು

ಬಣ್ಣದ ಗಾಜಿನ ತುಂಡಿನ ಮೂಲಕ ಹಾದು ಬರುವ ಬೆಳಕೂ ದೊಡ್ಡದಾದ ಹೆಚ್ಚು ಪ್ರಖರವಾದ ಬೆಳಕೂ ಒಂದೇ ಮೂಲದವು. ಬೆಳಕಿನ ವ್ಯಾಪ್ತಿ, ಸ್ಪಷ್ಟತೆ, ಹೊಳಪು ಇವೆಲ್ಲ ಮಾಧ್ಯಮವನ್ನು ಅವಲಂಬಿಸುತ್ತವೆ. ಎಲ್ಲ ಬೆಳಕಿನ ಮೂಲ ಒಂದೇ. ಸತ್ಯ ಎಲ್ಲದರ ಆಧಾರ, ಎಲ್ಲದರ ಗುರಿ, ಎಲ್ಲರಲ್ಲೂ ಇರುವ ಸತ್ಯ, ಎಲ್ಲವುಗಳ ಕೇಂದ್ರ. ಮುತ್ತುಗಳನ್ನು ಮಾಲೆಯಾಗಿ ಪೋಣಿಸಿದ ದಾರದ ಹಾಗೆ ದೇವರು ಅಥವಾ ವಿಶ್ವಾತ್ಮವು ಸಮಸ್ತ ಜೀವಿಗಳ ಒಳಹೋಗುವಂಥದು ಎನ್ನುವುದೀಗ ಭಾರತದ ಸಂದೇಶ. ಎಲ್ಲಾ ಕಡೆಯ ಯಾವುದೇ ಸ್ಥಳದ ಸಕಲ ಜೀವಿಗಳಿಗೂ ಸಮಾನವಾದದ್ದು ಇದು.

ಭಾರತೀಯ ಸಂಸ್ಕೃತಿ ಮತ್ತು ಸಂಪ್ರದಾಯಗಳನ್ನು ಕುರಿತಾಗಿರುವ ಎಲ್ಲಾ ಶಾಸ್ತ್ರ ಕೃತಿಗಳನ್ನು ಜಾಗರೂಕತೆಯಿಂದ ಪರೀಕ್ಷಿಸಿ, ಮೋಕ್ಷ ಅಥವಾ ಬಿಡುಗಡೆ ಅಥವಾ ಅತ್ಯುನ್ನತ ಸಾಕ್ಷಾತ್ಕಾರವು ಭಾರತೀಯರಿಗೆ ಮಾತ್ರ ದೊರಕುತ್ತದೆ, ಬೇರೆಯವರಿಗೆ ಅಲ್ಲ ಎಂದು ಅಲ್ಲೆಲ್ಲಾದರೂ ಉಲ್ಲೇಖವಿದೆಯೆ ಎಂದು ನೋಡಿ. ಆ ಅರ್ಥದ ಒಂದೇ ಒಂದು ಹೇಳಿಕೆಯನ್ನಾದರೂ ನೀವು ಶಾಸ್ತ್ರ ಕೃತಿಗಳಲ್ಲಿ ಕಂಡುಹಿಡಿಯಲು ಸಾಧ್ಯವಿದೆಯೆ? ಸಾಧ್ಯವಿಲ್ಲ ಎಂದು ಘಂಟಾಘೋಷವಾಗಿ ಹೇಳಬಹುದು. ಭಾರ ತೀಯ ಆಧ್ಯಾತ್ಮಿಕತೆಗೆ ಕೊನೆಯೇ ಇಲ್ಲದ ವ್ಯಾಪ್ತಿಯಿದೆ, ಅಗಾಧ ಎತ್ತರದ ಆದರ್ಶ ಗಳಿವೆ. ಕುಗ್ಗುವುದಾಗಲಿ, ಮಿತಿಗೊಳ್ಳುವುದಾಗಲಿ ಎಲ್ಲಿಯೂ ಇಲ್ಲದೆ ಪವಿತ್ರ ವಿಚಾರಗಳಿಂದ ತುಂಬಿಕೊಂಡು ಪ್ರವಹಿಸುತ್ತಿರುವ ತುಂಬು ಹೊಳೆ. ಭಗವತ್ ಕೃಪೆಯೆಂಬ ಸಾಗರದತ್ತ ನೇರವಾಗಿ ಸಲೀಸಾಗಿ ಹರಿದು ಹೋಗುವ ನದಿ ಅದು. ಪ್ರಯಾಣವು ಇಲ್ಲಿ ಪರಮೋನ್ನತ ಲಕ್ಷ್ಯದ ಕಡೆಗೆ ನೇರ ಮತ್ತು ರಾಜಪಥದಲ್ಲಿ ಸಾಗುವಂಥದು.

ಇನ್ನೊಂದು ವಿಚಾರ. ಭಾರತೀಯರು ಗುರುತಿಸಿ ಗೌರವಿಸಿರುವ ಸಮಸ್ತ ಆಧ್ಯಾತ್ಮಿಕ ತತ್ತ್ವಗಳ ಮೂಲ ಭಗವಂತ; ಅವನು ಅವೆಲ್ಲಕ್ಕೂ ಆಧಾರ ಸ್ತಂಭ. ಆದ್ದರಿಂದ ಧರ್ಮಕ್ಕೆ ಬೇರೊಂದು ಅವಲಂಬನೆ ಅಥವಾ ಆಧಾರ ಅಗತ್ಯವಿಲ್ಲ. ಭಾರತೀಯ ಆಧ್ಯಾತ್ಮಿಕತೆಯು ಇತರ ಎಲ್ಲ ಧರ್ಮಗಳ ತಳಹದಿಯೇ ಆಗಿದೆ. ಅನೇಕಾನೇಕ ವಿರೋಧೀ ಧರ್ಮಗಳ ಎದುರು ಮೌಲಿಕವಾದ ಚರ್ಚೆ, ವಾದಗಳನ್ನು ನಡೆಸಿ, ಸಿದ್ಧಾಂತಗಳನ್ನು ಮಂಡಿಸಿ ಅವುಗಳ ಮೇಲೆ ಅಮೋಘವಾದ ವಿಜಯವನ್ನು ಸಾಧಿಸಿ ವಿಜಯದ ಶಿಖರದ ಮೇಲೆ ಶೋಭಿಸುತ್ತಾ ನಿಂತಿದೆ. ಭಾರತೀಯರು ತಮ್ಮದನ್ನು ಬಿಟ್ಟು ಬೇರೆ ಯಾವುದೇ ಧರ್ಮವನ್ನಾಗಲಿ ಆಧ್ಯಾತ್ಮಿಕ ಸಾಧನೆಯನ್ನಾ ಗಲಿ ಕೈಗೊಳ್ಳಬೇಕಾದ ಅಗತ್ಯವೇ ಇಲ್ಲ. ಏಕೆಂದರೆ ಇಲ್ಲಿ ಇಲ್ಲದ ಸತ್ಯವಾಗಲಿ, ಸಾಧನೆಯಾಗಲಿ ಬೇರೆ ಎಲ್ಲೂ ದೊರಕುವುದಿಲ್ಲ. ಇತರ ಧರ್ಮಗಳು ಇದ

ರಿಂದಲೇ ಒಂದೋ ಎರಡೋ ಹತ್ತೋ ನಂಬಿಕೆಗಳನ್ನೂ ತತ್ತ್ವಗಳನ್ನೂ ತೆಗೆದು ಕೊಂಡು ಅನುಸರಿಸಬೇಕಾದ ಆದರ್ಶಗಳೆಂದು ಜನರ ಮುಂದೆ ಇಟ್ಟಿವೆ ಅಷ್ಟೆ.

ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕಾದ ವಿಚಾರ ಇದು—ಆಧ್ಯಾತ್ಮಿಕತೆಯನ್ನು ಕುರಿತಾಗಿರುವ ಭಾರತೀಯ ಶಾಸ್ತ್ರ ಕೃತಿಗಳು ಇಡೀ ಜಗತ್ತಿನಲ್ಲಿಯೇ ಅತ್ಯಂತ ಪ್ರಾಚೀನವಾದವುಗಳು; ಆತ್ಮವನ್ನು ಕುರಿತು ಅತಿ ಪ್ರಾಚೀನ ಅಧ್ಯಯನಗಳು ಮತ್ತು ಸಂಶೋಧನೆಗಳು. ಸಗುಣ ನಿರ್ಗುಣ ದೈವತತ್ತ್ವ, ವ್ಯಕ್ತಿಗತ ಹಾಗೂ ಸಾಮಾಜಿಕ ನೀತಿ ಸಂಹಿತೆ ಇತ್ಯಾದಿಗಳು ಆ ಸಂಶೋಧನೆ, ಅಧ್ಯಯನಗಳ ಆಧಾರದ ಮೇಲೆ ರೂಪುಗೊಂಡಿರುವಂಥವು. ಬೇರೆ ಯಾವುದೇ ಒಂದು ದೇಶದಲ್ಲಿ, ಬೇರೆ ಯಾವುದೇ ಜನರಲ್ಲಿ ಇಷ್ಟು ಪ್ರಾಚೀನವಾದ ಅಧ್ಯಯನಗಳು ಬೆಳಕು ಕಂಡಿಲ್ಲ. ಅಸ್ಪಷ್ಟವಾದ ಮಸಕು ಮಸಕಾದ ವಿಚಾರಗಳಿರಬಹುದು, ಅಲ್ಲಲ್ಲೇ ಕ್ಷಣಿಕವಾಗಿ ಕಾಣಿಸಿಕೊಂಡಿರಬಹುದು. ಆದರೆ ಅವಕ್ಕೆ ಅಧ್ಯಾತ್ಮ ಕೃತಿ ಅಥವಾ ಸಾಹಿತ್ಯ ಎಂಬ ಹೆಸರು ಸಲ್ಲುವುದಿಲ್ಲ. ವೈದಿಕ ಸಾಹಿತ್ಯವು ಋಷಿಗಳು ಮತ್ತು ಸಾಧಕರು ನಡೆಸಿದ ಅಧ್ಯಾತ್ಮ ವಿಚಾರಗಳನ್ನು ಚಿತ್ರಿಸುವುದು ಮಾತ್ರವಲ್ಲದೆ, ಅವರ ಅನ್ವೇಷಣೆಯ ಫಲಗಳು, ಅವರ ಚಿಂತನ ರೀತಿ, ಅವರ ಅಭೀಪ್ಸೆಗಳು, ಹಾತೊರೆತಗಳು, ಹಂಬಲಗಳು, ಅವರು ನಡೆಸಿದ ಧರ್ಮಾತೀತ ಹೋರಾಟಗಳು ಮತ್ತು ಪ್ರಾಪಂಚಿಕ ಹೋರಾಟಗಳು ಇವೆಲ್ಲವನ್ನೂ ನಿರೂಪಿಸುತ್ತವೆ.

ಅಧ್ಯಾಯ ೩

# ಅವನೊಬ್ಬನೇ

ಭಾರತೀಯ ಚಿಂತನೆಯ ಇತಿಹಾಸದ ಪ್ರಪ್ರಥಮ ಅನುಭವವೇ ನಾವು ಆಶ್ಚರ್ಯದಿಂದ ರೋಮಾಂಚಿತರಾಗುವಂತೆ ಮಾಡುತ್ತದೆ. ಭಾರತೀಯ ಮನಸ್ಸು ಮೊತ್ತ ಮೊದಲು ಪಡೆದುಕೊಂಡ ದರ್ಶನವಾದ ಋಗ್ವೇದದ ಋಕ್ಕುಗಳಲ್ಲಿ ಅಥವಾ ಮಂತ್ರಗಳಲ್ಲಿ ಇದು ವ್ಯಕ್ತವಾಗಿದೆ. ಋಕ್ಕುಗಳು ದೇವರ ಅಥವಾ ಕಾಂತಿಯಿಂದ ಹೊಳೆಯುವವರ ಬಗೆಗೆ ಹೇಳುತ್ತವೆ. ಇಂದ್ರ, ಮಿತ್ರ, ಪರ್ಜನ್ಯ ಹೀಗೆ ದೇವತೆಗಳು ಅನೇಕರು. ಇವು ಕೆಲವು ಹೆಸರುಗಳಷ್ಟೆ. ಇವರು ಋಕ್ಕುಗಳಲ್ಲಿ ಒಬ್ಬರಾದ ಮೇಲೊಬ್ಬರಂತೆ ಕಾಣಿಸಿಕೊಳ್ಳುತ್ತಾರೆ. ಇವರಲ್ಲಿ ಸಿಡಿಲನ್ನು (ವಜ್ರ) ಆಯುಧವಾಗಿ ಧರಿಸಿದ ಇಂದ್ರನು ಮುಖ್ಯನಾದವನು. ಅವನು ಭೂಮಿಯ ಮೇಲೆ ಮಳೆಯನ್ನು ಸುರಿಸುವ ಸಾಮರ್ಥ್ಯಶಾಲಿ. ಅವನು ಮಾನವನ ಇಂದ್ರಿಯಗಳ ಪ್ರಭುವಾದುದರಿಂದ, ಅಂದರೆ ಅವನು ಇಂದ್ರಿಯಗಳ ಮೇಲೆ ಅಂಕೆಯಿಡುವ ಮನಸ್ಸಾದ್ದರಿಂದ ಅವನಿಗೆ ಇಂದ್ರ ಎಂದು ಹೆಸರು. ಅವನಿಗೆ ಪುರೂಹೂತ ಎಂದು ಹೆಸರು. ಪುರು ಎಂದರೆ ಅನೇಕ ಸಾರಿ, ಪದೇ ಪದೇ, ಹೂತ ಎಂದರೆ ಕರೆಯಲ್ಪಡುವ ದೇವರು ಎಂದು ಈ ಹೆಸರಿಗೆ ಅರ್ಥ. ಮನಸ್ಸನ್ನು (ಇಂದ್ರಿಯಗಳನ್ನು ಹತೋಟಿಯಲ್ಲಿಡುವುದರಿಂದಾಗಿ ಅವುಗಳೊಂದಿಗೆ ಸಂಬಂಧ ಕಲ್ಪಿಸಿ) ರುದ್ರ ಎಂದೂ ವೇದಗಳಲ್ಲಿ ಸ್ತುತಿಸಲಾಗಿದೆ. ಮನಸ್ಸು ಐದು ಇಂದ್ರಿಯಗಳೆಂಬ ಉಪಕರಣಗಳ ಮೂಲಕವಾಗಿ ಬಾಹ್ಯ ಜಗತ್ತನ್ನು ಸಂಪರ್ಕಿಸಿ ಅನುಭವಿಸುತ್ತದೆ. ಮನಸ್ಸಿನ ಈ ಮುಖವನ್ನು ಇಂದ್ರ ಎನ್ನಲಾಗಿದೆ. ಮನಸ್ಸಿಗೆ ಇನ್ನೂ ಒಂದು ಸಾಮರ್ಥ್ಯವಿದೆ. ಇಂದ್ರಿಯಗಳ ಮೇಲೆ ಪ್ರಭುತ್ವ ಸಾಧಿಸಿ, ವಸ್ತು ಜಗತ್ತು ಎಂಬ ಬಹುಳತೆಯ ಒಳಗಿರುವ ವಿಶ್ವಾತ್ಮಕ ಏಕತೆಯ ಸತ್ಯವನ್ನು ಅದು ಅರಿಯಬಲ್ಲದು. ಮನಸ್ಸಿನ ಈ ಮುಖವನ್ನು ರುದ್ರ ಎನ್ನಲಾಗಿದೆ. ಇಂದ್ರ ಮತ್ತು ರುದ್ರ ಇಬ್ಬರನ್ನೂ ಎರಡು ಹೆಸರಿನ ಒಬ್ಬನೇ ಎಂದು ವರ್ಣಿಸುವುದಕ್ಕೆ ಇದೇ ಕಾರಣ.

ಇತರ ದೇವತೆಗಳನ್ನು ಕುರಿತು ಕೂಡ ಇಂಥವೇ ಅನೇಕ ವರ್ಣನೆಗಳನ್ನು ಉದ್ಧರಿಸಬಹುದು. ಆದರೂ ಕೊನೆಗೆ ಎಲ್ಲಾ ವರ್ಣನೆಗಳೂ ಒಂದೇ ನಿರ್ಣಯಕ್ಕೆ ಬರುತ್ತವೆ. ದೇವತೆಗಳನ್ನು ಮೊದಲಿಗೆ ಒಂದಲ್ಲ ಒಂದು ಕರ್ತವ್ಯವನ್ನು ನಿರ್ವಹಿಸು

ವಂಥವರನ್ನಾಗಿ ಸ್ತುತಿಸಲಾಗುತ್ತದೆ. ಆಮೇಲೆ ಈ ಎಲ್ಲ ದೇವತೆಗಳೂ ಎಲ್ಲ ಲೋಕಗಳನ್ನೂ ತನ್ನಲ್ಲೇ ಉಳ್ಳ, ಎಲ್ಲದಕ್ಕೂ ಸಾಕ್ಷಿಯಾದ, ಎಲ್ಲ ಹೃದಯಗಳಲ್ಲೂ ನೆಲೆಸಿರುವ, ಸಮಸ್ತ ಸೃಷ್ಟಿಯ ಪ್ರಭುವಾದ ಒಬ್ಬನೇ ಭಗವಂತನ ವಿವಿಧ ನಾಮ ರೂಪಗಳಾಗಿ ಪರಿವರ್ತಿತವಾಗುತ್ತವೆ. ಕ್ರಮೇಣ ಈ ಹೆಸರುಗಳ ಬೇರೆ ಎಲ್ಲ ಅರ್ಥಗಳೂ ಪ್ರತಿ ಕ್ರಿಯೆಗಳೂ ಅಮುಖ್ಯವಾಗಿ ಬಿಡುತ್ತವೆ, ಅಸಂಗತವಾಗುತ್ತವೆ. ಉದಾಹರಣೆಗೆ ಭಯವನ್ನು ವರುಣ ದೇವತೆಗೆ ಸಂಬಂಧಗೊಳಿಸಲಾಯಿತು. ಕೆಲವು ಋಕ್ಕುಗಳಲ್ಲಿ ಭಯವು ಮೊಳಕೆಯೊಡೆದು ಹರಡಿರುವುದನ್ನು ನೋಡು ತ್ತೇವೆ. ಆದರೆ ಬಹುಬೇಗನೆ ಆರ್ಯ ಜ್ಞಾನವು ಭಯವನ್ನು ಹತೋಟಿಗೆ ತಂದು ಕೊಂಡಿತು. ಜನರು ತಮ್ಮ ಪಾಪ ಕಾರ್ಯಗಳಿಗಾಗಿ ವರುಣನು ಶಿಕ್ಷಿಸುತ್ತಾನೆಂದು ಹೆದರಿ ಅವನನ್ನು ಸ್ತುತಿಸಿ ಹಾಡಿದ ಹಲವು ಋಕ್ಕುಗಳಿವೆ. ಆದರೆ ಭೀತಿಗೊಳಿಸುವ ದೇವರ ಕಲ್ಪನೆ ಭಾರತೀಯ ನೆಲದಲ್ಲಿ ಬೆಳೆಯಲಾರದು. ಹಲವು ಸ್ವಭಾವಗಳುಳ್ಳ ಹಲವು ದೇವತೆಗಳ ವಿಚಾರವೂ ಅಷ್ಟೆ. ಭಾರತೀಯ ಸಂಸ್ಕೃತಿ ಮತ್ತು ಆಧ್ಯಾತ್ಮಿಕ ದೃಷ್ಟಿಯು ಒಬ್ಬ ಭಗವಂತನನ್ನು ಅಥವಾ ಈಶ್ವರನನ್ನು ಎತ್ತಿ ಹಿಡಿಯುತ್ತದೆ.

ಆಮೇಲೆ ಏಕೇಶ್ವರ! ಇರುವುದು ಅನೇಕವಲ್ಲ, ಒಂದೇ ಎನ್ನುವ ಸೂತ್ರವು ಭಾರತ ದಲ್ಲಿ ಬಹು ಪ್ರಾಚೀನ ಕಾಲದಿಂದಲೂ ನೆಲೆಗೊಂಡಿದೆ. ಪ್ರಾಚೀನವಾದ ವೈದಿಕ ಮತ್ತು ಸಂಹಿತಾ ಸಾಹಿತ್ಯದಲ್ಲೇ ಈ ನಂಬಿಕೆಯು ಬಹಳ ಹಿಂದಿನಿಂದ ಬಂದ ನಂಬಿಕೆಯಾಗಿ ಕಾಣಿಸಿಕೊಳ್ಳುತ್ತದೆ.

ಈ ದೇಶದ ಚಿಂತಕರಿಗೆ ಮತ್ತು ಧರ್ಮಸಾಧಕರಿಗೆ ಸಾಕಾರ ದೈವದ ಕಲ್ಪನೆಯೂ ಪ್ರಾಥಮಿಕ ಮಟ್ಟದ್ದಾಗಿ, ಅಧ್ಯಾತ್ಮ ಪ್ರಗತಿಯಲ್ಲಿ ಇನ್ನೂ ಪಕ್ವತೆ ಸಾಧಿಸಿರದ ಹಂತದ್ದು ಎಂಬ ಭಾವನೆ ಇತ್ತು. ಅವರ ಉನ್ನತಾಕಾಂಕ್ಷೆಗಳನ್ನು ಅದು ಪೂರೈಸಲಿಲ್ಲ. ಋಷಿಗಳ ದರ್ಶನಗಳಲ್ಲಿ ವ್ಯಕ್ತವಾಗಿರುವ ಈ ಮನೋಧರ್ಮವನ್ನು ವೇದಗಳು ಮತ್ತು ಸಂಬಂಧಿತ ಇತರ ಕೃತಿಗಳ ಅಧ್ಯಯನ, ವ್ಯಾಖ್ಯಾನಗಳನ್ನು ಕೈಗೊಂಡ ವಿದೇಶೀಯ ವಿದ್ವಾಂಸರು ಮತ್ತು ಬರಹಗಾರರು ಅರ್ಥ ಮಾಡಿಕೊಳ್ಳಲಿಲ್ಲ. ಅವರಿನ್ನೂ ಬಹಳ ಮುಂಚೆ ಇದ್ದ 'ಹಲವರು ದೇವತೆಗಳು' ನಂಬಿಕೆ, ಆಮೇಲೆ ಕಾಣಿಸಿಕೊಂಡ 'ಒಬ್ಬನೇ ವ್ಯಕ್ತಿರೂಪದ ಭಗವಂತ' ಕಲ್ಪನೆಗಳನ್ನೇ ಇಟ್ಟುಕೊಂಡು ವಿಚಾರಮಾಡುತ್ತಾರೆ. ಈ ಬಗೆಯ ಅಜ್ಞಾನವು ಹಿಂದೂವಿಗೆ ನಗೆಯುಕ್ಕಿಸುತ್ತದೆ ಅಷ್ಟೆ.

ನಿಜವಾಗಿ ಹೇಳಬೇಕೆಂದರೆ, ತಾಯ ತೊಡೆಯ ಮೇಲೆ ಮಲಗಿರುವಾಗ ಒಂದು ನಾಮ ಒಂದು ಗುರುತಿಸಬಹುದಾದ ರೂಪ ಇದ್ದು ಗುಣ ಭರಿತನಾದ ಒಬ್ಬ

ಭಗವಂತನ ಮೇಲೆ ನಂಬಿಕೆಯನ್ನು ಇಟ್ಟುಕೊಂಡವರೂ ಕೂಡ ಮುಂದೆ ಅದಕ್ಕಿಂತ ಒಂದು ಹಂತ ಮೇಲೇರಿ 'ಅನೇಕ ನಾಮಗಳು ಮತ್ತು ಅನೇಕ ರೂಪಗಳಿರುವ ಒಬ್ಬ ಭಗವಂತನ' ಅಸ್ತಿತ್ವವನ್ನು ಅರಿಯಬೇಕಾಗುತ್ತದೆ. ಈ ಸತ್ಯವನ್ನು ಅರಿತುಕೊಳ್ಳು ವುದೇ ಸಾಧನೆಗಳ ಗುರಿ.

ನಿತ್ಯ ಪರಿವರ್ತನಶೀಲವಾದ ಈ ಜಗತ್ತು ನೆಲೆಗೊಂಡಿರುವುದೇ ಅವನಲ್ಲಿ, ಅವ ನೊಬ್ಬನಲ್ಲೇ. ಪ್ರತಿಯೊಂದು ಜೀವಿಯ ಮಾರ್ಗದರ್ಶಕನೂ ಪೋಷಕನೂ ಅವನೇ. ಈ ಸಾಹಸದಲ್ಲಿ ಮಾನವನ ಬುದ್ಧಿ ಶಕ್ತಿಯು ಯಶಸ್ಸುಗಳಿಸಬಲ್ಲುದು ಎಂದು ಪಾಶ್ಚಾತ್ಯರು ಹೇಳಿದರು. ಆದರೆ ನಮ್ಮ ನಾಡಿನ ಅನ್ವೇಷಕರಾದರೋ ಅಮೇಯ ವಾದ, ಕೊನೆಯೇ ಇಲ್ಲದ ಒಂದು ಸಾಮರ್ಥ್ಯವನ್ನು ತೋರಿಸಿದರು. ಇದನ್ನು ಒಪ್ಪಿಕೊಳ್ಳದೆ ಇರಲು ಸಾಧ್ಯವಿಲ್ಲ. ಆತ್ಮದ ಕ್ಷೇತ್ರದಲ್ಲಿ ಮಹಾ ಸಾಹಸ ಪೂರ್ಣಯಾನ ಗಳನ್ನು ನಡೆಸಿ ಪ್ರಸಿದ್ಧರಾಗಿರುವ ಪಾಶ್ಚಾತ್ಯ ದಾರ್ಶನಿಕರು ಈ ಪರಾಕ್ರಮದ ಒಂದು ಸಣ್ಣ ಕಿಡಿಯಷ್ಟನ್ನು ತೋರಿಸಿದ್ದಾರೆ ಅಷ್ಟೆ. ಹಾಗಾಗಿ, ಭಾರತದ ಋಷಿಗಳು ತಲುಪಿರುವ ಚಿಂತನೆಯ ಮತ್ತು ಅನುಭವದ ಶಿಖರಗಳನ್ನು ನೋಡಿ ಅವರು ನಿಬ್ಬೆರಗಾಗುತ್ತಾರೆ. ಈ ಅಚ್ಚರಿಯನ್ನು ಪ್ರೊ. ಮ್ಯಾಕ್ಸ್ ಮುಲ್ಲರ್ ಸುಂದರವಾದ ಮಾತುಗಳಲ್ಲಿ ಹೀಗೆ ವ್ಯಕ್ತಿಪಡಿಸಿದ್ದಾರೆ: "ಕಾರಣ ಹಾಗೂ ಇತ್ಯಾತ್ಮಕ ವಿಚಾರ ಶಕ್ತಿಯು ಎಲ್ಲೆಲ್ಲಿಗೆ ಒಯ್ದಿದೆಯೋ ಆ ಅಜ್ಞಾತ ಅನುಭವ ಕ್ಷೇತ್ರಗಳಲ್ಲಿ ಮಹಾ ಧೈರ್ಯದಿಂದ ಭಾರತೀಯ ಅನ್ವೇಷಕರು ಮುನ್ನುಗ್ಗಿ ಸಾಧನೆ ಮಾಡಿದರು. ಈ ಸಾಹಸಕ್ಕೆ ಅಡ್ಡಿ ಎಂದು ತೋರಿಬಂದ ಯಾವುದನ್ನೇ ಆಗಲಿ ಪರಿತ್ಯಜಿಸುವುದಕ್ಕೆ ಅವರು ಎಂದೂ ಹಿಂಜರಿಯಲಿಲ್ಲ. ಇತರರು ತಮ್ಮನ್ನು ಕುರಿತು ಏನೆಂದುಕೊಳ್ಳ ಬಹುದೋ ಎಂಬ ಭಯ ಅವರ ಮೇಲೆ ಯಾವ ಅಡ್ಡ ಪರಿಣಾಮವನ್ನೂ ಮಾಡಲಿಲ್ಲ." ಭಾರತೀಯ ಪರಮಾರ್ಥವಾಹಿನಿಯಲ್ಲಿ ಸೇರಿಕೊಳ್ಳಿ ಎಂದು ಮ್ಯಾಕ್ಸ್ ಮುಲ್ಲರ್ ಜನರಿಗೆ ಒತ್ತಿ ಹೇಳಿದರು. ಏಕೆಂದರೆ, ಭಾರತೀಯ ಸಾಧಕರು ಸರಿಯಾದ ದಾರಿಯಲ್ಲಿ, ಸತ್ಯದ ದಾರಿಯಲ್ಲಿ ಹೋಗಿದ್ದಾರೆ ಎಂದು ಅವರಿಗೆ ಮನವರಿಕೆಯಾಗಿತ್ತು.

'ಏಕಂ ಸತ್; ವಿಪ್ರಾಃ ಬಹುಧಾ ವದಂತಿ'; ಇರುವುದು ಒಬ್ಬನೇ ವಿದ್ವಾಂಸರು ಅದನ್ನೇ ಅನೇಕವಾಗಿ ಹೇಳುತ್ತಾರೆ. ಇದೊಂದು ಅದ್ಭುತ ಭವ್ಯ ಅರ್ಥವನ್ನುಳ್ಳ ಉಕ್ತಿ. ಯುಗಯುಗಾಂತರಗಳಿಂದ ಭಾರತದ ಋಷಿ ಮುನಿಗಳು ಕೈಗೊಂಡ ಆಧ್ಯಾತ್ಮಿಕ ಸಾದನೆಯ ಹಿಂದಿರುವ ಮೂಲ ಸತ್ಯ ಇದೇಯೆ. ಬರಲಿರುವ ವರ್ಷಗಳಲ್ಲಿ ಹಿಂದೆಂದೂ ಇದ್ದಿರದಷ್ಟು ಅಗಾಧ ಪ್ರಮಾಣದಲ್ಲಿ, ಜಗತ್ತಿನಾದ್ಯಂತ ಆಸ್ತಿಕ್ಯವು

ಹೆಚ್ಚಿ ಈಶ್ವರವಾದವು ಪ್ರವರ್ತಿಸುವುದಕ್ಕೂ ಭಾರತದ ಋಷಿಗಳು ಬಹಳ ಬಹಳ ಹಿಂದೆಯೇ ಹಾಕಿಕೊಟ್ಟ ಈ ಮಹಾನ್ ಸೂಕ್ತಿಯೇ ಆಧಾರವಾಗುತ್ತದೆ.

ಹಲವಾರು ದೇವತೆಗಳನ್ನು ದಿವ್ಯ ಶಕ್ತಿಗಳನ್ನು ಕುರಿತು ಋಕ್ಕುಗಳು ರಚಿತವಾದುವು. ಇರುವುದು ಒಂದೇ ಒಂದು, ಅದನ್ನು ಪ್ರತಿಯೊಬ್ಬನೂ ತನ್ನದೇ ದೃಷ್ಟಿಕೋನದಿಂದ ನೋಡಬಹುದು, ಪ್ರತಿಯೊಬ್ಬ ವ್ಯಕ್ತಿಗೂ ಅವನವನು ಈ ದರ್ಶನವನ್ನು ಪಡೆದು ಕೊಂಡಿರುವ ಪರಿ, ಅವನ ಸಾಧನೆಯ ಹಂತ ಇವುಗಳನ್ನು ಅವಲಂಬಿಸಿ ಬೇರೆ ಬೇರೆಯಾಗಿ ತೋರುತ್ತದೆ. ಆ ಒಂದು ಹೇಳಿಕೆಯ ಮೂಲಕವಾಗಿ ಅವರು ಎಲ್ಲಾ ಕಾಲಗಳ ಸಾಧು ಸಂತರು, ಋಷಿಗಳು, ದ್ರಷ್ಟಾರರು, ಕವಿಗಳು, ವಾಗ್ಗೇಯಕಾರರು ವಿವಿಧ ಭಾಷೆಯಲ್ಲಿ ಬೇರೆ ಬೇರೆ ಧರ್ಮಗಳಲ್ಲಿದ್ದಾಗ, ವಿಧವಿಧವಾದ ಅಭಿವ್ಯಕ್ತಿ ಶೈಲಿಯಲ್ಲಿ ಹಾಡಿದರು, ಸ್ತುತಿಸಿದರು ಎಂಬುದನ್ನು ಕಂಡುಕೊಂಡರು. ಹೀಗಾಗಿ ಮೇಲೆ ಉದ್ಧರಿಸಿದ 'ಏಕಂ ಸತ್, ವಿಪ್ರಾಃ ಬಹುಧಾ ವದಂತಿ' ಎಂಬ ಘೋಷಣೆ ಯಿಂದ ಜಗತ್ತಿಗೆ ಅತ್ಯಮೂಲ್ಯವೆನಿಸುವ ಪರಿಣಾಮಗಳು ಉಂಟಾದವು. ಧರ್ಮಾಂಧತೆ ಇಲ್ಲದಿರುವ ಒಂದು ದೇಶವೆಂದರೆ ಭಾರತ. ಇದನ್ನು ನೋಡಿ ಅನೇಕರಿಗೆ ಆಶ್ಚರ್ಯವಾಗುತ್ತದೆ. ಒಬ್ಬನ ಧಾರ್ಮಿಕ ನಂಬಿಕೆಗಳನ್ನಾಗಲಿ ಆಚರಣೆಗಳನ್ನಾಗಲಿ ಇನ್ನೊಬ್ಬನು ಇಲ್ಲಿ ತಡೆಯುವುದಿಲ್ಲ, ಅಡ್ಡಿಪಡಿಸುವುದಿಲ್ಲ. ಆದ್ದರಿಂದಲೇ ಈ ದೇಶದಲ್ಲಿ ಆಸ್ತಿಕರಿದ್ದಾರೆ, ನಾಸ್ತಿಕರಿದ್ದಾರೆ. ಅವರೆಲ್ಲರೂ ಶಾಂತಿ ಸಾಮರಸ್ಯಗಳಿಂದ ಸಹಬಾಳ್ವೆ ನಡೆಸುತ್ತಿದ್ದಾರೆ. ಅವರು ಇತರರಿಗೆ ನೋವನ್ನು ಉಂಟುಮಾಡುವುದು ಇಲ್ಲ. ಇತರರಿಂದ ನೋವನ್ನು ಅನುಭವಿಸುವುದೂ ಇಲ್ಲ.

ಭೌತವಾದಿಗಳು, ಬ್ರಾಹ್ಮಣರು ಪವಿತ್ರವೆಂದು ಪರಿಗಣಿಸಿ ಪೂಜಾ ಸ್ಥಳಗಳೆಂದು ಕಟ್ಟಿಕೊಂಡ ದೇವಾಲಯಗಳ ಮೆಟ್ಟಿಲ ಮೇಲೆ ನಿಂತು ದೇವರನ್ನು ಖಂಡಿಸಿದರು, ನಿರಾಕರಿಸಿದರು. ಎಲ್ಲರೂ ತಮ್ಮ ಮಾರ್ಗವನ್ನೇ ಅನುಸರಿಸಬೇಕೆಂದು ಕರೆಯುತ್ತಿದ್ದರು. ಭಗವಂತ ಎಂಬ ಕಲ್ಪನೆಯೇ ಒಂದು ಹುಚ್ಚು ಕಲ್ಪನೆ; ದೇವರು, ಶಾಸ್ತ್ರಗಳು ನೀತಿ ಸಂಹಿತೆಗಳು, ಧರ್ಮಯುತ ನಡವಳಿಕೆ, ಇತ್ಯಾದಿಗಳೆಲ್ಲ ಬ್ರಾಹ್ಮಣರು ತಮ್ಮ ಸ್ವಾರ್ಥವನ್ನು ಪೂರೈಸಿಕೊಳ್ಳುವ ಸಲುವಾಗಿ ರೂಪಿಸಿ ಬೆಳೆಸಿದ ಮೂಢನಂಬಿಕೆಗಳು ಎಂದು ಸಾರಿದರು. ದೇಶದ ಉದ್ದಗಲಕ್ಕೆ ಸಂಚರಿಸಿ ಈ ವಿಚಾರಗಳನ್ನು ಹರಡಿದರು. ಆದರೂ ಇಲ್ಲಿ ಅವರನ್ನು ಯಾರೂ ಅಡ್ಡಿಪಡಿಸಲಿಲ್ಲ. ಹಿಂದೂ ಆಚರಣೆಗಳನ್ನೂ ಯಜ್ಞ ಯಾಗಾದಿಗಳನ್ನು ನಂಬಿಕೆಗಳನ್ನೂ ವ್ಯವಸ್ಥಿತ ರೀತಿಯಲ್ಲಿ ಅವಹೇಳನ ಮಾಡಿದ ಬೌದ್ಧ ಧರ್ಮವು ಗೌರವಾನ್ವಿತವಾಗಿ ಸಹಬಾಳ್ವೆ ನಡೆಸುವಂತೆ ನೋಡಿಕೊಳ್ಳಲಾಯಿತು. ಜೈನರೂ ಕೂಡ ವೇದಗಳನ್ನಾಗಲಿ ವೈದಿಕ ದೇವತೆಗಳನ್ನಾಗಲಿ ಒಪ್ಪಲಿಲ್ಲ. ಅಂತಹ ದೇವತೆಗಳು ಅಸ್ತಿತ್ವದಲ್ಲಿರುವುದಾಗಲಿ, ಅವರನ್ನು ನಂಬುವು

ದಾಗಲಿ ಹೇಗೆ ಸಾಧ್ಯ ಎಂದು ಗೇಲಿ ಮಾಡಿದರು. ಮೇಲೆ ಉದ್ಧರಿಸಿದ ಉಕ್ತಿಯಲ್ಲಿ ವ್ಯಕ್ತವಾಗಿರುವ, ಅದರಲ್ಲಿ ಬೇರು ಬಿಟ್ಟಿರುವ ಸಹಿಷ್ಣುತಾ ಭಾವನೆಗೆ ಅಸಂಖ್ಯಾತ ವಾದ ನಿದರ್ಶನಗಳು ದೊರಕುತ್ತವೆ. ಲೂಟಿಕೋರ ಮುಸ್ಲಿಮರು ಈ ಭಾರತ ದೇಶದ ಮೇಲೆ ಮುಗಿಬೀಳವವರೆಗೆ ಹಿಂಸೆ ಎಂದರೇನೆಂಬುದೇ ಯಾರೊಬ್ಬರಿಗೂ ಇಲ್ಲಿ ತಿಳಿದಿರಲಿಲ್ಲ. ವಿದೇಶೀಯರು ಆಕ್ರಮಣ ಮಾಡಿ ಹಿಂಸಾಚಾರಕ್ಕಿಳಿದಾಗ ಭಾರತೀಯರಿಗೆ ಮನುಷ್ಯನು ಎಷ್ಟುಮಟ್ಟಿಗೆ ಅಸಹಿಷ್ಣುವಾಗಬಹುದು ಎನ್ನುವುದು ತಿಳಿಯಿತು.

ಹಿಂದೂಗಳು ಕ್ರಿಶ್ಚಿಯನ್ನರಿಗೆ ಭಾರತದಲ್ಲಿ ಚರ್ಚುಗಳನ್ನು ಕಟ್ಟಲು ಸಹಾಯ ಮಾಡಿದರು. ಅವರೊಂದಿಗೆ ಸಹಕರಿಸಲು ಸಿದ್ಧರಾಗಿದ್ದರು. ಇದು ದೇಶದ ಎಲ್ಲ ಭಾಗಗಳಲ್ಲೂ ಸ್ಪಷ್ಟವಾಗಿದೆ. ಕ್ರಿಶ್ಚಿಯನ್ನರೊಂದಿಗೆ ವ್ಯವಹರಿಸುವಲ್ಲಿ ಎಂದೂ ಎಲ್ಲೂ ರಕ್ತಪಾತವಾಗಲಿಲ್ಲ. ಪರಮೋನ್ನತ ಸತ್ಯದ ಕಡೆಗೆ ನಿರ್ದೇಶಿಸುವ ಚಿಂತನ ವಾಹಿನಿಯು ಹಿಂಸೆಯಿಂದ ಎಂದೂ ಮಲಿನಗೊಳ್ಳಲಿಲ್ಲ. ಈ ಸಂಗತಿಯನ್ನು ಸಮರ್ಥಿಸಬೇಕಾದರೆ, ಹಾಗೂ ಈ ಮನೋಧರ್ಮದ ಮೌಲ್ಯವನ್ನು ಅರ್ಥಮಾಡಿ ಕೊಳ್ಳಬೇಕಾದರೆ ಸ್ಪಷ್ಟ ಆಲೋಚನೆಯೂ ಬುದ್ಧಿಬಲವೂ ಬೇಕು. ಧರ್ಮ ಪ್ರವರ್ತನೆ ಮಾಡಿದವರಲ್ಲಿ ಮೊದಲಿಗರಾದ ಬೌದ್ಧರು ಪ್ರಪಂಚದಾದ್ಯಂತ ಸಂಚರಿಸಿ ತಮ್ಮ ಧರ್ಮ ಪ್ರಸಾರ ಮಾಡಿದರು. ಆಗಿನ ಕಾಲದಲ್ಲಿ ನಾಗರಿಕವೆಂದು ಪ್ರಖ್ಯಾತವಾಗಿದ್ದ ಎಲ್ಲ ದೇಶಗಳಿಗೂ ಈ ಧರ್ಮವು ಹರಡಿತು. ಆ ದೇಶಗಳಿಗೆ ಹೋದ ಬೌದ್ಧ ಭಿಕ್ಷುಗಳಿಗೆ ಚಿತ್ರಹಿಂಸೆ ಕೊಟ್ಟರು, ಅಲ್ಲಿಯ ರಾಜಾಜ್ಞೆಯಂತೆ ನೂರಾರು ಭಿಕ್ಷುಗಳನ್ನು ಕೊಲ್ಲಲಾಯಿತು. ಆದರೆ ಬೇಗನೆ ಬೌದ್ಧ ಧರ್ಮದ ಪಾಲಿಗೆ ಅದೃಷ್ಟ ಒಲಿಯಿತು. ಹಿಂಸೆಯನ್ನು ತ್ಯಜಿಸಬೇಕೆಂದು ಬೌದ್ಧಧರ್ಮವು ಬೋಧಿಸಿತು. ಬುದ್ಧನು ದೇವ ರೆಂದೇ ಪರಿಗಣಿತನಾದನು. 'ಏಕಂ ಸತ್, ವಿಪ್ರಾಃ ಬಹುಧಾ ವದಂತಿ' ಎಂಬ ವೈದಿಕ ಉಕ್ತಿಯ ಪ್ರಕಾರ ಬುದ್ಧನೆಂಬುದು ಅನೇಕಾನೇಕ ಹೆಸರುಗಳುಳ್ಳ ಏಕೈಕ ಪರವಸ್ತುವಿನ ಇನ್ನೊಂದು ಹೆಸರಾಯಿತು. ಅವನೇ ಇಂದ್ರ, ಅವನೇ ರುದ್ರ, ಅದು ಋಷಿಗಳ ಮೂಲದರ್ಶನದ ಐಕ್ಯತಾ ಪರಿಣಾಮವಾಗಿತ್ತು. ಈ ಅಮೋಘವಾದ ಘೋಷಣೆ ಎಂದೆಂದಿಗೂ ಮಾನವನ ನೆನಪಿನಲ್ಲಿ ಉಳಿದಿರಲಿ!

ಭಾರತದ ಸಂಸ್ಕೃತಿಯನ್ನುಂಡು ಬೆಳೆದಿರುವ ಭಾರತೀಯರಿಗೆ ಎಲ್ಲಾ ಧರ್ಮಗಳ ಸಮಾನತೆಯ ವಿಷಯದಲ್ಲಿ ಆಳವಾದ ನಂಬಿಕೆಯಿದೆ. ಅದು ಹಿಂದೂ ಧರ್ಮವೇ ಆಗಲಿ, ಬೌದ್ಧ ಧರ್ಮವಾಗಲಿ, ಇಸ್ಲಾಂ, ಜೋರಾಸ್ಟ್ರಿಯನ್ ಅಥವಾ ಕ್ರೈಸ್ತ ಧರ್ಮವಾಗಲಿ, ಯಾರೂ ಭಗವಂತನ ಆರಾಧನೆಯನ್ನು ಕುರಿತು ಹಗುರವಾಗಿ ಮಾತನಾಡಬಾರದೆಂದು ಅವರು ನಂಬುತ್ತಾರೆ. ಭಗವಂತನ ಯಾವುದೇ ಒಂದು

ನಾಮವನ್ನು ಕುರಿತು, ಇತರರು ಸ್ತುತಿಸುವ ಅವನ ಯಾವುದೇ ಒಂದು ರೂಪವನ್ನು ಕುರಿತು ಲಘುವಾಗಿ ಮಾತನಾಡಿದರೆ ಅದು ಏಕೈಕ ಭಗವಂತನಿಗೆ ತೀವ್ರ ಅಪಮಾನ ಮಾಡಿದ ಹಾಗೆ. ಆಧ್ಯಾತ್ಮಿಕ ಜೀವನದ ಭಾರತೀಯ ವಿಧಾನವು ಕೊಟ್ಟಿರುವ ಸಂದೇಶ ಇದು. ಈ ಸತ್ಯವನ್ನು ಅರಿತು ಅದರಂತೆ ನಡೆಯುತ್ತಿರುವವರೀಗ ಭಾರತಮಾತೆಯ ಸತ್ಪುತ್ರರು ಪುತ್ರಿಯರು.

ಈ ಸತ್ಯವು ಎಲ್ಲರ ಗ್ರಹಿಕೆಗೆ ಮೀರಿದುದಾಗಿದೆ; ಎಲ್ಲರೂ ಈ ಜ್ಞಾನವನ್ನು ಪಡೆದುಕೊಳ್ಳಲಾರರು. ವಿಶ್ವದ ಪ್ರಭು ಯಾರು? ಅದರಿಂದ ಹೊರಗೆ ನಿಂತು ಅದಕ್ಕೆ ದಾರಿ ತೋರಿಸುತ್ತಿರುವವನು ಯಾರು? ಈ ಬ್ರಹ್ಮಾಂಡದ ಅಸ್ತಿತ್ವಕ್ಕೆ ಕಾರಣವಾದರೂ ಏನು? ಇದು ಯಾವಾಗ ಹುಟ್ಟಿತು? ಅದು ಹೇಗೆ ಸಂಭವಿಸಿತು? ಈ ವಿಶ್ವದ ಅಸ್ತಿತ್ವಕ್ಕೆ ಕಾರಣವೇನು? ಈ ರಹಸ್ಯಗಳ ವಿಚಾರವಾಗಿ ಹೇಳುವ ಅನೇಕ ಋಕ್ಕುಗಳು ವೇದಗಳಲ್ಲಿವೆ. ಭಾರತೀಯರು ಅವುಗಳನ್ನು ಶೋಧನೆ ಮಾಡಿ ನೋಡಿದ್ದಾರೆ.

ಸೃಷ್ಟಿಯು ದ್ರವ್ಯಗಳನ್ನು ಒಟ್ಟುಗೂಡಿಸುವುದನ್ನು ಒಳಗೊಳ್ಳುತ್ತದೆ. ಒಟ್ಟಿಗೆ ಕೂಡಿಸಿದ್ದು ಒಂದು ದಿನ ಒಡೆದು ಬೇರೆ ಬೇರೆಯಾಗಲೇಬೇಕು. ವ್ಯಕ್ತಿಯು ಸೃಷ್ಟಿಗೊಂಡಿದ್ದಾನೆ, ಆದ್ದರಿಂದ ಅವನು ಕ್ಷಯಿಸಲೇಬೇಕು, ಸಾಯಲೇಬೇಕು. ಕೆಲವರು ಹುಟ್ಟಿನಿಂದಲೇ ಸಂತೋಷವಾಗಿರುತ್ತಾರೆ; ಕೆಲವರು ಆರೋಗ್ಯಪೂರ್ಣವಾಗಿ ಸಂತೋಷ ಭರಿತವಾದ ಜೀವನವನ್ನು ನಡೆಸುತ್ತಾರೆ, ಕೆಲವರು ಹುಟ್ಟುವುದೇ ದುಃಖದಲ್ಲಿ, ಮತ್ತೆ ಕೆಲವರು ಕೈಯೋ ಕಾಲೋ ಇಲ್ಲದೆ ಹುಟ್ಟುತ್ತಾರೆ, ಕೆಲವರು ದುರ್ಬಲ ಮನಸ್ಕರಾಗಿ ಹುಟ್ಟುತ್ತಾರೆ. ಅವರನ್ನು ಗಾಯಗೊಳಿಸಿದವರು ಯಾರು, ನೋಯಿಸಿದವರು ಯಾರು? ದೇವರು ದಯಾಮಯ, ಕರುಣಾನಿಧಿ, ನ್ಯಾಯಯುತ ಎಂದು ಘೋಷಿಸಲಾಗುತ್ತದೆ. ಅಂತಹ ದೇವರು ಪಕ್ಷಪಾತಿಯಾಗಿರಲು ಪೂರ್ವಗ್ರಹ ಪೀಡಿತನಾಗಲು ಹೇಗೆ ಸಾಧ್ಯ? ಭಗವಂತನೇ ಆಳುತ್ತಿರುವ ಸಾಮ್ರಾಜ್ಯದಲ್ಲಿ ಅಂತಹ ಪಕ್ಷಪಾತವು ಕಾಣಿಸಿಕೊಂಡುದಾದರೂ ಹೇಗೆ? ಇಂತಹ ಸಂದೇಹಗಳು ಬರುವುದು ಸಹಜ. ಆದರೆ ಈ ದೇಶದ ಚಿಂತನೆಯನ್ನು ರೂಪಿಸಿದ ಋಷಿಗಳ ದರ್ಶನವು ಅವರಿಗೆ ಈ ವ್ಯತ್ಯಾಸ ವೈಪರೀತ್ಯಗಳ ಕಾರಣವು ಭಗವಂತ ಅಲ್ಲ ಎಂಬುದನ್ನು ತೋರಿಸಿಕೊಟ್ಟಿತು; ಅವು ಈ ಜನ್ಮಕ್ಕಿಂತ ಹಿಂದಿನ ಜನ್ಮಗಳಲ್ಲಿ ಅವರು ಮಾಡಿದ ಕರ್ಮಗಳ ಪರಿಣಾಮಗಳು. ಅ ಪರಿಣಾಮಗಳೇ ಸಂತೋಷವಾಗಿ, ದುಃಖವಾಗಿ, ಆರೋಗ್ಯವಾಗಿ, ದುರ್ಬಲತೆಯಾಗಿ ಅನುಭವಕ್ಕೆ ಬರುತ್ತವೆ.

ಒಳಿತಾಗಲಿ ಕೆಡುಕಾಗಲಿ ಸ್ವಯಂ ಕೃತ. ಹಿಂದಿನ ಜನ್ಮಗಳಲ್ಲಿ ಮಾಡಿದುದರ ಪರಿಣಾಮಗಳು. ಮಾನವನ ದೇಹಗಳು, ಅವರ ಸ್ಥಿತಿಗತಿಗಳು, ಮಾನವರು ಬದುಕಿನಲ್ಲಿ ಎದುರಿಸುವ ಏಳು ಬೀಳುಗಳು ಇವು ಅನುವಂಶಿಕವಾಗಿ ಸಂಚಯ ಗೊಂಡ ಪ್ರಭಾವಗಳು ಮತ್ತು ಪ್ರವೃತ್ತಿಗಳ ಫಲವಾಗಿರಲಾರವೆ? ನಾವು ಈ ವಿಷಯವನ್ನು ಪರಿಶೀಲಿಸಲು ಹೊರಟರೆ ಎರಡು ವಿಚಾರಗಳು ನಮ್ಮೆದುರಿಗೆ ಸಮಾನಾಂತರ ರೇಖೆಗಳಾಗಿ ನಿಲ್ಲುತ್ತವೆ. ಅವು ಮಾನಸಿಕ ಮತ್ತು ಭೌತಿಕ. ಮಾನವ ಸ್ವಭಾವ, ಮತ್ತು ಅದರ ವಿಶೇಷ ಗುಣಗಳಿಗೆ ಸಂಬಂಧಿಸಿದ ಸಮಸ್ಯೆಗಳಿಗೆ ತೃಪ್ತಿಕರವಾದ ಪರಿಹಾರಗಳು ಭೌತಿಕವಾದಲ್ಲಿ ದೊರೆತದ್ದೇ ಆದ ಪಕ್ಷದಲ್ಲಿ ಆತ್ಮ ಎಂಬುದೊಂದಿದೆ ಎಂದು ನಂಬಲು ಆಧಾರವೇ ಇಲ್ಲದಂತಾಗುತ್ತದೆ. ಆದರೆ ಆಲೋಚನಾ ಶಕ್ತಿಯು ಭೌತದ್ರವ್ಯದಿಂದ ವಿಕಾಸಗೊಂಡು ಬಂದಿದೆ ಎಂದು ಪ್ರಯೋಗತಃ ತೋರಿಸಕೊಡಲು ಸಾಧ್ಯವಿಲ್ಲ.

ಯಾವುದೇ ಒಂದು ಕೆಲಸವನ್ನು ಮತ್ತೆ ಮತ್ತೆ ಮಾಡುತ್ತಿದ್ದರೆ ಅದು ಒಂದು ಅಭ್ಯಾಸವಾಗುತ್ತದೆ, ಒಂದು ಕೌಶಲವಾಗುತ್ತದೆ. ಅಲ್ಲವೆ? ಆದ್ದರಿಂದ ಆಗ ತಾನೆ ಹುಟ್ಟಿದ ಒಂದು ಶಿಶುವು ತೋರಿಸುವ ಕೌಶಲಕ್ಕೆ ಅಥವಾ ಅಭ್ಯಾಸಕ್ಕೆ ಬಹಳ ಹಿಂದಿನಿಂದಲೇ ಮತ್ತೆ ಮತ್ತೆ ಆ ಕೆಲಸವನ್ನು ಮಾಡಿದ್ದು ಕಾರಣವಾಗಿರಬೇಕು. ಹಿಂದಿನ ಜನ್ಮದಲ್ಲೋ ಅಥವಾ ಹಿಂದಿನ ಅನೇಕ ಜನ್ಮಗಳಲ್ಲೋ ಆ ಅಭ್ಯಾಸ ಆಗಿರಬೇಕು. ಆದ್ದರಿಂದ ಗತಜನ್ಮವನ್ನು ಮುಂದಿನ ಜನ್ಮವನ್ನು ಕುರಿತು ನಂಬಿಕೆಯು ಬೆಲೆಯುಳ್ಳದ್ದಾಗುತ್ತದೆ. ಭಾರತೀಯರ ಆಧ್ಯಾತ್ಮ ಚಿಂತನೆಯಲ್ಲಿ ಇದು ಒಂದು ಆಧಾರ ನಂಬಿಕೆ.

ಅಧ್ಯಾಯ ೪

# ಪವಾಡಗಳ ಪವಾಡ

ಭಾರತೀಯರು ತಾವು ಒಬ್ಬೊಬ್ಬರೂ ಆತ್ಮ ಎಂದು ನಂಬುತ್ತಾರೆ. ಆತ್ಮವನ್ನು ಕತ್ತಿಯಿಂದ ಕಡಿಯಲು ಸಾಧ್ಯವಿಲ್ಲ, ಬೆಂಕಿಯು ಅದನ್ನು ಸುಡಲಾರದು, ನೀರು ನೆನೆಸಲಾರದು, ಗಾಳಿಯು ಒಣಗಿಸಲಾರದು. ಆತ್ಮಕ್ಕೆ ಎಲ್ಲೆಗಳಿಲ್ಲ. ಅದರ ಕೇಂದ್ರವು ದೇಹದೊಳಗಿದೆ, ಆದರೆ ಅದರ ಪರಿಧಿಯು ಎಲ್ಲೂ ಇಲ್ಲ. ಪ್ರತಿಯೊಬ್ಬ ಭಾರತೀಯನೂ ಗಟ್ಟಿಯಾಗಿ ನಂಬಿಕೊಂಡಿರುವ ವಿಚಾರ ಇದು. ಆತ್ಮವು ಭೌತಿಕ ಅಥವಾ ಪ್ರಾಪಂಚಿಕ ಮಿತಿಗಳಿಗಾಗಲಿ ನಿಯಮಗಳಿಗಾಗಲಿ ಬದ್ಧವಲ್ಲ. ಸ್ವಭಾವದಿಂದಲೇ ಅದು ಸ್ವತಂತ್ರ, ಬದ್ಧವಲ್ಲದುದು; ಅದು ಭೌತದ್ರವ್ಯದೊಂದಿಗೆ, ಜಡದೇಹದೊಂದಿಗೆ ಸಂಪರ್ಕಗೊಂಡಿರುವುದರಿಂದ ಅದು ತಾನೂ ದ್ರವ್ಯ ಸಮ್ಮಿಶ್ರಣವಾದ ಉತ್ಪನ್ನೆಂದು ಕಲ್ಪಿಸಿಕೊಳ್ಳುತ್ತದೆ. ಅದು ವ್ಯಕ್ತಪಡಿಸುವ ಅಚ್ಚರಿ, ಪವಾಡ, ರಹಸ್ಯ ಇದು! ಈ ರಹಸ್ಯವನ್ನು ಭೇದಿಸುವುದಾಗಲಿ, ಪವಾಡವನ್ನು ವಿವರಿಸುವುದಾಗಲಿ ಯಾರದೇ ಅಳವಿಗೆ ಮೀರಿದ ವಿಷಯ.

ಪೂರ್ಣವಾದ ಆತ್ಮವು ತಾನು ಅಪೂರ್ಣ, ಭಾಗ, ಅಸಮಗ್ರ ಎಂಬ ಭ್ರಮೆಯನ್ನು ಉಂಟುಮಾಡಿಕೊಳ್ಳುವುದು ಹೇಗೆ? ಆತ್ಮದ ಅಸಮಗ್ರತೆಯ ಅರಿವೇ ಉಂಟಾಗುವುದಿಲ್ಲ ಎಂದು ವಾದಿಸುವ ಭಾರತೀಯರನ್ನು ಒಂದು ಅಸಾಧ್ಯ ಪರಿಸ್ಥಿತಿಯನ್ನು ಹೇಗೋ ತಟಾಯಿಸಿಕೊಂಡು ಹೋಗುವ ಜನರು ಎಂದು ಕೆಲವರು ಆಕ್ಷೇಪಿಸಬಹುದು. ತಮಗೆ ಸತ್ಯವು ಗೊತ್ತಿಲ್ಲವೆಂಬುದನ್ನು ಈ ಮೂಲಕ ಅವರು ಮುಚ್ಚಿಡುತ್ತಿದ್ದಾರೆ ಎಂದೂ ಹೇಳಬಹುದು. ಪರಮ ಪರಿಶುದ್ಧವೂ ವಿಭಜಿಸಲು ಸಾಧ್ಯವೇ ಇಲ್ಲದ್ದೂ ಆದ ವಸ್ತುವು ತನ್ನ ಸ್ವಭಾವವನ್ನು ಸ್ವಲ್ಪವೇ ಮಟ್ಟಿಗಾದರೂ ಕಳೆದುಕೊಳ್ಳುವುದು ಹೇಗೆ ಸಾಧ್ಯ? ಭಾರತೀಯರು ಸರಳರು, ಪ್ರಾಮಾಣಿಕರು. ಅವರ ಸ್ವಭಾವ ಅಕೃತಕ. ಅವರು ಕುತರ್ಕಗಳನ್ನು ಒಡ್ಡಿ ಹೇಗೋ ಪರಿಸ್ಥಿತಿಯನ್ನು ನಿಭಾಯಿಸಿಬಿಡುವ ಜನರಲ್ಲ. ಎದುರಾಗುವ ಯಾವುದೇ ಸಮಸ್ಯೆಯನ್ನು ಗಂಡೆದೆಯಿಂದ ಎದುರಿಸುವ ಧೈರ್ಯ ಅವರಿಗಿದೆ. ಆದ್ದರಿಂದ ಇಲ್ಲಿ ಹಾಕಿರುವ ಪ್ರಶ್ನೆಗೆ ಉತ್ತರ ಹೀಗೆ: ಭ್ರಮೆ ಉಂಟಾಗಲು ಸಾಧ್ಯವಿಲ್ಲ. ಸಂಪೂರ್ಣವಾದುದಕ್ಕೆ ಅಪೂರ್ಣತೆಯನ್ನು ಆರೋಪಿಸುವ ದೋಷ ಆಧಾರರಹಿತವಾದದ್ದು. ಆತ್ಮ ಎನಿಸಿಕೊಳ್ಳುವ

ಪೂರ್ಣವಸ್ತುವು ಕೊರತೆಯಾದದ್ದು ಪೂರ್ಣಕ್ಕಿಂತ ತುಸು ಕಡಮೆಯದು ಎಂದು ಕಲ್ಪಿಸಿಕೊಳ್ಳಲಾರದು. ತಾನು ಯಾವುದರ ತಿರುಳಾಗಿದೆಯೋ ಆ ಭೌತಿಕ ಕೋಶ ದಿಂದ ನಿಯಂತ್ರಿತವಾಗಿದ್ದೇನೆ, ಮಿತಿಗೊಳಪಟ್ಟಿದ್ದೇನೆ ಎಂದೂ ಅದು ಎಂದಿಗೂ ಭಾವಿಸಲಾರದು.

ತಾನು ಎಂದರೆ ತನ್ನ ದೇಹ ಎಂದು ಪ್ರತಿಯೊಬ್ಬ ವ್ಯಕ್ತಿಯೂ ತಿಳಿದುಕೊಂಡಿದ್ದಾನೆ. ಈ ಭಾವನೆ ಹುಟ್ಟಿದ್ದು ಹೇಗೆ, ಉಳಿದುಕೊಂಡೇ ಬಂದಿರುವುದು ಹೇಗೆ ಎಂದು ಯಾರಾದರೂ ಹೇಳಬಲ್ಲರೇನು? ಈ ಪ್ರಶ್ನೆಗೆ ಯಾರೂ ಉತ್ತರ ಕೊಡಲಾರರು. ಏಕೆಂದರೆ, ಕೆಲವರು ಹೇಳುವಂತೆ, "ಅದು ಭಗವಂತನ ಇಚ್ಛೆ," ಎಂದು ಹೇಳಿದರೆ ಅದು ಉತ್ತರವೇ ಅಲ್ಲ. "ನನಗೆ ಗೊತ್ತಿಲ್ಲ," ಎಂಬ ಸರಳವಾದ ಹೇಳಿಕೆಗೆ ಅದು ಸಮಾನವಾಗಿದೆ, ಅದೇ ಅರ್ಥವನ್ನು ನೀಡುತ್ತದೆ. ಮೊದಲಿನ ಉತ್ತರವನ್ನು ಕೇಳಿದಾಗ ಇದ್ದುದಕ್ಕಿಂತ ಹೆಚ್ಚಿಗೆ ಜ್ಞಾನ ಎರಡನೆ ಉತ್ತರ ಕೇಳಿದಾಗ ಏನೂ ಬರುವುದಿಲ್ಲ. ವಿಷಯ ಇದು: "ಆತ್ಮವು ವ್ಯಕ್ತಿಗತವಾದುದು, ಜೀವಾತ್ಮವು ನಿತ್ಯವಾದುದು, ಅಮರವಾದದ್ದು, ಪೂರ್ಣವಾದದ್ದು. ಮರಣ ಎಂಬುದಿಲ್ಲ; ಹಾಗೆ ತೋರುವುದು ಕೇಂದ್ರದ ಸ್ಥಳ ಬದಲಾವಣೆ ಅಷ್ಟೆ."

ನಮ್ಮ ಈಗಿನ ಪರಿಸ್ಥಿತಿ ಮತ್ತು ಸನ್ನಿವೇಶಗಳನ್ನು ಹಿಂದಿನ ಜನ್ಮಗಳಲ್ಲಿ ಮಾಡಿದ ಕೆಲಸಗಳು ನಿರ್ಧರಿಸುತ್ತವೆ. ಅದೇ ರೀತಿಯಲ್ಲಿ ಮುಂದೆ ನಾವು ಕಳೆಯಬೇಕಾದ ಪರಿಸ್ಥಿತಿಯನ್ನು ಇಂದು ನಾವೇನು ಮಾಡುತ್ತಿದ್ದೇವೋ ಆ ಕರ್ಮಗಳು ನಿರ್ಧರಿಸು ತ್ತವೆ. ಒಂದು ಜನ್ಮ ಮತ್ತು ಇನ್ನೊಂದು ಜನ್ಮದ ನಡುವೆ, ಒಂದು ಮರಣದಿಂದ ಇನ್ನೊಂದರ ನಡುವೆ ಜೀವಿಯು ಮುಂದುವರಿಯುತ್ತದೆ ಅಥವಾ ಹಿಂದಕ್ಕೆ ಸರಿ ಯುತ್ತದೆ, ವಿಸ್ತರಿಸುತ್ತದೆ ಇಲ್ಲವೆ ಸಂಕುಚಿಸುತ್ತದೆ. ಭೀಕರ ಚಂಡಮಾರುತವೆದ್ದಿರುವ ಸಾಗರದ ಮೇಲಿನ ಒಂದು ದುರ್ಬಲ ನೌಕೆಯಂತೆ ಮಾನವನು ನೊರೆಯಂಚು ಕಟ್ಟಿದ ಭಾರೀ ಅಲೆಯ ಶಿಖರವನ್ನು ಏರುತ್ತಾನೆ, ಮರುಕ್ಷಣದಲ್ಲೇ ಭಯಾನಕ ವೇಗದಿಂದ ತಲಾತಲಕ್ಕೆ ಎಸೆಯಲ್ಪಡುತ್ತಾನೆ. ಈ ಏರು ಮತ್ತು ಇಳುವುಗಳು ಅವನ ಸತ್ಕರ್ಮ ದುಷ್ಕರ್ಮಗಳಿಂದ ಅನಿವಾರ್ಯವಾಗಿ ಫಲಿತವಾಗುತ್ತವೆ. ಅಮೃತ ಪುತ್ರರೆ, ಕೇಳಿ! ಪುರುಷೋತ್ತಮನ ದರ್ಶನವನ್ನು ಪಡೆದ ಋಷಿಗಳ ಸಂದೇಶದಲ್ಲಿ ದೊರಕಿರುವ ಉತ್ತರವನ್ನು ಆಲಿಸಿರಿ! "ಮಾನವ ಜೀವಿಗಳೆ ಸೋದರರೆ! ಮರಣ ಪರಂಪರೆಯಿಂದ ವಿಮುಕ್ತಿ ಪಡೆಯಬೇಕಾದರೆ ಅವನನ್ನು ತಿಳಿದುಕೊಳ್ಳುವುದು ಒಂದೇ ದಾರಿ. ನೀವು ಪಾಪ ಕರ್ಮಿಗಳೆಂದು ಕಲ್ಪಿಸಿಕೊಳ್ಳಬೇಡಿ, ಏಕೆಂದರೆ ನೀವು ನಿತ್ಯವಾದ ದಿವ್ಯಾನಂದ ವಾರಸುದಾರರಾಗಿದ್ದೀರಿ. ನೀವು ಭಗವಂತನ ರೂಪಗಳು, ಎಂದಿಗೂ ಕೊರತೆಯಾಗದ ಆನಂದದ ಭಾಗಿಗಳು, ಸ್ವಭಾವತಃ ನೀವು

ಪವಿತ್ರರು, ಸದಾ ಪೂರ್ಣರು. ನೀವೇ ನಿಜವಾಗಿ ಭೂಮಿಯ ಮೇಲೆ ನಡೆದಾಡುವ ಭಗವಂತ. ಅಂತಹ ನಿಮ್ಮನ್ನು ಪಾಪಿಗಳೆಂದು ಹೇಳಿಕೊಳ್ಳುವುದಕ್ಕಿಂತ ದೊಡ್ಡ ಪಾಪ ಬೇರೊಂದಿದೆಯೇ? ಪಾಪಿಗಳು ಎಂಬ ವಿಶೇಷಣವನ್ನು ಒಪ್ಪಿಕೊಂಡು ನಿಮ್ಮನ್ನು ನೀವೇ ಅಗೌರವಿಸಿಕೊಳ್ಳುತ್ತಿದ್ದೀರಿ, ನಿಮಗೆ ನೀವೇ ತೇಜೋವಧೆ ಮಾಡಿಕೊಳ್ಳುತ್ತಿದ್ದೀರಿ. ಮೇಲೇಳಿ! ನೀವು ಕುರಿಗಳು ಎಂಬ ಭಾವನೆಯನ್ನು ಕಿತ್ತೊಗೆಯಿರಿ. ಆ ಭಾವನೆಯಿಂದ ಭ್ರಮಿತರಾಗಬೇಡಿ. ನೀವು ಆತ್ಮಗಳು. ಅಮರತ್ವದ ಅಮೃತ ಬಿಂದುಗಳು. ಅವಕ್ಕೆ ಆದಿಯೂ ಇಲ್ಲ, ಅಂತ್ಯವೂ ಇಲ್ಲ. ಭೌತಿಕವಾದ ಪ್ರತಿಯೊಂದು ವಸ್ತುವೂ ನಿಮ್ಮ ಗುಲಾಮವಾಗಬೇಕೇ ಹೊರತು ನೀವು ಅವುಗಳಿಗೆ ಗುಲಾಮರಾಗಕೂಡದು."

ಇವು ಋಷಿಗಳು ಹೇಳಿದ ಮಾತುಗಳು. ಈ ಸತ್ಯದ ಆಳಕ್ಕೆ ಇಳಿಯದವರು ಈ ಭಾರತೀಯ ವಿವರಣೆಯನ್ನು ಅರ್ಥಮಾಡಿಕೊಳ್ಳಲು ಹೇಗೆ ಸಾಧ್ಯ? ಭಗವಂತನನ್ನು ತಂದೆ, ತಾಯಿ, ಗುರು, ಗೆಳೆಯ ಮತ್ತು ಪ್ರಿಯಕರನೆಂದು ಭಾವಿಸಿಕೊಂಡು ಭಾರತೀಯರು ಮಾನಸಿಕವಾಗಿ ಶಕ್ತಿಯನ್ನು ಪಡೆದುಕೊಂಡಿದ್ದಾರೆ. ಭಗವಂತನನ್ನು ಅವರು ಇಹಲೋಕದಲ್ಲಾಗಲಿ ಪರದಲ್ಲಾಗಲಿ ಮಿಕ್ಕೆಲ್ಲ ವಸ್ತುಗಳಿಗಿಂತ ಪ್ರಿಯವಾದ ವಸ್ತುವೆಂದು ಸ್ತುತಿಸುತ್ತಾರೆ. ಕೇವಲ ಇಂದ್ರಿಯ ಸುಖಗಳನ್ನು ಮಾತ್ರ ಬಲ್ಲವರಿಗೆ ಈ ಪರಮೋನ್ನತ ಸತ್ಯವು ತಿಳಿಯುವುದು ಹೇಗೆ? ಇಂದ್ರಿಯ ಸುಖಗಳ ಹಂಬಲವು ಒಳಗಣ್ಣಿಗೆ ಸತ್ಯವು ಗೋಚರವಾಗದಂತೆ ತೆರೆಯಿಂದ ಮುಸುಕಿಬಿಡುತ್ತದೆ. ಆ ಹಂಬಲವು ಅಸಂಖ್ಯಾತ ರೀತಿಗಳಲ್ಲಿ ವ್ಯಕ್ತವಾಗುತ್ತದೆ. ಹೆಚ್ಚು ಹೆಚ್ಚು ಆಸೆಗಳನ್ನು ಸೃಷ್ಟಿಸಿ, ಕರ್ಮ ನಿರತರಾಗಲು ಪ್ರೇರಣೆಗಳನ್ನು ಹೆಚ್ಚಿಸುತ್ತಲೇ ಹೋಗುತ್ತದೆ. ಇವುಗಳಿಂದಾಗಿ ಸತ್ಯವು ಮಂದವಾದ ತೆರೆಯಿಂದ ಮುಚ್ಚಿಹೋಗುತ್ತದೆ.

ಹೀಗೊಂದು ತೆರೆಯಿದೆ ಎಂಬ ಅರಿವೇ ಆದ್ಯಾತ್ಮಿಕ ಪ್ರಗತಿಯಲ್ಲಿ ದೊಡ್ಡದೊಂದು ಮಜಲು, ಇದೇ ವೇದಾಂತ ಮಾಯಾ ತತ್ತ್ವ. ಬಹು ಪ್ರಾಚೀನ ಕಾಲದಿಂದಲೂ ಸತ್ಯವು ಸ್ವಯಂಪ್ರಕಾಶವಾದರೂ ಕೂಡ, ಈ ತೆರೆಯು ಅದನ್ನು ಮಾನವನಿಗೆ ಕಾಣದಂತೆ ಮರೆಮಾಡಿತ್ತು. ಇದೇ ಅತ್ಯಂತ ಮುಖ್ಯವಾದ ಅಡ್ಡಿ ಎಂಬುದನ್ನು ಭಾರತೀಯರು ಕಂಡುಕೊಂಡಿದ್ದಾರೆ. ತೆರೆಯನ್ನು ತೆಗೆದು ಹಾಕಿ ಸತ್ಯದ ದರ್ಶನ ಮಾಡುವುದು ಹೇಗೆ? ಈ ಪ್ರಶ್ನೆಗೆ ಪರಿಹಾರವು ಹೊರಗಿನ ವಸ್ತುನಿಷ್ಠ ಜಗತ್ತಿನಲ್ಲಿಲ್ಲ ಎನ್ನುವುದು ಅವರಿಗೆ ತಿಳಿದಿತ್ತು. ಆದ್ದರಿಂದ ಅದನ್ನು ಅಲ್ಲಿ ಹುಡುಕುವುದೇ ವ್ಯರ್ಥ. ಯುಗಾಂತರಗಳವರೆಗೆ ಬಾಹ್ಯ ಪ್ರಪಂಚದಲ್ಲಿ ಅರಸಿದರೂ ಪರಿಹಾರವು ದೊರಕದು. ಏಕೆಂದರೆ ನಂಬಿಕೆಯ ಭರವಸೆ ದೊರಕುವುದು ಅನುಭವದಿಂದ ಮಾತ್ರವೇಯೆ.

ಅನುಭವವನ್ನು ಗಳಿಸಿಕೊಳ್ಳಲು ಭಾರತೀಯರು ತಪಸ್ಸು ಮಾಡಿದರು, ನಾನಾ ಬಗೆಯ ಸಾಧನೆಗಳನ್ನು ಕೈಗೊಂಡರು. ಕೊನೆಗೆ ಸತ್ಯವನ್ನು ಗುರುತಿಸಿದರು ಮತ್ತು ಅದನ್ನು ಜಗತ್ತಿಗೆ ಸಾರಿದರು. ಇಂದ್ರಿಯಗಳ ಪ್ರಚೋದನೆಗಳನ್ನು ಅವರು ತೊರೆದರು, ಬಾಹ್ಯ ಪ್ರಪಂಚದಲ್ಲಿ ಸಕ್ರಿಯವಾಗಿ ತೊಡಗಿಕೊಳ್ಳುವ ಅಸಂಖ್ಯ ಆಕರ್ಷಣೆಗಳನ್ನು ದೂರ ಮಾಡಿದರು. ಅವರು ಜಗತ್ತಿಗೆ ಈ ಪಾಠವನ್ನು ಬೋಧಿಸಿದರು. ಈ ರಹಸ್ಯವನ್ನು ಭೇದಿಸಲು ಭಾರತೀಯರಿಗೆ ಮಾನವ ಮನಸ್ಸು ಸೂಕ್ತ ಸಾಧನ, ಉಪಕರಣ ಆಯಿತು. ಮನಸ್ಸಿನ ಸ್ವಭಾವವನ್ನು ಮತ್ತು ಲಕ್ಷಣಗಳನ್ನು ಅಧ್ಯಯನ ಮಾಡಲು ಅವರು ಮನಸ್ಸನ್ನೇ ಉಪಯೋಗಿಸಬೇಕಾಯಿತು. ಬಹು ಬೇಗನೆ ಅವರಿಗೆ ಬಾಹ್ಯ ಪ್ರಪಂಚದ ಅಧ್ಯಯನದಿಂದ ತಾವು ಏನನ್ನೂ ಸಾಧಿಸಲು ಸಾಧ್ಯವಿಲ್ಲ ಎಂದು ತಿಳಿದುಹೋಯಿತು. ಆದ್ದರಿಂದ ತಮ್ಮ ಗಮನವನ್ನು ಅವರು ತಮ್ಮ ಪ್ರಜ್ಞೆಯ ಅಂತರಿಕವಲಯಗಳತ್ತ ತಿರುಗಿಸಿದರು. ಹೀಗೆ ಅವರು ವೇದಾಂತದ ತಳಹದಿಯನ್ನು ಹಾಕಿದರು; ಇದೇ ವೇದಾಂತ ಚಿಂತನೆಯ ಪ್ರಾರಂಭ.

ಸತ್ಯವನ್ನು ಬೇರೆ ಎಲ್ಲೂ ಹುಡುಕಬೇಕಾದ ಅಗತ್ಯವಿಲ್ಲ. ಅದನ್ನು ಮಾನವನಲ್ಲೇ ಹುಡುಕಬೇಕು; ಅವನೇ ಪವಾಡಗಳ ಪವಾಡ. ಮನುಷ್ಯನಲ್ಲಿ ಏನಿಲ್ಲವೋ ಅದು ಅವನಿಂದ ಹೊರಗೆಲ್ಲೂ ಇರಲು ಸಾಧ್ಯವಿಲ್ಲ. ಅವನಿಂದ ಹೊರಗೆ ಏನು ಕಾಣಿಸುತ್ತದೆಯೋ ಅದು ನಿಜವಾಗಿ ಅವನೊಳಗಿರುವುದರ ಸ್ಥೂಲ ಪ್ರತಿಬಿಂಬ ಅಷ್ಟೆ. ಈಶ್ವರನು ವಿಶ್ವದ ಹೊರಗಿದ್ದುಕೊಂಡು ಅದನ್ನು ಆಳುತ್ತಿದ್ದಾನೆ ಎನ್ನುವುದು ಪ್ರಾಚೀನ ನಂಬಿಕೆಯಾಗಿತ್ತು. ಇದನ್ನು ಭಾರತೀಯ ಸಾಧಕರು ಪರೀಕ್ಷೆಗೊಡ್ಡಿದರು. ದೇವರು ಪ್ರಪಂಚದ ಒಳಗಿದ್ದನು, ಇದ್ದಾನೆ ಮತ್ತೆ ಅದಕ್ಕೆ ಸೇರಿದವನಾಗಿದ್ದಾನೆ ಎಂದು ಕಂಡುಹಿಡಿದರು. ಭಾರತೀಯರು ಆಧ್ಯಾತ್ಮಿಕ ಜಗತ್ತಿಗೆ ನೀಡಿದ ಮೊದಲನೆಯ ಕೊಡುಗೆ ಇದು: ಭಗವಂತನು ಮನುಷ್ಯನಿಂದ ಹೊರಗಿನವನಲ್ಲ, ಒಳಗಿನ ತಿರುಳು. ಮಾನವನ ಹೃದಯದಲ್ಲಿ ತನ್ನನ್ನು ತಾನೇ ಸ್ಥಾಪಿಸಿಕೊಂಡಿರುವ ಅವನನ್ನು ತೆಗೆದು ಹಾಕಲು ಸಾಧ್ಯವೇ ಇಲ್ಲ ಎಂದು ಅವರು ಸಾರಿದರು. ಅವನು ನಮ್ಮ ಆತ್ಮದ ಆತ್ಮ, ಜೀವದ ಜೀವ, ಪ್ರತಿಯೊಬ್ಬರ ಆಂತರಿಕ ಸತ್ಯ.

ವೇದಾಂತ ದರ್ಶನದ ಮಹೋನ್ನತ ದರ್ಶನವನ್ನು ಅರಿಯ ಬಯಸುವವರು ಕೆಲವು ಮೂಲಭೂತ ವಿಚಾರಗಳನ್ನು ಅರ್ಥಮಾಡಿಕೊಳ್ಳಬೇಕು. ತತ್ತ್ವಶಾಸ್ತ್ರ ಅಥವಾ ದರ್ಶನವು ಒಬ್ಬ ವ್ಯಕ್ತಿಯು ಉತ್ಪಾದಿಸಿದ ಒಂದು ಪುಸ್ತಕವಲ್ಲ, ಕೃತಿಯಲ್ಲ. ಮಹಾಪುರುಷನಾಗಿದ್ದ ಮನುವು ಈ ಭಾರತವನ್ನು ಬ್ರಹ್ಮಾವರ್ತ, ಬ್ರಹ್ಮದ ಪ್ರದೇಶ, ಅಂತರ್ಯಾಮಿಯೂ ಅತೀತನೂ ಆದ ಐಕ್ಯೈಕ ಭಗವತತ್ತ್ವದ ಅನ್ವೇಷಣೆಯು ತೊಡಗಿದ ಮತ್ತು ವಿಜಯಗಳಿಸಿದ ನಾಡು ಎಂಬುದಾಗಿ ಕರೆದಿದ್ದಾನೆ. ಜಗತ್ತಿನ

ಬೇರೆ ಬೇರೆ ದೇಶಗಳಲ್ಲಿ ಈ ಅನ್ವೇಷಣೆಯಲ್ಲಿ ನಿರತರಾದ ಸಾಧಕರ ಪವಿತ್ರ ಮೆರವಣಿಗೆಯು ಪ್ರಾರಂಭವಾದುದು ಭಾರತದಿಂದಲೇ. ಮಹಾನ್ ಪರ್ವತ ಶ್ರೇಣಿಗಳಲ್ಲಿ ಹುಟ್ಟಿ ಹರಿಯುವ ಅಗಾಧ ನದಿಗಳಂತೆ ಉನ್ನತ ಸತ್ಯದ ಸಂಶೋಧನೆ ಗಾಗಿ ನಡೆದ ಆಧ್ಯಾತ್ಮಿಕ ಸಾದನೆಯ ನದಿಯು ಹುಟ್ಟಿದ್ದು ಈ ದೇಶದಲ್ಲೇ. ಮೋಡದ ಗರ್ಭದಿಂದ ಹೊಮ್ಮುವ ಸಿಡಿಲಿನಂತೆ ವಿಶ್ವಾಸದಿಂದ ಧೈರ್ಯದಿಂದ ಈ ನಾಡು ಜಗತ್ತಿಗೆ ತನ್ನ ಆಧ್ಯಾತ್ಮಿಕ ಸಂದೇಶವನ್ನು ಬಿತ್ತರಿಸಿದೆ. ವಿರೋಧಿ ಶಕ್ತಿಗಳು ಭಾರತದ ಮೇಲೆ ಆಕ್ರಮಣ ಮಾಡಿದಾಗಲೂ ಆ ಹೊಡೆತವನ್ನು ಸಹಿಸಿಕೊಂಡಿದೆ. ಆ ಹೊಡೆತದೆದುರು ಅಪ್ರತಿಮ ದಿಟ್ಟತನದಿಂದ ತನ್ನ ಎದೆಯನ್ನು ಒಡ್ಡಿ ಮೊದಲ ಆಘಾತವನ್ನು ಅದು ತಡೆದುಕೊಳ್ಳಬೇಕಾಯಿತು. ಅನೇಕನೇಕ ಸಾರಿ ಹೀಗೆ ಆಕ್ರಮ ಣಗಳನ್ನು ಅದು ಎದುರಿಸಬೇಕಾಗಿ ಬಂದಿತು, ಬಹಳ ತೀವ್ರವಾದ ಹಾನಿಯನ್ನು ಅನುಭವಿಸಬೇಕಾಯಿತು. ಆದರೂ ನಮ್ಮ ಈ ದೇಶವು ತನ್ನ ಕೀರ್ತಿಯನ್ನೂ ವೈಭವವನ್ನೂ, ಸ್ಥಿರವಾದ ಮನೋಬಲವನ್ನೂ ಪೂರ್ತಿಯಾಗಿ ಕಳೆದುಕೊಳ್ಳಲಿಲ್ಲ.

ಶಾಂತಿ, ಕರುಣೆಗಳ ಸಾಕಾರವಾಗಿದ್ದ ಗುರುನಾನಕನು ಅಚ್ಚರಿಯ ಪ್ರೇಮ ಸಂದೇಶ ವನ್ನು ಈ ನಾಡಿನಿಂದ ಬೋಧಿಸಿದನು. ಸಕಲವನ್ನೂ ತನ್ನೊಳಗೆ ತುಂಬಿಕೊಳ್ಳುವ ಅವನ ಹೃದಯವು ಅರಳಿದ್ದು ಈ ನಾಡಿನಲ್ಲಿ. ಈ ನಾಡಿನ ಮಕ್ಕಳಾದ ಭಾರತೀ ಯರು ಈ ಸಂಸ್ಕೃತಿಯ ವಾರಸುದಾರರು. ತಮ್ಮ ಪ್ರೇಮದ ತೆಕ್ಕೆಗೆ ಹಿಂದೂ ಜಗತ್ತನ್ನು ಮಾತ್ರವಲ್ಲ, ಇಸ್ಲಾಂ ಜಗತ್ತನ್ನು ಸ್ವೀಕರಿಸಲು ತೋಳು ಚಾಚಿದರು. ಕೊನೆಯವರೆಗೂ ಹಿಂದೂ ಸಂಸ್ಕೃತಿಯ ವೀರ ಪೋಷಕನಾಗಿ ಬೆಳಗಿದವರಲ್ಲಿ ಅಗ್ರಮಾನ್ಯನು ಗುರು ಗೋವಿಂದ ಸಿಂಗ್. ತನ್ನ ಮತ್ತು ತನ್ನ ಪತ್ನಿಯ ರಕ್ತವನ್ನು ಚೆಲ್ಲುವಂತೆ ಮಾಡಿದ ಘೋರಹಿಂಸೆಗಳಿಗೆ ತತ್ತರಿಸದೆ, ಯಾರಿಗಾಗಿ ತಾನು ಆ ಹಿಂಸೆಗಳನ್ನು ಸಹಿಸಿದನೋ ಅವರು ತನ್ನನ್ನು ತೊರೆದಿರಲು, ಅವರ ವಿರುದ್ಧವಾಗಿ ಒಂದೇ ಒಂದು ನಿಂದನೆಯ ಮಾತೂ ಅವನ ಬಾಯಿಯಿಂದ ಬರಲಿಲ್ಲ. ದಕ್ಷಿಣಕ್ಕೆ ಬಂದು ಅಲ್ಲಿ ಪ್ರಾಣಬಿಟ್ಟನು, ಮೃಗರಾಜನ ಹಾಗೆ. ಆ ಮಹಾ ಪುರುಷನ ಕೀರ್ತಿಯು ಭೂಮಿಯ ಮೇಲೆ ಎಂದೆಂದಿಗೂ ನೆಲೆಸಿರಲಿ. ಇಂತಹ ಶ್ರೇಷ್ಠನಾಯಕರು ಇಡೀ ಮಾನವ ಜನಾಂಗವು ತಮಗೆ ಋಣಿಯಾಗಿರುವಂತೆ ಮಾಡುತ್ತಾರೆ, ಏಕೆಂದರೆ ಅವರು ಎಲ್ಲ ಕಡೆಯೂ ಇರುವ ಎಲ್ಲಾ ಮಾನವರ ಹಿತಕ್ಕಾಗಿ ಸೇವೆಗೈದಿರುತ್ತಾರೆ.

ಪ್ರತಿಯೊಬ್ಬ ವ್ಯಕ್ತಿಯೂ ವಿಶಿಷ್ಟನಾದವನು, ಹಾಗೆಯೇ ಪ್ರತಿಯೊಂದು ದೇಶಕ್ಕೂ ವಿಶಿಷ್ಟವಾದ ವ್ಯಕ್ತಿತ್ವವಿದೆ. ಪ್ರತಿಯೊಬ್ಬ ವ್ಯಕ್ತಿಯೂ ಕೆಲವು ವಿಚಾರಗಳಲ್ಲಿ ಇತರ ರಿಂದ ಬೇರೆಯಾಗಿರುತ್ತಾನೆ, ತನ್ನದೇ ಆದ ಕೆಲವು ವಿಶೇಷ ಲಕ್ಷಣಗಳನ್ನು ಹೊಂದಿರುತ್ತಾನೆ. ಹಾಗೆಯೇ ಪ್ರತಿಯೊಂದು ದೇಶಕ್ಕೂ ಇತರರಲ್ಲಿ ಕಾಣಿಸದ

ಕೆಲವು ವಿಶೇಷ ಲಕ್ಷಣಗಳಿರುತ್ತವೆ. ಪ್ರತಿಯೊಬ್ಬ ವ್ಯಕ್ತಿಯೂ ವ್ಯವಸ್ಥೆಯ ಒಂದು ಭಾಗವಾಗಿ ಪಾತ್ರವನ್ನು ನಿರ್ವಹಿಸಬೇಕಾಗುತ್ತದೆ. ಅವನದೇ ಹಿಂದಿನ ಕರ್ಮವು ಅವನಿಗಾಗಿ ವಿಶಿಷ್ಟವಾದ ಮಾರ್ಗವನ್ನು ರೂಪಿಸಿದೆ. ದೇಶಗಳ ಇತಿಹಾಸವೂ ಅಷ್ಟೇ. ಈಗಾಗಲೇ ನಿರ್ದಿಷ್ಟವಾಗಿರುವ ಒಂದು ಪಾತ್ರವನ್ನು ಪ್ರತಿಯೊಂದೂ ನಿರ್ವಹಿಸಬೇಕು. ಪ್ರತಿಯೊಂದು ದೇಶವೂ ಜಗತ್ತಿಗೆ ತನ್ನದೇ ಆದ ಒಂದು ಸಂದೇಶವನ್ನು ನೀಡಬೇಕು. ಆದ್ದರಿಂದ, ಭಾರತೀಯರು ಮಿಕ್ಕೆಲ್ಲಕ್ಕಿಂತ ಮೊದಲು ಶಾಂತಿ ಮತ್ತು ಆನಂದಗಳ ವಿಶ್ವಗಾನಮೇಳದಲ್ಲಿ ತಾನು ಹಾಡಬೇಕಾಗಿರುವ ರಾಗವನ್ನು, ತಾನು ಅಭಿನಯಿಸಬೇಕಾದ ಪಾತ್ರವನ್ನು ಗುರುತಿಸಿಕೊಳ್ಳಬೇಕಾಗಿದೆ. ಬಾಲ್ಯದಲ್ಲಿ ನೀವು ಕೇಳಿರುವ ಕತೆಗಳಲ್ಲಿ, ಹಾವುಗಳ ಹೆಡೆಯಲ್ಲಿ ರತ್ನಗಳಿರುತ್ತವೆ. ಆ ರತ್ನಗಳು ಅಲ್ಲಿ ಇರುವವರೆಗೆ ಆ ಹಾವುಗಳನ್ನು ಕೊಲ್ಲಲು ಸಾಧ್ಯವಿಲ್ಲ ಎಂದು ಕೇಳಿರುತ್ತೀರಿ. ಈ ಕತೆಯನ್ನು ಸದಾ ನೆನಪಿನಲ್ಲಿ ಇಟ್ಟುಕೊಳ್ಳಿ. ಆಗ ನಿಮಗೆ ಭಾರತೀಯ ಆಧ್ಯಾತ್ಮಿಕ ಸಂಸ್ಕೃತಿಯು ಉಳಿದುಕೊಂಡು ಬಂದಿರುವ, ಮಾನವ ಇತಿಹಾಸದಲ್ಲೇ ಅತ್ಯಂತ ಮಹತ್ವದ ಪವಾಡ ಸದೃಶ ಘಟನೆಯು ಅರ್ಥವಾಗುತ್ತದೆ.

ಅಧ್ಯಾಯ ೫

# ಮೂಲ ನಂಬಿಕೆ

ಸನಾತನ ಧರ್ಮವು ಶತಮಾನಗಳ ಕಾಲ ಇಸ್ಲಾಂ ಧರ್ಮದ ನಿರ್ಧಾರಿತ ವಿರೋಧ ವನ್ನು ಎದುರಿಸಬೇಕಾಯಿತು; ರಾಜಕೀಯವಾಗಿ ಮುಸ್ಲಿಂ ವಂಶಗಳಿಗೆ ಒಳಪಡ ಬೇಕಾಗಿ ಬಂದುದು ಸಮಸ್ಯೆಯನ್ನು ಉಲ್ಬಣಗೊಳಿಸಿತು. 'ಅಲ್ಲಾ ಹೋ ಅಕ್ಬರ್' ಎಂಬ ಕೂಗು ಗಗನಕ್ಕೆ ಏರಿ, ಭಾರತೀಯ ಸಂಸ್ಕೃತಿಯ ಅಸ್ತಿತ್ವಕ್ಕೆ ಸವಾಲು ಹಾಕಿತು. ಅದು ಯುಗಾಂತರಗಳಿಂದ ಋಷಿಗಳು ಸಂರಕ್ಷಿಸಿಕೊಂಡು ಬಂದಿದ್ದ ಸಂಸ್ಕೃತಿ. ಬೇರೆ ಯಾವ ದೇಶವೂ ಇಷ್ಟು ಆಳವಾದ ಭೀತಿಯನ್ನು ಇಷ್ಟು ದೀರ್ಘಕಾಲ ಅನುಭವಿಸಲಿಲ್ಲ. ಆದರೆ ಈ ನೆಲದ ನಿತ್ಯನೂತನ, ಮಹತ್ವ ಪೂರ್ಣ ಧರ್ಮವು ಪರೀಕ್ಷೆಯಲ್ಲಿ ಗೆದ್ದಿತು. ಇಂದಿಗೂ ಸನಾತನ ಧರ್ಮವು ಎಂದಿನಂತೆಯೇ ಸಮರ್ಥವಾಗಿದೆ, ಬೆಲೆಯುಳ್ಳದ್ದಾಗಿದೆ. ಯಾವುದೇ ಹೊಸ ಕ್ಷೇತ್ರದಿಂದ ಬರುವ ಯಾವುದೇ ಸವಾಲನ್ನು ಎದುರಿಸಲು ಅದು ಸಿದ್ಧವಾಗಿದೆ. ಇಂದಿನ ಕುರುಹುಗಳನ್ನು ಗಮನಿಸಿದರೆ, ಈ ಸಂಸ್ಕೃತಿಯು ಪ್ರಧಾನವಾಗಿದೆ, ಶಕ್ತಿಯುತವಾಗಿದೆ ಎಂಬುದು ಸ್ಪಷ್ಟವಾಗಿ ತಿಳಿಯುತ್ತದೆ. ಅಷ್ಟೇಕೆ, ಇನ್ನೂ ಮುಂದೆ ನುಗ್ಗಿ ತನ್ನ ರಚನಾತ್ಮಕ ಪ್ರಭಾವವನ್ನು ವಿಸ್ತರಿಸಲು ಸಿದ್ಧವಾಗಿದೆ. ವಿಸ್ತರಣವೇ ಜೀವಂತಿಕೆಯ ಕುರುಹು, ಅಲ್ಲವೆ?

ಭಾರತೀಯ ಸಂಸ್ಕೃತಿಯು ನಿರೂಪಿಸಿರುವ ತತ್ತ್ವಗಳು ಮತ್ತು ಆಚರಣೆಗಳು, ಹಾಗೂ ಅವುಗಳಲ್ಲಿ ಅಂತರ್ಗತವಾಗಿರುವ ಮನೋಧರ್ಮಗಳು ಮತ್ತು ಭಾವನೆ ಗಳು ಇಂದು ಈ ಉಪಖಂಡದ ಗಡಿಗಳೊಳಗೆ ಸೀಮಿತವಾಗಿ ಉಳಿದಿಲ್ಲ. ನಮಗೆ ಇಷ್ಟವಿದೆಯೋ ಇಲ್ಲವೋ, ಅವು ಗಡಿದಾಟಿ ಬೇರೆ ದೇಶಗಳಿಗೆ ಹೋಗಿ ಅಲ್ಲಿ ನೆಲೆಗೊಳ್ಳುತ್ತಿವೆ. ಮುಖ್ಯವಿಚಾರಗಳು, ಮೂಲ ದೃಷ್ಟಿಕೋನಗಳು, ಆ ಜನರ ಸಾಹಿತ್ಯದೊಳಕ್ಕೆ ಪ್ರವೇಶಿಸಿ ಅವರ ಚಿಂತನ ಪ್ರಕ್ರಿಯೆಗೆ ಇಳಿಯುತ್ತವೆ. ಕೆಲವು ದೇಶಗಳಲ್ಲಿ ಕೆಲವು ಜನರಲ್ಲಿ ಅವು ಈಗಾಗಲೇ ಯಾವ ವಿರೋಧವೂ ಇಲ್ಲದೆ ಪ್ರಧಾನ ಪಾತ್ರವನ್ನು ವಹಿಸಿವೆ. ಭಾರತವು ಜಾಗತಿಕ ಶಾಂತಿ ಮತ್ತು ಸಮೃದ್ಧಿಗಾಗಿ ಆಧ್ಯಾತ್ಮಿಕ ಜ್ಞಾನವನ್ನು ತನ್ನ ಕೊಡುಗೆಯಾಗಿ ನೀಡಿದೆ. ಈ ಕೊಡುಗೆಯು ಬೇರೆ ಯಾವುದೇ ದೇಶದ್ದಕ್ಕಿಂತ ಹೆಚ್ಚು ಮಟ್ಟಿಗೆ ಉದ್ಧಾರಕವಾದದ್ದು. ಬೇರೆ

ಯಾವುದೇ ದೇಶವು ಕೊಡುವುದಕ್ಕಿಂತಲೂ ಹೆಚ್ಚು ಮೂಲಭೂತವಾದದ್ದು. ಹೆಚ್ಚು ಅಗತ್ಯವಾದದ್ದು, ಹೆಚ್ಚು ಅಮೂಲ್ಯವಾದದ್ದು. ಈ ವಿಷಯವು ಬರುಬರುತ್ತ ಮಾನವ ಜನಾಂಗಕ್ಕೆ ಹೆಚ್ಚು ಹೆಚ್ಚು ಸ್ಪಷ್ಟವಾಗುತ್ತಿದೆ.

ಈ ದೇಶದ ಪ್ರಾಚೀನರು ಇತರ ಸಮಸ್ಯೆಗಳ ಪರೀಕ್ಷೆಗೆ ವಿರೋಧಿಗಳೇನಾಗಿರಲಿಲ್ಲ. ಇತರ ಜನರಂತೆಯೇ ಅವರೂ ಬಾಹ್ಯ ಪ್ರಕೃತಿಯ ರಹಸ್ಯಗಳನ್ನು ತೆರೆದು ತೋರಿಸಲು ಪ್ರಯತ್ನಿಸಿದರು. ಈ ಅಚ್ಚರಿಯ ದೇಶವು ಈ ಕ್ಷೇತ್ರದಲ್ಲೂ ಹರಿತವಾದ ಬುದ್ಧಿಶಕ್ತಿಯ ಪ್ರಯೋಗಗಳಿಂದ ಇತರ ದೇಶಗಳ ಜನರು ಕನಸಿನಲ್ಲೂ ಕಂಡಿರದಂತಹ ಫಲಿತಾಂಶಗಳನ್ನು ಸಾಧಿಸಿತು.

ಶಿಕ್ಷಣದ ಪರಮೋನ್ನತ ಗುರಿ, ಬೋಧನೆಯ ಅತ್ಯುನ್ನತ ಧ್ಯೇಯ, ವಿಶ್ವಾತ್ಮಕ ನಿರಾಕಾರ ಅಂತರ್ಯಾಮಿಯನ್ನು ಮಾನವನು ಅರಿಯುವಂತೆ ಮಾಡುವುದು. ವೇದಗಳು ಜೋರು ಗಂಟಲಿನಿಂದ ಸಾರಿ ಹೇಳುವ ಸತ್ಯ ಇದೇಯೆ. ಭಾರತದ ಋಷಿಗಳು, ದ್ರಷ್ಟಾರರು ಧೈರ್ಯವಾಗಿ ಈ ಸಾಹಸವನ್ನು ಕೈಗೊಂಡರು. ನಿಸರ್ಗದ ಸದಾ ಪರಿವರ್ತನಶೀಲವಾದ ಅಂಶಗಳು, ಅವರ ಕಾರ್ಯ ಚಟುವಟಿಕೆಯು ಇದ್ದಕ್ಕಿದ್ದಂತೆ ಕಾಣಸಿಕೊಳ್ಳುವುದು ಮತ್ತು ಮಾಯವಾಗುವುದು ಇವು ಅಧ್ಯಯನಕ್ಕೆ ಸೊಗಸಾದ ವಿಷಯಗಳಾಗಬಹುದು. ಆದರೆ ಭಾರತದ ಪ್ರಾಚೀನರು ಈ ವಿಶ್ವವನ್ನು ವ್ಯಾಪಿಸಿರುವ ಅತೀತ ತತ್ತ್ವದ ವಿಜ್ಞಾನವು ಪರಿವರ್ತನ ರಹಿತ ಶಾಶ್ವತ; ನಿತ್ಯವೂ ಸದಾಪೂರ್ಣವೂ ಆದ ಆನಂದದ ಸಾಕಾರ ರೂಪ, ದುಷ್ಪರಿಣಾಮವಿಲ್ಲದ ಎಂದಿಗೂ ಕೊರತೆಯಾಗದ ಶಾಂತಿ, ಎಲ್ಲಾ ಕಾಲಗಳಲ್ಲೂ ಜೀವಿಗೆ ಅಂತಿಮ ಆಶ್ರಯ—ಈ ವಿಜ್ಞಾನವು ಮನುಷ್ಯನು ಪಡೆಯಲೇಬೇಕಾದ ಅತ್ಯುನ್ನತ ಜ್ಞಾನ.

ವಸ್ತುನಿಷ್ಠ ನಿಸರ್ಗವನ್ನು ಆಳುವ ತತ್ತ್ವಗಳ ತಿಳಿವಳಿಕೆಯಿಂದ ಹೆಚ್ಚೆಂದರೆ ಮಾನವನಿಗೆ ಆಹಾರ, ಬಟ್ಟೆಬರೆ ದೊರಕಬಹದು; ಅವುಗಳನ್ನು ಪಡೆದುಕೊಳ್ಳುವುದು ಹೇಗೆಂಬುದನ್ನು ಅವು ತಿಳಿಸಿಕೊಡುತ್ತವೆ. ಅದು ಬಲಿಷ್ಠನಾದವನು ದುರ್ಬಲನನ್ನು ಶೋಷಿಸಲು ಎಡೆಮಾಡುತ್ತದೆ. ಭಾರತೀಯರು ತಮ್ಮ ಶಕ್ತಿಯನ್ನು, ಈ ಪ್ರಪಂಚದ ರಹಸ್ಯಗಳ ಸಂಶೋಧನೆಯ ಕಡೆಗೆ ತಿರುಗಿಸಿದ್ದರೆ, ಬಹು ಸುಲಭವಾಗಿ ಅವುಗಳ ಮೇಲೆ ಪ್ರಭುತ್ವ ಸಾಧಿಸುತ್ತಿದ್ದರು.

ಆದರೆ ಬಹು ಬೇಗ ಭಾರತೀಯರು ಈ ಅನ್ವೇಷಣೆ ಗೌಣವಾದದ್ದು, ಆತ್ಮಾನ್ವೇಷಣೆಗೆ ಪ್ರಧಾನ ಸ್ಥಾನವನ್ನು ಕೊಡಬೇಕು ಎಂದು ಕಂಡುಕೊಂಡರು. ಬಾಹ್ಯ ಪ್ರಕೃತಿಯ ರಹಸ್ಯಗಳನ್ನು ಭೇದಿಸುವುದು ಭಾರತೀಯನ ನಿಜವಾದ ಕುರುಹಲ್ಲ ಎಂದು ಅವರು

ತೀರ್ಮಾನಿಸಿದರು. ಈ ನಿರ್ಣಯವೇ ಭಾರತಕ್ಕೆ ಗೌರವವನ್ನು ತಂದುಕೊಟ್ಟದ್ದು. ಇತರರು ಈ ನಿರ್ಣಯದ ಹೊರ ಅಂಚನ್ನು ಕೂಡ ಮುಟ್ಟಲಾರರು. ಪುರಾಣದ ಪ್ರಹ್ಲಾದನಂತೆ ಅವರು ಅಗ್ನಿಪರೀಕ್ಷೆಯನ್ನು ಎದುರಿಸಿ ಶತಮಾನಗಳ ಹಿಂಸೆಯಿಂದ ಸ್ವಲ್ಪವೂ ಗಾಸಿಗೊಳ್ಳದೆ ತಪ್ಪಿಸಿಕೊಂಡಿದ್ದಾರೆ. ಆಧ್ಯಾತ್ಮಿಕ ದೃಷ್ಟಿಯಾಗಲಿ, ಆಶೋತ್ತರ ವಾಗಲಿ ಇಲ್ಲದವರನ್ನು ಭಾರತೀಯರೆಂದೇ ಪರಿಗಣಿಸಿರಲಿಲ್ಲ. ವಿದೇಶಗಳಲ್ಲಿರುವ ಅನೇಕರು, ಭಾರತೀಯರು ಹೆಚ್ಚು ರಾಜಕೀಯ ಪ್ರಜ್ಞೆಯುಳ್ಳವರು ಎಂದು ನಂಬಿ ದರು. ಅದು ತಪ್ಪುದಾರಿಗೆಳೆಯುವ ಕಲ್ಪನೆ. ಭಾರತೀಯರಲ್ಲಿ ಎಲ್ಲೋ ಬಹಳ ಕಡಮೆ ಜನರು ಆಧ್ಯಾತ್ಮಿಕ ಒಲವನ್ನು ಹೊಂದಿರುವವರು ಎಂದು ಅವರು ಭಾವಿಸಿದರು. ಆದರೆ ಭಾರತವು ಆಧ್ಯಾತ್ಮಿಕ ಒಲವಿರುವ ಬದುಕೇ ಪ್ರತಿಯೊಬ್ಬ ಭಾರತೀಯನ ಆದ್ಯ ಮತ್ತು ಪ್ರಧಾನ ಕರ್ತವ್ಯ ಎಂದು ಎಂದಿನಿಂದಲೂ ಒತ್ತಾಯ ಪೂರ್ವಕ ಹೇಳುತ್ತಲೇ ಬಂದಿದೆ. ಈ ಕರ್ತವ್ಯ ನಿರ್ವಹಣೆಯನ್ನು ಮಾಡಿದ ಮೇಲೆ ಯಾವಾಗಲಾದರೂ ಅವಕಾಶ ದೊರೆತರೆ, ತಮ್ಮಲ್ಲಿರುವ ಆಧ್ಯಾತ್ಮಿಕ ಶಕ್ತಿಯನ್ನು ಸಂಗ್ರಹಿಸಿ ಸ್ಥಿರೀಕರಿಸಿಕೊಳ್ಳಬೇಕು ಎಂದು ಭಾರತೀಯರು ಭಾವಿಸಿದರು. ಹಿಂದೆ ನಡೆದದ್ದು ಇದೇಯೆ.

ಆ ಕಾಲದಲ್ಲಿ ರಾಷ್ಟ್ರೀಯ ಭಾವೈಕ್ಯವೆಂದರೆ, ದೇಶದಾದ್ಯಂತ ಹರಡಿ ಹೋಗಿದ್ದ ಅನ್ವೇಷಕರ ಆಧ್ಯಾತ್ಮಿಕ ಶಕ್ತಿಗಳನ್ನೂ ಪ್ರೇರಣೆಗಳನ್ನೂ ಸಾಂದ್ರೀಕರಿಸುವುದು, ಅವು ಪರಸ್ಪರ ಸಹವರ್ತಿಯಾಗಿರುವಂತೆ ಮಾಡುವುದು. ರಾಷ್ಟ್ರ ಎಂಬ ಪದಕ್ಕೆ ಭಾರತ ದಲ್ಲಿ, ಒಂದೇ ಹಾಡಿಗೆ ತಾಳ ಹಾಕುವ, ಒಂದೇ ಆಧ್ಯಾತ್ಮಿಕ ಕರೆಗೆ ಸಮಾನ ಕಂಪನಗಳ ಮೂಲಕ ಪ್ರತಿಕ್ರಿಯೆ ವ್ಯಕ್ತಪಡಿಸುವ ಹೃದಯಗಳನ್ನು ಒಟ್ಟುಗೂಡಿಸು ವುದು ಎಂದರ್ಥವಾಯಿತು. ಈ ಧರ್ಮವು ಪ್ರತಿಪಾದಿಸಿದ ಮೂಲ ಸತ್ಯಗಳು ಆಕಾಶದಷ್ಟೇ ವಿಶಾಲವೂ ಸೃಷ್ಟಿಯಷ್ಟೇ ಶಾಶ್ವತವೂ ಆಗಿದ್ದುವು. ಆ ಸತ್ಯಗಳನ್ನು ಅನೇಕ ಸೂಕ್ಷ್ಮ ರೀತಿಗಳಲ್ಲಿ ವರ್ಣಿಸಲಾಯಿತು, ಆಳವಾಗಿ ನಿಕಟವಾಗಿ ವ್ಯಾಖ್ಯಾನ ಮಾಡಲಾಯಿತು. ಆದರೆ ಅವುಗಳನ್ನು ಕಂಡುಹಿಡಿದು ನಿರೂಪಿಸಿದ ದೃಷ್ಟಿಯ ವೈಶಾಲ್ಯದಿಂದಾಗಿ ಅವು ಪ್ರೋತ್ಸಾಹಿಸಿದ ನಂಬಿಕೆಗಳ ಆಧಾರದ ಮೇಲೆ ಅನೇಕ ಧರ್ಮಗಳು ಉದಯಿಸುವುದು ಅನಿವಾರ್ಯವಾಯಿತು.

ಮನೋಧರ್ಮಗಳಲ್ಲೂ ಆಚರಣೆಗಳಲ್ಲೂ ವೈವಿಧ್ಯವು ಸಹಜ ಮತ್ತು ಸ್ವಾಗತಾರ್ಹ. ಕಬ್ಬಿಣದ ಚೌಕಟ್ಟು ಹಾಕಿ ಧರ್ಮವನ್ನು ಮಿತಿಗಿಳಿಸಬೇಕಾದ ಅಗತ್ಯ ಏನೂ ಇಲ್ಲ. ಸರ್ವವ್ಯಾಪಿಯಾದ ಒಂದೇ ಒಂದು ಧರ್ಮಕ್ಕೆ ಅವಕಾಶವಿಲ್ಲ. ಆದರೆ ಬೇರೆ ಬೇರೆ ದಾರಿಗಳಲ್ಲಿ ನಡೆಯುತ್ತಿರುವವರ ನಡುವೆ ವೈರ ವಿದ್ವೇಷ ಯಾವ ದೇಶಕ್ಕೂ ಶಾಂತಿಯನ್ನಾಗಲಿ ಸಮೃದ್ಧಿಯನ್ನಾಗಲಿ ತರುವುದಿಲ್ಲ. ತನಗೆ ಬೇಕಾದ

ಧರ್ಮವನ್ನು ಅನುಸರಿಸಲು ಸ್ವಾತಂತ್ರ್ಯವಿಲ್ಲದೆ ಹೋದರೆ ಪ್ರಪಂಚವು ಪ್ರಗತಿ ಹೊಂದಲಾರದು.

ಒಂದು ಸಣ್ಣ ತಂಡವು ಪ್ರಪಂಚದ ಎಂದೂ ಕೊರತೆಯಾಗದ ಸಮೃದ್ಧ ಸಂಪನ್ಮೂಲದ ಮೇಲೆ ಪ್ರಭುತ್ವ ಸ್ಥಾಪಿಸಲಾರದು. ಸಮಾಜವು ಪರಿಣಾಮಕಾರಿಯಾಗಿ ಕೆಲಸ ಮಾಡಬೇಕಾದರೆ ಸಮುದಾಯದ ಕೆಲಸವನ್ನು ವಿಭಿನ್ನ ಜನ ವರ್ಗಗಳಿಗೆ ಹಂಚಬೇಕು, ಸಮಾನ ಹಿತ ಸಾಧನೆಯಲ್ಲಿ ತನ್ನ ಕೊಡುಗೆಯನ್ನು ನೀಡುವ ಕೆಲಸವನ್ನು ವಹಿಸಿಕೊಡಬೇಕು ಎಂದು ಭಾರತವು ಬೋಧಿಸಿತು. ಇದು ವೈವಿಧ್ಯಕ್ಕೂ ಪರಸ್ಪರ ಸಹಯೋಗಕ್ಕೂ ಸೌಲಭ್ಯ ಕಲ್ಪಿಸಿತು. ಆಧ್ಯಾತ್ಮಿಕ ಶಕ್ತಿ ಸಾಮರ್ಥ್ಯಗಳನ್ನು ವಾಸ್ತವ ಕಾರ್ಯ ರೂಪದಲ್ಲಿ ಅನ್ವಯಿಸುವ ಸಲುವಾಗಿ ವೈವಿಧ್ಯವನ್ನು ಒಪ್ಪಿಕೊಳ್ಳಲಾಯಿತು. ಆದ್ದರಿಂದ ಇಲ್ಲಿ ವಿದ್ವೇಷಕ್ಕಾಗಲಿ, ಕಾದಾಟಕ್ಕಾಗಲಿ ಅಗತ್ಯವೇ ಇಲ್ಲ. ಇನ್ನು ಈ ವೈವಿಧ್ಯಗಳಾದರೂ ತೋರಿಕೆಯವು; ಅವು ಸತ್ಯವಲ್ಲ. ಈ ವೈವಿಧ್ಯಗಳನ್ನು ಭೇದಿಸುವ ಒಂದು ರಹಸ್ಯದ ಭಾವನೆಯಿದೆ. ಅದು ಅನೇಕದ ಹಿಂದಿರುವ ಏಕವನ್ನು ದರ್ಶಿಸಲು ತಕ್ಕ ಕೀಲಿಕೈಯನ್ನು ಹುಡುಕುತ್ತದೆ. ಪ್ರಾಚೀನ ಶಾಸ್ತ್ರಕೃತಿಗಳು ಅತ್ಯಂತ ಮೌಲಿಕವಾದ ದರ್ಶನವೆಂದು ಸಾರಿರುವುದು ಈ ಉಕ್ತಿ: 'ಏಕಂ ಸತ್, ವಿಪ್ರಾಃ ಬಹುಧಾ ವದಂತಿ' (ಇರುವುದು ಒಂದೇ, ಜ್ಞಾನಿಗಳು ಹಲವಾಗಿ ವರ್ಣಿಸುತ್ತಾರೆ).

ಆದ್ದರಿಂದ ಭಾರತೀಯರ ಧರ್ಮವು ಇತರ ಎಲ್ಲ ಧರ್ಮಗಳನ್ನೂ ಸ್ವೀಕರಿಸಿ ಗೌರವಿಸುವ ಒಂದು ಧರ್ಮ ಎಂದು ಹೇಳಬಹುದು. ನಮ್ಮ ಹೃದಯಗಳಲ್ಲಿ ವರ್ಗಭೇದಗಳಿಗಾಗಲಿ, ಮತಾಂಧತೆಗಾಗಲಿ ಎಡೆಗೊಟ್ಟರೆ, ಆ ನಮ್ಮ ಹಿರಿಯರ ವಂಶದಲ್ಲಿ ಬಂದವರಾಗಿ ನಮಗೇ ಅಪಮಾನ ಮಾಡಿಕೊಂಡಂತಾಗುತ್ತದೆ. ನಾವು ಪ್ರಾಚೀನ ವೇದಾಂತ ಧರ್ಮಗಳನ್ನು ಅಳವಡಿಸಿಕೊಂಡಿರಬಹುದು, ಇಲ್ಲವೆ ಆ ವೇದಾಂತ ಚಿಂತನೆಯ ಈಚಿನ ಬೇರೆ ಬೇರೆ ಒಲವುಗಳಿಗೆ ಸಂಬಂಧಪಟ್ಟಿರಬಹುದು. ಸಾರ್ವತ್ರಿಕವಾಗಿ ಎಲ್ಲ ಕಡೆಯೂ ಒಪ್ಪಿಕೊಂಡ ಕೆಲವು ಮೂಲ ಸತ್ಯಗಳನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ. ಹಿಂದೂ ಎಂಬ ಹೆಸರನ್ನು ಹೊತ್ತಿರುವ ಪ್ರತಿಯೊಬ್ಬನೂ ಅವುಗಳನ್ನು ನಂಬಿ ಅವಕ್ಕೆ ತಕ್ಕಂತೆ ಬದುಕನ್ನು ರೂಪಿಸಿಕೊಳ್ಳಬೇಕಾಗುತ್ತದೆ. ಹಾಗೆ ಮಾಡಲು ಅವರು ಸಂಕಲ್ಪಿಸಬೇಕು.

- ಪ್ರತಿಯೊಬ್ಬರೂ ಒಂದೇ ಮನೋಧರ್ಮಕ್ಕೆ ಬದ್ಧರಾಗಿರಬೇಕೆಂದಾಗಲಿ, ಒಂದು ವಿವರಣೆ ಅಥವಾ ವ್ಯಾಖ್ಯಾನಕ್ಕೆ ಅವರು ಒಳಪಡಬೇಕೆಂದಾಗಲಿ, ಇತರ ವಿವರಣೆಗಳನ್ನೂ ದೃಷ್ಟಿಕೋನಗಳನ್ನೂ ಹೊರತುಪಡಿಸಬೇಕೆಂದಾ

ಗಲಿ, ಒಬ್ಬ ವ್ಯಕ್ತಿಯೋ ಒಂದು ತಂಡವೋ ಅಂಗೀಕರಿಸಿದ ಜೀವನ ವಿಧಾನವನ್ನೇ ಅನುಸರಿಸಬೇಕೆಂದಾಗಲಿ ಭಾರತೀಯರು ಒತ್ತಾಯಪಡಿಸುವುದಿಲ್ಲ. ಅಧ್ಯಾತ್ಮಕ್ಕೆ ಸಂಬಂಧಪಟ್ಟ ವಿಚಾರಗಳಲ್ಲಿ ಯಾರನ್ನೇ ಆಗಲಿ ಬಲಾತ್ಕಾರವಾಗಿ ಹೇರುವುದು ಮಹಾಪಾಪವೆಂದು ಭಾರತೀಯ ಸಂಸ್ಕೃತಿಯು ಹೇಳುತ್ತದೆ.

- ಶಾಶ್ವತ ಸರ್ವವ್ಯಾಪಕ ಧರ್ಮವನ್ನು ವೇದಗಳು ಬೋಧಿಸಿವೆ. ವೈದಿಕ ಬೋಧನೆಗಳೆಂದು ಉಲ್ಲೇಖಿಸುವ ಬೋಧನೆಗಳು ಸೃಷ್ಟಿಯೊಂದಿಗೆ ಸಮಕಾಲಿಕವಾಗಿದ್ದು ಅನಾದಿಯೂ ಅನಂತವೂ ಆಗಿವೆ. ಆತ್ಮವನ್ನು ಕುರಿತ ಎಲ್ಲ ವಿಚಾರಗಳು, ವಿವಿಧ ಶಾಖೋಪಶಾಖೆಗಳು ಎಲ್ಲವೂ ಆ ಬೋಧನೆಗಳೊಂದಿಗೆ ಮುಗಿಯುತ್ತವೆ, ಪೂರ್ಣತೆ ಪಡೆಯುತ್ತವೆ. ವೇದಗಳನ್ನು ಅಧ್ಯಯನ ಮಾಡಿ ಅವುಗಳನ್ನು ಆಚರಿಸಿದರೆ ಈ ತೀರ್ಮಾನವನ್ನು ತಪ್ಪಿಸಿಕೊಳ್ಳುವುದು ಸಾಧ್ಯವೇ ಇಲ್ಲ. ಆಧ್ಯಾತ್ಮಿಕ ಮನೋಧರ್ಮ ಮತ್ತು ಆಕಾಂಕ್ಷೆಗಳನ್ನು ಒಳಗೊಂಡ ಎಲ್ಲಾ ಸಮಸ್ಯೆಗಳಿಗೂ ನಮಗೆ ವೇದಗಳಲ್ಲೇ ಪರಿಹಾರ ದೊರಕುತ್ತದೆ. ವೇದಗಳ ಯಾವ ಭಾಗಗಳು ತಮ್ಮ ಸಿದ್ಧಾಂತಕ್ಕೆ ಪ್ರಮಾಣವಾಗುತ್ತವೆ ಎಂಬ ವಿಷಯದಲ್ಲಿ ದೃಷ್ಟಿಗಳು ವ್ಯತ್ಯಾಸಗೊಳ್ಳುತ್ತವೆ. ಒಂದು ಮತ ಪಂಥಕ್ಕೆ ಸೇರಿದ ವ್ಯಕ್ತಿಗಳು ವೇದಗಳ ಕೆಲವು ಭಾಗಗಳನ್ನು ಮಿಕ್ಕವುಗಳಿಗಿಂತ ಹೆಚ್ಚು ಪವಿತ್ರ, ಹೆಚ್ಚು ಪೂಜ್ಯ ಎಂದು ಪರಿಗಣಿಸಬಹುದು. ಹಾಗಿದ್ದರೂ ಎಲ್ಲರೂ ಸಹೋದರರು, ವೇದಗಳ ಬೋಧನೆಯನ್ನು ಸಮಾನವಾಗಿ ಹಂಚಿಕೊಳ್ಳುವವರು. ಇಂದು ನಮಗೆ ಪ್ರಯೋಜನಕರವಾದ ಎಲ್ಲವನ್ನೂ ನಮಗೆ ಪವಿತ್ರವಾದ ಸಮಸ್ತವನ್ನೂ ಪರಿಶುದ್ಧವೂ ಉದಾತ್ತವೂ ಆದ ಸಕಲವನ್ನೂ ಪ್ರಾಚೀನವಾದ ಈ ಅದ್ಭುತ ಕೃತಿಗಳು ಕೊಟ್ಟಿವೆ, ಕೊಡಿಸಿವೆ. ಎಲ್ಲಿಯವರೆಗೆ ನಾವು ಈ ನಂಬಿಕೆಯನ್ನು ಭದ್ರವಾಗಿ ನಮ್ಮಲ್ಲಿ ನೆಲೆಗೊಳಿಸಿಕೊಂಡು ಗಟ್ಟಿ ಕೊರಲಿನಿಂದ ಸಾರುತ್ತೇವೆಯೋ ಅಲ್ಲಿಯವರೆಗೆ ಸಣ್ಣಪುಟ್ಟ ವಿಚಾರಗಳನ್ನು ಕುರಿತ ಭಿನ್ನಾಭಿಪ್ರಾಯಗಳು ಹೇಗೆ ನಮ್ಮ ನಮ್ಮಲ್ಲಿ ಭೇದವನ್ನು ಕಲ್ಪಿಸಿಯಾವು? ಆದ್ದರಿಂದ ನಾವು ಈ ಪಾಠಗಳನ್ನೂ ತತ್ತ್ವಗಳನ್ನೂ ಎಲ್ಲ ದಿಗಂತಗಳಲ್ಲಿ ವ್ಯಾಪಿಸುವಂತೆ ಘೋಷಿಸುತ್ತಿರಬೇಕು.
- ವೇದಗಳು ಈ ವಿಶ್ವವನ್ನು ಯಾರು ಸೃಷ್ಟಿಸಿದನೋ ಯಾರು ಅದನ್ನು ಪೋಷಿಸುತ್ತಿರುವನೋ ಯಾರಲ್ಲಿಯೇ ಕಾಲಾನಂತರ ವಿಲೀನಗೊಳ್ಳುತ್ತದೆಯೋ ಮತ್ತೆ ಯಾರಲ್ಲಿ ಈ ಅಚ್ಚರಿಯ ವಿಶ್ವವು ಅವನದೇ ರೂಪವಾಗಿ ಪ್ರಕಟವಾಗುತ್ತದೆಯೋ ಆ ಈಶ್ವರನನ್ನು ಆ ಪರಮಪುರುಷನನ್ನು ಕುರಿತಾ

ಗಿವೆ, ಅವನನ್ನು ನಿರೂಪಿಸುತ್ತವೆ. ನಮ್ಮಲ್ಲಿ ಈ ಈಶ್ವರನ ಸ್ವರೂಪ ಮತ್ತು ಲಕ್ಷಣಗಳನ್ನು ಕುರಿತು ವಿಧವಿಧವಾದ ನಂಬಿಕೆಗಳಿರಬಹುದು. ಅವನಿಗೆ ಮಾನವ ಸ್ವರೂಪವೂ ಲಕ್ಷಣಗಳೂ ಇವೆಯೆಂದು ಒಬ್ಬ ವ್ಯಕ್ತಿಯು ಚಿತ್ರಿಸಬಹುದು. ಇನ್ನೊಬ್ಬನು ಅವನನ್ನು ಅಮಾನುಷ ಲಕ್ಷಣಗಳುಳ್ಳವನಾಗಿ, ನಿರಾಕಾರನಾದ, ಈಶ್ವರನಾಗಿ ಚಿತ್ರಿಸಿಕೊಳ್ಳಬಹುದು. ಈ ಒಬ್ಬೊಬ್ಬರಿಗೂ ಅವರವರ ದೃಷ್ಟಿಯನ್ನು ಸಮರ್ಥಿಸುವಂತಹ ಹೇಳಿಕೆಗಳು ವೇದಗಳಲ್ಲಿ ಕಂಡುಬರುತ್ತವೆ. ವಿಭಿನ್ನ ದೃಷ್ಟಿಗಳನ್ನು ಹೊಂದಿದ್ದರೂ ಕೂಡ ಅವರೆಲ್ಲರೂ ಈಶ್ವರನಲ್ಲಿ, ಭಗವತತ್ತ್ವದಲ್ಲಿ ನಂಬಿಕೆಯುಳ್ಳವರು ಎಂಬುದು ವಾಸ್ತವ ಸಂಗತಿ. ಅಂದರೆ, ಭೌತಾತೀತವಾದ ಶಾಶ್ವತ ಶಕ್ತಿಯೊಂದಿರುವುದರಲ್ಲಿ ಸಂದೇಹವೇ ಇಲ್ಲ ಎಂದು ಅವರು ನಂಬುತ್ತಾರೆ. ಸಮಸ್ತವೂ ಆ ಶಕ್ತಿಯಿಂದ ಮೂಡಿ ಬಂದಿದೆ, ಎಲ್ಲವೂ ಮತ್ತೆ ಅದರಲ್ಲೇ ಲೀನವಾಗಲೇಬೇಕು. ಭಾರತೀಯನ ಶ್ರದ್ಧೆಯ ಮುಖ್ಯವಾದ ಕುರುಹು ಇದು. ಈ ನಂಬಿಕೆಯನ್ನು ತಳೆಯದವನು ಹಿಂದೂ ಎಂಬ ಹೆಸರಿಗೇ ಅನರ್ಹನು.

ನೀವು ಬೋಧಿಸುವ ಈಶ್ವರನಿಗೆ ಯಾವ ಲಕ್ಷಣಗಳಿವೆ? ಅವನು ಯಾವ ರೂಪದಲ್ಲಿದ್ದಾನೆ? ಈ ಪ್ರಶ್ನೆ ನಮಗೆ ಅಸಂಗತ. ಅದು ಅಷ್ಟು ಮುಖ್ಯವಾದದ್ದೇ ಅಲ್ಲ. ಜನರನ್ನು ಬೇರೆ ಬೇರೆ ಗುಂಪುಗಳನ್ನಾಗಿ ಒಡೆಯುವಂತಹ ವಿಚಾರಗಳ ಬಗೆಗೆ ನಾವು ಜಗಳವಾಡುವುದೇ ಬೇಡ. ಈಶ್ವರನನ್ನು ಅವರು ಒಪ್ಪಿಕೊಂಡರೆ ಸಾಕು. ಅವನ ಒಂದು ವರ್ಣನೆಯೂ ಚಿತ್ರವೂ ಮಿಕ್ಕವಕ್ಕಿಂತ ಉತ್ತಮವಾಗಿರಬಹುದು, ಆದರೆ ಯಾವುದೇ ವರ್ಣನೆಯೂ ಚಿತ್ರವೂ ಕೆಟ್ಟದಾಗಿರುವುದಿಲ್ಲ. ಒಂದು ನಿರೂಪಣೆ ಉತ್ತಮವಾಗಿರಬಹುದು, ಇನ್ನೊಂದು ಉತ್ತಮತರವಾಗಿ ಇರಬಹುದು, ಮೂರನೆಯದು ಅತ್ಯುತ್ತಮವಾಗಿ ಇರಬಹುದು. ಆದರೆ ಭಾರತೀಯ ಆಧ್ಯಾತ್ಮಿಕ ಸಾಹಸದ ವಾಹಿನಿಯಲ್ಲಿ ಯಾವ ಚಿತ್ರಣವಾಗಲಿ, ವರ್ಣನೆಯಾಗಲಿ ಕೆಟ್ಟದ್ದು ಮತ್ತು ಸ್ವೀಕಾರಾರ್ಹವಾಗಿಲ್ಲ ಎನಿಸುವಂಥದು ಯಾವುದೂ ಇಲ್ಲ. ಆದ್ದರಿಂದಲೇ ಮಾನವನನ್ನು ಆಕರ್ಷಿಸಿ, ಅವನಲ್ಲಿ ಸ್ಫೂರ್ತಿ ತುಂಬುವ ಯಾವುದೇ ನಾಮವನ್ನು ರೂಪವನ್ನು ಬೋಧಿಸುವ ಎಲ್ಲರ ಮೇಲೂ ಈಶ್ವರನು ತನ್ನ ಅನುಗ್ರಹವನ್ನು ವರ್ಷಿಸುತ್ತಾನೆ. ಆ ಎಲ್ಲ ಪರಯತ್ನಗಳನ್ನೂ ಪವಿತ್ರ ಮತ್ತು ಮೌಲಿಕ ಎಂದು ಪರಿಗಣಿಸುತ್ತಾನೆ. ಈ ನಂಬಿಕೆಯು ಇನ್ನೂ ಹೆಚ್ಚು ಹೆಚ್ಚಾಗಿ ಬೆಳೆಯಲಿ; ಏಕೆಂದರೆ, ಅದು ಕೆಲಸ ಮಾಡಿದಷ್ಟೂ ಹೆಚ್ಚಾಗಿ ಆಧ್ಯಾತ್ಮಿಕ ಪ್ರಗತಿ ಮುಂದುವರಿಯುತ್ತದೆ. ಅಭೀಪ್ಸೆ ಮಾತ್ರ ಭಗವಂತನಿಗೆ ಅಥವಾ ಈಶ್ವರನಿಗೆ ಸಂಬಂಧಪಟ್ಟಿರಬೇಕು.

- ಆಧ್ಯಾತ್ಮಿಕ ಅನ್ವೇಷಣೆ ಮತ್ತು ಸಂಶೋಧನೆಗೆ ಸಿರಿತನವೆಂಬ ಅರ್ಹತೆಯಾಗಲಿ, ಬಡತನವೆಂಬ ಅನರ್ಹತೆಯಾಗಲಿ ಇಲ್ಲ. ಭಾರತೀಯ ತಂದೆ ತಾಯಿಗಳು ಈ ಸತ್ಯವನ್ನು ತಮ್ಮ ಮಕ್ಕಳಿಗೆ ಹೇಳಿಕೊಡಬೇಕು. ಈ ಉದಾರವಾದ ಭಾವನೆಯಿಂದಲೇ ಅವರು ಬೆಳೆಯಬೇಕು.

- ಬೇರೆ ದೇಶಗಳಲ್ಲಿನ ಜನರು ಹೇಳುವಂತೆ ಈ ವಿಶ್ವವು ಕೆಲವು ಸಹಸ್ರ ವರ್ಷಗಳ ಹಿಂದೆ ಕಾಣಿಸಿಕೊಂಡಿತೆಂದೂ ಮುಂದೆ ಯಾವುದೋ ಒಂದು ದಿನ ಅಂತಿಮವಾಗಿ ಮತ್ತು ಎಂದೆಂದಿಗೂ ಪೂರ್ತಿ ನಾಶವಾಗಿಬಿಡುತ್ತದೆಂದೂ ಭಾರತೀಯರು ಒಪ್ಪುವುದಿಲ್ಲ, ವಿಶ್ವವು ಏನೂ ಇಲ್ಲದ ಶೂನ್ಯ ಸ್ಥಿತಿಯಿಂದ ಮೂಡಿತು ಎಂಬ ಮಾತನ್ನೇ ಭಾರತೀಯರು ಅಂಗೀಕರಿಸುವುದಿಲ್ಲ. ವಿಶ್ವ ಅಥವಾ ವಸ್ತುನಿಷ್ಠ ಸೃಷ್ಟಿಯು ಅನಾದಿ ಮತ್ತು ಅನಂತ, ಕಾಲದ ವಿಕಾಸ ನಿಯಮಗಳ ಪ್ರಕಾರ ಅದು ಸ್ಥೂಲದಿಂದ ಸೂಕ್ಷ್ಮಕ್ಕೆ ಹರಿದು ಅಲ್ಲಿ ಸ್ವಲ್ಪ ಸಮಯ ಇದ್ದು, ಮತ್ತೆ ಮತ್ತೆ ತಾನು ಎಲ್ಲಿಂದ ಬಂದಿತೋ ಆ ಕಾರಣ ಶರೀರದಲ್ಲಿ ವಿಲೀನಗೊಳ್ಳುತ್ತದೆ. ಅದು ವಿಲೀನಗೊಳ್ಳುವ ಏಕ ವಸ್ತುವಿನಿಂದ ಕ್ರಮೇಣ ಅನೇಕವಾಗಿ ಮತ್ತೆ ಪ್ರಕಟವಾಗುತ್ತದೆ, ಕಾರಣದಿಂದ ಸೂಕ್ಷ್ಮಕ್ಕೆ, ಸೂಕ್ಷ್ಮದಿಂದ ಸ್ಥೂಲಕ್ಕೆ.

ಅಧ್ಯಾಯ ೬

# ಧರ್ಮವು ಒಂದು ಅನುಭವ

ಮುನ್ನಡೆ ಹಿನ್ನಡೆ, ವಿಲೀನ ಉದಯ ಇವುಗಳ ತರಂಗ ಸದೃಶ ಚಲನೆಯು ಎಷ್ಟೋ ಕಾಲದಿಂದ ಸಂಭವಿಸುತ್ತಿದೆ. ಕಾಲವು ಮುಗಿಯುವವರೆಗೂ ಅದು ಮುಂದುವರಿದೇ ಇರುತ್ತದೆ. ಅದು ಶಾಶ್ವತ ಲಕ್ಷಣವುಳ್ಳದ್ದು; ಇದು ಭಾರತೀಯರ ನಂಬಿಕೆ. ಮನುಷ್ಯನು ಈ ಸ್ಥೂಲ ದೇಹ ಮಾತ್ರವಲ್ಲ; ಅದರಲ್ಲಿ ಮನಸ್ಸು ಎಂಬ ಬಹು ಸೂಕ್ಷ್ಮವಾದ ಅಂಗವಿದೆ; ಅದರ ಒಳಗಡೆ ಇನ್ನೂ ಸೂಕ್ಷ್ಮತರವಾದ, ಅದರ ಪ್ರೇರಕನೂ ಶಕ್ತಿ ಚಿಲುಮೆಯೂ ಆದ ಜೀವಾತ್ಮ ಎಂಬ ತತ್ತ್ವವಿದೆ (ವ್ಯಕ್ತಿಗತ ಆತ್ಮ). ಈ ಜೀವಾತ್ಮಕ್ಕೆ ಆದಿಯೂ ಇಲ್ಲ, ಅಂತ್ಯವೂ ಇಲ್ಲ. ಅದಕ್ಕೆ ಸಾವೆಂಬುದು ಗೊತ್ತಿಲ್ಲ, ಜನನವೂ ಇಲ್ಲ. ಭಾರತೀಯ ನಂಬಿಕೆಯ ಆಧಾರ ಇದೇಯೆ.

ನಂಬಿಕೆಯ ಇನ್ನೊಂದು ಅಂಶವಿದು; ಭಾರತೀಯ ಮನಸ್ಥಿತಿಯ ವಿಶಿಷ್ಟ ಲಕ್ಷಣವೂ ಹೌದು. ವ್ಯಕ್ತೀಕೃತ ಆತ್ಮವು ವ್ಯಕ್ತಿಗತ ತತ್ತ್ವದಿಂದ ಬಿಡುಗಡೆ ಹೊಂದಿ ವಿಶ್ವಾತ್ಮದಲ್ಲಿ ವಿಲೀನ ಹೊಂದುವವರೆಗೂ ಅಂದರೆ ಮೋಕ್ಷ ಪಡೆಯುವವರೆಗೂ ಅದು ತನ್ನನ್ನು ಒಂದಲ್ಲ ಒಂದು ದೇಹದಲ್ಲಿ ಕೋಶಗತಗೊಳಿಸಿಕೊಳ್ಳಲೇಬೇಕು, ಬದುಕು ಎಂಬ ಪ್ರಕ್ರಿಯೆಯನ್ನು ಅನುಭವಿಸಲೇಬೇಕು. ಬೇರೆ ಯಾವ ಜನರಲ್ಲೂ ಈ ನಂಬಿಕೆಯಿಲ್ಲ. ಇದೇ ಭಾರತದ ಪ್ರಾಚೀನ ಶಾಸ್ತ್ರಗಳು ವರ್ಣಿಸುವ ಮತ್ತು ಪ್ರಚುರಿಸುವ ಸಂಸಾರ ಭಾವನೆ. ಸಂಸಾರ ಎಂದರೆ ಒಂದು ರೂಪವಾದ ಮೇಲೆ ಇನ್ನೊಂದಕ್ಕೆ ಹೋಗುವುದು. ಭಾರತೀಯರ ವಿವಿಧ ಮತ ಪಂಥಗಳು, ಆತ್ಮವು (ವ್ಯಕ್ತಿಗತವಾದ ಎಂದೇ ಇಲ್ಲಿ ಅರ್ಥ) ಶಾಶ್ವತ, ಬದಲಾವಣೆ ಹೊಂದುವಂಥದಲ್ಲ ಎಂಬುದನ್ನು ಒಪ್ಪುತ್ತವೆ. ಆತ್ಮನಿಗೂ ಈಶ್ವರ ಅಥವಾ ಭಗವಂತನಿಗೂ ಇರುವ ಸಂಬಂಧವನ್ನು ವರ್ಣಿಸುವುದರಲ್ಲಿ ಅಥವಾ ಸ್ಪಷ್ಟೀಕರಿಸುವುದರಲ್ಲಿ ಅವು ಪರಸ್ಪರ ಭಿನ್ನವಾಗಬಹುದು. ಒಂದು ಪಂಥದ ಚಿಂತಕರು ಜೀವಾತ್ಮ ಮತ್ತು ಈಶ್ವರ ಇಬ್ಬರೂ ಎಂದೆಂದಿಗೂ ಬೇರೆ ಬೇರೆ ಎಂದು ವಾದಿಸಬಹುದು; ಇನ್ನೊಂದು ವರ್ಗದವರು ಜೀವಾತ್ಮವು ಈಶ್ವರ ಎಂಬ ಅಗ್ನಿಯ ಕಿಡಿ ಎಂದು ಹೇಳಬಹುದು; ಮೂರನೆಯವರು ಅವೆರಡನ್ನೂ ಬೇರ್ಪಡಿಸಲು ಸಾಧ್ಯವೇ ಇಲ್ಲ ಎಂದು ಸಮರ್ಥಿಸಬಹುದು. ಆದರೆ ಸತ್ಯಾಂಶವು ವ್ಯತ್ಯಾಸಗೊಳ್ಳದೆ ಹಾಗೆಯೇ ಉಳಿದಿರುತ್ತದೆ; ಆತ್ಮವು ಅನಾದಿ ಮತ್ತು ಅನಂತ;

ಅದು ಹುಟ್ಟಲಿಲ್ಲವಾದ್ದರಿಂದ ಸಾಯುವುದೂ ಇಲ್ಲ. ಅದರ ವ್ಯಕ್ತಿಗತ ರೂಪವು ಅನೇಕಾನೇಕ ದೇಹಗಳ ಒಂದು ಸರಣಿಯಲ್ಲಿ, ಮಾನವ ದೇಹ ಪಡೆದು ಪರಿಪೂರ್ಣತೆಯನ್ನು ಸಾಧಿಸುವವರೆಗೂ ಕ್ರಮಿಸಬೇಕು. ಈ ನಂಬಿಕೆಯನ್ನು ಎತ್ತಿಹಿಡಿಯುವುದರಲ್ಲಿ ಎಲ್ಲಾ ಪಂಥಗಳೂ ಒಂದಾಗುತ್ತವೆ; ಅವು ಕೊಡುವ ವ್ಯಾಖ್ಯಾನದಲ್ಲಿ ವೈವಿಧ್ಯವಿರುತ್ತದೆ.

ವೈಭವೋಪೇತ ಭವ್ಯ ಸತ್ಯಗಳಲ್ಲಿ ಅಗ್ರಮಾನ್ಯವಾದುದಕ್ಕೆ ಈಗ ಬರೋಣ. ಮಾನವ ಮತಿಯು ಆಧ್ಯಾತ್ಮಿಕ ಕ್ಷೇತ್ರದಲ್ಲಿ ಸಾಧಿಸಿರುವ, ನಮ್ಮನ್ನು ನಿಬ್ಬೆರಗಾಗಿಸುವ ಸತ್ಯ ಅದು. ಆತ್ಮವು ತನ್ನ ಸಹಜ ಸ್ವರೂಪದಲ್ಲಿ ಪರಿಶುದ್ಧಿ, ಪರಿಪೂರ್ಣತೆ, ಆನಂದ. ಇದು ಎಲ್ಲಾ ಚಿಂತಕರನ್ನು, ಅವರು ಶಕ್ತಿ, ಶಿವ ಅಥವಾ ವಿಷ್ಣು ಪೂಜಕರಾಗಿರಬಹದು, ಅಥವಾ ಜೈನರೋ ಬೌದ್ಧರೋ ಆಗಿರಬಹುದು. ಪ್ರತಿಯೊಬ್ಬ ಹಿಂದುವೂ ಅದನ್ನು ಒಪ್ಪಿಕೊಳ್ಳುತ್ತಾನೆ. ದ್ವೈತಿಗಳು ಆತ್ಮದ ಮೂಲಭೂತವಾದ ನಿಜವಾದ ಸ್ವರೂಪವು ಆನಂದ ಎಂದು ನಂಬುತ್ತಾರೆ. ಜನ್ಮ ಜನ್ಮಾಂತರಗಳಲ್ಲಿನ ಮಾನವ ಕರ್ಮದ ಪರಿಣಾಮವಾಗಿ ಅದು ಕಡಮೆಯಾಗುತ್ತಾ ಹೋಗುತ್ತದೆ. ಆದ್ದರಿಂದ ಭಗವತ್ಕೃಪೆಯನ್ನು ಪಡೆದು ಮತ್ತೆ ಕೊರತೆಯಾದುದನ್ನು ತುಂಬಿಕೊಳ್ಳಬೇಕು, ಪುನಶ್ಚೇತನಗೊಳಿಸಬೇಕು. ಕೊರತೆಯಾಗಲಿ, ಶೋಷಣೆಯಾಗಲಿ ಇರುವುದು ಸಾಧ್ಯವಿಲ್ಲ ಎಂದು ಅದ್ವೈತಿಗಳು ನಂಬುತ್ತಾರೆ. ಆತ್ಮವು ಪೂರ್ಣ ಪ್ರಕಾಶಯುತ; ಆದರೆ ಅಜ್ಞಾನ ಅಥವಾ ಮಾಯೆ ಪ್ರಭಾವದಿಂದಾಗಿ, ನಿಜವಾಗಿ ಸತ್ಯವಾದುದರ ಮೇಲೆ ಕೊರತೆಯ ಮಿಥ್ಯಾ ಚಿತ್ರವನ್ನು ಆರೋಪಿಸುತ್ತದೆ. ವ್ಯಾಖ್ಯಾನ ಮಾಡುವುದರಲ್ಲಿ ಏನೇ ಭಿನ್ನತೆಗಳಿರಲಿ, ಎಲ್ಲರೂ ಒಪ್ಪುವ ಸತ್ಯದ ತಿರುಳನ್ನು ಕುರಿತು ಪರಿಶೀಲಿಸಿದರೆ ಪ್ರಾಚ್ಯ ಪಾಶ್ಚಾತ್ಯಗಳ ನಡುವೆ ಒಂದೇ ಗುರಿಯತ್ತ ಸಾಗುವ ಆಳವಾದ ಒಂದು ದಾರಿಯನ್ನು ಗುರುತಿಸಬಹುದು. ಪೌರ್ವಾತ್ಯ ದೇಶಗಳ ಜನರು ಸಾಧನೆಯ ಅದ್ಭುತ ಭವ್ಯ ಫಲವನ್ನು ತಮ್ಮ ಅಂತರಂಗದ ವಲಯಗಳಲ್ಲಿ ಅರಸುತ್ತಾರೆ. ಪೂಜೆ ಮಾಡುವಾಗ ನಾವು ಕಣ್ಣುಗಳನ್ನು ಮುಚ್ಚಿಕೊಳ್ಳುತ್ತೇವೆ. ಭಗವಂತನನ್ನು ನಮ್ಮ ಒಳಗೆ ದರ್ಶನ ಮಾಡಲು ಪ್ರಯತ್ನಿಸುತ್ತೇವೆ. ಪಶ್ಚಿಮ ದೇಶಗಳ ಜನರಾದರೋ ಮುಖವನ್ನು ಮೇಲಕ್ಕೆತ್ತಿ ದೇವನನ್ನು ದೂರದ ಬಾಹ್ಯಾಕಾಶದಲ್ಲಿ ದರ್ಶಿಸಲು ಪ್ರಯತ್ನಿಸುತ್ತಾರೆ. ತಮ್ಮ ಪವಿತ್ರ ಗ್ರಂಥಗಳನ್ನು ಭಗವಂತನ ಆದೇಶಕ್ಕನುಗುಣವಾಗಿ ವ್ಯಕ್ತಿಗಳು ರಚಿಸಿದರು ಎಂದು ಅವರು ನಂಬುತ್ತಾರೆ. ಭಾರತೀಯರಿಗಾದರೆ ವೇದಗಳು, ಅವರ ಪವಿತ್ರ ಶಾಸ್ತ್ರಗಳು, ಸಾಕ್ಷಾತ್ ಭಗವಂತನ ಉಸಿರು; ತಮ್ಮ ಮನಸ್ಸಿನಲ್ಲಿ ಅವನನ್ನು ನೆಲೆಗೊಳಿಸಿಕೊಂಡಿದ್ದ ಋಷಿಗಳಿಗೆ ದಿವ್ಯವಾದ ಅರ್ಥವನ್ನು ಹೊಳೆಯಿಸಿತು.

ನಾವು ಅರ್ಥಮಾಡಿಕೊಳ್ಳಬೇಕಾದ ಇನ್ನೊಂದು ವಿಚಾರವೂ ಇದೆ. ನಾವದನ್ನು ಸದಾ ಭದ್ರವಾಗಿ ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಯಾವುದೇ ಒಂದು ನಂಬಿಕೆಯನ್ನು ನಾವು ರಾತ್ರಿ ಹಗಲು ಚಂಚಲತೆಯಿಲ್ಲದೆ ಸ್ಥಿರವಾಗಿ ಇಟ್ಟುಕೊಳ್ಳದೆ ಹೋದರೆ ಅದ ರಿಂದ ಯಶಸ್ಸು ದೊರಕುವುದಿಲ್ಲ. ವ್ಯಕ್ತಿಯು ತಾನು ಅಲ್ಪನು, ತನಗೇನು ಗೊತ್ತಿಲ್ಲ ಎಂದೇ ಸ್ಥಿರಪಡಿಸಿಕೊಳ್ಳುತ್ತಾ ಹೋದರೆ ಅವನು ಸಣ್ಣವನೇ ಆಗುತ್ತಾನೆ, ಅಲ್ಪನೇ ಆಗುತ್ತಾನೆ, ಅವನ ಜ್ಞಾನ ಕುಗ್ಗುತ್ತದೆ. ನಾವು ಏನಾಗಿದ್ದೇವೆಂದು ನಂಬುತ್ತೇವೆಯೋ ಅದೇ ಆಗುತ್ತೇವೆ. ನಾವು ಪರಮೋನ್ನತ ಶಕ್ತಿ ವೈಭವ, ಜ್ಞಾನಭರಿತನಾದ ಸರ್ವಶಕ್ತ ಭಗವಂತನ ಮಕ್ಕಳು, ನಾವು ಅಮೃತ ಪುತ್ರರು. ಈ ಆಲೋಚನೆಯಲ್ಲಿ ತೊಡಗಿದ್ದರೆ ನಾವು ಅಲ್ಪರಾಗುವುದಾಗಲಿ ಅಜ್ಞಾನಿಗಳಾಗುವುದಾಗಲಿ ಹೇಗೆ ಸಾಧ್ಯ? ಮಾನವನ ನಿಜ ಸ್ವರೂಪವು ಉನ್ನತವಾದುದು, ಈ ಸತ್ಯವನ್ನು ಅವನು ಸದಾ ಅರಿತಿರಬೇಕು ಎಂದು ಭಾರತೀಯ ಆಧ್ಯಾತ್ಮಿಕ ಸಂಸ್ಕೃತಿಯು ಪ್ರತಿಯೊಬ್ಬರಿಗೂ ಆದೇಶಿಸುತ್ತದೆ.

ಹಿಂದಿನ ಕಾಲದಲ್ಲಿ ಭಾರತೀಯರು ತಮ್ಮ ಈ ಸ್ವರೂಪದಲ್ಲಿ ನಂಬಿಕೆಯಿಟ್ಟುಕೊಂಡಿದ್ದರು. ಈ ನಂಬಿಕೆಯಿಂದಾಗಿಯೇ ಅವರು ತಮ್ಮೆಲ್ಲ ಪರಿಶ್ರಮಗಳಲ್ಲೂ ವಿಜಯವನ್ನು ಸಾಧಿಸಿದರು, ಬಹಳ ಉನ್ನತ ಮಟ್ಟಕ್ಕೆ ಏರಿದರು. ಅವರು ಪ್ರಗತಿಯ ಶಿಖರಕ್ಕೆ ಏರಿದರು. ಈಗಲಾದರೋ ನಾವು ಆ ಶಿಖರದಿಂದ ಇಂದಿನ ಅವನತಿ ಸ್ಥಿತಿಗೆ ಜಾರಿದ್ದೇವೆ. ಇದಕ್ಕೆ ಮುಖ್ಯ ಕಾರಣ ನಾವು ನಮ್ಮ ಆತ್ಮದಲ್ಲಿ ವಿಶ್ವಾಸವನ್ನು ಕಳೆದುಕೊಂಡಿರುವುದು. ಆತ್ಮದಲ್ಲಿ ವಿಶ್ವಾಸವನ್ನು ಕಳೆದುಕೊಳ್ಳುವುದೆಂದರೆ ಅದು ಭಗವಂತನಲ್ಲಿ ವಿಶ್ವಾಸ ಕಳೆದುಕೊಳ್ಳುವುದನ್ನು ಒಳಗೊಳ್ಳುತ್ತುದೆ. ಆ ಸರ್ವವ್ಯಾಪಿಯಾದ, ಸಮಸ್ತ ಜೀವಿಗಳ ಪ್ರೇರಕ ಅಂತರ್ಯಾಮಿಯಾದ, ನಮ್ಮ ದೇಹ ಹಾಗೂ ಮನಸ್ಸುಗಳ, ಬುದ್ಧಿ ಭಾವಗಳ ಹಾಸು ಹೊಕ್ಕಾದ ಆ ಭಗವಂತನಲ್ಲಿ ನಂಬಿಕೆಯನ್ನು ಬೆಳೆಸಿಕೊಳ್ಳುವುದು, ಬಲಪಡಿಸಿಕೊಳ್ಳುವುದು ಇದೊಂದೇ ಮಾನವನ ಜೀವಿತ ಲಕ್ಷ್ಯವನ್ನು ಪೂರೈಸಿಕೊಳ್ಳಲು ಇರುವ ಮಾರ್ಗ. ಭಾರತದ ಆಧ್ಯಾತ್ಮಿಕ ಇತಿಹಾಸವು ಮಾನವತೆಗೆ ಬೋಧಿಸಬೇಕಾಗಿರುವ ಪಾಠ ಇದೇಯೆ.

ಭಾರತ ಪುತ್ರರೇ! ಈ ಜೀವ ರಕ್ಷಕವೂ ಭವ್ಯವೂ ಹೃದಯ ವಿಶಾಲಕರವೂ ಆದ ಸತ್ಯವನ್ನು ನಿಮ್ಮ ಮಕ್ಕಳಿಗೆ ಎಳವೆಯಿಂದಲೇ ಕಲಿಸಿಕೊಡಿ. ಭಾರತೀಯರು ಪಡೆದ ಪವಿತ್ರ ದರ್ಶನ ಇದು; ಆತ್ಮವು ಪೂರ್ಣ ಹಾಗೂ ಮುಕ್ತ. ಅದೊಂದು ಅದ್ಭುತ ಸಂಶೋಧನೆ, ರೋಮಾಂಚಕಾರಿಯಾದ ಚಿಂತನೆ! ಆತ್ಮವು ತನ್ನ ಸಹಜ ಸ್ವವರೂಪದಿಂದಲೇ ಪೂರ್ಣವಾದದ್ದು. ಅದು ಪೂರ್ಣತ್ವವನ್ನು ಪಡೆಯಬೇಕಾಗಿಲ್ಲ, ಸಾಧಿಸುವ ಅಗತ್ಯವಿಲ್ಲ, ಅದಕ್ಕೆ ಕೂಡಿಸಬೇಕಾಗಿಲ್ಲ. ಏಕೆಂದರೆ ಪೂರ್ಣತ್ವವನ್ನು ಹೊಸದಾಗಿ ಕೂಡಿಸಿದರೆ, ಕಾಲ ಕಳೆದಂತೆ ಅದು ಕೊಳೆಯಲೂಬಹುದ

ಲ್ಲವೆ? ಯಾವುದು ಕಟ್ಟಲ್ಪಟ್ಟಿದೆಯೋ ಅದು ಕುಸಿಯಲೇ ಬೇಕು. ಮನುಷ್ಯನು ಸ್ವಭಾವತಃ ಮಲಿನವಾಗಿದ್ದಾನೆಂದಿಟ್ಟುಕೊಳ್ಳೋಣ. ಮಧ್ಯೆ ಐದು ನಿಮಿಷಗಳ ಕಾಲ ಅವನು ನಿರ್ಮಲತೆಯನ್ನು ಯಶಸ್ವಿಯಾಗಿ ಗಳಿಸಿದರೂ ಆಮೇಲೆ ಅದನ್ನು ಕಳೆದುಕೊಂಡು ಮಲಿನತೆಯಲ್ಲಿಯೇ ಹೊರಳಾಡಬೇಕಾಗುತ್ತದೆ. ಏಕೆಂದರೆ ನಡುವೆ ಹೊಸದಾಗಿ ಬರುವ ನಿರ್ಮಲತೆ ಸನ್ನಿವೇಶಗಳಿಂದಾಗಿ ಸುಲಭವಾಗಿ ಕೊಚ್ಚಿ ಹೋಗಬಹುದು. ಆದ್ದರಿಂದ ಭಾರತದ ಅಧ್ಯಾತ್ಮ ಚಿಂತಕರು ನಿರ್ಮಲತೆಯೇ ನಮ್ಮ ಸಹಜ ಸ್ವರೂಪ, ಪೂರ್ಣತೆಯೇ ನಮ್ಮ ನಿಜ ಸ್ವಭಾವ ಎಂದು ಸಾರಿದರು. ನಮ್ಮಲ್ಲಿ ಎಂದಿಗೂ 'ಕೊರತೆ' ಇಲ್ಲ. ಇದು ಭಾರತೀಯರು ಜಗತ್ತಿಗೆ ಬೋಧಿಸಿದ ಪಾಠ. ಭಾರತದಿಂದ ಹರಿದು ಜಗತ್ತನ್ನು ಸಮೃದ್ಧಗೊಳಿಸಿದ ಆಧ್ಯಾತ್ಮ ಶಕ್ತಿಯ ನದಿ ಇದು.

ಬದುಕಿನ ಕೊನೆಗೆ ತಾನು ಜೀವನದಲ್ಲಿ ಸಾಧಿಸಿದ ಉನ್ನತ ಚಿಂತನೆಗಳನ್ನು, ಬೆಳೆಸಿಕೊಂಡ ಉದಾತ್ತ ಭಾವನೆಗಳನ್ನು ಅರಿವಿಗೆ ತಂದುಕೊಳ್ಳಬೇಕು. ಇದು ಭಾರತದ ಪ್ರಾಚೀನ ಋಷಿಗಳು ನೀಡಿದ ಆದೇಶ. ಬದುಕಿನಲ್ಲಿ ತಾನು ಮಾಡಿದ ತಪ್ಪುಗಳನ್ನು ದೋಷಯುಕ್ತ ಕಾರ್ಯಗಳನ್ನು ಮನಸ್ಸಿಗೆ ತಂದು ಕೊಳ್ಳಬೇಕು ಎಂದು ಅವರು ಹೇಳಲಿಲ್ಲ. ಇವು ಅನಿವಾರ್ಯ ಹಾಗೂ ಸಾರ್ವತ್ರಿಕ. ಆದರೆ ಋಷಿಗಳು ಹೇಳಿದರೂ ವ್ಯಕ್ತಿಯು ಸದಾ ತನ್ನ ನಿಜಸ್ವರೂಪದ ಅರಿವನ್ನು ಹೊಂದಿರಬೇಕು, ಅದರ ಭವ್ಯತೆಯನ್ನು ಧ್ಯಾನಿಸುತ್ತಿರಬೇಕು, ಅದೇ ಪ್ರಗತಿಯ ದೊಡ್ಡ ಹೆಜ್ಜೆ.

ನಾವು ಮಿಕ್ಕೆಲ್ಲಕ್ಕಿಂತ ಹೆಚ್ಚಾಗಿ ಗಮನಿಸಬೇಕಾದ ಇನ್ನೊಂದು ಅಂಶವಿದೆ. ಭಾರತೀಯರಿಗೆ ಧರ್ಮವೆನ್ನುವುದು 'ಅನುಭವ', ಅದಕ್ಕಿಂತ ಕಡಮೆಯಲ್ಲ. ನಾವು ಈ ಮಹತ್ವದ ಸಂಗತಿಯನ್ನು ಅನೇಕ ವೇಳೆ ಮರೆತು ಬಿಡುತ್ತೇವೆ, ಅದು ದುರದೃಷ್ಟದ ವಿಚಾರ. ಪ್ರತಿಯೊಬ್ಬರೂ ಈ ರಹಸ್ಯವನ್ನು ತನ್ನ ಹೃದಯದ ಮೇಲೆ ಮುದ್ರೆಯೊತ್ತಿಕೊಳ್ಳಬೇಕು. ಆಗಲೆ ಅವನು ಕ್ಷೇಮವಾಗಿ, ಅಪಾಯರಹಿತವಾಗಿ ಇರುತ್ತಾನೆ. ಅಷ್ಟೇ ಅಲ್ಲ, ತನ್ನ ಪ್ರಯತ್ನದಿಂದಲೇ ಎಲ್ಲವನ್ನೂ ಸಾಧಿಸಬಹುದು ಎಂದು ಹೇಳುವುದು ಭಾರತೀಯನ ಆಲೋಚನಾ ರೀತಿ ಅಲ್ಲ. ಪ್ರತಿಯೊಂದಕ್ಕೂ ಭಗವತ್ ಸಂಕಲ್ಪವೇ ಆಧಾರ ಎಂದು ಭಾರತೀಯನಿಗೆ ತಿಳಿದಿದೆ. ಧಾರ್ಮಿಕ ತತ್ತ್ವಗಳನ್ನು ಆಚರಣೆಯಲ್ಲಿ ತಂದು ಅವುಗಳ ಮೌಲಿಕತೆಯನ್ನು ಅನುಭವಿಸಬೇಕು. ಅವುಗಳನ್ನು ಕುರಿತ ಪ್ರವಚನಗಳನ್ನಾಲಿಸುವಷ್ಟರಿಂದ ಏನೂ ಪ್ರಯೋಜನವಿಲ್ಲ. ಯಾವುದೇ ಕಟ್ಟುವಾದಗಳನ್ನೂ ನಿರ್ಣಯಗಳನ್ನೂ ಕಂಠಪಾಠ ಮಾಡಿಕೊಂಡು ಗಿಳಿಯಂತೆ ಮತ್ತೆ ಮತ್ತೆ ಒದರುತ್ತಿರುವುದು ಸಾಲದು. ಬುದ್ಧಿಯು ಅವುಗಳನ್ನು ಒಪ್ಪಿದರೂ ಸರಿಯೆಂದು ಅಂಗೀಕರಿಸಿದರೂ ಅದಷ್ಟರಿಂದಲೇ ಪ್ರಯೋ

ಜನವಾಗುವುದಿಲ್ಲ. ಅದು ನಮ್ಮನ್ನು ಪರಿವರ್ತಿಸಬೇಕು. ಭಾರತೀಯರು ದೇವರನ್ನು ನಂಬುವುದಕ್ಕೆ, ಆಗಿರುವ ಆಗುತ್ತಿರುವ ಸಕಲವೂ ಭಗವಂತನೇ ಎಂಬುದು ತಮ್ಮ ಅನುಭವವಾಗಿದೆ ಎಂದು ಹೇಳುವುದಕ್ಕೆ ಇದೇ ಕಾರಣ. ಈ ಹೇಳಿಕೆಯು ತಲೆಯಿಂದ, ವಿಚಾರ ಶಕ್ತಿಯಿಂದ ಅಥವಾ ಯುಕ್ತಿಯಿಂದ ಮಾಡುವುದಲ್ಲ. ಪ್ರತಿಯೊಬ್ಬರಲ್ಲೂ ಆತ್ಮವೆಂಬುದಿದೆ ಎಂದು ಹಿರಿಯರು ಹೇಳಿದರು; ಮತ್ತು ಈ ಆತ್ಮವು ವಿಶ್ವಾತ್ಮ ಕಿಡಿ, ಅದು ತಮಗೆ ಸಂದೇಹಕ್ಕೆಡೆಯೇ ಇಲ್ಲದಂತೆ ಅನುಭವಕ್ಕೆ ಬಂದಿದೆ ಎಂದರು. ಹಿಂದೆ ಹೀಗೆ ಅನುಭವ ಪಡೆಯಲು ಪ್ರಯತ್ನ ಮಾಡಿ ಜಯಶಾಲಿಗಳಾಗಿದ್ದವರು ಅನೇಕಾನೇಕರಿದ್ದರು. ಇಂದಿಗೂ ಅಂಥವರು ಇಲ್ಲದೆ ಹೋಗಿಲ್ಲ; ಮುಂದೆಯೂ ಇದ್ದೇ ಇರುತ್ತಾರೆ. ಮಾನವನನ್ನು ತೃಷೆಯು ಕಾಡುತ್ತದೆ. ಭಗವಂತನನ್ನು ಕುರಿತು ಧ್ಯಾನ ಮಾಡದೇ ಹೋದರೆ, ಆ ಆನಂದವನ್ನು ಪಡೆಯದಿದ್ದರೆ, ತನ್ನ ನಿಜಸ್ವರೂಪವಾದ ಆತ್ಮದ ಅರಿವನ್ನು ಪಡೆಯದೆ ಹೋದರೆ, ಅವನನನ್ನು ತೃಷೆಯು ಪೀಡಿಸುತ್ತಲೇ ಇರುತ್ತದೆ; ಅದು ಪೂರ್ಣತೆಯ ಕೊರತೆಯಿರುವ ಒಂದು ನೋವು.

ಮನುಷ್ಯನು ಮೊದಲು ಸತ್ಯವನ್ನು ಗ್ರಹಿಸಬೇಕು. ಈ ನಿಜವನ್ನು ಅವನು ಎಷ್ಟು ಬೇಗ ಗ್ರಹಿಸುವನೋ ಅಷ್ಟು ಬೇಗನೆ ಎಲ್ಲಾ ಧಾರ್ಮಿಕ ಸಂಘರ್ಷಗಳು, ಗುಂಪುಗಾರಿಕೆಗಳು ಮಾಯವಾಗುವುವು. ಏಕೆಂದರೆ ಯಾರು ಭಗವಂತನ ಅನುಭವವನ್ನು ಪಡೆದಿರುತ್ತಾರೆಯೋ ಅವನಿಗೆ ಮಾತ್ರವೇ 'ಧರ್ಮಜ್ಞ', 'ಆಸ್ತಿಕ' ಎಂಬ ಹೆಸರು ಸಲ್ಲುವುದು. ತಮ್ಮ ಹೃದಯದಲ್ಲಿ ಅವನ ಇರವನ್ನು ಗುರುತಿಸಿಕೊಂಡವರು ಮಾತ್ರವೇ ಜನನ ಮರಣ ಚಕ್ರಕ್ಕೆ ತಮ್ಮನ್ನು ಬಂಧಿಸಿರುವ ಸರಪಳಿಗಳನ್ನು ಕಳಚಿಕೊಳ್ಳುವರು. ಧರ್ಮದ ಮೂಲಕ ಸಾಧಿಸಿಕೊಳ್ಳಬೇಕಾಗಿರುವ ಸತ್ಯದ ಸಾಕ್ಷಾತ್ಕಾರವನ್ನು ವೇದಿಕೆಯ ಮೇಲಿನ ಭಾಷಣಗಳು ಸೂಚಿಸಲಾರವು.

ದೈವ ಶ್ರದ್ಧೆಯು ಪ್ರಾಮಾಣಿಕವಾದ ಅನುಭವದ ಮೇಲೆ ಆಧಾರಗೊಂಡಿದೆ. ಇದನ್ನು ನಾವು ಒಪ್ಪಿಕೊಂಡೆವೆಂದರೆ, ಸ್ವಯಂ ಪರೀಕ್ಷೆಯು ಪ್ರಾರಂಭವಾಗುತ್ತದೆ. ಗುರಿಯ ಕಡೆಗೋ ಅಥವಾ ಅದಕ್ಕೆ ವಿಮುಖವಾಗಿಯೋ ಎಷ್ಟು ದೂರ ಪ್ರಯಾಣ ಮಾಡಿ ಬಂದಿದ್ದೇನೆ ಎಂಬ ಅರಿವು ಅವನಿಗೆ ಆಗ ತೊಡಗುತ್ತದೆ. ತಾನಿನ್ನೂ ಕತ್ತಲಲ್ಲೇ ತಡಕಾಡುತ್ತಿದ್ದೇನೆ, ಇತರರನ್ನು ತನ್ನೊಂದಿಗೇ ಕತ್ತಲಲ್ಲಿ ತಡವರೊಸಲು ಸೆಳೆಯುತ್ತಿದ್ದೇನೆ ಎಂದು ತಿಳಿಯುತ್ತದೆ. ಆಗಲೀಗ ಮಾನವರು ಧಾರ್ಮಿಕ ಯುದ್ಧ ಎಂಬ ಹೆಸರಿನಲ್ಲಿ ಗುಂಪು ದ್ವೇಷವನ್ನು ತೊರೆಯುತ್ತಾರೆ. ಹಾಗೆ ಧರ್ಮಕ್ಕೆ ಸಂಬಂಧಿಸಿದ್ದೆಂದು ಹೇಳಿಕೊಳ್ಳುವ ಯುದ್ಧಗಳಲ್ಲಿ ನಿರತರಾದವರನ್ನು ಪ್ರಶ್ನಿಸಬೇಕು, "ನೀವು ದೇವರನ್ನು ನೋಡಿದ್ದೀರಾ? ದಿವ್ಯ ಆತ್ಮದ ಅರಿವು ನಿಮಗಿದೆಯೆ?

ಇಲ್ಲವಾದರೆ ಭಗವಂತನ ಹೆಸರನ್ನು ನಿರಾಕರಿಸಲು ನಿಮಗಾವ ಹಕ್ಕಿದೆ? ಅಧಿಕಾರ ವಿದೆ? ನನ್ನನ್ನು ಕತ್ತಲೆಗೆ ಎಳೆದು ನೀವೂ ಕತ್ತಲಲ್ಲಿ ಹೋರಾಡುತ್ತಿರುವಿರೇನು? ಒಬ್ಬ ಕುರುಡನು ಇನ್ನೊಬ್ಬ ಕುರುಡನಿಗೆ ದಾರಿ ತೋರಿಸಿಕೊಂಡು ಹೋಗಬಲ್ಲನೇನು? ಅದು ಅಸಾಧ್ಯವಾದ ಕೆಲಸ. ಆದ್ದರಿಂದ ನನ್ನ ಸತ್ಯವನ್ನು ನಿಂದಿಸುವುದಕ್ಕಿಂತ ನಿರಾಕರಿಸುವುದಕ್ಕಿಂತ ಮೊದಲು ನಿಮ್ಮ ಸತ್ಯವನ್ನು ಅರಿತುಕೊಳ್ಳಿರಿ."

ಅಧ್ಯಾಯ ೭

# ನೀವೇ ಆಗಿರಿ

ಸಮಸ್ತ ಜೀವಿಗಳ ಜೀವದುಸಿರಾದ ಆತ್ಮ ತತ್ತ್ವವನ್ನು ದರ್ಶನ ಮಾಡಿರುವವನು ಎಂದೂ ಯಾರ ಧರ್ಮವನ್ನೂ ನಿಂದಿಸುವುದಿಲ್ಲ. ಧಾರ್ಮಿಕ ಸಂಘರ್ಷದಲ್ಲಿ ಅವನು ಎಂದಿಗೂ ಕಾಲಿಡುವುದಿಲ್ಲ. ಇನ್ನೊಬ್ಬನ ನಂಬಿಕೆ, ಶ್ರದ್ಧೆಗಳನ್ನು ಕುರಿತು ಅವನು ಎಂದಿಗೂ ಲಘುವಾಗಿ ಮಾತನಾಡುವುದಿಲ್ಲ, ಅಥವಾ ಅಪಮಾನಕರವಾಗಿ ಆಡುವುದಿಲ್ಲ. ಇನ್ನೊಬ್ಬರ ವಿಶ್ವಾಸವನ್ನು ಕದಡುವುದಿಲ್ಲ. ಆಧ್ಯಾತ್ಮಿಕ ಅನುಭವವಿಲ್ಲದ ಅಜ್ಞಾನಿಗಳು, ಸತ್ಯದ ಆಳಗಳನ್ನು ಅರಿಯದವರು ಮಾತ್ರವೇ ಹಾಗೆ ಇತರರ ಧರ್ಮವನ್ನು ಹಳಿಯುವ ಮೂರ್ಖತನದಲ್ಲಿ ತೊಡಗುವರು. ಧಾರ್ಮಿಕ ಸಂಘರ್ಷಗಳಲ್ಲಿ ತೊಡಗುವುದು, ಇತರರು ಭಗವಂತನನ್ನು ಪೂಜಿಸಲು ಆಚರಿಸುವ ವಿವಿಧ ಆಚರಣೆಗಳನ್ನು, ಸಮಾರಂಭಗಳನ್ನು ಗೇಲಿ ಮಾಡುವುದು, ಇತರರ ಧಾರ್ಮಿಕ ಆಚರಣೆಗಳನ್ನು 'ಮೂಢನಂಬಿಕೆಗಳು' ಎಂದು ಹಣೆಪಟ್ಟಿ ಹಾಕಿ ತಿರಸ್ಕರಿಸುವುದು ಮನುಷ್ಯನಾದವನಿಗೆ ಸಲ್ಲದು. ಏಕೆಂದರೆ ಪ್ರತಿಯೊಬ್ಬನೂ ತನಗೆ ಬೇಕಾದ ಹಾಗೆ ಆಚರಣೆಗಳನ್ನು ಇಟ್ಟುಕೊಂಡಿರುತ್ತಾನೆ. ಅವುಗಳಿಂದ ಅವನಿಗೆ ಆನಂದವು ದೊರಕುತ್ತದಾದ್ದರಿಂದ ಆಚರಿಸುತ್ತಿರುತ್ತಾನೆ.

ಏಕೈಕ ವಸ್ತುವಾಗಿರುವ ಭಗವಂತನನ್ನು ಜ್ಞಾನಿಗಳು ಅನೇಕವಾಗಿ ವರ್ಣಿಸುತ್ತಾರೆ. ಅದೇ ಒಂದು ವಸ್ತುವನ್ನು ಬೇರೆ ಬೇರೆ ಜನರು ತಮ್ಮ ದೃಷ್ಟಿಕೋನ ಹಾಗೂ ತಮ್ಮ ಬುದ್ಧಿಯ, ಮತ್ತು ಅರಿವಿನ ಹಂತಗಳಿಗನುಗುಣವಾಗಿ ಬೇರೆ ಬೇರೆ ರೀತಿಗಳಲ್ಲಿ ನೋಡಿ ಅನುಭವಕ್ಕೆ ತಂದುಕೊಳ್ಳುತ್ತಾರೆ. ಅದೇ ವಸ್ತುವನ್ನು ಅಥವಾ ಅನುಭವವನ್ನು ಬೇರೆ ಬೇರೆ ಜನರು ಬೇರೆ ಬೇರೆ ರೀತಿಯಾಗಿ ವರ್ಣಿಸುತ್ತಾರೆ. ಅವರು ಹಾಗೆ ಮಾಡಕೂಡದೆಂದು ಆಜ್ಞಾಪಿಸಲು ಯಾರಿಗೆ ಅಧಿಕಾರವಿದೆ? ಅಥವಾ ಅವರು ವರ್ಣಿಸುತ್ತಿರುವುದು ತಪ್ಪು ಎಂದು ಘೋಷಿಸುವ ಶಕ್ತಿಯಿದೆ? ಯಾರಿಗೂ ಇತರರನ್ನು ಅಪಮಾನಿಸಲು, ಅವರ ಅನುಭವವನ್ನು ನಿರಾಕರಿಸಲು ಹಕ್ಕಿಲ್ಲ.

ಯಾರು ಇಹವನ್ನೂ ವರ್ತಮಾನ ಸ್ಥಿತಿಯನ್ನೂ ದಾಟಿ ಅತೀತವಾದ ಭಗವತ್ತತ್ವವನ್ನು ಅರಿಯಲು ಪ್ರಯತ್ನಿಸುವರೋ ಅವರು ಮಾತ್ರ ಹಿಂದೂ ಎಂಬ ಹೆಸರಿಗೆ

ಅರ್ಹರಾಗುತ್ತಾರೆ. ಇತರರನ್ನು ನೋಯಿಸುವ, ಅದರಲ್ಲಿ ಸಂತೋಷಪಡುವ ಜನರು ಆ ಹೆಸರಿಗೆ ತಕ್ಕವರಾಗುದಿಲ್ಲ.

ಭಾರತೀಯ ಸಂಸ್ಕೃತಿಯ ಒಳತಿರುಳು, ಪ್ರತಿಯೊಂದು ಹೃದಯವನ್ನೂ ವಿಶ್ವ ಪ್ರೇಮದಿಂದ ತುಂಬುವ ಈ ಆತ್ಮತತ್ತ್ವದ ಐಕ್ಯತೆಯ ಸಾಕ್ಷಾತ್ಕಾರವೇ ಆಗಿದೆ. ಯಾರು ಈ ಐಕ್ಯತೆಯನ್ನು ಅರಿತು ಅದನ್ನು ತಮ್ಮಲ್ಲಿ ನೆಲೆಗೊಳಿಸಿಕೊಂಡಿದ್ದಾರೆಯೋ ಅವರು ಭಾರತೀಯರ ಸಮೀಪ ಬಂಧುಗಳು, ಅವರು ಯಾವ ದೇಶದಲ್ಲೇ ವಾಸಮಾಡುತ್ತಿರಬಹುದು, ಯಾವುದೇ ಭಾಷೆಯನ್ನು ಆಡುತ್ತಿರಬಹುದು. ಮನುಷ್ಯನು ದ್ರವ್ಯದ ಒಂದು ಮೂಟೆ, ಈ ದ್ರವ್ಯವು ಭೌತವಿಜ್ಞಾನ ಮತ್ತು ರಸಾಯನ ವಿಜ್ಞಾನಗಳ ನಿಯಮಗಳಿಗೆ ಬದ್ಧವಾಗಿದೆ ಎಂಬ ಸಿದ್ಧಾಂತವನ್ನು ತಮ್ಮ ನಂಬಿಕೆಗಳಿಗೆ ಆಧಾರವಾಗಿಟ್ಟುಕೊಂಡಿರುವ ಅನೇಕ ಮಾನವ ಸಮುದಾಯಗಳಿವೆ. ಪಾಶ್ಚಾತ್ಯರ ಭಾಷೆಯಲ್ಲಿ ಮರಣವೆನ್ನುವುದು ಜೀವವನ್ನು ತೊರೆಯುವ ಕ್ರಿಯೆ. ಆದರೆ ಭಾರತೀಯರ ಪರಿಭಾಷೆಯಲ್ಲಿ ಅದು ದೇಹವನ್ನು ತ್ಯಜಿಸುವುದು. ಇದಕ್ಕೆ ಕಾರಣ ಪಾಶ್ಚಾತ್ಯನು ತಾನು ದೇಹವೆಂದು ನಂಬುವುದು, ಭಾರತೀಯನು ತಾನು ದೇಹವಲ್ಲ ಎಂದು ನಂಬುವುದು. ಭಾರತೀಯರು ತಮ್ಮ ನಿಜವು ಆತ್ಮವಾಗಿದೆ, ಅದು ಒಂದು ದೇಹದಲ್ಲಿ ಕೋಶಸ್ಥವಾಗಿದೆ ಎಂದು ತಿಳಿದುಕೊಂಡಿದ್ದಾರೆ ಮತ್ತು ಸಮರ್ಥಿಸುತ್ತಾರೆ. ಎರಡು ದೃಷ್ಟಿಗಳಿಗೂ ತುಂಬಾ ವ್ಯತ್ಯಾಸವಿದೆ. ಪ್ರಾಪಂಚಿಕ ಸುಖಭೋಗಗಳೆಂಬ ಜಾರುವ ಮರಳಿನ ಮೇಲೆ ಕಟ್ಟಿದ ನಾಗರಿಕತೆಯು ಬಹು ಸ್ವಲ್ಪ ಕಾಲ ಮಾತ್ರ ಉಳಿಯಬಲ್ಲುದು. ಬೇಗನೆ ಅದು ಭೂಮಿಯ ಮೇಲಿನಿಂದ ಮಾಯವಾಗುತ್ತದೆ. ಅದಕ್ಕೆ ಬದಲು, ಭಾರತದ ನಾಗರಿಕತೆಯೂ ಅದರ ಮೌಲಿಕತೆಯನ್ನು ಒಪ್ಪಿ ಅನುಸರಿಸಿದ ಇತರ ನಾಗರಿಕತೆಗಳೂ ಶತಶತಮಾನಗಳ ಕಾಲ ಉಳಿದು ಬಂದಿವೆ ಮತ್ತು ಇಂದಿಗೂ ಮಹತ್ವ ಪೂರ್ಣವಾಗಿವೆ. ಅವು ರಚನಾಶೀಲ ಜೀವನದ ನೂತನ ನವೋಲ್ಲಾಸವನ್ನು ಪ್ರಕಟಿಸುತ್ತವೆ. ಇತರ ನಾಗರಿಕತೆಗಳ ಮತ್ತು ಸಂಸ್ಕೃತಿಗಳ ಅನುಕರಣೆಯಲ್ಲಿ ತೊಡಗಿರುವ ಭಾರತೀಯರು ಈ ವಿಷಯವನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕು.

ಅನುಕರಣೆಯು ಸ್ಥಿರವಾದ ಒಂದು ಸಂಸ್ಕೃತಿಯನ್ನು ಕಟ್ಟಲಾರದು. ಅದೆಂದಿಗೂ ನಾಗರಿಕತೆಯಾಗಲಾರದು. ಅದು ಹೇಡಿತನದ ಕುರುಹೇ ಹೊರತು ಪ್ರಗತಿಯ ಭರವಸೆ ನೀಡುವ ಗುಣವಲ್ಲ. ಅದು ಅವನತಿಯ ಹೆದ್ದಾರಿ. ಮನುಷ್ಯನು ತನ್ನನ್ನೇ ದ್ವೇಷಿಸಿಕೊಂಡು ತನ್ನ ಸಾಧನೆಗಳನ್ನು ಕೀಳುಗೈದುಕೊಳ್ಳುತ್ತಿದ್ದರೆ ತನ್ನನ್ನು ಉದ್ಧರಿಸಬಲ್ಲ ಸ್ಫೂರ್ತಿಯನ್ನು ಪಡೆದುಕೊಳ್ಳುವುದು ಹೇಗೆ ಸಾಧ್ಯ? ತನ್ನನ್ನು ಪೋಷಿಸಿ ಬೆಳೆಸಿದ ಸಂಸ್ಕೃತಿಯನ್ನು ಕಟ್ಟಿದ ಪ್ರಾಚೀನರನ್ನು, ಗುರುಹಿರಿಯರನ್ನು

ಅವನು ನೆನದುಕೊಳ್ಳುವಾಗ ಭಾರತೀಯನು ಅಪಮಾನದ ಭಾವನೆಯನ್ನಿಟ್ಟು ಕೊಳ್ಳಕೂಡದು.

ಅದಕ್ಕೆ ಬದಲು, ಅವನು ತನ್ನ ಪ್ರಾಚೀನರು, ಹಿರಿಯರು, ಮತ್ತು ಗುರುಗಳ ಬಗೆಗೆ ಹೆಮ್ಮೆ ಪಡಬೇಕು. ಅಂತಹ ವ್ಯಕ್ತಿಗಳು ತನ್ನ ಪ್ರಾಚೀನರಾಗಿರುವುದಕ್ಕಾಗಿ, ತನ್ನ ದೇಶವು ಅಂತಹ ಪವಿತ್ರ ದೇಶವಾಗಿರುವುದಕ್ಕಾಗಿ, ಅಂತಹ ಪವಿತ್ರ ಲಕ್ಷಣಗಳಿಂದ ತನ್ನ ದೇಶವು ಅಲಂಕೃತವಾಗಿರುವುದಕ್ಕಾಗಿ ಅವನು ಹೆಮ್ಮೆಪಡಬೇಕು. ತಮ್ಮ ದೇಶದಲ್ಲಿ ಆತ್ಮ ಸಾಕ್ಷಾತ್ಕಾರವನ್ನು ಸಾಧಿಸಿಕೊಂಡ ಜ್ಞಾನಿಗಳು ಹುಟ್ಟಿದ್ದರು, ಪರಿಪೂರ್ಣತೆಯ ಶಿಖರಕ್ಕೇರಿದವರು ಇಲ್ಲಿದ್ದರು ಎಂಬುದನ್ನು ತುಂಬು ಗೌರವದಿಂದ ಹೆಮ್ಮೆಯಿಂದ ಭಾರತದ ಮಕ್ಕಳು ನೆನಯಬೇಕು, ತಮ್ಮ ಮನಸ್ಸಿನಲ್ಲಿ ಆ ಭಾವನೆಯನ್ನು ತುಂಬಿಕೊಂಡಿರಬೇಕು.

ಸ್ವತಃ ಪರಿಶ್ರಮದಲ್ಲಿ ಅಡಗಿರುವ ಶಕ್ತಿಯನ್ನು ಪ್ರಕಟಪಡಿಸಿರಿ! ಇತರರನ್ನು ಅನುಕರಿಸುವ ದುರ್ಬಲಕಾರ್ಯಕ್ಕೆ ಕೈ ಹಾಕಬೇಡಿ. ಅದಕ್ಕೆ ಬದಲು, ಇತರರಲ್ಲಿ ಇರಬಹುದಾದ ಉತ್ತಮ ಗುಣಗಳನ್ನು ಅರಗಿಸಿಕೊಳ್ಳಿ. ಒಂದು ಬೀಜವನ್ನು ಮಣ್ಣಿನಲ್ಲಿ ನೆಡುತೇವೆ. ಆಮೇಲೆ ಅದಕ್ಕೆ ಅಗತ್ಯವಾದ ನೀರು, ಗಾಳಿ, ಗೊಬ್ಬರ ಮೊದಲಾದ ವಸ್ತುಗಳನ್ನು ಕೊಡುತ್ತೇವೆ. ಬೀಜವು ಮೊಳೆಯುತ್ತದೆ, ಸಸಿಯಾಗುತ್ತದೆ, ಕೊನೆಗೆ ಬೃಹದಾಕಾರವಾದ ಮರವಾಗಿ ಬೆಳೆಯುತ್ತದೆ. ಬೀಜವು ಮಣ್ಣಾಗುವುದಿಲ್ಲ, ಗಾಳಿ, ಗೊಬ್ಬರ, ನೀರು ಆಗುವುದಿಲ್ಲ. ಅವುಗಳನ್ನು ಅದು ಬಳಸಿಕೊಳ್ಳುತ್ತದೆ, ಆದರೆ ತನ್ನದೇ ಸ್ವಭಾವಕ್ಕೆ ಅಂಟಿಕೊಂಡು ಮರವಾಗಿ ಬೆಳೆಯುತ್ತದೆ.

ನೀವೂ ಆ ಮರದ ಹಾಗೆಯೇ ಬದುಕಬೇಕು. ಇತರರಿಂದ ನಾವು ಕಲಿತುಕೊಳ್ಳಬೇಕಾದುದು ಬಹಳ ಇರುತ್ತದೆ ನಿಜ. ಅದರಲ್ಲಿ ಸಂದೇಹ ಪಡಬೇಕಾಗಿಲ್ಲ. ಹಾಗೆ ಒಳಿತನ್ನು ಕಲಿಯಲು ನಿರಾಕರಿಸುವವರು ಮೂರ್ಖರು. ಯಾವುದು ನಿಮ್ಮ ಆಧ್ಯಾತ್ಮಿಕ ಪ್ರಗತಿಗೆ ಪೋಷಕವಾಗುತ್ತದೆಯೋ ಅಂಥದನ್ನು ಇತರರಿಂದ ಕಲಿಯಬಹುದು. ನಿಮ್ಮದೇ ಧರ್ಮದಲ್ಲಿ ನಿಮ್ಮ ಪ್ರಗತಿಗಾಗಿ ಹಾಕಿಕೊಟ್ಟಿರುವ ದಾರಿಯಲ್ಲಿಯೇ ಅವುಗಳ ಪ್ರಕಾರವೇ ಆ ವಿಚಾರಗಳನ್ನು ಪೂರ್ತಿಯಾಗಿ ಅರಗಿಸಿಕೊಳ್ಳಿ. ನೀವು ನೀವಾಗಿ ಬದುಕಬೇಕೇ ಹೊರತು ಬೇರೆ ಯಾರೋ ಆಗಿ ಅಲ್ಲ. ನಿಮ್ಮ ಸಹಜ ಸ್ವರೂಪದಿಂದ ನಿಮ್ಮನ್ನು ಬೇರೆ ಕಡೆ ಸೆಳೆಯಲು ಯಾರಿಗೂ ಅವಕಾಶ ಕೊಡಬೇಡಿ. ನಿಮ್ಮ ಭಗವಂತ, ನಿಮ್ಮ ಕಲ್ಪನೆಗಳು ಮತ್ತು ಭಾವನೆಗಳು, ನಿಮ್ಮದೇ ಹೃದಯದಿಂದ ಹೊಮ್ಮಿ ಬರುವ ಆನಂದ, ನಿಮ್ಮ ಸಾಧನೆಯಿಂದ ದೊರಕುವ ಸಂತೋಷ ಇವುಗಳಲ್ಲಿ ಮುಳುಗಿರಿ. ಇದನ್ನು ಮಾಡಲು ಯಾರಾದರೂ ನಿಮ್ಮನ್ನು

ತಡೆದರೆ, ನಿಮ್ಮನ್ನು ಈ ಪ್ರಯತ್ನದಿಂದ ವಿಮುಖರನ್ನಾಗಿಸಲು ಯಾವುದೇ ಹೂಟವನ್ನು ಹಂಚಿಕೆಯನ್ನು ಒಡ್ಡಿದರೆ ನಿಮ್ಮ ಜೀವವನ್ನೇ ಪಣವಾಗಿಟ್ಟಾದರೂ ಅದನ್ನು ಪ್ರತಿಭಟಿಸಿ. ದೈವ ಸಾಕ್ಷಾತ್ಕಾರ, ದಿವ್ಯಾನಂದ ಇವುಗಳಿಂದ ನಿಮ್ಮನ್ನು ಎಂದಿಗೂ ವಂಚಿತರನ್ನಾಗಿ ಮಾಡಿಕೊಳ್ಳಬೇಡಿ. ಭಾರತೀಯರ ಪರಮಾರ್ಥವಾಹಿನಿಯು ನಿರಂತರವಾಗಿ ಪ್ರತಿಧ್ವನಿಸುತ್ತಿರುವ ಕರೆ ಇದು. ಅತ್ಯಂತ ಮಧುರವಾದ, ಬಲ ಕೊಡುವ ಈ ನಾಡಿನ ಸಂಸ್ಕೃತಿವಾಹಿನಿಯ ಸರಾಗವಾದ ಹರಿವಿಗೆ ತಡೆಯಾಗಿ ನಿಂತಿರುವ ಅಡ್ಡಿಗಳನ್ನು ಕೆಡವಿಹಾಕಿರಿ. ಅದು ಹರಿಯುವ, ಹರಿದು ಶುದ್ಧಗೊಳಿಸುವ ಕಾಲುವೆಗಳನ್ನು ಸ್ವಚ್ಚಗೊಳಿಸಿ, ಹರಿವಿಗೆ ತಡೆಯಿಲ್ಲದ ಹಾಗೆ ಮಾಡಿ. ಆಗ ಅದು ತನ್ನ ಪಾತ್ರದಲ್ಲಿ ಸರಾಗವಾಗಿ ಹರಿಯುತ್ತದೆ.

ಭಾರತ ದೇಶವು ಈ ಸಾಧನೆಯನ್ನು ಕೈಗೆತ್ತಿಕೊಳ್ಳಬೇಕೆಂಬುದು ಸಾಯಿ ಸಂಕಲ್ಪವಾಗಿದೆ. ಬಹಳ ಕಾಲದಿಂದ ಈ ದೇಶದ ಆಸ್ತಿಕ ಧರ್ಮವು ಚಲನೆಯಿಲ್ಲದೆ ನಿಂತುಹೋಗಿದೆ. ಎಷ್ಟೋ ಕಾಲದಿಂದ ಜಡವಾಗಿ ನಿಂತುಬಿಟ್ಟಿರುವುದೇ ಅದರ ಲಕ್ಷಣವಾಗಿದೆ. ಈಗ ಅದನ್ನು ಮತ್ತೆ ಚಲನಶೀಲವಾಗಿಸಬೇಕಾಗಿದೆ. ಅದು ಪ್ರತಿಯೊಬ್ಬ ಮಾನವ ಜೀವಿಯ ದೈನಂದಿನ ಜೀವನಕ್ಕೆ ಉಸಿರು ತುಂಬಬೇಕು. ಅದು ಈ ನಾಡಿನ ರಾಜಭವನಗಳನ್ನೂ ಕಡುಬಡವರ ಗುಡಿಸಲುಗಳನ್ನೂ ಪ್ರವೇಶಿಸಿ ಅಲ್ಲಿ ಫಲಪ್ರದವಾಗಬೇಕು.

ಅದು ಪ್ರತಿಯೊಬ್ಬರಿಗೂ ಸೇರಿದ ಸಂಪತ್ತು; ಅದನ್ನು ಬಳುವಳಿಯಾಗಿ ಪಡೆದು ಪ್ರಯೋಜನ ಹೊಂದಲು ಪ್ರತಿಯೊಬ್ಬರಿಗೂ ಹಕ್ಕಿದೆ. ಮಾನವನಾಗಿ ಜನಿಸಿರುವುದರಿಂದ ಅದನ್ನು ಹಂಚಿಕೊಳ್ಳಲು ಅವನಿಗೆ ಅಧಿಕಾರವಿದೆ. ಆದ ಕಾರಣ, ಭಾರತೀಯರು ಅದನ್ನು ಪ್ರತಿಯೊಂದು ಮನೆಬಾಗಿಲಿಗೂ ಒಯ್ಯಬೇಕು, ಪ್ರತಿಯೊಂದು ಮನೆಯ ಪ್ರತಿಯೊಬ್ಬ ಸದಸ್ಯನೂ ಅದನ್ನು ಹಂಚಿಕೊಳ್ಳಲು ಸ್ವಾಗತಿಸಬೇಕು. ಭಗವಂತನ ಸೃಷ್ಟಿಯಲ್ಲಿ ನಾವು ಉಸಿರಾಡುವ ಗಾಳಿಯು ಎಲ್ಲರಿಗೂ ಅನಿರ್ಬಂಧಿತವಾಗಿ ಧಾರಾಳವಾಗಿ ದೊರಕುವ ಹಾಗೆ ಭಗವದರಿವಿನ, ಅವನ ಶಕ್ತಿ, ಕರುಣೆಗಳ ಧರ್ಮವು ಎಲ್ಲರಿಗೂ ದೊರಕಬೇಕು. ಭಾರತೀಯರು ಈ ವ್ಯಾಪಕ ದೃಷ್ಟಿಯನ್ನು, ಈ ಸಂದೇಶದ ಸಾರ್ವತ್ರಿಕತೆ ಮತ್ತು ಐಕ್ಯತೆಗಳನ್ನು ಅನುಸರಿಸಬೇಕು. ಆಗ ಬೇರೆ ಬೇರೆ ಮತಗಳ, ನಂಬಿಕೆಗಳ ನಡುವೆ ಸಂಘರ್ಷವು ಮಾಯವಾಗಿ ಶಾಂತಿ ಮತ್ತು ಪ್ರೇಮಗಳು ಭೂಮಿಯ ಮೇಲೆ ನೆಲೆಗೊಳ್ಳುತ್ತವೆ.

ಶತಮಾನಗಳಿಂದ ಕತ್ತಲು ತುಂಬಿರುವ ಒಂದು ಮನೆಯನ್ನು ಕಲ್ಪಿಸಿಕೊಳ್ಳಿ. ನೀವು ಆ ಮನೆಯನ್ನು ಪ್ರವೇಶಿಸಿ, ಅಲ್ಲಿಂದ ಹೊರಟುಹೋಗುವಂತೆ ಕತ್ತಲೆಯನ್ನು

ಪ್ರಾರ್ಥಿಸಬಹುದು; ಅಥವಾ ದಿನಗಟ್ಟಲೆ ಕತ್ತಲೆಯನ್ನು ನಿಂದಿಸುತ್ತಾ ಕಳೆಯ ಬಹುದು; ಅಥವಾ ಅದನ್ನು ಹೆದರಿಸಬಹುದು. ಆದರೂ ಕತ್ತಲು ಉಳಿದೇ ಇರುತ್ತದೆ, ಕಡಮೆಯಾಗುವುದಿಲ್ಲ. ನಿಮ್ಮ ಹಂಚಿಕೆಗಳಿಗೆ ಅದು ಮಣಿಯುವುದಿಲ್ಲ, ಅದನ್ನು ಹೆದರಿಸಿ ತೊಲಗಿಸಲು ಸಾಧ್ಯವಾಗುವುದಿಲ್ಲ. ಆದರೆ ಅಲ್ಲೊಂದು ದೀಪವನ್ನು ಹಚ್ಚಿರಿ, ಆ ಕ್ಷಣವೇ ಕತ್ತಲೆಯು ಅಲ್ಲಿಂದ ಹಾರಿ ಹೋಗುತ್ತದೆ. ಜ್ಞಾನದ ಬೆಳಕು ಮಾನವನನ್ನು ಯುಗಾಂತರಗಳ ಕತ್ತಲೆಯಿಂದ ರಕ್ಷಿಸಬಲ್ಲುದು. ಈ ಸತ್ಯವನ್ನು ಮನುಷ್ಯನು ಚೆನ್ನಾಗಿ ಗುರುತಿಸಬೇಕು, ಗುರುತಿಸಿ ಅದಕ್ಕೆ ತಕ್ಕಂತೆ ತನ್ನ ಬದುಕನ್ನು ರೂಪಿಸಿಕೊಳ್ಳಬೇಕು.

ಮನುಷ್ಯನಲ್ಲಿ ಒಂದು ಮಹತ್ತಿದೆ; ಇದು ಭಾರತೀಯ ಚಿಂತನೆಯ ತಿರುಳು. ಹೇಗೆ ಅವನು ಅವನತ, ಪತಿತ ಎಂದು ತನ್ನನ್ನು ಪರಿಗಣಿಸಿಕೊಂಡನೆಂಬುದೇ ಒಂದು ಆಶ್ಚರ್ಯ. ಒಬ್ಬ ವ್ಯಕ್ತಿಯು ನಮಗೆ ದೈವವಾಗಿ ಕಾಣಬಹುದು, ಇಲ್ಲವೆ ರಾಕ್ಷಸನಂತೆ ತೋರಬಹುದು. ಇಬ್ಬರಲ್ಲೂ ಅದೇ ಆತ್ಮವೇ ಇದೆ, ಅಷ್ಟೇ ಮಟ್ಟಿಗಿದೆ. ಒಬ್ಬನಲ್ಲಿರುವ ಆತ್ಮವು ಕಡಮೆ ಇನ್ನೊಬ್ಬನಲ್ಲಿರುವುದು ಹೆಚ್ಚು ಎಂದು ಹೇಳುವಂತಿಲ್ಲ. ಯಾರಲ್ಲಾದರೂ ತಪ್ಪುಗಳು ಕಂಡುಬಂದರೆ, ಅವು ನಡವಳಿಕೆಯ ಲ್ಲಿನ ಕೊರತೆಗಳು ಎಂದು ನಿರ್ಣಯಿಸಬೇಕು ಅಷ್ಟೆ. ಅಂಥವನಲ್ಲಿ ದಿವ್ಯ ಆತ್ಮವೇ ಇಲ್ಲ ಎಂಬ ನಿರ್ಧಾರಕ್ಕೆ ಬರಬೇಡಿ. ಅವನಿಗಿರುವ ಸಹವಾಸದಿಂದಲೋ ಅವನು ಬೆಳೆದು ಬಂದಿರುವ ಸಮಾಜದ ಅಪರಿಪೂರ್ಣತೆಯಿಂದಾಗಿಯೋ ಅವನಲ್ಲಿ ಹಾಗೆ ದೋಷಪೂರ್ಣ ನಡವಳಿಕೆಗಳು ಬೆಳೆದಿವೆ. ಅವು ಅವನ ಸ್ವಭಾವವಲ್ಲ; ಅವನ ನಿಜ ಸ್ವಭಾವ ಆತ್ಮವಾಗಿದೆ. ಅವನಿಗೆ ಒಳ್ಳೆಯ ಸಹವಾಸವನ್ನೂ ಪ್ರಯೋಜನಕಾ ರಿಯಾದ ಸನ್ನಿವೇಶಗಳನ್ನೂ ಒದಗಿಸಿ, ಅವನು ಅವುಗಳನ್ನು ಪ್ರವೇಶಿಸುವಂತೆ ಒಲಿಸಬೇಕು. ಯಾವುದೇ ಕಾರಣದಿಂದ ಹುಟ್ಟಾ ಮೂರ್ಖ, ತಿದ್ದಲಸಾಧ್ಯನು ಎಂದು ಹಳಿದು ಅವನನ್ನು ಪ್ರತ್ಯೇಕವಾಗಿ ಬಿಡಬಾರದು.

ದೇಹವು ಜೀವಕೋಶಗಳಿಂದಾಗಿದೆ, ಅವು ಪರಮಾಣುಗಳಿಂದಾಗಿವೆ. ಪರಮಾಣು ಗಳೂ ಭೌತಿಕವಾದವೇ. ಅವು ಮೂಲಭೂತವಾಗಿ ಜಡ, ಭಾವನೆ, ಸಂವೇದನೆ ಇಲ್ಲದವು. ವೇದಾಂತಿಗಳು ಈ ಸ್ಥೂಲದೇಹವಲ್ಲದ ಇನ್ನೊಂದು ಸೂಕ್ಷ್ಮದೇಹವನ್ನು ಹೇಳುತ್ತಾರೆ. ಅದೂ ಭೌತಿಕವಾದದ್ದೇ. ಸೂಕ್ಷ್ಮಾತಿಸೂಕ್ಷ್ಮ ಕೌಶಲಗಳು ಮತ್ತು ಶಕ್ತಿಯ ಕೇಂದ್ರ ಅದು. ಎಲ್ಲಾ ಬಗೆಯ ಸೂಕ್ಷ್ಮವಾದ ಮಾನಸಿಕ ಭಾವನೆಗಳು, ಆಂದೋಳನಗಳು ಸಂಭವಿಸುವುದು ಇಲ್ಲಿಯೇ. ಪ್ರತಿಯೊಂದು ಶಕ್ತಿಯೂ ಯಾವುದೋ ಒಂದು ಭೌತಿಕಮಾಧ್ಯಮದ ಮೂಲಕ ಮಾತ್ರ ಕೆಲಸ ಮಾಡಬಲ್ಲದು. ಸ್ಥೂಲದೇಹದಲ್ಲಿ ಪ್ರವರ್ತಿಸುವ ಶಕ್ತಿಯೇ ಆಲೋಚನೆಯ ಸೂಕ್ಷ್ಮಪ್ರಕ್ರಿಯೆಗಳ

ಮೂಲಕವೂ ವರ್ತಿಸುತ್ತದೆ. ಅವೆರಡೂ ಬೇರೆ ಬೇರೆಯಾದ ವಸ್ತುಗಳಲ್ಲ. ಒಂದು ಇನ್ನೊಂದರ ಸೂಕ್ಷ್ಮರೂಪ ಅಷ್ಟೆ.

ಈ ಶಕ್ತಿಗಳ ಮೂಲ ಯಾವುದು? ಆಳವಾಗಿ ವಿಚಾರ ಮಾಡಿ ನೋಡಿದಾಗ ನಿಸರ್ಗದಲ್ಲಿ ಎರಡು ವಸ್ತುಗಳಿರುವುದು ಕಂಡುಬರುತ್ತದೆ, ಆಕಾಶ ಮತ್ತು ಪ್ರಾಣ. ಸಮಸ್ತ ಸ್ಥೂಲ ಹಾಗೂ ಸೂಕ್ಷ್ಮ ದ್ರವ್ಯಗಳೆಲ್ಲದರ ಮೂಲವು ಆಕಾಶವೇ ಆಗಿದೆ; ಪ್ರಾಣ ಅಥವಾ ಜೀವಶಕ್ತಿಯು ಅದನ್ನು ಸಂಪರ್ಕಿಸಿದಾಗ, ಆ ಪ್ರಭಾವದಿಂದ ಆಕಾಶ ತತ್ತ್ವವು ಬೇರೆ ಬೇರೆ ಪ್ರಮಾಣದ ಸ್ಥೂಲ ಅಥವಾ ಸೂಕ್ಷ್ಮವಸ್ತುಗಳಾಗಿ ಪರಿವರ್ತಿತವಾಗುತ್ತದೆ. ಪ್ರಾಣವು ಆಕಾಶದಂತೆಯೇ ಸರ್ವವ್ಯಾಪಿ. ಅದೂ ಎಲ್ಲಿ ಬೇಕಾದರೂ ಯಾವುದನ್ನು ಬೇಕಾದರೂ ಪ್ರವೇಶಿಸಬಲ್ಲುದು. ನೀರು ಹಿಮಗಡ್ಡೆ ಯಾಗಿ, ಅದು ನೀರಿನ ಮೇಲೆಯೇ ತೇಲುತ್ತಾ ನೀರಿನೊಂದಿಗೇ ಚಲಿಸುವಂತೆ ಪ್ರಾಣವು ಆಕಾಶದ ಮೇಲೆ ವರ್ತಿಸುವುದರಿಂದ ದೇಹಗಳು ರೂಪುಗೊಳ್ಳುತ್ತವೆ. ಆಕಾಶವನ್ನು ಬೇರೆ ಬೇರೆ ಆಕೃತಿಗಳಾಗಿ ರೂಪಿಸುವ ಶಕ್ತಿ ಪ್ರಾಣವೇ. ಸ್ಥೂಲದೇಹವು ಪ್ರಾಣದ ವಾಹಕ. ಅದು ಆಕಾಶದಿಂದ ರೂಪಿತವಾಗಿದೆ. ಸೂಕ್ಷ್ಮದೇಹವು ಆಲೋ ಚನೆ, ಭಾವನೆ ಮೊದಲಾದವುಗಳ ರೂಪದಲ್ಲಿರುತ್ತದೆ.

ಸೂಕ್ಷ್ಮ ದೇಹಕ್ಕಿಂತಲೂ ಮೇಲೆ ಏರಿದಾಗ, ಸತ್ಯದ ಅರಿವು ಪ್ರಕಾಶಕ್ಕೆ ಬರುತ್ತದೆ. ನಾವು ಎಷ್ಟೇ ಕತ್ತರಿಸುತ್ತಿದ್ದರೂ ಬೆರಳುಗಳ ತುದಿಯಲ್ಲಿ ಉಗುರು ಬೆಳೆಯುತ್ತಲೇ ಇರುವಂತೆ, ನಮ್ಮ ಸ್ಥೂಲದೇಹದ ಒಂದು ಭಾಗವಾಗಿರುವಂತೆ ಸೂಕ್ಷ್ಮದೇಹವು ಕೂಡ ಮಾನವ ರಚನೆಯಲ್ಲಿ ಅಂತರ್ಗವಾಗಿರುವ ಒಂದು ಅಂಗ.

ಅಧ್ಯಾಯ ೮

# ಬಂಧನ

ಮನುಷ್ಯನು ಅನೇಕಾನೇಕಸಾರಿ ಉಗುರು ಕತ್ತರಿಸುವಂತೆಯೇ ಅನೇಕಾನೇಕ ಸ್ಥೂಲ ದೇಹಗಳನ್ನು ಪರಿತ್ಯಜಿಸಬಹುದು. ಆದರೆ ಸೂಕ್ಷ್ಮ ದೇಹವನ್ನು ಹಾಗೆ ಬದಲಾಯಿಸಲು ಸಾಧ್ಯವಿಲ್ಲ; ಅದು ಹಾಗೆಯೇ ಉಳಿಯುತ್ತದೆ. ಇದು ಭಾರತೀಯ ಆಧ್ಯಾತ್ಮ ಚಿಂತನೆಯ ಒಂದು ಅತಿ ಮುಖ್ಯ ರಹಸ್ಯ. ಇದೇ ಸಂಶೋಧನೆಯ ಸರಣಿಯನ್ನು ಮುಂದುವರಿಸಿ ಹೀಗೆ ಹೇಳಬಹುದು. ಮನುಷ್ಯ ಎಂದರೆ, ಸ್ಥೂಲ ದೇಹ, ಸೂಕ್ಷ್ಮ ದೇಹ ಮತ್ತು ಜೀವಿಗಳ ಸಂಕೀರ್ಣ. ವೇದಾಂತ ದರ್ಶನವು ಹೇಳುವಂತೆ ಜೀವಿಯು ಪರಿವರ್ತನರಹಿತ ಶಾಶ್ವತತೆ (ನಿತ್ಯ) ಎಂಬ ಗುಣವನ್ನು ಹಂಚಿಕೊಳ್ಳುತ್ತದೆ. ಪ್ರಕೃತಿ ಅಥವಾ ವಸ್ತುನಿಷ್ಠ ಜಗತ್ತೂ ನಿತ್ಯವೇ. ಆದರೆ ಒಂದು ವ್ಯತ್ಯಾಸವಿದೆ. ಅದು ನಿರಂತರವಾಗಿ ಪರಿವರ್ತನೆ ಹೊಂದುತ್ತಿರುತ್ತದೆ. ಯಾವುದೇ ಸಮಯದಲ್ಲಿ ಅದು ಹಿಂದಿನದೇ ಆಗಿರುವುದಿಲ್ಲ, ಆದರೂ ಅದು ಶಾಶ್ವತವಾಗಿರುತ್ತದೆ. ವಸ್ತು ಜಗತ್ತಿಗೆ ಆಧಾರವಾದ ಪ್ರಾಣ ಮತ್ತು ಆಕಾಶ ನಿತ್ಯವಾದವು. ಅವು ವಿಶ್ರಾಂತಿಯೇ ಇಲ್ಲದೆ ಕ್ರಿಯೆ ಮತ್ತು ಪ್ರತಿಕ್ರಿಯೆಗಳಲ್ಲಿ ನಿರತವಾಗಿರುತ್ತದೆ; ಅಸಂಖ್ಯಾತ ವಿಧವಾಗಿ ಪ್ರಕಟವಾಗುತ್ತವೆ.

ವ್ಯಕ್ತಿಗತ ಆತ್ಮವು (ಜೀವಾತ್ಮ) ಆಕಾಶದಿಂದಾಗಲಿ, ಪ್ರಾಣದಿಂದಾಗಲಿ ಹುಟ್ಟಲಿಲ್ಲ. ಅದು ಸ್ವರೂಪದಲ್ಲಿ ಭೌತಿಕವಲ್ಲ. ಆದ್ದರಿಂದ ಅದು ನಿತ್ಯ ಹಾಗೂ ಪರಿವರ್ತನ ರಹಿತ. ಅದು ಆಕಾಶದ ಮೇಲೆ ಪ್ರಾಣದ ಪ್ರಭಾವದಿಂದಾಗಲಿ, ಪ್ರಾಣದ ಮೇಲೆ ಆಕಾಶದ ಪ್ರಭಾವದಿಂದಾಗಲಿ ಹುಟ್ಟಲಿಲ್ಲ. ಒಟ್ಟಿಗೆ ಕೂಡಿಸಿದ ವಸ್ತುಗಳು ಕಾಲಕ್ರಮದಲ್ಲಿ ಬೇರ್ಪಟ್ಟು ಕ್ಷಯಿಸುತ್ತವೆ. ಪ್ರಾರಂಭದಿಂದಲೂ 'ತಾವೇ' ಆಗಿರುವ ವಸ್ತುಗಳು ಹಾಗೆ ಬೇರ್ಪಡುವುದಿಲ್ಲ. ಏಕೆಂದರೆ ಕ್ಷಯಿಸುವುದೆಂದರೆ 'ಮೊದಲಿನ ಸ್ವರೂಪವನ್ನು ಪಡೆಯುವುದು' ಎಂದರ್ಥ, 'ಮೊದಲು ಏನಾಗಿತ್ತೋ ಆ ಸ್ಥಿತಿಗೆ ಸಂಕೋಚನಗೊಳ್ಳುವುದು'. ಸ್ಥೂಲ ದೇಹವು ಪ್ರಾಣ ಮತ್ತು ಆಕಾಶಗಳ ಸಮ್ಮಿಶ್ರಣದ ಫಲ. ಆದ್ದರಿಂದ ತನ್ನ ಅಂಗಾಂಶಗಳಾಗಿ ಅದು ಕರಗಿ ಹೋಗುತ್ತದೆ. ಸೂಕ್ಷ್ಮ ದೇಹವು ಕರಗುತ್ತದೆ, ಆದರೆ ಬಹು ದೀರ್ಘಕಾಲದ ಅನಂತರ, ಯಾವುದೇ ವಸ್ತುಗಳನ್ನು ಒಂದುಗೂಡಿಸಿ ಆತ್ಮವನ್ನು ಸೃಷ್ಟಿಸಿಲ್ಲವಾದುದರಿಂದ ಅದು ಹಾಗೆ

ಒಡೆಯುವುದಿಲ್ಲ. ಅದಕ್ಕೆ ಜನನವಿಲ್ಲ, ಅದು ಹುಟ್ಟಲಾರದು. ಭಾಗರಹಿತವಾದ ಅಖಂಡ ಏಕಕ್ಕೆ ಜನನದ ಕ್ಷಣ ಎಂಬುದಿಲ್ಲ.

ವಿಧವಿಧವಾದ ಕೋಟ್ಯಂತರ ವಸ್ತುಗಳನ್ನೂ ಶಕ್ತಿಗಳನ್ನೂ ಘಟನೆಗಳನ್ನೂ ಒಳಗೊಂಡಿರುವ ಈ ವಸ್ತು ಜಗತ್ತು ಅಥವ ಪ್ರಕೃತಿಯು ಭಗವದಿಚ್ಛೆಯಂತೆ ಆಳಲ್ಪಡುತ್ತದೆ. ಭಗವಂತನು ಸರ್ವಜ್ಞ, ಸರ್ವವ್ಯಾಪಕ, ಸರ್ವಾಂತರ್ಯಾಮಿ; ಅವನು ಪ್ರಕೃತಿಯನ್ನು ಚಾಲನೆಗೊಳಿಸುತ್ತಾ ಸದಾ ಕಾಲವೂ ಪ್ರಕೃತಿಯ ಮೂಲಕವೇ ಪ್ರವರ್ತಿಸುತ್ತಿರುತ್ತಾನೆ. ಪ್ರಕೃತಿಯು ಎಂದಿಗೂ ಅವನ ಅಂಕೆಯಲ್ಲಿರುತ್ತದೆ. ಅವನ ಪ್ರಭುತ್ವವೆನ್ನುವುದು ಅನಾದಿ ಮತ್ತು ಅನಂತ. ಇದು ದ್ವೈತ ಸಿದ್ಧಾಂತ.

ಇದು ಒಂದು ಪ್ರಶ್ನೆಗೆ ಎಡೆಗೊಡುತ್ತದೆ. ಈ ಜಗತ್ತನ್ನು ಭಗವಂತನೇ ಆಳುತ್ತಿರುವಾಗ ಅದು ಇಷ್ಟೊಂದು ಕುಟಿಲತೆ, ವಂಚನೆಗಳಿಂದ ತುಂಬಿರಲು ಹೇಗೆ ಅವಕಾಶ ಕೊಟ್ಟಿದ್ದಾನೆ? ಇದಕ್ಕೆ ಕೊಟ್ಟಿರುವ ಉತ್ತರವಾದರೂ ಹೀಗೆ: ದುಃಖಕ್ಕಾಗಲಿ ಯಾತನೆಗಾಗಲಿ ಭಗವಂತ ಹೊಣೆಯಲ್ಲ. ನಾವು ಮಾಡುವ ಪಾಪಕಾರ್ಯಗಳೇ ನಾವು ಅನುಭವಿಸುವ ದುಃಖವನ್ನು ಉತ್ಪತ್ತಿ ಮಾಡುವಂಥವು. ಮಾನವನು ಎಸಗುವ ಒಳಿತು ಕೆಡುಕುಗಳ ಪರಿಣಾಮಗಳೇ ಸಂತೋಷ ಮತ್ತು ದುಃಖಗಳು. ಭಗವಂತನು ಕೇವಲ ಸಾಕ್ಷಿಯಾಗಿದ್ದಾನೆ; ಅವನು ಶಿಕ್ಷಿಸುವುದಿಲ್ಲ, ದುಃಖಕ್ಕೆ ಕಾರಣನಾಗುವುದೂ ಇಲ್ಲ. ಜೀವಿಯು ಆದಿಯಿಲ್ಲದ್ದು. ಅಂದರೆ ಅವನು ಜನನವಿಲ್ಲದವನು. ಆದರೂ ನಿರಂತರ ಚಟುವಟಿಕೆಯಲ್ಲಿ ತೊಡಗಿರುತ್ತಾನೆ. ಆದ್ದರಿಂದಾಗಿ ಆ ಚಟುವಟಿಕೆಯ ಅನಿವಾರ್ಯ ಪರಿಣಾಮಗಳನ್ನು ಅವನು ಅನುಭವಿಸಲೇಬೇಕಾಗುತ್ತದೆ. ಇದು ಪ್ರತಿಯೊಬ್ಬರ ಅನುಭವ, ಪ್ರತಿಯೊಬ್ಬರ ಮನಸ್ಸಿನ ಲಕ್ಷಣ. ಇದು ವಸ್ತು ಜಗತ್ತಿನ ಅಥವಾ ಪ್ರಕೃತಿಯ ಅಭೇದ್ಯ ನಿಯಮ. ದುಃಖವಾಗಲಿ ಸಂತೋಷವಾಗಲಿ ವ್ಯಕ್ತಿಯು ತೊಡಗಿದ ಕಾರ್ಯದ ಪ್ರತಿಬಿಂಬ. ಅದು ಪ್ರತಿಧ್ವನಿ, ಪ್ರತಿಬಿಂಬ, ಪ್ರತಿಕ್ರಿಯೆ. ಜೀವಿಯು ಚಟುವಟಿಕೆಯ ಒಳಿತಿನಲ್ಲಾಗಲಿ ಕೆಡುಕಿನಲ್ಲಾಗಲಿ ತೊಡರಿಕೊಳ್ಳದೆ ಕೇವಲ ಸಾಕ್ಷಿಯಾಗಿ ಇರಬಹುದು. ತೊಡಗಿಕೊಂಡ ಕೂಡಲೆ ಒಳ್ಳೆಯದು ಮಾಡಿದಾಗ ಒಳ್ಳೆಯ, ಕೆಟ್ಟದ್ದನ್ನು ಮಾಡಿದಾಗ ಕೆಟ್ಟ ಫಲವನ್ನು ಅನುಭವಿಸುವ ಅನಿವಾರ್ಯತೆ ಬರುತ್ತದೆ.

ಜೀವಿಯು ಸ್ವಭಾವತಃ ಪರಿಶುದ್ಧ ಮತ್ತು ಕಳಂಕರಹಿತ ಎಂದು ವೇದಾಂತವು ಸ್ಥಿರೀಕರಿಸುತ್ತದೆ. ಭಾರತೀಯ ಚಿಂತನೆಯಲ್ಲಿ ಅಂಗೀಕೃತವಾಗಿರುವ ಸಿದ್ಧಾಂತವಿದು. ಆದರೆ ಈ ಸತ್ಯಕ್ಕೆ ಅಜ್ಞಾನ ಮತ್ತು ಔದಾಸೀನ್ಯಗಳ ಕಾವಳ ಮುಸುಕಿದೆ. ಅದರಿಂದಾಗಿ ಮಾಯೆಯು ಅನುಭವವನ್ನು, ಅಥವಾ ಉಪಯುಕ್ತವಾದ ಕಾರ್ಯ

ವನ್ನು ಮಾಡುವಾಗ ಮಾಯೆಯ ಮೋಡಗಳು ಹರಿದುಹೋಗುತ್ತವೆ, ಆತ್ಮದ ನಿಜವು ಸಾಕ್ಷಾತ್ಕಾರವಾಗುತ್ತದೆ. ಎಲ್ಲ ಜೀವಿಗಳೂ ಸ್ವಭಾವತಃ ನಿರ್ಮಲವಾದವೇ. ಸತ್ಕರ್ಮಗಳು ದುಷ್ಕರ್ಮಗಳ ಕಲೆಗಳನ್ನು ತೆಗೆದು ಹಾಕಿ ಅದರ ಮೂಲ ನೈರ್ಮಲ್ಯ ವನ್ನು ಕಾಪಾಡುತ್ತವೆ. ಆಗ ಜೀವಿಯು ಭಗವಂತನ ಕಡೆಗೆ ಪಯಣ, ದೇವಯಾನ ವನ್ನು, ಕೈಗೊಳ್ಳುತ್ತಾನೆ. ಭಗವನ್ಮುಖವಾದ ಪ್ರೇರಣೆಯು ವ್ಯಕ್ತಿಯ ಮಾತು, ಆಲೋಚನೆ ಮತ್ತು ಕೃತಿಗಳನ್ನು ಪರಿವರ್ತನೆಗೊಳಿಸುತ್ತದೆ.

ನಾವು ಪದಗಳಿಲ್ಲದೆ ಆಲೋಚಿಸಲಾರೆವು; ಪದಗಳು ಆಲೋಚನೆಗೆ ಅತ್ಯಗತ್ಯವಾದ ಸಾಮಗ್ರಿ. ವ್ಯಕ್ತಿಯು ದೇಹವನ್ನು ತ್ಯಜಿಸಿದಾಗ, ಪದಗಳು ಮನಸ್ಸನ್ನು ಪ್ರವೇಶಿಸುತ್ತವೆ; ಮನಸ್ಸು ಪ್ರಾಣವನ್ನು ಅಥವಾ ಜೀವಶಕ್ತಿಯನ್ನು ಪ್ರವೇಶಿಸುತ್ತದೆ; ಪ್ರಾಣವಾದರೋ ಆತ್ಮದಲ್ಲಿ ಲೀನವಾಗುತ್ತದೆ. ಆತ್ಮವು (ದೇಹದಲ್ಲಿ ವ್ಯಕ್ತಿಗತವಾಗಿರುತ್ತಾ) ಅಲ್ಲಿಂದ ಬಿಡುಗಡೆಗೊಂಡಾಗ ಸೂರ್ಯಲೋಕಕ್ಕೆ ಧಾವಿಸುತ್ತದೆ, ಸೌರತತ್ತ್ವದ ವಲಯವಾದ ಸೂರ್ಯನನ್ನು ಸೇರುತ್ತದೆ. ಅಲ್ಲಿಂದ ಮುಂದೆ ಅದು ಬ್ರಹ್ಮಲೋಕ ವನ್ನು ಸೇರುತ್ತದೆ. ಆ ವಲಯವನ್ನು ಸೇರಿದ ಮೇಲೆ ಜೀವಾತ್ಮನಿಗೆ ಪ್ರಕೃತಿಯೊಂದಿಗೆ ಇನ್ನಾವುದೇ ತೊಡರು ಉಳಿದಿರುವುದಿಲ್ಲ. ಬ್ರಹ್ಮಲೋಕದಲ್ಲಿ ಕಾಲವು ಮುಗಿಯುವವರೆಗೂ ಇರುತ್ತದೆ, ಮೇರೆಯೇ ಇಲ್ಲದಂತಹ ದಿವ್ಯಾನಂದವನ್ನು ಅನುಭವಿಸುತ್ತದೆ. ಸೃಷ್ಟಿ ಶಕ್ತಿಯೊಂದರ ಹೊರತು ಮಿಕ್ಕೆಲ್ಲ ಶಕ್ತಿಗಳೂ ಅದಕ್ಕಿರುತ್ತವೆ.

ಬ್ರಹ್ಮಾಂಡವನ್ನು ಆಳುವ ಅಧಿಕಾರ ಭಗವಂತನಿಗೆ ವಿಶಿಷ್ಟವಾದ್ದು. ಭಗವಂತನಿಗೆ ಯಾವುದೇ ಬಗೆಯ ಆಸೆಯಿಲ್ಲ. ಅವನಿಗೆ ಪ್ರೇಮವನ್ನು ಅರ್ಪಿಸುವುದು, ಪ್ರೇಮದ ಮೂಲಕ ಅವನನ್ನು ಪೂಜಿಸುವುದು ಮಾನವ ಕರ್ತವ್ಯ. ಇದು ಮನುಷ್ಯನನ್ನು ಜೀವಿಗಳಲ್ಲಿ ಅತ್ಯಂತ ಉನ್ನತವಾದ ಮಟ್ಟಕ್ಕೆ ಏರಿಸುತ್ತದೆ. ಈ ನೆಲೆಯ ಅರಿವಿಲ್ಲದವರು ಅಥವಾ ಅದಕ್ಕೆ ತಕ್ಕ ಹೊಣೆಗಾರಿಕೆಗಳನ್ನು ನಿರ್ವಹಿಸಲು ಅಸಮರ್ಥರಾದವರು ಬೇರೆ ವರ್ಗಗಳಿಗೆ ಸೇರುತ್ತಾರೆ. ಅವರೂ ಭಗವಂತನಿಗೆ ಅರ್ಪಿಸುತ್ತಾರೆ, ಅವರೂ ಪೂಜಿಸುತ್ತಾರೆ, ಅವರೂ ಉಪಯುಕ್ತವಾದ ಕಾರ್ಯಗಳಲ್ಲಿ ತೊಡಗುತ್ತಾರೆ. ಆದರೆ ಅವುಗಳಿಂದ ತಮಗೆ ದೊರಕಬಹುದಾದ ಫಲಗಳಿಗಾಗಿ ಹಂಬಲಿಸುತ್ತಾರೆ. ಫಲಗಳಿಂದ ಪ್ರಯೋಜನ ಪಡೆಯುವ ಆಸೆಯಿಂದ ಪ್ರೇರಿತರಾಗಿ ಅವರು ಕರ್ಮನಿರತರಾಗುತ್ತಾರೆ. "ಅಸಹಾಯಕರಾಗಿದ್ದವರಿಗೆ ನಾವು ಸಹಾಯ ಮಾಡಿದ್ದೇವೆ; ಆದ್ದರಿಂದ ನಮ್ಮ ಹಾದಿಯು ಸುಗಮ ಹಾಗೂ ಕ್ಷೇಮಕರವಾಗುತ್ತದೆ. ನಾವು ದಲಿತರನ್ನು ಮೇಲೆತ್ತಿದ್ದೇವೆ; ಆದ್ದರಿಂದ ನಮ್ಮ ಹಾದಿಯಲ್ಲಿ ಬರುವ ಕಷ್ಟಗಳನ್ನು ನಿವಾರಿಸಿಕೊಳ್ಳಬಹುದು. ನಾವು ಸಾಮೂಹಿಕವಾಗಿ ಭಗವಂತನ ಗುಣ ಮಹಿಮೆಗಳನ್ನು ಹಾಡಿದ್ದೇವೆ. (ಭಜನೆ) ಆದ್ದರಿಂದ ನಮಗೆ

ಸ್ವರ್ಗ ಖಂಡಿತ," ಹೀಗೆ ಸತ್ಕರ್ಮ ನಿರತರಾದವರು ಲೆಕ್ಕ ಹಾಕುತ್ತಾರೆ. ಅಂತಹ ಜನರು ದೇಹ ತ್ಯಾಗ ಮಾಡಿದಾಗ, ಅಂದರೆ ಅವರು ಸತ್ತಾಗ, ಅವರ ಪದಗಳು ಮನಸ್ಸಿನಲ್ಲಿ ಸೇರಿಹೋಗುತ್ತವೆ. ಮನಸ್ಸು ಪ್ರಾಣದಲ್ಲಿ, ಪ್ರಾಣವು ಜೀವಿಯಲ್ಲಿ ವಿಲೀನವಾಗುತ್ತದೆ. ಜೀವಾತ್ಮವಾದರೋ ಚಂದ್ರಲೋಕಕ್ಕೆ ಪ್ರಯಾಣ ಬೆಳೆಸುತ್ತದೆ. ಅದು ಮನಸ್ಸಿನ ಅಧಿದೇವತೆಯಾದ ಚಂದ್ರನ ಲೋಕ. ಮತ್ತೆ ಅದು ಚಂಚಲತೆ, ವಿಕ್ಷೋಭೆ, ಬಯಕೆಗಳು, ಕಾಮನೆಗಳು ಮೊದಲಾದವುಗಳೊಂದಿಗೆ ಮತ್ತೆ ಮನಸ್ಸಿನ ಲೋಕವನ್ನು ಪ್ರವೇಶಿಸಬೇಕೆಂಬುದನ್ನು ಇದು ಸೂಚಿಸುತ್ತದೆ. ಆ ಜೀವಿಗಳು ಚಂದ್ರ ಲೋಕದಲ್ಲಿ ತಮ್ಮ ಸತ್ಕರ್ಮಗಳ ಫಲಗಳಿರುವವರೆಗೆ ಆನಂದವನ್ನನುಭವಿಸುತ್ತಾ ತೃಪ್ತಿಯಿಂದಿರುತ್ತವೆ. ಆದ್ದರಿಂದಲೇ ಶಾಸ್ತ್ರಗಳಲ್ಲಿ ಹೇಳಿದೆ, "ಕ್ಷೀಣೇ ಪುಣ್ಯೇ ಮರ್ತ್ಯ ಲೋಕಂ ವಿಶಂತಿ," ಸಂಚಿತವಾದ ಪುಣ್ಯವು ಮುಗಿದು ಹೋದಾಗ ಮತ್ತೆ ಅವರು ಮರ್ತ್ಯ ಲೋಕವನ್ನು ಪ್ರವೇಶಿಸುತ್ತಾರೆ.

ಜೀವಾತ್ಮವು ಹಿಂದಿನ ದೇಹದಲ್ಲಿದ್ದಾಗ ಮಾಡಿದ ಕರ್ಮಗಳ ಸಂಚಿತ ಫಲಕ್ಕನು ಗುಣವಾಗಿ ಹೊಂದುವ, ಇಂದ್ರಿಯ ಮೊದಲಾದವುಗಳಿಂದ ಸಜ್ಜುಗೊಂಡ ಒಂದು ದೇಹದೊಳಗೆ ಕೋಶಸ್ಥವಾಗಿ ಸೇರಿಕೊಳ್ಳುತ್ತದೆ, ಬದುಕಿನ ಇನ್ನೊಂದು ಅಧ್ಯಾಯವು ಪ್ರಾರಂಭವಾಗುತ್ತದೆ. ಚಂದ್ರ ಲೋಕದಲ್ಲಿ ಆತ್ಮನು ಕಳೆಯುವ ಕಾಲವನ್ನು ಹಿಂದೂಗಳು ಸ್ವರ್ಗದಲ್ಲಿ ದೇವನಾಗಿ ಕಳೆದ ಕಾಲವೆಂದೂ ಕ್ರಿಶ್ಚಿಯನ್ ಮತ್ತು ಇಸ್ಲಾಂ ಧರ್ಮಗಳು, ಏಂಜಲ್ ಆಗಿ ಕಳೆದ ಕಾಲವೆಂದೂ ಪರಿಗಣಿಸುತ್ತಾರೆ. ಈ ದೇವತೆಗಳ ಪ್ರಭುವಾದವನಿಗೆ ದೇವೇಂದ್ರ ಎಂದು ಹೆಸರು ಕೊಟ್ಟಿರುವುದು ಅವನ ಅಧಿಕಾರಸ್ಥಾನದ ಸೂಚಕವಾಗಿದೆ. ಆ ನೆಲೆಗೆ ಸಾವಿರಾರು ಜನರು ಏರಿದ್ದಾರೆ.

ವೇದಗಳ ಪ್ರಕಾರ ಅತ್ಯುತ್ತಮವಾದ ಸತ್ಕಾರ್ಯವನ್ನು ಮಾಡಿದಾಗ, ಆ ವ್ಯಕ್ತಿಯನ್ನು ದೇವೇಂದ್ರ ಸ್ಥಾನಕ್ಕೆ ಏರಿಸಲಾಗುತ್ತದೆ. ಮುಂಚೆ ಆ ಸ್ಥಾನಕ್ಕೆ ಏರಿದ್ದ ಆತ್ಮವು ಭೂಲೋಕಕ್ಕೆ ಮರಳಿ ಮಾನವ ರೂಪದಲ್ಲಿ ತನ್ನ ಜೀವಿಕೆಯನ್ನು ಪ್ರಾರಂಭಿಸುತ್ತದೆ. ಭೂಮಿಯ ಮೇಲೆ ಚಕ್ರವರ್ತಿಗಳು ಬದಲಾಗುವ ಹಾಗೆಯೇ ಸ್ವರ್ಗದಲ್ಲೂ ಪ್ರಭುಗಳು ಉದಯ ಅಸ್ತಗಳನ್ನು ತಪ್ಪಿಸಿಕೊಳ್ಳಲಾರರು. ಸ್ವರ್ಗದ ನಿವಾಸಿಗಳೂ ಏರು ಇಳುವುಗಳ ನಿಯಮಕ್ಕೆ ಬದ್ಧರು. ಬ್ರಹ್ಮಲೋಕವೊಂದು ಮಾತ್ರ ಜನನ ಮರಣ, ಉದಯ ಅಸ್ತ, ಏರು ಇಳುವುಗಳಿಂದ ಮುಕ್ತವಾಗಿದೆ. ಇದು ಭಾರತೀಯ ಚಿಂತನೆಯ ಮೂಲಸಿದ್ಧಾಂತ, ಮಾನವ ಜನಾಂಗಕ್ಕೆ ಅದು ನೀಡಿದ ನಿತ್ಯ ಅಮೃತ.

ಜೀವಾತ್ಮವು ಚಂದ್ರಲೋಕದಲ್ಲಿ ದೇವತೆಯಾಗಿರುವಾಗ ಅದು ಯಾವ ಕರ್ಮವನ್ನೂ ವ್ಯಕ್ತಪಡಿಸಲಾರದು. ಮನುಷ್ಯನು ಮಾತ್ರ ಕರ್ಮ ಮುಖಾಂತರ ತನ್ನನ್ನು

ವ್ಯಕ್ತಪಡಿಸಿಕೊಳ್ಳುವನು. ಅದು ತನ್ನ ಪರಿಣಾಮದಿಂದ ಅವನನ್ನು ಕಟ್ಟಿಹಾಕುವುದು. ಕರ್ಮ ಎಂದರೆಯೇ ಯಾವುದೋ ಒಂದು ಆಸೆಯಿಂದ, ಫಲದ ಮೇಲೆ ಒಂದು ಕಣ್ಣಿಟ್ಟುಕೊಂಡು ಮಾಡುವ ಕಾರ್ಯ. ಆತ್ಮವು ದೇವನಾಗಿ ಚಂದ್ರಲೋಕದಲ್ಲಿ ಇರುವಾಗ ಅದು ತೃಪ್ತವಾಗಿರುತ್ತದೆಯಾದ್ದರಿಂದ ಸುಖವನ್ನು ಗಳಿಸುವುದಕ್ಕಾಗಿ ಕರ್ಮ ಮಾಡಬೇಕೆಂದು ಹಂಬಲಿಸುವುದಿಲ್ಲ. ಹಿಂದೆ ಮಾಡಿದ ಸತ್ಕರ್ಮಗಳ ಫಲವಾಗಿಯೇ ಅದು ಚಂದ್ರಲೋಕ ವಾಸವನ್ನು ಉಡುಗೊರೆಯಾಗಿ ಪಡೆದಿದೆ. ಅದು ಒಳ್ಳೆಯತನಕ್ಕೆ ದೊರಕಿರುವ ಉಡುಗೊರೆ. ಸತ್ಕರ್ಮ ಫಲಗಳಿಂದ ಬಂದ ಸುಖ ಸಂತೋಷವನ್ನು ಸವಿದು ಮುಗಿಸಿದ ನಂತರ ಸಂಚಿತ ಕರ್ಮ ಫಲದ ಉಳಿಕೆಯನ್ನು ಅದು ಅನುಭವಿಸಿ ಮುಗಿಸಬೇಕಾಗುತ್ತದೆ. ಆದ್ದರಿಂದ ಆತ್ಮವು ಮತ್ತೆ ಮಾನವನಾಗಿ ಭೂಮಿಯ ಮೇಲೆ ಹುಟ್ಟಬೇಕಾಗುತ್ತದೆ. ಆಗ ಅತ್ಯುನ್ನತವಾದ ಪುಣ್ಯಕಾರ್ಯಗಳನ್ನು ಮಾಡಿ, ಅತ್ಯಂತ ಸತ್ವಪೂರ್ಣವಾದ ಸತ್ಫಲವು ದೊರಕುವಂತೆ ನಡೆದುಕೊಂಡು ತನ್ನ ಹೃದಯವನ್ನು ಶುದ್ಧಪಡಿಸಿಕೊಳ್ಳುತ್ತಾನೆ, ಬ್ರಹ್ಮಲೋಕವನ್ನು ತಲುಪುತ್ತಾನೆ. ಅಲ್ಲಿಂದ ಮತ್ತೆ ಹಿಂದಿರುಗುವ ಪ್ರಶ್ನೆ ಬರುವುದಿಲ್ಲ.

ವೇದಗಳಲ್ಲಿ ಎಲ್ಲೂ ನರಕ ಎಂಬ ಪದವು ಕಾಣಿಸಿಕೊಳ್ಳುವುದಿಲ್ಲ. ಭಾರತೀಯರ ಆಧ್ಯಾತ್ಮ ಚಿಂತನೆಗೆ ನರಕದ ಕಲ್ಪನೆಯು ಹೊರತಾದದ್ದು. ನರಕದ ವಿಚಾರ, ಅದರ ವಿವಿಧ ವರ್ಣನೆಗಳು ಶಾಸ್ತ್ರಗಳು ಮತ್ತು ಪುರಾಣಗಳಲ್ಲಿ ಆಮೇಲಾಮೇಲೆ ಸೇರಿಸಿದಂಥವುಗಳು. ಈ ಕೃತಿಗಳ ಲೇಖಕರು ನರಕವೊಂದನ್ನು ನಿರೂಪಿಸದಿದ್ದರೆ ಧರ್ಮವು ಅಸಮಗ್ರವಾಗುತ್ತದೆ ಎಂದು ನಂಬಿದ್ದರು. ನರಕದಲ್ಲಿ ಕೊಡುವ ಅತಿ ಭಯಾನಕವಾದ ಶಿಕ್ಷೆಗಳನ್ನು ಅವರು ಚಿತ್ರಿಸಿದರು. ಆದರೆ ನರಕ ಶಿಕ್ಷೆಗೂ ಒಂದು ಮಿತಿಯನ್ನು ಹಾಕಿದರು. ನರಕದಲ್ಲಿ ಸಾವಿಲ್ಲ ಎಂದು ಸಾರಿದರು. ನರಕವನ್ನು ಸೃಷ್ಟಿಸಿದುದರ ಉದ್ದೇಶವಾದರೂ ಜನರು ಶಿಕ್ಷೆಗಳಿಗೆ ಹೆದರಿಕೊಂಡಾದರೂ ಪಾಪ ಕಾರ್ಯಗಳಲ್ಲಿ ತೊಡಗದಿರಲಿ ಎಂಬುದಾಗಿತ್ತು.

ಆದರೆ ಅದ್ವೈತವು ಸ್ವರ್ಗವನ್ನಾಗಲಿ ನರಕವನ್ನಾಗಲಿ ಹೇಳುವುದಿಲ್ಲ. ಬಂಧನ ಮತ್ತು ಅದರಿಂದ ಬಿಡುಗಡೆ, ಅಜ್ಞಾನ ಮತ್ತು ಬೆಳಕುಗಳನ್ನು ಮಾತ್ರ ಅದು ಒಳಗೊಳ್ಳುತ್ತದೆ. ಅದು ವೇದಾಂತ ಎಂದೂ ಪ್ರಸಿದ್ಧ. ವೇದಾಂತವು ಹೇಳುವುದಕ್ಕಿಂತ ಉನ್ನತವಾದ ಧರ್ಮ ಇನ್ನೊಂದಿಲ್ಲ.

ಅಧ್ಯಾಯ ೯

# ಒಂದರೊಡನೆ ಒಂದಾಗುವುದು

ಜಗತ್ತು ಅಥವಾ ಬ್ರಹ್ಮಾಂಡವನ್ನು ಭಗವಂತನು ತನ್ನಿಂದಲೇ ಸೃಷ್ಟಿಸಿದನು. ಅವನೇ ಸೃಷ್ಟಿಕರ್ತನೂ ಸೃಷ್ಟಿಯ ಮೂಲ ದ್ರವ್ಯವೂ ಆಗಬೇಕೆಂದು ಅವನು ಬಯಸಿದ್ದನು. ಇದರಿಂದಾಗಿ ಭಗವಂತನು ಪೂರ್ಣ (ಪರಿಪೂರ್ಣ), ಸೃಷ್ಟಿಯೂ ಪೂರ್ಣ, ಜೀವಾತ್ಮವೂ ಪೂರ್ಣ. ಆದ್ದರಿಂದ ಪೂರ್ಣವಾದ ಹಲವು ವಸ್ತುಗಳನ್ನು ಹೇಳಲಾಗಿದೆ. ಭಗವಂತನು ವಿಶ್ವವನ್ನು ತನ್ನಿಂದಲೇ ಸೃಷ್ಟಿಸಿದನು ಎಂದು ಹೇಳಿದಾಗ ಸಹಜವಾಗಿಯೇ ಸಂದೇಹವು ಹುಟ್ಟುತ್ತದೆ. ಭಗವಂತನು ಈ ಗೋಡೆ ಈ ಮೇಜುಗಳಾಗಲು ಹೇಗೆ ಸಾಧ್ಯ? ಪರಮ ಪರಿಶುದ್ಧವಾದ ಅವನು ಈ ಅಪರಿಶುದ್ಧ ವಸ್ತುಗಳಾಗುವುದು ಹೇಗೆ? ಕೆಲವರಿಗೆ ಈ ಸಂದೇಹವೂ ಏಳುತ್ತದೆ.

ಇದಕ್ಕೆ ಉತ್ತರಗಳನ್ನು ಹುಡುಕೋಣ. ಮನುಷ್ಯನು ಮೂಲತಃ ಆತ್ಮ, ಆದರೆ ಅವನು ದೇಹವೆಂಬ ಕೋಶದೊಳಗಿದ್ದಾನೆ. ಹೌದು ತಾನೆ? ಒಂದು ದೃಷ್ಟಿಯಿಂದ ಮನುಷ್ಯನು ದೇಹದಿಂದ ಪ್ರತ್ಯೇಕವಲ್ಲ, ಅಲ್ಲವೆ? ಹಾಗಿದ್ದರೂ ಮನುಷ್ಯನು ತಾನು ದೇಹವಲ್ಲ, ಅವನ ನಿಜಸ್ವರೂಪವು ದೇಹದಿಂದ ಪ್ರತ್ಯೇಕವಾಗಿದೆ. ತಾನು ಆಗಿನ ಮಗುವಲ್ಲ, ಈಗಿನ ಮುದುಕನಲ್ಲ, ಗಂಡಸಲ್ಲ, ಹೆಂಗಸೂ ಅಲ್ಲ. ಶೈಶವ, ಬಾಲ್ಯ, ತಾರುಣ್ಯ, ಮುಪ್ಪು, ಪುರಷತನ, ಸ್ತ್ರೀತ್ವ ಇವೆಲ್ಲ ಹಂತಗಳು ಮತ್ತು ಪರಿವರ್ತನೆಗಳ ಮೂಲಕ ಹಾದು ಬಂದಿದ್ದಾನೆ. ಹಾಗೆಯೆ ವಿಶ್ವವೂ ಸೃಷ್ಟಿ ಸಮಸ್ತವೂ ಭಗವಂತನ ಕೋಟಿ ದೇಹಗಳು. ಅವನು ಇವೆಲ್ಲವೂ ಆಗಿದ್ದಾನೆ, ಇವೆಲ್ಲವುಗಳ ಒಳಗಿದ್ದಾನೆ.

ಆದರೆ ಅವನು ಮಾತ್ರ ಪರಿವರ್ತನರಹಿತ, ನಿತ್ಯ ನಿಸರ್ಗವು ಸಹಜವಾಗಿ ಬದಲಾಗುವಂಥದು. ಆತ್ಮವೂ ಕೂಡ ಸಂಕೋಚನಗೊಳ್ಳಬಹುದು ಅಥವಾ ವಿಸ್ತಾರಗೊಳ್ಳಬಹುದು, ಅರಳಬಹುದು ಅಥವಾ ಬಾಡಬಹುದು, ಹೊಳೆಯಬಹುದು ಇಲ್ಲವೆ ಮಂಕಾಗಬಹುದು. ದುಷ್ಕರ್ಮಗಳು ಅದರ ಕಾಂತಿಯನ್ನು ಮುಚ್ಚಿ ಕಡಮೆ ಮಾಡುತ್ತವೆ. ಅದರ ಆಂತರಿಕ, ಅಸಲಿ ಸತ್ಯ ಮತ್ತು ಜ್ಞಾನವನ್ನು ದುರಾಲೋಚನೆ ಹಾಗೂ ದುಷ್ಕರ್ಮಗಳು ಮರೆಮಾಡಿಬಿಡುತ್ತವೆ. ಆತ್ಮದ ನೈಜ ಕಾಂತಿಯನ್ನೂ ವೈಭವವನ್ನೂ ಯಾವ ಕಾರ್ಯಗಳು ಪ್ರಕಟಪಡಿಸುತ್ತವೋ ಅವು ಸತ್ಕಾರ್ಯಗಳು.

ಆತ್ಮವು ಮೊದಲು ಬಂಧಿತವಾಗಿರುವುದಿಲ್ಲ; ನಂತರ ಅದು ಮಿತಿಗೊಂಡಂತೆ, ಕುಂಠಿತಗೊಂಡಂತೆ ಕಾಣುತ್ತದೆ. ಒಳ್ಳೆಯ ಕಾರ್ಯಚಟುವಟಿಕೆಗಳಿಂದಾಗಿ ಅದು ತನ್ನ ವ್ಯಾಪಕತೆಯನ್ನೂ ಅಸೀಮತೆಯನ್ನೂ ಮರಳಿ ಗಳಿಸಿಕೊಳ್ಳುತ್ತದೆ. ಯಾವುದೇ ಭೇದವಿಲ್ಲದೆ ಪ್ರತಿಯೊಬ್ಬನೂ ಇದರಲ್ಲಿ ಯಶಸ್ವಿಯಾಗಿ ಬಂಧನದಿಂದ ತನ್ನನ್ನು ತಾನು ಬಿಡಿಸಿಕೊಳ್ಳುತ್ತಾನೆ. ಆದರೆ ಜಗತ್ತು ಅಲ್ಲಿಗೆ ಮುಗಿಯುವುದಿಲ್ಲ. ಅದು ನಿತ್ಯವಾದದ್ದು, ನಾಶಗೊಳ್ಳಲು ಸಾಧ್ಯವಿಲ್ಲದಂಥದು. ಇದು ಭಾರತದಲ್ಲಿ ಪ್ರಕಟಗೊಂಡ ಎರಡನೆಯ ತತ್ತ್ವಶಾಸ್ತ್ರ ಪಂಥ, ಎರಡನೆಯದು ವಿಶಿಷ್ಟಾದ್ವೈತ ಅಥವಾ ವಿಶೇಷವಾದ ಅದ್ವೈತ. ಆಧ್ಯಾತ್ಮಿಕ ಅನ್ವೇಷಣೆಯಲ್ಲಿ ಮತ್ತು ಅನುಭವದಲ್ಲಿ ಇದು ಇನ್ನೂ ಮೇಲಿನ ಹಂತ. ಅದು ಮೂರು ವಸ್ತುಗಳನ್ನು ಹೇಳುತ್ತದೆ: ದೇವರು ಆತ್ಮ ಮತ್ತು ಪ್ರಕೃತಿ. ಈ ಮೂರರ ಸಂಯೋಜನೆಯನ್ನು ಕುರಿತು ಹೇಳುತ್ತದೆ. ಈ ವಿಶ್ವವು ಭಗಂತನೇ ನಿರ್ಮಿಸಿ ನಡೆಸುತ್ತಿರುವ ಒಂದು ವಿಶಾಲವಾದ ಯಂತ್ರ ಎಂದು ದ್ವೈತಿಗಳು ಹೇಳುತ್ತಾರೆ. ಅದು ಭಗವಂತನು ಒಳಹೊಕ್ಕು ತುಂಬಿಕೊಂಡಿರುವ ವ್ಯಾಪಿಸಿರುವ ವಸ್ತು ಎಂದು ವಿಶಿಷ್ಟಾದ್ವೈತಿಗಳು ಅಭಿಪ್ರಾಯಪಡುತ್ತಾರೆ. ಆದರೆ ಅದ್ವೈತಿಗಳಾದರೋ ಭಗವಂತನು ಈ ವಿಶ್ವದಿಂದ ಹೊರಗಿಲ್ಲ, ಅವನೇ ಜಗತ್ತಾದನು, ಅಸ್ತಿತ್ವದಲ್ಲಿರುವ ಎಲ್ಲವೂ ಅವನೇ ಎಂದು ಹೇಳುತ್ತಾರೆ. ಭಗವಂತನಲ್ಲದೆ ಬೇರೊಂದಿಲ್ಲ, ಇನ್ನೊಂದು ಎರಡನೆಯ ವಸ್ತುವೇ ಇಲ್ಲ. ಈ ಸತ್ಯವನ್ನು ಎಲ್ಲರೂ ಒಪ್ಪಿಕೊಳ್ಳಬೇಕು. ಇದು ಪರಮೋನ್ನತವಾದ ಸತ್ಯ. ಭಗವಂತನು ಆತ್ಮವಾಗಿದ್ದಾನೆ, ಈ ವಿಶ್ವವು ಅವನು ವಾಸಮಾಡುವ, ನಡೆಸುವ ದೇಹ ಎಂದು ಹೇಳುವುದು ಸರಿಯಲ್ಲ. ಆತ್ಮನು (ಭಗವಂತ) ನಿತ್ಯನು, ಪರಿವರ್ತನರಹಿತನು, ಆದರೆ ಅವನ ದೇಹವಾದ ವಿಶ್ವವು ಬದಲಾವಣೆಗೆ ಪರಿವರ್ತನೆಗೆ, ಒಳಪಟ್ಟದ್ದು ಎಂದು ಹೇಳುವುದೂ ಸರಿಯಲ್ಲ, ತೃಪ್ತಿಕರವಲ್ಲ.

ಭಗವಂತನು ವಿಶ್ವದ ಉಪಾದಾನ ಕಾರಣ, ಸಮೀಪದ ಕಾರಣ ಎಂದು ಹೇಳಿದಾಗ ಅದು ಏನನ್ನು ಸೂಚಿಸುತ್ತದೆ? ಉಪಾದಾನ ಕಾರಣ ಎಂದರೆ ಪರಿಣಾಮವನ್ನು ಉತ್ಪಾದಿಸಿದ ಕಾರಣ. ಪರಿಣಾಮವು ಕಾರಣದ ಇನ್ನೊಂದು ರೂಪ. ಅದು ಕಾರಣದಿಂದ ಪ್ರತ್ಯೇಕವಾಗಿರಲು ಸಾಧ್ಯವಿಲ್ಲ. ನಾವು ಗಮನಿಸುವ ಪ್ರತಿಯೊಂದು ಪರಿಣಾಮವೂ ಒಂದು ಹೊಸ ರೂಪವನ್ನು ಪಡೆದ ಕಾರಣವಾಗಿದೆ. ವಿಶ್ವವು ಪರಿಣಾಮ, ಭಗವಂತನು ಅದರ ಕಾರಣ—ಈ ಹೇಳಿಕೆಗಳು ವಿಶ್ವವು ಭಗವಂತನದೇ ಇನ್ನೊಂದು ರೂಪವಲ್ಲದೆ ಬೇರೆಯಲ್ಲ ಎಂಬ ಅಂಶವನ್ನು ಒತ್ತಿ ಹೇಳುತ್ತದೆ. ದೇಹವು ಸೀಮಿತವೂ ಸೂಕ್ಷ್ಮವೂ ಆಗಿದೆ, ಅದು ಕಾರಣದತ್ತ ಅಂದರೆ ಭಗವಂತನಿಂದಲೇ ವಿಕಾಸಗೊಂಡಿದೆ, ಆಕಾರ ಪಡೆದಿದೆ ಎಂದು ವಾದಿಸಿದರೆ ಅದಕ್ಕೆ

ಅದ್ವೈತಿಗಳು ಭಗವಂತನೇ ವಿಶ್ವದ ರೂಪದಲ್ಲಿ ಪ್ರಕಟವಾದನು ಎಂದು ಉತ್ತರ ಕೊಡುತ್ತಾರೆ. ಅಸಂಖ್ಯ ವೈವಿಧ್ಯಮಯವಾದ ವಸ್ತುಗಳು ಜೀವಿಗಳು ಎಲ್ಲವೂ ನಿಜವಾಗಿಯೂ ಭಗವಂತನೇ ಹೌದೆ ಎಂಬ ಸಂದೇಹ ಬರಬಹುದು. ಹೌದು, ಅದು ಸತ್ಯ. ಇಂದ್ರಿಯಗಳಿಗೆ ಗೋಚರವಾಗುವ, ಅರಿವಿಗೆ ಬರುವ ಈ ಸಮಸ್ತವೂ ಭಗವಂತನೇ. ಅವನಲ್ಲದೆ ಬೇರೆ ಯಾವುದೂ ಇಲ್ಲ. ನಮ್ಮ ದೇಹಗಳು, ಮನಸ್ಸುಗಳು, ಬುದ್ಧಿಗಳು, ಚಿತ್ತ ಎಲ್ಲವೂ ಭಗವಂತನೇ ಆಗಿವೆ.

ಇಲ್ಲಿ ಇನ್ನೊಂದು ಸಂದೇಹ ಬರಬಹುದು. ದೇವರು ಯಾತಕ್ಕಾಗಿ ಇಷ್ಟೊಂದು ಸಂಖ್ಯೆಯ ವಸ್ತುಗಳು ಜೀವಿಗಳು ಆಗಿದ್ದಾನೆ? ಅವನು ಅಷ್ಟೊಂದು ಜೀವಾತ್ಮನಾಗ ಬೇಕಾದ ಅವಶ್ಯಕತೆಯೇನು? ಒಂದು ರೂಪವಾದ ಅವನು ಹೀಗೆ ಅನೇಕಾನೇಕ ವಾಗಿ ತನ್ನನ್ನು ತಾನು ಪ್ರಕಟಿಸಿಕೊಳ್ಳುವನೆ? ಇದು ಸಂಭವಿಸುವುದಾದರೂ ಹೇಗೆ? ಭಗವಂತನೇ ಈ ವಿಶ್ವವಾಗಿ ಪರಿವರ್ತಿತನಾಗುವ ಪಕ್ಷದಲ್ಲಿ ಅವನು ಬದಲಾವಣೆಯ ಕ್ರಿಯೆಗೆ ಒಳಪಡಬೇಕಾಗಿತ್ತು. ಪ್ರಕೃತಿಯಲ್ಲಿ ಪರಿವರ್ತನೆಗೊಳ ಪಟ್ಟಿರುವುದೆಲ್ಲವೂ ಜನನವನ್ನೂ ಮರಣವನ್ನೂ ಅನುಭವಿಸುತ್ತವೆ. ದೇವರು ಬದಲಾವಣೆಯ ವಲಯಕ್ಕೆ ಬಂದನು ಎಂದರೆ ಒಂದು ದಿನ ಅವನೂ ಸಾಯ ಬೇಕಾಗುತ್ತದೆಯೇ? ಅವನು ಬದಲಾವಣೆಗಳನ್ನು ಹೊಂದುತ್ತಾ ಹೊಂದುತ್ತಾ ಕೊನೆಗೊಮ್ಮೆ ಮುಕ್ತಾಯವಾಗಬೇಕೆ? ಈ ವಿಷಯವನ್ನು ಮನಸ್ಸಿನಲ್ಲಿಟ್ಟುಕೊಳ್ಳಿರಿ. ಇನ್ನೊಂದು ವಿಷಯವನ್ನು ಗಮನಿಸಬೇಕಾಗಿದೆ. ಭಗವಂತನ ಎಷ್ಟು ಅಂಶವು, ಎಷ್ಟು ಭಾಗವು ವಿಶ್ವವಾಯಿತು?

ಅದ್ವೈತಿಗಳು ಹೇಳುತ್ತಾರೆ ನೀವು ಯಾವುದೇ ಭಾಗವನ್ನು ಎಷ್ಟೇ ಪ್ರಮಾಣವನ್ನು ಕಲ್ಪಿಸಿರಿ, ಆದರೆ ಒಂದು ವಿಷಯವನ್ನು ನೆನಪಿನಲ್ಲಿ ಇಟ್ಟುಕೊಳ್ಳಿರಿ, ವಿಶ್ವವೆನ್ನುವುದು ಅಸ್ತಿತ್ವದಲ್ಲಿಲ್ಲ, ಅದೊಂದು ಭ್ರಮೆ. ಅದು ಎಂದೂ ಇರಲಿಲ್ಲ. ಈಗ ಇಲ್ಲ, ಮುಂದೆಯೂ ಇರುವುದಿಲ್ಲ. ವಿಶ್ವದ ಸೃಷ್ಟಿ, ವಿಶ್ವದ ಪ್ರಳಯ ಕೋಟ್ಯನುಕೋಟಿ ಜೀವಿಗಳು ಹುಟ್ಟುವುದು, ಲೀನಗೊಳ್ಳುವುದು ಇವೆಲ್ಲವೂ ಒಂದು ಕನಸು. ವ್ಯಕ್ತಿಗತ ವಾದ ಜೀವಾತ್ಮ ಎಂಬುದಿಲ್ಲವೇ ಇಲ್ಲ, ಬೇರೆಯಾದ ಒಂದು ಆತ್ಮವಿಲ್ಲ. ಕೋಟ್ಯನು ಕೋಟಿ ಜೀವಾತ್ಮಗಳಿರುವುದು ಹೇಗೆ ಸಾಧ್ಯ? ಇರುವುದು ಒಂದೇ ಒಂದು ಅಖಂಡ, ಸಮಗ್ರ ಪರಿಪೂರ್ಣ. ಒಬ್ಬನೇ ಸೂರ್ಯನು ಕೋಟ್ಯಂತರ ಕೆರೆ ಕಟ್ಟೆ ಗಳಲ್ಲಿ, ನೀರಿನ ಹನಿಗಳಲ್ಲಿ ಕೋಟ್ಯನುಕೋಟಿ ಸೂರ್ಯರಂತೆ ಪ್ರಕಾಶಿಸುತ್ತಾನೆ. ಹಾಗೆಯೇ ಜೀವಾತ್ಮಗಳು ಏಕೈಕ ಪರವಸ್ತುವು ಅದು ಬೆಳಗುವ ಮನಸ್ಸುಗಳಲ್ಲಿ ವ್ಯಕ್ತವಾದ ಪ್ರತಿಬಿಂಬಗಳು. ಭಾರತೀಯ ಚಿಂತನೆಯು ಅದ್ವೈತ ದಾರ್ಶನಿಕರ

ಮೂಲಕ ಅತ್ಯಂತ ಸ್ಪಷ್ಟವಾಗಿ ಒತ್ತಿ ಹೇಳಿರುವ ಅಂಶ ಇದು. ಈ ಸತ್ಯವನ್ನು ಗ್ರಹಿಸಲಾರದವರು ಮಾಯೆಯ ಪ್ರಭಾವಕ್ಕೆ ಸಿಲುಕಿರುತ್ತಾರೆ ಎಂದು ಹೇಳಬಹುದು.

ಕನಸುಗಳೂ ವಾಸ್ತವತೆಯ ಆಧಾರದ ಮೇಲೆಯೇ ನಿಲ್ಲಬೇಕು. ಆಧಾರ ಸತ್ಯ ವೊಂದಿಲ್ಲದೆ ಅವಲಂಬಿ ಭಾವನೆ ಅಥವಾ ಸಂಗತಿ ನಿಲ್ಲುವುದು ಸಾಧ್ಯವಿಲ್ಲ. ಆಧಾರ ವಸ್ತುವೊಂದಿಲ್ಲದೆ ಮುಂದಿನ ವಸ್ತುಗಳು ಹುಟ್ಟಲಾರವು. ಆಧಾರ ಜೀವಿಯೊಂದಿ ಲ್ಲದೆ ಮುಂದಿನ ಜೀವಿಗಳು ಜನಿಸಲಾರರು. ಆ ಆಧಾರವೇ ಭಗವಂತ ಅಥವಾ ಈಶ್ವರ. ಅವನು ಪರಿಪೂರ್ಣ. ಅವನೇ ಮನಸ್ಸು, ದೇಹ ಹಾಗೂ ಆತ್ಮ. ಒಂದು ಕನಸು ಎಷ್ಟು ಸತ್ಯವೋ ಅಷ್ಟೇ ಮಟ್ಟಿಗೆ ನೀವೂ ಸತ್ಯ. ಸತ್ಯವನ್ನು ನೋಡಬಲ್ಲ ಕಣ್ಣಿಗೆ ವಿಶ್ವವು ನಾಮರೂಪಗಳ ಬಾಹುಳ್ಯವಲ್ಲ, ಅದು ಸತ್ ಚಿತ್ ಅನಂದ. ನಿಮ್ಮ ಕನಸನ್ನು ಕುರಿತೇ ಯೋಚಿಸಿರಿ. ಅದು ನಿಮ್ಮಿಂದ ಹೊರಗೆ ಎಲ್ಲೋ ಹುಟ್ಟುವುದಿಲ್ಲ ಅಥವಾ ವಿವಿಧ ಪ್ರತಿಬಿಂಬಗಳು ಮತ್ತು ಚಟುವಟಿಕೆಗಳು ನಿಮ್ಮಿಂದ ಹೊರಗೆ ಯಾವುದೋ ಸ್ಥಳದಲ್ಲಿ ಮಾಯವಾಗುವುದಿಲ್ಲ. ಅವು ನಿಮ್ಮಲ್ಲಿಯೇ ಹುಟ್ಟುತ್ತವೆ, ನಿಮ್ಮೊಳಗೇ ಮಾಯವಾಗುತ್ತವೆ. ಕನಸು ಕಾಣುತ್ತಿರುವಾಗ, ಆ ಘಟನೆಗಳನ್ನು ವ್ಯಕ್ತಿಗಳನ್ನು ನಿಜವೆಂದು ಭಾವಿಸುತ್ತೀರಿ. ದುಃಖ, ಸಂತೋಷ, ಹೆದರಿಕೆ, ಕಾತರ ಮೊದಲಾದ ಭಾವನೆಗಳನ್ನು ಜಾಗ್ರದವಸ್ಥೆಯಲ್ಲಿ ಹೇಗೋ ಹಾಗೆಯೇ ಅನುಭವಿಸುತ್ತೀರಿ. ಅವೆಲ್ಲ ಭ್ರಮೆ ಎಂದು ಒಂದೇ ಸಾರಿಗೆ ತಳ್ಳಿಹಾಕಿ ಬಿಡುವುದಿಲ್ಲ. ಈ ವಿಶ್ವವು ಭಗವಂತನ ಕನಸು. ಅದು ಅವನಲ್ಲಿ ಹುಟ್ಟುತ್ತದೆ, ಅವನಲ್ಲೇ ಲೀನವಾಗುತ್ತದೆ. ಅದು ಅವನ ಮನಸ್ಸಿನ ಫಲ. ಈ ಬದುಕುಗಳು, ಪುನರ್ಜನ್ಮಗಳು ಇವೆಲ್ಲ ಮಾಯೆಯ ನೆಯ್ಗೆ, ಮಿಥ್ಯಾ ಕಲ್ಪನೆಗಳು, ಭ್ರಮಾತ್ಮಕ ಚಲನೆಗಳು, ಮಿಥ್ಯಾ ಚಿತ್ರಗಳು. ನೀವು ಪೂರ್ಣರು, ನೀವೇ ದೇವರು. ದೇವರು ನಿಮ್ಮೊಳಗಿದ್ದಾನೆ. ಈ ಅತ್ಯುನ್ನತ ಜ್ಞಾನವು ಯಾರ ಅನುಭವಕ್ಕೆ ಬಂದಿದೆಯೋ ಅವರು ಆ ಒಂದರೊಡನೆ ಇಲ್ಲೇ ಈಗಲೇ ಒಂದುಗೂಡಬಲ್ಲರು.

ಅಧ್ಯಾಯ ೧೦

# ಯೋಗಿಗಳು

ಭಾರತದ ದಾರ್ಶನಿಕ ಅನ್ವೇಷಣೆಯ (ವೇದಾಂತ) ಪ್ರಗತಿಯಲ್ಲಿ ಮೂರು ಹಂತಗಳನ್ನು ನಾವು ನೋಡುತ್ತೇವೆ. ಅವು ಅದ್ವೈತ, ವಿಶಿಷ್ಟಾದ್ವೈತ ಮತ್ತು ದ್ವೈತ ಹಂತಗಳು. ಯಾವುದೇ ಮಾನವ ಪರಿಶ್ರಮದಿಂದ ಈ ಮೂರು ಹಂತಗಳಿಂದ ಆಚೆಗೆ ಹೋಗಲು ಸಾಧ್ಯವಿಲ್ಲ. ಅದ್ವೈತ ಚಿಂತನೆಯು ಸಾಮಾನ್ಯ ಮಾನವನ ಎಟುಕಿಗೆ ನಿಲುಕುವಂಥದಲ್ಲ; ಅದು ಸುಲಭವಾಗಿ ಗ್ರಹಿಕೆಗೆ ಸಿಕ್ಕುವುದಿಲ್ಲ. ಅದನ್ನು ಬುದ್ಧಿಯಿಂದ ಕಲ್ಪಿಸಿಕೊಳ್ಳುವುದೇ ಕಷ್ಟ. ಅದನ್ನು ಅನುಭವಕ್ಕೆ ತಂದುಕೊಳ್ಳಬೇಕಾದರೆ ಶಕ್ತಿಯುತವಾಗಿ ವಿಷಯದ ಒಳ ಪ್ರವೇಶ ಮಾಡುವ ಸಾಮರ್ಥ್ಯ ಅಗತ್ಯ. ಆದ್ದರಿಂದ ದ್ವೈತ ಭಾವನೆಯ ಪರಿಶೀಲನೆಯಿಂದ ಪ್ರಾರಂಭ ಮಾಡುವುದು ಉತ್ತಮ. ಅಮೇಲೆ ಎರಡನೆಯ ಹಂತವಾದ ವಿಶಿಷ್ಟಾದ್ವೈತವನ್ನು ಸುಲಭವಾಗಿ ಅರ್ಥಮಾಡಿಕೊಳ್ಳಬಹುದು.

ಸಮುದಾಯದಷ್ಟೇ ಸ್ಥಿರವಾಗಿ ಮತ್ತು ವೇಗವಾಗಿ ವ್ಯಕ್ತಿಯೂ ಮುಂದೆ ಸಾಗಬೇಕು. ನಾವು ಶೈಶವ, ಬಾಲ್ಯ, ಹದಿಹರಯ, ತಾರುಣ್ಯ, ಮಧ್ಯವಯಸ್ಸು ಮತ್ತು ಮುಪ್ಪು ಈ ಹಂತಗಳನ್ನು ದಾಟುತ್ತವೆ. ಅದು ಕಣ್ಣಿಗೆ ಕಾಣಿಸದ, ಆದರೆ ಅನಿವಾರ್ಯವಾದ ಪ್ರಗತಿ. ಈ ಪ್ರತಿಯೊಂದು ಹಂತವೂ ಅದರಲ್ಲಿ ಕಳೆಯುತ್ತಿರುವಾಗ ಅನುಭವಕ್ಕೆ ಬರುತ್ತದೆ. ಈ ದಾರ್ಶನಿಕ ಸಂಶೋಧನೆಯ ಮೂರು ಹಂತಗಳ ವಿಚಾರವೂ ಅಷ್ಟೇ. ಈ ಒಂದೊಂದರ ದೃಷ್ಟಿಯೂ ಮಿಕ್ಕವುಗಳಲ್ಲಿ ಅಂತರ್ಗತವಾಗಿರುತ್ತದೆ. ಒಂದೊಂದೂ ಹಿಂದಿನ ಹಂತದ ಅನುಭವದಿಂದ ಮುಂದುವರಿಯುತ್ತದೆ. ಮುರೂ ಹಂತಗಳನ್ನು ಏಕಕಾಲಕ್ಕೆ ಅರಿಯುವುದು ಸಾಧ್ಯವಿಲ್ಲ. ನಮ್ಮ ಸಾಧನೆ, ಹಾಗೂ ಅದರಿಂದ ನಾವು ಪಡೆದುಕೊಂಡ ಅನುಭವಗಳ ಆಧಾರದ ಮೇಲೆ ಈ ಒಂದೊಂದು ದೃಷ್ಟಿಕೋನವೂ ಅರಿವಿಗೆ ಬಂದು ಆಲೋಚನೆಯ ಮತ್ತು ಕ್ರಿಯೆಯ ಚಿಲುಮೆಯಾಗುತ್ತದೆ.

ವಿಶ್ವವು ಸತ್ಯ ಎಂದು ಸ್ಥಿರೀಕರಿಸಿ, ಅದೇ ಉಸಿರಿನಲ್ಲಿ ಭಗವಂತನ ಅಸ್ತಿತ್ವವು ಒಂದು ಕನಸು ಎಂದು ಹೇಳುವವರು ತಮ್ಮನ್ನು ತಾವು ಮೂರ್ಖರೆಂದು ಸ್ಥಿರಪಡಿಸಿಕೊಳ್ಳುತ್ತಾರೆ ಅಷ್ಟೆ. ಏಕೆಂದರೆ ಪರಿಣಾಮವು, ಅಂದರೆ ವಿಶ್ವವು ಸತ್ಯವಾದರೆ ಅದಕ್ಕೊಂದು

ಕಾರಣವಿರಲೇಬೇಕು. ಏಕೆಂದರೆ ಕಾರಣವಿಲ್ಲದೆ ಪರಿಣಾಮವು ಹೇಗಿರಲು ಸಾಧ್ಯ? ಭಗವಂತನನ್ನು ನಿರಾಕರಿಸುವವರು ಮಾತ್ರವೇ ವಿಶ್ವವನ್ನು ನಿರಾಕರಿಸಬಹುದು. ಇಂದು ವಿಶ್ವವಾಗಿ ಗೋಚರಿಸುತ್ತಿರುವುದು ನಿಜವಾಗಿ ದೇವರು. ನಿಜವಾದ ಸಾಧಕನು ತನ್ನ ಪ್ರಯತ್ನದಲ್ಲಿ ಯಾಶಸ್ಸುಗಳಿಸಿದಾಗ ಮಾತ್ರ ಈ ದರ್ಶನವನ್ನು ಪಡೆಯುತ್ತಾನೆ. ವಾಸ್ತವ ಸಂಗತಿಯೇನೆಂದರೆ, ನಮ್ಮ ಅನುಭವಕ್ಕೆ ಬರುವ ಈ ಜಗತ್ತು ಒಂದು ಮನಸ್ಸಿನ ಹಾಗೆ. ನಾವು ಕನಸಿನಿಂದ ಎಚ್ಚೆತ್ತಾಗ ನಾವೇ ದೇವರಾಗಿರುವ ಸತ್ಯವು ಹೊಳೆಯುತ್ತದೆ, ಅರಿವಿಗೆ ಗೋಚರಿಸುತ್ತದೆ. ಕಾಲದಾದಿಯಿಂದಲೂ ನಾವು ನಮ್ಮಿಂದ ಹೊರಗೆ ಇಟ್ಟುಕೊಂಡಿರುವ ಭಗವಂತನೇ ನಮ್ಮ ಒಳಗೂ ಇರುವ ಸತ್ಯವಾಗಿದ್ದಾನೆ. ಈ ಸತ್ಯವೂ ನಮ್ಮಲ್ಲಿ ದೃಢಪಡುತ್ತದೆ.

ಎಲ್ಲಾ ಬಗೆಯ ಮತ್ತು ಎಲ್ಲಾ ಹಂತದ ಮಾನಸಿಕ ಸಿದ್ಧತೆಯನ್ನು ತೃಪ್ತಿಪಡಿಸುವಂಥ ಯಾವುದೇ ದರ್ಶನವು ಅಸ್ತಿತ್ವದಲ್ಲಿಲ್ಲ. ಪ್ರತಿಯೊಂದೂ ನಿರ್ದಿಷ್ಟ ಮೌಲಿಕತೆಯನ್ನು ಹೊಂದಿದೆ. ಬೌದ್ಧಿಕ ವಿಕಾಸದ ಹಂತಗಳು, ಅಥವಾ ವಿಚಾರ ಸಾಮರ್ಥ್ಯ ಒಬ್ಬೊಬ್ಬರಲ್ಲೂ ಬೇರೆ ಬೇರೆಯಾಗಿರುತ್ತದೆ.

ಆದ್ದರಿಂದ ಮೇಲೆ ಉಲ್ಲೇಖಿಸಿದ ಮೂರು ಬಗೆಯ ದಾರ್ಶನಿಕ ವಿವರಣೆಗಳು (ದ್ವೈತ, ವಿಶಿಷ್ಟಾದ್ವೈತ ಮತ್ತು ಅದ್ವೈತ) ವಿಭಿನ್ನ ಮನೋಧರ್ಮದ ಬೇರೆ ಬೇರೆ ಜನರಿಂದ ಸ್ವೀಕೃತವಾಗಿದೆ. ಆದ್ದರಿಂದ ಯಾವುದೇ ಒಂದು ಪಂಥವು ತನ್ನ ಮೇಲ್ಮೆಯನ್ನು ಸಾರಿಕೊಂಡು ಇತರರನ್ನು ಕೀಳ್ಮೆಯಿಂದ ನೋಡುವುದು ಸರ್ವಥಾ ಸಲ್ಲದು. ಅವಿವೇಕಿಗಳಾದವರು ಮಾತ್ರ ಅಂಥಹ ಕುತಂತ್ರಗಳಲ್ಲಿ ತೊಡಗುತ್ತಾರೆ.

ಜನರು ಮತಾಂಧ ದೃಷ್ಟಿಯಿಂದ ನಮ್ಮ ಬಳಿಗೆ ಬಂದಾಗ ಅವರನ್ನು ನಾವು ಮುಗುಳ್ನಗೆಯಿಂದ, ಭಗವದ್ಭಕ್ತಿಯಿಂದ ತುಂಬಿದ ಹಂಬಲದಿಂದ ಸ್ವಾಗತಿಸಬೇಕು. ಆಗ ಅಮಲೇರುತ್ತದೆ ನಿಜ, ಆದರೆ ಅದು ಪ್ರೇಮದ ಮದಿರೆಯನ್ನು ಪಾನಮಾಡಿದ್ದರಿಂದ ಬಂದ ಅಮಲು. ಕೆಲಸಕ್ಕೆಂದು ಹುಚ್ಚಾಪಟ್ಟೆ ಹಂಬಲಿಸುವ ಯಾರಾದರು ಒಬ್ಬರು ಬಂದಾಗ ಅವರೊಂದಿಗೆ ನಮ್ಮ ಕಲೆಯನ್ನು ಆತನಿಗೆ ವಹಿಸಿಕೊಟ್ಟು, ನಮ್ಮ ಕೌಶಲ್ಯವನ್ನು ಅವನೊಂದಿಗೆ ಹಂಚಿಕೊಳ್ಳಬೇಕು, ಅವನೊಂದಿಗೆ ಕೆಲಸದಲ್ಲಿ ತೊಡಗಿಕೊಳ್ಳಬೇಕು. ಈ ವಿಧಾನದಿಂದ ವಿವಿಧ ಧರ್ಮಗಳು ಮತ್ತು ತತ್ತ್ವ ಚಿಂತನೆಗಳನ್ನು ಅನುಸರಿಸುವವರ ನಡುವೆ ಸಾಮರಸ್ಯವನ್ನು ಉಂಟುಮಾಡಲು ಸಾಧ್ಯವಾಗುತ್ತದೆ. ಅದು ವಿವಿಧ ಪಂಥಗಳನ್ನೂ ನಂಬಿಕೆಗಳನ್ನೂ ಒಟ್ಟಿಗೆ ತರುತ್ತದೆ. ಈ ಸಾಮರಸ್ಯದ, ಸಹಕಾರದ ತತ್ತ್ವವು ಪ್ರತಿಯೊಬ್ಬ ಮನುಷ್ಯನ ಖಾಯಂ ಆಸ್ತಿಯಾಗಿದ್ದಿದ್ದರೆ ಅದೆಷ್ಟು ಅದ್ಭುತವಾಗಿರುತ್ತಿತ್ತು; ತನ್ನ ದೃಷ್ಟಿ ಪೂರ್ಣವಲ್ಲ, ಇತರ

ಅನೇಕ ದೃಷ್ಟಿಗಳು ಕೂಡಿದಾಗ ಅದರಿಂದ ಸತ್ಯವನ್ನು ಮನಗಾಣಬಹುದು ಎಂಬ ಅರಿವು ಪ್ರತಿಯೊಬ್ಬನಿಗೂ ಇದ್ದಿದ್ದರೆ ಈ ಜಗತ್ತು ಎಷ್ಟು ಸಂತೋಷಕರವಾಗಿ ಇರುತ್ತಿದ್ದಿತು!

ಯೋಗ ಎಂದರೆ ಒಂದುಗೂಡುವುದು ಎಂದರ್ಥ. ಭಾರತದಲ್ಲಿ ಯುಗ ಯುಗಾಂತರಗಳಿಂದಲೂ ಪ್ರತಿಯೊಬ್ಬರ ನರನಾಡಿಗಳಲ್ಲೂ ಯೋಗವು ಪ್ರವಹಿಸು ತ್ತಿದೆ. ಇಲ್ಲಿ ಅನೇಕ ಧರ್ಮಗಳ ಮತ್ತು ನಂಬಿಕೆಗಳ ಸಮರಸ ಸಹಬಾಳ್ವೆ ಸಾಧ್ಯ. ಅದು ವಿಶ್ವಧರ್ಮದ ಒಂದು ಮಾದರಿಯಾದೀತು. ತಮ್ಮ ನಂಬಿಕೆಯನ್ನು ದೈನಂ ದಿನ ಬದುಕಿನಲ್ಲಿ ಅಳವಡಿಸಿಕೊಳ್ಳುವವರು ಮಾನವ ಸಮುದಾಯದಲ್ಲಿ ಈ ಒಪ್ಪಂದವನ್ನೂ, ಸಹಬಾಳ್ವೆಯನ್ನೂ, ಸಾಧಿಸಬಲ್ಲರು. ಸಹಯೋಗವನ್ನು ಅಥವಾ ಐಕ್ಯತೆಯನ್ನು ಮೊದಲು ನಮ್ಮ ಬಾಹ್ಯ ನಡವಳಿಕೆ ಹಾಗೂ ಆಂತರಿಕ ಸ್ವಭಾವ ಇವುಗಳ ನಡುವೆ ಸಾಧಿಸಬಹುದು. ಪ್ರೇಮ ಪಥದಲ್ಲಿ ವಿಶ್ವಾಸವಿರುವ ಸಾಧಕನು ತನಗೂ ಪ್ರೇಮದ ಸಾಕಾರವಾದ ಭಗವಂತನಿಗೂ ನಡುವೆ ಐಕ್ಯತೆಗಾಗಿ ಶ್ರಮಿಸು ತ್ತಾನೆ. ವೇದಾಂತಿಯು ಅಸ್ತಿತ್ವದಲ್ಲಿರುವ ಎಲ್ಲದರಲ್ಲೂ ಭಗವಂತನಾಗಿ ಐಕ್ಯತೆ ಯನ್ನು ಕಾಣುತ್ತಾನೆ. ಯೋಗ ಪಥವನ್ನು ಬೇರೆ ಬೇರೆ ಸಂದರ್ಭಗಳಿಗೆ ತಕ್ಕ ಹಾಗೆ ಬೇರೆ ಬೇರೆಯಾಗಿ ವಿವರಿಸಲಾಗಿದೆ. ಆದರೆ ಐಕ್ಯತೆಯನ್ನು ಕಲ್ಪಿಸಿಕೊಂಡು ಜಾರಿಗೆ ತರಲು ಯಾರು ಸಮರ್ಥರಾಗಿದ್ದಾರೋ ಅವರು ಮಾತ್ರ ಯೋಗಿಗಳೆಂಬ ಗೌರವಕ್ಕೆ ಪಾತ್ರರಾಗುತ್ತಾರೆ.

ಭಗವಂತನೊಂದಿಗೆ ಐಕ್ಯತೆಯನ್ನು ಸ್ಥಾಪಿಸಲು ಕಾರ್ಯ ಚಟುವಟಿಕೆಗಳು ಮತ್ತು ಸಾಧನೆಗಳ ಮೂಲಕ ಯಾರು ಪ್ರಯತ್ನಿಸುತ್ತಾರೋ ಅವರು ಕರ್ಮಯೋಗಿಗಳು. ಪ್ರೇಮ ಪಥವನ್ನು ಅನುಸರಿಸುವವರು ಭಕ್ತಿಯೋಗಿಗಳು. ತಮ್ಮಲ್ಲಿರುವ ಸುಪ್ತ ಶಕ್ತಿಯನ್ನು ಸರಿಯಾದ ದಾರಿಯಲ್ಲಿ ಹರಿಸಿ ಉಪಯೋಗಿಸಿಕೊಳ್ಳುವವರು ರಾಜ ಯೋಗಿಗಳು. ತರ್ಕಬದ್ಧ ಸಂಶ್ಲೇಷಣೆ ಮತ್ತು ವಿಚಾರಪೂರ್ವಕ ವ್ಯಾಖ್ಯಾನಗಳಲ್ಲಿ ತೊಡಗಿಕೊಂಡು ಪ್ರತಿಭಾಪೂರ್ವಕ ಜ್ಞಾನವನ್ನು ಪಡೆಯುವವರು ಜ್ಞಾನಯೋಗಿ ಗಳು. ಭಾರತೀಯ ಆಧ್ಯಾತ್ಮಿಕ ಇತಿಹಾಸದಲ್ಲಿ ಈ ನಾಲ್ಕು ಬಗೆಯ ಸಾಧಕರು ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತಾರೆ.

ಮೊದಲು ಕರ್ಮಯೋಗಿಯ ವಿಚಾರವನ್ನು ತೆಗೆದುಕೊಳ್ಳೋಣ. ಉನ್ನತಿಕರ ವಾದ, ಉದಾತ್ತವಾದ ಕಾರ್ಯಗಳನ್ನು ಕೈಗೊಳ್ಳುವ ಮೂಲಕ ಅವನು ಭಗವಂತ ನೊಡನೆ ಐಕ್ಯತೆ ಸಾಧಿಸುವ ದಾರಿಯನ್ನು ಕಾಣುತ್ತಾನೆ. ಕೇವಲ ಒಂದು ನಿರ್ದಿಷ್ಟ ಯೋಜನೆಯನ್ನೋ ಕಾರ್ಯವನ್ನೋ ಸಾಧಿಸುವುದಕ್ಕೆಂದೇ ಹುಟ್ಟಿರುವಂತೆ

ತೋರುವ ಅನೇಕರನ್ನು ನಾವು ಜಗತ್ತನಲ್ಲಿ ನೋಡುತ್ತೇವೆ. ಕೇವಲ ಕಲ್ಪನೆಯಿಂದ, ಯೋಜನೆ ಹಾಕುವುದರಿಂದ ಅವರ ಬುದ್ಧಿ ತೃಪ್ತವಾಗುವುದಿಲ್ಲ. ಅವರ ಮನಸ್ಸಿನಲ್ಲಿ ವಾಸ್ತವವಾದ ಕಾರ್ಯಾಚರಣೆ ತುಂಬಿ ಕೊಂಡಿರುತ್ತದೆ. ಅದನ್ನು ಸಾಧಿಸಲು ಅವರು ಹಾತೊರೆಯುತ್ತಾರೆ. ಅಂಥವರಿಗಾಗಿ ಒಂದು ಕೈಪಿಡಿ ಪುಸ್ತಕ ಅಥವಾ ಶಾಸ್ತ್ರ ಅಗತ್ಯವಾಗಿ ಬೇಕು. ಅದು ಅವರನ್ನು ಉಪಯೋಗಕರವಾದ ದಾರಿಯಲ್ಲಿ ಕರೆದೊಯ್ಯುತ್ತದೆ. ಈ ಪ್ರಪಂಚದಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ಸದಾ ಕಾಲವೂ ಒಂದಿಲ್ಲೊಂದು ಚಟುವಟಿಕೆಯಲ್ಲಿ ನಿರತನಾಗಿರುವುದು ಕಂಡುಬರುತ್ತದೆ. ಆದರೂ ಕರ್ಮದ ಮಹತ್ವವನ್ನೂ ಮೌಲಿಕತೆಯನ್ನೂ ತಿಳಿದುಕೊಂಡಿರುವವರು ಬಹಳ ಕಡಮೆ ಜನ. ತಪ್ಪಿಸಿಕೊಳ್ಳಲಾಗದ ಈ ವಿಶೇಷ ಲಕ್ಷಣದಿಂದ ಅತ್ಯುತ್ತಮ ಫಲಗಳನ್ನು ಪಡೆಯುವುದು ಹೇಗೆ ಎಂಬುದನ್ನು ಹೆಚ್ಚುಜನ ಅರಿತಿಲ್ಲ. ಹಾಗಾಗಿ ಬದುಕನ್ನು ವ್ಯರ್ಥವಾಗಿ ನಿಷ್ಫಲವಾಗಿ ಮಾಡಿಕೊಳ್ಳುತ್ತಾರೆ. ಕರ್ಮಯೋಗವು ಮಾನವನಿಗೆ ಕರ್ಮದ ಮೌಲಿಕತೆಯನ್ನು ತಿಳಿಸಿಕೊಡುತ್ತದೆ, ಕಾರ್ಯ ಚಟುವಟಿಕೆಯಿಂದ ಗರಿಷ್ಠ ಪ್ರಯೋಜನವನ್ನು ಪಡೆಯುವತ್ತ ಮಾರ್ಗದರ್ಶನ ಮಾಡುತ್ತದೆ. ಕರ್ಮವನ್ನು ಎಲ್ಲಿ, ಯಾವಾಗ ಮತ್ತು ಹೇಗೆ ಮಾಡಬೇಕು, ಆಧ್ಯಾತ್ಮಿಕ ಪ್ರೇರಣೆಗಳು ಹೇಗೆ ಕರ್ಮಾಚರಣೆಯಲ್ಲಿ ಮನಸ್ಸನ್ನು ಹೆಚ್ಚು ಬಲಪಡಿಸಬಲ್ಲವು, ಆಧ್ಯಾತ್ಮಿಕ ವಿಕಾಸವು ಸಾಧಿತವಾಗುವ ರೀತಿಯಲ್ಲಿ ಕರ್ಮವನ್ನು ಹೇಗೆ ಆಚರಿಸಬೇಕು. ಇವುಗಳನ್ನು ಕರ್ಮಯೋಗವು ಕಲಿಸಿಕೊಡುತ್ತದೆ.

ಇದರ ವಿಷಯವಾಗಿ ಕೆಲವರು ಒಂದು ಗಂಭೀರವಾದ ಆಕ್ಷೇಪಣೆಯನ್ನು ಎತ್ತಿದ್ದಾರೆ. ಅದಕ್ಕೆ ನಾವು ಸ್ವಲ್ಪ ಗಮನ ಕೊಡಬೇಕು. ಕರ್ಮಯೋಗವು ಅತಿಯಾಗಿ ದೇಹ ಶ್ರಮವು ಒಳಗೊಳ್ಳುತ್ತದೆ ಎಂಬುದೇ ಆ ಆಕ್ಷೇಪ. ಆದರೆ ಮೂಲಭೂತವಾಗಿ ವ್ಯಕ್ತಿಯ ದೇಹ ಮತ್ತು ಮನಸ್ಸುಗಳಿಗೆ ಆಗುವ ಶ್ರಮವನ್ನೂ ಬಳಲಿಕೆಯನ್ನೂ ನಿರ್ಧರಿಸುವುದು ಅವನ ಸಹವಾಸ. "ನಾನು ಇದೊಂದು ಕೆಲಸದಲ್ಲಿ ತೊಡಗಿಕೊಳ್ಳುವುದನ್ನೇ ಇಚ್ಛಿಸುತ್ತೇನೆ, ನಾನು ಅವನಿಗೆ ಒಳ್ಳೆಯದನ್ನು ಮಾಡಲು ಬಯಸಿದೆ, ಆದರೆ ಅವನು ಅದನ್ನು ಅಲಕ್ಷಿಸಿ ನನಗೆ ಹಾನಿಯುಂಟುಮಾಡಿದನು." ಇವು ಸಾಮಾನ್ಯವಾಗಿ ಮೇಲೆ ಹೇಳಿದ ಮಾನಸಿಕ ಕ್ಲೇಶ ಮತ್ತು ಬಳಲಿಕೆಗಳಿಗೆ ಕಾರಣ. ಹಾಗೆ ಬರುವ ನಿರಾಶೆ, ವ್ಯಕ್ತಿಯು ಕರ್ಮದಲ್ಲಿ ಆಸಕ್ತಿಯನ್ನು ಕಳೆದುಕೊಳ್ಳುವಂತೆ ಮಾಡುತ್ತದೆ. ಅದು ಒಳಿತು ಮಾಡಲು ಬಯಸುತ್ತದೆ, ಯಾರಿಗೋ ಯಾವುದೋ ವಿಧಾನದಲ್ಲಿ ಒಳಿತುಮಾಡಲು ಪ್ರಯತ್ನಿಸುತ್ತದೆ. ಅದರಿಂದ ಸಂತೋಷವನ್ನು ಪಡೆಯಲು, ಸಂತೋಷವನ್ನು ಹಂಚಲು ಅದು ಆಸೆ ಪಟ್ಟಿರುತ್ತದೆ. ಆ ಸಂತೋಷವು ಒದಗದೆ ಹೋದಾಗ ನಿರಾಶೆ ಉಂಟಾಗುತ್ತದೆ.

ಆದರೆ ಮೋಹಗೊಳ್ಳದೆ, ಕರ್ಮವು ಯಾರಿಗೆ ಯಾವ ರೀತಿಯಲ್ಲಿ ಸಹಾಯ ಮಾಡುತ್ತಿದೆ ಎಂಬುದರ ಅರಿವೇ ಇಲ್ಲದೆ ಕರ್ಮವನ್ನು ಕೇವಲ ಕರ್ಮದ ಸಲುವಾಗಿ ಮಾಡಬೇಕು ಎಂದು ಕರ್ಮಯೋಗವು ಕಲಿಸಿಕೊಡುತ್ತದೆ. ಕರ್ಮಯೋಗಿಯು ಸದಾ ಕೈ ತುಂಬ ಕೆಲಸ ಇಟ್ಟುಕೊಂಡಿರುತ್ತಾನೆ, ಏಕೆ? ಅದು ಅವನ ಸಹಜ ಸ್ವಭಾವವಾದುದರಿಂದ, ಕೆಲಸ ಮಾಡುವಾಗ ತನಗೆ ಸಂತೋಷವಾಗುತ್ತದೆ ಎನ್ನುವ ಕಾರಣದಿಂದ ಅಷ್ಟೆ. ಅವನು ಫಲಗಳಿಗಾಗಿ ಚೌಕಾಸಿ ಮಾಡುವುದಿಲ್ಲ; ಯಾವುದೇ ಲೆಕ್ಕಾಚಾರ ಮಾಡಬೇಕೆಂದು ಅವನಿಗನಿಸುವುದಿಲ್ಲ. ಅವನಿಗೆ ದುಃಖವಾಗಲಿ, ನಿರಾಶೆಯಾಗಲಿ ಇರುವುದಿಲ್ಲ. ಏಕೆಂದರೆ, ಅವನು ಯಾವ ಲಾಭವನ್ನೂ ಬಯಸಿಲ್ಲ.

ಎರಡನೆಯ ದಾರಿ ಭಕ್ತಿಯೋಗದ್ದು. ಭಾವುಕ ಪ್ರವೃತ್ತಿಯವರಿಗೆ ಇದು ಬಹುವಾಗಿ ಹೊಂದುತ್ತದೆ. ತಮ್ಮ ಹೃದಯದಲ್ಲಿ ಪ್ರೇಮವನ್ನು ತುಂಬಿಕೊಳ್ಳಲು ಶಕ್ತರಾಗಿರುವವರಿಗೆ ಇದು ಸರಿಯಾದ ದಾರಿ. ಭಗವಂತನನ್ನು ಪ್ರಿಯಕರನೆಂದು ಭಾವಿಸಲು ಇಲ್ಲಿ ಪ್ರಚೋದನೆ ಇರುತ್ತದೆ. ಅವನ ಕಾರ್ಯ ಚಟುವಟಿಕೆಗಳೇ ಬೇರೆ ತೆರನಾದವು. ಅಗರುಬತ್ತಿ ಉರಿಸುವುದು, ಪೂಜೆಗಾಗಿ ಹೂವುಗಳನ್ನು ಬಿಡಿಸಿ ತರುವುದು, ಪೂಜಾಮಂಟಪಗಳನ್ನು, ದೇವಾಲಯಗಳನ್ನು ಕಟ್ಟುವುದು, ಅಲ್ಲಿ ಸೌಂದರ್ಯ, ಜ್ಞಾನ, ಶಕ್ತಿಗಳ ಮೂರ್ತಿಯಾದ ಭಗವಂತನ ವಿಗ್ರಹವನ್ನು ಸ್ಥಾಪಿಸಿ ಪೂಜಿಸುವುದು ಹೀಗೆ.

ಭಗವಂತನೊಂದಿಗೆ ಐಕ್ಯತೆ ಸಾಧಿಸಲು ಇದು ಸರಿಯಾದ ಮಾರ್ಗವಲ್ಲ ಎಂದು ಟೀಕಿಸಬೇಕೆನಿಸುತ್ತಿದೆಯೇನು? ನೆನಪಿನಲ್ಲಿಟ್ಟುಕೊಳ್ಳಿ, ಜಗತ್ತಿನಾದ್ಯಂತ ಋಷಿಮುನಿಗಳು, ಸಾಧು ಸಂತರು, ಆಧ್ಯಾತ್ಮಿಕ ಮುಖಂಡರು ಈ ಭಕ್ತಿಯ ಅರ್ಪಣೆಯ ಹಂತದಿಂದಲೇ ಮೂಡಿಬಂದವರು. ಕೆಲವು ಧರ್ಮಗಳು ಭಗವಂತನನ್ನು ನಿರಾಕಾರನೆಂದು ಕಲ್ಪಿಸಿಕೊಳ್ಳಲು ಪ್ರಯತ್ನಿಸಿದುವು. ಅವನನ್ನು ವಿಗ್ರಹಗಳು, ಪಟಗಳು ಮೊದಲಾದವುಗಳ ಮೂಲಕ ಪೂಜಿಸುವುದು ದೈವದೂಷಣೆಯಾಗುತ್ತದೆ ಎಂದು ಹೇಳಿದುವು. ಅಂಥವರು ಭಕ್ತಿ ಪಂಥಗಳನ್ನು ಅಡಗಿಸಲು ಪ್ರಯತ್ನಿಸಿದರು. ಆ ಕ್ರಿಯೆಯಲ್ಲಿ ಭಗವಂತನ ಸತ್ಯವನ್ನು ಶಕ್ತಿ ವೈಭವಗಳನ್ನು ಅವರು ಹೀನಯಿಸಿದರು. ಭಗವಂತನು ಒಂದು ಆಕಾರದಲ್ಲಿ ಸಂಕೇತಿಸಿಕೊಳ್ಳಲಾರ ಎಂದು ನಂಬುವುದು ಕುರುಡುತನದ ಕುರುಹು. ಪೂಜೆ ನಿಷ್ಫಲವಾದ ಕ್ರಿಯೆ ಎಂದು ಆಕ್ಷೇಪಿಸುವುದು ಪೊಳ್ಳು ಆಕ್ಷೇಪಣೆ. ಜಗತ್ತಿನ ಇತಿಹಾಸವೇ ಭಕ್ತಿಯ ಸಾಮರ್ಥ್ಯಕ್ಕೆ ಸಾಕ್ಷಿಯಾಗಿದೆ. ಈ ಬಗೆಯ ಚಟುವಟಿಕೆಗಳನ್ನೂ ಸಮಾರಂಭಗಳನ್ನೂ ಉತ್ಸವಾದಿ ಆಚರಣೆಗಳನ್ನೂ ದೈವದೊಂದಿಗೆ ಐಕ್ಯತೆ ಪಡೆಯಬೇಕೆಂಬ ಉದ್ದೇಶದಿಂದ ಅವುಗಳನ್ನು ಕೈಗೊಂಡ

ಸಾಧಕರ ಜೀವನಚರಿತ್ರೆಗಳನ್ನು ಅವಹೇಳನ ಮಾಡುವುದು ಸರ್ವಥಾ ಸೂಕ್ತವಲ್ಲ. ಸಾಕಾರವನ್ನು ಪೂಜಿಸುವುದರಿಂದ ಸಂತೋಷವನ್ನು ಪಡೆಯಲು ಹಂಬಲಿಸುವವರು ಹಾಗೆಯೇ ಮಾಡಲಿ. ಅವರ ನಂಬಿಕೆಯನ್ನು ಮುರಿಯುವುದು, ಅದು ನಿಷ್ಫಲವೆಂಬಂತೆ ವರ್ತಿಸುವುದು ಮಹಾಪಾಪವಾಗುತ್ತದೆ.

ಆಧ್ಯಾತ್ಮ ವೀರರ, ಸಾಕ್ಷಾತ್ಕಾರದ ಶಿಖರವನ್ನು ಮುಟ್ಟಿದವರ, ಆಧ್ಯಾತ್ಮಿಕ ಪರಿಪೂರ್ಣತೆಯನ್ನು ಸಾಧಿಸಿದವರ ಮಹಿಮೆಯು ಮಾನವ ಜನಾಂಗದ ಮನಸ್ಸಿನ ಮೇಲೆ ಅಪಾರವಾದ ಪ್ರಭಾವವನ್ನು ಬೀರುತ್ತದೆ. ಅಂತಹ ಮಹಾಋಷಿಗಳ ಉದ್ದನೆಯ ಸಾಲಿನಿಂದಾಗಿಯೇ ಭಾರತದ ಆಧ್ಯಾತ್ಮಿಕ ಸಂದೇಶವು ಎಲ್ಲಾ ರಾಷ್ಟ್ರಗಳ ಗಮನವನ್ನು ಸೆಳೆದಿದೆ. ಭಾರತವು ಜಗತ್ತಿನ ಗೌರವವನ್ನು ಪಡೆಯಲು ಸಮರ್ಥವಾಗಿದ್ದರೆ, ಅದಕ್ಕೆ ಕಾರಣವನ್ನು ಅವರು ಸಂಪಾದಿಸಿ ರಕ್ಷಿಸಿಟ್ಟಿರುವ ಅಮೂಲ್ಯ ಸಂಪತ್ತಿನಲ್ಲಿ ನೋಡಬೇಕು. ಇಲ್ಲಿ ದೈವಪ್ರೀತಿ, ಪಾಪ ಭೀತಿಗಳು ಬದುಕಿನ ಮೂಲಸ್ತಂಭಗಳಾಗಿವೆ, ಬದುಕಿಗೆ ನಿತ್ಯ ಮಾರ್ಗದರ್ಶಕಗಳಾಗಿವೆ. ಭಾರತವು ಪವಿತ್ರ ಭೂಮಿ, ತ್ಯಾಗ ವೈರಾಗ್ಯಗಳಲ್ಲಿ, ಪರಿಪೂರ್ಣ ವಸ್ತುವಿನೊಂದಿಗೆ ಐಕ್ಯತೆ ಸಾಧಿಸುವುದನ್ನೇ ಗುರಿಯಾಗಿಟ್ಟುಕೊಂಡ ನಾಡು, ತ್ಯಾಗ ಯೋಗಗಳಲ್ಲಿ ಪ್ರಸಿದ್ಧವಾದ ನಾಡು ಎಂಬ ಪ್ರಶಂಸೆಗೆ ಪಾತ್ರವಾಗಿದೆ. ಈ ಸಂಸ್ಕೃತಿಯು ಉದ್ಬೋಧಿಸಿದ ಪ್ರೇರಣೆಗಳೆಲ್ಲವೂ ಮನೋ ಚಾಂಚಲ್ಯವನ್ನು ಗೆಲ್ಲುವ ಉದ್ದೇಶವನ್ನು ಹೊಂದಿದಂಥವು.

ಈ ಸಂಸ್ಕೃತಿಯು ಪರಮೋನ್ನತ ಸತ್ಯ ಸ್ವರೂಪ ಮತ್ತು ಲಕ್ಷಣಗಳನ್ನು ಕುರಿತು ನೀಡಿದ ವಿವರಣೆಗಳು ಸದಾ ಕ್ಷೋಭೆಗೊಂಡ ಭಾವೋದ್ವೇಗಭರಿತ ಜನರಿಗೆ ಹಿತವೆನಿಸುತ್ತವೆಯೇನು? ಈ ಸಂಸ್ಕೃತಿಯು ನಿರ್ಮಾಪಕರಿಗೆ ಭಗವಂತನು ಪರಮ ಸತ್ಯ, ಏಕಮಾತ್ರ ಸತ್ಯ ಸಂಗತಿ, ತಮ್ಮ ಸಮಸ್ತ ಪ್ರೇಮದ ಲಕ್ಷ್ಯ. ಆದ್ದರಿಂದ ಈ ಸಂಸ್ಕೃತಿಯು ಪರಂಪರೆಯಲ್ಲಿ ಬಂದವರು ಮತ್ತು ಅದರಂತೆ ಅನುಸರಿಸುವವರು ಸೀಮಿತ ತರ್ಕದ ಆಧಾರವುಳ್ಳ ಶೂನ್ಯವಾದವನ್ನು ಮುಂದೊಡ್ಡುವ ಜನರನ್ನು ಕತೆಯಲ್ಲಿ ಬರುವ ಅವಿವೇಕಿಯಂತೆ ಎಂದು ಪರಿಗಣಿಸುತ್ತಾರೆ. ಆ ಅವಿವೇಕಿ ಮೂರ್ಖನು ಒಂದು ವಿಗ್ರಹವನ್ನು ನೋಡಿದನು. ಅದರಲ್ಲಿ ದೇವರಿದ್ದಾನೆಯೇ ಎಂದು ಕಂಡುಹಿಡಿಯಬೇಕೆಂಬ ಕಾತರದಿಂದ ಒಂದು ಸುತ್ತಿಗೆ ತೆಗೆದುಕೊಂಡು ಅದನ್ನು ಪುಡಿಮಾಡಿದನು!

ಅಂಥಹ ಜನರಿಗೆ ಭಕ್ತಿ ಯೋಗವು ಪ್ರೇಮದ ಪಥವನ್ನು ಬೋಧಿಸುತ್ತದೆ. ಲಾಭವನ್ನು ಪಡೆಯಬೇಕೆಂಬ ದೃಷ್ಟಿಯಿಂದ ಪ್ರೇಮಿಸಬೇಡಿ ಎಂದು ಅದು ಹೇಳುತ್ತದೆ. ಎಲ್ಲರನ್ನು ಪ್ರೇಮಿಸಿ; ನಿಮ್ಮನ್ನು ಪ್ರೇಮಿಸಿಕೊಳ್ಳುವಂತೆಯೇ ಎಲ್ಲರನ್ನು ಪ್ರೇಮಿಸಿ.

ಆಗ ನಿಮಗೆ ಯಾವ ಕೇಡೂ ತಟ್ಟುವುದಿಲ್ಲ. ಅದು ಎಲ್ಲರಲ್ಲೂ ಸಂತೋಷ ಸಮಾಧಾನಗಳನ್ನು ಹರಡುತ್ತದೆ. ಎಲ್ಲ ಜೀವಿಗಳಲ್ಲೂ ಭಗವಂತನು ಪ್ರೇಮರೂಪಿ ಯಾಗಿದ್ದಾನೆ. ಆದ್ದರಿಂದ ನಿಮ್ಮ ಪ್ರೇಮದ ಲಕ್ಷ್ಯ, ಅದನ್ನು ಸವೀಕರಿಸುವವನು ವ್ಯಕ್ತಿಯಲ್ಲ. ಅವನಲ್ಲಿ ವಾಸವಾಗಿರುವ ಭಗವಂತ. ಭಕ್ತಿ ಪಥವನ್ನು ಹಿಡಿದಿರುವ ಭಗವದನ್ವೇಷಕನು ಬಹುಬೇಗ ಈ ಸಂಗತಿಯನ್ನು ಅರ್ಥ ಮಾಡಿಕೊಳ್ಳುತ್ತಾನೆ.

ಕೆಲವರು ಭಗವಂತನನ್ನು ತಾಯಿಯಂತೆ ಪ್ರೀತಿಸಿದರೆ, ಕೆಲವರು ತಂದೆಯಂತೆ, ಇನ್ನಷ್ಟು ಜನ ಅವನು ತಮ್ಮ ಅತ್ಯಂತ ಪ್ರೀತಿಯ ಆತ್ಮೀಯ ಗೆಳೆಯನಂತೆ ಪ್ರೀತಿಸುತ್ತಾರೆ. ಇನ್ನೂ ಇತರರು ಭಗವಂತನು ತಮ್ಮ ಪ್ರಿಯಕರ, ಏಕೈಕ ಅಪೇಕ್ಷಿತ ಲಕ್ಷ್ಯ ಎಂದು ಭಾವಿಸುತ್ತಾರೆ. ಇವರೆಲ್ಲರೂ ತಮ್ಮ ಪ್ರೇಮವನ್ನು ಪ್ರೇಮಸಾಗರವೇ ಆದ ಭಗವಂತನಲ್ಲಿ ವಿಲೀನಗೊಳಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಎಲ್ಲೆಲ್ಲಿ ಪ್ರಮವು ವ್ಯಕ್ತವಾಗುತ್ತದೆಯೋ ಅದು ಭಗವತ್ಪ್ರೇಮವೆಂದೇ ಭಾವಿಸಿ. ಭಗವಂತನೇ ಮಾನವ ಜನಾಂಗದ ಅತಿ ದೊಡ್ಡ ಪ್ರೇಮಿ. ಆದ್ದರಿಂದ ತಾನು ಪ್ರೀತಿಸುವ ಮನುಷ್ಯನಿಗೆ ಸೇವೆಗೈಯಲು ಯಾರಾದರೂ ಬಯಸಿದರೆ ಅಪಾರವಾಗಿ ಅನುಗ್ರಹಿಸುತ್ತಾನೆ. ಇತರರ ನೋವನ್ನು ಕಂಡು ಮಾನವನ ಹೃದಯವು ಕರಗಿದಾಗ, ಯಾತನೆಯಲ್ಲಿ ರುವವನನ್ನು ಕುರಿತು ಸಹಾನುಭೂತಿಯಿಂದ ಹೃದಯವು ವಿಸ್ತಾರಗೊಂಡಾಗ, ನಂಬಿರಿ, ಅಲ್ಲಿ ಭಗವಂತ ಇದ್ದಾನೆ. ಅದೇ ಭಕ್ತಿಯೋಗ ಮಾರ್ಗ ಮೌಲಿಕತೆಯ ಕುರುಹು.

ಈಗ ರಾಜಯೋಗದ ವಿಷಯಕ್ಕೆ ಬರೋಣ. ರಾಜಯೋಗವೆಂದರೆ ಮನಸ್ಸಿನ ಮೇಲೆ ಪ್ರಭುತ್ವವನ್ನು ಸ್ಥಾಪಿಸುವ ಪ್ರಕ್ರಿಯೆ. ವ್ಯಕ್ತಿಯು ತನ್ನ ಬುದ್ಧಿಯನ್ನು ಬೇರೊಬ್ಬ ರಿಗೆ ಒಪ್ಪಿಸಿಬಿಡುವುದೋ ಧಾರ್ಮಿಕ ಮುಖಂಡರು ಹಾಕಿಕೊಟ್ಟ ಸೂತ್ರಗಳನ್ನು ಪಾಲಿಸುವುದೋ ಅವಶ್ಯಕತೆಯಿಲ್ಲ. ಇಲ್ಲಿ, ತಪ್ಪಾಗುವ, ಜಾರಿ ಬೀಳುವ ಭೀತಿಯೇ ಇಲ್ಲ. ಪ್ರತಿಯೊಂದು ಹಂತದಲ್ಲಿಯೂ ವ್ಯಕ್ತಿಯು ತನ್ನದೇ ಬುದ್ಧಿಯನ್ನು ತನ್ನದೇ ಅನುಭವವನ್ನು ಅವಲಂಬಿಸಿ, ತಾನೇ ತನ್ನ ದಾರಿಯನ್ನು ಪರೀಕ್ಷಿಸಿ ನಿರ್ಧರಿಸಿಕೊಂಡಿರುತ್ತಾನೆ.

ಪ್ರತಿಯೊಬ್ಬ ಜೀವಿಗೂ ಜ್ಞಾನ ಸಾಧನೆಗೆ, ಜ್ಞಾನದ ಮೂಲಕ ವಿವೇಕವನ್ನು ಪಡೆಯುವುದಕ್ಕೆ ಮೂರು ಬಗೆಯ ಉಪಕರಣಗಳಿವೆ. ಸಹಜ ಪ್ರವೃತ್ತಿಯು ಪ್ರಾಣಿ ಗಳಲ್ಲಿ ಬಲವಾಗಿರುತ್ತದೆ, ಚುರುಕಾಗಿರುತ್ತದೆ, ಮುಂದುವರೆದಿರುತ್ತದೆ. ಇದು ಪ್ರಾಚೀ ನವಾದದ್ದು, ಅತ್ಯಂತ ಕೆಳ ಮಟ್ಟದ್ದು. ಆದ್ದರಿಂದ ಮೂರರಲ್ಲಿ ಅತಿ ಕಡಮೆ ಪ್ರಯೋಜನ ಕೊಡುವಂಥದು. ಎರಡನೆಯದು ವಿಚಾರಶಕ್ತಿ. ಇದು ಕಾರಣವನ್ನೂ

ಅದರ ಪರಿಣಾಮವನ್ನೂ ಹುಡುಕುತ್ತದೆ. ಇದು ಮನುಷ್ಯನಲ್ಲಿ ಚೆನ್ನಾಗಿ ವ್ಯಕ್ತವಾಗುತ್ತದೆ. ಹುಟ್ಟರಿವು ಅಥವಾ ಸಹಜ ಪ್ರವೃತ್ತಿಯಾದರೆ ಇಂದ್ರಿಯಗಳು ಮತ್ತು ಇಂದ್ರಿಯಾನುಭವಗಳ ಸೀಮಿತ ಕ್ಷೇತ್ರದಲ್ಲಿ ಮಟ್ಟಿಗೆ ವರ್ತಿಸಬಲ್ಲದು. ಮನುಷ್ಯನಲ್ಲಿ ವಿಚಾರ, ವಿವೇಚನೆ ಈ ಉಪಕರಣಗಳು ಬಹುತೇಕವಾಗಿ ಹುಟ್ಟರಿವನ್ನು ತನ್ನ ವಶಪಡಿಸಿಕೊಂಡಿರುತ್ತದೆ. ವಿಚಾರ ಶಕ್ತಿಯ ಎಲ್ಲೆ ಬಹಳ ತೆಳು. ಬಹು ವಿಶಾಲ ವ್ಯಾಪ್ತಿಯ ಕ್ಷೇತ್ರಗಳಲ್ಲಿ ಅದು ವರ್ತಿಸಬಲ್ಲುದು. ಹಾಗಿದ್ದರೂ ಅದು ಅಸಮರ್ಪಕ ಫಲವನ್ನು ನೀಡುತ್ತದೆ; ಅದರ ಎಟುಕು ಮಿತವಾದದ್ದು. ಕೇವಲ ಸ್ವಲ್ಪ ದೂರ ಅದು ಮುಂದೆ ಸಾಗಬಲ್ಲದು. ಅಲ್ಲಿಂದ ಮುಂದಕ್ಕೆ ಹೋಗಲಾರದು. ತರ್ಕವು ಒಯ್ಯುವ ದಾರಿ ನೇರ ದಾರಿಯಲ್ಲ. ಅದು ಡೊಂಕು, ಮತ್ತೆ ಮತ್ತೆ ಹಿಂದಕ್ಕೆ, ಎಲ್ಲಿಂದ ಹೊರಟಿತೋ ಅಲ್ಲಿಗೆ ಬರುತ್ತದೆ.

ನಿದರ್ಶನಕ್ಕೆ ಬೇಕಾದರೆ ವಸ್ತು ಜಗತ್ತನ್ನೂ ಅದನ್ನು ರಚಿಸಿರುವ ದ್ರವ್ಯಗಳ ಮತ್ತು ಶಕ್ತಿಗಳ ವಿಚಾರವನ್ನೂ ತೆಗೆದುಕೊಳ್ಳಿ. ವಸ್ತು ಜಗತ್ತನ್ನೂ ಅದರ ಅಂಗಾಂಶಗಳನ್ನೂ ಪ್ರೇರಿಸಿಸುವುದು, ಪ್ರಚೋದಿಸುವುದು ಯಾವುದೋ ಅದು ಅ ಕೆಲಸವಷ್ಟಕ್ಕೆ ಸೀಮಿತವಾಗುವುದಿಲ್ಲ.  ವಸ್ತು ಜಗತ್ತಿನ ಆಚೆಗೆ ಅಂತರ್ಗತವಾಗಿರುವುದನ್ನೂ ಹೀರಿಕೊಳ್ಳುತ್ತದೆ. ಆದ್ದರಿಂದ ವಿಚಾರಶಕ್ತಿಯು ಒಳಗೊಂಡು ವಿವರಿಸಬಹುದಾದ ವ್ಯಾಪ್ತಿಯನ್ನು ಸಣ್ಣ ಅಣುವಿನಲ್ಲಿರುವ ಚಿತ್‌ಗೆ ಹೋಲಿಸಬಹುದು. ಪ್ರಕಾಶಮಾನವಾದ ಪೂರ್ಣತೆಯ ವ್ಯಾಪ್ತಿ, ವೈಶಾಲ್ಯದೆದುರಿಗೆ ಅದು ನಿಲ್ಲದು.

ವಿಚಾರದ ಗಡಿಗಳನ್ನು ದಾಟಿ ಈ ಪ್ರತಿಭೆಯು ಪೂರ್ಣವೂ ಸ್ವತಂತ್ರವೂ ಆದ ಕ್ಷೇತ್ರವನ್ನೂ ಪ್ರವೇಶಿಸಬೇಕಾದರೆ ಕೆಲವು ಆಧ್ಯಾತ್ಮಿಕ ಸಾಧನೆಗಳನ್ನು ಕೈಗೊಳ್ಳುವುದು ಅತ್ಯವಶ್ಯಕ. ಅವುಗಳನ್ನು ದೈವ ಪ್ರಚೋದಿತ ಜ್ಞಾನ ಎಂದು ವರ್ಗೀಕರಿಸಬಹುದು. ಏಕೆಂದರೆ ಜ್ಞಾನದಲ್ಲಿ ಕೇವಲ ಮೂರು ವರ್ಗಗಳಿವೆ—ಸಹಜ ಜ್ಞಾನ (ಸಹಜವಾದದ್ದು, ಗ್ರಹಣೇಂದ್ರಿಯ ಮತ್ತು ಕರ್ಮೇಂದ್ರಿಯಗಳ ಮೂಲಕ ಬರುವಂಥದು) ಯಕ್ತಿ ಯಕ್ತ ಜ್ಞಾನ (ವಿವೇಚನೆ ಮತ್ತು ಮೌಲ್ಯ ನಿರ್ಧಾಗಳ ಪ್ರಕ್ರಿಯೆಯ ಮೂಲಕ ಪಡೆಯುವಂಥದು) ಮತ್ತು ಈಶ್ವರ ಪ್ರೇರಿತ ಜ್ಞಾನ (ಭಗವತ್ ಕೃಪೆಯ ಮೂಲಕ ಪ್ರತಿಭೆಯಿಂದ ಪಡೆದ ಜ್ಞಾನ). ಇವುಗಳಲ್ಲಿ ಮೊದಲೆನೆಯದು ಪ್ರಾಣಿಗಳಿಗಿರುತ್ತದೆ, ಎರಡನೆಯದು ಮಾನವನ ಲಕ್ಷಣ ಮತ್ತು ಮೂರನೆಯದು ಉನ್ನತಾತ್ಮರಾದವರ ಅಮೂಲ್ಯ ನಿಧಿ.  ಈ ಮೂರನೆಯ ಜ್ಞಾನದ ಸಸಿಗಳನ್ನು ಪೋಷಿಸಿ, ಬೆಳೆಸುವ ಅವಕಾಶ ಪ್ರತಿಯೊಬ್ಬರಿಗೂ ಇದೆ. ಆ ಶಕ್ತಿಯು ಎಲ್ಲರಲ್ಲೂ ಸುಪ್ತವಾಗಿದೆ.

ಇನ್ನೊಂದು ವಿಷಯವನ್ನೂ ಮನಸ್ಸಿನಲ್ಲಿಟುಕೊಳ್ಳಬೇಕು. ಈ ಮೂರೂ ಬೆಳವಣಿಗೆಯ ಮೂರು ಹಂತಗಳು, ಬೇರೆ ಬೇರೆ ವಿಧದ ಜ್ಞಾನಗಳಲ್ಲ. ಈಶ್ವರ ಪ್ರೇರಿತ ಜ್ಞಾನವು ಯುಕ್ತಿ ಯುಕ್ತ ಜ್ಞಾನಕ್ಕೆ ವಿರೋಧಿಯಲ್ಲ, ಯುಕ್ತಿ ಯುಕ್ತ ಜ್ಞಾನದಲ್ಲಿ ಯಾವುದು ಪ್ರಕಟವಾಗಿರಲಿಲ್ಲವೋ ಅದನ್ನು ಬೆಳಕಿಗೆ ತರುತ್ತದೆ ಅಷ್ಟೆ. ಮುಂದಿನ ಹಂತವು ತನಗಿಂತ ಹಿಂದಿನದನ್ನು ಸ್ವೀಕರಿಸುತ್ತದೆ, ವಿವರಿಸುತ್ತದೆ. ಮನಸ್ಸಿನ ಚಂಚಲತೆಗಳಿಂದ ಗಾಸಿಗೊಂಡು ಕೆಲವರು ತಮ್ಮ ವಿಕೃತ ಮನೋಧರ್ಮಗಳು ದೈವಾನುಗ್ರಹದಿಂದಲೇ ಬಂದುವು ಎಂದುಕೊಳ್ಳುತ್ತಾರೆ. ಅವರು ತಮ್ಮ ಆದೇಶದಂತೆ ನಡೆಯಬೇಕೆಂದು ಇತರರನ್ನು ಬಲಾತ್ಕರಿಸುವುದೂ ಉಂಟು. ಅವರು ತಮ್ಮ ನಿಷ್ಫಲ ನಿರ್ದೇಶನದಿಂದಾಗಿ ಜನರನ್ನು ದಿಕ್ಕು ತಪ್ಪಿಸುತ್ತಾರೆ. ಈ ಥಳುಕುಗಾರರು ತಮ್ಮ ಅವಿವೇಕದ ತೊದಲು ದೈವ ಪ್ರಚೋದಿತ ಎಂದೇ ಘೋಷಿಸುತ್ತಾರೆ.

ಬೋಧನೆಯು ಯಕ್ತಿ ಯುಕ್ತ ಜ್ಞಾನಕ್ಕೆ ಎಂದಿಗೂ ವಿರೋಧಿಯಲ್ಲ. ಅಂದರೆ ವಿವೇಚನೆ ಮತ್ತು ಮೌಲ್ಯ ಮಾಪನಗಳಿಂದ ಪಡೆಯುವ ಜ್ಞಾನಕ್ಕೆ ಪ್ರತಿಯಲ್ಲ. ಮೇಲೆ ಹೇಳಿದ ಯೋಗಗಳೆಲ್ಲವನ್ನೂ ಈ ದೃಷ್ಟಿಯಿಂದಲೇ ನಿರೂಪಿಸಿದೆ. ರಾಜಯೋಗವನ್ನು ಮನಸ್ಸು ಮತ್ತು ಅದರ ಸಂಕಲ್ಪಗಳಿಂದ ಆಚರಿಸಬೇಕು. ಇದೊಂದು ವ್ಯಾಪಕವಾದ ವಿಷಯ. ಆದ್ದರಿಂದ ಇಲ್ಲಿ ಅದರ ಸಾರಾಂಶವನ್ನು ಮಾತ್ರ ಪರಿಶೀಲಿಸೋಣ. ಅತ್ಯಂತ ಕೆಳಮಟ್ಟದವನಿಗೂ, ಸಾಧನೆಯ ಅತ್ಯಂತ ಎತ್ತರದಲ್ಲಿರುವ ಯೋಗಿಗೂ ಏಕೈಕವಾದ ಆಶ್ರಯವಾಗಿದೆ ಏಕಾಗ್ರತೆಯಿಂದ ಕೂಡಿದ ಧ್ಯಾನ. ಒಂದು ಪ್ರಯೋಗಾಲಯದಲ್ಲಿ ಸಂಶೋಧನಾನಿರತನಾದ ವ್ಯಕ್ತಿಗಾಗಲಿ, ರಸ್ತೆಯಲ್ಲಿ ನಡೆದು ಹೋಗುತ್ತಿರುವವನಿಗಾಗಲಿ, ಒಂದು ಪುಸ್ತಕವನ್ನು ಓದುತ್ತಿರುವ ವಿದ್ವಾಂಸನಿಗಾಗಲಿ, ಒಂದು ಪತ್ರ ಬರೆಯುತ್ತಿರುವ ವ್ಯಕ್ತಿಗಾಗಲಿ, ಅಥವಾ ಒಂದು ಕಾರು ನಡೆಸುತ್ತಿರುವ ಚಾಲಕನಿಗಾಲಿ ತಮ್ಮೆದುರಿಗಿರುವ ವಸ್ತುವಿನ ಮೇಲೆ ಅಥವಾ ತಾವು ತೊಡಗಿರುವ ಚಟುವಟಿಕೆಯ ಮೇಲೆ ತಮ್ಮೆಲ್ಲ ಗಮನವನ್ನು ಕೇಂದ್ರೀಕರಿಸುವುದು ಅತ್ಯಂತ ಅಗತ್ಯ. ಅವನು ನಿರ್ವಹಿಸುತ್ತಿರುವ ವಸ್ತುವಿನ ಸ್ವರೂಪವನ್ನು, ವಿಶಿಷ್ಟ ಲಕ್ಷಣಗಳನ್ನು ಅರ್ಥಮಾಡಿಕೊಂಡಿರುತ್ತಾನೆ. ಏಕಾಗ್ರತೆ ಹೆಚ್ಚಾದಷ್ಟೂ ನಿಮ್ಮ ಕೆಲಸವು ಹೆಚ್ಚು ಯಶಸ್ವಿಯಾಗುತ್ತದೆ. ಒಂದೇ ಒಂದು ಪರಿಶ್ರಮದ ಮೇಲೆ ಮಾನಸಿಕ ಸಾಮರ್ಥ್ಯವನ್ನು ಏಕಾಗ್ರಗೊಳಿಸಿದರೆ, ಹೆಚ್ಚು ವ್ಯಾಪಕವಾದ ಕ್ಷೇತ್ರದಿಂದ ಬೇಗನೆ ಜ್ಞಾನವನ್ನು ಪಡೆಯಬಹುದು. ಜ್ಞಾನವನ್ನು ಸಂಪಾದಿಸುವ ಮಾರ್ಗ ಅದೊಂದೇ.

ಯಾವ ವ್ಯಕ್ತಿಯೇ ಆಗಲಿ, ಅವನು ಯಾವುದೇ ಕೆಲಸದಲ್ಲಿ ತೊಡಗಿರಲಿ, ಏಕಾಗ್ರತೆಯಿಂದ ಮಾಡಿದರೆ ಅದನ್ನು ಅತ್ಯುತ್ತಮವಾದ ರೀತಿಯಲ್ಲಿ ಮಾಡಿ ಮುಗಿಸಬಹುದು. ಭೌತಿಕವಾದ ಯಾವುದೇ ಚಟುವಟಿಕೆ, ಅಥವಾ ಸಾಮಾನ್ಯವಾದ

ದೈನಂದಿನ ಜೀವನ, ಅಥವಾ ಆಧ್ಯಾತ್ಮಿಕ ಸಾಧನೆ—ಈ ಯಾವುದೇ ಕಾರ್ಯದಲ್ಲಿ ಯಶಸ್ಸು ಗಳಿಸಬೇಕಾದರೆ ಮಾನಸಿಕ ಶಕ್ತಿಯನ್ನು ಏಕಾಗ್ರಗೊಳಿಸುವುದು ಕಡ್ಡಾಯ. ಅದು ಜ್ಞಾನದ ಅಮೂಲ್ಯ ರತ್ನ ಭಂಡಾರವನ್ನು ತೆರೆಯುವ ಕೀಲಿಕೈ. ಇದು ರಾಜಯೋಗದ ಬಹು ಮುಖ್ಯವಾದ ಅಂಶ. ಇನ್ನೂ ಮುಂದೆ ಹೋಗಿ ಆ ಯೋಗದ ಏಕೈಕ ಮಹತ್ವದ ಅಂಶ ಎಂದು ಕೂಡ ಹೇಳಬಹುದು. ಸ್ವಾಗತಾರ್ಹವಲ್ಲದ, ನಾವು ಇಷ್ಟಪಡದ, ಅನಗತ್ಯವಾದ, ಅಷ್ಟೇಕೆ, ಕೆಡುಕುಂಟುಮಾಡುವ ಲಕ್ಷಾಂತರ ಆಲೋಚನೆಗಳು ನಮ್ಮ ಮನಸ್ಸನ್ನು ಹೊಕ್ಕು ಅದರ ಚಟುವಟಿಕೆಗೆ ಮಂಕು ಹಿಡಿಸುತ್ತವೆ. ಮೊದಲು ಆ ಆಲೋಚನೆಗಳನ್ನು ಹೊರಗಿಡಬೇಕು. ಮನಸ್ಸನ್ನು ಜಾಗರೂಕತೆಯಿಂದ ಕಾದು, ನಿಯಂತ್ರಿಸಿ, ಕಟ್ಟೆಚ್ಚರದಿಂದ ನಮ್ಮ ಅಂಕೆಯಲ್ಲಿಟ್ಟು ಕೊಳ್ಳಬೇಕು. ಇದನ್ನು ಸಾಧಿಸಬಯಸುವ ವ್ಯಕ್ತಿಗಳಿಗೆ ರಾಜಯೋಗವು ಅತ್ಯುತ್ತಮ ಮಾರ್ಗ.

ಜ್ಞಾನಯೋಗವು ಬಹು ಮಟ್ಟಿಗೆ ಮೂಲ ತತ್ತ್ವಗಳ ಅಧ್ಯಯನಕ್ಕೆ ಮೀಸಲಾಗಿದೆ. ನಮ್ಮಿಂದ ಹೊರಗಿರುವುದಾಗಿ ನಾವು ಗ್ರಹಿಸುವ ಈ ವಿಶ್ವ ಅಥವಾ ಬ್ರಹಾಂಡವನ್ನು ಅನೇಕ ಜ್ಞಾನ ಸಿದ್ಧಾಂತಗಳ ಮೂಲಕ ವಿವರಿಸಬಹುದು. ಆದರೆ ಇವುಗಳಲ್ಲಿ ಯಾವುದೂ ದೀಕ್ಷಿತನಲ್ಲದವನಿಗೆ ಒಪ್ಪಿಗೆಯಾಗುವುದಿಲ್ಲ. ಜ್ಞಾನಯೋಗಿಯು ಅಂತಹ ಅನೇಕ ತತ್ತ್ವಗಳನ್ನು ಆಧಾರ ಕಲ್ಪನೆಗಳನ್ನು ರೂಪಿಸುತ್ತಾನೆ. ವಿಶ್ವದ ಯಾವುದೇ ಭೌತಿಕ ವಸ್ತುವಿನ ಸತ್ಯತೆಯನ್ನು ಅಥವಾ ಯಾವುದೇ ಕರ್ಮವನ್ನು ಅವನು ಒಪ್ಪುವುದಿಲ್ಲ. ಬೇರೆ ಯಾವುದೇ ವಿವರಣೆಯನ್ನು ಪ್ರಸ್ತುತಪಡಿಸುವ ಯಾರನ್ನೂ ಅವನು ಒಪ್ಪುವುದಿಲ್ಲ. ಬದುಕಿನ ದೈನಂದಿನ ಕರ್ತವ್ಯಗಳನ್ನು ಮೀರಿ ಮೇಲೇರಬೇಕು, ಸಾಮಾಜಿಕವಾದ ಅಥವಾ ಇತರ ಕರ್ತವ್ಯಗಳಿಗೆ ಬದ್ಧನಾಗ ಬಾರದು ಎಂದು ಅವನು ನಂಬುತ್ತಾನೆ. ಇರುವಿಕೆ ಅಥವಾ ಸತ್ ಎಂಬ ಮಹಾಸಾಗರದಲ್ಲಿ ಎಲ್ಲ ವಸ್ತುಗಳೂ ಹನಿಗಳಿದ್ದ ಹಾಗೆ, ಅವನ ದೃಷ್ಟಿಯಲ್ಲಿ ಅವೆಲ್ಲವೂ ತಮ್ಮ ಪರಿಧಿಯನ್ನು ದಾಟಿ ಕೇಂದ್ರದತ್ತ ಚಲಿಸಲು ಹೋರಾಡುತ್ತಿವೆ. ಏಕೆಂದರೆ ಅವೆಲ್ಲವೂ ಆ ಕೇಂದ್ರದಿಂದಲೇ ಮಾಯೆಯ ಮೂಲಕ ಪ್ರಕಟವಾದಂಥವು. ಜ್ಞಾನಯೋಗಿಯಾಗಿ ಕೇಂದ್ರದಲ್ಲಿ, ಸತ್ಯದ ಒಳ ತಿರುಳಿನಲ್ಲಿ ವಿಲೀನಗೊಳ್ಳಲು, ತೋರಿಕೆಯ ವೈವಿಧ್ಯದ ತೊಡರಿನಿಂದ ದೂರವಾಗಿರಲು ಅವನು ಹಂಬಲಿಸುತ್ತಾನೆ. ಅವನು ತಾನೇ ಸತ್ಯ ಆಗಲು, ಅದನ್ನು ತಿಳಿದುಕೊಳ್ಳಲು ಮಾತ್ರವಲ್ಲ, ಹಾತೊರೆಯುತ್ತಾನೆ. ನಿಜ, ಸತ್ಯವು ಅರಿವಿಗೆ ಬಂದೊಡನೆಯೇ ಅವನು ಸತ್ಯವೇ ಆಗಿಬಿಡುತ್ತಾನೆ. ತಾನೂ ಸತ್ಯವೂ ಬೇರೆ ಬೇರೆ ಪ್ರತ್ಯೇಕ ಎಂಬ ಆಲೋಚನೆಯನ್ನೇ ಅವನು ಸಹಿಸಲಾರನು.

ದೈವವೊಂದೇ ಅವನ ಬಂಧು. ಅವನಿಗೆ ಬೇರೆ ಯಾರೂ ಗೊತ್ತಿಲ್ಲ. ಬೇರೆ ಯಾವುದೇ ಪ್ರೇರಣೆ ಮೋಹಕ್ಕೆ ಬೇರೆ ಯಾವುದೇ ಕಾಮನೆಗೆ ಅವನು ಅವಕಾಶ ಕೊಡುವುದಿಲ್ಲ. ದೇವರೊಬ್ಬನೇ ಅವನ ಸರ್ವಸ್ವ. ಸಂತೋಷವಾಗಲಿ, ದುಃಖ ವಾಗಲಿ, ಸೋಲಾಗಲಿ, ಗೆಲುವಾಗಲಿ ಅವನ ಮೇಲೆ ಯಾವ ಪರಿಣಾಮವನ್ನು ಮಾಡುವುದಿಲ್ಲ. ಅವನು ಏಕೈಕ ಅಖಂಡ, ಆನಂದವಾಹಿನಿಯನ್ನು ನೋಡುತ್ತಾನೆ, ಅನುಭವಿಸುತ್ತಾನೆ. ಈ ನೆಲೆಯಲ್ಲಿ ಸ್ಥಿರಗೊಂಡ ವ್ಯಕ್ತಿಗೆ ಜಗತ್ತೂ ಅದರ ಏಳು ಬೀಳುಗಳೂ ಅಲ್ಪವಾಗಿ, ಭ್ರಮಾತ್ಮಕವಾಗಿ ತೋರುತ್ತವೆ. ಈ ಪ್ರಜ್ಞಾಸ್ಥಿತಿಯಲ್ಲಿಯೇ ಉಳಿದಿರಬೇಕಾದರೆ, ಅವನು ಇಂದ್ರಿಯಗಳ ಸೆಳೆತವನ್ನು ನಿರೋಧಿಸಿ, ಯಾವುದೇ ಬಗೆಯ ಮನೋಚಾಂಚಲ್ಯವಿಲ್ಲದೆ ಪ್ರಪಂಚದ ಆಕರ್ಷಣೆಗಳನ್ನು ಎದುರಿಸಬೇಕಾ ಗುತ್ತದೆ.

ಇಂದ್ರಿಯಗಳು ತನ್ನೆದುರಿಗೆ ಒಡ್ಡುವ ಅಮಿಷಗಳ ವಿರುದ್ಧವಾಗಿ ಜ್ಞಾನಯೋ ಗಿಯೂ ಕಟ್ಟೆಚ್ಚರದಿಂದಿರುತ್ತಾನೆ. ಅವುಗಳನ್ನು ಪಕ್ಕಕ್ಕೆ ತಳ್ಳಿ, ಭಗವಂತನ ಬಳಿ ಶಕ್ತಿಯನ್ನೂ ಸಮಾಧಾನವನ್ನೂ ಕೋರುತ್ತಾನೆ. ಅಣುವಿಗಿಂತ ಅಣುವಾದುದನ್ನೂ ಮಹತ್ತಿಗಿಂತ ಮಹತ್ತಾದುದನ್ನೂ ಚೇತನಗೊಳಿಸುವ ಶಕ್ತಿಯು ಅದೊಂದೇ ದೈವೀ ತತ್ವವೆಂಬುದನ್ನು ಅವನು ಅರ್ಥಮಾಡಿಕೊಳ್ಳುತ್ತಾನೆ. ಅವನ ಕಾರ್ಯ ಚಟುವಟಿ ಕೆಗಳು, ಆಲೋಚನೆಗಳು, ಮತ್ತು ಅವನ ಮಾತುಗಳು ಅವನು ಅನುಭವಿಸಿರುವ ಈ ದರ್ಶನವನ್ನು ಸೂಚಿಸುತ್ತವೆ. ಇದೇ ಪರಮಾರ್ಥ ದೃಷ್ಟಿ. ಅದು ಪೃಥ್ವಿ, ಅಗ್ನಿ, ಜಲ, ವಾಯು, ಆಕಾಶ—ಈ ಎಲ್ಲ ದ್ರವ್ಯಗಳನ್ನೂ ಭಗವಂತನೆಂದೇ ನೋಡುತ್ತದೆ. ಮನುಷ್ಯ, ಪ್ರಾಣಿ, ಪಕ್ಷಿ, ಕೀಟಾದಿ ಸಕಲ ಜೀವಿಗಳೂ ಭಗವಂತನಿಂದ ಮೂಡಿದವು. ಆದ್ದರಿಂದ ದೈವಿಕವೇ ಆಗಿವೆ ಎಂದೂ ಪರಿಗಣಿಸುತ್ತದೆ.

ಇಲ್ಲಿ ಒಂದು ಅಂಶವನ್ನು ಗಮನಿಸಬೇಕು. ದೈವಶಕ್ತಿಯ ಅಂತರ್ಯಾಮಿತ್ವದ ಅರಿವು ಇದ್ದರೂ ಅತೀತ ದರ್ಶನವನ್ನು ಪಡೆದಿದ್ದರೂ ಕೂಡ ವ್ಯಕ್ತಿಯನ್ನು ಜ್ಞಾನಿಯೆಂದು ಗೌರವಿಸಲು ಸಾಧ್ಯವಿಲ್ಲ. ಏಕೆಂದರೆ, ಜ್ಞಾನವನ್ನು ವಾಸ್ತವ ಅನುಭವವಾಗಿ ಅರಗಿಸಿ ಕೊಳ್ಳಬೇಕು. ಇದೇ ನಿಜವಾದ ಕಷ್ಟ ಪರೀಕ್ಷೆ. ಬುದ್ಧಿಯು ಒಪ್ಪಿ, ಭಗವಂತನೇ ಸಮಸ್ತವೂ ಎಂದು ಸಮರ್ಥಿಸಿದರೆ ಸಾಲದು. ನಂಬಿಕೆಯು ಬದುಕಿನ ಪ್ರತಿ ಯೊಂದು ಕ್ಷಣದ ಆಳಕ್ಕೂ ಇಳಿಯಬೇಕು. ಪ್ರತಿಯೊಂದು ಕ್ಷಣವನ್ನೂ ಪ್ರತಿ ಯೊಂದು ಚಟುವಟಿಕೆಯನ್ನೂ ನಿರ್ದೇಶಿಸಬೇಕು. ಅದು ಕೇವಲ ಆಲೋಚನೆಯ ಒಂದು ಹೊರೆಯಾದರೆ ಸಾಲದು. ಅಥವಾ ನೀಟಾಗಿ ರಚಿಸಿದ ತತ್ತ್ವಗಳ ಒಂದು ಕಟ್ಟಾದರೆ ಸಾಲದು. ನಂಬಿಕೆಯು ಪ್ರತಿಯೊಂದು ಆಲೋಚನೆಯನ್ನೂ ಮಾತನ್ನೂ

ಕೃತಿಯನ್ನೂ ತುಂಬಿಕೊಂಡು ಅದನ್ನು ಸೂಕ್ತರೀತಿಯಲ್ಲಿ ಪ್ರಚೋದಿಸಬೇಕು. ಆತ್ಮವು ಜ್ಞಾನದ ಅಮೃತದಲ್ಲಿ ನೆನೆಯಬೇಕು.

ಬುದ್ಧಿಯು ಒಂದು ದುರ್ಬಲ ಉಪಕರಣ. ಏಕೆಂದರೆ, ಇಂದು ಯಾವುದನ್ನು ಬುದ್ಧಿಯು ಸವಿಯೆಂದು ಒಪ್ಪಿಕೊಳ್ಳುತ್ತದೆಯೋ ಅದನ್ನು ಅದೇ ಬುದ್ಧಿಯೇ ವಿಷಯಗಳನ್ನು ಕುರಿತು ಎಂದೆಂದಿಗೂ ನಿಲ್ಲುವಂತೆ ಕೊನೆಯ ತೀರ್ಮಾನ ಕೊಡಲಾರದು. ಆದ್ದರಿಂದ ಅನುಭವ ಬಹಳ ಮುಖ್ಯ. ಅನುಭವವನ್ನು ಪಡೆದರೆ, ಆಗ ಆತ್ಮವೇ 'ಇದೆಲ್ಲವೂ ಆಗಿದೆ' ಎಂದು ವ್ಯಕ್ತಿಗೆ ಅರ್ಥವಾಗುತ್ತದೆ ಅದೇ ಜ್ಞಾನಯೋಗ. ಭಾರತೀಯ ಚಿಂತನೆಯ ಪ್ರಕಾರ ವೇದಗಳನ್ನು ಭಗವಂತನ ವಾಣಿಯೆಂದು ಪರಿಗಣಿಸಲಾಗಿದೆ. ಆದ್ದರಿಂದ ಭಾರತೀಯರಿಗೆ ಸಮಸ್ತಜ್ಞಾನದ ಮೂಲ ಸೆಲೆ ವೇದಗಳೇ ಆಗಿವೆ. ಪ್ರತಿಯೊಂದನ್ನೂ ವೇದಗಳ ಆಧಾರದ ಮೇಲೆ ಪರೀಕ್ಷೆಗೊಳಪಡಿಸಲಾಗುತ್ತದೆ. ಪ್ರಾಚೀನ ಋಷಿಗಳು ವೇದಗಳಿಗೆ ಯಾವುದು ಹೊಂದಿಕೆಯಾಗುತ್ತದೆಯೋ ಅದು ಮಾನವನಿಗೆ ಹಿತಕರವಾದದ್ದು; ಯಾವುದನ್ನು ವೇದಗಳು ಒಪ್ಪುವುದಿಲ್ಲವೋ ಅದು ಅವನಿಗೆ ಸಲ್ಲದು ಎಂದು ಹೇಳಿದ್ದಾರೆ. ವೇದಗಳನ್ನು ಮಾನವರು ಹೇಳಲಿಲ್ಲ, ಅಥವಾ ಪುರುಷರೋ ಮಹಿಳೆಯರೋ ಬೇರೆ ಕೃತಿಗಳನ್ನು ರಚಿಸುವಂತೆ ರಚಿಸಲಿಲ್ಲ. ಅವುಗಳನ್ನು ಋಷಿಗಳು ಆಲಿಸಿದರು ಮತ್ತು ದಾಖಲಿಸಿಕೊಂಡರು. ಎಷ್ಟೋ ಪೀಳಿಗೆಗಳವರೆಗೆ ಗುರುವು ಶಿಷ್ಯನಿಗೆ ಮುಖತಃ ಕಲಿಸಿದನು. ಗುರುವು ಪಠಿಸಿದನು. ಶಿಷ್ಯನು ಅದನ್ನು ಜಾಗರೂಕತೆ ಯಿಂದ ಆಲಿಸಿ, ತಪ್ಪಿಲ್ಲದಂತೆ ಉಚ್ಚರಿಸಿದನು. ಶತಶತಮಾನಗಳ ಕಾಲ ವೇದಗಳು ಇದೇ ರೀತಿಯಲ್ಲಿ ಉಳಿದುಕೊಂಡು ಬಂದಿವೆ. ಮೊತ್ತ ಮೊದಲು ವೇದಗಳನ್ನು ಆಲಿಸಿದುದು ಯಾವಾಗ, ಉಚ್ಚರಿಸುದುದು ಯಾವಾಗ ಎಂದು ನಿರ್ಧರಿಸುವುದು ಯಾರಿಗೂ ಸಾಧ್ಯವಿಲ್ಲ. ಆದ್ದರಿಂದಲೇ ಅವುಗಳನ್ನು ಸನಾತನ ಅಥವಾ ನಿತ್ಯ ಎಂದು ಪರಿಗಣಿಸಲಾಗಿದೆ.

ಈ ಹಂತದಲ್ಲಿ ನಾವು ಇನ್ನೊಂದು ಅತ್ಯಂತ ಮುಖ್ಯವಾದ ವಿಚಾರವನ್ನು ಮನಸ್ಸಿ ನಲ್ಲಿಟ್ಟುಕೊಳ್ಳಬೇಕು. ಜಗತ್ತಿನಲ್ಲಿರುವ ಎಲ್ಲಾ ಧರ್ಮಗಳು ಕೆಲವು ಮಹಾ ಪುರುಷ ರಿಗೆ ಸಾಕ್ಷಾತ್ ಭಗವಂತನು ಹೇಳಿದ, ಅಥವಾ ಅತಿಮಾನುಷ ರೂಪದಲ್ಲಿಯೋ ದೈವಾಂಶ ಸಂಭೂತರ ಮೂಲಕವಾಗಿಯೋ ಹೇಳಿದ ಮಾತುಗಳನ್ನು ಅಧಿಕೃತ, ಪ್ರಮಾಣ ಎಂದು ಪರಿಗಣಿಸುತ್ತವೆ. ಭಾರತೀಯರಾದರೆ ಈ ದಾರಿಯನ್ನು ಹಿಡಿಯು ವುದಿಲ್ಲ. ವೇದಗಳು ಯಾವನೇ ವ್ಯಕ್ತಿಯ ಪ್ರಾಮಾಣ್ಯದ ಮೇಲೆ ನಿಂತಿಲ್ಲ, ತಮ್ಮ ಮೌಲಿಕತೆಗೆ ಅವು ಯಾವ ಮಾನವನನ್ನೂ ಅವಲಂಬಿಸುವುದಿಲ್ಲ. ನೇರವಾಗಿ ಭಗವಂತನೇ ಆಡಿದ ನುಡಿಗಳು ಅವು; ಅವು ಅದಿಮ ಪವಿತ್ರವಾಣಿ. ಅವಕ್ಕೆ ಅವೇ

ಪ್ರಮಾಣ ಮತ್ತು ಅಧಿಕೃತತೆ. ಅವುಗಳನ್ನು ಯಾರೂ ಬರೆಯಲಿಲ್ಲ, ರಚಿಸಲಿಲ್ಲ, ಕಟ್ಟಲಿಲ್ಲ, ಅಥವಾ ಕೂಡಸಲಿಲ್ಲ ಎಂಬುದಾಗಿ ಭಾರತೀಯರು ಸಾರುತ್ತಾರೆ.

ಈ ವಿಶ್ವ ಅಥವಾ ಸೃಷ್ಟಿಯು ಮಿತಿಯೇ ಇಲ್ಲದ್ದು, ನಿತ್ಯವಾದದ್ದು. ಅದಕ್ಕೆ ಆದಿಯಿಲ್ಲ, ಅಂತ್ಯವೂ ಇಲ್ಲ. ಅದೇ ರೀತಿಯಲ್ಲಿ ಭಗವದ್ವಾಣಿ, ಅಥವಾ ವೇದಗಳಿಗೂ ಮಿತಿಯಿಲ್ಲ, ಅವು ನಿತ್ಯ, ಅವು ಅನಾದಿ, ಅನಂತ. ವೇದ ಎಂಬ ಪದದ ಮೂಲವಾದ ವಿದ್ ಎಂದ ಧಾತುವಿಗೆ ತಿಳಿಯುವುದು ಎಂದು ಅರ್ಥ. ಜ್ಞಾನವು ಎಂದು ಮೊದಲಾಯಿತೊ ಅಂದೇ ವೇದಗಳೂ ಆವಿರ್ಭವಿಸಿದವು. ಅವುಗಳನ್ನು ಋಷಿಗಳು ದರ್ಶಿಸಿದರು, ಪ್ರಕಟಿಸಿದರು. ಅವರು ಮಂತ್ರಗಳ ದ್ರಷ್ಟಾರರು, ದರ್ಶಿಸಿದವರು; ಮಂತ್ರದ್ರಷ್ಟರು.

ವೇದಗಳಲ್ಲಿ ಎರಡು ಮುಖ್ಯವಾದ ವಿಭಾಗಗಳಿವೆ, ಕರ್ಮಕಾಂಡ ಮತ್ತು ಜ್ಞಾನ ಕಾಂಡ. ಮೊದಲು ಕರ್ಮಕಾಂಡವು ಬರುತ್ತದೆ, ಅದರ ಹಿಂದೆ ಜ್ಞಾನಕಾಂಡ. ಕರ್ಮಕಾಂಡದಲ್ಲಿ ಬೇರೆ ಬೇರೆ ಬಗೆಯ ಅನೇಕ ಕ್ರತುಗಳನ್ನು, ಪವಿತ್ರಾಗ್ನಿಯನ್ನು ಹವಿಸ್ಸನ್ನು ಅರ್ಪಿಸಿ ಮಾಡುವ ಯಜ್ಞಗಳನ್ನು ಹೇಳಿದೆ. ಅವುಗಳಲ್ಲಿ ಅನೇಕವನ್ನು ಈಚಿನ ಕಾಲಗಳಲ್ಲಿ ಭಾರತೀಯರು ಕೈಬಿಟ್ಟಿದ್ದಾರೆ. ಏಕೆಂದರೆ ವೇದಗಳು ವಿಧಿಸುವಷ್ಟು ನಿಖರವಾಗಿ, ಕಟ್ಟುನಿಟ್ಟಾಗಿ ಅವುಗಳನ್ನು ಆಚರಿಸುವುದು ಈಗ ಕಷ್ಟ. ಆದರೂ ಅಲ್ಲಲ್ಲಿ ಕೆಲವರು ತೆಳುವಾದ ರೂಪದಲ್ಲಿ ಅವುಗಳನ್ನು ಮುಂದುವರಿಸಿದ್ದಾರೆ. ಕರ್ಮಕಾಂಡದಲ್ಲಿ ನೈತಿಕ ನಿಯಮಗಳನ್ನು ಒತ್ತಿ ಹೇಳಲಾಗುತ್ತದೆ. ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ, ಸನ್ಯಾಸ ಹಂತಗಳಿಗೆ ಸಂಬಂಧಿಸಿದಂತೆ ಜೀವನದ ನಡವಳಿಕೆಯನ್ನು ನಿಯಂತ್ರಿಸುವ ನೀತಿ ನಿಯಮ ನಿಬಂಧನೆಗಳನ್ನು ಹೇಳಿದೆ. ಅಲ್ಲದೆ ಕರ್ಮಕಾಂಡವು ವಿವಿಧ ವೃತ್ತಿಗಳನ್ನು ಅನುಸರಿಸುವ, ವಿವಿಧ ಸ್ಥಾನಮಾನಗಳನ್ನು ಹೊಂದಿರುವ ಜನರಿಗೆ ಯಾವುದು ಸರಿ, ಯಾವುದು ತಪ್ಪು ಎಂದು ನಿರ್ಣಯಿಸಿ ಹೇಳುತ್ತದೆ. ಇಂದಿಗೂ ಭಾರತದಲ್ಲಿ ಬಹು ಮಟ್ಟಿಗೆ ತೆಳುವಾದ ರೂಪದಲ್ಲಿ ಅಲ್ಲಿ ಇಲ್ಲಿ ಇವುಗಳನ್ನು ಆಚರಿಸಲಾಗುತ್ತಿದೆ.

ಜ್ಞಾನಕಾಂಡವನ್ನು ವೇದಾಂಥ ಅಥವಾ ವೇದಗಳ ಕೊನೆ, ಗುರಿ ಲಕ್ಷ್ಯ ಎಂದು ಕರೆಯಲಾಗಿದೆ. ಅದು ಉಪನಿಷತ್ತುಗಳಲ್ಲಿ ಅಡಕಗೊಂಡಿದೆ. ದ್ವೈತ, ವಿಶಿಷ್ಟಾದ್ವೈತ, ಮತ್ತು ಅದ್ವೈತ ಚಿಂತನ ಪಥಗಳನ್ನು ಅನುಸರಿಸುವವರು; ಶಿವ, ವಿಷ್ಣು, ಶಕ್ತಿ, ಸೂರ್ಯ, ಗಣಪತಿಯರನ್ನು ಪೂಜಿಸುವವರು ಎಲ್ಲರೂ ವೇದಗಳ ಪರಮೋನ್ನತ ಅಧಿಕಾರವನ್ನು, ಪ್ರಾಮಾಣ್ಯವನ್ನು ಒಪ್ಪುತ್ತಾರೆ. ತಮ್ಮದೇ ಸಿದ್ಧಾಂತಗಳ ಪ್ರಕಾರ ತಮ್ಮ ಬೌದ್ಧಿಕ ಮಟ್ಟಕ್ಕೆ ಅನುಗುಣವಾಗಿ ಅವರು ಉಪನಿಷತ್ತುಗಳಿಗೂ ಇತರ

ಕೃತಿಗಳಿಗೂ ವ್ಯಾಖ್ಯಾನ ಮಾಡಬಹುದು. ಆದರೆ ವೇದದ ಅಥವಾ ವೇದಾಂತದ ಪ್ರಾಮಾಣ್ಯವನ್ನು ಮಾತ್ರ ಯಾರೊಬ್ಬರೂ ಪ್ರಶ್ನಿಸುವುದಿಲ್ಲ. ಆದ್ದರಿಂದ ಒಬ್ಬನೇ ವ್ಯಕ್ತಿಗೆ ಹಿಂದೂ ಭಾರತೀಯ ಅಥವಾ ವೇದಾಂತಿ ಎಂಬ ಪದಗಳನ್ನು ಅನ್ವಯಿಸ ಬಹುದು. ಇಂದು ಪ್ರಚಲಿತವಾಗಿರುವ ವಿವಿಧ ತತ್ತ್ವ ಪಂಥಗಳನ್ನು ಅರ್ಥಮಾಡಿ ಕೊಳ್ಳುವುದು ಕಷ್ಟವಾಗಿ ತೋರಬಹುದು. ಅದಕ್ಕೆ ಕಾರಣ ಅಪಕ್ವವಾದ ಜ್ಞಾನದಿಂದ ಅವು ಮೂಡಿ ಬಂದಂಥವು ಎನ್ನಿಸಬಹುದು. ಆದರೆ ಶಾಂತವಾಗಿ ಕುಳಿತು ಆಲೋಚನೆ ಮಾಡಿದರೆ, ನಿಶ್ಶಬ್ದದಲ್ಲಿ ಕುಳಿತು ಶಾಸ್ತ್ರಗಳನ್ನು ಅಧ್ಯಯನ ಮಾಡಿದರೆ, ಅಥವಾ ಪೂರ್ವಗ್ರಹವಿಲ್ಲದೆ ಸಂಶೋಧನೆ ಮಾಡಿ ನೋಡಿದರೆ, ಅವೆಲ್ಲವೂ ಉಪನಿಷತ್ತಿನಲ್ಲಿ ಎತ್ತಿದ ವಿಷಯಗಳ ಮೇಲೆ, ಅಲ್ಲಿ ಕೈಗೊಂಡ ನಿರ್ಣಯಗಳ ಮೇಲೆ ಆಧಾರಗೊಂಡಿವೆಯೆಂಬುದು ಸ್ಪಷ್ಟವಾಗುತ್ತದೆ. ಈ ವಿಶ್ವವ್ಯಾಪಕ ಸಾರ್ವತ್ರಿಕ ಪ್ರಭಾವಕ್ಕೆ ಗೌರವ ಅರ್ಪಿಸುವಂತೆ ಉಪನಿಷತ್ತುಗಳನ್ನು ವಿಗ್ರಹಗಳಾಗಿ ಸಂಕೇತ ಗೊಳಿಸಿ ದೇವಾಲಯಗಳಲ್ಲಿ, ಖಾಸಗಿಯಾದ ಪೂಜಾಗೃಹಗಳಲ್ಲಿಯೂ ಪೂಜಿಸ ಲಾಗುತ್ತಿದೆ. ಅವು ನಮ್ಮ ಬದುಕಿನಲ್ಲಿ ಬೇರ್ಪಡಿಸಲಾಗದಂತೆ ಹೆಣೆದುಕೊಂಡು ಬಿಟ್ಟಿವೆ.

ವೇದಗಳು ಕೊನೆಯಿಲ್ಲದವು (ಅನಂತೋ ವೈ ವೇದಾಃ). ಆದರೆ ಅವುಗಳನ್ನು ನಾಲ್ಕು ಗುಂಪಾಗಿ ಕ್ರೋಡೀಕರಿಸಿ ಆ ರೂಪದಲ್ಲಿ ಅವುಗಳ ಸಾರವನ್ನು ಉಳಿಸ ಲಾಯಿತು. ಜಗತ್ತಿನಲ್ಲಿ ಶಾಂತಿಯನ್ನೂ ಸಮೃದ್ಧಿಯನ್ನೂ ಬೆಳೆಸುವ ಸಲುವಾಗಿ ಆ ನಾಲ್ಕನ್ನು ಶಿಷ್ಯರ ಮುಖೇನ ಕಲಿಸಿ ಪ್ರಚುರ ಪಡಿಸಲಾಯಿತು. ಅವೇ ಋಗ್, ಯಜುರ್, ಸಾಮ ಮತ್ತು ಅಥರ್ವಣ ವೇದಗಳು. ಅವು ಧರ್ಮವನ್ನು ಎತ್ತಿ ಹಿಡಿಯುತ್ತವೆ, ಸತ್ಯವನ್ನು ಸಾರುತ್ತವೆ, ಮಾನವನಲ್ಲಿ ಪೂಜೆ, ಹಾಡು, ಸ್ತುತಿ, ಪ್ರವೃತ್ತಿಗಳನ್ನು ಬೆಳೆಸಿ ಶಾಂತಿಯನ್ನೂ ಸಾಮರಸ್ಯವನ್ನೂ ಹೆಚ್ಚಿಸುತ್ತವೆ. ಶಸ್ತ್ರಾಸ್ತ್ರ ಪ್ರಯೋಗ ಮತ್ತು ಯುದ್ಧ ಕಲೆಗಳನ್ನು ಕಲಿಸುತ್ತವೆ. ಮಾನವ ಜನಾಂಗದ ಮುಂದೆ ಆದರ್ಶವನ್ನು ಹಿಡಿದು ಅದನ್ನು ಅನುಸರಿಸುವಂತೆ ಆದೇಶಿಸುತ್ತವೆ.

ಭಾರತೀಯನು ಆಚರಿಸುವ ಪ್ರತಿಯೊಂದು ಸತ್ಕಾರ್ಯಕ್ಕೂ ಅವನಿಗೆ ತಿಳಿದಿರಲಿ, ಬಿಡಲಿ, ಅದರ ಹಿಂದೆ ವೇದದ ಯಾವುದೋ ಭಾಗದಲ್ಲಿ ಅದಕ್ಕೆ ಸಂಬಂಧಪಟ್ಟ ಒಂದು ಆದೇಶವೋ ನಿಷೇಧವೋ ಇದ್ದೇ ಇರುತ್ತದೆ. ವಿವಾಹ ಸಂಬಂಧವಾದ ಕರ್ಮಗಳಿಂದ ಮೊದಲುಗೊಂಡು ಅಂತ್ಯಕ್ರಿಯೆಗೆ ಸಂಬಂಧಿಸಿದವುಗಳವರೆಗೆ, ಪಿತೃಗಳನ್ನು ತೃಪ್ತಿಪಡಿಸುವ ಕರ್ಮಗಳೂ ಕೂಡಿದಂತೆ ಎಲ್ಲಕ್ಕೂ ವೇದಗಳೇ ಮಾರ್ಗದರ್ಶಕಗಳಾಗಿವೆ. ನಿಜವಾದ ಭಾರತೀಯನು ಎಂದಿಗೂ ವೇದಗಳನ್ನು ಮರೆಯಬಾರದು ಅಥವಾ ಅವುಗಳ ವಿಷಯದಲ್ಲಿ ಕೃತಘ್ನನಾಗಬಾರದು. ದ್ವೈತಿ

ಗಳು, ವಿಶಿಷ್ಟಾದ್ವೈತಿಗಳು, ಅದ್ವೈತಿಗಳು ಎಲ್ಲರೂ ಹಿಂದೆಯೇ ಋಷಿಗಳು ಹಾಕಿಕೊಟ್ಟ ಹಾದಿಯಲ್ಲಿ ತಮ್ಮ ಬದುಕನ್ನು ನಿರ್ವಹಿಸಲು ಪ್ರಯತ್ನಿಸುತ್ತಾರೆ. ಆದರೆ ಇಂದು ಅವರಿಗೆ ಈ ಮಾರ್ಗದರ್ಶಕ ಸೂತ್ರಗಳ ಮೂಲವಾಗಲಿ, ಉದ್ದೇಶವಾಗಲಿ ತಿಳಿಯದು. ಅವರು ಅವುಗಳನ್ನು ತಿಳಿದುಕೊಂಡದ್ದೇ ಆದರೆ ದೊರಕುವ ಫಲ ಇನ್ನೂ ಹೆಚ್ಚು ಸಮೃದ್ಧವಾಗಿರುತ್ತದೆ, ಶಾಶ್ವತವಾಗಿರುತ್ತದೆ.

ಅಧ್ಯಾಯ ೧೧

# ವೇದಗಳಲ್ಲಿ ಮೌಲ್ಯಗಳು

ವೇತ್ತಿ ಇತಿ ವೇದಃ (ತಿಳಿದುಕೊಳ್ಳುವುದು ಅಥವಾ ಜ್ಞಾನವೇ ವೇದ). ಅಂದರೆ, ಮಾನವನು ವೇದಗಳಿಂದ ಸರಿಯಾದ ನಡೆವಳಿಕೆಯ ನೀತಿ ಸೂತ್ರವನ್ನು, ನಿಜವಾದ ಜ್ಞಾನವನ್ನು ಪಡೆಯಬಹುದು. ಜನನದಿಂದ ಮರಣದವರೆಗೆ ಮಾನವನ ಕರ್ತವ್ಯಗಳು ಯಾವುವು ಎಂಬುದನ್ನು ವೇದಗಳು ತಿಳಿಸಿಕೊಡುತ್ತವೆ. ವಿದ್ಯಾರ್ಥಿಯಾಗಿ, ಗೃಹಸ್ಥನಾಗಿ, ತಪಸ್ವಿಯಾಗಿ, ಸನ್ಯಾಸಿಯಾಗಿ ಅವನ ಹಕ್ಕು ಬಾಧ್ಯತೆಗಳಾವುವು ಎಂಬುದನ್ನು ವರ್ಣಿಸುತ್ತವೆ. ವೇದಗಳ ಆದೇಶ ಏನೆಂಬುದನ್ನು ಆ ಮಂತ್ರಗಳ ಅಂತರಾರ್ಥವೇನೆಂಬುದನ್ನು ವಿಧಿ ನಿಷೇಧವನ್ನು ಸರಳವಾಗಿ ತಿಳಿಸಿಕೊಡುವ ಸಲುವಾಗಿಯೇ ಕಾಲಕ್ರಮದಲ್ಲಿ ವೇದಾಂತಗಳು, ಪುರಾಣಗಳು, ಇತಿಹಾಸ ಕಾವ್ಯಗಳು ಕಾಣಿಸಿಕೊಂಡವು. ಆದ್ದರಿಂದ ಮಾನವನು ತನ್ನದೇ ಮಹತ್ವವನ್ನೂ ನಿಜಸ್ವರೂಪವನ್ನೂ ಗ್ರಹಿಸಲು ಬಯಸುವುದಾದರೆ, ವಿವರಣಾತ್ಮಕ ಶಾಸ್ತ್ರ ಕೃತಿಗಳನ್ನು ಅವನು ಅಧ್ಯಯನ ಮಾಡಬಾಕಾಗುತ್ತದೆ.

ನಮ್ಮ ಪ್ರಾಚೀನರು ಶಿಷ್ಯರಿಗೆ ವೇದಗಳನ್ನು ಕಲಿಸುವುದಕ್ಕಿಂತಲೂ ಮೊದಲೇ ವೇದಾಂಗಗಳನ್ನೂ ಇತರ ಸಂಬಂಧಿತ ಕೃತಿಗಳನ್ನೂ ಕಲಿಸುತ್ತಿದ್ದುದಕ್ಕೆ ಇದೇ ಕಾರಣ. ಇದು ಹಿಂದಿನ ಕಾಲದ ಆಶ್ರಮಗಳಲ್ಲಿ, ಗುರುಕುಲಗಳಲ್ಲಿ ಕಡ್ಡಾಯವಾಗಿತ್ತು. ಆಗ ಭಾರತೀಯರು ಚತುರ್ದಶ (ಹದಿನಾಲ್ಕು) ವಿದ್ಯೆಗಳನ್ನು ಕಲಿಯುತ್ತಿದ್ದರು. ವೇದಗಳನ್ನು ಕಂಠ ಪಾಠ ಮಾಡುತ್ತಿದ್ದರು. ಈ ರೀತಿಯಲ್ಲಿ ವೇದಗಳನ್ನು ಕಲಿತುಕೊಂಡಿರುವವನನ್ನು ಜಡ ಅಥವಾ ನಿಷ್ಕ್ರಿಯನೆಂದು ಕರೆಯುತ್ತಿದ್ದರು. ಆ ಪದಕ್ಕೆ ಅವನಿಗೆ ಏನೂ ಗೊತ್ತಿಲ್ಲ ಎಂಬ ಅರ್ಥವಿರಲಿಲ್ಲ. ಅದರ ಅರ್ಥ ಅವನು ಇನ್ನು ಮುಂದೆ ಕಲಿಯಬೇಕಾದುದು ಏನೂ ಉಳಿದಿಲ್ಲ. ಆದ್ದರಿಂದ ಅವನು ನಿಷ್ಕ್ರಿಯನಾಗಿದ್ದಾನೆ, ಸಂತೃಪ್ತನಾಗಿದ್ದಾನೆ ಎಂದರ್ಥವಾಗುತ್ತಿತ್ತು. ವೇದಗಳ ಅಧ್ಯಯನದ ಮೂಲಕ ಅವನು ಸಮಸ್ತ ಜ್ಞಾನದ ಪ್ರಭುವಾಗಿದ್ದಾನೆ ಎಂದರ್ಥವಾಗುತ್ತಿತ್ತು. ಮನುಷ್ಯ ಜನ್ಮವನ್ನು ಸಾರ್ಥಕಗೊಳಿಸಬೇಕಾದರೆ, ವೇದಾಧ್ಯಯನ ಮಾಡಬೇಕಾದುದು ಅತ್ಯವಶ್ಯವಾಗಿತ್ತು.

ಮಾನವ ಜೀವನದ ಮೌಲ್ಯಗಳನ್ನು ನಿರ್ಧರಿಸುವುದರಲ್ಲಿ ವೇದಗಳೇ ಪರಮೋನ್ನತ ಪ್ರಮಾಣ ಎಂದು ಭಾರತೀಯ ಸಂಸ್ಕೃತಿ ವಾಹಿನಿಯು ಉದ್ದಕ್ಕೂ ಒತ್ತಿ ಹೇಳುತ್ತಲೇ ಬಂದಿದೆ. ವೇದಗಳಲ್ಲಿ ಮೊದಲನೆಯದು ಋಗ್ವೇದ. ಇದರಲ್ಲಿ ಹತ್ತು ಮಂಡಲಗಳು ಅಥವಾ ಭಾಗಗಳಿವೆ. ಮೊದಲ ಒಂಬತ್ತು ಭಾಗಗಳಲ್ಲಿ ಭಗವಂತನನ್ನು ಅಗ್ನಿ, ಇಂದ್ರ, ಮರುತ್, ಉಷಸ್ ಮೊದಲಾದ ಬೇರೆ ಬೇರೆ ನಾಮಗಳಲ್ಲಿ ಸ್ತುತಿಸುವ ಮಂತ್ರಗಳಿವೆ. ಈ ಸ್ತುತಿ ಗೀತೆಗಳು ಹೇಗೆ ರೂಪುಗೊಂಡವು ಎಂಬುದನ್ನು ಕುರಿತು ಇತಿಹಾಸ ತಜ್ಞರೂ ಸಂಶೋಧಕರೂ ಹಲವು ಸಿದ್ಧಾಂತವನ್ನು ಮಂಡಿಸಿದ್ದಾರೆ, ವಿವರಿಸಿದ್ದಾರೆ. ಆ ದಿನಗಳಲ್ಲಿ ಮಾನವರು ಅಗ್ನಿ, ವಾಯು, ಮರುತ್ ಮೊದಲಾದವು ತಮಗಿಂತ ಬಹು ಶಕ್ತಿಶಾಲಿಗಳು ಎಂಬುದನ್ನು ಅರ್ಥಮಾಡಿಕೊಂಡು, ಅವರ ದೈವಿಕ ಗುಣಗಳನ್ನು ವರ್ಣಿಸಿ ಸ್ತುತಿಸಿ ಸಂತೋಷಪಡಿಸಲೆತ್ನಿಸಿದರು.

ವೇದಗಳಲ್ಲಿ ಎರಡನೆಯದು ಯಜುರ್ವೇದ. ಇದಕ್ಕೆ ಎರಡು ಮುಖ್ಯವಾದ ಶಾಖೆಗಳಿವೆ: ಕೃಷ್ಣಯಜುರ್ವೇದ ಮತ್ತು ಶುಕ್ಲಯಜುರ್ವೇದ. ಯಜುರ್ವೇದವು ಗಂಗಾ ನದಿ ಮತ್ತು ಅದರ ಆಸುಪಾಸಿನ ಪ್ರದೇಶಗಳನ್ನು ಉಲ್ಲೇಖಿಸುತ್ತದೆ. ಅದು ಉತ್ತರ ಮೀಮಾಂಸಾ ತತ್ತ್ವ ಚಿಂತನೆಯ ಮೂಲವಾಗಿದೆ. ಆ ವೇಳೆಗೆ ಜನರು ಕಾಡುಪ್ರದೇಶವನ್ನೂ ಬೇಸಾಯ ಯೋಗ್ಯ ಪ್ರದೇಶಗಳನ್ನೂ ಬೇರೆ ಬೇರೆಯಾಗಿ ಗುರುತಿಸಿ ಹಳ್ಳಿಗಳಲ್ಲಿ ವಾಸಮಾಡಲು ಆರಂಭಿಸಿದ್ದರು. ವೇದಗಳ ಕೆಲಭಾಗಗಳನ್ನು ಯಜುರ್ವೇದವಾಗಿ ರೂಪಿಸಲು ಪ್ರತ್ಯೇಕಿಸಲು ಪ್ರೇರಕವಾದ ಒಂದು ಕಾರಣವಿದೆ. ಯಜುರ್ವೇದದಲ್ಲಿ ಅರಣ್ಯಕಗಳು ಅಥವಾ ಅಡವಿಗೆ ಸಂಬಂಧಪಟ್ಟ ಪಠ್ಯಗಳು ಎಂಬ ಏಳು ಭಾಗಗಳಿವೆ. ಹೆಸರೇ ಸೂಚಿಸುವ ಹಾಗೆ ಅರಣ್ಯದ ಏಕಾಂತದಲ್ಲಿ ಮತ್ತು ನಿಶ್ಶಬ್ದ ಸನ್ನಿವೇಶದಲ್ಲಿ ಮಾತ್ರವೇ ಆಚರಿಸಬೇಕಾದ ಕೆಲವು ಆಧ್ಯಾತ್ಮಿಕ ಸಾಧನೆಗಳನ್ನು ಅವು ಹೇಳುತ್ತವೆ.

ಮೂರನೆಯದು ಸಾಮವೇದ. ಈ ಸಂಕಲನದಲ್ಲಿ ಋಗ್ವೇದದ ಅನೇಕ ಋಕ್ಕುಗಳು ಪುನರುಕ್ತಗೊಂಡಿವೆ, ಆದರೆ ಹಾಡಲು ಯೋಗ್ಯವಾಗುವಂತೆ ಪ್ರಸ್ತಾರಗಳ ಸಮೇತ. ವೈದಿಕ ಯಜ್ಞ ಯಾಗಾದಿ ಆಚರಣೆಗಳ ಸಂದರ್ಭದಲ್ಲಿ ಅವುಗಳನ್ನು ಹಾಡುತ್ತಿದ್ದರು. ಆದ್ದರಿಂದ ಸಾಮವೇದವು ಮುಖ್ಯವಾಗಿ ಸ್ವರ ಅಥವಾ ಸಂಗೀತ ಪ್ರಸ್ತಾರ. ಋಗ್ವೇದ ಕಾಲದ ಆರ್ಯರು ಸಿಂಧೂ ನದಿಯ ದಂಡೆಯ ಮೇಲೆ ವಾಸಮಾಡುತ್ತಿದ್ದರು. ಯಜುರ್ವೇದವು ಅವರ ಅರಿವಿಗೆ ಬರುವ ವೇಳೆಗೆ ಅವರು ಗಂಗಾ ನದೀ ದಡಗಳಲ್ಲಿದ್ದರು. ಸಾಮವೇದದ ಗೀತೆಗಳೂ ಅದೇ ಯುಗದ ದರ್ಶನಗಳು. ಆದರೆ ಬಹುಶಃ ಆ ವೇಳೆಗೆ ಜನರು ಭಾರತದ ಮಧ್ಯಭಾಗವನ್ನು ವ್ಯಾಪಿಸಿಕೊಂಡಿದ್ದಿರ ಬಹುದು. ಸಾಮವೇದವನ್ನು, ಅದರ ಗೇಯ ಗುಣವನ್ನು ತೋರಿಸುವ ಸಲುವಾಗಿ,

ಗಾನ ವೇದವೆಂದೂ ಕರೆಯುತ್ತಾರೆ. ಎಲ್ಲ ಗಾಯನ ಪಂಥಗಳೂ ಶೈಲಿಗಳೂ ಸಾಮವೇದವು ಗುರುತಿಸುವ ಶೈಲಿಗಳಿಂದ ಮೂಡಿದುವೇ ಆಗಿವೆ. ಸಮಸ್ತರಾಗ ಗಳೂ ಪಲುಕುಗಳೂ ಈ ವೇದದಲ್ಲಿ ಅಳವಟ್ಟಿವೆ.

ನಾಲ್ಕನೆಯದು ಅಥರ್ವ ವೇದ. ಹಲವರು ಇದನ್ನು ಹಲವು ರೀತಿಗಳಲ್ಲಿ ವಿವರಿಸಿ ದ್ದಾರೆ. ಕೆಲವರು ಇದಕ್ಕೆ ವೇದದ ಸ್ಥಾನಮಾನ ಸಲ್ಲದು ಎಂದೂ ವಾದ ಮಾಡಿ ದ್ದಾರೆ. ಮಿಕ್ಕ ಮೂರು ವೇದಗಳನ್ನು ಕ್ರೋಡೀಕರಿಸಿದ ನಂತರ ಉಳಿದುದೆಲ್ಲವೂ ಸೇರಿ ಅಥರ್ವ ವೇದವಾಯಿತು ಎಂದು ಇತರ ಕೆಲವರು ಅಭಿಪ್ರಾಯ ಪಡುತ್ತಾರೆ. ಇತರ ವೇದಗಳಲ್ಲಿ ದೇವರ ಶಕ್ತಿ ಮತ್ತು ಮಹಿಮೆಗಳು ವರ್ಣಿತವಾಗಿವೆ. ಈ ವೇದದಲ್ಲಾದರೆ, ಮಾನವನು ತನ್ನ ಸಾಧನೆಯಿಂದ ಪರಿಶ್ರಮದಿಂದ ಸಂಪಾದಿಸಿ ಕೊಳ್ಳಬಹುದಾದ ಕೆಲವು ಶಕ್ತಿಗಳು ಮತ್ತು ಮಹಿಮೆಗಳನ್ನು ಉಲ್ಲೇಖಿಸಲಾಗಿದೆ. ಇದೇ ಅಥರ್ವಣ ವೇದದ ವೈಶಿಷ್ಟ್ಯ. ಹಠಯೋಗ, ತಿರಸ್ಕರಣಿವಿದ್ಯಾ, ಅಷ್ಟ ಯೋಗ—ಇವು ಮಾನವನಿಗೆ ದೊರಕಿರುವುದೇ ಈ ವೇದದಿಂದ. ಆದರೆ ಭಗವತ್ ಕೃಪೆಯನ್ನು ಗಳಿಸುವುದರಿಂದ ಬೇರೆ ಯಾವ ವಿಧಾನದಿಂದಲೂ ಪಡೆಯಲು ಸಾಧ್ಯವಿಲ್ಲದ ಸಾಮರ್ಥ್ಯ, ಹಾಗೂ ಕೌಶಲಗಳನ್ನು ಮಾನವನು ಪಡೆಯಬಹುದು.

ಒಟ್ಟಿನಲ್ಲಿ ವೇದಗಳು ಮಾನವನಿಗೆ ಅತ್ಯಂತ ಮುಖ್ಯವಾದವು, ಮತ್ತು ಅವು ಜ್ಞಾನದ ಇಡೀ ಶ್ರೇಣಿಯನ್ನೇ ಒಳಗೊಳ್ಳುತ್ತವೆ. ಅವು ಭಾರತೀಯ ಸಂಸ್ಕೃತಿಯ ಮೂಲಸೆಲೆಗಳು. ಇವು ಋಷಿಗಳು ಪಡೆದ ದಿವ್ಯ ದರ್ಶನಗಳ ಮತ್ತು ದಿವ್ಯಾನುಭವ ಗಳ ದಾಖಲೆಗಳಾಗಿವೆ. ಅವುಗಳ ಕರ್ತೃ ಯಾವನೇ ಒಬ್ಬ ವ್ಯಕ್ತಿಯಲ್ಲ. ಭಗವಂತನೇ ಅವುಗಳನ್ನು, ಅಪಾರ ಕರುಣೆಯಿಂದ ಲೋಕಕ್ಕೆ ಪ್ರಕಟಿಸಿದನು. ಈ ಪರಮಪೂಜ್ಯ ವಾದ ವೇದಗಳನ್ನು ಇಂದಿಗೂ ಅತ್ಯಂತ ಪರಿಶುದ್ಧವಾಗಿ, ದೋಷರಹಿತವಾಗಿ ಉಳಿಸಿಕೊಳ್ಳಲಾಗಿದೆ. ಹೇಗೆಂದರೆ ಅದನ್ನು ಗುರುವು ನೇರವಾಗಿ ಶಿಷ್ಯನಿಗೆ ಕಲಿಸಿ ಕೊಡುವ ಪರಿಪಾಠವನ್ನೇ ಇಂದಿಗೂ ಉಳಿಸಿಕೊಂಡು ಬರಲಾಗಿದೆ. ಪೀಳಿಗೆ ಯಿಂದ ಪೀಳಿಗೆಗೆ ಹೀಗೇ ಮುಂದುವರಿದು ಬಂದಿದೆ. ವೇದಗಳು ಕಾಲಾತೀತವಾದ್ದ ರಿಂದ ಕರ್ತೃರಹಿತವಾದ್ದರಿಂದ ಎಲ್ಲರೂ ಅವುಗಳನ್ನು ಒಪ್ಪಿಕೊಳ್ಳಬಹುದಾಗಿದೆ. ಅವುಗಳ ಮೌಲ್ಯವನ್ನು ಯಾರೂ ಅಲಕ್ಷಿಸಲಾರರು ಅಥವಾ ನಿರಾಕರಿಸಲಾರರು. ಒಳಗಿನ ವಸ್ತುವೈವಿಧ್ಯ ಏನೇ ಇರಲಿ, ವ್ಯಾಖ್ಯಾನಗಳು ನಾಲ್ಕು ವೇದಗಳ ಮೂಲ ಭೂತವಾದ ಉಪದೇಶ ಒಂದೇ ಆಗಿದೆ ಎಂಬುದನ್ನು ಒಪ್ಪುತ್ತವೆ. ಧರ್ಮಾಚರಣೆ ಗಳು, ಪೂಜಾವಿಧಾನಗಳು, ಜಿಜ್ಞಾಸೆಯಿಂದ ಮೂಡಿಬಂದ ನಿರ್ಣಯಗಳು ಇವೆಲ್ಲ ಮಾನವನಿಗೆ ಧರ್ಮ, ಅರ್ಥ, ಕಾಮ, ಮೋಕ್ಷ ಎಂಬ ನಾಲ್ಕು ಪುರುಷಾರ್ಥಗಳನ್ನು, ಜೀವನದ ಲಕ್ಷ್ಯಗಳನ್ನು ಸಾಧಿಸಲು ನೆರವು ನೀಡುತ್ತವೆ. ವೇದಗಳ ಮೇಲೆ

ಪ್ರಭುತ್ವ ಸಂಪಾದಿಸಿಕೊಳ್ಳುವುದು ತುಂಬಾ ಕಷ್ಟ. ಆದ್ದರಿಂದ ನಾವು ಶ್ರುತಿಯನ್ನು ವ್ಯಾಖ್ಯಾನಿಸಲು ವಿಸ್ತಾರವಾದ ಸ್ಮೃತಿ ಸಾಹಿತ್ಯವನ್ನೂ ಪುರಾಣಗಳನ್ನೂ ಇತಿಹಾಸ ಗಳನ್ನೂ ರಚಿಸಿ ಬೆಳೆಸಿದ್ದೇವೆ. ಬಹುದೂರ ದೃಷ್ಟಿಯಿಂದ ಮಹರ್ಷಿಗಳು ಐತಿ ಹಾಸಿಕ ಹಾಗೂ ಪೌರಾಣಿಕ ಘಟನೆಗಳನ್ನು ಆಧರಿಸಿ ಈ ಸಾಹಿತ್ಯ ರಾಶಿಯನ್ನು ರಚಿಸಿದರು.

ಕರ್ಮ ಮತ್ತು ಜ್ಞಾನಗಳು ಕಾರಣ ಮತ್ತು ಪರಿಣಾಮಗಳ ಹಾಗೆ ಸಂಬಂಧಪಟ್ಟಿವೆ. ಆದ್ದರಿಂದ ಶ್ರುತಿ ಮತ್ತು ಸ್ಮೃತಿಗಳ ಕರ್ಮವಿಭಾಗಗಳು ಕ್ರಿಯಾಪರತೆಯನ್ನು ಒತ್ತಿ ಹೇಳುತ್ತಾ, ಸತ್ಯದ ಹೊಸ ಆಯಾಮಗಳನ್ನು ಕಂಡು ಹಿಡಿಯಲು ದಾರಿ ಮಾಡಿದುವು. ಒಬ್ಬ ಅಲೌಕಿಕನಾದ ಭಗವಂತನ ಹೆಚ್ಚು ಸ್ಪಷ್ಟವಾದ ಸಮೀಪ ಚಿತ್ರವನ್ನು ಒದಗಿಸಿದುವು. ಜ್ಞಾನಮಾರ್ಗದ ಆಧ್ಯಾತ್ಮಿಕ ಚಿಂತನೆಗಳೂ ಭಗವಂತನ ಸ್ಪಷ್ಟತರ ಕಲ್ಪನೆಗಳಿಗೆ ದಾರಿಹಾಕಿಕೊಟ್ಟು ಕರ್ಮಕ್ಕೆ ಉತ್ತಮತರ ಅರ್ಥವನ್ನು ಉನ್ನತ ಉದ್ದೇಶವನ್ನೂ ಒದಗಿಸಿದುವು. ಕರ್ಮದ ಫಲವು ಶ್ರದ್ಧೆಗೆ ಪರಿಮಾಣಾನುಸಾರಿ ಆಯಿತು, ಕರ್ಮದಲ್ಲಿ ಶ್ರದ್ಧೆಯಾದರೋ ಜ್ಞಾನದ ಮೂಲಕ ಗಳಿಸಿದ ಭಗವತ್ಪ್ರಜ್ಞೆಗೆ ಪರಿಮಾಣಾನುಸಾರವಾಯಿತು. ಸತ್ಕರ್ಮ ನಿರತನಾಗಬೇಕಾದರೆ ಜ್ಞಾನವು ಬಹು ಮುಖ್ಯವಾದ ಪೂರ್ವಗತ್ಯ. ಆ ಜ್ಞಾನವನ್ನು ಅಂತಿಮವಾಗಿ ವೇದಗಳಿಂದ ಪಡೆಯಬೇಕು; ಅದು ವೇದಗಳ ಬೋಧನೆಯ ಮೇಲೆಯೇ ನಿಂತಿದೆ.

ವಾಸ್ತವವಾಗಿ ಹೇಳುವುದಾದರೆ ಕರ್ಮವು ಧರ್ಮದ ಆಚರಣೆ. ಆಧ್ಯಾತ್ಮಿಕ ಪ್ರಯಾ ಣದಲ್ಲಿ ಏನೇನನ್ನು ಮಾಡಬೇಕು, ಏನೇನನ್ನು ಮಾಡಬಾರದು ಎಂಬ ವಿಚಾರವಾಗಿ ಉಪನಿಷತ್ತುಗಳು ನಮಗೆ ಮಾರ್ಗದರ್ಶನ ನೀಡುತ್ತವೆ. ತಾಯಿಯನ್ನು ದೇವ ರೆಂದು ಪೂಜಿಸು, ತಂದೆಯನ್ನು ದೇವರೆಂದು ಪೂಜಿಸು, ಗುರುವನ್ನು ದೇವರೆಂದು ಪೂಜಿಸು, ಅತಿಥಿಯನ್ನು ದೇವರೆಂದು ಪೂಜಿಸು ಎಂಬುದಾಗಿ ಅವು ನಿರ್ದೇಶಿಸು ತ್ತವೆ. ಸತ್ಯವನ್ನು ಎಂದಿಗೂ ಅಲಕ್ಷಿಸಬಾರದು, ಧರ್ಮವನ್ನು ಎಂದಿಗೂ ಅಲಕ್ಷಿಸ ಬಾರದು ಎಂದು ಎಚ್ಚರಿಕೆ ಕೊಡುತ್ತವೆ. ಆದ್ದರಿಂದ ಇಲ್ಲಿ ಇತ್ಯಾತ್ಮಕ ನೇತ್ಯಾತ್ಮಕ ಬೋಧನೆಗಳೆರಡೂ ಇವೆ. ಈ ಉಪದೇಶಗಳನ್ನು ಪಾಲಿಸಿ, ಬೇರೆ ಯಾವುದನ್ನೂ ಅಲ್ಲ. ಸತ್ಪಥದಲ್ಲಿ ಪ್ರಗತಿಗೆ ಯಾವುದು ಹಿತಕರವೋ ಅದನ್ನು ಸ್ವೀಕರಿಸಿ, ಇತರ ಸಲಹೆಗಳನ್ನಲ್ಲ—ಹೀಗೆ ಉಪನಿಷತ್ತುಗಳು ಬೋಧಿಸಿವೆ.

ಆ ಕಾಲದಲ್ಲಿ ರಾಜನೇ ಋಷ್ಯಾಶ್ರಮಗಳಿಗೆ ಹೋಗಿ ಉಪನಿಷತ್ತಿನ ಋಷಿಗಳ ಪದತಲದಲ್ಲಿ ಕುಳಿತು ವಿದ್ಯಾಭ್ಯಾಸ ಮಾಡುತ್ತಿದ್ದನು. ವೈದಿಕ ಸಾಹಿತ್ಯದ ಆಗರವಾ ಗಿದ್ದ ಶಿಕ್ಷಣ ಸಂಸ್ಥೆಗಳಿಗೆ ಉದಾರವಾಗಿ ಆರ್ಥಿಕ ನೆರವು ನೀಡಿ ಇತರರು

ಶಿಕ್ಷಣ ಪಡೆಯಲು ಸಹಾಯ ಮಾಡುತ್ತಿದ್ದನು. ರಾಜನು ಹೇಗೋ ಪ್ರಜೆಗಳೂ ಹಾಗೆಯೇ. ವೇದ ರಕ್ಷಣೆ ಎಂದರೆ ವೇದ ವಿದ್ವಾಂಸರ, ವೇದವಿದರ ರಕ್ಷಣೆ ಮತ್ತು ಪಾಲನೆ. ಇಂದಿನ ದಿನಗಳಲ್ಲಿ ಶಿಕ್ಷಣದ ಬೇರೆ ಬೇರೆ ಕ್ಷೇತ್ರಗಳಲ್ಲಿ ಪ್ರೋತ್ಸಾಹವನ್ನೂ ವಿದ್ಯಾರ್ಥಿ ವೇತನಗಳನ್ನೂ ನೀಡಲಾಗುತ್ತಿದೆ. ಅದೇ ಬಗೆಯ ಪ್ರೋತ್ಸಾಹವನ್ನೂ ಧನ ಸಹಾಯವನ್ನೂ ವೈದಿಕ ವಿದ್ವಾಂಸರಿಗೆ ಕೊಡುತ್ತಿಲ್ಲ. ಇದು ಗಮನ ಕೊಡಲೇಬೇಕಾದ ಅತ್ಯಂತ ಮುಖ್ಯವಾದ ಅಂಶ.

ಧರ್ಮೋ ರಕ್ಷತಿ ರಕ್ಷಿತಃ ಎಂದು ಶ್ರುತಿಯು ಹೇಳುತ್ತದೆ. ಧರ್ಮವನ್ನು ಯಾರು ರಕ್ಷಿಸುತ್ತಾರೋ ಅವರನ್ನು ಧರ್ಮವು ರಕ್ಷಿಸುತ್ತದೆ. ಧರ್ಮದ ಮೂಲವನ್ನು ಪಾಲಿಸಲು ಜನರು ಮುಂದೆ ಬಂದದ್ದೇ ಆದರೆ ಆ ಒಳ್ಳೆಯ ಕೆಲಸವೇ ಅವರನ್ನು ಪಾಲಿಸತ್ತದೆ. ವೇದಾಧ್ಯಯನವು ಇಂದು ಆರ್ಥಿಕವಾಗಿ ದುರ್ಬಲರಾಗಿರುವವರ ಕೆಲಸವಾಗಿದೆ. ಜನರೂ ಈ ಪರಿಸ್ಥಿತಿಗೆ ಒಗ್ಗಿಹೋಗಿದ್ದಾರೆ. ವೇದಾಧ್ಯಯನವನ್ನು ವಿಷಾದದ, ಕನಿಕರದ ಸ್ಥಿತಿಗೆ ನೂಕಿದ್ದಾರೆ. ವೇದಗಳಲ್ಲಿ ಅಪಾರ ವಿದ್ವತ್ತನ್ನು ಪಡೆದಿರುವ ಪಂಡಿತರೇ ಅವನ್ನು ಮಾರಾಟ ಮಾಡಬಲ್ಲ ವ್ಯಾಪಾರ ವಸ್ತುವೆಂಬಂತೆ ಬಳಸುತ್ತಿದ್ದಾರೆ. ಅವರು ವೇದಾಧ್ಯಯನದ ಮಹತ್ವವನ್ನು ತಮ್ಮ ಬದುಕಿನ ಶಾಂತಿ, ಸಮರಸತೆಗಳಲ್ಲಿ ಪ್ರಯೋಗತಃ ತೋರಿಸುತ್ತಿಲ್ಲ; ತಾವೇ ಮಾದರಿಯಾಗಿ ನಿಂತು ವೇದಗಳಿಗೆ ಗೌರವವನ್ನು ಸಂಪಾದಿಸಿಕೊಡುತ್ತಿಲ್ಲ. ಮೋಕ್ಷ ಮತ್ತು ಶಾಂತಿಗಳಿಗೆ ಬದಲಾಗಿ ಒಂದೆರಡು ಪುಡಿಗಾಸುಗಳನ್ನು ಗಳಿಸಲು ವೇದಗಳನ್ನು ಅವರು ದುರುಪ ಯೋಗಪಡಿಸಿಕೊಳ್ಳುತ್ತಿದ್ದಾರೆ. ಧರ್ಮದ ಹಿನ್ನಡೆಗೂ ಜನತೆಯಲ್ಲಿ ಕಳವಳ ಭೀತಿ ಗಳು ಹರಡುತ್ತಿರುವುದಕ್ಕೂ ಇದೇ ಕಾರಣ. ವೇದಗಳು ಹಾಕಿಕೊಟ್ಟಿರುವ ಆದರ್ಶ ಗಳನ್ನು ಆಚರಿಸಿ ಮಾನವ ಜನಾಂಗವನ್ನು ಸರಿಯಾದ ದಾರಿಗೆ ನಿರ್ದೇಶಿಸುವ ದೀಪಸ್ತಂಭಗಳಾಗುವಂತೆ ಆ ಜನರನ್ನು ಒಲಿಸಿದರೆ ಮಾತ್ರ ಈ ಜಗತ್ತು ಮತ್ತೆ ಶಾಂತಿಯನ್ನೂ ಸಾಮರಸ್ಯವನ್ನೂ ಗಳಿಸಿಕೊಳ್ಳಬಹುದು. ಇಲ್ಲವಾದರೆ ಅವನತಿ ಅನಿವಾರ್ಯವಾಗುತ್ತದೆ.

ಭಾರತೀಯ ಅಧ್ಯಾತ್ಮವಾಹಿನಿಯು ಇಂದಿನವರೆಗೂ ವೇದಾಧ್ಯಯನ ಮತ್ತು ಆಚ ರಣೆಯನ್ನು ಪೋಷಿಸುತ್ತಾ ಬಂದಿದೆ. ಅದರ ಸಂದೇಶ ಯಾವಾಗಲೂ ವೈದಿಕ ಪಥದಲ್ಲಿ ಮುಂದೆ ಸಾಗುವಿಕೆ ಎನ್ನುವುದೇ ಆಗಿದೆ. ವೇದಾಂತವನ್ನು ವೇದಗಳನ್ನು ಕುರಿತು ಒಬ್ಬನು ಬೇಕಾದರೆ ವಿಸ್ತಾರವಾಗಿ ಮಾತನಾಡಬಹುದು, ಆದರೆ ತನ್ನದೇ ಅನುಭವ ಮತ್ತು ಆಚರಣೆಗಳ ಆಧಾರದಿಂದ ಈ ಆದರ್ಶಗಳ ಮೌಲ್ಯವನ್ನು ಎತ್ತಿ ಹಿಡಯದೆ ಹೋದರೆ ಅದುವ್ಯರ್ಥ. ಈ ಸತ್ಯವನ್ನು ಈ ಜನರು ಮರೆತುಬಿಟ್ಟಿದ್ದಾರೆ.

ಅವರು ಸಕಾಲಕ್ಕೆ ಎಚ್ಚರಗೊಳ್ಳಲಿ, ಚಿರಂತನವಾದ ವೈದಿಕ ಸಂಸ್ಕೃತಿಯ ಸಂಪ್ರದಾಯಗಳನ್ನೂ ಮೌಲ್ಯಗಳನ್ನೂ ರಕ್ಷಿಸಲಿ.

ಅಧ್ಯಾಯ ೧೨

# ಮುಂದಿನ ಸಾಹಿತ್ಯಗಳಲ್ಲಿ ಮೌಲ್ಯಗಳು

ಉಪನಿಷತ್ತುಗಳು ಮತ್ತು ಇತರ ಕೃತಿಗಳ ಮೂಲಕ ವೇದಾಂತವನ್ನು ಪ್ರವರ್ತಿಸಿದ್ದಾದ ಮೇಲೆ ಋಷಿಗಳು ತಪಸ್ಸಿನಲ್ಲಿ ಹಾಗೂ ಅದರಿಂದ ಗಳಿಸಿದ ಆಧ್ಯಾತ್ಮಿಕ ಅನುಭವದಲ್ಲಿ ತನ್ಮಯರಾಗಿದ್ದು ಸ್ಮೃತಿಗಳನ್ನು ರಚಿಸಿದರು. ಅವುಗಳಲ್ಲಿ ಬದುಕಿನ ಬೇರೆ ಬೇರೆ ಹಂತಗಳಲ್ಲೂ ಸಮಾಜದಲ್ಲಿನ ಬೇರೆ ಬೇರೆ ವರ್ಗಗಳಿಗೆ ಸೇರಿದಂತೆಯೂ ಹೇಗೆ ನಡೆದುಕೊಳ್ಳಬೇಕೆಂಬ ವಿಷಯದಲ್ಲಿ ನೀತಿ ನಿಯಮಗಳನ್ನು ಕುರಿತು ವಿಸ್ತಾರವಾಗಿ ನಿರೂಪಿಸಿದರು. ಏನೇ ಆದರೂ ವೇದಾಂತ ಕೃತಿಗಳಿಗಿದ್ದ ಪ್ರಾಮುಖ್ಯ, ಪ್ರಾಧಾನ್ಯ ಸ್ಮೃತಿಗಳಿಗೆ ಬರಲಿಲ್ಲ. ಅವು ಹಕ್ಕು ಬಾಧ್ಯತೆಗಳನ್ನೂ ಕರ್ತವ್ಯ ಹೊಣೆಗಾರಿಕೆಗಳನ್ನೂ ಹೇಳಿದವು.

ಇಂತಹ ಸ್ಮೃತಿಗಳನ್ನು ಇತರ ಧರ್ಮಗಳನ್ನು ಅನುಸರಿಸುವವರ ಪವಿತ್ರ ಗ್ರಂಥ ಸಮುದಾಯಗಳಲ್ಲಿಯೂ ನೋಡಬಹುದು. ಅವರು ತಮ್ಮ ಪ್ರವಾದಿಗಳು ಮತ್ತು ದ್ರಷ್ಟಾರರು ಕೊಟ್ಟ ಸಾಮಾಜಿಕ ನೀತಿ ಸಂಹಿತೆಗಳನ್ನು ವೈಯಕ್ತಿಕ ನಡವಳಿಕೆಯ ಸೂತ್ರಗಳನ್ನು ಬಹಳ ಅಮೂಲ್ಯವೆಂದೂ ಅನುಲ್ಲಂಘನೀಯವೆಂದೂ ಪರಿಗಣಿಸುತ್ತಾರೆ. ನಾವೂ ಅವುಗಳನ್ನು ಗೌರವಿಸುತ್ತೇವೆ. ಸಮಾಜದ ಒಳಿತಿಗೂ ಮಾನವನ ಪ್ರಗತಿಗೂ ಹಾಕಿಕೊಟ್ಟಿರುವ ನಿಯಮಾವಳಿಗಳೆಂದು ಗೌರವಿಸುತ್ತಲೇ ಇರುತ್ತೇವೆ. ಏಕೆಂದರೆ ಅವುಗಳನ್ನು ರೂಪಿಸಿದವರು ಮಹಾಪುರಷರು, ಅಸಾಮಾನ್ಯರಾದ ಋಷಿಗಳು ಮತ್ತು ಜನರ ಕಲ್ಯಾಣವನ್ನು ಬಯಸುವ ಸತ್ಪುರುಷರು.

ಆದರೆ, ಕಾಲವುರುಳಿದಂತೆ ಕೂಡುವಿಕೆ ಕಳೆಯುವಿಕೆಗಳಿಂದಲೂ ಯಾವುದಕ್ಕೆ ಒತ್ತು ಒಡಬೇಕೆನ್ನುವುದರಲ್ಲಿ ವ್ಯತ್ಯಾಸವಾದುದರಿಂದಲೂ ಸ್ಮೃತಿಗಳಲ್ಲಿ ಹಲವು ಬದಲಾವಣೆಗಳಾದವು. ವಿಧ ವಿಧವಾದ, ವಿಭಿನ್ನವಾದ ಸಲಹೆಗಳನ್ನು ಕೊಡುವ ಬಹು ಸಂಖ್ಯೆಯ ಸ್ಮೃತಿಗಳು ಕಾಣಿಸಿಕೊಂಡುದರಿಂದ ಗೊಂದಲ, ಸಂದೇಹಗಳು ಉಂಟಾದ್ದರಿಂದ ಋಷಿಗಳು ಪ್ರತಿಯೊಂದು ಯುಗಕ್ಕೂ ನಿರ್ದಿಷ್ಟವಾದ ಸ್ಮೃತಿಯನ್ನು ಗೊತ್ತುಪಡಿಸಿದರು. ಕೃತಯುಗದಲ್ಲಿ ಜನರು ಒಂದು ಸ್ಮೃತಿಯನ್ನು ವಿಶೇಷವಾಗಿ ತಮಗಾಗೇ ನಿರೂಪಿತವಾಗಿರುವಂತೆ ಪರಿಗಣಿಸತಕ್ಕದ್ದು; ತ್ರೇತಾಯುಗದವರು ಇನ್ನೊಂದು ಸ್ಮೃತಿಯ ಬೋಧನೆಗಳನ್ನು ಅನುಸರಿಸತಕ್ಕದ್ದು; ದ್ವಾಪರ

ಯುಗದಲ್ಲಿ ಜನರು ಮೂರನೆಯದೊಂದು ಸ್ಮೃತಿಯಲ್ಲಿ ನಿರೂಪಿಸಿರುವ ಮಾರ್ಗದಲ್ಲಿ ನಡೆಯಬೇಕು ಮತ್ತು ಕಲಿಯುಗದಲ್ಲಿ ನಾಲ್ಕನೆಯ ಬೇರೊಂದು ಸ್ಮೃತಿಯನ್ನು ಅನುಸರಿಸಬೇಕು ಎಂದರು. ಶತಶತ ವರ್ಷಗಳು ಉರುಳುತ್ತ ಹೋದಂತೆ ನೂತನ ಸಮಸ್ಯೆಗಳು ಹುಟ್ಟುತ್ತವೆ, ಹೊಸ ಪರಿಸ್ಥಿತಿಗಳು, ತೊಳಲಾಟಗಳನ್ನು ಮಾನವನು ಎದುರಿಸಬೇಕಾಗುತ್ತದೆ. ಹಾಗಾಗಿ ಹಿಂದಿನ ನಿಯಮಗಳನ್ನೂ ಸೀಮಿತಗಳನ್ನೂ ಅಲ್ಲಿ ಇಲ್ಲಿ ತುಸು ಮಾರ್ಪಡಿಸಬೇಕಾಗುತ್ತದೆ.

ಹಾಗೆ ನೋಡಿದರೆ ಅಂತಹ ಹೊಂದಾಣಿಕೆಗಳು ಯೋಜನೆಯ ಭಾಗವೇ ಆಗಿವೆ ಬದಲಾದ ಪರಿಸ್ಥಿತಿಗಳಲ್ಲಿ ಜನರಿಗೆ ಅಧ್ಯಾತ್ಮ ಪ್ರಗತಿಯ ಪಥವನ್ನು ತೋರಿಸಿಕೊಡಬೇಕು. ಆದ್ದರಿಂದ ಈ ನೂತನ ಯುಗಕ್ಕೆ ಹೊಂದುವ ಸ್ಮೃತಿಯ ನಿಯಮಾವಳಿಗೆ ಎಲ್ಲರೂ ಕಟ್ಟುಪಡಲೇಬೇಕೆಂದು ನಿಗದಿಪಡಿಸಲಾಗಿದೆ. ಇದನ್ನು ಓದುಗರು ಮನಸ್ಸಿಗೆ ತಂದುಕೊಳ್ಳಬೇಕು ಮತ್ತು ಎಚ್ಚರಿಕೆಯಿಂದ ನೆನಪಿನಲ್ಲಿ ಇಟ್ಟುಕೊಳ್ಳಬೇಕು. ವೇದಾಂತದಲ್ಲಿ ನಿರೂಪಿಸಿರುವ ಆತ್ಮ ಧರ್ಮವು ನಿತ್ಯ ಹಾಗೂ ಪರಿವರ್ತನ ರಹಿತ, ಅದನ್ನು ಎಂದಿಗೂ ತೆಳುವುಗೊಳಿಸಲು ಅಥವಾ ಕಾಲದ ಅಗತ್ಯಗಳಿಗೆ ತಕ್ಕಂತೆ ಹೊಂದಾಣಿಕೆಗೊಳಿಸಲು ಸಾಧ್ಯವಿಲ್ಲ. ಆತ್ಮವು ಎಲ್ಲದರ ತಿರುಳು, ಎಲ್ಲದರ ಸತ್ಯ, ಪರಮ ಲಕ್ಷ್ಯ ಎಂಬ ವಿಷಯದಲ್ಲಿ ನಂಬಿಕೆಯೇ ಚಿರಂತನ ಬೋಧನೆ, ಅದು ಎಲ್ಲ ಕಾಲಕ್ಕೂ ಸತ್ಯವಾದದ್ದು. ಆತ್ಮ ಧರ್ಮದ ಸತ್ಯವು ಆಧರಿಸಿರುವುದು ಪುರುಷ ಮತ್ತು ಪ್ರಕೃತಿಗಳ, ಮಾನವನ ಹಾಗೂ ದೈವ ಸಂಕಲ್ಪದ ಅಭಿವ್ಯಕ್ತ ಪ್ರಕೃತಿಯ ತಳಹದಿಯನ್ನು. ಆದ್ದರಿಂದ ಅವು ಪರಿವರ್ತನೆಯ ಎಟುಕಿಗೆ ಸಿಲುಕದಾಗಿವೆ. ಅವು ಸಹಸ್ರಾರು ವರ್ಷಗಳ ಹಿಂದೆ ಹೇಗೋ ಹಾಗೆಯೇ ಇಂದಿಗೂ ಅಮೂಲ್ಯವಾಗಿವೆ, ಸುಸಂಗತತ್ವವಾಗಲಿ ಸಿಂಧುತ್ವವಾಗಲಿ ಎಳ್ಳಷ್ಟೂ ಬಾಧಿತವಾಗುವುದಿಲ್ಲ. ಭೂತ ಕಾಲವು ವರ್ತಮಾನ ಕಾಲವಾಗುತ್ತ, ವರ್ತಮಾನವು ಭವಿಷ್ಯತ್ತಿಗೆ ಸರಿಯುತ್ತಲೇ ಹೋಗುತ್ತದೆ, ಆದರೆ ವೇದಾಂತವು ಮಾತ್ರ ದೃಢವಾಗಿ ನಿಂತಿರುತ್ತದೆ.

ಸನ್ನಡವಳಿಕೆಯ ನೀತಿನಿಯಮಗಳು ಮನುಷ್ಯನು ತನ್ನ ಮನಸ್ಸನ್ನೂ ಇಂದ್ರಿಗಳನ್ನೂ ನಿಯಂತ್ರಿಸಿಕೊಳ್ಳಲು, ತನ್ನ ಬುದ್ಧಿಯನ್ನು ಪರಿಶುದ್ಧಗೊಳಿಸಿಕೊಳ್ಳಲು ವಿಧಿಸಿರುವ ಸಾಧನೆಗಳು ಜನರ ಪರಿಸ್ಥಿತಿಗಳಿಗೆ ಹೊಂದಿಕೊಳ್ಳಬೆಕು. ಅವರು ತಮ್ಮೊಳಗೇ ಅಥವಾ ಇತರ ಪಂಗಡಗಳೊಂದಿಗೆ ಬೆಳೆಸಿಕೊಳ್ಳುವ ನಂಟುಗಳಿಗೆ ಅವು ಹೊಂದಿಕೆಯಾಗಬೇಕು. ಸಾಮಾಜಿಕ ಪರಿಸ್ಥಿತಿಗಳ ಬದಲಾಗುವ ಮುಖಕ್ಕೆ ತಕ್ಕ ಹಾಗೆ ಅವೂ ಹೊಂದಾಣಿಕೆ ಮಾಡಿಕೊಳ್ಳಬೇಕು, ಸುಧಾರಣೆಗೊಳ್ಳಬೇಕು. ಅವು ಕಾಲದೇಶಗಳ ಯಾವುದೋ ನಿರ್ದಿಷ್ಟ ಹಂತದಲ್ಲಿ ಸುಸಂಗತವಾಗಿರಬಹುದು, ಲಾಭದಾಯಕವಾಗಿರಬಹುದು. ಆದರೆ ಬೇರೆ ಪರಿಸ್ಥಿತಿಯಲ್ಲಿ ಹಾಗಲ್ಲದಿರಬಹುದು. ನಿದರ್ಶನಕ್ಕೆ

ಯಾವುದೋ ಕೆಲವು ಕಾಲಗಳಲ್ಲಿ ವಿಧಿಸಿದ ಆಹಾರ ನಿಯಮಾವಳಿಗಳನ್ನು ಇತರ ಕಾಲಗಳಲ್ಲಿ ಹಿಂತೆಗೆದುಕೊಂಡು ನೂತನ ನಿಯಮಗಳನ್ನು ವಿಧಿಸಿರಬಹುದು. ದೇಹಕ್ಕೆ ಯಾವ ಮಾದರಿಯ ಆಹಾರ ಅಗತ್ಯವೆಂಬುದನ್ನು ಅಲ್ಲಿಯ ಹವಾಮಾನ ಪರಿಸ್ಥಿತಿಗಳು ನಿಯಂತ್ರಿಸುತ್ತವೆ. ಸ್ಮೃತಿಗಳು ಅಗತ್ಯವನ್ನು ಗುರುತಿಸಿ, ಆರೋಗ್ಯದ ರಕ್ಷಣೆಗೋಸ್ಕರವಾಗಿ ಆಹಾರ ಅಭ್ಯಾಸಗಳಲ್ಲಿ ಬದಲಾವಣೆಗಳಿಗೆ ಅವಕಾಶ ಕೊಡುತ್ತವೆ. ಇತರ ವಿಷಯಗಳಲ್ಲೂ ಇದೇ ನಿಲುವು ಕಂಡುಬರುತ್ತದೆ. ಆಧುನಿಕ ಪರಿಸ್ಥಿತಿಗಳಲ್ಲಿಯೂ ಇದೇ ಕಾರಣಕ್ಕಾಗಿಯೇ ಸಮಾಜವನ್ನು ನಿಯಂತ್ರಿಸುವ ನಿಯಮಾವಳಿಗಳಲ್ಲಿ ಸೂಕ್ತ ಬದಲಾವಣೆಗಳನ್ನು ಮಾಡಿಕೊಳ್ಳುವುದು ಅಪೇಕ್ಷಣೀಯವಾಗಿದೆ. ಆದರೆ ಧರ್ಮದ ಮೂಲಭೂತ ತತ್ತ್ವಗಳು ಸ್ವಲ್ಪವೂ ಬದಲಾಗದೆ ಉಳಿದರಬೇಕು. ಅವುಗಳನ್ನು ಎಂದಿಗೂ ಅಲುಗಾಡಿಸಲು, ಸಡಿಲಗೊಳಿಸಲು ಸಾಧ್ಯವಿಲ್ಲ.

ಇನ್ನು ಪುರಾಣಗಳ ಬಗೆಗೆ ಹೇಳುವುದಾದರೆ 'ಪುರಾಣಂ ಪ್ರಾಂಜಲಿ ಕ್ಷಣಂ'. ಅಂದರೆ, ಪುರಾಣಗಳು ಸೃಷ್ಟಿ ಮತ್ತು ವಿಕಾಸದ ಐತಿಹಾಸಿಕ ಘಟನೆಗಳ ಬಗೆಗೆ ವ್ಯವಹರಿಸುತ್ತವೆ. ಘಟನೆಗಳನ್ನೂ ಸಂದರ್ಭಗಳನ್ನೂ ಹೇಗೆ ಆರಿಸಿ ನಿರೂಪಿಸಲಾಗುತ್ತದೆಂದರೆ ಅವು ಮೂಲ ದಾರ್ಶನಿಕ ಸತ್ಯಗಳಿಗೆ ನಿರ್ದಶನಗಳನ್ನು ಒದಗಿಸುತ್ತವೆ. ಸಾಮಾನ್ಯ ವ್ಯಕ್ತಿಗೆ ಸ್ವಾರಸ್ಯವಾದ ಪೌರಾಣಿಕ ಹಾಗೂ ಪರಂಪರಾಗತ ಕಥೆಗಳ ಮೂಲಕ ವೇದ ವೇದಾಂತಗಳ ಬೋಧನೆಗಳನ್ನು ಪ್ರತಿಪಾದಿಸುವುದಕ್ಕೆಂದು ಪುರಾಣಗಳನ್ನು ರಚಿಸಲಾಯಿತು. ವೇದಗಳ ಭಾಷೆಯು ಬಹು ಪ್ರಾಚೀನವಾಗಿದೆ ಮತ್ತು ವ್ಯಾಕರಣದ ಹಾಗೂ ಪರಿಭಾಷೆಯ ಅನೇಕ ಪ್ರಾಚೀನ ಅಂಶಗಳನ್ನು ಒಳಗೊಂಡಿದೆ. ವೇದದ ಋಕ್ಕುಗಳನ್ನು ರೂಪಿಸಿದ ಕಾಲವನ್ನು ಕಂಡುಹಿಡಿಯಲು ಬಹು ದೊಡ್ಡ ವಿದ್ವಾಂಸರಿಗೂ ಸಾಧ್ಯವಾಗಿಲ್ಲ. ಆದರೆ ಪುರಾಣಗಳನ್ನು ಆ ಕಾಲದಲ್ಲಿ ಪ್ರಚಲಿತವಾಗಿದ್ದ ಹಾಗೂ ಸುಲಭವಾಗಿ ಅರ್ಥವಾಗುತ್ತಿದ್ದ ಭಾಷೆಯಲ್ಲಿ ರಚಿಸಿದರು. ಈಗ ಸಂಸ್ಕೃತ ಭಾಷೆ ಎಂದು ನಾವು ತಿಳಿದುಕೊಂಡಿರುವುದು ಪುರಾಣಗಳಲ್ಲಿ ಬಳಕೆಯಾಗಿರುವ ಭಾಷೆ. ಅವುಗಳನ್ನು ಬರೆದಾಗ ವಿದ್ವಾಂಸರು ಮಾತ್ರವಲ್ಲ ಆ ಕಾಲದ ಜನ ಸಾಮಾನ್ಯರೂ ಬಹು ಸುಲಭವಾಗಿ ಆ ಭಾಷೆಯನ್ನು ಅರ್ಥ ಮಾಡಿಕೊಳ್ಳುತ್ತಿದ್ದರು.

ಪುರಾಣಗಳಲ್ಲಿ ದೇವ ದೇವತೆಗಳು, ಪ್ರಸಿದ್ಧ ರಾಜರು, ರಾಜವಂಶಗಳು, ಹಲವು ಸಾಮ್ರಾಜ್ಯಗಳ, ಸಮುದಾಯಗಳ ಏಳು ಬೀಳುಗಳು, ಇವಕ್ಕೆ ಸಂಬಂಧಿಸಿದ ಐತಿಹಾಸಿಕ ಕಥನಗಳಿವೆ. ಅವೆಲ್ಲವುಗಳ ಮೂಲಕವಾಗಿ ಧರ್ಮದ ನಿದರ್ಶನಗಳನ್ನು ಆಧ್ಯಾತ್ಮಿಕ ತತ್ತ್ವ ನಿರೂಪಣೆಗಳನ್ನು ನೋಡಬಹುದು. ಇಲ್ಲಿ ಉಲ್ಲೇಖಿಸಿದ ಎಲ್ಲ

ಕೃತಿಗಳು, ಶಾಸ್ತ್ರಗ್ರಂಥಗಳು ಮತ್ತು ಪವಿತ್ರ ಗ್ರಂಥಗಳು ಎಲ್ಲವನ್ನೂ ಹಿಂದೂ ಶಾಸ್ತ್ರಗಳು ಎಂಬ ಒಂದು ಹೆಸರಿನಡಿಯಲ್ಲಿ ಗುಂಪು ಮಾಡಬಹುದು. ಯಾವ ಜನರು ಸಹಸ್ರಾರು ವರ್ಷಗಳ ಕಾಲ ಇಷ್ಟು ಅಗಾಧವೂ ಅಮೂಲ್ಯವೂ ಆದ ಸಾಹಿತ್ಯರಾಶಿಯನ್ನು ರಚಿಸಿದರೋ ಶ್ರದ್ಧೆಯಿಂದ ಗೌರವಿಸಿದರೋ ಅದೇ ಜನರು ಕೆಲ ಕಾಲಾನಂತರ ನಿರ್ದಿಷ್ಟ ಪಂಥಗಳಿಗೆ ಮತ್ತು ನಂಬಿಕೆಗಳಿಗೆ ಮೊದಲ ಒಲವು, ನಿಷ್ಠೆ ತೋರಿಸುವುದರ ಮೂಲಕ ವಿಭಿನ್ನ ಪಂಗಡಗಳಾಗಿ ಉಪಪಂಗಡಗಳಾಗಿ ಒಡೆದು ಹೋದುದರಲ್ಲಿ ಆಶ್ಚರ್ಯವೇನಿಲ್ಲ. ಪಂಗಡಗಳ ನಡುವಣ ವ್ಯತ್ಯಾಸಗಳು ಪ್ರಾಚೀನರು ಪ್ರಮಾಣಯುತವಾಗಿ ಕೊಟ್ಟಿದ್ದ ಆಲೋಚನಾ ಸ್ವಾತಂತ್ರ್ಯದಿಂದಾಗಿ ಹುಟ್ಟಿದ ಮನೋಭಾವಗಳು, ಪ್ರವೃತ್ತಿಗಳನ್ನು ಆದರಿಸಿದವು. ಈ ವಿಚಾರವನ್ನು ವಿಸ್ತಾರವಾಗಿ ಪರಿಶೀಲಿಸಲು ಇಲ್ಲಿ ಸಮಯವಿಲ್ಲ, ಅಥವಾ ಅದು ಈಗ ಅಗತ್ಯವೂ ಇಲ್ಲ. ನಾವೀಗ ಗ್ರಹಿಸಬೇಕಾಗಿರುವುದು ಎಲ್ಲರೂ ಒಪ್ಪಿಕೊಂಡಿರುವ ಸತ್ಯ, ಎಲ್ಲರೂ ಅಂಗೀಕರಿಸಿರುವ ಪ್ರವೃತ್ತಿಗಳು, ಅಂದರೆ ವ್ಯಕ್ತಿಯು ತನ್ನನ್ನು ಹಿಂದೂ ಎಂದು ಕರೆದುಕೊಳ್ಳುವ ಯಾವ ತತ್ತ್ವಗಳಲ್ಲಿ ನಂಬಿಕೆಯಿಟ್ಟಿರಬೇಕೋ ಅವುಗಳನ್ನು ಮಾತ್ರ.

ಸೃಷ್ಟಿಗೆ ಖಚಿತವಾಗಿ ಕಾರಣವೇನು? ಸೃಷ್ಟಿಯು ರೂಪಿಸಿದ ಮೂಲ ವಸ್ತುವಿನ ಸ್ವರೂಪವೇನು? ಹೇಗೆ ಅದು ರೂಪುಗೊಂಡಿತು? ಇವು ಭಾರತೀಯರು ಮಾತ್ರವಲ್ಲ, ಸಕಲ ಮಾನವರೂ ವಿಚಾರ ಮಾಡಬೇಕಾಗಿರುವ ಮುಖ್ಯವಾದ ಪ್ರಶ್ನೆಗಳು. ಕಾರಣವಿಲ್ಲದೆ ಪರಿಣಾಮವಿಲ್ಲ, ತಳಹದಿಯಿಲ್ಲದೆ ಒಂದು ಕಟ್ಟಡವಿರಲು ಸಾಧ್ಯವಿಲ್ಲ. ಆಯಿತು, ಈ ಸಮಸ್ತ ದೃಷ್ಟಿ ಗೋಚರ ಜಗತ್ತಿಗೆ ಬ್ರಹ್ಮವೇ ಮೂಲ ಕಾರಣ ಎಂದು ಸ್ಥಿರಪಡಿಸಬಹುದು ಎನ್ನೋಣ. ಆದರೆ ಬ್ರಹ್ಮ ಎಂದರೆ ಏನು? ಬ್ರಹ್ಮ ನಿತ್ಯವಾದದ್ದು, ಶುದ್ಧ, ಸದಾ ಜಾಗ್ರತ, ಸರ್ವಜ್ಞ, ಅಖಂಡ, ರೂಪರಹಿತ ಆದದ್ದು. ಈ ಜಗತ್ತಿಗೆ ಮೂಲ ಬ್ರಹ್ಮ. ಈ ಜಗತ್ತನ್ನು ರೂಪಿಸುತ್ತಿರುವುದು, ವಿಕಸಿಸುತ್ತಿರುವುದು, ಪಾಲಿಸುತ್ತಿರುವುದು ಬ್ರಹ್ಮವೇ.

ಜನರ ಮನಸ್ಸಿನಲ್ಲಿ ಕೆಲವು ಸಂದೇಹಗಳು ಏಳುತ್ತವೆ. ಈ ಸೃಷ್ಟಿಯಲ್ಲಿ ಇಷ್ಟೊಂದು ಪಕ್ಷಪಾತ ಏಕೆ ಕಂಡುಬರುತ್ತದೆ? ಕೆಲವರು ಆರೋಗ್ಯಶಾಲಿಗಳಾಗಿ ಹುಟ್ಟುತ್ತಾರೆ, ಕೆಲವರಿಗೆ ಆರೋಗ್ಯವಿರುವುದಿಲ್ಲ. ಕೆಲವರು ಶ್ರೀಮಂತಿಕೆಯ ಯಾವುದನ್ನೂ ಲೆಕ್ಕಿಸದ ಐಷಾರಾಮದ ಜೀವನ ನಡೆಸುತ್ತಾರೆ, ಇತರರು ಇಡೀ ಜೀವನ ಪೂರ್ತಿಯಾಗಿ ಕಡುಬಡತನದಲ್ಲಿ ದುಡಿದು ದುಡಿದು ಹಣ್ಣಾಗುತ್ತಾರೆ. ಈ ಸೃಷ್ಟಿಯಲ್ಲಿ ಅಥವಾ ಸೃಷ್ಟಿಕರ್ತನಲ್ಲಿ ಸಾಕಷ್ಟು ಮಟ್ಟಿಗೆ ಪಕ್ಷಪಾತದ ಲಕ್ಷಣ ಕಂಡುಬರುತ್ತದೆ ಎಂದು ಖಂಡಿತವಾಗಿಯೂ ವಾದಿಸಬಹುದು.

ಒಂದು ಅಂಶವನ್ನು ಸ್ಪಷ್ಟಪಡಿಸಬೇಕು. ಜೀವನವಿರುವುದೇ ಮರಣದ ಮೇಲೆ. ಅದು ಮರಣವನ್ನು ಆಧಾರವಾಗಿ ಹೊಂದಿರುತ್ತದೆ. ಒಂದು ಜೀವಿಯು ತಾನು ಬದುಕಿರುವುದಕ್ಕೋಸ್ಕರ ಇನ್ನೊಂದನ್ನು ತಿನ್ನುತ್ತದೆ. ಬಲಿಷ್ಠನಾದವನು ದುರ್ಬಲ ನನ್ನು ತುಳಿಯುತ್ತಾನೆ. ಈ ಭೀತಿಯ ಕಥೆ ಕೊನೆಯೇ ಇಲ್ಲದೆ ನಡೆದಿದೆ. ಅದೇ ಈ ಜಗತ್ತಿನ ಸ್ವರೂಪ. ಇದನ್ನು ನೋಡಿ ಇಂತಹ ಜಗತ್ತನ್ನು ಸೃಷ್ಟಿಸಿದ ಭಗವಂತ ನಿಜವಾಗಿಯೂ ಕ್ರೌರ್ಯವೇ ಮೂರ್ತಿವೆತ್ತವನು ಎಂದು ಕೂಡ ನಿರ್ಣಯಿಸುತ್ತಾರೆ. ಸಾಮಾನ್ಯ ಮನುಷ್ಯನ ದೃಷ್ಟಿಕೋನದಿಂದ ಆ ಬಗೆಯ ಆಲೋಚನೆ ಸಮರ್ಥನೀ ಯವೂ ಆಗಿರುವಂತೆ ತೋರುತ್ತದೆ. ಆದರೆ ಭಾರತೀಯ ಪರಮಾರ್ಥವಾಹಿ ನಿಯು, ಭಾರತೀಯ ಆಧ್ಯಾತ್ಮಿಕ ಸಂಸ್ಕೃತಿಯ ಶುದ್ಧ ಪ್ರವಾಹವು ಅಂಥದೊಂದು ದೃಷ್ಟಿಯು ಸತ್ಯವಲ್ಲ ಎಂದು ಘೋಷಿಸುತ್ತದೆ. ಸಂತೋಷ ದುಃಖಗಳಿಗಾಲಿ, ಸುದೈವ ದುರ್ದೈವಗಳಿಗಾಗಲಿ ಭಗವಂತನು ಖಂಡಿತವಾಗಿಯೂ ಕಾರಣನಲ್ಲ ಎಂದು ಸಾರಿ ಹೇಳುತ್ತದೆ. ಹಾಗಾದರೆ ಕೆಡುಕು ಒಳಿತುಗಳನ್ನು ಸೃಷ್ಟಿಸುವವರು ಯಾರು? ನಾವೇ ಎನ್ನುವುದು ಅದಕ್ಕೆ ಉತ್ತರ. ಮಳೆಯೇನೋ ಉತ್ತ ನೆಲದ ಮೇಲೂ ಉಳದ ನೆಲದ ಮೇಲೂ ಸಮಾನವಾಗಿಯೇ ಬೀಳುತ್ತದೆ. ಉತ್ತಿರುವ ನೆಲವು ಮಾತ್ರ ಅದರಿಂದ ಪ್ರಯೋಜನವನ್ನು ಪಡೆದುಕೊಳ್ಳುತ್ತದೆ. ಅದಕ್ಕಾಗಿ ಮೋಡಗಳನ್ನು ನಿಂದಿಸಬಾರದು. ದೋಷ ಇರುವುದು ತನ್ನ ಜಮೀನನ್ನು ಉಳದೆ ಬಂಜರಾಗಿ ಬಿಟ್ಟಿರುವ ಅಜ್ಞಾನಿ, ಅಲಸಿಯಲ್ಲಿ. ಭಗವಂತನ ಕೃಪೆ ಯಾವಾಗಲೂ ಸಿದ್ಧವಾಗಿದೆ; ಅದಕ್ಕೆ ಹೆಚ್ಚು ಅಥವಾ ಕಡಮೆ ಎನ್ನುವುದಿಲ್ಲ, ಏರು ಇಳಿವುಗಳಿಲ್ಲ. ನಾವು ಅದನ್ನು ಅಲಕ್ಷಿಸಿ ಹೆಚ್ಚು ಕಡಮೆ ಪಕ್ಕದಲ್ಲೇ ಸರಿದು ಹೋಗಲು ಬಿಟ್ಟು ಬಿಡುತ್ತೇವೆ, ಇಲ್ಲವೆ ನಮ್ಮ ಒಳಿತಿಗಾಗಿ ಅದನ್ನು ಉಪಯೋಗಿಸಿಕೊಳ್ಳುತ್ತೇವೆ.

ಯಾವ ಕಾರಣದಿಂದಾಗಿ ಕೆಲವು ಸಂತೋಷದಲ್ಲೂ ಮತ್ತೆ ಕೆಲವರು ದುಃಖದಲ್ಲೂ ಹುಟ್ಟುತ್ತಾರೆ ಎಂಬ ಪ್ರಶ್ನೆ ಏಳಬಹುದು. ಹಾಗೆ ಅಪರೂಪವಾಗಿ ವ್ಯವಹರಿಸಲು ಅವರು ಯಾವ ಒಳಿತನ್ನೂ ಮಾಡಿಲ್ಲ, ಕೆಡುಕನ್ನೂ ಮಾಡಿಲ್ಲವಲ್ಲ? ನಿಜ, ಅವರು ಈ ಜನ್ಮದಲ್ಲಿ ಏನನ್ನೂ ಮಾಡದಿರಬಹುದು, ಸುಮ್ಮನೆ ಹುಟ್ಟಿರಬಹುದು. ಆದರೆ ಹಿಂದಿನ ಜನ್ಮಗಳಲ್ಲಿ ಅವರು ಒಳ್ಳೆಯ ಅಥವಾ ಕೆಟ್ಟ ಕಾರ್ಯಗಳನ್ನು ಮಾಡಿದ್ದಾರೆ. ಹಿಂದಿನ ಜನ್ಮದಲ್ಲಿ ಮಾಡಿರುವುದರ ಪರಿಣಾಮವನ್ನು ಈ ಜನ್ಮದಲ್ಲಿ ಅನುಭವಿಸಲೇ ಬೇಕು.

ಈಗ ಹಿಂದೂ ಧರ್ಮದ ಎಲ್ಲ ಪಂಗಡಗಳೂ ಒಪ್ಪುವ ಎರಡು ನಿರ್ಣಯಗಳಿಗೆ ಬರಹುದು. ಬೌದ್ಧರು ಮತ್ತು ಜೈನರು ಕೂಡ ಈ ಎರಡು ಅಂಶಗಳನ್ನು ಒಪ್ಪುತ್ತಾರೆ. ಜೀವವು ಶಾಶ್ವತವಾದದ್ದು ಎಂಬ ಖಚಿತವಾದ ನಂಬಿಕೆ ನಮ್ಮಲ್ಲಿ ಪ್ರತಿಯೊಬ್ಬರಿಗೂ

ಇದೆ. ಅದು ಶೂನ್ಯದಿಂದ ಹುಟ್ಟಿ ಬಂದಿರಲಾರದು. ಅದು ಅಸಾಧ್ಯ. ಜಡವಾದ ಅಚೇತನವಾದ ಮಣ್ಣಿನಿಂದ ಹುಟ್ಟಿದ್ದರೆ, ಅದು ಜಡವಾಗಿ ನಿಷ್ಕ್ರಿಯವಾಗಿ ಇರುತ್ತಿತ್ತು. ಹಲವು ವಸ್ತುಗಳನ್ನು ಒಂದುಗೂಡಿಸಿ ತಯಾರಿಸಿದರೆ ಅದು ಮತ್ತೆ ಹಲವು ವಸ್ತುಗಳಾಗಿ ಕಳಲಿ ಕ್ಷಯಿಸುತ್ತದೆ. ಕಾಲದಿಂದ ಬಾಧಿತವಾಗಿರುವ ಎಲ್ಲವೂ ಕಾಲಕ್ಕೆ ಅಧೀನವಾಗಿ ಕೊನೆಗೊಳ್ಳುತ್ತದೆ. ಜೀವವು ನೆನ್ನೆಯಷ್ಟೇ ಪ್ರಾರಂಭವಾಗಿದ್ದರೆ, ನಾಳೆ ಗಿಂತ ಆಚೆಗೆ ಅದು ಉಳಿದುಕೊಳ್ಳಲಾರದು. ಅದಕ್ಕೆ ಬೇರುಗಳಿದ್ದರೆ, ಅವು ಒಣಗಿ ಹೋಗುತ್ತವೆ, ಮರವು ಎಂದೆಂದೂ ಉಳಿದಿರಲಾರದು. ಜಗತ್ತು ಯಾವಾಗಿನಿಂದ ಅಸ್ತಿತ್ವದಲ್ಲಿದೆಯೋ ಆಗಿನಿಂದಲೂ ಜೀವವು ಅಸ್ತಿತ್ವದಲ್ಲಿ ಇರಲೇಬೇಕು. ಈ ಸತ್ಯ ವನ್ನು ಅರ್ಥ ಮಾಡಿಕೊಳ್ಳಲು ವಾದ ವಿವಾದಗಳ ಅಗತ್ಯವೇನಿಲ್ಲ. ಭಾರತದ ಪ್ರಾಚೀನ ಗ್ರಂಥಗಳಲ್ಲಿ ಶಾಸ್ತ್ರಗಳಲ್ಲಿ ಹೇಳಿರುವ ದರ್ಶನವನ್ನು ಆಧುನಿಕ ವಿಜ್ಞಾನ ಗಳು ಹೆಚ್ಚು ಹೆಚ್ಚಾಗಿ ಮತ್ತು ಸ್ಪಷ್ಟವಾಗಿ ಖಚಿತಪಡಿಸುತ್ತಿರುವುದನ್ನು ನಾವು ನೋಡುತ್ತಿಲ್ಲವೇನು? ಇದನ್ನು ಒಂದು ದಿನ ಎಲ್ಲರೂ ಒಪ್ಪಿಕೊಳ್ಳಬೇಕಾಗುತ್ತದೆ.

ಭಾರತೀಯ ಸಂಸ್ಕೃತಿಯ ಆಧ್ಯಾತ್ಮಿಕ ಕ್ಷೇತ್ರದ ಆಧಾರ ತತ್ತ್ವಗಳನ್ನು ಪ್ರಮಾ ಣಯುತವಾಗಿ ಹೇಳುವ ಕೃತಿಗಳೆಂದರೆ ಉಪನಿಷತ್ತುಗಳು, ಬ್ರಹ್ಮ ಸೂತ್ರ ಹಾಗೂ ಭಗವದ್ಗೀತೆ. ಇವು ಪ್ರಸ್ಥಾನತ್ರಯ, ಅಥವಾ ಮೂರು ಮೂಲಗಳು. ಇವುಗಳನ್ನು ನಾವು ಪರಿಗಣಿಸಬೇಕು. ಭಾರತದಲ್ಲಿ ಅನೇಕರು ಅದ್ವೈತ ವೇದಾಂತವೊಂದೇ ಸರಿ ಯಾದದ್ದು ಎಂದು ಭಾವಿಸಬಹುದು. ಅದು ಸರಿಯಾದ ನಿಲುವಲ್ಲ. ಉಪನಿಷತ್ತು ಗಳು ಈಶ್ವರನ ವಾಣಿಯೇ ಆಗಿವೆ. ವ್ಯಾಸರು ಪ್ರತಿಪಾದಿಸಿದ ತತ್ತ್ವಗಳು ಮತ್ತು ಸಿದ್ಧಾಂತಗಳ ಪರಮೋನ್ನತ ರೂಪವೇ ಬ್ರಹ್ಮಸೂತ್ರ. ತತ್ತ್ವ ಸಿದ್ಧಾಂತಗಳನ್ನು ನಿರೂ ಪಿಸುವ ಶಾಸ್ತ್ರಕೃತಿಗಳಲ್ಲಿ ಅತ್ಯಂತ ಮುಖ್ಯವಾದದ್ದು ಅದು. ತಾತ್ವಿಕ ನಂಬಿಕೆಗಳೆಲ್ಲ ವನ್ನೂ ಅದು ಸಂಯೋಜಿಸುತ್ತಿದೆ. ಪ್ರಾಚೀನ ಕೃತಿಗಳು ಮತ್ತು ಸಿದ್ಧಾಂತಗಳ ಮೇಲೆ ಆಧಾರಗೊಂಡಿದ್ದರೂ ಅವುಗಳಿಗೂ ಮುಂದಿನದಕ್ಕೂ ಯಾವ ವಿರೋಧವೂ ಭಿನ್ನಮತವೂ ಇಲ್ಲ. ಬ್ರಹ್ಮಸೂತ್ರದ ಕಾರಿಕೆಗಳಲ್ಲಿ ಪ್ರತಿಯೊಂದು ನಿರ್ಣಯವೂ ಪೂರ್ಣವಾಗಿದೆ, ಸಾಮರಸ್ಯವನ್ನು ಸಾಧಿಸುತ್ತದೆ. ಭಗವದ್ಗೀತೆಯ ವೇದಾಂತಕ್ಕೆ ಭಗವಂತನೇ ನೀಡಿದ ವ್ಯಾಖ್ಯಾನದಂತೆ ವರ್ತಿಸುತ್ತದೆ.

ಹಿಂದೂ ಧರ್ಮದಲ್ಲಿ ಪ್ರಮಾಣಯುತವಾದುವು, ಸಂಪ್ರದಾಯವಂತವಾದುವು ಎಂದು ತಮ್ಮನ್ನು ಹೇಳಿಕೊಳ್ಳುವ ಮತಗಳು ತಮ್ಮ ಆಧಾರ ಗ್ರಂಥಗಳನ್ನಾಗಿ ಈ ಮೂರು ಮೂಲಗಳನ್ನು, ಪ್ರಸ್ಥಾನತ್ರಯವನ್ನು ಒಪ್ಪಿಕೊಳ್ಳುತ್ತವೆ. ಅವರು ದ್ವೈತಿಯಾಗಿರಲಿ, ವಿಶಿಷ್ಟಾದ್ವೈತಿಗಳಾಗಿರಲಿ ಅಥವಾ ಅದ್ವೈತಿಗಳಾಗಿರಲಿ, ನೂತನ ಸಿದ್ಧಾಂಥವನ್ನು ಅಥವಾ ಸಿದ್ಧಾಂತಕ್ಕೆ ನೂತನ ವ್ಯಾಖ್ಯಾನವನ್ನು ಪ್ರವರ್ತನೆಗೊಳಿ

ಸಲು ಹೊರಟ ಶಂಕರ, ರಾಮಾನುಜ, ಮಧ್ವಾಚಾರ್ಯ, ವಲ್ಲಭಾಚಾರ್ಯ ಅಥವಾ ಚೈತನ್ಯ ಯಾರೇ ಇರಲಿ ಈ ಪ್ರಸ್ಥಾನತ್ರಯಕ್ಕೆ, ಈ ಮೂರು ಆಧಾರಕೃತಿಗಳಿಗೆ ತಮ್ಮ ದೃಷ್ಟಿಕೋನದಿಂದ ವ್ಯಾಖ್ಯಾನ ಮಾಡಬೇಕಾಯಿತು. ಆದ್ದರಿಂದ ಉಪನಿಷತ್ತುಗಳಿಗೆ ಮಾತ್ರವೇ ವೇದಾಂತವನ್ನು ಬಳಸಬಹುದು ಎಂದು ಹೇಳುವುದಾಗಲಿ, ಅವು ಬೋಧಿಸುವ ಸಿದ್ಧಾಂತವನ್ನು ಹಾಗೆ ಸೀಮಿತಗೊಳಿಸುವುದಾಗಲಿ ದೊಡ್ಡ ತಪ್ಪಾಗುತ್ತದೆ.

ಪ್ರಸ್ಥಾನ ತ್ರಯದಿಂದ ಮೂಡಿಬರುವ ನಿರ್ಣಯಗಳೆಲ್ಲವೂ ಅಸಲಿಯಾದವು. ವೇದಾಂತ ಎಂದು ಹೆಸರಿಗೆ ಅರ್ಹವಾದುವು. ವಿಶಿಷ್ಟಾದ್ವೈತ ಹಾಗೂ ದ್ವೈತಗಳಿಗೂ ತಮ್ಮನ್ನು ವೇದಾಂತ ಎಂದು ಕರೆದುಕೊಳ್ಳುವುದಕ್ಕೆ ಅದ್ವೈತದಷ್ಟೇ ಹಕ್ಕಿದೆ, ಅವಕಾಶ ವಿದೆ. ವಿವಿಧತೆಯಲ್ಲಿ ಏಕತೆಯೇ ಭಿನ್ನತೆಯಲ್ಲಿ ಸಮರಸತೆಯೇ ಭಾರತೀಯ ಚಿಂತನವಾಹಿನಿಯ ಸಾರವಾಗಿದೆ.

ಹಸುವಿನ ದೇಹದಲ್ಲಿ ಹಾಲಿದೆ. ಹಾಲಿನಲ್ಲಿ ತುಪ್ಪವಿದೆ. ಆದರೆ ಆ ತುಪ್ಪದಿಂದ ಹಸುವು ಶಕ್ತಿಯನ್ನು ಪಡೆದುಕೊಳ್ಳಲಾರದು. ಹಾಲನ್ನು ಕರೆದುಕೊಂಡು ಕುದಿಸಿ, ತಣಿಸಿ, ಸ್ವಲ್ಪವೇ ಹುಳಿ ಮೊಸರನ್ನು ಅದಕ್ಕೆ ಹಾಕಿ ಹೆಪ್ಪಿಡಬೇಕು. ಅದು ಮೊಸರಾದ ನಂತರ ಕಡೆದು ಬೆಣ್ಣೆಯನ್ನು ಉಂಡೆಯಾಗಿ ತೆಗೆಯಬೇಕು. ಆಮೇಲೆ ಬೆಣ್ಣೆಯನ್ನು ಕರಗಿಸಿ ತುಪ್ಪವನ್ನು ತಯಾರಿಸಬೇಕು. ಹಾಗೆ ಪಡೆದ ತುಪ್ಪವನ್ನು ಹಸುವಿಗೆ ತಿನ್ನಿಸದರೆ ಆಗ ಅದಕ್ಕೆ ಶಕ್ತಿಯು ಹೆಚ್ಚಾಗುತ್ತದೆ. ಹಾಗೆಯೇ ಇದನ್ನು ಪರಿಶೀಲಿಸಿ, ಭಗವಂತ ಸರ್ವವ್ಯಾಪಿಯಾಗಿದ್ದಾನೆ. ಆದರೂ ಅವನು ಮನುಷ್ಯನಿಗೆ, ಅವನು ಸಾಧನೆ ಮಾಡಿದ ಹೊರತು, ಸಿಕ್ಕುವುದಿಲ್ಲ.

ಎಳ್ಳಿನಲ್ಲಿ ಎಣ್ಣೆಯಿದೆ; ಹಾಲಿನಲ್ಲಿ ಬೆಣ್ಣೆಯಿದೆ; ನೆಲದಡಿಯಲ್ಲಿ ನೀರಿದೆ; ಮರದಲ್ಲಿ ಬೆಂಕಿಯು ಸುಪ್ತವಾಗಿದೆ. ಹಾಗೆಯೇ ಸರ್ವವ್ಯಾಪಿಯಾದ ಭಗವಂತನು ಮಾನವ ದೇಹದಲ್ಲೂ ಮಾನವ ಮನಸ್ಸಿನಲ್ಲೂ ಇದ್ದಾನೆ. ಅವನನ್ನು ಬೇರ್ಪಡಿಸಿ ಗುರುತಿಸಲು ಹೊರಟಾಗ ನಾವು ಶ್ರಮಪಡಬೇಕು, ಸಾಧನೆ ಮಾಡಬೇಕು. ಆ ಪರಿಶ್ರಮ, ಆ ಸಾಧನೆಯ ಫಲವಾಗಿ ವ್ಯಕ್ತಿಯು ತಾನೇ ಭಗವಂತ, ತನಗೂ ಅವನಿಗೂ ಯಾವ ಭೇದವೂ ಇಲ್ಲ ಎಂದು ಅರಿತುಕೊಳ್ಳುತ್ತಾನೆ. ಇದೇ ಅದ್ವೈತದ ಪ್ರಕಾರ ಮುಕ್ತಿ, ಜ್ಞಾನ, ಸಾಕ್ಷಾತ್ಕಾರ. ಶಂಕರರು ಈ ಪ್ರಕ್ರಿಯೆಯನ್ನು ಅದ್ವೈತೋಪಾಸನೆ ಎಂದು ಹೆಸರಿಸುತ್ತಾರೆ.

ಇನ್ನು ವಿಶಿಷ್ಟಾದ್ವೈತದಲ್ಲಿನ ಉಪಾಸನೆಯ ಬಗೆಗೆ ನೋಡೋಣ. ಸಾಧಕನು ತಾನು ಆರಾಧಿಸಬೇಕೆಂದು ಹಂಬಲಿಸುವ ಭಗವಂತನನ್ನು ತನಗಿಂತ ಬೇರೆಯಾದವನು, ಪ್ರತ್ಯೇಕನಾಗಿರುವವನು ಎಂದು ಭಾವಿಸಬೇಕೋ ಅವನೊಂದಿಗೆ ಯಾವುದೇ ಒಂದು ರೀತಿಯಲ್ಲಿ ಸಂಬಂಧಗೊಂಡಿರುವ, ಅವನ ಭಾಗವೇ ತಾನು ಎಂದು ಭಾವಿಸಬೇಕೋ? ಈ ಪ್ರಶ್ನೆಗೆ ಈಗ ನಾವು ಉತ್ತರ ಕೊಡಬೇಕಾಗಿದೆ. ಜೀವನು ದೇಹ ಆತ್ಮ. ಭಗವಂತನು ಜೀವನ ಆತ್ಮ. ಹೀಗೆ ನಂಬುಗೆಯನ್ನು ಸ್ಥಿರಗೊಳಿಸಿ ಕೊಂಡು ಭಗವಂತನನ್ನು ಆರಾಧಿಸುವುದನ್ನೇ ರಾಮಾನುಜರು ಹೇಳಿದ್ದು; ಸೃಷ್ಟಿ ಸಮಸ್ತವೂ ಭಗವಂತನ ಭಾಗವೇ, ಅದು ಅವನೊಳಗೇ ಇದೆ. ಅವನೇ ಅಂತರ್ಯ ದಲ್ಲಿದ್ದು ಪ್ರಚೋದಿಸುವವನು, ಅವನು ಎಲ್ಲರಲ್ಲಿಯೂ ಇದ್ದಾನೆ. ಆ ಪರಮ ಪುರುಷನನ್ನು ಅಚಂಚಲವಾದ ಭಕ್ತಿಯಿಂದ, ಪ್ರಪತ್ತಿ, ಶರಣಾಗತಿ, ಸಂಪೂರ್ಣ ಅರ್ಪಣೆಯ ಮೂಲಕ ಮಾತ್ರವೇ ತಿಳಿದುಕೊಳ್ಳುವುದು ಸಾಧ್ಯ. 'ತ್ವಮೇವ ಸರ್ವಂ ಮಮ ದೇವ ದೇವ (ನನ್ನ ದೇವರ ದೇವ, ನೀನೇ ನನ್ನ ಸರ್ವಸ್ವ, ನೀನೊಬ್ಬನೇ ನನ್ನ ಒಡೆಯ)'; ವ್ಯಕ್ತಿಯು ಈ ಮನೋಭಾವವನ್ನು ಬೆಳೆಸಿಕೊಂಡು ತನ್ನದಾಗಿಸಿಕೊಳ್ಳಬೇಕು.

ದ್ವೈತದ ಉಪಾಸನೆಯು ಜೀವಾತ್ಮ ಮತ್ತು ಪರಮಾತ್ಮರ ನಡುವಣ ಸಂಬಂಧವು ಪತಿ ಪತ್ನಿಯರ ಸಂಬಂಧದಂತಿದೆ. ಪರಿಪೂರ್ಣನೂ ಸರ್ವ ಸ್ವತಂತ್ರನೂ ಆದ ವಿಷ್ಣುವು ಪತಿ, ಯಜಮಾನ, ಪ್ರಭು, ಅರಸ, ಸಕಲಪಾಲಕ; ವ್ಯಕ್ತಿಯು ಆಳಲ್ಪಡುವ ವನು, ಅಧೀನನು, ಪತ್ನಿಯು. ಮಧ್ವಾಚಾರ್ಯರು ಈ ಬಗೆಯ ಸಾಧನೆಯನ್ನು ಉಪದೇಶಿಸಿದ್ದಾರೆ. ಭಗವಂತನ ಚರಣಕಮಲಗಳಲ್ಲಿ ಭಕ್ತಿಯುತ ಮೋಹವಿರದೆ ಹೋದರೆ, ಅಂದರೆ ಭಕ್ತಿಯಿಲ್ಲದೆ ಹೋದರೆ, ಸಂಸಾರ ಚಕ್ರದಿಂದ ಮುಕ್ತಿಯು, ಅಷ್ಟೇಕೆ ಬುದ್ಧಿ ಭಾವಗಳ ಪರಿಶುದ್ಧಿ ಕೂಡ ಸಾಧಿಸಲಸಾಧ್ಯವಾಗುತ್ತದೆ. ಶಾಸ್ತ್ರ ಗ್ರಂಥಗಳ ಅಧ್ಯಯನಮಾಡಿಲ್ಲದವರೂ ತಮ್ಮೊಳಗಿರುವ ಭಗವಂತನ ಅಸ್ತಿತ್ವವನ್ನು ಗುರುತಿಸಿ ಆನಂದಯುತ ಭಕ್ತಿಯ ಚಿಲುಮೆ ಚಿಮ್ಮಿಸುವವರೆಗಿಗೂ ಕೂಡ, ಅವನ ಸೌಂದರ್ಯ, ಮಾಧುರ್ಯ, ಶಕ್ತಿಗಳ ಬಗೆಗೆ ಚಿಂತನೆ ಮಾಡಿದಷ್ಟರಿಂದಲೇ ಬುದ್ಧಿಗತೀತವಾದ ಭಕ್ತಿಯ ಆನಂದ ಶಾಂತಿಗಳು ದೊರೆಕೊಳ್ಳುತ್ತವೆ. ಆ ಅನುಭವ ವನ್ನು ಪ್ರಚೋದಿಸುವುದು ಯಾವುದು ಎಂದು ಕಂಡುಹಿಡಿಯಲು ಸಾಧ್ಯವಿಲ್ಲ. ಆ ದಿವ್ಯಾನಂದ ಸ್ಥಿತಿಯಲ್ಲಿ ಅವರಿಗೆ ಲಜ್ಜೆ, ದೇಹಾಭಿಮಾನ ಮೊದಲಾದುವೆಲ್ಲ ಹೊರಟು ಹೋಗಿ ಭಗವಂತನ ಪ್ರೀತಿಗೆ ಪಾತ್ರರಾಗಲು ದಿವ್ಯ ಆನಂದಯುತ ಐಕ್ಯತೆಯನ್ನು ಮಾತ್ರ ಅವರು ಹಂಬಲಿಸುತ್ತಾರೆ, ಜೋರಾಗಿ ಅವರು ಹಾಡುತ್ತಾರೆ. ಈ ನಂಬಿಕೆಗೆ ಹೊಂದಿಕೊಳ್ಳುವ ಸಾಧನೆಯನ್ನು ಮಧ್ವಾಚಾರ್ಯರು ಬೋಧಿಸಿ

ದ್ದಾರೆ. ತನ್ನ ಪ್ರಿಯಕರನಾದ ಭಗವಂತನನ್ನು ಸೇರಲು ಪ್ರೇಮಿಯಾದ ಭಕ್ತನು ತೋರುವ ಹಂಬಲವೇ ದ್ವೈತೋಪಾಸನೆಯ ನಿಜವಾದ ಕುರುಹು. ಆಮೇಲೆ ಬಂದ ಅನೇಕರು ಇದನ್ನು ಸಾವಿರಾರು ರೀತಿಗಳಲ್ಲಿ ವಿಸ್ತರಿಸಿದ್ದಾರೆ.

ಗೀತೆಯಲ್ಲಿ ಹೇಳಿದ ಉಪಾಸನೆಯನ್ನು ಪಂಚಮವೇದವೆನಿಸಿಕೊಳ್ಳುವ ಮಹಾಭಾರತದಲ್ಲಿ ಅಳವಡಿಸಲಾಗಿದೆ. ಪ್ರಾಪಂಚಿಕ ಹಾಗೂ ಆಧ್ಯಾತ್ಮಿಕ ವಿಷಯಗಳಲ್ಲಿ ಮನುಷ್ಯನು ಎದುರಿಸುವ ಹಲತೆರನಾದ ಸಮಸ್ಯೆಗಳಿಗೆ ಪರಿಹಾರದ ಬೆಳಕು ಚೆಲ್ಲುವ ಅಮೂಲ್ಯ ರತ್ನಗಳ ಭಂಡಾರವಾಗಿದೆ ಮಹಾಭಾರತ. ಧರ್ಮಕ್ಷೇತ್ರವೆಂಬ ರಂಗಸ್ಥಳದ ಮೇಲೆ ಶ್ರೀಕೃಷ್ಣನು ಮಹಾಭಾರತವೆಂಬ ಅದ್ಭುತ ಸುಂದರ ನಾಟಕವನ್ನು ಅಭಿನಯಿಸಿದನು. ಆ ನಾಟಕದಲ್ಲಿ ಭಾಗವಹಿಸುವವರನ್ನು, ಪಾತ್ರಗಳನ್ನು, ಪ್ರತಿಯೊಬ್ಬರೂ ಹಾಡಬೇಕಾದ ಹಾಡುಗಳನ್ನು, ಆಡಬೇಕಾದ ಮಾತುಗಳನ್ನು ಮಾಧವನೇ ಅಂದರೆ, ಕೃಷ್ಣನೇ ನಾಟಕದ ನಿರ್ದೇಶಕನಾಗಿ ರೂಪಿಸಿದ್ದನು. ಪಾತ್ರಗಳ ರಂಗಪ್ರವೇಶ, ನಿರ್ಗಮನಗಳನ್ನು ಆಗಲೇ ನಿರ್ಧರಿಸಿದ್ದನು. ಅವನು ತಾನೇ ನಟನೂ ಸಾಕ್ಷಿಯೂ ನಿರ್ಮಾಪಕನೂ ಎಲ್ಲವೂ ಆಗಿದ್ದನು. ಒಂದು ಕಡೆ ಧರ್ಮದಲ್ಲಿ ಮುಳುಗಿಹೋಗಿರುವ ಅಘಾದವಾದ ಪ್ರಾಪಂಚಿಕ ಶಕ್ತಿ, ಇನ್ನೊಂದು ಕಡೆ ಧರ್ಮಭರಿತವಾದ ಸೀಮಿತವಾದ ಆತ್ಮಶಕ್ತಿ. ಇದೇ ಮಹಾಭಾರತದ ಮೋಹಕ ಸೌಂದರ್ಯ. ಇದೇ ಭಗವದ್ಗೀತೆ. ಇಡೀ ಮಹಾಭಾರತದ ಸಾರವೇ ಅದರಲ್ಲಿದೆ. 'ಕರಿಷ್ಯೇ ವಚನಂ ತವ (ನೀನು ಹೇಗೆ ಆದೇಶಿಸುವೆಯೋ ಹಾಗೆ ಮಾಡುತ್ತೇನೆ)'. ವ್ಯಕ್ತಿಯು ತನ್ನ ಕರ್ತವ್ಯವನ್ನು ಸ್ವಧರ್ಮವನ್ನು, ಆಚರಿಸುವಷ್ಟರಿಂದ ಸುಭದ್ರತೆಯನ್ನೂ ಸಂತೋಷವನ್ನೂ ಪಡೆಯಬಹುದು. 'ಸ್ವಧರ್ಮೇ ನಿಧನಂ ಶ್ರೇಯಃ'. ಇವು ಐಹಿಕವಾದ ಧರ್ಮದ ಸ್ಪರ್ಶಶಿಲೆಗಳು.

ಸಕಲ ಸಂಪದಭಿವೃದ್ಧಿಯನ್ನೂ ಪ್ರಗತಿಯನ್ನೂ ಒದಗಿಸುವ ಭಕ್ತಿಮಾರ್ಗವನ್ನು ಅಲಕ್ಷಿಸಿ, ತಮ್ಮ ಕಣ್ಣುಗಳನ್ನು ಮುಚ್ಚಿಕೊಂಡು "ಅಹಂ ಬ್ರಹ್ಮಾಸ್ಮಿ (ನಾನು ಬ್ರಹ್ಮವೇ ಆಗಿದ್ದೇನೆ)," ಎಂಬ ಮಾತಿನ ಮೇಲೆ ಧ್ಯಾನ ಮಾಡುತ್ತಾ ಅಹಂಕಾರದಿಂದ ಬಾಧೆಪಡುತ್ತಿರುವ ಜನರು ಪ್ರತಿಫಲವಾಗಿ ಕೇವಲ ಸಂಕಟವನ್ನು ಪಡೆಯುತ್ತಾರೆ. ಹೊಟ್ಟನ್ನು ಕುಟ್ಟುತ್ತಿದ್ದರೆ ಅಕ್ಕಿ ಎಲ್ಲಿಂದ ಬರಬೇಕು? ಕೃಷ್ಣನ ಮಾತುಗಳಲ್ಲಿ ನಂಬಿಕೆ ವಿಶ್ವಾಸ ಇಲ್ಲದೆ ತನ್ನ ಬುದ್ಧಿಗೆ ತೋರಿದಂತೆ ವರ್ತಿಸುತ್ತಿದ್ದರೆ ಅದು ಅಂತಿಮ ಸತ್ಯದತ್ತ ಬ್ರಹ್ಮತತ್ತ್ವದತ್ತ ಕೊಂಡೊಯ್ಯುವ ಪಥವಾಗಿರುವುದಿಲ್ಲ. ಭಗವದ್ಗೀತೆಯು ಸಂದೇಹಕ್ಕೆ ಎಡೆಯೇ ಇಲ್ಲದಂತೆ, ನಿದರ್ಶನಾತ್ಮಕ ವರ್ಣನೆಗಳಿಂದಲೂ ಸಂದರ್ಭ ನಿರೂಪಣೆಗಳಿಂದಲೂ ಅದನ್ನು ಕೃಷ್ಣನೇ ಪರಬ್ರಹ್ಮ ಎಂಬುದನ್ನು ಹೇಳಿಕೊಟ್ಟಿದೆ. ಇದೇ ಸಮಸ್ತ ವೇದಾಂತಗಳ ಸಾರ. ಸಮಸ್ತ ಶಾಸ್ತ್ರಗಳನ್ನು ಕಡೆದು ಅಮೃತವನ್ನು

ತೆಗೆದು ತುಂಬಿರಿಸಿರುವ ಕೊಡ. ಸಮಸ್ತ ಭಾರತೀಯ ಚಿಂತನೆಯ ಪವಿತ್ರ ವಾಹಿನಿಯನ್ನು ಒಂದು ಪಥ್ಯದಲ್ಲಿ ಹಿಡಿದಿಟ್ಟಿರುವ ಅದ್ಭುತ ಕೃತಿ. ಇದನ್ನು ನಿರಾಕರಿಸುವವರು ಯಾರಾದರೂ ಇದ್ದಾರೇನು?

ಅಧ್ಯಾಯ ೧೩

# ಗುರುವಾಗಿ ಅವತಾರ ಪುರುಷ

ಈ ವಿಶ್ವ ಅಥವಾ ಸೃಷ್ಟಿ, ಕಾಲ, ಕರ್ಮ ಅಥವಾ ಚಟುವಟಿಕೆ ಎಲ್ಲವೂ ಭಗವದಿಚ್ಛೆಯ ಅಭಿವ್ಯಕ್ತಿಗಳು ಮತ್ತು ಅವನಿಗೆ ಸಂಬಂಧಪಟ್ಟವು. ಕೆಲವರು ಅವುಗಳನ್ನು ಸುಳ್ಳು, ಮಿಥ್ಯೆ ಎಂದು ಪರಿಗಣಿಸುತ್ತಾರೆ. ಆದರೆ ಸತ್ಯ ಸ್ವರೂಪನೇ ಆದ ಭಗವಂತನು ನಿಜವಲ್ಲದ ಏನೋ ಒಂದಾಗಿರಲು ಹೇಗೆ ಸಾಧ್ಯ? ಆದ್ದರಿಂದ ಒಂದು ರೀತಿಯಲ್ಲಿ ಇವೆರಡೂ ಸತ್ಯವೆಂದು ಹೇಳಬಹುದು. ವಿಕಾಸವು ವಿಲಯವಾಗಿ ಪರಿವರ್ತಿತವಾದಾಗ, ಚಿತ್ ಅಚಿತ್‌ಗಳೆರಡರ ವಿಲೀನದ ಹಂತವನ್ನು ತಲುಪಿದಾಗ ಉಳಿದುಕೊಳ್ಳುವವನು ಈಶ್ವರನೊಬ್ಬನೇ.

ಕಾಲವೆನ್ನುವುದು ಭಗವಂತನ ಶಕ್ತಿಯ ಅಭಿವ್ಯಕ್ತಿ. ಆದ್ದರಿಂದ ಅಳತೆ ಮಾಡಬಹುದಾದ ಅಂತ್ಯವಾಗಲಿ ಆದಿಯಾಗಲಿ ಅದಕ್ಕಿಲ್ಲ. ಅದೇ ರೀತಿ ಗುರುತಿಸಬೇಕಾದ ಇನ್ನೊಂದು ಮುಖ್ಯವಾದ ಸತ್ಯವು ಕರ್ಮ. ಈಶ್ವರನೆಂದರೆ ಇತಿಮಿತಿಗಳ ಕಡೆಗೆ ಲಕ್ಷ್ಯವಿಲ್ಲದ ಅಲೆಮಾರಿ ಶಕ್ತಿಯಲ್ಲ. ಜನರು ತಮ್ಮ ಹಿಂದಿನ ಜನ್ಮಗಳಲ್ಲಿ ಎಂತೆಂತಹ ಕಾರ್ಯಗಳಲ್ಲಿ ನಿರತರಾಗಿದ್ದರೋ ಅವುಗಳಿಗೆ ಕಟ್ಟುನಿಟ್ಟಾಗಿ ಹೊಂದುವಂತಹ ಪರಿಸ್ಥಿತಿಗಳನ್ನು ಸನ್ನಿವೇಶಗಳನ್ನು ಅವನು ಸೃಷ್ಟಿಸುತ್ತಾನೆ. ಸೃಷ್ಟಿ, ಕಾಲ ಮತ್ತು ಕರ್ಮ ಈ ಮೂರೂ ಈಶ್ವರನಲ್ಲಿ ಸತ್ಯವಾಗಿವೆ. ಈಶ್ವರನೊಂದಿಗೆ ಸತ್ಯವಾಗಿಯೂ ಇವೆ. ಅವನು ಬಳಸುವ ಉಪಕರಣಗಳವು, ಆದ್ದರಿಂದ ಅವು ಮೂರೂ ಅವನ ಸ್ವಾಧೀನದಲ್ಲಿವೆ.

ಸಾಮಾನ್ಯವಾಗಿ ಇಂದ್ರಿಯಗಳ ಗ್ರಹಿಕೆಗೆ ನಿಲುಕದಿದ್ದರೂ ಈಶ್ವರ ಅಥವಾ ಭಗವಂತನು, ತನ್ನಲ್ಲಿ ಐಕ್ಯನಾಗಬೇಕೆಂದು ಉತ್ಕಟವಾಗಿ ಹಂಬಲಿಸುತ್ತಿರುವ ಭಕ್ತನ ಗ್ರಹಿಕೆಗೆ ಗೋಚರವಾಗುತ್ತಾನೆ. ಏಕೆ? ಅಂತಹ ಭಕ್ತನು ಬಾಹ್ಯವಸ್ತುಗಳನ್ನು ನೋಡುವಷ್ಟೇ ಸ್ಪಷ್ಟವಾಗಿ ಭಗವಂತನನ್ನು ನೋಡುತ್ತಾನೆ. ಭಗವಂತ ಅಥವಾ ಈಶ್ವರನು ನಿರಾಕಾರನೆಂದು ಹೇಳಲಾಗುತ್ತದೆ. ಅಂದರೆ ಅವನು ಯಾವ ರೂಪ ಅಥವಾ ಆಕಾರವನ್ನು ಬೇಕಾದರೂ ತಾಳಬಲ್ಲನು. ಅವನಿಗೆ ಅನಂತರೂಪಗಳಿವೆ. ಹಾಗಾದರೆ ಭಕ್ತರಿಗೆ ಅವನು ಯಾವ ರೂಪದಲ್ಲಿ ಕಾಣಿಸಿಕೊಳ್ಳುತ್ತಾನೆ? ಭಕ್ತನು ಯಾವ ರೂಪದಲ್ಲಿ ನೋಡಬೇಕೆಂದು ಹಂಬಲಿಸುತ್ತಾನೆಯೋ ಯಾವ ರೂಪವು ಅವನಿಗೆ ಅತ್ಯಧಿಕ

ವಾದ ತೃಪ್ತಿಯನ್ನು ನೀಡುತ್ತದೆಯೋ ಆ ರೂಪದಲ್ಲಿ ಗೋಚರವಾಗುತ್ತಾನೆ. ಈ ರೂಪಗಳು ಅವನ ಅವತಾರಗಳು. ಹಾಗೆ ಅವತರಿಸಿದಾಗ ಈಶ್ವರನು ತನ್ನನ್ನು ಮಿತಿಗೊಳಪಡಿಸಿಕೊಳ್ಳುವುದಿಲ್ಲ. ಅಂತಹ ಪ್ರತಿಯೊಂದು ಅವತಾರದಲ್ಲಿಯೂ ಅವನು ಪೂರ್ಣವಾಗಿ ವ್ಯಕ್ತವಾಗುತ್ತಾನೆ. ಪ್ರತಿಯೊಂದು ಅವತಾರದಲ್ಲಿಯೂ ತನ್ನ ಪೂರ್ಣ ವೈಭವದಿಂದ ಪ್ರಕಟವಾಗುತ್ತಾನೆ.

ಕೆಲವು ಅಭಿವ್ಯಕ್ತಿಗಳು ಖಂಡವಾಗಿರುತ್ತವೆ ಅಥವಾ ಭಾಗಶಃ ಇರುತ್ತವೆ, ಇನ್ನು ಕೆಲವು ಪೂರ್ಣವಾಗಿರುತ್ತವೆ ಎಂದು ಹೇಳಲಾಗಿದೆ. ಕೆಲವು ತಾತ್ಕಾಲಿಕ ಮತ್ತೆ ಕೆಲವು ಶಾಶ್ವತ ಎಂದೂ ಹೇಳಿದ್ದಾರೆ. ಆದರೆ ಇವೆಲ್ಲವನ್ನೂ ಔಪಚಾರಿಕವಾಗಿ ಅವತಾರಗಳೆಂದು ಕರೆಯಲಾಗಿದೆ ಅಷ್ಟೆ. ಕೆಲವು ಶಾಸ್ತ್ರ ಗ್ರಂಥಗಳಲ್ಲಿ ನಾರದ, ಸನತ್ಕುಮಾರ ಮತ್ತಿತರ ಅಂತಹ ಋಷಿವರೇಣ್ಯರನ್ನೂ ಅವತಾರಗಳೆಂದು ಉಲ್ಲೇಖಿಸಿದೆ. ಆದರೆ ಅವರಲ್ಲಿ ದೈವೀ ಲಕ್ಷಣಗಳೆಲ್ಲವೂ ಇರುವುದಿಲ್ಲ. ಆದ್ದರಿಂದ ಅವರನ್ನು ಪೂಜಿಸಲಾಗುವುದಿಲ್ಲ.

ಜೀವವು ಸ್ವರೂಪತಃ ನಿತ್ಯವೂ ಅಮರ್ತ್ಯವೂ ಆದದ್ದು. ಲೆಕ್ಕ ಹಾಕಬಹುದಾದ ಆದಿಯಾಗಲಿ ಅಂತ್ಯವಾಗಲಿ ಅದಕ್ಕಿಲ್ಲ. ಅದಕ್ಕೆ ಹುಟ್ಟೂ ಇಲ್ಲ, ಸಾವೂ ಇಲ್ಲ; ಅದು ಸ್ವಯಂ ಪ್ರಕಾಶವಾಗಿದೆ. ಅದೇ ಜ್ಞಾತೃ ಮತ್ತು ಜ್ಞಾನ, ಕರ್ತೃ ಮತ್ತು ಭೋಕ್ತೃ. ಬದ್ಧನಾಗಿರಲಿ, ಮುಕ್ತನಾಗಿರಲಿ ಜೀವಿಗೆ ಈ ಎಲ್ಲ ಲಕ್ಷಣಗಳೂ ಇದ್ದೇ ಇರುತ್ತವೆ. ಆದರೆ ಅದೆಲ್ಲ ಹೇಗಿದ್ದರೂ ಭಗವಂತನಿಗಿರುವ ಸ್ವಾತಂತ್ರ್ಯ ಜೀವಿಗಿಲ್ಲ. ಪ್ರತಿಯೊಂದು ಕ್ರಿಯೆಯಲ್ಲೂ ಜೀವಿಯು ದೇಹವನ್ನೂ ಕಿವಿ ಮೊದಲಾದ ಇಂದ್ರಿಯಗಳನ್ನೂ ದೇಹದಲ್ಲಿ ಪ್ರವರ್ತಿಸುತ್ತಿರುವ ಪ್ರಾಣವಾಯುವನ್ನೂ ತೊಡಗಿಸಬೇಕು. ಇವೆಲ್ಲವೂ ವ್ಯಕ್ತಿಯಲ್ಲಿ ದೈವದೊಂದಿಗೆ ಒಂದಾಗಿರುತ್ತವೆ. ಜೀವಿಯು ತನ್ನದೇ ಇಚ್ಛಾಶಕ್ತಿಯೆನ್ನುವುದು ಇರದ ಒಂದು ಯಂತ್ರವಂತೂ ಅಲ್ಲ. ಈ ಜನ್ಮದ ಕರ್ಮಗಳು ಹೇಗೆ ಹಿಂದಿನ ಜನ್ಮದ ಕರ್ಮಗಳ ಸ್ವರೂಪದಿಂದ ನಿರ್ಧರಿತವಾಗಿವೆಯೋ ಹಾಗೆಯೇ ಈ ಜನ್ಮದ ಕಾರ್ಯ ಚಟುವಟಿಕೆಗಳು ಮುಂದಿನ ಜನ್ಮ ಚಟುವಟಿಕೆಗಳನ್ನು ನಿರ್ಧರಿಸುತ್ತವೆ. ಈಗ ಕೈಗೊಳ್ಳುವ ಕಾರ್ಯ ಚಟುವಟಿಕೆಯ ಸ್ವರೂಪಕ್ಕೆ ಅನುಸಾರವಾಗಿ ದೇಶ ಕಾಲ, ಸನ್ನಿವೇಶ ಮತ್ತು ಪರಿಣಾಮಗಳನ್ನು ಈಶ್ವರನು ನಿರ್ಧರಿಸುತ್ತಾನೆ. ಭಗವಂತನಿಗೆ ಮಾನವನ ಸ್ವಭಾವವನ್ನು ರೂಪಿಸುವ ಶಕ್ತಿಯಿದೆ. ಆದರೆ ಅವನು ಆ ಶಕ್ತಿಯನ್ನು ಚಲಾಯಿಸದೆ ಬೇರೊಂದು ರೀತಿಯಾಗಿ ಅದನ್ನು ರೂಪಿಸುತ್ತಾನೆ. ಅದನ್ನು ಅವನು ವ್ಯಕ್ತಿಯ ಮುಕ್ತ ಇಚ್ಛೆಗೆ ಬಿಟ್ಟುಬಿಡುತ್ತಾನೆ. ವ್ಯಕ್ತಿಯು ಅನುಭವದಿಂದ ಪಾಠವನ್ನು ಕಲಿತುಕೊಳ್ಳಬೇಕಾಗುತ್ತದೆ.

ಬಂಡೆಯಿಂದ ಕೆತ್ತಿ ತೆಗೆದ ಕಲ್ಲಿನ ತುಂಡು ಆ ಬಂಡೆಯ ಭಾಗವೇ; ಆದರೆ ವ್ಯಕ್ತಿಯು ಆ ರೀತಿಯಲ್ಲಿ ಭಗವಂತನ ಭಾಗವಲ್ಲ. ಒಂದು ಅರ್ಥದಲ್ಲಿ ಜೀವಿಯೂ ಜಗತ್ತು ಬೇರೆ ಬೇರೆಯಾದವು, ಭಗವಂತನಿಂದ ಪ್ರತ್ಯೇಕವಾದವು. ಇನ್ನೊಂದು ಅರ್ಥದಲ್ಲಿ ಅವು ಪ್ರತ್ಯೇಕಿಸಲಾಗದಂಥವು. ಈ ಏಕತೆ ಪ್ರತ್ಯೇಕತೆಗಳ ನಿಗೂಢತೆಯನ್ನು ವಿಚಾರ ದಿಂದಾಗಲಿ ಬುದ್ಧಿಶಕ್ತಿಯಿಂದಾಗಲಿ ಅರಿಯಲು ಸಾಧ್ಯವಿಲ್ಲ. ಅದನ್ನು ವೇದಗಳು ಮತ್ತು ಅವುಗಳ ಸಂದೇಶದ ಮೂಲಕ ಮಾತ್ರ ಅರ್ಥ ಮಾಡಿಕೊಳ್ಳಬಹುದು. ಭಾರತೀಯ ಪರಮಾರ್ಥ ವಾಹಿನಿಯು ಕಲಿಸಬಹುದಾದ ಮುಖ್ಯವಾದ ಪಾಠ ಇದು.

ಹಿಂದಿನ ಜನ್ಮಗಳಲ್ಲಿ ಸಂಚಿತವಾದ ಪರಿಣಾಮಗಳ ಹೊರೆಯನ್ನು ಹೊತ್ತುಕೊಂಡೇ ಪ್ರತಿಯೊಂದು ಮಗುವೂ ಈ ಜಗತ್ತಿಗೆ ಬರುತ್ತದೆ. ಪ್ರಕೃತಿಯ ಮಡಿಲಿನಿಂದ ಅದು ಮೋಡದಿಂದ ಮಿಂಚು ಮೂಡಿ ಬರುವ ಹಾಗೆ ಬಂದು ಬೀಳುವುದಿಲ್ಲ. ತನ್ನ ಗತ ಜನ್ಮಗಳ ಕಾರ್ಯಗಳ ಉತ್ಪನ್ನಗಳಾದ ಪುಣ್ಯ ಮತ್ತು ಪಾಪ ಪರಿಣಾಮಗಳನ್ನು ಅನುಭವಿಸಲೆಂದೇ ಈ ಜಗತ್ತಿನಲ್ಲಿ ಅದು ಹುಟ್ಟುತ್ತವೆ. ಮಾನವರ ನಡುವೆ ನಮಗೆ ಕಾಣುವ ವ್ಯತ್ಯಾಸಗಳಿಗೆ ಇದೇ ಕಾರಣ. ಇದೇ ಕರ್ಮತತ್ತ್ವ. ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಒಳ್ಳೆಯ ಅಥವಾ ಕೆಟ್ಟ ಅದೃಷ್ಟಕ್ಕೆ ತಾನೇ ಕಾರಣನು ಅವನು ತಾನೇ ಕಟ್ಟಡ ಕಟ್ಟುವವನು, ವಾಸ್ತು ಶಿಲ್ಪಿ. ವಿಧಿ, ಅದೃಷ್ಟ, ಪೂರ್ವ ನಿರ್ಧಾರಣ, ಭಗವದಿಚ್ಛೆ—ಈ ಪ್ರತಿಯೊಂದು ವಿವರಣೆಯನ್ನೂ ಕರ್ಮತತ್ತ್ವವು ತಲೆ ಕೆಳಗು ಮಾಡಿಬಿಡುತ್ತದೆ.

ಭಗವಂತನನ್ನೂ ಮನುಷ್ಯನನ್ನೂ ಕರ್ಮತತ್ತ್ವವು ತಲೆ ಕೆಳಗು ಮಾಡಿ ಬಿಡುತ್ತದೆ. ಭಗವಂತನನ್ನೂ ಮನುಷ್ಯನನ್ನೂ ಈ ಸೂತ್ರದಿಂದ ಅಥವಾ ಕರ್ಮ ತತ್ತ್ವದ ಆಧಾರದಿಂದ ಮಾತ್ರವೇ ಹೊಂದಿಸಬಹುದು. ತನ್ನ ಯಾತನೆಗೆ ಕಾರಣದಲ್ಲಿ ಭಗವಂತನ ಪಾಲೇನೂ ಇಲ್ಲ ಎಂದು ಮನುಷ್ಯನು ಅರ್ಥ ಮಾಡಿಕೊಂಡಾಗ, ತಾನೆ ತನ್ನ ಯಾತನೆಗೆ ಏಕೈಕ ಕಾರಣನೆಂದು ತಿಳಿದುಕೊಂಡು, ಯಾವನೇ ಇನ್ನೊಬ್ಬ ವ್ಯಕ್ತಿಯನ್ನು ಅದಕ್ಕಾಗಿ ನಿಂದಿಸದಾದಾಗ, ತನ್ನ ಕಾರ್ಯಗಳ ಚೋದಕನೂ ಭೋಕ್ತೃವೂ—ಕಾರಣ ಹಾಗೂ ಪರಿಣಾಮ—ತಾನೇ ಆಗಿದ್ದಾನೆಂದು ಮನವರಿಕೆ ಮಾಡಿಕೊಂಡಾಗ, ತನ್ನ ಭವಿಷ್ಯವನ್ನು ರೂಪಿಸಲು ತನಗೆ ಸ್ವಾತಂತ್ರ್ಯವಿದೆ ಎಂದು ತಿಳಿದುಕೊಂಡಾಗ, ಆಗ ಅವನು ದೃಢವಾದ ಹೆಜ್ಜೆಯಿಂದ, ನಿರ್ಮಲವಾದ ಮನಸ್ಸಿನಿಂದ ಭಗವಂತನನ್ನು ಸಮೀಪಿಸುತ್ತಾನೆ.

ಈಗ ಒಬ್ಬ ಮನುಷ್ಯನು ದುರದೃಷ್ಟ ಪೀಡಿತನಾಗಿದ್ದರೆ, ಅದು ಅವನು ಮಾಡಿದ ಕರ್ಮಗಳ ಫಲ. ಹಾಗೆಯೇ ಸಂತೋಷ ಮತ್ತು ಅದೃಷ್ಟಗಳೂ ತನ್ನ ಕೈಯಲ್ಲೇ

ಇವೆ ಎಂಬುದನ್ನೂ ಅವನು ನಂಬಬೇಕು. ಅವನು ನಿರ್ಧರಿಸಿಕೊಂಡದ್ದೇ ಆದರೆ, ಸಂತೋಷವನ್ನೂ ಸುದೈವವನ್ನೂ ತಾನೇ ಸಂಪಾದಿಸಬಹುದು. ವ್ಯಕ್ತಿಯು ಈಗ ಶುದ್ಧ ಮನಸ್ಕನಾಗಿದ್ದರೆ ಅವನೇ ಅದಕ್ಕೆ ಕಾರಣ. ಹಂಬಲಿಸಿದ ಹೊರತು ಸಂಪಾದಿಸಲು ಸಾಧ್ಯವಿಲ್ಲ. ಆದ್ದರಿಂದ ಮನುಷ್ಯನಲ್ಲಿ ಅಂತರ್ಗತವಾಗಿರುವ ಇಚ್ಛಾ ಶಕ್ತಿಯು ಎಲ್ಲಾ ಹಂತಗಳನ್ನೂ ಪರಿಸ್ಥಿತಿಗಳನ್ನೂ ಎಲ್ಲಾ ರೂಪಗಳನ್ನೂ ರೂಪ ಪರಿವರ್ತನೆಗಳನ್ನೂ ಮೀರಿರುತ್ತದೆ ಎಂಬುದು ಸ್ಪಷ್ಟವಾಗಿದೆ. ಅದು ಪ್ರತಿನಿಧಿಸುವ ಸ್ವಾತಂತ್ರ್ಯವೂ ಅವನ ಗತ ಕರ್ಮಗಳ ಫಲಿತವೇ; ಅದು ಬಹು ಸಮರ್ಥವಾದುದು, ಅನಂತ ಫಲದಾಯಕವಾದುದು ಮತ್ತು ಸರ್ವೋನ್ನತವಾದುದು.

ಮುಂದಿನ ಸಮಸ್ಯೆ ಮುಕ್ತಿ ಅಥವಾ ವಿಮೋಚನೆಯದು. ಆತ್ಮವು ಗಂಡೂ ಅಲ್ಲ, ಹೆಣ್ಣೂ ಅಲ್ಲ. ಆ ಬಗೆಯ ನಿರ್ದಿಷ್ಟತೆಗಳನ್ನು ಅದರ ಮೇಲೆ ಹೇರಲು ಸಾಧ್ಯ ವಿಲ್ಲ, ಅವೇನಿದ್ದರೂ ಭೌತಿಕ ಲಕ್ಷಣಗಳು, ದೇಹಕ್ಕೆ ಸಂಬಂಧಪಟ್ಟವು ಮಾತ್ರ. ಆತ್ಮದ ವಿಚಾರವಾಗಿ ಮಾತನಾಡುವಾಗ ಈ ಬಗೆಯ ವಿಚಾರಗಳು ಭ್ರಮೆಯ ಕುರುಹುಗಳು ಅಷ್ಟೆ. ಭೌತಿಕ ದೇಹವನ್ನು ಕುರಿತು ಚರ್ಚಿಸುವಾಗ ಮಾತ್ರ ಅವು ಸಂಗತವಾಗುತ್ತವೆ. ವಯಸ್ಸು ಕುರಿತ ಚರ್ಚೆ ಕೂಡ ಈ ಭ್ರಮೆಯ ಉತ್ಪನ್ನವೇ. ಆತ್ಮವು ನಿತ್ಯವಾದದ್ದು. ಈ ವಯೋರಹಿತ ವಸ್ತುವು ಎಂದೆಂದಿಗೂ ಏಕೈಕವಾದದ್ದು.

ಆತ್ಮವು ಅವತರಿಸಿದ್ದು ಹೇಗೆ? ಶಾಸ್ತ್ರಗಳಲ್ಲಿ ಈ ಸಂಬಂಧವಾದ ಒಂದೇ ಒಂದು ವಿವರಣೆಯಿದೆ. ಆತ್ಮದ ಈ ಕೋಶಗತತ್ವಕ್ಕೆ, ಈ ಬದ್ಧತೆಗೆ ಒಂದೇ ಕಾರಣ, ಅದು ಅವಿದ್ಯೆ, ಸರಿ ತಿಳಿವಳಿಕೆಯ ಅಭಾವ. ಅವಿದ್ಯೆಯಿಂದಾಗಿ ಮಾನವನು ಬಂಧನಕ್ಕೆ ಸಿಲುಕುತ್ತಾನೆ. ಆದ್ದರಿಂದ ವಿವೇಕವೇ ಇಲ್ಲಿ ಚಿಕಿತ್ಸೆ. ಅವನನ್ನು ದಾಟಿಸಬಲ್ಲದ್ದು ವಿವೇಕವೊಂದೇ. ಈ ವಿವೇಕವನ್ನು, ಅರಿವನ್ನು ಸಾಧಸುವುದು ಹೇಗೆ?

ಅದನ್ನು ಸಂಪಾದಿಸಲು ಮೂರು ಮಾರ್ಗಗಳಿವೆ. ಪ್ರೇಮದ ಮೂಲಕ, ಭಕ್ತಿಯ ಮೂಲಕ, ಭಗವಂತನನ್ನು ಪೂರ್ಣ ಶ್ರದ್ಧಾ ಭಕ್ತಿಗಳಿಂದ ಕೂಡಿದ ಪ್ರೇಮಯುತ ಸೇವೆಯ ಮೂಲಕ. ಪ್ರತಿಯೊಬ್ಬ ಜೀವಿಯೂ ನಡೆದಾಡುವ ಭಗವದಾಲಯ. ಏಕೆಂದರೆ ಭಗವಂತನು ಅವುಗಳಲ್ಲೊಂದರಲ್ಲೂ ನೆಲೆಸಿದ್ದಾನೆ. ಅವರಿಗೆ ಸೇವೆ ಮಾಡುವುದರ ಮೂಲಕ ಅರಿವನ್ನು ಸಂಪಾದಿಸಬಹುದು. ಮಿಥ್ಯಾಜ್ಞಾನವಾದ ಅವಿದ್ಯೆಯನ್ನು ಚದುರಿಸಿ ಬಂಧನಗಳು ಕಳಚಿ ಬೀಳುವ ಹಾಗೆ ಮಾಡಬಹದು. ಆಗ ಜೀವಿಯು ವಿಮೋಚನೆ ಪಡೆಯುತ್ತಾನೆ.

ಶಾಸ್ತ್ರಗಳು ದೇವರನ್ನು ಕುರಿತು ಎರಡು ವಿಚಾರಗಳನ್ನು ವರ್ಣಿಸಿವೆ. ಅವನನ್ನು ಗುಣಭರಿತನೆಂದು ತಿಳಿದುಕೊಳ್ಳಬಹುದಾಗಿದೆ ಎಂಬುದು ಒಂದು; ಅವನು ಎಲ್ಲ ಗುಣಗಳಿಂದಲೂ ವಿಮುಕ್ತನಾದವನು, ಆದ್ದರಿಂದ ಅವನು ಹಾಗೆ ಹೀಗೆ ಎಂದು ವರ್ಣಿಸಲು ಸಾಧ್ಯವಿಲ್ಲ ಎನ್ನುವುದು. ಅಂದರೆ, ಭಗವಂತನು ಸಗುಣ ಹಾಗೂ ನಿರ್ಗುಣ ಎಂಬ ಅಂಶಗಳು. ಸಗುಣ ಭಗವಂತನನ್ನು ಎಲ್ಲೆಲ್ಲೂ ಇರುವಂತೆ ಎಲ್ಲದರ ಸೃಷ್ಟಿಕರ್ತ, ಸ್ಥಿತಿಕರ್ತ ಮತ್ತು ಲಯಕರ್ತನಾಗಿ, ವಿಶ್ವದ ತಂದೆಯೂ ತಾಯಿಯೂ ಆಗಿದ್ದಾನೆ ಎಂದು ಗುರುತಿಸಲಾಗುತ್ತದೆ. ಆದ್ದರಿಂದ ಅವನು ಎಲ್ಲ ಜೀವಿಗಳಿಗಿಂತಲೂ ವಸ್ತುಗಳಿಗಿಂತಲೂ ಮೇಲೆ, ಅವುಗಳಿಂದಾಚೆಗೆ ಇದ್ದಾನೆ. ನಿತ್ಯನೂ ವಿಶಿಷ್ಟನೂ ಆಗಿದ್ದಾನೆ, ಮಾನವನಿಗಿಂತ ಬೇರೆಯಾಗಿದ್ದಾನೆ. ಸಗುಣೋಪಾಸನೆಯನ್ನು ಆಚರಿಸುವವರು ಈ ಗುಣ ಭರಿತ ತತ್ತ್ವವನ್ನು ಗುರುತಿಸಿಕೊಂಡಷ್ಟರಿಂದಲೇ ವಿಮೋಚನೆ ಅಥವಾ ಮುಕ್ತಿ ದೊರಕುತ್ತದೆ ಎಂದು ಹೇಳುತ್ತಾರೆ. ಈ ಜ್ಞಾನವನ್ನು ತನ್ನಲ್ಲಿ ಸ್ಥಿರಪಡಿಸಿಕೊಂಡಾಗ, ಅದೇ ತಿಳಿವಿನಿಂದ ಜೀವಿಸತೊಡಗಿದಾಗ ಮೋಕ್ಷ ಸಾಧನೆಯಾಗುತ್ತದೆ.

ಎರಡನೆಯ ದಾರಿ ನಿರ್ಗುಣತತ್ತ್ವದ ಧ್ಯಾನ. ದೈವತತ್ತ್ವಕ್ಕೆ ಗುಣಗಳನ್ನು ಆರೋಪಿಸುವುದು ಅನಪೇಕ್ಷಣೀಯ ಹಾಗೂ ಸೂಕ್ತವಾದುದಲ್ಲ ಎಂದು ಭಾವಿಸಲಾಗುತ್ತದೆ. ಭಗವತ್ ಕಲ್ಪನೆಯಿಂದ ಗುಣಗಳನ್ನು ಕಳಚಿ ಹಾಕಲಾಗುತ್ತದೆ. ಆಗ ಏಕೈಕ ವಿಶ್ವಾತ್ಮಕನೂ ನಿರ್ಗುಣನೂ ಆದ ಪರಮ ಪುರುಷನು ಪ್ರಜ್ಞೆಯಲ್ಲಿ ನಿಲ್ಲುತ್ತಾನೆ. ಆ ತತ್ತ್ವವನ್ನು ಜ್ಞಾತೃ ಎಂದು ಉಲ್ಲೇಖಿಸಬಹುದು. ಏಕೆಂದರೆ ಜ್ಞಾನ ಎನ್ನುವುದು ಮಾನವ ಮನಸ್ಸು ಮತ್ತು ಮಾನವ ಪ್ರಜ್ಞೆಗಳ ಸಂದರ್ಭದಲ್ಲಿ ಮಾತ್ರ ಸಂಗತವಾಗುತ್ತದೆ. ಆ ತತ್ತ್ವವನ್ನು ಪರಿಶೀಲಕ ಎಂದೂ ಹೇಳಬರುವುದಿಲ್ಲ. ಏಕೆಂದರೆ ಪರಿಶೀಲನೆಯು ದುರ್ಬಲನ ಗುರುತು. ಅದನ್ನು ಬುದ್ಧಿಯೊಂದಿಗೆ ಸಂಬಂಧಗೊಳಿಸಲೂ ಸಾಧ್ಯವಿಲ್ಲ, ಏಕೆಂದರೆ ಬುದ್ಧಿಯು ಪಕ್ಷಪಾತ ಮಾಡುತ್ತದೆ, ವಿಭಜಿಸುವ, ಸೀಳಿನೋಡುವ ಪ್ರಯತ್ನವೂ ಮತ್ತೆ ಅಸ್ಥಿರತೆಯ ಗುರುತು. ಅದನ್ನು ಸೃಷ್ಟಿಕರ್ತ ಎಂದು ಕರೆಯಲಾಗುವುದು. ಏಕೆಂದರೆ ಸೃಷ್ಟಿಯು ಬದ್ಧನಾದವನ ಕಾರ್ಯ ಚಟುವಟಿಕೆ, ಸೀಮಿತವಾದದ್ದು. ಭಗವಂತನಿಗೆ ಬದ್ಧತೆಯಾಗಲಿ, ಸೀಮಿತಗಳಾಗಲಿ ಇಲ್ಲ. ಕಾರ್ಯ ಚಟುವಟಿಕೆ ಎಂದರೇ ಒಂದು ಬಯಕೆ, ಒಂದು ಆಸೆ. ಅದು ಒಂದು ಕಾಮನೆಯನ್ನು ಒಳಗೊಳ್ಳುತ್ತದೆ. ಅದು ಬೇರೆ ಯಾವ ಕಾರಣದಿಂದಲೂ ಹುಟ್ಟಿ ಬರುವುದಿಲ್ಲ. ಎಲ್ಲ ಕಾರ್ಯ ಚಟುವಟಿಕೆಯ ಕೆಳಗೂ ಆಧಾರ ಭೂತವಾಗಿ ಒಂದು ಒಳ ನೋವು ಇದ್ದೇ ಇರುತ್ತದೆ, ಅದನ್ನು ಪರಿಹರಿಸಬೇಕಾಗುತ್ತದೆ.

ವೇದಗಳಲ್ಲಿ ದೈವತತ್ತ್ವವನ್ನು ಅದು (ತತ್) ಎಂದು ಉಲ್ಲೇಖಿಸಲಾಗುತ್ತದೆ. ಯಾವಾಗಲೂ ಅದನ್ನು ಉಲ್ಲೇಖಿಸಲಾಗುತ್ತದೆ. ಅವನು ಎಂಬ ಪದವಾದರೆ ಭಿನ್ನತೆಯ ವಿಚಾರಗಳನ್ನು ಕೆರಳಿಸುವ ಸಾಧ್ಯತೆಯಿರುತ್ತದೆ. ಆದ್ದರಿಂದ ಅದು ಎಂಬ ಪದವನ್ನು ಒಳಸಲಾಗುತ್ತದೆ. ಅದು ಎಲ್ಲ ಮಿತಿಗಳಿಂದಲೂ ಗುಣಗಳ ಆರೋಪಣದಿಂದಾಗುವ ಎಲ್ಲ ಬದ್ಧತೆಗಳಿಂದಲೂ ಮುಕ್ತವಾಗಿದೆ ಎಂದು ಆ ಪದವು ಸೂಚಿಸುತ್ತದೆ. ಇದೇ ಅದ್ವೈತ ದರ್ಶನದ ಸಾರ; ಗುಣಗಳಾದರೋ ವಿಭಜಿಸುತ್ತವೆ ಮತ್ತು ಪ್ರತ್ಯೇಕಿಸುತ್ತವೆ.

ಪ್ರತಿಯೊಬ್ಬನೂ ತನ್ನನ್ನು ಪರಿಪೂರ್ಣಗೊಳಿಸಿಕೊಳ್ಳಲೇ ಬೇಕು. ಅದನ್ನು ಅವನು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಪ್ರತಿಯೊಂದು ಜೀವಿಯೂ ಕೊಟ್ಟಕೊನೆಗೆ ಪರಿಪೂರ್ಣ ತೆಯನ್ನು ಸಾಧಿಸಲೇ ಬೇಕು. ಪ್ರತಿಯೊಬ್ಬನೂ ಈಗ ಈ ಪ್ರಯಾಣದ ಯಾವುದೋ ಒಂದು ಹಂತದಲ್ಲಿದ್ದಾನೆ. ಇದು ತನ್ನ ಹಿಂದಿನ ಜನ್ಮಗಳಲ್ಲಿ ಮಾಡಿದ ಕರ್ಮಗಳ ಹಾಗೂ ಬೆಳೆಸಿಕೊಂಡ ಭಾವನೆಗಳ ಫಲವಾಗಿದೆ. ಈಗ ಯಾವ ಬಗೆಯ ಕರ್ಮ ಗಳಲ್ಲಿ ತೊಡಗುತ್ತಾನೆಯೋ ಯಾವ ಭಾವನೆಗಳು ಅವುಗಳನ್ನು ಪ್ರೇರಿಸಿ ರೂಪಿಸು ತ್ತವೆಯೋ ಅವುಗಳ ಆಧಾರದ ಮೇಲೆ ಮುಂದಿನ ಜನ್ಮವು ನಿರ್ಮಾಣವಾಗುತ್ತದೆ. ಅಂದರೆ ಈಗ ನಾವು ಏನನ್ನು ಮಾಡುತ್ತೇವೋ ಭಾವಿಸುತ್ತೇವೋ ಅಥವಾ ಆಲೋಚಿಸುತ್ತೇವೋ ಇವು ಮುಂದೆ ನಮಗಾಗಿ ಕಾದಿರುವ ಅದೃಷ್ಟ ಅಥವಾ ದುರದೃಷ್ಟಗಳಿಗೆ ಮೂಲ ಕಾರಣವಾಗುತ್ತವೆ.

ತನ್ನನ್ನು ರಕ್ಷಿಸಿಕೊಳ್ಳಬೇಕೆಂಬ ಪ್ರಚೋದನೆಯನ್ನಾಗಲಿ, ಬಿಡುಗಡೆಯತ್ತ ತನ್ನನ್ನು ಸೆಳೆದುಕೊಳ್ಳುವ ಸಾಮರ್ಥ್ಯವನ್ನಾಗಲಿ ಪುಸ್ತಕಗಳಿಂದ ಪಡೆಯಲು ಸಾಧ್ಯವಿಲ್ಲ. ಈ ಶಕ್ತಿಯೂ ವ್ಯಕ್ತಿಯ ಒಳಗಿನಿಂದಲೇ ಬರಬೇಕು. ಪಾಂಡಿತ್ಯ ಪೂರ್ಣವಾದ ಪುಸ್ತಕಗಳನ್ನು ಅಧ್ಯಯನ ಮಾಡುತ್ತಾ ಇಡೀ ಜೀವನವನ್ನೇ ಕಳೆದಿರಬಹುದು; ಬುದ್ಧಿಜೀವಿಗಳ ಪೈಕಿ ಅತ್ಯುನ್ನತ ಸ್ಥಾನಮಾನವನ್ನು ಪಡೆಯಬಹುದು. ಆದರೆ ಅದಷ್ಟರಿಂದ ಕೊನೆಗೆ ಆಧ್ಯಾತ್ಮಿಕ ಕ್ಷೇತ್ರದಲ್ಲಿ ಎಳ್ಳಷ್ಟೂ ಪ್ರಗತಿಯನ್ನು ಸಾಧಿಸಲಾ ಗದು. ಆದ್ದರಿಂದ ಪಾಂಡಿತ್ಯದ ಶಿಖರವನ್ನು ತಲುಪಿರುವ ಪ್ರಕಾಂಡ ಪಂಡಿತನು ಆಧ್ಯಾತ್ಮಿಕ ಜ್ಞಾನದಲ್ಲೂ ಪಕ್ವತೆ ಸಾಧಿಸಿದ್ದಾನೆ ಎಂದು ಭಾವಿಸುವುದು ಬಹು ದೊಡ್ಡ ತಪ್ಪಾಗುತ್ತದೆ. ಪುಸ್ತಕಗಳಿಂದ ಹೆಚ್ಚು ಹೆಚ್ಚಾಗಿ ತಿಳಿದುಕೊಳ್ಳುತ್ತಾ ಹೋದಂತೆ ತಾನು ಆಧ್ಯಾತ್ಮ ಪಥದಲ್ಲೂ ಮುಂದೆ ಮುಂದೆ ನಡೆಯುತ್ತಿರುವುದಾಗಿ ಅವನೇ ಕಲ್ಪಿಸಿಕೊಳ್ಳಲೂಬಹುದು. ಆದರೆ ತನ್ನ ಅಧ್ಯಯನದ ಫಲವನ್ನು ಅವನು ಪರೀಕ್ಷಿಸಿ ಕೊಂಡಾಗ, ತನ್ನ ಬುದ್ಧಿಶಕ್ತಿಯು ಹೆಚ್ಚು ಹರಿತವಾಗಿರುವುದನ್ನೂ ತೂಕವಾಗಿರುವು ದನ್ನೂ ಅವನು ಗುರುತಿಸಬಹುದಾದರೂ ಆತ್ಮದ ಅರಿವು ಎಳ್ಳಷ್ಟಾದರೂ ದೊರೆತಿಲ್ಲ

ದುದು ಅವನಿಗೇ ತಿಳಿಯುತ್ತದೆ. ಆಧ್ಯಾತ್ಮಿಕ ವಿಚಾರಗಳನ್ನು ಕುರಿತು ಅದ್ಭುತವಾದ ಉಪನ್ಯಾಸಗಳನ್ನು ನೀಡುವ ಕೌಶಲವು ಅನೇಕರಿಗೆ ಸಿದ್ಧಿಸಿರುತ್ತದೆ. ನಿಜವಾಗಿ ಹೇಳಬೇಕೆಂದರೆ ಆತ್ಮಜೀವನವನ್ನು ಅಥವಾ ಪಾರಮಾರ್ಥಿಕ ಬದುಕನ್ನು ನಡೆಸು ವಲ್ಲಿ ಪ್ರತಿಯೊಬ್ಬನೂ ವಿಫಲನಾಗಿದ್ದಾನೆ. ಈ ವಿಷಾದಕರ ಪರಿಸ್ಥಿತಿಗೆ ಕಾರಣವಾದರೂ ಏನು? ಈಗ ಮೇಲ್ಮೆ ಸಾಧಿಸಲು ನಡೆಯುವ ಸ್ಪರ್ಧೆಯಲ್ಲಿ ಗೆಲ್ಲಲು ಸಜ್ಜುಗೊಳ್ಳುವುದಕ್ಕಾಗಿ; ಹೊಟ್ಟೆಪಾಡಿಗಾಗಿ; ಯಾವುದೋ ಒಂದು ಸಿದ್ಧಾಂತದ ಪ್ರವರ್ತಕನೆಂದು ಸೋಗುಹಾಕುವ ಸಲುವಾಗಿ ಮತ್ತು ಸಾಮಾನ್ಯವಾಗಿ ಪಂಡಿತನೆಂಬ ಪ್ರಸಿದ್ಧಿಯನ್ನು ಗಳಿಸುವುದಕ್ಕಾಗಿ ಆಧ್ಯಾತ್ಮಿಕ ಗ್ರಂಥವನ್ನು ಅಧ್ಯಯನ ಮಾಡಲಾಗುತ್ತಿದೆ. ವಿದ್ವಾಂಸರು ಗೀತೆಯ ಮೇಲೆ ವಿಸ್ತಾರವಾದ ಭಾಷ್ಯಗಳನ್ನು ಬರೆಯಬಹುದು. ಆದರೆ ಆ ಅಧ್ಯಯನವೆಲ್ಲದರ ಫಲವಾಗಿ ತನ್ನ ಚಾರಿತ್ರ್ಯದಲ್ಲಿ, ನಡವಳಿಕೆಯಲ್ಲಿ, ವರ್ತನೆಯಲ್ಲಿ ಗೀತೆಯು ತನ್ನೊಳಗೆ ಇಳಿದಿದೆ ಎಂಬುದನ್ನು ಅವನು ಸಮರ್ಥಿಸುವುದಿಲ್ಲ. ಆ ಪಾಂಡಿತ್ಯವೆಲ್ಲವೂ ಹೊತ್ತು ತಿರುಗುವ ಹೊರೆಯಾಗಿರುತ್ತದೆ. ಭಾರತೀಯ ಸಂಸ್ಕೃತಿಯು ನೀಡ ಬಯಸುವ ಪಾಠ ಇದೇ ಆಗಿದೆ. ಈ ಪಾಠವು ಮೂಡಿಬರವುದು ನಿಮ್ಮೊಳಗೇ ಸುಪ್ತವಾಗಿರುವ ಗುರುವಿನಿಂದ, ಪುರುಷನಿಂದ. ಶಾಸ್ತ್ರಗ್ರಂಥಗಳ ಹಾಗೂ ಇತರ ಕೃತಿಗಳ ಅಧ್ಯಯನವು ಈಗಾಗಲೇ ಮನುಷ್ಯನಲ್ಲಿರುವ ಆಧ್ಯಾತ್ಮಿಕ ಆಸಕ್ತಿಯನ್ನು ಬಲಪಡಿಸುತ್ತದೆ, ಆ ಸಿದ್ಧಾಂತಗಳನ್ನು ಆಚರಣೆಗೆ ತರುವಂತೆ ಅವನನ್ನು ಪ್ರಚೋದಿಸುತ್ತದೆ. ಅವುಗಳಿಂದ ದೊರಕುವ ಜ್ಞಾನವನ್ನು ಕೇವಲ ಮಿದುಳಿಗೆ ಆಹಾರ ಎಂದಷ್ಟೇ ಭಾವಿಸಬೇಡಿ. ವ್ಯಕ್ತಿಯಲ್ಲಿ ಅದು ಆನಂದದ ಶಿಖರವನ್ನು ತಲುಪಬೇಕು. ಮಾತ್ಸರ್ಯ, ಆಡಂಬರ, ಅಹಂಕಾರಗಳಂತಹ ಕೆಟ್ಟ ಗುಣಗಳು ವ್ಯಕ್ತಿಯಿಂದ ತೊಲಗಿಬಿಡಬೇಕು.

ಈ ಆಧ್ಯಾತ್ಮಿಕ ಸಂಪತ್ತನ್ನು ಬೇರೊಂದು ಕಡೆಯಿಂದಲೂ ಪಡೆಯಬಹುದು. ಕೊಡುವವನು ಸರ್ವೋನ್ನತ ಸಿದ್ಧಿಯನ್ನು ಪಡೆದಿರಬೇಕು; ಪಡೆಯುವವನು ಆ ಸಿದ್ಧಿಗೆ ತಕ್ಕ ವಿಶೇಷ ಅರ್ಹತೆಯನ್ನು ಪಡೆದಿರಬೇಕು. ಬೀಜದಲ್ಲಿ ಜೀವವಿರಬಹುದು; ಆದರೆ ನೆಲವನ್ನು ಉತ್ತು, ಆ ಬೀಜವನ್ನು ಕ್ರಿಯೋನ್ಮುಖಗೊಳಿಸಲು ಅರ್ಹವಾಗುವಂತೆ ಮಾಡಬೇಕು. ಈ ಎರಡೂ ನಿಯಮಗಳು ತೃಪ್ತಿಕರವಾಗಿದ್ದರೆ ಆಧ್ಯಾತ್ಮಿಕ ಯಶಸ್ಸಿನ ಫಸಲು ಖಚಿತವಾಗುತ್ತದೆ. ಧರ್ಮದ ಕ್ಷೇತ್ರದಲ್ಲಿ ಬೋಧಿಸುವವನು ಪರಿಣತಿಯನ್ನು ಹೊಂದಿರಬೇಕಾಗುತ್ತದೆ; ಉಪದೇಶ ಕೇಳುವವನೂ ಕೂಡ ಬಹು ಹರಿತವಾದ ಸ್ಪಷ್ಟವಾದ ಗ್ರಹಿಕೆಯನ್ನು ಹೊಂದಿರಬೇಕಾಗುತ್ತದೆ. ಇಬ್ಬರೂ ಆಶ್ಚರ್ಯವಾಗುವಷ್ಟು ಮಟ್ಟಿಗೆ ಉನ್ನತಿ ಸಾಧಿಸಿದ್ದಾಗ, ಅಸಾಧಾರಣ ಉತ್ಸಾಹ ಉಳ್ಳವರಾಗಿದ್ದಾಗ, ಫಲಿತಾಂಶವು ಅತ್ಯುನ್ನತ ಮಟ್ಟದ ಆಧ್ಯಾತ್ಮಿಕ ಜಾಗೃತಿಯಾಗಿರು

ತ್ತದೆ. ಇಲ್ಲವಾದರೆ ಅಂತಹ ಫಲಿತಾಂಶವು ಲಭ್ಯವಾಗದೆ ಹೋಗಬಹುದು. ಅಂಥ ವರು ನಿಜವಾದ ಗುರುಗಳು. ಅವರು ನಿಮ್ಮ ಹೃದಯಗಳನ್ನು ಅಪಹರಿಸುತ್ತಾರೆ, ನಿಮ್ಮ ಧನವನ್ನಲ್ಲ. ಜನರು ಗುರುವಿಗೆ ಸೇವೆ ಮಾಡುವುದಕ್ಕೆ ಗಮನವನ್ನು ಕೇಂದ್ರೀಕರಿಸಬೇಕು, ಅವನ ಬೋಧನೆಯನ್ನು ಸದಾ ಮೆಲುಕು ಹಾಕುತ್ತಿರಬೇಕು, ಶಿಷ್ಯನು ಉಪದೇಶವನ್ನು ದೈನಂದಿನ ಚಟುವಟಿಕೆಯಾಗಿ, ವಾಸ್ತವ ಆಚರಣೆಯಾಗಿ ಅನುಸರಿಸಲು ಕಾತರನಾಗಿರಬೇಕು. ಅವನು ತನ್ನ ಹೃದಯವನ್ನು ಭಕ್ತಿಯಿಂದ ತುಂಬಿಕೊಂಡು ತನ್ನೆಲ್ಲ ಕೌಶಲವನ್ನು, ಗುರೂಪದೇಶವನ್ನು ಕಾರ್ಯಗತಗೊಳಿಸು ವುದಕ್ಕೆ ಸಮರ್ಪಿಸಬೇಕು. ಅವನೀಗ ಶಿಷ್ಯನೆಂಬ ಹೆಸರಿಗೆ ಅರ್ಹನಾಗುವನು.

ಮೋಕ್ಷಕ್ಕಾಗಿ ಮತ್ತು ನಿಜಸತ್ಯದ ಸಾಕ್ಷಾತ್ಕಾರಕ್ಕಾಗಿ ಹಂಬಲಿಕೆಯು ತೀವ್ರಗೊಂಡಾಗ ಪ್ರಕೃತಿಯಲ್ಲಿ ಒಂದು ವಿಚಿತ್ರವೂ ಅದ್ಭುತವೂ ಆದ ಶಕ್ತಿಯು ವರ್ತಿಸತೊಡಗುತ್ತದೆ! ಆಧ್ಯಾತ್ಮಿಕ ಗುರುವು ಜಾಗೃತನಾಗಿ ಶಿಷ್ಯನ ತೃಷೆಯು ಇಂಗುತ್ತದೆ. ಪಡೆಯುವ ವ್ಯಕ್ತಿಯು ಜ್ಞಾನವನ್ನು ನೀಡುವವನನ್ನು ಆಕರ್ಷಿಸುವ ಶಕ್ತಿಯನ್ನು ಬೆಳೆಸಿಕೊಂಡಿರು ತ್ತಾನೆ. ಆ ಶಕ್ತಿಯು ಪ್ರಬಲವಾಗಿರುತ್ತದೆ, ಪೂರ್ಣವಾಗಿರುತ್ತದೆ. ಆದ್ದರಿಂದ ಬೆಳಕನ್ನು ನೀಡಬಲ್ಲ ದಿವ್ಯ ಜ್ಯೋತಿಯು ಅನುಗ್ರಹಿಸಲು ಸಿದ್ಧವಾಗುತ್ತದೆ.

ಓದುಗರೆ, ಸಾಮಾನ್ಯ ಗುರುಗಳ ಸಂಖ್ಯೆ ಇಂದು ಅಪಾರವಾಗಿ ಹೆಚ್ಚಿದೆ. ಆದರೆ ಅವರಲ್ಲಿ ಯಾರೊಬ್ಬರಿಗಿಂತಲೂ ಅವರೆಲ್ಲರಿಗಿಂತಲೂ ಪರಮೋನ್ನತನೂ ಅಧಿಕ ದಯಾ ಪ್ರಪೂರ್ಣನೂ ಆದ ಒಬ್ಬ ಗುರುವು ಇಂದು ಮನುಷ್ಯನಿಗೆ ದೊರೆತಿದ್ದಾನೆ. ಅವನೇ ಭಗವಂತನ ಅವತಾರ. ಅವನು ತನ್ನ ಇಚ್ಛೆಯನ್ನು ವ್ಯಕ್ತಿಪಡಿಸುವಷ್ಟ ರಿಂದಲೇ ಮಾನವನಿಗೆ ಆಧ್ಯಾತ್ಮಿಕ ಜೀವನದ ಅತ್ಯುನ್ನತ ಹಂತದ ಆನಂದವನ್ನು ನೀಡಬಲ್ಲನು. ಅಲ್ಪರಲ್ಲಿ ಅತ್ಯಲ್ಪನಾದ ವ್ಯಕ್ತಿಯೂ ಕೂಡ ರೆಪ್ಪೆ ಹೊಡೆಯುವಷ್ಟರಲ್ಲಿ ಅತ್ಯುನ್ನತ ಜ್ಞಾನವನ್ನು ಗಳಿಸಬಲ್ಲನು. ಅವನು ಗುರುಗಳೆಲ್ಲರ ಗುರು. ಅವನು ಮಾನವ ರೂಪದಲ್ಲಿ ಭಗವಂತನ ಪೂರ್ಣ ಅಭಿವ್ಯಕ್ತಿ. ಮನುಷ್ಯನು ದೇವರನ್ನು ಮಾನವ ರೂಪದಲ್ಲಿ ಮಾತ್ರ ಗ್ರಹಿಸಬಲ್ಲನು. ಭಗವಂತನನ್ನು ಮಾನವ ರೂಪದಲ್ಲಿ ಕೊಂಡಾಡುವುದೇ ಅವನ ಅತ್ಯಂತ ಉದಾತ್ತವಾದ ಕರ್ತವ್ಯ ಎಂಬುದಾಗಿ ಭಾರ ತೀಯ ಆಧ್ಯಾತ್ಮಿಕ ವಾಹಿನಿಯು ಮತ್ತೆ ಮತ್ತೆ ಸಾರುತ್ತಲೇ ಬಂದಿದೆ! ದೇವರು ಮನುಷ್ಯ ರೂಪದಲ್ಲಿ ಅವತರಿಸದೆ ಹೋದರೆ, ಮನುಷ್ಯನು ಅವನನ್ನು ದರ್ಶಿ ಸುವ, ಅವನ ವಾಣಿಯನ್ನು ಆಲಿಸುವ ಆಸೆಯನ್ನೇ ಬಿಟ್ಟು ಬಿಡಬೇಕಾಗುತ್ತದೆ. ಮನುಷ್ಯನು ದೇವರನ್ನು ಬೇರೆ ರೂಪದಲ್ಲಿ ಚಿತ್ರಿಸಿಕೊಂಡಾನು, ಆದರೆ ಅದು ನಿಜವಾದ ರೂಪದ ಸಮೀಪಕ್ಕೂ ಬರಲಾರದು. ಎಷ್ಟೇ ಪ್ರಯತ್ನ ಮಾಡಿದರೂ ಮನುಷ್ಯನು ದೇವರನ್ನು ಮನುಷ್ಯ ರೂಪದಲ್ಲಲ್ಲದೆ ಬೇರೆ ರೂಪದಲ್ಲಿ ಚಿತ್ರಿಸಿಕೊಳ್ಳ

ವುದು ಸಾಧ್ಯವಿಲ್ಲ. ಜನರು ದೇವರನ್ನು ಕುರಿತು ಅದ್ಭುತವಾಗಿ ಉಪನ್ಯಾಸಗಳನ್ನು ನೀಡಬಹುದು, ಈ ವಿಶ್ವದಲ್ಲಿರುವ ಎಲ್ಲ ವಸ್ತುಗಳ ಸ್ವರೂಪವನ್ನೂ ರಚನೆಯನ್ನೂ ಕುರಿತು ಭಾಷಣಗಳನನು ಮಾಡಬಹುದು. ದೇವರು ಮನುಷ್ಯರೂಪದಲ್ಲಿ ಬಂದ ನೆಂದು ನಿರೂಪಿಸುವ ಕಥೆಗಳೆಲ್ಲ ಅರ್ಥರಹಿತ ಪೊಳ್ಳು ಕಲ್ಪನೆಗಳು ಎಂದು ಹೇಳಿ ಅವರು ತಮ್ಮನ್ನೇ ತೃಪ್ತಿಗೊಳಿಸಿಕೊಳ್ಳಬಹುದು. ಸಾಮಾನ್ಯವಾದ ಕಣ್ಣಿಗೆ ಕಾಣಿಸುವುದು ಅಷ್ಟೇಯೆ. ಈ ಕಲ್ಪನೆಗೆ ಜ್ಞಾನವು ಆಧಾರವಲ್ಲ. ವಾಸ್ತವವಾಗಿ ಈ ಸಮರ್ಥನೆಗಳಲ್ಲಿ, ಹೇಳಿಕೆಗಳಲ್ಲಿ ಜ್ಞಾನ ಇರುವುದಿಲ್ಲ. ನಾವು ನೋಡುವುದೆಲ್ಲ ಅಹಂಕಾರದ ಅಲೆಗಳ ಮೇಲೆ ತೇಲುವ ನೊರೆ ಮಾತ್ರ.

“ಕೋಹಂ (ನಾನು ಯಾರು)? ಮಾಡುವವನು ನಾನು ಎಂಬ ಈ ಭಾವನೆಯು ನನ್ನಲ್ಲಿ ಏಕಿದೆ? ನಾನು ಭೋಕ್ತೃ ಎಂಬ ಪ್ರಜ್ಞೆಯ ಸ್ವರೂಪವೇನು? ಹುಟ್ಟುವುದೇಕೆ, ಕೊನೆಗೆ ಸಾಯುವುದೇಕೆ? ನನಗೆ ಈ ಜನ್ಮವು ಹೇಗೆ ಬಂದಿತು? ಈ ಪ್ರವೇಶ ನಿರ್ಗಮನಗಳ ಸರಣಿಯಾದ ಸಂಸಾರದಿಂದ ನನಗೆ ಮುಕ್ತಿಯಿದೆಯೆ?”—ಈ ಪ್ರಶ್ನೆಗಳಿಗೆ ಉತ್ತರವನ್ನು ಕಂಡು ಹಿಡಿಯುವ ಪ್ರಯತ್ನವನ್ನೇ ಪ್ರಾಚೀನಕಾಲದ ಋಷಿಗಳು ತಪಸ್ಸು ಎಂದು ಕರೆದರು. ವ್ಯಕ್ತಿಯ ಬುದ್ಧಿಯು ಸ್ಥಿರಗತಿಯ ಈ ವಿಚಾರದಲ್ಲಿ ಪಕ್ವವಾದಾಗ ಅವನು ತಪಸ್ಸಿನ ದಾರಿಯನ್ನು ಹಿಡಿದಿದ್ದಾನೆ ಎಂದಾ ಗುತ್ತದೆ.

ಇದು ಮೊದಲನೆಯ ಹಂತ. ಮನುಷ್ಯನು ಈ ಹಂತವನ್ನು ಏರಿದಾಗ ಶಾಸ್ತ್ರಗಳು ಅಥವಾ ಪವಿತ್ರ ಗ್ರಂಥಗಳಲ್ಲಿ ಅಡಕವಾಗಿರುವ ಜ್ಞಾನಿಗಳ ಸಾಮೂಹಿಕ ಜ್ಞಾನವು ಅವನನ್ನು ಸ್ವಾಗತಿಸುತ್ತವೆ. ಶ್ರುತಿ ಅಥವಾ ವೇದಗಳು ಅವನನ್ನು, “ಕೇಳು, ಚಿಂತನ ಮಾಡು, ಮತ್ತು ಆಚರಿಸು,” ಎಂದು ನಿರ್ದೇಶಿಸುತ್ತವೆ. ಮೋಕ್ಷದ ಗುರಿಯನ್ನು ಅವನು ಖಂಡಿತವಾಗಿಯೂ ಸಾಧಿಸುತ್ತಾನೆ, ತನ್ನ ಮನಸ್ಸೇ ಚಿತ್ರಿಸಿದ ದೃಶ್ಯ ಜಗತ್ತಿನ ಮರುಳುಗೊಳಿಸುವ ಸೆಳೆತದಿಂದ ತಪ್ಪಿಸಿಕೊಳ್ಳುತ್ತಾನೆ ಎಂದು ಭರವಸೆ ಕೊಡುತ್ತವೆ.

ಮಾನವನಿಗೆ ಈ ಒಂಟಿ ಪ್ರಯಾಣದಲ್ಲಿ ದೈವವು ಮಾತ್ರವೆ ಮಾರ್ಗದರ್ಶಕ, ಜೊತೆಗಾರ ಮತ್ತು ಸಲಹೆಗಾರ. ಗುರುಗಳೆಂದು ಹೇಳಿಕೊಂಡವರು ಇಲ್ಲಿ ಸಹಾಯ ಮಾಡಲಾರರು. ಶ್ರೋತ್ರಿಯರೂ ಬ್ರಹ್ಮನಿಷ್ಠರೂ ಆದ ಗುರುಗಳ ಬಳಿಗೆ ಹೋಗ ಬೇಕೆಂದು ಶ್ರುತಿಗಳು ಮನುಷ್ಯನಿಗೆ ತಿಳಿಸಿಕೊಡುತ್ತವೆ. ಇತರರನ್ನು ಆಶ್ರಯಿಸುವು ದರ ವಿರುದ್ಧವಾಗಿ ಎಚ್ಚರಿಕೆ ಕೊಡುತ್ತವೆ. ಶ್ರೋತ್ರಿಯ ಎಂದರೇನು? ಯಾರು ಶ್ರುತಿಗಳಿಗೆ ಅಥವಾ ವೇದಗಳಿಗೆ, ಯಾವ ಪ್ರಶ್ನೆಯನ್ನೂ ಎತ್ತದೆ, ಸಂಪೂರ್ಣ ನಿಷ್ಠನಾಗಿರುವನೋ ಅವುಗಳಲ್ಲಿ ವಿಧಿಸಿರುವ ನಿಯಮಗಳಿಗೆ ಹಾಗೂ ಮಿತಿಗಳಿಗೆ

ಬದ್ಧನಾಗಿರುವನೋ ಅವನು. ಬ್ರಹ್ಮನಿಷ್ಠನೆಂದರೆ ಬ್ರಹ್ಮಪ್ರಜ್ಞೆಯಲ್ಲಿ ಚೆನ್ನಾಗಿ ನೆಲೆಗೊಂಡಿರುವವನು. ಅವನನ್ನು ಕಾಡಲು ಯಾವ ಸಂದೇಹಗಳೂ ಇಲ್ಲ, ಬೇರೆ ಕಡೆಗೆ ಸೆಳೆಯುವ ಯಾವ ಆಕರ್ಷಣೆಗಳೂ ಇಲ್ಲ. ಏಕೆಂದರೆ ಅವನು ಆತ್ಮದಲ್ಲಿ ಸ್ಥಿರವಾದ ವಿಶ್ವಾಸವನ್ನು ಬೆಳೆಸಿಕೊಂಡಿರುತಾನೆ. ಅವನಿಗೆ ಭೌತಜಗತ್ತನ್ನು ಕುರಿತ ಕಾಳಜಿಯಿಲ್ಲ. ಸಕಲ ಲೋಕಗಳನ್ನೂ ಅವನು ಬ್ರಹ್ಮವಾಗಿ, ಬ್ರಹ್ಮತತ್ತ್ವದ ಅಭಿವ್ಯಕ್ತಿಯಾಗಿ ನೋಡುತ್ತಾನೆ. ಅವನ ಎಲ್ಲಾ ಚಟುವಟಿಕೆಗಳೂ ಚಲನವಲನಗಳೂ ಈ ಅರಿವಿಗೆ ಹೊಂದಿಕೊಂಡಿರುತ್ತವೆ. ಅವನ ದೃಷ್ಟಿಯು ಎಲ್ಲಾ ಕಾಲಗಳನ್ನು ಒಳಗೊಳ್ಳುತ್ತದೆ. ಅವನಿಗೆ ಭೂತ, ವರ್ತಮನ ಮತ್ತು ಭವಿಷ್ಯತ್ತೆಲ್ಲವೂ ತಿಳಿದಿದೆ. ಎಲ್ಲಾ ಬಗೆಯ ಲಕ್ಷಣ ವರ್ಣನೆಗಳಿಗೆ ಅವನು ಅತೀತನು. ಗುಣತ್ರಯಗಳು ಅವನನ್ನು ಬಾಧಿಸುವುದಿಲ್ಲ. ಅವನು ಏಕ, ಅಖಂಡ ಆತ್ಮದಲ್ಲಿ ರತನಾಗಿದ್ದಾನೆ. ವ್ಯತ್ಯಾಸಗಳು, ವೈಶಿಷ್ಟ್ಯಗಳು, ದ್ವಂದ್ವಗಳು ಮತ್ತು ಭಿನ್ನತೆಗಳು ಯಾವುದರಿಂದಲೂ ಅವನು ವಿಚಲಿತನಾಗುವುದಿಲ್ಲ, ನಿರಂತರವಾಗಿ ಆನಂದದಲ್ಲಿರುತ್ತಾನೆ.

ಅಂತಹ ಗುರುವನ್ನು ಆಶ್ರಯಿಸಬೇಕೆಂದು ವೇದಗಳು ವಿಧಿಸುತ್ತವೆ. ಆದರೆ ಈ ಎಲ್ಲ ಗುಣಗಳೂ ಇರುವುದು ಒಬ್ಬನೇ ಒಬ್ಬನಿಗೆ. ಅವನು ಸರ್ವೇಶ್ವರ, ಸಮಸ್ತರ ದೈವ! ಈ ಸತ್ಯವನ್ನು ಅರಿತವರು, ತತ್ತ್ವಗಳಲ್ಲಿ ಪರಿಣತರಾದವರು ಶ್ರೋತ್ರಿಯ ಅಥವಾ ಬ್ರಹ್ಮನಿಷ್ಠವರ್ಗಕ್ಕೆ ಸೇರುವವರಲ್ಲ. ನಿಮಗೆ ಅಗತ್ಯವಾದ ಗುರುಗಳು ಅವರಲ್ಲ.

ಯೋಗವಾಸಿಷ್ಠವು ಹೇಳುತ್ತದೆ: ಶ್ರೀರಾಮಚಂದ್ರನು ವಸಿಷ್ಠ ಮಹರ್ಷಿಗಳನ್ನು ಈ ರೀತಿ ಪ್ರಶ್ನಿಸಿದನು, "ಗುರುವೇ! ಮೃತ್ಯುವನ್ನು ನಿವಾರಿಸಲು ಯಾವುದಾದರೂ ದಾರಿಯಿದೆಯೆ?" ಇದೇ ಸಮಸ್ಯೆಯು ಗೌತಮ ಬುದ್ಧನನ್ನು ವಿರಕ್ತಿಯ ಮಾರ್ಗವನ್ನು ಹಿಡಿಯುವ ಹಾಗೆ ಮಾಡಿತು. ಮೋಹದ ಯಾವ ಕುರುಹುಗಳೂ ಇಲ್ಲದಂತೆ ಕಳೆದುಕೊಂಡನು. ಇದರಿಂದ ಅವನಿಗೆ ಮಹಾತ್ಮನೆಂಬ ಕೀರ್ತಿಯೂ ಬಂದಿತು. ಭಗವಂತನ ಭಕ್ತರಲ್ಲಿ ಅಗ್ರಗಣ್ಯನಾದ ಪ್ರಹ್ಲಾದನು ಬಾಲಕನಾಗಿದ್ದಾಗಲೇ ತನ್ನ ಸಹವಿದ್ಯಾರ್ಥಿಗಳನ್ನು ಹೀಗೆ ಕೇಳುತ್ತಿದ್ದನು, "ಗೆಳೆಯರೆ, ನಮ್ಮ ವಯಸ್ಸಿನವರೇ ಕೆಲವು ಬಾಲಕರು ಸತ್ತುಹೋಗುವುದನ್ನು, ಅವರನ್ನು ಹೂತುಬಿಡುವುದನ್ನೋ ಸುಟ್ಟುಬಿಡುವುದನ್ನೋ ನೀವು ನೋಡಿಲ್ಲವೆ?" ಈ ರೀತಿ ಕೇಳಿ ಅವರ ಗಮನವನ್ನು ಮೃತ್ಯುವೆಂಬ ಸಂಭವದ ಕಡೆಗೆ ಸೆಳೆದು, ಆ ಅನಿವಾರ್ಯ ಸಂಗತಿಯಿಂದ ಪಾಠ ಕಲಿಯಲು ಹೇಳುತ್ತಿದ್ದನು. ಉನ್ನತವಾದ ಜ್ಞಾನವನ್ನು ಅವರಿಗೆ ಪ್ರಹ್ಲಾದನು ಬೋಧಿಸುತ್ತಿದ್ದನು.

ಆದ್ದರಿಂದ ಮೋಕ್ಷವನ್ನು ದೊರಕಿಸುವ ಉನ್ನತ ಜ್ಞಾನವನ್ನು ಸಾಧಿಸಬಯಸುವ ಅಂತರಿಕ ಪ್ರೇರಣೆಯಿರುವವರು, ಮೃತ್ಯುವೆಂಬ ಘಟನೆಯನ್ನು ಕುರಿತು ಚಿಂತನೆ ನಡೆಸಬೇಕು, ವಿಚಾರ ಮಾಡಬೇಕು. ಸಾವು ಹೆದರಿಕೆಯನ್ನು ಉಂಟುಮಾಡ ಬಾರದು. ಸಾವು ಇತರರಿಗೆ ಮಾತ್ರ ನಮಗಲ್ಲ ಎಂದು ಕಲ್ಪಿಸಿಕೊಂಡು ನೀವು ಸಮಸ್ಯೆಯಿಂದ ಪಲಾಯನ ಮಾಡಬಾರದು. ಮೃತ್ಯುವನ್ನು ಕುರಿತು ಚಿಂತನೆ ಮಾಡುವುದು ಈಗ ಸೂಕ್ತವಲ್ಲ ಎಂದೋ ಅದರಿಂದ ಪ್ರಯೋಜನವಿಲ್ಲ ಎಂದೋ ನಿರ್ಣಯಿಸಿಕೊಂಡು, ಅದನ್ನು ಮುಂದಕ್ಕೆ ತಳ್ಳಬಾರದು. ಏಕೆಂದರೆ ಮೃತ್ಯುವನ್ನು ಕುರಿತು ವಿಚಾರ ಮಾಡುವುದೆಂದರೆ ವ್ಯಕ್ತಿಯು ತನ್ನ ನಿಜ ಸತ್ಯವನ್ನು ಕುರಿತು ವಿಚಾರ ಮಾಡಿದ ಹಾಗೆಯೇ. ಈ ಸತ್ಯವನ್ನು ಮನಗಾಣಬೇಕು.

ಮನುಷ್ಯನಿಗೆ ದೊರೆತಿರುವ ವಿಶೇಷ ಉಡುಗೊರೆಯಾದ ವಿವೇಕವನ್ನು ಕಣ್ಣಿಗೆ ಕಾಣುವ ಈ ವಿಶ್ವದ, ಅದರ ಸ್ವರೂಪ ಮತ್ತು ಮೌಲ್ಯಗಳ ಸತ್ಯವನ್ನು ತೆರೆದಿಡಲು ಉಪಯೋಗಿಸಿಕೊಳ್ಳಬೇಕು. ನಾನು ಯಾರು ಎಂಬ ಸಮಸ್ಯೆಯು ಹುಟ್ಟಲು ಮೃತ್ಯುವೇ ಮೂಲಕಾರಣವಾಗುತ್ತದೆ. ಆದ್ದರಿಂದ ವಿಷಯವನ್ನು, ಗಮನಕೊಡಲು ಅರ್ಹವಾದುದಲ್ಲವೆಂದು ಅಲಕ್ಷಿಸುವ ಹಾಗಿಲ್ಲ. ಹೆದರಿಕೆಯಿಂದ ನೀವು ಆ ವಿಷಯವನ್ನು ಬಿಟ್ಟು ಓಡಿಹೋಗುವ ಹಾಗೂ ಇಲ್ಲ. ಹಾಗೆ ಮಾಡಿದರೆ ಅಜ್ಞಾನ, ಅವಿವೇಕಗಳ ಕಡೆಗೆ ಮೊದಲನೆಯ ಹೆಜ್ಜೆಯಿಟ್ಟಿರುತ್ತೀರಿ; ನಿಮ್ಮ ಮನಸ್ಸಿನಲ್ಲಿ ಮೂರ್ಖತನದ ವೃಕ್ಷದ ಸಸಿಯನ್ನು ನೆಟ್ಟಿರುತ್ತೀರಿ. ಮಾಯೆಯ ಸ್ತಂಭಗಳಿಗೆ ಆಸರೆಕೊಡುತ್ತೀರಿ.

ಮಾನವನ ಅಸ್ತಿತ್ವದಲ್ಲಿ ಸುಪ್ತವಾಗಿರುವ ಪ್ರತಿಯೊಂದು ರಹಸ್ಯವೂ ಮೃತ್ಯುವನ್ನು ಕುರಿತ ವಿಚಾರದೊಂದಿಗೆ ಹೆಣೆದುಕೊಂಡಿದೆ. ಭಗವಂತನ ಮಹಿಮೆಯೂ ಭವ್ಯತೆಯೂ ಪೂರ್ತಿಯಾಗಿ ವ್ಯಕ್ತವಾಗಬೇಕಾದರೆ ಮೃತ್ಯುವಿನ ಪರಿಶೋಧನೆ ನಡೆಯಬೇಕು. ನಚಿಕೇತನು ಮೃತ್ಯು ದೇವತೆಯಾದ ಯಮಧರ್ಮನನ್ನು ಕೇಳಿದ ಮೂರು ವರಗಳಲ್ಲಿ ಮುಖ್ಯವಾದುದು ಮೃತ್ಯುವಿಗೆ ಸಂಬಂಧಿಸಿದ್ದು ಎಂದು ಕಠೋಪನಿಷತ್ತು ಹೇಳುತ್ತದೆ. "ಮನುಷ್ಯನು ಸಾವಿನ ಅನಂತರ ಇರುತ್ತಾನೆಯೆ? ಕೆಲವರು ಇರುತ್ತಾನೆ ಎಂದು ಹೇಳುತ್ತಾರೆ, ಇನ್ನು ಕೆಲವರು ಇರುವುದಿಲ್ಲ ಎನ್ನುತ್ತಾರೆ. ಪ್ರತಿಯೊಬ್ಬನೂ ತನ್ನ ಕಲ್ಪನೆ ಹರಿದಂತೆ ವಾದ ಮಾಡುತ್ತಾ ಹೋಗುತ್ತಾನೆ. ಈ ಎರಡು ಅಭಿಪ್ರಾಯಗಳಲ್ಲಿ ಯಾವುದು ಸರಿ? ನನಗೋಸ್ಕರ ಈ ಸಮಸ್ಯೆಯನ್ನು ಬಿಡಿಸಿಕೊಡು," ಎಂದು ನಚಿಕೇತನು ಬೇಡಿದನು. ಯಮನು ಅವನ ಗಮನವನ್ನು ಬೇರೆ ಕಡೆಗೆ ಸೆಳೆಯಲು ಪ್ರಯತ್ನಿಸಿದನು. "ಮಗು! ನಚಿಕೇತ! ಇದು ಪರಿಹರಿಸಲಾಗದ ರಹಸ್ಯ. ಅತ್ಯಂತ ಸೂಕ್ಷ್ಮವಾದುದಕ್ಕಿಂತಲೂ ಸೂಕ್ಷ್ಮವಾದುದೆಂದು ಶಾಸ್ತ್ರಗಳು ಹೇಳುತ್ತವೆ.

ದೇವತೆಗಳಿಗೂ ಅದನ್ನು ಅರ್ಥಮಾಡಿಕೊಳ್ಳುವುದು ಅಸಾಧ್ಯ. ಅಂಥದರಲ್ಲಿ ನೀನು ಈ ವರವನ್ನು ಕೇಳುತ್ತಿದ್ದೀಯೆ. ಈ ಸಮಸ್ಯೆಯನ್ನು ಹಿಡಿದುಕೊಂಡು ನೀನೇಕೆ ಕಷ್ಟಪಡುತ್ತೀಯೆ? ನೀನಿನ್ನೂ ಮುಗ್ಧನಾದ ಪುಟ್ಟ ಹುಡುಗ. ಬಹುದೀರ್ಘಕಾಲ, ಅನೇಕಾನೇಕ ಸಂತಸದ ಘಟನೆಗಳನ್ನು ಸವಿಯುತ್ತಾ ನೀನು ಬದುಕಬೇಕಾಗಿದೆ. ನಿನಗೆ ಬೇಕಾದಷ್ಟು ಸಿರಿಸಂಪತ್ತುಗಳನ್ನು ನಾನು ಅನುಗ್ರಹಿಸುತ್ತೇನೆ. ಅದನ್ನು ಸ್ವೀಕರಿಸಿ ಎಣೆಯೇ ಇಲ್ಲದ ಸಂತೋಷದ ಜೀವನವನ್ನು ನಡೆಸು. ನಿನಗೆ ಎಂತಹ ಭೌತಿಕ ಭಾಗ್ಯಬೇಕು, ಎಷ್ಟು ಬೇಕು ಹೇಳು. ಅದೆಲ್ಲ ನಿನ್ನದಾಗುತ್ತದೆ. ಹೇಳು! ಕೇಳಿ, ಸಂತೋಷದ ಶಿಖರವನ್ನೇ ಪಡೆದುಕೋ!"

ಆದರೆ ನಚಿಕೇತನು ಉತ್ತರ ಕೊಟ್ಟನು, "ಧರ್ಮರಾಜ, ಸಂಪತ್ತು ಎಷ್ಟೇ ಅಪಾರ ವಾಗಿದ್ದರೂ, ಅವು ನೀಡುವ ಸುಖವು ಎಷ್ಟೇ ಮಧುರವಾಗಿದ್ದರೂ ಅವು ನಿನ್ನ ಪ್ರಭಾವವನ್ನು ಸ್ವಲ್ಪವೂ ಗೊಣಗದೆ ಒಪ್ಪಿಕೊಳ್ಳಲೇ ಬೇಕಲ್ಲವೆ? ಸೃಷ್ಟಿಯಲ್ಲಿನ ಯಾವುದೊಂದೂ ನಿನ್ನನ್ನು ತಪ್ಪಿಸಿಕೊಳ್ಳಲಾರದು. ಅದು ಸಾಧ್ಯವೇನು? ಪ್ರತಿ ಯೊಂದೂ ಮೃತ್ಯುವಿನಲ್ಲಿ ಮುಳುಗಿದೆ. ಹಾಗಿದ್ದ ಮೇಲೆ ತಾತ್ಕಾಲಿಕ ಪರಿಹಾರವನ್ನು ಕೊಡುವ ವಸ್ತುಗಳನ್ನು ನಾನೇಕೆ ಆಶಿಸಬೇಕು? ನನ್ನ ಮನಸ್ಸು ಯಾವುದರ ಮೇಲೆ ನೆಟ್ಟಿದೆಯೋ ಆ ವರವನ್ನು ಅನುಗ್ರಹಿಸು." ಮಹಾಭಾರತದಲ್ಲಿ, "ಜಗತ್ತಿನಲ್ಲಿ ಅತ್ಯಂತ ಆಶ್ಚರ್ಯಕರವಾದ ಸಂಗತಿ ಯಾವುದು?" ಎಂಬ ಪ್ರಶ್ನೆಗೆ ಧರ್ಮರಾಜನು ಉತ್ತರ ನೀಡಬೇಕಾಗಿ ಬರುತ್ತದೆ. ಅದಕ್ಕೆ ಧರ್ಮರಾಜನು ಹೀಗೆ ಉತ್ತರ ಕೊಡು ತ್ತಾನೆ: "ಜನರು ಸಾಯುತ್ತಿರುವುದನ್ನು ಪ್ರತಿದಿನವೂ ನಾವು ನೋಡುತ್ತಿದ್ದೇವೆ. ಹಾಗೆಯೇ ನಾವೂ ಸಾಯುತ್ತೇವೆ ಎಂದು ನಾವು ಭಾವಿಸುವುದಿಲ್ಲ. ಇದಕ್ಕಿಂತ ಆಶ್ಚರ್ಯಕರವಾದದ್ದು ಬೇರೆ ಯಾವುದೂ ಇರಲು ಸಾಧ್ಯವಿಲ್ಲ." ಆದ್ದರಿಂದಲೇ ಪ್ರಸಿದ್ಧ ಮಹರ್ಷಿ ಯಾಜ್ಞವಲ್ಕ್ಯನು ಸನ್ಯಾಸ ಸ್ವೀಕರಿಸಲು ನಿರ್ಧರಿಸಿದಾಗ, ತನ್ನ ಪತ್ನಿಯರಾದ ಕಾತ್ಯಾಯನಿ ಮತ್ತು ಮೈತ್ರೇಯಿಯರನ್ನು ಬಳಿಗೆ ಕರೆದನು. ತನ್ನಲ್ಲಿದ್ದ ಚರಾಚರ ಆಸ್ತಿಯೆಲ್ಲವನ್ನೂ ಅವರಿಬ್ಬರಿಗೂ ಸೇರುವಂತೆ ಎರಡು ಭಾಗಗಳಾಗಿ ವಿಂಗಡಿಸಿರುವುದಾಗಿ ಹೇಳಿದನು. ಇದನ್ನು ಕೇಳಿ ಉನ್ನತ ಜ್ಞಾನವೂ ಅಂತ ರ್ದೃಷ್ಟಿಯೂ ಇದ್ದ ಹಿರಿಯ ಪತ್ನಿ ಮೈತ್ರೇಯಿಯು ವಿರೋಧಿಸಿ, ಮುಗುಳ್ನಗುತ್ತಾ ನುಡಿದಳು, "ಸ್ವಾಮಿ, ಈಗ ನೀವು ನನಗೆ ಕೊಡುತ್ತಿರುವ ಈ ಸಂಪತ್ತುಗಳು ನನ್ನನ್ನು ಮೃತ್ಯುವಿನಿಂದ ಪಾರುಮಾಡಿ ಅಮರಳನ್ನಾಗಿ ಮಾಡಬಲ್ಲುವೆ? ಅವು ಹಾಗೆ ಮಾಡುತ್ತವೆಂದು ತಾವು ಭರವಸೆ ಕೊಡುವುದಾದರೆ ಖಂಡಿತವಾಗಿಯೂ ನಾನು ಅವುಗಳನ್ನು ಸ್ವೀಕರಿಸುತ್ತೇನೆ."

ಯಾಜ್ಞವಲ್ಕ್ಯ ನುಡಿದನು: "ಐಶ್ವರ್ಯವು ಜೀವನವನ್ನು ಮಧುರವಾಗಿ ಮಾಡುತ್ತವೆ, ಸಂತೋಷವನ್ನು ತುಂಬುತ್ತವೆ. ಅಂತಹ ಅಮೂಲ್ಯವಾದ ಐಶ್ವರ್ಯವು ನಿನಗೆ ಅಗತ್ಯವಿಲ್ಲವೆಂದು ಹೇಳುತ್ತಿರುವೆಯೇನು?" ಆದರೆ ಮೈತ್ರೇಯಿ ಪಟ್ಟುಹಿಡಿದಳು. "ತಾವು ಹೇಳಿದ್ದು ನಿಜವಾಗಿದ್ದರೆ, ಈ ಐಶ್ವರ್ಯವನ್ನು ಸವಿಯುತ್ತಾ ಅವುಗಳಿಂದ ನೀವೇ ಸಂತೋಷಪಡುತ್ತಾ ಇದ್ದುಬಿಡಬಹುದಾಗಿತ್ತಲ್ಲ? ಅವನ್ನು ತೊರೆದು ಸನ್ಯಾಸಿಯಾಗಲು ಏಕೆ ನಿರ್ಧರಿಸಿದ್ದೀರಿ? ಇಲ್ಲ, ನಮ್ಮಂತಹ ದುರ್ಬಲ ಮನಸ್ಸಿನ ಹೆಂಗಸರಿಗೆ ನೀವು ಮೋಸ ಮಾಡಬಾರದು. ಈ ಮನಸೆಳೆಯುವ ಅಲ್ಪವಸ್ತುಗಳನ್ನು ನಮ್ಮೆದುರಿಗೆ ಹಿಡಿದು ವಂಚಿಸುವುದು ಯುಕ್ತವಲ್ಲ. ನೀವು ಇಟ್ಟುಕೊಳ್ಳಲು ಇಷ್ಟಪಡದಿರುವ ಈ ವಸ್ತುಗಳು ನಮಗೆ ಹೇಗೆ ಶಾಂತಿಯನ್ನೂ ಸಂತೋಷವನ್ನೂ ನೀಡಿಯಾವು? ಇವು ನಶ್ವರವಾದ ವಸ್ತುಗಳು; ನಾಶವಾಗುವಂಥವು. ಇವು ನಮ್ಮನ್ನು ಇನ್ನೂ ಬಲವಾಗಿ ಬಂಧನಕ್ಕೊಳಪಡಿಸುತ್ತದೆ. ಯಾವುದನ್ನು ಕಳೆದುಕೊಳ್ಳಬೇಕು ಎಂದು ನಾವು ಹಂಬಲಿಸುತ್ತಿದ್ದೇವೆಯೋ ಆ ಅಜ್ಞಾನವನ್ನು ಪೋಷಿಸುತ್ತವೆ. ಕಾತರ ಕಳವಳಗಳನ್ನು ದುಃಖವನ್ನು ಮುಖ್ಯವಾಗಿ ಅಧಿಕಗೊಳಿಸುವವು ಈ ವಸ್ತುಗಳೇ. ಇವು ಆತ್ಮದ ಕ್ಷೇತ್ರದಲ್ಲಿ ಇಲ್ಲವಾದ್ದರಿಂದ ಮೂಲತಃ ಕಲುಷಿತವಾಗಿವೆ." ಮೈತ್ರೇಯಿಯು ಈ ಸತ್ಯವನ್ನು ಮುಂದಿಟ್ಟಾಗ ಯಾಜ್ಞವಲ್ಕ್ಯರು ನಿರುತ್ತರರಾದರು. ಹೇಗೆ ಮುಂದುವರಿಯಬೇಕೆಂದು ತಿಳಿಯದೆ ಆಕೆಯ ಎದುರಿಗೆ ತಲೆತಗ್ಗಿಸಿಕೊಂಡು ನಿಂತರು. ಆಗ ಮೈತ್ರೇಯಿಯು ಅವರ ಕಾಲಿಗೆ ಬಿದ್ದು ಹೇಳಿದಳು: "ಸ್ವಾಮಿ, ನೀವು ಎಲ್ಲ ರಹಸ್ಯಗಳ ಒಡೆಯರು. ನಮ್ಮನ್ನು ಕರೆದು ಈ ಸಲಹೆಯನ್ನು ಮುಂದಿಟ್ಟಿರುವುದು ನಮ್ಮ ಬುದ್ಧಿಶಕ್ತಿಯನ್ನು ಪರೀಕ್ಷಿಸುವುದಕ್ಕಾಗಿಯೇ ಇರಬೇಕು. ನನಗೆ ಯಾವುದೇ ವೈಭವ ಬೇಕಾಗಿಲ್ಲ, ಲೌಕಿಕ ಸುಖವೂ ಬೇಡ. ಆಸ್ತಿಪಾಸ್ತಿಗಳಿಗಾಗಲಿ ಐಶ್ವರ್ಯಕ್ಕಾಗಲಿ ನಾನು ಹಂಬಲಿಸುವುದಿಲ್ಲ. ನಿಜವಾಗಿ ಶಾಶ್ವತ ಆನಂದವನ್ನು ಕೊಡುವ ದಾರಿಯನ್ನು ನನಗೆ ಕರುಣಿಸಿರಿ." ವಾಸ್ತವಾಗಿ ಇರುವುದು ಒಂದೇ ಒಂದು, ಪರಬ್ರಹ್ಮ. ಅದ್ವೈತ ಶಾಸ್ತ್ರಗಳು ಸಾರುತ್ತವೆ: "ಬ್ರಹ್ಮ ಸತ್ಯಂ; ಜಗತ್ ಮಿಥ್ಯಾ; ಜೀವೋ ಬ್ರಹ್ಮೈವ ನಾ ಪರಂ (ಬ್ರಹ್ಮವೊಂದೇ ಸತ್ಯ, ಸೃಷ್ಟಿಯು ಮಿಥ್ಯೆ, ಜೀವಿಯು ಬ್ರಹ್ಮವೇ ಆಗಿದೆ)." ಮನುಷ್ಯನಿಗೆ ಈ ಜಗತ್ತಿನಲ್ಲಿ ಸಂಭವಿಸುವುದೆಲ್ಲವೂ ಕನಸಿನ ಅನುಭವದಂತೆ ಅಸತ್ಯ. ಅವು ಮಾಯವಾಗುತ್ತವೆ, ಮತ್ತೆ ಕಾಣಿಸಿಕೊಳ್ಳುತ್ತವೆ. ಜೀವನದಲ್ಲಿ ಅನುಭವಕ್ಕೆ ಬರುವ ಸುಖ ಸಂತೋಷಗಳು, ದ್ವೇಷ ಮತ್ಸರ ಸ್ವಾರ್ಥ ಲೋಭಗಳ ಮರುಭೂಮಿಯ ಮರಳ ಚಾಚಿನ ಮೇಲೆ ತೋರುವ ಮರೀಚಿಕೆಗಳ ಹಾಗೆ. ಈ ಮರೀಚಿಕೆಯು ಸತ್ಯವೆಂದು ನಂಬಿ ಅದರ ಕಡೆಗೆ ಓಡುವವರು ಹೇಗೆ ತಾನೆ ಗುರುಗಳಾದಾರು? ಅವರನ್ನು ಜ್ಞಾನಿಗಳೆಂದು ಕರೆಯಬಹುದೆ? ಮಾಯೆಯ ಅಧಿಕಾರದ ಉನ್ನತ ಆಸನಗಳಲ್ಲಿ ಅವರು ಪ್ರತಿಷ್ಠಿತರಾಗಿದ್ದಾರೆ. ಅವರು ಏನನ್ನು

ಆಚರಿಸುವುದಿಲ್ಲವೋ ಅದನ್ನು ಬೋಧಿಸುತ್ತಾರೆ. ತಾವೇ ಅಲಕ್ಷಿಸುವ ಆದರ್ಶಗಳನ್ನು ಮುಂದೊಡ್ಡುತ್ತಾರೆ. ಅಂತಹ ಜನರು ನಿಜವಾಗಿ ಆಧ್ಯಾತ್ಮಿಕ ಪ್ರಗತಿಯು ಅಗತ್ಯವಾಗಿರುವ ಜನರಿಗೆ ಹೇಗೆ ತಾನೆ ಮಾದರಿಗಳಾಗಲು ಸಾಧ್ಯ? ಅವರು ಅಸಲಿ ಅಲ್ಲ, ಏಕೆಂದರೆ ಅವರಲ್ಲಿ ಗುರು ತತ್ತ್ವದ ಒಂದು ಕಣ ಮಾತ್ರವೂ ಕಾಣಿಸುವುದಿಲ್ಲ.

ಭಗವಂತ ಅಥವಾ ಸರ್ವೇಶ್ವರನೊಬ್ಬನೇ ನಿಜವಾದ ಗುರು. ಸಾಧಕರೆಲ್ಲರಿಗೂ ಇದೇ ಪಥ. ಇದನ್ನು ಬಿಗಿಯಾಗಿ ಅವರು ಹಿಡಿಯಲಿ.

ಅಧ್ಯಾಯ ೧೪

# ಇದು ಮತ್ತು ಅದು

ಪ್ರತಿಯೊಂದು ಜೀವಿಯೂ ತನ್ನನ್ನು "ನಾನು, ನಾನು," ಎಂದು ಹೇಳಿಕೊಳ್ಳುತ್ತದೆ. "ನಾನು ರಾಮಯ್ಯ," "ನಾನು ಕೃಷ್ಣಯ್ಯ," "ನಾನು ಸೀತೆ," "ನಾನು ರಾಧೆ," ಹೀಗೆ. ಪ್ರತಿಯೊಬ್ಬ ವ್ಯಕ್ತಿಯೂ ನಾನು ಎಂಬುದು ತನ್ನನ್ನೇ ಹೇಳುತ್ತದೆ ಎಂದು ಭಾವಿಸಿ ತನ್ನನ್ನು ಕುರಿತು ಮಾತನಾಡಬೇಕಾದಾಗಲೆಲ್ಲಾ ಹಾಗೆಂದು ಸಂಬೋಧಿಸಿಕೊಳ್ಳು ತ್ತಾನೆ. ಪಕ್ಷಿಗಳು, ಪ್ರಾಣಿಗಳು ಮತ್ತು ಇತರ ಜೀವಿಗಳಿಗೂ ಮಾತನಾಡಲು ಬರುತ್ತಿದ್ದರೆ ಅವೂ ಹೀಗೆಯೇ ನಡೆದುಕೊಳ್ಳುತ್ತಿದ್ದವು, ತಮ್ಮನ್ನು ನಾನು ಎಂದೇ ಹೇಳಿಕೊಳ್ಳುತ್ತಿದ್ದುವು ಎಂದು ತೋರುತ್ತದೆ. ಇವಲ್ಲದೆ ಪರ್ವತ ಶಿಖರಗಳು, ಬೆಟ್ಟಗುಡ್ಡಗಳು, ಮರಗಿಡಗಳು ಕೂಡ "ನಾನು ಬೆಟ್ಟ," "ನಾನು ಮರ," "ನಾನು ಹುತ್ತ," ಎಂದು ಸಾರುತ್ತಿದ್ದವು, ಅವಕ್ಕೆ ಮಾತನಾಡುವ ಶಕ್ತಿಯಿದ್ದಿದ್ದರೆ!

ಇದನ್ನು ಕುರಿತು ಸ್ವಲ್ಪ ಹೊತ್ತು ಯೋಚನೆ ಮಾಡಿದರೆ, ಈ ನಾನು ಎಂಬ ಉಕ್ತಿಯಲ್ಲಿ ಯಾವುದೋ ಒಂದು ದೊಡ್ಡ ರಹಸ್ಯವೇ ಅಡಗಿರುವುದು ಸ್ಪಷ್ಟವಾಗುವುದು. ಅನ ಕ್ಷರಸ್ಥನಾದವನೂ ಇದೇ ಅಭಿವ್ಯಕ್ತಿಯನ್ನು ಬಳಸುತ್ತಾನೆ, ದಿವ್ಯದರ್ಶನವನ್ನು ಪಡೆ ದಿರುವ ಋಷಿಯೂ ನಾನು ಎಂದೇ ತನ್ನನ್ನು ಹೇಳಿಕೊಳ್ಳುತ್ತಾನೆ. ಭಗವಂತನೂ ಕೂಡ ತನ್ನನ್ನು ನಾನು ಎಂದು ಘೋಷಿಸಿಕೊಳ್ಳುತ್ತಾನೆಂದು ಹೇಳಲಾಗಿದೆ. ಈ ರಹಸ್ಯವನ್ನು ಭೇದಿಸಬಲ್ಲವರು ಯಾರು? ಹಾಗೆ ಭೇದಿಸಲು ಧೈರ್ಯ ಮಾಡಿದವ ರಲ್ಲಿ ಅದನ್ನು ಬಯಲು ಮಾಡಲು ಎಷ್ಟು ಮಂದಿ ಸಮರ್ಥರಾಗಿದ್ದಾರೆ? ಹಾಗೆ ಸಂಶೋಧಿಸಿದ್ದರಿಂದ ತಮ್ಮ ಬದುಕನ್ನು ಪರಿವರ್ತಿಸಿಕೊಳ್ಳಲು ಎಷ್ಟು ಜನಕ್ಕೆ ಸಾಧ್ಯವಾಗಿದೆ? ಸುಪ್ರಸಿದ್ಧರಾದ ಜ್ಞಾನಿಗಳು, ಪಂಡಿತರು, ಪರಮಹಂಸರು ಎಷ್ಟು ಜನರಿಗೆ ಈ ನಾನು ಎಂಬುದರ ಅರ್ಥ ಮತ್ತು ಮಹತ್ವಗಳನ್ನು ಅರಿಯಲು ಸಾಧ್ಯವಾಗಿದೆ?

ಭಗವದ್ಗೀತೆಯನ್ನು ವ್ಯಾಖ್ಯಾನಿಸುವವರೂ ಪ್ರವಚಿಸುವವರೂ ಹದಿನೆಂಟು ಅಧ್ಯಾ ಯಗಳನ್ನೂ ಏಳುನೂರು ಶ್ಲೋಕಗಳನ್ನೂ ಏಕಧಾರೆಯಲ್ಲಿ ಹೇಳಬಲ್ಲವರೂ ನಾನು ಎಂಬ ಪದದ ಪೂರ್ಣ ಮಹತ್ವವನ್ನೂ ಅರ್ಥವನ್ನೂ ಗ್ರಹಿಸಿದ್ದಾರೆಯೆ ಎಂದು ನೋಡೋಣ. ಗೀತೆಯಲ್ಲಿ ಶ್ರೀಕೃಷ್ಣನು ಈ ಮಾತುಗಳನ್ನು ಹೇಳುತ್ತಾನೆ, "ಅಹಂ

ಮೋಕ್ಷಯಿಷ್ಯಾಮಿ (ನಾನು ನಿನ್ನನ್ನು ಬಿಡುಗಡೆ ಮಾಡುತ್ತೇನೆ)," "ಮಾಮೇಕಂ ಶರಣಂ ವ್ರಜ (ನನ್ನೊಬ್ಬನಿಗೆ ಶರಣಾಗಿ ಬಾ)," "ಕ್ಷೇತ್ರಜ್ಞಂ ಚಾಪಿ ಮಾಂ ವಿದ್ಧಿ (ಮತ್ತು ನನ್ನನ್ನು ಕ್ಷೇತ್ರವನ್ನು ಬಲ್ಲವನು ಎಂದು ತಿಳಿದುಕೋ)." ಈ ಮಾತುಗಳಲ್ಲಿ ನಾನು ಎಂಬುದನ್ನು ಉಲ್ಲೇಖಿಸುತ್ತಾನೆ. ಅಲ್ಲವೆ? ಆದ್ದರಿಂದ ಈ ನಾನು ಎಂಬ ಉಕ್ತಿಯು ಸರ್ವವ್ಯಾಪಿಯಾದದ್ದು. ಅದು ಜೀವಾತ್ಮರೆಲ್ಲರ ಕುರುಹೂ ಸಂಕೇತವೂ ಆದದ್ದು; ಅದಕ್ಕೆ ಅನಂತವಾದ ರೂಪಗಳಿವೆ, ತೋರ್ಕೆಗಳಿವೆ. ಜಪಮಣಿಗಳ ಒಳಗೆ ಹಾದು ಹೋಗುವ ದಾರದಂತೆ ಅದು ಎಲ್ಲ ನಾಮ ರೂಪಗಳ ಒಳಗೆ ಹಾದು ಹೋಗಿ ಅವೆಲ್ಲವನ್ನೂ ಒಟ್ಟಾಗಿ ಹಿಡಿದಿಡುತ್ತದೆ.

ನಾಮ ರೂಪಗಳು ಎಷ್ಟೇ ನಶ್ವರವಾದರೂ ಅಹಂ ಮಾತ್ರ ಅಬಾಧಿತವಾಗಿ ಉಳಿಯುತ್ತದೆ. ತಿಳಿದುಕೊಳ್ಳಬೇಕಾದುದೆಲ್ಲವನ್ನೂ ತಿಳಿಯಲು ಅನುವಾಗುವಂತೆ ವ್ಯಕ್ತಿಯು ಈ ಸರ್ವವ್ಯಾಪಿಯಾದ ಅಹಂಅನ್ನು ತಿಳಿದುಕೊಳ್ಳಬೇಕು. ಅದನ್ನು ಪೂರ್ಣವಾಗಿ ಅರಿತವನೀಗ ಜಗದ್ಗುರು, ವಿಶ್ವಗುರು, ಸದ್ಗುರು.

ದೇಹವು ಒಂದು ಪಾತ್ರೆ, ಉಪಾಧಿ, ಕವಚ. ಆದರೂ ದೈಹಿಕಲಕ್ಷಣಗಳು, ಲೌಕಿಕ ಪರಿಗಣನೆಗಳು ಮೊದಲಾದವುಗಳ ಆಧಾರದಿಂದ ವ್ಯತ್ಯಾಸಗಳನ್ನೂ ಪ್ರತ್ಯೇಕತೆಗಳನ್ನೂ ಆರೋಪಿಸಿ ಕೆಲವರನ್ನು ಸ್ಪೃಶ್ಯರೆಂದು ಮೇಲೆತ್ತಲಾಗುತ್ತದೆ; ಮತ್ತೆ ಕೆಲವರನ್ನು ಅಸ್ಪೃಶ್ಯರೆಂದು ತಿಳಿಯಲಾಗುತ್ತದೆ. ಕೆಲವರನ್ನು ಶ್ರೇಷ್ಠರೆಂದೂ ಇತರರನ್ನು ಕನಿಷ್ಠರೆಂದೂ ಹೇಳಲಾಗುತ್ತದೆ. ಅಧ್ಯಯನವನ್ನು ಧನ ಸಂಚಯಕ್ಕೋ ಸುಖ ಜೀವನಕ್ಕೆ ಅಗತ್ಯವಾದ ಭೋಗವಸ್ತುಗಳನ್ನು ಸಂಗ್ರಹಿಸುವುದಕ್ಕೋ ಉಪಯೋಗಿಸುವುದಾದರೆ ಅಂತಹ ಬುದ್ಧಿಶಕ್ತಿಗೆ ಗೌರವ ತೋರಿಸಲು ಸಾಧ್ಯವಿಲ್ಲ; ಅಂತಹ ವ್ಯಕ್ತಿಗಳನ್ನು ಪಂಡಿತರೆನ್ನಲು ಸಾಧ್ಯವಿಲ್ಲ. ಧರ್ಮಚರ್ಚೆಯ ಶ್ರೇಷ್ಠತೆಯನ್ನೂ ಕೌಶಲವನ್ನೂ ಗೌರವದಿಂದ ಪರಿಗಣಿಸುವುದೂ ಸಾಧ್ಯವಿಲ್ಲ. ನಿಜವಾಗಿ ಹೇಳುವುದಾದರೆ ನಾನು ಎಂಬ ಪದವು ಪರಮೋನ್ನತ ಭಗವಂತನ ಕಡೆಗೆ ಒಯ್ಯುತ್ತದೆ. ಅದರ ಅರ್ಥವನ್ನು ನೀವು ಪೂರ್ತಿಯಾಗಿ ಗ್ರಹಿಸುವಿರಾದರೆ, "ಅದು ನೀನಾಗಿರುವೆ," "ಅದು ನಾನು," "ನಾನು ಮತ್ತು ಅದು ಒಂದೇ"—ಇವೆಲ್ಲ ವೇದೋಕ್ತಿಗಳು. "ತತ್ ತ್ವಮ್ ಅಸಿ (ಅದು ನೀನೇ ಆಗಿದ್ದೀಯೆ)," ಎಂದು ಘೋಷಿಸಲಾಗಿದೆ. ಅದೇ ಸಕಲ ಬೋಧನೆಗಳ ಸಾರ, ಅತ್ಯಂತ ಉತ್ಕೃಷ್ಟವಾದ ಉಪದೇಶ.

ನಾನುವಿನಲ್ಲಿ ಅಡಗಿರುವ ಈ ಪವಿತ್ರ ತತ್ತ್ವವು ಅನೇಕ ವಿದ್ವಾಂಸರ ಹಿಡಿತದಿಂದ ಆಚೆಗಿದೆ. ಮಾರ್ಗದರ್ಶಕರ ಹಾಗೂ ಸಹಾಯಕರ ನೆರವಿಲ್ಲದೆ ಏಕಾಂಗಿಯಾಗಿ ವಿಚಾರ ಮಾಡುತ್ತಾ ಅದನ್ನು ಅವರು ಗ್ರಹಿಸಲಾರರು. ಸತ್ಯವನ್ನು ತಿಳಿದವರು,

ಸತ್ಯದಲ್ಲಿ ಪ್ರಾಮಾಣಿಕವಾಗಿ ಬದುಕುವವರು ಮಾತ್ರ ಮಾರ್ಗದರ್ಶಕರಾಗಬೇಕಾಗುತ್ತದೆ. ವಿದ್ವತ್ತು, ತರ್ಕ, ವ್ಯಾಕರಣಗಳ ಅಂಕೆಗೆ ಅದು ಸಿಕ್ಕುವುದಿಲ್ಲ. ಈ ಎಚ್ಚರಿಕೆಯ ಮಾತುಗಳನ್ನು ಶ್ರುತಿ ಸ್ಮೃತಿಗಳು ಹೇಳಿವೆ ಎಂಬುದನ್ನು ಗಮನಿಸಿರಿ.

ವ್ಯಕ್ತಿಯು ಈ ನಾನು ಮತ್ತು ಅದರ ಅರ್ಥದ ಬಗೆಗೆ ತಿಳಿದುಕೊಳ್ಳಲು ಬಯಸಿದಾಗ ಕೇವಲ ಮೂರು ವಾಕ್ಯಗಳಲ್ಲಿ ಆ ರಹಸ್ಯವನ್ನು ಅವನಿಗೆ ಹೇಳಬಹುದು, "ನಾನು ಹಗಲಿನಲ್ಲಿ ಎಚ್ಚರಗೊಂಡಿರುವಾಗ ಕ್ರಿಯಾಶೀಲನಾಗಿರುತ್ತೇನೆ; ರಾತ್ರಿ ವೇಳೆ ನಿದ್ರಿಸುತ್ತೇನೆ; ನಿದ್ರಿಸುವಾಗ ಕನಸುಗಳನ್ನು ಕಾಣುತ್ತೇನೆ. ಹೀಗೆ ಕೆಲಸ ಮಾಡುತ್ತಾ, ರಾತ್ರಿ ಹಗಲು ಅನುಭವಿಸುತ್ತಾ ನಾನು ಸಾಯುತ್ತೇನೆ." ವ್ಯಕ್ತಿಯು ಈ ಹೇಳಿಕೆಗಳನ್ನು ವಿಚಾರಮಾಡಿ ನೋಡಿದರೆ ಅವು ಈ ಜನ್ಮದಲ್ಲಿ ಗಳಿಸಿದ ವೈಯಕ್ತಿಕ ಜ್ಞಾನದ ಮೇಲೆ ನಿಂತಿವೆ ಎಂದು ನಿರ್ಣಯಿಸಬಹುದು. "ನಾನು ಜನಿಸಿದಾಗ ನಾನು ಪ್ರಾರಂಭವಾಗುತ್ತದೆ," ಎಂದು ಅವನು ನಂಬುತ್ತಾನೆ. ಆದರೆ, ಈ ನಾನು ಜನನಕ್ಕೆ ಪೂರ್ವದಲ್ಲಿಯೂ ಇದ್ದಿತೆ? ಇದ್ದಿತಾದರೆ, ಅಸ್ತಿತ್ವದಲ್ಲಿರುವ ವಸ್ತುವು ಹುಟ್ಟುವುದು ಎಂದು ಹೇಳುವುದು ಹೇಗೆ? ಒಂದು ವೇಳೆ ಈ ಆಕ್ಷೇಪಣೆಯನ್ನು ಅಲಕ್ಷಿಸಿದರೂ ಅದು ಹೇಗೆ ಅಸ್ತಿತ್ವದಲ್ಲಿತ್ತು? ಮತ್ತು ಎಲ್ಲಿ ಇತ್ತು? ನಾಮ ಮತ್ತು ರೂಪಗಳಿಂದ ಅದು ಪ್ರತ್ಯೇಕಿತವಾಗಿದ್ದಿತೇನು? ಅದು ಇಂದ್ರಿಯಗಳ ಅಳವಿಗೆ ಅತೀತವಾಗಿತ್ತೇನು? ಈ ಬಗೆಯ ಸಂದೇಹಗಳು ಸಾಧಕನನ್ನು ಅಲೆಯಲೆಯಾಗಿ ಬಂದು ಮುತ್ತಿಕೊಳ್ಳುತ್ತವೆ. ನಾನು ಎಂಬುದನ್ನು ಒಂದು ವಸ್ತುವಿಗೆ, ಜೀವಿಗೆ, ಅಥವಾ ಒಂದು ನಾಮಕ್ಕೆ, ರೂಪಕ್ಕೆ ಸಂಬಂಧಗೊಳಿಸಲು ಅಥವಾ ಅಂಟಿಸಲು ಸಾಧ್ಯವಿಲ್ಲ ಎಂಬುದನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು. ನಾನುವನ್ನು ಗುರುತಿಸುವಾಗಲೋ "ನಾನು ಯಾರು?" ಎಂಬ ಪ್ರಶ್ನೆಗೆ ನಿಜವಾದ ಉತ್ತರವನ್ನು ಕಂಡು ಹಿಡಿಯುವಾಗಲೋ ಇದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಆಗ ನೀವು ಸಮಸ್ತ ವಿಶ್ವವನ್ನೂ ಅದರ ರಹಸ್ಯಗಳನ್ನೂ ಅದರಲ್ಲಿ ಗುರುತಿಸುತ್ತೀರಿ.

ಈ ವಿಶ್ವದಲ್ಲಿ ಅಧ್ಯಯನ ಮಾಡಲು ಅಸಂಖ್ಯಾತ ವಿಷಯಗಳು ಕಾದಿರುವಾಗ ಈ ನಾನು ಎಂಬುದರ ಅರ್ಥವನ್ನು ಕುರಿತು ಸಂಶೋಧನೆ ಮಾಡಿ ತಿಳಿದುಕೊಳ್ಳುವ ತುರ್ತೇನಿದೆ ಎಂದು ಕೇಳಬಹುದು. ಬ್ರಹ್ಮಾಂಡದ ರಹಸ್ಯಗಳನ್ನು ಬಿಡಿಸಲು ಪ್ರಯತ್ನಿಸಬಹುದು. ಅಥವಾ ಜೀವಿ ಎಂದರೆ, ದೇವ ಎಂದರೆ ಏನು ಎಂದು ತಿಳಿಯಲು ಗಮನ ಕೊಡಬಹುದು. ವಿಶ್ವ, ವ್ಯಕ್ತೀಕೃತ ದಿವ್ಯತೆ, ದೈವ ಮುಂತಾದ ಎಣೆಯೇ ಇಲ್ಲದ ಪ್ರಾಮುಖ್ಯವನ್ನುಳ್ಳ ವಿಷಯಗಳಿಗೆ ಗಮನ ಕೊಡಲೇ ಬೇಕಾಗಿರುವಾಗ ಅವೆಲ್ಲವನ್ನೂ ಕೈಬಿಟ್ಟು ಸಾಮಾನ್ಯ ಜನರೂ ಮಕ್ಕಳೂ ಉಪಯೋಗಿಸುವ

ಈ, "ನಾನು, ನಾನು," ಎಂಬ ಉಕ್ತಿಯನ್ನು ವಿಚಾರಕ್ಕೆ ಎತ್ತಿಕೊಳ್ಳಬೇಕಾದ ಅಗತ್ಯವೇನು? ಅದರಿಂದ ಏನು ಲಾಭ? ಹಾಗೆಂದು ಜನರು ಕೇಳಬಹುದು.

ಆ ಪದವು ತುಂಬಾ ಸರಳವಾಗಿದೆ; ಅದರ ಅರ್ಥಗಳು ಅಸಂಖ್ಯಾತವಾಗಿದೆ, ಮೂಲತಃ ತೃಪ್ತಿಕರವಾಗಿವೆ. ಆದ್ದರಿಂದಲೇ ಎಲ್ಲ ಮಹಾಪುರುಷರೂ ಸದ್ಗುರುಗಳೂ ಸಾಧಕರಿಗೆ, "ನಿನ್ನನ್ನೇ ನೀನು ತಿಳಿದುಕೊ. ನಿಮ್ಮನ್ನೇ ಕುರತು ವಿಚಾರ ಮಾಡು. ಅದು ಮಾತ್ರವೇ ಮೋಕ್ಷವನ್ನು ದೊರಕಿಸಬಲ್ಲದು," ಎಂದು ಹೇಳುತ್ತಾರೆ. ಶಾಸ್ತ್ರಗಳೂ ಈ ವಿಧಿಯನ್ನೇ ಸ್ಥಿರೀಕರಿಸುತ್ತವೆ—ಯದ್ ವಿಜ್ಞಾನೇನ ಸರ್ವಂ ವಿಜ್ಞಾತಂ ಭವತಿ (ಅದನ್ನು ತಿಳಿದುಕೊಂಡರೆ ಎಲ್ಲವೂ ತಿಳಿಯುತ್ತದೆ). ಶಾಸ್ತ್ರಗಳು ಈ ಅನ್ವೇಷಣೆಯ ಮಹತ್ವವನ್ನು ಮೌಲ್ಯವನ್ನೂ ಸಾರಿ ಹೇಳಿ, ಆತ್ಮವನ್ನು ಕುರಿತ ವಿಚಾರವು ಅತ್ಯಗತ್ಯ ಎಂಬುದನ್ನು ಸ್ಪಷ್ಟಪಡಿಸುತ್ತವೆ. ಆತ್ಮವು ನೀನು ನೀನೇಯೆ, ತತ್ ತ್ವಮ್ ಅಸಿ ಎಂಬ ಪವಿತ್ರ ಮಹಾವಾಕ್ಯದಲ್ಲಿ ಹೇಳಿರುವುದು, ಭರವಸೆ ನೀಡಿರುವುದು ಅದನ್ನೇ.

ಆದ್ದರಿಂದ ಹಂಬಲವನ್ನು ಈಡೇರಿಸಿಕೊಳ್ಳಲು ಮೊದಲು ನೀವು ಯಾರು ಎಂಬ ರಹಸ್ಯವನ್ನು ಕುರಿತು ವಿಚಾರಮಾಡಬೇಕು. ಆಗ ನೀವು ನಿತ್ಯ, ಶಾಶ್ವತ, ಕಾಲದ ಮಿತಿಗಳಿಂದಾಚೆಗಿರುವವರು ಎಂದು ಅರ್ಥವಾಗುತ್ತದೆ. ಅಜ್ಞಾನವನ್ನು ಕಳಚಿ ಹಾಕಲು, ಈ ಸತ್ಯವನ್ನು ನಿಮ್ಮ ಅರಿವಿಗೆ ಬರದಂತೆ ಮರೆಮಾಡಿದ್ದ ಕಪ್ಪು ಮೋಡಗಳನ್ನು ಹಾರಿಸಲು ಶಾಸ್ತ್ರಗಳು ನೆರವಾಗುತ್ತವೆ. ಆಗ ನೀವು ನಿಮ್ಮ ಅಸಲಿ ಸ್ವಭಾವದ ಅರಿವಿನ ಅನುಭವದಿಂದ ಸಂತೋಷಪಡಬಹುದು. ಸತ್ಯವು ಎದುರಿಗೆ ತೆರೆದುಕೊಂಡಾಗ ಈ ಅರಿವು ಬರುತ್ತದೆ. ಆದರೆ ಈ ಮಹಾ ರಹಸ್ಯಗಳ ಅರಿವನ್ನೂ ಆ ಆನಂದವನ್ನು ಗಳಿಸಬಹುದಾದ ವಲಯವನ್ನೂ ಕುರಿತು ಮನುಷ್ಯನಿಗೆ ಮಾರ್ಗದರ್ಶನ ಮಾಡುವ ಶಾಸ್ತ್ರಗಳನ್ನು ಈಗ ಅಧ್ಯಯನ ಮಾಡುತ್ತಿಲ್ಲ. ಅದಕ್ಕೆ ಬದಲು ಇಂದು ಅವನು ಕಣ್ಣಡೆ ಕಟ್ಟಿಕೊಂಡು ತನ್ನದೇ ಮೂರ್ಖ ವಿಚಾರಗಳನ್ನು ಅಧ್ಯಯನ ಮಾಡುತ್ತಾನೆ. ಹಾಗಿರುವಾಗ ಅವನು ಆತ್ಮತತ್ತ್ವವನ್ನು ಸಾಧಿಸುವುದು ಹೇಗೆ? ಹಾಗಿದ್ದರೆ ಅವನು ಆನಂದದ ಮೂರ್ತಿಯಾಗಿರುವವನನ್ನು ತಲುಪುವುದಾದರೂ ಹೇಗೆ?

ಪ್ರಾಪಂಚಿಕವಾದ ವಿದ್ವತ್ತನ್ನು ಮಾತ್ರ ಗಳಿಸುವುದರಿಂದ ಶ್ರುತಿಗಳ ಅರ್ಥವನ್ನು ಸರಿಯಾಗಿ ಗ್ರಹಿಸಿದಂತೆ ಆಗುವುದಿಲ್ಲ. ಭಗವತ್ಕೃಪೆಯನ್ನು ಭಕ್ತಿಯಿಂದಲೂ ಅರ್ಪಣೆಯಿಂದಲೂ ಪಡೆಯಬೇಕು. ಆ ಕೃಪೆ ಮಾತ್ರವೇ ಭಗವಂತನ ದಯಾಪೂರಿತ ನೋಟವು ಮಾತ್ರವೇ ಶ್ರುತಿಗಳ ನಿಜವಾದ ಅರ್ಥವನ್ನು ಮಾನವನ ಹೃದಯದಲ್ಲಿ

ನೆಲೆಗೊಳಿಸಬಲ್ಲುದು. ದಿವ್ಯಜ್ಞಾನ ಮತ್ತು ಕರುಣೆಯ ಮೂರ್ತಿಗಳಾದ ಮಹಾತ್ಮರು ಮಾತ್ರವೇ ಮನುಷ್ಯನ ಆಧ್ಯಾತ್ಮಿಕ ಪ್ರಗತಿಗೂ ಕಲ್ಯಾಣಕ್ಕೂ ಯಾವುದು ಸಹಾಯಕ ವೆಂಬುದನ್ನು ನಿರ್ಧರಿಸಬಲ್ಲರು. ಮಿಕ್ಕವರು ಸುಮ್ಮನೆ ಬಡಾಯಿ ಕೊಚ್ಚುತ್ತಾರೆ. ಅವರಿಗೆ ಈ ಕೆಲಸವು ಅಸಾಧ್ಯವಾಗಿ ತೋರುತ್ತದೆ. ಎಕೆಂದರೆ, ತಮ್ಮನ್ನೇ ರಕ್ಷಿಸಿ ಕೊಳ್ಳಲಾರದ ಗುರುಗಳು ಇತರರನ್ನು ಹೇಗೆ ರಕ್ಷಿಸುವರು? ಇಂದಿನ ಗುರುಗಳು ತಮ್ಮ ಮನೆಗಳಿಗೆ ಕೊಳೆ ಮೆತ್ತಿದ್ದರೂ ಅದನ್ನು ಬಿಟ್ಟು ಸಮಾಜದ ಕೊಳೆಯನ್ನು ತೆಗೆದು ಶುಚಿಗೊಳಿಸಲು ಪ್ರಯತ್ನಿಸುತ್ತಾರೆ. ಅಂತಹ ಗುರುಗಳ ಸಂಖ್ಯೆಯು ಹೆಚ್ಚುತ್ತಿದೆ; ಅವರನ್ನು ಸಮರ್ಥಿಸಿ ವರ್ಣಿಸಲಾಗುತ್ತಿದೆ, ಹಾಗಾಗಿ ಗೊಂದಲವು ಇನ್ನೂ ಹೆಚ್ಚುತ್ತಿದೆ. ಇದರ ಪರಿಣಾಮವಾಗಿ ಕೊನೆಯೇ ಇಲ್ಲವಾದ ವಿವಾದಗಳು ಮೇಲೆದ್ದಿವೆ, ಸತ್ಯವು ಮರೆಯಾಗಿಬಿಟ್ಟಿದೆ. ಈ ಗುರುಗಳು ತಮ್ಮ ಪೂರ್ವಗ್ರಹಗಳು ಮತ್ತು ಪಕ್ಷಪಾತಗಳಿಗೆ ಹೊಂದಿಕೆಯಾಗುವಂತೆ ಶಾಸ್ತ್ರಗಳಿಗೆ ವ್ಯಾಖ್ಯಾನ ಮಾಡು ತ್ತಾರೆ. ಅವುಗಳನ್ನು ಸ್ವಪ್ರಶಂಸೆಗೆ ಸಾಧನವಾಗಿ ಮಾಡಿಕೊಳ್ಳುತ್ತಾರೆ,

ಈ ನಿರಾಶಾದಾಯಕ ಪರಿಸ್ಥಿತಿಗಳಲ್ಲಿ ಮನುಷ್ಯನಿಗೆ ಆಸೆ ಉಳಿದಿರುವುದು ಭಗವದ ನುಗ್ರಹವೊಂದರಲ್ಲೇ. ಅದೇ ಅವನ ದಾರಿಗೆ ಹಿಡಿದ ಬೆಳಕು. ಮನುಷ್ಯನಿಗೆ ಅವನ ಆಧ್ಯಾತ್ಮಿಕ ಹೋರಾಟಕ್ಕಾಗಿ ದೊರಕುವ ಬಹುಮಾನವೇ ಆ ಕರುಣೆ; ಸಮುದ್ರದ ಆಚೆಯ ದಡಕ್ಕೆ ಸುರಕ್ಷಿತವಾಗಿ ಒಯ್ಯುವ ಬಲವಾದ ಹಡಗು ಅದು.

ಅನೇಕ ಬೋಧಕರು ಮತ್ತು ಗುರುಗಳು ತನ್ನನ್ನು ಕುರಿತು ವಿಚಾರ ಮಾಡುವುದೇ ಮಾನವನಿಗೆ ಮೋಕ್ಷದ ದಾರಿ ಎಂದು ಘೋಷಿಸಿದ್ದಾರೆ: "ಸ್ವವಿಮರ್ಶೋ ಮೋಕ್ಷಃ (ಆತ್ಮ ವಿಚಾರವು ಮೋಕ್ಷಕ್ಕೆ ದಾರಿ ಮಾಡುತ್ತದೆ)," "ಅದು ಆತ್ಮ; ಅದು ನಾನೇ," "ನಾನು ಮತ್ತು ಆತ್ಮವು ಬೇರೆ ಬೇರೆಯಲ್ಲ," "ಆತ್ಮನೂ ಪರಮಾತ್ಮನೂ ಬೇರೆ ಬೇರೆಯಲ್ಲ." ಅಹಂ ಎಂಬ ನೂಲೇ ಆತ್ಮವೆಂಬ ಬಟ್ಟೆಯ ಹಾಸೂ ಹೊಕ್ಕೂ ಎರಡೂ ಆಗಿದೆ. ನಾನು ಎಂಬ ನೂಲು ಬೇರೆ ಬೇರೆ ದೇಹಗಳಲ್ಲಿ ಕಂಡು, ಪ್ರತಿಯೊಂದು ದೇಹದಲ್ಲೂ ತಾನು ಇತರ ದೇಹಗಳಿಗಿಂತ ಪ್ರತ್ಯೇಕವಾದದ್ದು ಎಂದು ಭಾವಿಸಿದಾಗ ಆತ್ಮವಸ್ತುವು ಮಾಯವಾಗುತ್ತದೆ ಎಂದು ಹೇಳಬಹುದು. ಆದರೆ ನೂಲಿನ್ನಲಾಗಲಿ, ವಸ್ತ್ರದಲ್ಲಾಗಲಿ ಸದಾ ಉಳಿದಿರುವ ಒಂದು ವಸ್ತುವಿದೆ. ಅದು ಹತ್ತಿ. ಹಾಗೆಯೇ ಪರಮಾತ್ಮನು ನಾನುವಿನಲ್ಲಿ ಏಕೈಕ ಸತ್ಯವಾಗಿ, ಆತ್ಮವಾಗಿ ಸ್ಥಿತನಾಗಿದ್ದಾನೆ. ಪರಮಾತ್ಮ ಎಂಬ ಹತ್ತಿಯಿಲ್ಲದೆ ನಾನು ಎಂಬ ನೂಲಿಲ್ಲ; ನಾನು ಎಂಬ ನೂಲಿಲ್ಲದೆ ಆತ್ಮವೆಂಬ ವಸ್ತ್ರವಿಲ್ಲ. ಪರಮಾತ್ಮ, ಆತ್ಮ ಮತ್ತು ನಾನು— ಈ ಮೂರೂ ಏಕೈಕ ಪರಮಾತ್ಮನ, ದಿವ್ಯವಾದ ಭಗವಂತನ ರೂಪಗಳು ಮತ್ತು ನಾಮಗಳು ಮಾತ್ರ.

ಅಧ್ಯಾಯ ೧೫

# ಮಟ್ಟಗಳು ಮತ್ತು ಹಂತಗಳು

"ಹಿಂದೂ ಧರ್ಮವು ಅನೇಕ ದೇವರುಗಳ ಪೂಜೆಗೆ ಅವಕಾಶ ಕೊಡುತ್ತದೆ. ಇದರ ಫಲವಾಗಿ ಮತೀಯ ಕಲಹಗಳು, ಗುಂಪುಗುಳಿತನ ದೇಶದಾದ್ಯಂತ ಭೀತಿಯನ್ನೂ ಅಶಾಂತಿಯನ್ನೂ ತುಂಬಿವೆ. ದೇಶದಲ್ಲಿ ಎಲ್ಲೆಲ್ಲೂ ಕಂಡು ಬರುತ್ತಿರುವ ಅಂತಃ ಕಲಹಗಳಿಗೂ ತಳಮಳಗಳಿಗೂ ಈ ಒಂದು ಮೂಲ ದೋಷವೇ ಕಾರಣ," ಎಂದು ಅನೇಕ ವಿಮರ್ಶಕರು ಆಲೋಚಿಸದೆ ಮಾಡುವ ಟೀಕೆಯಿದು. ಆದರೆ ಈ ನಿರ್ಣಯವು ಸರಿಯಾದುದಲ್ಲ. ತರ್ಕ, ವಿಚಾರ ಎಂಬ ಯಾವ ಶಕ್ತಿಯೂ ಇಲ್ಲದ ವ್ಯಕ್ತಿಗಳ ಹುಚ್ಚು ಕಲ್ಪನೆಯಿದು.

ಪಾಶ್ಚಾತ್ಯ ದೇಶಗಳಲ್ಲಿ ಎಲ್ಲಾ ದೇಶ ನಿವಾಸಿಗಳೂ ಹೆಚ್ಚು ಕಡಮೆ ಕ್ರೈಸ್ತ ಧರ್ಮದ ಅನುಯಾಯಿಗಳು. ಅವರೆಲ್ಲರೂ ಒಬ್ಬನೇ ದೇವರನ್ನು ಕೊಂಡಾಡಿದರೂ ಒಬ್ಬರ ನ್ನೊಬ್ಬರು ಅತ್ಯಂತ ಭಯಂಕರವಾಗಿ, ವನ್ಯಮೃಗಗಳಿಗಿಂತಲೂ ಕ್ರೂರವಾದ ವಿಧಾ ನಗಳಿಂದ ಕೊಲೆ ಮಾಡುತ್ತಿದ್ದಾರೆ. ಘರ್ಷಣೆಯ ಪ್ರದೇಶದಿಂದ ಅತಿದೂರದಲ್ಲಿ ರುವ ಜನರನ್ನೂ ಮುಗ್ಧರಾದ ಸ್ತ್ರೀಯರನ್ನೂ ಮಕ್ಕಳು ಮುದುಕರನ್ನೂ ನಿರ್ದಾಕ್ಷಿಣ್ಯ ವಾಗಿ ಅಗಾಧವಾದ ಬೆಂಕಿಯಿಂದ ಅಳಿಸಿ ಹಾಕುವ ಯುದ್ಧಗಳನ್ನು ಅವರು ನಡೆಸುತ್ತಿಲ್ಲವೆ? ಆ ಹೃದಯಹೀನ, ಅಪಮಾನಕರ, ಮೂರ್ಖತನವಾದ, ರಾಕ್ಷ ಸೀಯ ಆತ್ಮಘಾತಕ ಕೃತ್ಯಗಳಿಗೆ ಅವರ ಧರ್ಮ ಮೂಲ ಕಾರಣವೇನು? ನಿಜ, ಅವರೆಲ್ಲರೂ ಒಂದು ಧರ್ಮಕ್ಕೆ ಸೇರಿದವರು, ಒಬ್ಬನೇ ಭಗವಂತನನ್ನು ಪೂಜಿಸು ವವರು. ಆದರೆ ಆ ಸ್ತುತಿಯ ಹಿಂದೆ, ಒಂದು ವಿಷದ ಎಳೆ ಹರಿಯುತ್ತಿದ್ದು ಸಂಪೂರ್ಣ ವ್ಯಕ್ತಿತ್ವವನ್ನು ಕಲುಷಿತಗೊಳಿಸುತ್ತಿರಬೇಕು. ಧರ್ಮವು ಗುಂಪುಗುಳಿತನ ಕ್ಕಾಗಲಿ, ಕಲಹ ಕದನಗಳಿಗಾಗಲಿ ಅತಿ ಅಲ್ಪ ಪ್ರಮಾಣದಲ್ಲೂ ಕಾರಣವಾಗಲು ಸಾಧ್ಯವಿಲ್ಲ.

ಜರ್ಮನಿಯಲ್ಲಿ ಜಾತಿ ಪಂಗಡಗಳಿಗಾಗಲಿ ಮತೀಯ ಸಂಘರ್ಷಗಳಿಗಾಗಲಿ ಸ್ಥಳವಿರಲಿಲ್ಲ. ವಿಜ್ಞಾನ ಮತ್ತು ತಂತ್ರಜ್ಞಾನಗಳಲ್ಲಿ ಅದು ಅಸಾಧಾರಣ ಪ್ರಗತಿಯನ್ನು ಸಾಧಿಸಿತು. ತನ್ನ ಸಾಮರ್ಥ್ಯ, ಧೈರ್ಯ, ವೀರಗಳಿಂದಾಗಿ ಅದು ದೇಶಗಳಲ್ಲೇ ಮೊದಲ ಪಂಕ್ತಿಯಲ್ಲಿ ಶೋಭಿಸಿತು. ಇಂತಹ ದೇಶವು ನಾಲ್ಕು ಹೋಳುಗಳಾಗಿ

ಒಡೆಯಿತು. ಒಂದೊಂದು ತುಂಡನ್ನೂ ಬೇರೆ ಬೇರೆ ರಾಷ್ಟ್ರಗಳು ಆಳಿದವು! ಧಾರ್ಮಿಕ ಭಿನ್ನತೆಗಳಾಗಲಿ, ಮತೀಯ ಸಂಘರ್ಷಗಳಾಗಲಿ ಇರದ ಜಪಾನ್ ದೇಶ ಕೂಡ ಕೆಲವು ವರ್ಷಗಳ ಕಾಲ ಇತರ ದೇಶಗಳ ದ್ವೇಷವನ್ನು ಅನುಭವಿಸಬೇಕಾಯಿತು! ಇದಕ್ಕೆ ಕಾರಣವೇನು! ದೇಶಗಳ ಅವನತಿಗೆ ಧರ್ಮವೊಂದೇ ಕಾರಣವಾಗುವುದು ಸಾಧ್ಯವಿಲ್ಲ.

ಭಿನ್ನಾಭಿಪ್ರಾಯಗಳಿಲ್ಲದ ಒಂದು ಪ್ರಪಂಚವನ್ನು ಯಾರಿಗೂ ಕಲ್ಪಿಸಿಕೊಳ್ಳುವುದು ಕೂಡ ಸಾಧ್ಯವಿಲ್ಲ. ಆಂತರಿಕವಾದ ಬುದ್ಧಿಯ ಚಿಲುಮೆಗಳಿಂದಲೂ ಪ್ರಭಾವಗಳ ಒಟ್ಟು ಪರಿಣಾಮದಿಂದಲೂ ಭಿನ್ನಾಭಿಪ್ರಾಯಗಳು ಜನಿಸುತ್ತವೆ. ಪ್ರತಿಯೊಬ್ಬನ ಜೀವನವೂ ಈ ಬುದ್ಧಿ ಮತ್ತು ಪರಿಣಾಮಗಳ ಬಾಹ್ಯ ಅಭಿವ್ಯಕ್ತಿ ಅಷ್ಟೆ. ಜಡ ಮತ್ತು ಚೇತನ ವಸ್ತುಗಳೆಲ್ಲವೂ ಬುದ್ಧಿಯ ಬೇರೆ ಬೇರೆ ಹಂತದ ಅಭಿವ್ಯಕ್ತಿಗಳು. ಗಿಣಿಯು ತನ್ನ ನೋಟವನ್ನು ಒಂದು ನಿರ್ದಿಷ್ಟ ರೀತಿಯಲ್ಲಿ ಬೀರುತ್ತದೆ. ಒಂದು ಕಾಗೆಯು ಅದನ್ನೇ ಬೇರೊಂದು ರೀತಿಯಲ್ಲಿ ಮಾಡುತ್ತದೆ. ನರಿಯು ನಾಯಿಗಿಂತ ಬೇರೆ ರೀತಿಯಲ್ಲಿ ಸನ್ನಿವೇಶಗಳನ್ನು ವ್ಯವಹರಿಸುತ್ತದೆ. ಪ್ರಾಣಿಗಳ ಸ್ವಭಾವ ಒಂದು ತೆರನಾದರೆ ಮನುಷ್ಯನ ಸ್ವಭಾವ ಇನ್ನೊಂದು ತೆರ. ಇಬ್ಬರು ಮನುಷ್ಯರ ನಡುವೆಯೇ ಅವರವರು ಗಳಿಸಿರುವ ಜ್ಞಾನದಲ್ಲಿ ವ್ಯತ್ಯಾಸವಿರುತ್ತದೆ. ಜ್ಞಾನದಲ್ಲಿ ಮಾತ್ರವಲ್ಲ, ದೇಹಲಕ್ಷಣಗಳಲ್ಲೂ ಸೌಂದರ್ಯದಲ್ಲೂ ಲೆಕ್ಕವಿಲ್ಲದಷ್ಟು ವ್ಯತ್ಯಾಸಗಳು ಇರುತ್ತವೆ. ಅವರ ಇಚ್ಛೆ ಅನಿಚ್ಛೆಗಳು, ಅವರ ಆಲೋಚನೆ ಭಾವನೆಗಳು ಕೂಡ ಅವರ ಜ್ಞಾನ ಮತ್ತು ತೊಡಗಿರುವ ವೃತ್ತಿಗನುಗುಣವಾಗಿ ರೂಪುಗೊಂಡಿರುತ್ತವೆ. ಅಷ್ಟು ದೂರಕ್ಕೂ ನಾವು ಹೋಗಬೇಕಾಗಿಲ್ಲ. ಒಂದೇ ಗರ್ಭದಲ್ಲಿ ಬೆಳೆಯುತ್ತಿರುವ ಅವಳಿ ಮಕ್ಕಳೂ ಅನೇಕ ವೇಳೆ ಒಂದೇ ಸಮನಾಗಿರುವುದಿಲ್ಲ. ಅವು ಬೇರೆ ಬೇರೆ ಸ್ವಭಾವಗಳನ್ನು ತೋರಿಸುತ್ತವೆ. ಇದಕ್ಕೆ ಕಾರಣ ಏನು? ಬುದ್ಧಿಯ ಬೆಳವಣಿಗೆಯಲ್ಲಿ ಆಗುವ ವ್ಯತ್ಯಾಸಗಳಲ್ಲಿ ಆ ಕಾರಣ ಅಡಗಿದೆ. ಆದ್ದರಿಂದ ಯಾವುದೇ ಕಾಲದಲ್ಲಿ ಮಾನವ ಜನಾಂಗವು ಭಿನ್ನತೆಗಳಿಲ್ಲದೆ ಇರಲಿಲ್ಲ; ವಿಶ್ವಾತ್ಮಕವಾದ ಸಮಾನತೆ ಎನ್ನುವುದು ಒಂದು ಅಸಾಧ್ಯವಾದ ಅಪೇಕ್ಷೆ; ಭೂಮಿಯ ಮೇಲೆ ಅದನ್ನು ಸ್ಥಾಪಿಸಬೇಕೆಂಬ ಬಯಕೆ ಒಂದು ರಮ್ಯ ಕಲ್ಪನೆಯಷ್ಟೆ, ಗಗನ ಕುಸುಮಗಳನ್ನು ಹುಡುಕುವ ಪ್ರಯತ್ನದ ಹಾಗೆ.

ಪ್ರಾಣಿಯು ತಾನೊಂದು ಪ್ರಾಣಿಯೆಂಬ ಅರಿವಿನಿಂದ ಜೀವಿಸುತ್ತದೆ, ಪಕ್ಷಿಗೆ ತಾನು ಒಂದು ಪಕ್ಷಿಯೆಂಬ ಅರಿವಿರುತ್ತದೆ. ಒಬ್ಬ ಹೆಂಗಸು ತಾನೊಬ್ಬ ಹೆಂಗಸೆಂಬ ಅರಿವಿನಿಂದಲೇ ಪ್ರಾಪಂಚಿಕವಾದ ಕೆಲಸಕಾರ್ಯಗಳಲ್ಲಿ ನಿರತಳಾಗಿರುತ್ತಾಳೆ. ಹಾಗೆಯೆ ಮನುಷ್ಯನೂ ನಿದ್ದೆಯಿಂದ ಎಚ್ಚೆತ್ತಾಗಿನಿಂದ ವ್ಯಕ್ತಿಯ ಅರಿವು ಉದ್ದಕ್ಕೂ ಮತ್ತೆ

ಅವನನ್ನು ನಿದ್ದೆಯು ಆಕ್ರಮಿಸುವವರೆಗೂ ವ್ಯತ್ಯಾಸಗೊಳ್ಳದೆ ಮುಂದುವರಿಯುತ್ತದೆ. ಜೀವಿಯೂ ನಿದ್ದೆಗೆ ಮುಂಚೆ ಇದ್ದಂತೆಯೇ ಚಟುವಟಿಕೆಗಳನ್ನು ಮುಂದುವರಿಸುತ್ತಾನೆ. ನಿದ್ದೆಯಿಂದಾಗಿ ಮಧ್ಯೆ ನಿಂತುಹೋದ ಚಟುವಟಿಕೆಗಳನ್ನು ಎದ್ದ ಮೇಲೆ ಮುಂದುವರಿಸುತ್ತಾನೆ. ಹಾಗೆಯೇ ಮೃತ್ಯುವಿನಿಂದಾಗಿ ಮುರಿದಿದ್ದ ಚಟುವಟಿಕೆಗಳನ್ನು ಮನುಷ್ಯನು ಈ ಜನ್ಮದಲ್ಲಿ ಮುಂದುವರಿಸುತ್ತಾನೆ.

ಯಂ ಯಂ ವಾಪಿ ಸ್ಮರನ್ ಭಾವಂ ತ್ಯಜತ್ಯಂತೇ ಕಲೇವರಂ ।
ತಂ ತಮೇವೈತಿ ಕೌಂತೇಯ ಸದಾ ತದ್ಭಾವಭಾವಿತಃ ॥

ಉದ್ದಕ್ಕೂ ಅಷ್ಟು ತೀವ್ರವಾಗಿ ತನ್ನನ್ನು ನಡೆಸಿದ ಭಾವನೆಗಳನ್ನು ನೆನೆಯುತ್ತಾ ಅವನು ಕೊನೆಯಲ್ಲಿ ದೇಹತ್ಯಾಗ ಮಾಡುತ್ತಾನೆ. ಉದ್ದಕ್ಕೂ ಅವನ ಭಾವನೆಗಳು ಯಾವ ದಿಕ್ಕಿಗೆ ಹರಿಯುತ್ತಿದ್ದುವೋ ಅದಕ್ಕೆ ತಕ್ಕ ಸ್ಥಾನಮಾನವನ್ನು ಪಡೆಯುತ್ತಾನೆ. ವ್ಯಕ್ತಿಯು ತನ್ನ ದೇಹತ್ಯಾಗ ಮಾಡುವಾಗ ಮನಸ್ಸನ್ನು ಯಾವ ಭಾವನೆಗಳು ಆವರಿಸಿಕೊಂಡಿರುತ್ತವೆಯೋ ಅವಕ್ಕನುಗುಣವಾಗಿ ಅವನ ಮುಂದಿನ ಜನ್ಮದ ಸ್ವರೂಪವಿರುತ್ತದೆ. ಏಕೆಂದರೆ ಅವನು ಬದುಕಿದ್ದ ದಿನಗಳನ್ನು ಪ್ರೇರಿಸಿದ ಭಾವನೆಗಳಿಗೆ ಅವು ಅನುಗುಣವಾಗಿರುತ್ತವೆ. ಇನ್ನೂ ಆಳವಾಗಿ ಆಲೋಚನೆ ಮಾಡಿ ನೋಡಿದರೆ ಮೂಲಭೂತವಾದ ಸತ್ಯವು ಇಷ್ಟೇ ಎಂದು ಸ್ಪಷ್ಟವಾಗುತ್ತದೆ: ಪ್ರತಿಯೊಂದೂ ಬುದ್ಧಿಯ ಔನ್ನತ್ಯದಲ್ಲಿ ಸಾಧಿಸಿದ ಪ್ರಗತಿಯನ್ನು ಅವಲಂಬಿಸುರತ್ತದೆ.

ಹೊರ ರೂಪದಲ್ಲಿ ಒಂದು ಬಗೆಯ ಸಮರೂಪತೆಯು ತೋರಿದರೂ ಒಳಸ್ವಭಾವದಲ್ಲಿ ವ್ಯಾಪಕವಾದ, ವೈವಿಧ್ಯಮಯವಾದ ವ್ಯತ್ಯಾಸಗಳು ಕಂಡು ಬರುತ್ತವೆ. ಒಂದು ಜೀವಿ ಅಥವಾ ವರ್ಗವನ್ನು ಮುಖ್ಯವಾಗಿ ಬಾಹ್ಯಲಕ್ಷಣಗಳಿಂದ ನಿರ್ಧರಿಸಲಾಗುತ್ತದೆ. ಅವಾದರೋ ನಿಜವಾಗಿ ಒಳಗಿನ ಬುದ್ಧಿಯ ಅಭಿವ್ಯಕ್ತಿಗಳಾಗಿರುತ್ತವೆ. ವ್ಯಕ್ತಿ ಎಂದರೆ ಮೂಲತಃ ಒಂದು ರೂಪ. ಮನುಷ್ಯ, ಮರ, ಬೆಟ್ಟ, ಗುಬ್ಬಚ್ಚಿ, ನರಿ, ನಾಯಿ, ಹಸು, ಹಾವು, ಚೇಳು—ಈ ಶಬ್ದಗಳು ಅವು ರೂಪವನ್ನು ಹೊಂದಿರುವ ವರ್ಗವನ್ನು ಸೂಚಿಸುತ್ತವೆ. ವ್ಯಕ್ತಿಗಳು ನಾಶವಾಗಬಹುದು; ಆದರೆ ವರ್ಗವು ಹಾಗೆಯೇ ಮುಂದುವರಿಯುತ್ತದೆ. ಮನುಷ್ಯರು ಸಾಯಬಹುದು; ಆದರೆ ಮಾನವ ಜನಾಂಗವು ಉಳಿದಿರುತ್ತದೆ. ಮರಗಳು ಉರುಳಿ ಬೀಳಬಹುದು, ಸುಟ್ಟು ಬೂದಿಯಾಗಬಹುದು, ಧೂಳಾಗಬಹುದು; ಆದರೆ ಜೀವಿಯೂ ಎಂದಿಗೂ ನಾಶವಾಗುವುದಿಲ್ಲ. ಜೀವಂತವಾಗಿರುವ ಜೀವಿಯು ಶಾಶ್ವತವಾದದ್ದು; ಸಂಪೂರ್ಣ ವಿನಾಶವೆನ್ನುವುದು ಎಂದಿಗೂ ಸಂಭವಿಸುವುದಿಲ್ಲ.

ನಮ್ಮ ದಿನನಿತ್ಯದ ಜೀವನದಲ್ಲಿ ಅನುಭವಕ್ಕೆ ಬರುವ ಅತಿಸಣ್ಣ ವಿಷಯಗಳನ್ನು ವಿಶ್ಲೇಷಿಸಿದರೂ ಸತ್ಯಗಳು ನಮ್ಮ ಎದುರಿಗೆ ಸ್ಪಷ್ಟವಾಗಿ ಕಾಣಿಸುತ್ತದೆ. ಮಾನವ ವರ್ಗಕ್ಕೆ ಸೇರಿದ ಪ್ರತಿಯೊಬ್ಬನಲ್ಲೂ ಮಾನವ ಲಕ್ಷಣಗಳಿರುತ್ತವೆ ಎಂದು ಹೇಳು ತ್ತೇವೆ; ಆದರೆ ಒಬ್ಬ ವ್ಯಕ್ತಿಯನ್ನು ವಿಶ್ಲೇಷಿಸಿ ನೋಡಿದಾಗ ಅವನ ಗುಣಗಳು ಮತ್ತು ಅಭ್ಯಾಸಗಳಿಗೆ, ಪ್ರಸ್ತುತ ಸ್ಥಾನಮಾನ ಮತ್ತು ಭವಿಷ್ಯದ ಸಾಧ್ಯತೆಗಳು ಇವುಗಳಿಗೆ ಹೆಚ್ಚಿನ ಗಮನವನ್ನು ಕೊಡುತ್ತೇವೆ.

ಹಸುಗಳೆಲ್ಲವೂ ಒಂದು ಜೀವಿವರ್ಗಕ್ಕೆ ಸೇರುತ್ತವೆ. ನಾವು ಒಂದು ಹಸುವನ್ನು ಕೊಳ್ಳಬಯಸಿದಾಗ, ಅದರ ತಂದೆ ತಾಯಿ ಯಾವುವು ಎಂದು ತಿಳಿದುಕೊಳ್ಳಲು ಪ್ರಯತ್ನಿಸುತ್ತೇವೆ. ಅದರ ದೇಹದ ಮೇಲೆ ಮಂಗಳಕರವಾದ ಗುರುತುಗಳಿವೆಯೆ ಎಂದು ನೋಡುತ್ತೇವೆ. ಅದು ತುಂಬಾ ಹಾಲು ಕರೆಯಬೇಕು; ಮುದ್ದಾದ, ಪುಟ್ಟ, ಶಾಂತವಾದ ಪ್ರಾಣಿಯಾಗಿರಬೇಕು. ಈ ಅಪೇಕ್ಷಣೀಯ ಗುಣಗಳುಳ್ಳ ಹಸುಗಳ ಹಾಗೆಯೇ ಅದೂ ಒಂದು ಎಂಬಷ್ಟೇ ಕಾರಣದಿಂದ ನಾವು ಆಕರ್ಷಿತರಾಗುವು ದಿಲ್ಲ. ಒಂದು ಗೊಡ್ಡು ಹಸುವನ್ನೋ ಅಂಕೆಯಲ್ಲಿಡಲಾಗದ ಕಾಡು ಹಸುವನ್ನೋ ನಾವು ಕೊಳ್ಳುವುದಿಲ್ಲ. ಆದ್ದರಿಂದ ಎಲ್ಲ ಮನುಷ್ಯರೂ ಹೆಚ್ಚು ಅಥವಾ ಕಡಮೆಯಾಗಿ ಸಮರೂಪವುಳ್ಳವರಾಗಿದ್ದರೂ, ಮೌಲ್ಯಮಾಪನ ಮಾಡುವಾಗ ಒಬ್ಬನ ಗುಣ ಗಳನ್ನು ಮಟ್ಟಿಗೆ ಆಧಾರವಾಗಿ ತೆಗೆದುಕೊಳ್ಳುತ್ತೇವೆ.

ಇನ್ನೊಂದು ವಿಷಯವಾಗಿ ಆಳವಾದ ಆಲೋಚನೆ ಮಾಡಬೇಕು. ಆಗ ಮೇಲು ಕೀಳು ಎಂಬ ವ್ಯತ್ಯಾಸಗಳು ಸಹಜವಾದ ಪ್ರತಿಕ್ರಿಯೆಗಳು ಎಂಬುದು ಅರ್ಥವಾಗು ತ್ತದೆ. ಸಾಮಾನ್ಯವಾಗಿ ಮಲ ಮೂತ್ರಗಳು ಎಲ್ಲ ಕಡೆಯೂ ಸಮಾನವಾಗಿ ಅಶುಚಿ ಯಾದುವು. ಆದರೆ ಹಸುವಿನ ಮೂತ್ರವನ್ನು ಮಾತ್ರ ಪವಿತ್ರವಾದುದೆಂದು ಭಾವಿಸ ಲಾಗುತ್ತದೆ. ಇತರ ಪ್ರಾಣಿಗಳ ಮಲ ಮೂತ್ರಗಳನ್ನು ಪವಿತ್ರವೆಂದು ಪರಿಗಣಿಸುವು ದಿಲ್ಲ. ಅವು ಖಂಡಿತವಾಗಿಯೂ ಅಪವಿತ್ರ. ಬೆಂಕಿಯನ್ನು ಉದಾಹರಣೆಗೆ ತೆಗೆದುಕೊಳ್ಳಿರಿ. ಯಾವುದೇ ರೂಪದಲ್ಲಿದ್ದರೂ ಬೆಂಕಿ ಬೆಂಕಿಯೇ. ಮನೆಗಳಲ್ಲಿ ದೀಪಗಳನ್ನು ಹಚ್ಚುತ್ತೇವೆ, ನಮ್ಮ ಮನೆಯ ಒಲೆಗಳಲ್ಲಿ ಬೆಂಕಿ ಉರಿಯುತ್ತದೆ, ಯಜ್ಞ ಕಾರ್ಯಗಳನ್ನು ನಡೆಸುವ ಹೋಮಾಗ್ನಿಯಿದೆ. ಇದನ್ನು ಪೂಜಿಸಿ ಗೌರವಿಸಲಾಗು ತ್ತದೆ. ಜನರು ಅದರೆದುರಿಗೆ ಬಾಗಿ ನಮಸ್ಕರಿಸುತ್ತಾರೆ. ದೀಪ ಮತ್ತು ಒಲೆಗಳಲ್ಲಿರುವ ಅಗ್ನಿಯನ್ನು ಯಾರೂ ಹಾಗೆ ಗೌರವಿಸುವುದಿಲ್ಲ. ಬೆಂಕಿಯನ್ನು ಸ್ಮಶಾನದಲ್ಲಿ ಹೆಣ ವನ್ನು ಸುಡಲು ಉರಿಸಿದರೆ ಅದು ಬೇರೆ ಯಾವ ಉಪಯೋಗಕ್ಕೂ ಸಲ್ಲಲಾರದು, ಅಪವಿತ್ರವಾಗಿಬಿಡುತ್ತದೆ. ಅದರ ಮೇಲೆ ಯಾರೂ ರೊಟ್ಟಿಯನ್ನು ಬೇಯಿಸುವು

ದಿಲ್ಲ; ಯಾರೂ ಅದರೆದುರು ನಮಸ್ಕರಿಸಿ ಪೂಜಿಸವುದಿಲ್ಲ. ಏಕೆಂದರೆ ಅದನ್ನು ಕೆಳಮಟ್ಟದ್ದು, ಅಪವಿತ್ರ, ಕಲುಷಿತ ಎಂದು ಭಾವಿಸಲಾಗುತ್ತದೆ.

ಹಾಗೆಯೇ ಮನುಷ್ಯರಲ್ಲಿ ಸಮರೂಪದ ದೇಹ ಸ್ವರೂಪವಿದ್ದರೂ ಪ್ರತಿಯೊಂದು ದೇಹದ ಮತ್ತು ಅವನು ಧರಿಸಿರುವ ವಿವಿಧ ಕೋಶಗಳ ವೈಶಿಷ್ಟ್ಯಗಳು ಬೇರೆ ಬೇರೆಯಾಗಿರುತ್ತವೆ. ಅವನ ಗುಣಗಳು, ಕಾರ್ಯಚಟುವಟಿಕೆಗಳು, ವ್ಯತ್ಯಾಸಗಳು ಇವುಗಳನ್ನು ಗಮನಿಸಲಾಗುತ್ತದೆ. ಕೆಲವರನ್ನು ಉತ್ತಮರೆಂದೂ ಇನ್ನು ಕೆಲವರನ್ನು ಅಧಮರೆಂದೂ ಪರಿಗಣಿಸಬೇಕಾಗುತ್ತದೆ. ವಿದ್ಯುತ್ ಬಲ್ಬುಗಳು ಎಲ್ಲವೂ ಒಂದೇ ಸಮನಾದ ಬೆಳಕನ್ನು ಸೂಸುವುದಿಲ್ಲ. ಕೆಲವು ಉಜ್ವಲವಾಗಿರುತ್ತವೆ, ಇನ್ನು ಕೆಲವು ಮಸುಕಾಗಿರುತ್ತವೆ. ಕೆಲವು ಪೂರ್ಣ ಶಕ್ತಿಯಿಂದ ವ್ಯಕ್ತಪಡಿಸಿದರೂ ಇತರವು ಹಾಗೆ ಮಾಡಲಾರದೆ ಹೋದರೂ ಎಲ್ಲ ಬಲ್ಬುಗಳಲ್ಲೂ ವಿದ್ಯುತ್ತು ಇದ್ದೇ ಇರುತ್ತದೆ.

ಜಗತ್ತು ವಿಕಾಸಗೊಳ್ಳಬೇಕಾದರೆ ಅರಿವಿನ ಮಟ್ಟಗಳು, ಪರಿಣತಿಯ ಹಂತಗಳು, ಮೇಲು ಕೀಳು, ಪವಿತ್ರ ಅಪವಿತ್ರ, ಧಾರ್ಮಿಕ ಅಧಾರ್ಮಿಕ ಇಂತಹ ಭಿನ್ನತೆಗಳನ್ನು ಒಪ್ಪಿಕೊಳ್ಳಲೇ ಬೇಕಾಗುತ್ತದೆ. ಅವು ಅಗತ್ಯವಾದುವು, ಅನಿವಾರ್ಯವಾದುವು. ಅವನ್ನು ಭಗವತ್ಸಂಕಲ್ಪವು ರೂಪಿಸಿದೆ.

ಅಧ್ಯಾಯ ೧೬

# ಮಾನವ ಮತ್ತು ದೇವ

ಮಾನವನ ವಿಕಾಸವು ಶಿಖರವನ್ನು ಮುಟ್ಟಬೇಕಾದರೆ, ಮನುಷ್ಯನು ತನ್ನ ಉನ್ನತ ಲಕ್ಷ್ಯವನ್ನು ಸಾಕ್ಷಾತ್ಕರಿಸಿಕೊಳ್ಳಬೇಕಾದರೆ ಧಾರ್ಮಿಕ ಮತ್ತು ಆಧ್ಯಾತ್ಮಿಕ ಸಾಧನೆ ಅತ್ಯಗತ್ಯ. ವ್ಯಕ್ತಿ ಮತ್ತು ವಿಶ್ವದ ನಡುವೆ, ಜೀವ ಮತ್ತು ದೇವರ ನಡುವೆ ಧರ್ಮವು ಸಂಬಂಧವಾಗಬೇಕು; ಅದಿಲ್ಲದೆ ಹೋದರೆ ಬದುಕು ಅನಾಯಕವಾಗುತ್ತದೆ. ಒಂದು ಬೆಟ್ಟದ ಮೇಲೆ ಸಿಕ್ಕಿಕೊಂಡ ಹಸುವು ಎದುರು ಬೆಟ್ಟಕ್ಕೆ ಹೋಗಬಯಸಿದರೆ, ಎರಡರ ನಡುವೆ ತುಂಬಿ ಹರಿಯುತ್ತಿರುವ ನದಿಯನ್ನು ದಾಟಲು ಒಂದು ಸೇತುವೆಯು ಅಗತ್ಯವಾಗುತ್ತದೆ. ಧರ್ಮವೂ ಅದೇ ರೀತಿಯಾಗಿದೆ. ವ್ಯಕ್ತಿ ಜೀವನದ ಬೆಟ್ಟಕ್ಕೂ ವಿಶ್ವಜೀವನದ ಪ್ರದೇಶಕ್ಕೂ ನಡುವೆ ಪ್ರಕೃತಿಯ ನದಿ ಹರಿಯುತ್ತಿದೆ. ಅಸಂಖ್ಯ ಗೊಂದಲಗಳು, ತೊಡಕುಗಳು ಕಾರಣವಾಗಿ, ಅದು ಎಲ್ಲಿಂದ ಹುಟ್ಟಿ ಬಂದಿದೆ, ಹೇಗೆ ಪ್ರವಾಹ ಗರ್ಜನೆಯನ್ನು ಕೂಡಿಸಿಕೊಂಡಿದೆ, ಕೊನೆಗೆ ಎಲ್ಲಿ ನಿಲ್ಲುತ್ತದೆ ಎಂದು ಕಂಡುಹಿಡಿಯುವುದು ಕಷ್ಟವಾಗುತ್ತದೆ. ಆದರೆ ಅದೃಷ್ಟವಶಾತ್, ಪ್ರತಿಯೊಂದು ಮಾನವ ಸಮುದಾಯದಲ್ಲೂ ಸೇತುವೆ ಕಟ್ಟುವವರು, ಜನರು ದಾಟಲು ಸಹಾಯ ಮಾಡುವವರು ಇದ್ದಾರೆ.

ಒಂದಕ್ಕಿಂತ ಹೆಚ್ಚು ಸೇತುವೆಗಳಿರಬಹುದು, ಆದರೆ ಅವುಗಳ ಉದ್ದೇಶ ಒಂದೇ. ಭಾರತದ ಋಷಿಮುನಿಗಳು ಕಟ್ಟಿರುವ ಸೇತುವೆಯ ಹೆಸರು ಸನಾತನ ಧರ್ಮ ಸೇತುವೆ. ಅದಕ್ಕೆ ಆ ಹೆಸರು ಏಕೆಂದರೆ, ಅದು ಶಾಶ್ವತವಾದ, ನಾಶವಾಗದ, ವೇದಗಳ ಕಾಲಾತೀತ ತಳಹದಿಯ ಮೇಲೆ ನಿಂತಿದೆ. ಅದನ್ನು ಎಲ್ಲಾ ದೇಶಗಳ ಎಲ್ಲಾ ಕಾಲಗಳ ಎಲ್ಲರೂ ಭರವಸೆಯಿಂದ ಉಪಯೋಗಿಸಬಹುದು. ಆದ್ದರಿಂದಲೇ ಅದನ್ನು ವೇದಸೇತುವೆಂದೂ ವೈದಿಕ ಮಾರ್ಗವೆಂದೂ ಆರ್ಯಮಾರ್ಗವೆಂದೂ ಕೆಲವೊಮ್ಮೆ ಕರೆಯಲಾಗುತ್ತದೆ. ಈ ಮಾರ್ಗವನ್ನು ನಿರ್ಮಿಸಿದವರು ಯಾರೆಂದು ಕಂಡು ಹಿಡಿಯುವ ಪ್ರಯತ್ನಗಳೆಲ್ಲವೂ ವಿಫಲವಾಗಿವೆ. ಆದ್ದರಿಂದ ಹತಾಶೆಯಿಂದ ಹುಡುಕುವ ಕೆಲಸವನ್ನೇ ಕೈ ಬಿಟ್ಟು ಆ ಪಥವನ್ನು ಅಕರ್ತ (ಮನುಷ್ಯನು ವಿನ್ಯಾಸಗೊಳಿಸಿದ್ದಲ್ಲ) ಎಂದು ಕರೆಯುತ್ತಾರೆ. ವೇದಗಳೇ ಅಥವಾ ಬೇರೆ ಮಾತುಗಳಲ್ಲಿ ಭಗವಂತನೇ ಈ ಪಥದ ನಿರ್ಮಾಪಕ ಎಂದು ನಂಬಿದ್ದಾರೆ.

ಯುಗ ಯುಗಾಂತರಗಳಿಂದ ನಿರ್ಮಿತವಾದ ಆಧ್ಯಾತ್ಮಿಕ ಪಥಗಳೂ ಧರ್ಮಗಳೂ ಪವಿತ್ರವಾದವೇ. ಏಕೆಂದರೆ ಅವುಗಳನ್ನು ಕಟ್ಟಿದವರು ಭಗವಂತನ ದೂತರು. ಮಾನವರಲ್ಲಿ ಅತಿಶ್ರೇಷ್ಠರಾದ್ದರಿಂದ ಅವರನ್ನು ಆ ಕರ್ತವ್ಯ ನಿರ್ವಹಣೆಗೆ ಆರಿಸಲಾಯಿತು. ಬುದ್ಧ, ಯೇಸು ಕ್ರಿಸ್ತ, ಜೋರಾಷ್ಟರ್, ಮಹಮ್ಮದ್—ಈ ಹೆಸರುಗಳು ಜಗತ್ತಿನಾದ್ಯಂತ ಪ್ರಸಿದ್ಧವಾದವು. ಅವರ ಸಿದ್ಧಾಂತಗಳು, ಆದರ್ಶಗಳು, ಮತ್ತು ಆಲೋಚನೆಗಳು ಇವೆಲ್ಲವೂ ಅವರ ಅನುಯಾಯಿಗಳಿಗೆ ಬಹು ಅಮೂಲ್ಯವಾದುವು, ಅವರ ಹೆಸರುಗಳೇ ಅವರ ಧರ್ಮಗಳೊಂದಿಗೆ ಸಮೀಕೃತವಾಗಿಬಿಟ್ಟಿವೆ.

ಆ ಕಾಲದಲ್ಲಿ ಆದರ್ಶಪ್ರಾಯವಾದ ಧರ್ಮವು ಭಗವಂತನ ಸಂದೇಶವೆಂದು ನಂಬಲಾಯಿತಾದ್ದರಿಂದ, ಆ ಸಂದೇಶವನ್ನು ಯೇಸು ಕ್ರಿಸ್ತನು ಹರಡಿದುದರಿಂದ ಅವನ ಹೆರನ್ನೇ ಆ ಧರ್ಮಕ್ಕೆ ಕೊಡಲಾಯಿತು. ಹಾಗೆಯೇ ಬುದ್ಧನ ಹೆಸರಿನಲ್ಲಿ ಬೌದ್ಧ ಧರ್ಮವು ಪ್ರಖ್ಯಾತವಾಯಿತು. ಹಾಗೆಯೇ ಭಗವಂತನ ಸಂದೇಶವನ್ನು ಆಲಿಸಿದ ಮೊಹಮ್ಮದನು ನಿಯಮ ನಿಬಂಧನೆಗಳನ್ನು ರೂಪಿಸಿಕೊಟ್ಟನು. ಅದನ್ನು ಅನುಸರಿಸುವವರನ್ನು ಮಹಮದೀಯ ಧರ್ಮಾನುಯಾಯಿಗಳೆಂದು ಕರೆಯಲಾಗುತ್ತದೆ. ಆದ್ದರಿಂದ ಈ ಧರ್ಮಗಳೆಲ್ಲವೂ ಅತ್ಯಂತ ಪ್ರಸಿದ್ಧರಾದವರೂ ಭಗವಂತನ ಅತಿ ಸಮರ್ಥ ಸಂದೇಶವಾಹಕರೂ ಆದ ಜನರು ರಚಿಸಿದುವು ಎಂದು ಹೇಳಿದರೆ ತಪ್ಪಾಗುವುದಿಲ್ಲ.

ದಿವ್ಯಪ್ರಜ್ಞೆಯು ವಿಶ್ವಾತ್ಮಕವಾಗಿದೆ, ಸರ್ವವ್ಯಾಪಕವಾಗಿದೆ. ಮಾನವ ಪ್ರಜ್ಞೆಯಾದರೋ ಅನೇಕ ಮಿತಿಗಳಿಗೆ ಒಳಪಟ್ಟಿದೆ. ಅದರ ವ್ಯಾಪ್ತಿಯು ತುಂಬಾ ಚಿಕ್ಕದು. ಶಾಸ್ತ್ರಗಳು ಒಂದು ಗುರಿಯನ್ನು ಮಾತ್ರ ಹೊಂದಿದೆ. ಆದರೆ ಅದನ್ನು ತಲುಪಲು ಹಾಲವು ದಾರಿಗಳನ್ನು ಸೂಚಿಸುತ್ತವೆ. ಒಂದೊಂದು ದಾರಿಯೂ ಒಂದು ನಿರ್ದಿಷ್ಟ ಧರ್ಮ, ಅದರ ಸಿದ್ಧಾಂತಗಳು, ಸಾಧನೆಗಳು ಆಗಿರಬಹುದು, ಮಿಕ್ಕವುಗಳಿಂದ ಪ್ರತ್ಯೇಕವಾದುವೆಂಬಂತೆ ಅವುಗಳನ್ನು ಗಣಿಸಿರಬಹುದು. ಆದ್ದರಿಂದ ರಾಮ, ಕ್ರಿಸ್ತ, ಜೊರಾಷ್ಟರ್, ಬುದ್ಧ, ಮಹಮ್ಮದ್ ಮತ್ತಿತರರೆಲ್ಲರೂ ಒಂದೇ ಎಂಬುದು ನಿಲ್ಲುವುದಿಲ್ಲ.

ಕ್ರೈಸ್ತ ಧರ್ಮದಲ್ಲಿ ವ್ಯಕ್ತಿಗಳು, ಅವರು ಹೇಗಿದ್ದಾರೋ ಹಾಗೆಯೇ ಸೃಷ್ಟಿಗೊಂಡಿದ್ದಾರೆ ಎಂದು ಹೇಳಲಾಗಿದೆ. ಅಲ್ಲಾಹನು ಹಾಗೆಯೇ ಮಾಡಿದನೆಂದು ಹೇಳುತ್ತಾರೆ. ಜೊರಾಷ್ಟ್ರಿಯನ್ ಮತ್ತು ಬೌದ್ಧ ಧರ್ಮಗಳೂ ಸೃಷ್ಟಿಯನ್ನು ಕುರಿತು ಹೆಚ್ಚು ಕಡಮೆ ಅದೇ ರೀತಿ ವರ್ಣಿಸಿವೆ. ಆದರೆ ವೈದಿಕ ಧರ್ಮದ ನಿರೂಪಣೆಯೇ ಬೇರೆ ತೆರನಾದುದು. ವ್ಯಕ್ತಿಯು ಭಗವಂತನ ಹಾಗೆಯೇ ನಿತ್ಯನು, ಅವನು ದೇವರ ಕಿಡಿ.

ಜೀವಿಗಳೇ ಇಲ್ಲದಿದ್ದರೆ ದೇವರೂ ಇಲ್ಲ. ಇದನ್ನು ವೇದಗಳಲ್ಲಿ ಒತ್ತುಕೊಟ್ಟು ಹೇಳಲಾಗಿದೆ. ಇತರ ಧರ್ಮಗಳ ಅನುಯಾಯಿಗಳೂ ಈಚೆಗೆ ಈ ಸತ್ಯವನ್ನು ಕಂಡುಕೊಳ್ಳುತ್ತಿದ್ದಾರೆ. ವ್ಯಕ್ತಿಯ ಪ್ರಸಕ್ತ ಜೀವನವೆನ್ನುವುದು ಹಿಂದಿನ ಜನ್ಮದ ಹಾಗೂ ಮುಂದಿನ ಜನ್ಮದ ನಡುವಣ ಮಧ್ಯಂತರ ಮಾತ್ರ. ಅದು ಮುಂದಿನ ಜನ್ಮದತ್ತ ನಡೆಯುವ ಒಂದು ಮೆಟ್ಟಿಲು. ಇದು ವೇದಗಳಲ್ಲಿ ಸೂಚಿತವಾಗಿದೆ. ಹಿಂದಿನ ಮತ್ತು ಮುಂದಿನ ಜನ್ಮಗಳ ನಡುವಣ ಸಂಬಂಧಗಳನ್ನು ವೇದಗಳು ಬೋಧಿಸುತ್ತವೆ. ಬೇರೆ ಯಾವ ಧರ್ಮವೂ ಇಷ್ಟುಮಟ್ಟಿಗೆ ಹಿಂದಿನ ಮತ್ತು ಮುಂದಿನ ಜನ್ಮಗಳ ಬಗೆಗೆ ಹೇಳಿಲ್ಲ.

ಇನ್ನೊಂದು ವಿಷಯ. ಧರ್ಮ, ಅರ್ಥ, ಕಾಮ, ಮೋಕ್ಷ ಎಂಬ ನಾಲ್ಕು ಪುರುಷಾರ್ಥಗಳಲ್ಲಿ, ಮೋಕ್ಷದ ಹಂತವನ್ನು ಬೇರೆ ಬೇರೆ ಧರ್ಮಗಳು ಬೇರೆ ಬೇರೆ ರೀತಿಯಲ್ಲಿ ವರ್ಣಿಸುತ್ತವೆ. ಒಂದೊಂದೂ ಕೆಲವು ಸಿದ್ಧಾಂತಗಳನ್ನು ಮಂಡಿಸಿ ಆ ಸಿದ್ಧಾಂತದಲ್ಲಿ ನಂಬಿಕೆಯಿಡಬೇಕೆಂದು ಹೇಳುತ್ತದೆ. ಆದ್ದರಿಂದ ಅವು ವರ್ಣಿಸುವ ಅನುಭವಗಳ ನಡುವೆ ಹೊಂದಾಣಿಕೆಯಾಗಲಿ, ಸಮರೂಪತೆಯಾಗಲಿ ಇಲ್ಲ. ಆದರೆ ಹಿಂದೂ ವರ್ಣನೆಯ ಅನುಭವವನ್ನು ಒಂದೇ ರೀತಿಯಾಗಿ ಅವು ವರ್ಣಿಸಿಲ್ಲ. ಇದಕ್ಕೆ ಕಾರಣ ಹೀಗೆ: ಕಾಲಾನುಕಾಲದಿಂದ ಬಂದಿರುವ ಹಿಂದೂ ಧರ್ಮವು ನಿಜವಾಗಿಯೂ ಶ್ರೇಷ್ಠವಾದುದು. ಇತರ ಧರ್ಮಗಳು ಅದರ ಕೆಲವು ಸಿದ್ಧಾಂತಗಳನ್ನು ಆಯ್ಕೆ ಮಾಡಿಕೊಂಡು ತಮ್ಮ ಧರ್ಮದ ಪರಂಪರೆಗಳು ಮತ್ತು ಸಂಪ್ರದಾಯ ಸಂಸ್ಕೃತಿಗಳಿಗನುಗುಣವಾಗಿ ಬೆಳೆಸಿದಂಥವು. ಆದ್ದರಿಂದ ಹಿಂದೂ ಧರ್ಮದಲ್ಲಿ ಅಂತರ್ಗತವಾಗಿರುವ ಸತ್ಯಾಂಶಗಳು ಅನೇಕ ವೇಳೆ ಆ ಇತರ ಧರ್ಮಗಳಲ್ಲಿ ಕಂಡುಬರುತ್ತವೆ. ಹಿಂದೂ ಧರ್ಮ ಮತ್ತು ಹಿಂದೂ ಸಂಸ್ಕೃತಿಗಳು ಒಂದು ವಾಹಿನಿಯಾಗಿ ಅನಾದಿಕಾಲದಿಂದ ಪ್ರವಹಿಸುತ್ತವೆ.

ವ್ಯಕ್ತಿಯು ಸೂರ್ಯೋದಯದಿಂದ ರಾತ್ರಿಯವರೆಗೆ ತೆರಪೇ ಇಲ್ಲದೆ ಆಚರಿಸ ಬೇಕಾದ ಧಾರ್ಮಿಕ ಆಚರಣೆಗಳನ್ನು ನೇಮಗಳನ್ನು ಹಿಂದೂ ಧರ್ಮವು ವಿಧಿಸು ತ್ತದೆ. ಅವುಗಳಲ್ಲಿ ಹಲವು ವಿಸ್ತಾರವಾದ ಯಾಗಗಳು, ದೈವಶಕ್ತಿಗಳಿಗೆ ಅರ್ಪಿಸುವ ಯಜ್ಞಾಹುತಿ ವಿಧಿಗಳು. ಇಂತಹ ಆಚರಣೆಗಳು ಸಾಲದೆಂದು ಶಿಶುವು ಗರ್ಭದಲ್ಲಿ ಬೆಳೆಯುತ್ತಿರುವಾಗಿನಿಂದ ಮೊದಲುಗೊಂಡು ಅದು ಬೆಳೆದು ದೊಡ್ಡದಾಗಿ ಕೊನೆಗೆ ಮರಣವನ್ನಪ್ಪುವವರೆಗೂ ಸೂಕ್ತವಾದ ಧಾರ್ಮಿಕಾಚರಣೆಗಳನ್ನು ವಿಧಿಸಲಾಗಿದೆ. ಅದು ಮುಂದೆ ಉನ್ನತ ಲೋಕಗಳನ್ನು ಸಾಧಿಸುವ ಸಲುವಾಗಿ ಅದಕ್ಕೆ ಹೊಂದು ವಂತಹ ವಿಸ್ತಾರವಾದ ಸಾಧನೆಗಳನ್ನು ನಿರೂಪಿಸಲಾಗಿದೆ. ಬೇರೆ ಯಾವ ಧರ್ಮ ದಲ್ಲಿಯೂ ಬದುಕಿಗೆ ಕಡ್ಡಾಯವಾದ ವಿಸ್ತಾರವಾದ ನಿಯಮಗಳಿಲ್ಲ. ಆದ್ದರಿಂದ

ಎಲ್ಲಾ ಧರ್ಮಗಳೂ ಒಂದೇ ಎಂದು ಘೋಷಿಸುವುದು ಸರಿಯಾಗುವುದಿಲ್ಲ. ಹಿಂದೂ ಧರ್ಮವು ಅನಾದಿಕಾಲದಿಂದಲೇ ಅಂತಹ ಧಾರ್ಮಿಕ ವಿಧಿಗಳ ಮೇಲೆ ಒತ್ತುಹಾಕಿರುವುದರಿಂದ, ಇತರ ಧರ್ಮಗಳು ಅವುಗಳಲ್ಲಿ ಒಂದೆರಡನ್ನೋ ಹಲವನ್ನೋ ಅಳವಡಿಸಿಕೊಂಡಿರಬಹುದು.

ಈ ಕರ್ಮ ಅಥವಾ ಧಾರ್ಮಿಕಾಚರಣೆಯ ಒತ್ತಡದ ಕಾರ್ಯಕ್ರಮವನ್ನು ನಿರ್ವಹಿಸಲು ವ್ಯಕ್ತಿಗೆ ಭಕ್ತಿ, ಜ್ಞಾನ, ಯೋಗಗಳು ಇರಬೇಕು. ಧರ್ಮವೃಕ್ಷಕ್ಕೆ ಭಕ್ತಿಯು ನೀರುಣಿಸುತ್ತದೆ; ವಿರಕ್ತಿ ಮೊದಲಾದ ಸದ್ಗುಣಗಳು ಅದರ ಎಲೆಗಳು ಮತ್ತು ಹೂವುಗಳು; ಜ್ಞಾನವೇ ಹಣ್ಣು. ಬೆಳವಣಿಗೆಯ ಈ ಹಂತಗಳಲ್ಲಿ ಯಾವುದೇ ತಡೆ ಅಥವಾ ಕೊರತೆ ಉಂಟಾದ ಪಕ್ಷದಲ್ಲಿ, ಅಂದರೆ ಯಾವುದಾದರೂ ನಿಯಮವನ್ನು ತಪ್ಪಿದರೆ, ಮರವು ಕೊಡುವ ಜ್ಞಾನ ಫಲದಲ್ಲಿ ದೋಷವುಂಟಾಗುತ್ತದೆ.

ಆಧ್ಯಾತ್ಮಿಕ ಪ್ರಗತಿಗೆ ಹೀಗೆ ಕಡ್ಡಾಯವಾದ ಯೋಜನೆಗಳನ್ನು ಹಿಂದೂ ಧರ್ಮದಲ್ಲಿ ಮಾತ್ರ ನೋಡಬಹುದು; ಬೇರೆ ಯಾವುದೇ ಧರ್ಮದಲ್ಲಿ ಅವು ಕಾಣಿಸುವುದಿಲ್ಲ. ಏಕೆಂದರೆ ಹಿಂದೂ ಧರ್ಮವು ಅಮೃತವಿದ್ದ ಹಾಗೆ. ಪ್ರಾಚೀನ ಋಷಿಗಳು ತಮ್ಮ ನೈಜ ಅನುಭವವನ್ನು ಮಥಿಸಿ ಅದನ್ನು ರೂಪಿಸಿದ್ದಾರೆ; ಪುಸ್ತಕಗಳಲ್ಲಿರುವ ವಿಷಯಗಳಿಂದ ಕ್ರೋಡೀಕರಿಸಿದ್ದಲ್ಲ.

ಯಾರಿಗೇ ಆದರೂ ತನಗೆ ತುಂಬಾ ಹಿತವೆನಿಸುವ ಯಾವುದೋ ಒಂದು ಧರ್ಮವನ್ನು ಅನುಸರಿಸುವುದು ಉಚಿತವಲ್ಲ. ಏಕೆಂದರೆ ಅವರು ಈ ಬದುಕು ಮೂರು ದಿನಗಳದ್ದು ಮಾತ್ರ ಎಂದು ಭಾವಿಸಿ ಅದಕ್ಕೆ ನೈತಿಕತೆ, ಆತ್ಮ ಸಂಯಮಗಳ ಅಗತ್ಯವಿದೆ ಎಂದು ಭಾವಿಸುತ್ತಾರೆ. ಜೀವನ ಎನ್ನುವುದು ಕಾಲದುದ್ದಕ್ಕೂ ಮಾಡುವ ತುಂಬ ದೀರ್ಘವಾದ ಪ್ರಯಾಣ; ಧರ್ಮವು ವರ್ತಮಾನಕ್ಕೆ ಅಗತ್ಯವಾದ ಶಾಂತಿಯನ್ನೂ ಭವಿಷ್ಯತ್ತಿಗೆ ಅಗತ್ಯವಾದ ಪ್ರೋತ್ಸಾಹವನ್ನೂ ನೀಡುತ್ತದೆ. ಈಗ ನಾವು ಹಿಂದೆ ಮಾಡಿದ ಕರ್ಮಗಳ ಪರಿಣಾಮಗಳನ್ನು ಅನುಭವಿಸುತ್ತಿದ್ದೇವೆ ಎಂದು ನಂಬಬೇಕು.

ಜನರು ಪ್ರಸ್ತುತ ತಮ್ಮ ಪರಿಸ್ಥಿತಿಯ ಬಗೆಗೆ ತೃಪ್ತರಾಗಿರುತ್ತಾರೆ ಎನ್ನುವುದು ಸಮಾಧಾನದ ಸಂಗತಿಯಾಗಿದೆ. ಏಕೆಂದರೆ ತಮ್ಮ ಇಂದಿನ ಪರಿಸ್ಥಿತಿಗೆ ತಾವೇ ಕಾರಣ ಎಂದು ಅವರು ಬಲ್ಲರು. ಇಂದು ಸತ್ಕಾರ್ಯಗಳನ್ನು ಮಾಡಿದರೆ, ಸಂತೋಷಪ್ರದವಾದ ಭವಿಷ್ಯತ್ತನ್ನು ಕಟ್ಟಿಕೊಳ್ಳಬಹುದು ಎಂದು ಅವರು ಬಲ್ಲರು. ಇದು ಒಳ್ಳೆಯ ಪ್ರೋತ್ಸಾಹ. ನೈತಿಕತೆ ಹಾಗೂ ಆತ್ಮಸಂಯಮ, ಈ ಎರಡು

ರೇಖೆಗಳ ಮೇಲೆ ನಡೆದಾಗ ಮಾತ್ರವೇ ಅವಕ್ಕೆ ಬೆಲೆ. ಈ ಎರಡು ಆದರ್ಶಗಳಿಗೆ ಬದ್ಧವಾಗಿರಲು ಪ್ರೋತ್ಸಾಹವೂ ಉತ್ಸಾಹವೂ ಧರ್ಮದಿಂದ ದೊರಕುತ್ತದೆ.

ಧರ್ಮದ ಆದಿಯನ್ನಾಗಲಿ, ಅಂತ್ಯವನ್ನಾಲಿ ನಿರ್ಧರಿಸುವುದು ನಮಗೆ ಸಾಧ್ಯವಿಲ್ಲ. ಹಾಗೆಯೇ ವ್ಯಕ್ತಿ ಅಥವಾ ಜೀವಿಯ ಆದಿಯನ್ನಾಗಲಿ ಅಂತ್ಯವನ್ನಾಗಲಿ ನಿರ್ಧರಿಸುವುದು ಕಷ್ಟ. ಹಿಂದೂ ಧರ್ಮದ ಪ್ರಕಾರ, ಜೀವಿಯು ಕಾಲರಹಿತ. ವರ್ತಮಾನ ಜನ್ಮವೆನ್ನುವುದು ತನ್ನದೇ ಆಲೋಚನೆಗಳು ಮತ್ತು ಕಾರ್ಯಗಳ ಮೂಲಕ ಒಡ್ಡಿದ ಜನ್ಮಗಳ ಸರಣಿಯಲ್ಲಿ ತೀರಾ ಇತ್ತೀಚಿನದು. ಜೀವಿಯು ಭಗವಂತನ ಕೋಪಕ್ಕೋ ಕೃಪೆಗೋ ತುತ್ತಾಗಿ ಈಗ ಬಂದಿರುವುದಿಲ್ಲ. ಪ್ರಸ್ತುತ ಜನ್ಮಕ್ಕೆ ಅವು ಕಾರಣವಲ್ಲ. ಸನಾತನ ಧರ್ಮವು ಹೀಗೆ ಘೋಷಿಸಿದೆ.

ಯಾವುದೇ ಕಾಲದಲ್ಲಿ ಧರ್ಮವು ಖಾಸಗಿ ವಿಷಯವಾಗಲು ಸಾಧ್ಯವಿಲ್ಲ. ಪ್ರತಿಯೊಬ್ಬನ ಮತವೂ ಅವನಲ್ಲೇ ಬೇರುಬಿಟ್ಟಿರುವುದರಿಂದ ಮತ್ತು ತನ್ನ ವಿಶ್ವಾಸವನ್ನು ತನ್ನ ನಡವಳಿಕೆಯಲ್ಲಿ ಕಾರ್ಯಚಟುವಟಿಕೆಗಳಲ್ಲಿ ಅಭಿವ್ಯಕ್ತಪಡಿಸುವುದರಿಂದ ಹಾಗೆ ಹೇಳಲು ಸಾಧ್ಯವಾಗಬಹುದು. ಆದರೆ ಆ ಹೇಳಿಕೆ ಎಲ್ಲಿಯವರೆಗೆ ಸಿಂಧುವಾಗುತ್ತದೆ? ಅನೇಕ ವಿದ್ಯಾವಂರತರೆನಿಸಿಕೊಂಡವರು ತಮ್ಮದೇ ತೃಪ್ತಿಗಾಗಿ ದೇವರಿಲ್ಲ, ಧರ್ಮವಿಲ್ಲ ಅಥವಾ ವರ್ಣವಿಲ್ಲ ಎಂದು ಹೇಳುತ್ತಾರೆ. ಅದು ಸರಿಯಲ್ಲ. ಅನೇಕ ಜನರು ದೇವರಿಲ್ಲ ಎಂಬುದನ್ನು ಸಾರುತ್ತಾರೆ. ಧರ್ಮಗಳಲ್ಲಿ ವ್ಯಕ್ತಿಯ ಕರ್ಮಗಳನ್ನು ಉನ್ನತಿಗೇರಿಸಲು ಹಾಕಿರುವ ತಕ್ಕ ನಿರ್ದೇಶನಗಳನ್ನೂ ನಿಯಮ ನಿಬಂಧನೆಗಳನ್ನೂ ಅವರು ಮೂಢನಂಬಿಕೆಗಳೆಂದು ಗೇಲಿ ಮಾಡುತ್ತಾರೆ. ಇವರು ಅಜ್ಞಾನಿಗಳೇನಲ್ಲ, ವಿದ್ಯೆಯಿಲ್ಲದವರೇನಲ್ಲ. ಅಂಥವರು ಧಾರ್ಮಿಕ ನಂಬಿಕೆಗಳನ್ನೂ ಆಚರಣೆಗಳನ್ನೂ ಮೂಢನಂಬಿಕೆಗಳೆಂದು ಹೇಳಿದರೆ ಅವರ ಮಾತಿಗೆ ನಾವು ಹೇಗೆ ತಾನೆ ಮಹತ್ವ ಕೊಡಬಹುದು? ಅವರು ತಮ್ಮ ನಂಬಿಕೆಗಳನ್ನು ತಮ್ಮ ಹೃದಯದಲ್ಲೇ ಇಟ್ಟುಕೊಂಡರೆ, ಸಮಾಜವು ಆಕ್ಷೇಪಿಸಬೇಕಾಗಿಲ್ಲ, ಉದಾಹರಣೆಗೆ, ಬ್ರಾಂದಿ, ಸಾರಾಯಿ ಮೊದಲಾದ ಮಾದಕ ಪಾನೀಯಗಳನ್ನು ಯಾರೋ ಇತರರು ಸೇವಿಸುತ್ತಿದ್ದಾರೆ ಎನ್ನೋಣ. ಇದನ್ನು ಅವರ ಸ್ವಂತ ವಿಷಯ ಎಂದು ಸುಮ್ಮನಿರಲು ಸಾಧ್ಯವೇ? ಇತರರು ಆ ಬಗ್ಗೆ ಸಂತೋಷಪಡುತ್ತಾರೆಯೇ? ಅದು ಖಾಸಗಿ ವಿಷಯ ಎಂದು ಎಷ್ಟೇ ಒತ್ತಿ ಹೇಳಿದರೂ ಈ ದುರಭ್ಯಾಸಗಳು ಸಮಾಜವನ್ನು ಸೂಕ್ಷ್ಮವಾಗಿಯೂ ಬಹಿರಂಗವಾಗಿಯೂ ಅನೇಕ ವಿಧಗಳಲ್ಲಿ ಬಾಧಿಸುತ್ತದೆ. ಅವು ತಮ್ಮ ದುಷ್ಪರಿಣಾಮಗಳನ್ನು ತೋರಿಸಿಯೇ ತೀರುತ್ತವೆ. ಜನಸಾಮಾನ್ಯರು ಅಂತಹ ಹಾನಿಕಾರಕ ದುರಭ್ಯಾಸಗಳಲ್ಲಿ ತೊಡಗಿರುವಾಗ ಅಪಾಯವು ಅಷ್ಟೊಂದು ತೀವ್ರ

ವಾಗಿರುವುದಿಲ್ಲ; ಆದರೆ ಸಮಾಜದಲ್ಲಿ ದೊಡ್ಡ ಹೆಸರು ಮಾಡಿರುವ ವ್ಯಕ್ತಿಗಳು ಹಾಗೆ ಮಾಡಿದರೆ ಜನ ಸಾಮಾನ್ಯನೂ ಅದೇ ದುಷ್ಟಮಾರ್ಗವನ್ನು ಅನುಸರಿಸುತ್ತಾನೆ.

ವ್ಯಾಸ ಮತ್ತು ವಾಲ್ಮೀಕಿಯರ ಕೃತಿಗಳು ಬಹು ಪ್ರಾಚೀನವಾದುವು. ಅಂತಹ ಬರವಣಿಗೆಗಳನ್ನು ಪುರಾಣಗಳೆಂದು ಕರೆಯುವುದು ಉಚಿತವಾಗಿರುತ್ತದೆ. ಆದರೆ ಅವು ರಚಿತವಾಗಿ ಶತಮಾನಗಳೇ ಕಳೆದುಹೋಗಿದ್ದರೂ ಕಾಲವು ಅವುಗಳ ಮೇಲೆ ಯಾವ ದುಷ್ಪರಿಣಾಮವನ್ನೂ ಬೀರಿಲ್ಲ. ಇಲ್ಲವಾಗಿದ್ದರೆ ಹಿಮಾಲಯದಿಂದ ಸೇತುವಿನವರೆಗೆ ದೇಶದಾದ್ಯಂತ ಜನರು ಇಂದಿಗೂ ಅವುಗಳನ್ನು ಪ್ರೀತಿಸುತ್ತಿರಲಿಲ್ಲ, ಅಗತ್ಯವೆಂದು ಕೇಳುತ್ತಿರಲಿಲ್ಲ. ಅವುಗಳ ಪಠ್ಯವು ಎಂದಿಗೂ ನವೋಲ್ಲಾಸಭರಿತ ವಾದುವು. ಉರುಳುವ ಕಾಲವು ಅವುಗಳನ್ನು ಏನೂ ಮಾಡಲಾರದು. ಎಲ್ಲೇ ಆಗಲಿ, ಯಾವಾಗಲೇ ಆಗಲಿ ಆನಂದ ಬೇಕೆಂದು ಬಯಸುವ ವ್ಯಕ್ತಿಯು ಅವುಗಳಲ್ಲಿ ತಲ್ಲೀನವಾಗಬೇಕು.

ಮನುಧರ್ಮಶಾಸ್ತ್ರವು ವಿಶಿಷ್ಟವಾದ ಕೃತಿ. ಇಡೀ ಇತಿಹಾಸದಲ್ಲಿ ಯಾವುದೇ ದೇಶದಲ್ಲಾಗಲಿ ಅದನ್ನು ಹೋಲುವಂತಹ ಇನ್ನೊಂದು ಕೃತಿ ಕಾಣಿಸುವುದಿಲ್ಲ. ಯಾವುದೇ ಕಾಲದಲ್ಲಾದರೂ ಅಂತಹ ಇನ್ನೊಂದು ಕೃತಿಯನ್ನು ಯಾರಾದರೂ ರಚಿಸಲು ಸಾಧ್ಯವೇನು? ಹಿಂದೂ ಧರ್ಮದ ತತ್ತ್ವಗಳೂ ಅವುಗಳನ್ನು ಒಳಗೊಂಡಿ ರುವ ಶಾಸ್ತ್ರಗಳೂ ಭೌತಿಕ ವಿಜ್ಞಾನಗಳಿಗೆ ಮನ್ನಣೆ ನೀಡುವುದಿಲ್ಲ. ಈ ವಿಜ್ಞಾನಿಗಳು ದಿನದಿಂದ ದಿನಕ್ಕೆ ಪ್ರಗತಿ ಹೊಂದುತ್ತಿರುತ್ತವೆ. ಒಂದು ದಿನ ಮನ್ನಣೆ ಪಡೆದ ತತ್ತ್ವಗಳು ಮರುದಿನ ತಿರಸ್ಕೃತವಾಗುತ್ತವೆ. ಅದೇ ಸಂಭವವನ್ನು ವಿವರಿಸಲು ಹೊಸ ಸಿದ್ಧಾಂತಗಳನ್ನು ಮಂಡಿಸಲಾಗುತ್ತದೆ. ಹಾಗಿರುವಾಗ ಶಾಶ್ವತವೂ ನಿತ್ಯವೂ ಆದ ಆಧ್ಯಾತ್ಮ ಸತ್ಯಗಳು ಭೌತವಿಜ್ಞಾನಗಳನ್ನು ಹೇಗೆ ತಾನೆ ಮಾನ್ಯ ಮಾಡಿಯಾವು? ಇಂದಿನ ವಿಜ್ಞಾನಿಗಳು ಆ ನಿತ್ಯ ಸತ್ಯಗಳನ್ನು ಕುರುಡು ನಂಬಿಕೆ ಎಂದು ಕರೆಯುತ್ತಾರೆ, ಅವುಗಳನ್ನು ತೊರೆಯಲು ಬಯಸುತ್ತಾರೆ. ಪ್ರತಿಯೊಂದು ವ್ಯಕ್ತಿನಿಷ್ಠ ಹಾಗೂ ವಸ್ತುನಿಷ್ಠ ವಿಚಾರಗಳನ್ನು ಒರೆಗೆ ಹಚ್ಚಿ ಕಟ್ಟುನಿಟ್ಟಾದ ಪರೀಕ್ಷೆಗೆ ಒಳಪಡಿಸಬೇಕು. ಇದು ಸತ್ಯದ ಸಂಶೋಧನೆಗೆ ಸ್ವತಂತ್ರವಾದ ದಾರಿ ಎಂದು ಪರಿಗಣಿಸಿದ್ದೇ ಆದರೆ ಅವರು ಬಹುವಾಗಿ ಗೊಂದಲಕ್ಕೀಡಾಗುತ್ತಾರೆ. ಅದು ಸರಿಯಲ್ಲ. ಹೊಸ ಹೊಸ ಸಿದ್ಧಾಂತಗಳನ್ನು ಅಗೆದು ತೆಗೆದು ಮುಂದಿಡಬೇಕಾದ ಅಗತ್ಯವೇನಿಲ್ಲ. ಪ್ರತಿಯೊಂದು ತತ್ತ್ವವೂ ಮಾರ್ಗವೂ ಆಗಲೇ ಲಭ್ಯವಾಗಿದೆ. ನಾವು ಅದನ್ನು ಅರಿಯಬೇಕು ಅಷ್ಟೆ.

ಕ್ಯಾಂಟನಿಂದ ಮೊದಲು ಸ್ಪೆನ್ಸರನವರೆಗೆ ಪಾಶ್ಚಾತ್ಯ ತತ್ತ್ವಶಾಸ್ತ್ರಜ್ಞರು ದ್ವೈತ, ಅದ್ವೈತ ಮತ್ತು ವಿಶಿಷ್ಟಾದ್ವೈತ ಪಂಥಗಳ ಕೆಲವು ಮುಖಗಳನ್ನು ಮಾತ್ರ ಪರಿಶೀಲಿಸಿದ್ದಾರೆ. ಹಿಂದೂಗಳು ಬಹಳ ಪ್ರಾಚೀನ ಕಾಲದಲ್ಲೇ ಈ ವಿಚಾರವಾಗಿ ಅನುಭವ ಪಡೆದು, ತಮ್ಮ ಅರಿವನ್ನು ಸಿದ್ಧಾಂತಗಳಾಗಿ, ತತ್ತ್ವಗಳಾಗಿ ರೂಪಿಸಿದ್ದಾರೆ.

ಅಧ್ಯಾಯ ೧೭

# ವರ್ಣ ಮತ್ತು ಜಾತಿ?

ಹಿಂದೂ ಧರ್ಮವೂ ಅದರ ಜೀವನ ನಿಯಮಗಳೂ ವರ್ಣ ಮತ್ತು ಆಶ್ರಮಗಳ ಮೇಲೆ ನಿಂತಿವೆ. ಮೊದಲು ಧರ್ಮದಲ್ಲಿ ವರ್ಣ ತತ್ತ್ವವು ಹೇಗಿದೆ ಎಂಬುದನ್ನು ಪರಿಶೀಲಿಸೋಣ. ವೇದಾಂತ ಚರ್ಚೆಗಳಲ್ಲಿ ಉಪಯೋಗಿಸುವ ಮಾಯೆ ಎಂಬ ಪದವು ಸಾಮಾನ್ಯವಾಗಿ ಅಲಕ್ಷ್ಯ ಮತ್ತು ಟೀಕೆಗಳಿಗೆ ಗುರಿಯಾಗುತ್ತದೆ. ವರ್ಣವೂ ಹಾಗೆಯೆ. ವರ್ಣ ಮತ್ತು ಅದರ ಮೇಲೆ ಆಧಾರಗೊಂಡ ವ್ಯತ್ಯಾಸಗಳು ಮಾನವ ಸೃಷ್ಟಿ ಎಂದು ತಿರಸ್ಕರಿಸಲಾಗುತ್ತದೆ. ಮಾಯೆಯನ್ನು ಹಾಗೆಯೆ ಎಲ್ಲ ತರ್ಕಕ್ಕೆ ವಿರುದ್ಧವಾಗಿ ತಿರಸ್ಕರಿಸಲಾಗುತ್ತದೆ. ಏಕೆಂದರೆ ಅದು ಜಗತ್ತನ್ನು ಮಿಥ್ಯೆ ಎಂದು ಕರೆದು ಅದು ನಿರಾಕರಿಸುತ್ತದೆ. ಸ್ಮೃತಿಯು ಘೋಷಿಸುತ್ತದೆ, "ಚಾತುರ್ವರ್ಣ್ಯಂ ಮಯಾಸೃಷ್ಟಂ (ನಾಲ್ಕು ವರ್ಣಗಳನ್ನು ನಾನು ಸೃಷ್ಟಿಸಿದ್ದೇನೆ)." ಶ್ರುತಿಯು, "ಬ್ರಾಹ್ಮಣೋಸ್ಯ ಮುಖಮಾಸೀತ್, ಬಾಹೂರಾಜನ್ಯ ಕೃತಃ (ಬ್ರಾಹ್ಮಣನು ಮುಖದಿಂದ ಜನಿಸಿದನು, ಕ್ಷತ್ರಿಯರು ತೋಳುಗಳಿಂದ ಮೂಡಿದರು)," ಎಂದು ಹೇಳುತ್ತದೆ. ವರ್ಣವನ್ನು ಭಗವಂತನು ಸೃಷ್ಟಿಸಿದನೆಂಬುದು ಸ್ಪಷ್ಟವಾಗಿದೆ. ವರ್ಣ ವ್ಯವಸ್ಥೆಯು ಬಹು ಅಪಾಯಕಾರಿ ಪ್ರತ್ಯೇಕತೆಗಳನ್ನು ಉಂಟುಮಾಡಿದೆ ಎಂದು ಹೇಳಿದರೆ, ದೋಷವಿರುವುದು ಆ ಪದವನ್ನು ತಪ್ಪಾಗಿ ವ್ಯಾಖ್ಯಾನ ಮಾಡಿರುವುದರಲ್ಲಿ.

ಈಗ ಸಮಾಜದಲ್ಲಿ ನಿಜವಾದ ವರ್ಣವ್ಯವಸ್ಥೆಯಿದೆಯೆ? ವರ್ಣ ಎಂದರೆ ಸರಿಯಾಗಿ ಏನು? ಅದನ್ನು ಕಂಡು ಹಿಡಿಯಲು ಪ್ರಯತ್ನ ಮಾಡಲಾಗಿದೆಯೇ? ಇಲ್ಲ. ವರ್ಣವೆನ್ನುವುದು ಕೇವಲ ಒಂದು ಪದ; ಪ್ರತಿಯೊಂದು ಪದಕ್ಕೂ ಅರ್ಥವಿದೆ. ವರ್ಣ ಎಂಬ ಪದವೂ ಏನಾದರೂ ಅರ್ಥ ಕೊಡಲೇಬೇಕು, ಅಲ್ಲವೆ? ಮರಗಳಿವೆ ಎಂದು ಸಮರ್ಥಿಸಲು ಮರ ಎಂಬ ಪದ ಸಾಕು. ಪದವು ಒಂದು ಧ್ವನಿ, ಆದರೆ ಅದು ಅಸ್ತಿತ್ವದಲ್ಲಿರುವ ಏನನ್ನಾದರೂ ಸೂಚಿಸುತ್ತದೆ. ಆನೆ ಎಂಬ ಪದವು ಆ ಪ್ರಾಣಿಯು ಇರುವುದಕ್ಕೆ ಸಮರ್ಥನೆಯಾಗಿದೆ. ಹಾಗೆಯೆ ಬೆಕ್ಕು, ನಾಯಿ, ನರಿ ಎಂಬ ಶಬ್ದಗಳನ್ನು ಕೇಳಿದಾಗ ಮನಸ್ಸಿನ ಕಣ್ಣೆದುರಿಗೆ ಆಯಾ ಪ್ರಾಣಿಗಳ ರೂಪಗಳು ಕಾಣಿಸಿಕೊಳ್ಳುತ್ತವೆ. ಶಬ್ದಗಳು ನಮಗಿಂತಲೂ ಮುಂಚಿನಿಂದಲೇ ಇದ್ದುವು. ನಾವು ಶಬ್ದಗಳ ತೊಡರಿನಲ್ಲೇ ಹುಟ್ಟಿದೆವು. ನಾವು ಅವುಗಳನ್ನು ಸೃಷ್ಟಿಸಲಿಲ್ಲ. ಶಬ್ದವನ್ನು

ಸೃಷ್ಟಿಸಿ ಅದನ್ನು ಒಂದು ಅರ್ಥಪೂರ್ಣವಾದ ಪದವನ್ನಾಗಿ ರೂಪಿಸಲು ಜನರು ಮತ್ತು ವಸ್ತುಗಳು ಅಗತ್ಯ. ಆದ್ದರಿಂದ ಪ್ರಚಲಿತವಾಗಿರುವ ಪ್ರತಿಯೊಂದು ಪದಕ್ಕೂ ಒಂದು ಅರ್ಥವು ಜೋಡಿಸಿಕೊಂಡಿರಲೇಬೇಕು. ನಮಗೆ ಇಷ್ಟ ಬಂದ ಅರ್ಥವನ್ನು ಅದರ ಮೇಲೆ ಹೇರಲು ಸಾಧ್ಯವಿಲ್ಲ. ನಾವು ಹುಟ್ಟುವುದಕ್ಕಿಂತಲೂ ಮೊದಲಿನಿಂದಲೇ ನಿರ್ದಿಷ್ಟ ಅರ್ಥಗಳನ್ನೊಳಗೊಂಡ ಪದಗಳಿವೆ. ಯಾವುದು ಬೇಕೋ ಅದನ್ನು ಯಾವಾಗ ಬೇಕೋ ಆಗ ನಾವು ಉಪಯೋಗಿಸುತ್ತೇವೆ ಅಷ್ಟೆ.

ಶಬ್ದಕ್ಕೆ ಮಾತು ಬೇಕು. ಸಂಸ್ಕೃತದಲ್ಲಿ ಅದನ್ನು ಪದ ಎನ್ನುತ್ತಾರೆ. ಜಗತ್ತಿನ ಪ್ರತಿಯೊಂದು ವಸ್ತುವನ್ನು ಪದ ಅರ್ಥ (ಶಬ್ದ ಅರ್ಥ) ಎಂದು ಕರೆಯುತ್ತಾರೆ. ಬೆಟ್ಟವೆನ್ನುವುದು ಮಣ್ಣಿನ ದೊಡ್ಡ ರಾಶಿ; ಬೆಟ್ಟ ಎಂಬ ಪದದಿಂದ ಸೂಚಿತವಾಗುತ್ತದೆ. ಹಾಗೆಯೇ ಬ್ರಾಹ್ಮಣ ಮತ್ತು ಶೂದ್ರ ಎಂಬ ಪದಗಳು ಆ ಅರ್ಥವನ್ನು ಕೊಡುವ ಜನರಿದ್ದರು ಎಂಬುದನ್ನು ತಿಳಿಸುತ್ತವೆ. "ಬ್ರಾಹ್ಮಣ ಯಾರು? ಬ್ರಾಹ್ಮಣ ಅಲ್ಲದವನು ಯಾರು?" ಎಂಬ ಪ್ರಶ್ನೆಗಳು ಈಗ ಅಸಂಗತ. ಈಗ ತಿಳಿದುಕೊಳ್ಳಬೇಕಾಗಿರುವುದು ಪದ ಮತ್ತು ಅರ್ಥದ ಕಲ್ಪನೆಗಳನ್ನು. ಪದ ಮತ್ತು ಅರ್ಥಗಳಲ್ಲಿ ಇಡೀ ಬ್ರಹ್ಮಾಂಡವೇ ಅಡಗಿದೆ. ಅದು ಕೇವಲ ನಾಮ ಮತ್ತು ರೂಪ (ನಾಮವು ಪದ, ರೂಪವು ಅದರ ಅರ್ಥ).

ಶ್ರುತಿಗಳು ಹೇಳುತ್ತವೆ: "ವಾಚಾರಂಭಣಂ ವಿಕಾರೋ ನಾಮಧೇಯಂ (ನಾಮ ರೂಪಗಳು ಒಂದು ಅಖಂಡ ಘಟಕವಾಗಿವೆ)." ಶಿವ ಪಾರ್ವತಿಯರ ಹಾಗೆ. ಸಕ್ರಿಯ ಮತ್ತು ಜಡ, ವಸ್ತು ಮತ್ತು ಅದರ ಬಿಂಬ, ಚಂದ್ರ ಮತ್ತು ಬೆಳದಿಂಗಳು ಇದ್ದ ಹಾಗೆ. ಆದರೂ ಪ್ರಪಂಚದೊಂದಿಗೆ ವ್ಯವಹರಿಸಲು ಪದವು ಅತ್ಯಂತ ಮುಖ್ಯವಾದುದು. ಪದವು ಆಲೋಚನೆಯಿಂದ ಉದಿಸುತ್ತದೆ; ಅನುಭವವು ಆಲೋಚನೆಯನ್ನು ರೂಪಿಸುತ್ತದೆ, ಅನುಭವವು ಆಸೆಯನ್ನು ಅವಲಂಬಿಸುತ್ತದೆ; ಆಸೆಯಾದರೋ ಅಜ್ಞಾನ, ಮಾಯೆ, ಅವಿದ್ಯೆ ಅಥವಾ ಪ್ರಕೃತಿಯಿಂದ ಉದಿಸುತ್ತದೆ. ಅದೂ ಮೂಲತಃ ದೈವವನ್ನೇ ಆಧಾರಗೊಂಡಿದೆ.

ಅದು ಜ್ಞಾನನಿಧಿಯೂ ಮಹಿಮಾಯುತನೂ ಆದ ಭಗವಂತನನ್ನು ಆಧರಿಸಿರುವುದರಿಂದ ಮಾಯೆ, ಅವಿದ್ಯೆ, ಅಥವಾ ಪ್ರಕೃತಿಯನ್ನು ಗೆಲ್ಲಬಾರದು. ಬೆಳಕಿರುವೆಡೆಯಲ್ಲಿ ಕತ್ತಲೆಗೆ ಸ್ಥಳವಿಲ್ಲ. ಭಗವಂತನು ಘೋಷಿಸಿದನು "ನಾನು ಅನೇಕವಾಗುತ್ತೇನೆ," ಎಂದು. ಆ ದಿವ್ಯ ಸಂಕಲ್ಪವು ವಿಶ್ವದ ಸೃಷ್ಟಿಯಲ್ಲಿ ಪರ್ಯವಸಾನವಾಯಿತು ಮತ್ತು ಎಂದಿನಿಂದಲೂ ಅದೇ ವಿಶ್ವವನ್ನು ನಿರ್ದೇಶಿಸುತ್ತಿದೆ. ಆದ್ದರಿಂದ ನಾಮ ರೂಪಗಳು ಆ ದಿವ್ಯ ಸಂಕಲ್ಪದ ಫಲಗಳು, ಮಾನವೇಚ್ಛೆಯ ಫಲವಲ್ಲ. ತಾನು

ಅವುಗಳನ್ನು ಸೃಷ್ಟಿಸಿದುದಾಗಿ ಮನುಷ್ಯನು ಹೇಳಿಕೊಂಡರೆ ಅದು ಅವಿವೇಕ. ಸರ್ವಶಕ್ತ ಭಗವಂತನು ಅವುಗಳನ್ನು ಸಂಕಲ್ಪಿಸಿದನು. ಆದ್ದರಿಂದಲೇ ಅವನನ್ನು ಸರ್ವೋನ್ನತವೆಂದು ವರ್ಣಿಸುವುದು. ದೇವರಿದ್ದಾನೆಯೆ ಎಂಬ ಪ್ರಶ್ನೆಗೆ ದೇವರು ಎಂಬ ಪದವೇ ನಿರ್ವಿವಾದವಾದ ಸಮರ್ಥನೆ.

ಜಗತ್ತಿನಲ್ಲಿ ಅಸಂಖ್ಯ ವೈವಿಧ್ಯಪೂರ್ಣವಾದ ವಸ್ತುಗಳಿವೆ. ಪ್ರತಿಯೊಂದಕ್ಕೂ ಒಂದು ಹೆಸರಿದೆ. ಈ ನಾಮಗಳು ಈ ವಸ್ತುಗಳೊಂದಿಗೆ ಹೇಗೆ ಸಂಬಂಧಿಸಿದುವು ಮತ್ತು ಏಕೆ ಸಂಬಂಧಿಸಿದುವು ಎಂಬುದನ್ನು ಯಾರೂ ಕಂಡುಹಿಡಿದಿಲ್ಲ. ಈ ಹೇಗೆ ಏಕೆಗಳನ್ನು ವಿವರಿಸುವುದು ಸಾಧ್ಯವೂ ಇಲ್ಲ. ಪ್ರಯತ್ನ ಮಾಡಿದರೂ ಫಲವು ಒಂದು ಊಹೆಯಾಗುತ್ತದೆಯೇ ಹೊರತು ಸತ್ಯವಾಗುವುದಿಲ್ಲ. ಆದ್ದರಿಂದ ಅದು ಭಗವತ್ಸೃಷ್ಟಿ ಎಂದು ನಿರ್ಣಯಿಸುವುದು ಅತ್ಯುತ್ತಮ. ಜನನ ಮತ್ತು ಮರಣಗಳ ನಡುವೆ ಬಳಸುವ, ಅಥವಾ ಜನನ ಪೂರ್ವದಲ್ಲಿಯೋ ಮರಣಾನಂತರವೋ ಚಾಲ್ತಿಯಲ್ಲಿದ್ದ ಪದಗಳು, ತಾಯಿಯನ್ನೂ ಮಕ್ಕಳನ್ನೂ ಸೂಚಿಸುವ ಪದಗಳು, ಧರ್ಮ, ಅಧರ್ಮ, ಸ್ವರ್ಗ, ನರಕ ಇತ್ಯಾದಿ ಪದಗಳು ಖಂಡಿತವಾಗಿಯೂ ಮಾನವ ರಚನೆಯಾಗಿಲ್ಲ; ಭಗವಂತನು ನೀಡಿದಂಥವು. ಈ ಹೇಳಿಕೆಗೆ ವೇದಗಳೇ ಪ್ರಮಾಣ.

ಒಂದು ಅಂಶವನ್ನು ಪರಿಶೀಲಿಸೋಣ. ಈ ಪ್ರಪಂಚದಲ್ಲಿ ಅಥವಾ ಬೇರೆ ಯಾವುದೇ ಸ್ಥಳದಲ್ಲಿ ಅರ್ಥವನ್ನು ಕೊಡದ ಒಂದೇ ಒಂದು ಪದವನ್ನು ಯಾರಾದರೂ ಉಚ್ಚರಿಸಬಲ್ಲರೇನು? ಅದು ಸಾಧ್ಯವೇ ಇಲ್ಲ. ಪ್ರತಿಯೊಂದು ಪದಕ್ಕೂ ಒಂದು ಅರ್ಥವಿದೆ. ಆ ಅರ್ಥವು ಭಗವತ್ಸಂಕಲ್ಪವನ್ನು ಸೂಚಿಸುತ್ತದೆ. ಇದನ್ನು ಜನರು ಪರಿಶೀಲಿಸಿದಾಗ ಜೀವನದ ರಹಸ್ಯವನ್ನು ಅವರು ಗ್ರಹಿಸಬಲ್ಲರು.

ಆದ್ದರಿಂದ ಬ್ರಾಹ್ಮಣನು ಮುಖದಿಂದ ಜನಿಸಿದನು ಎಂದೋ ನಾಲ್ಕು ವರ್ಣಗಳನ್ನು ನಾನು ಸೃಷ್ಟಿಸಿದೆನು ಎಂದೋ ಹೇಳಿದಾಗ ವರ್ಣಗಳು ಇದ್ದುವು ಎಂದೂ ಆ ಪದದ ಮಾದರಿಗಳು ಅಥವಾ ಪ್ರತಿನಿಧಿಗಳೆಂದು ವರ್ಣಿಸಬಹುದಾದ ವ್ಯಕ್ತಿಗಳಿದ್ದರು ಎಂದೂ ಅರ್ಥವಾಗುತ್ತದಲ್ಲವೆ? ಅವರನ್ನು ಸೃಷ್ಟಿಸಿದ ಭಗವಂತನೇ ಪ್ರವೃತ್ತಿಗಳು ಮತ್ತು ಕರ್ಮಗಳಿಗೆ ಹೊಂದುವಂತೆ ವರ್ಣಗಳಾಗಿ ವರ್ಗೀಕರಿಸಿದನು ಎಂದೂ ಇದರಿಂದ ಗೊತ್ತಾಗುತ್ತದಲ್ಲವೆ?

ಆದ್ದರಿಂದ ಆಳವಾಗಿ ವಿಚಾರ ಮಾಡಿದರೆ ಮತ್ತು ಅದರ ಮೇಲೆ ಶುದ್ಧವಾದ ಆಲೋಚನೆಯನ್ನು ಹಾಯಿಸಿದರೆ ವರ್ಣ ಎಂಬ ಪದದ ಅರ್ಥಗಳೆಲ್ಲವೂ ಮನವರಿಕೆಯಾಗುತ್ತವೆ. ವರ್ಣ ಎಂಬ ಪದಕ್ಕೆ ಜನರಲ್ಲಿ ಅತ್ಯಂತ ಸಾಧಾರಣವಾಗಿ

ಎಲ್ಲೆಲ್ಲೂ ಪ್ರಚಲಿತವಾಗಿರುವ ಅರ್ಥ ಬಣ್ಣ ಎಂದು. ಆದರೆ ಈ ಪದಕ್ಕೆ ಆ ಅರ್ಥವು ಹೇಗೆ ಜೋಡಿಸಿಕೊಂಡಿತು ಎನ್ನುವುದು ಅನೇಕರಿಗೆ ತಿಳಿಯದು. ಪದದ ನಿಜವಾದ ಅರ್ಥ ಮಹತ್ವ ತಿಳಿಯಬೇಕಾದರೆ ಇದು ಗೊತ್ತಾಗಬೇಕು. ವರ್ಣ ಎಂಬ ಪದದಲ್ಲಿರುವ ವೃ ಎಂಬ ಮೂಲಕ್ಕೆ ಪ್ರಕೃತಿ ವರ್ಣನೆ, ವಿಸ್ತರಣ, ಎಣಿಕೆಯ ಕ್ರಿಯೆ ಎಂದೆಲ್ಲ ಅರ್ಥಗಳಿವೆ. ರ್, ರ್ಣ ಎಂಬ ಧಾತುಗಳು ರಮಣ ಎಂಬಂತಹ ಪದಗಳಿಗೆ ಮೂಲವಾಗಿವೆ. ಸಂತೋಷ, ಸುಖ ಎಂದು ಅವಕ್ಕೆ ಅರ್ಥ. ಆದ್ದರಿಂದ ವರ್ಣ ಎನ್ನುವುದು ವಿಸ್ತಾರವಾಗಿ ಪರಿಶೀಲಿಸಿದ ಅನಂತರ ಒಪ್ಪಿಕೊಳ್ಳುವುದು ಎಂದು ಅರ್ಥಕೊಡುತ್ತದೆ.

ಇನ್ನು ಬಣ್ಣವನ್ನು ಕುರಿತು ಹೇಳುವುದಾದರೆ ಬಿಳುಪು, ಕಪ್ಪು ಮತ್ತು ಕೆಂಪು ಮೂಲವರ್ಣಗಳು. ಮಿಕ್ಕ ಬಣ್ಣಗಳೆಲ್ಲವೂ ಅವುಗಳ ಉತ್ಪನ್ನಗಳು. ಬಿಳುಪು ಸಾತ್ವಿಕ ಮನೋಧರ್ಮವನ್ನು ಸೂಚಿಸುತ್ತದೆ, ಕೆಂಪು ರಾಜಸಿಕ ಪ್ರವೃತ್ತಿಯನ್ನು, ಕಪ್ಪು ತಾಮಸಿಕ ಪ್ರವೃತ್ತಿಯನ್ನು ಸೂಚಿಸುತ್ತವೆ. ಸೃಷ್ಟಿಯ ರಹಸ್ಯ ಇದು. ವ್ಯಕ್ತಿಗಳು ತಾವು ಮೆಚ್ಚುವ, ಬಯಸುವ, ಅಳವಡಿಸಿಕೊಳ್ಳುವ ಪ್ರವೃತ್ತಿಗಳಿಗನುಗುಣವಾಗಿ ಜನಿಸುತ್ತಾರೆ. ಆದ್ದರಿಂದ ಜನರು ಯಾವ ವರ್ಣದಲ್ಲಿ ಜನಿಸುತ್ತಾರೆನ್ನುವುದನ್ನು ಅವರೇ ನಿರ್ಣಯಿಸಿಕೊಳ್ಳುತ್ತಾರೆ. ಬೇರೆ ಯಾವುದೇ ಹೊರಗಿನ ಅಧಿಕಾರವು ಅದನ್ನು ನಿರ್ಧರಿಸುವುದಿಲ್ಲ. ಯಾವ ಪ್ರವೃತ್ತಿಯನ್ನು ಅವರು ಆರಿಸಿಕೊಳ್ಳುತ್ತಾರೆ ಎನ್ನುವುದು ಅವರ ಬೌದ್ಧಿಕಮಟ್ಟವನ್ನು ಅವಲಂಬಿಸಿದೆ. ಆಸೆಗಳು ಬುದ್ಧಿಯನ್ನು ರೂಪಿಸುತ್ತವೆ ಎಂದು ಸಾಮಾನ್ಯವಾಗಿ ನಂಬಲಾಗುತ್ತದೆ. ಬುದ್ಧಿಯು ಕರ್ಮ ಗಳನ್ನು ರೂಪಿಸುತ್ತದೆ, ಕರ್ಮಗಳು ಬದುಕಿನ ಲಕ್ಷಣವನ್ನೂ ಸ್ವರೂಪವನ್ನೂ ನಿರ್ಧರಿಸುತ್ತವೆ. ಗುಣಕರ್ಮ ವಿಭಾಗಶಃ ಎಂಬ ಉಕ್ತಿಯ ಸರಿಯಾದ ವಿವರಣೆ ಇದೇಯೆ. ಶ್ರುತಿ ಸ್ಮೃತಿಗಳು ಅಷ್ಟು ವಿಸ್ತಾರವಾಗಿ ನಿರ್ದಿಷ್ಟ ಜಾತಿ, ಧರ್ಮ, ಕುಟುಂಬ ಮತ್ತು ಸಮುದಾಯಗಳಲ್ಲಿ ವ್ಯಕ್ತಿಯ ಜನನ, ಜೀವನ, ಮತ್ತು ಮರಣ ಕಾರ ಣಗಳನ್ನು ಹೇಳಿದ್ದರೂ ಅವುಗಳನ್ನು ಅರ್ಥ ಮಾಡಿಕೊಳ್ಳಲಾಗದ ಜನರು ತಮ್ಮದೇ ಸೀಮಿತ ಬುದ್ಧಿಗನುಗುಣವಾಗಿ ಸಿದ್ಧಾಂತಗಳನ್ನು ರೂಪಿಸುತ್ತಾರೆ, ಅವುಗಳಿಂದ ತೃಪ್ತಿ ಪಡೆಯುತ್ತಾರೆ.

ಇದು ಕೇವಲ ಅಜ್ಞಾನವಲ್ಲದೆ ಮತ್ತೇನು? ಅಥವಾ ತಮಗೆ ಎಲ್ಲವೂ ತಿಳಿದಿದೆ ಎಂಬ ಅಹಂಕಾರವಿರಬಹುದು. ಏಕೆಂದರೆ ಅಹಂಕಾರವೇ ಅಜ್ಞಾನದ ಸಂತಾನ ತಾನೆ? ಜಾತಿ, ಸಾಮಾಜಿಕ ಸ್ಥಾನಮಾನ, ಕುಟುಂಬ, ಕೊನೆಗೆ ಧರ್ಮ ಇವೆಲ್ಲವನ್ನೂ ಗುಣ ಮತ್ತು ಕರ್ಮಗಳು ನಿರ್ಧರಿಸುತ್ತವೆ. ಅವು ಮಾನವನ ಗಣಿತಕ್ಕೆ ನಿಲುಕುವುದಿಲ್ಲ.

ವೇದಗಳೇ ಹಾಗೆಂದು ಹೇಳುತ್ತವೆ. ಭಗವಂತನ ದಿವ್ಯ ಸಂಕಲ್ಪವು ಹಾಗೆ ನಿರ್ಧರಿಸಿದೆ ಎಂದು ಅವು ಸಾರುತ್ತವೆ.

ಭಾರತವನ್ನು ಕರ್ಮಭೂಮಿ, ಕರ್ಮಕ್ಷೇತ್ರ, ಭಗವತ್ಪರ ಚಟುವಟಿಕೆಯ ಪವಿತ್ರ ಭೂಮಿ ಎಂದು ಕರೆಯಲಾಗಿದೆ. ಎಲ್ಲಾ ಕಡೆಯ ಎಲ್ಲಾ ಜನರೂ ಭಗವತ್ಪರ ಚಟುವಟಿಕೆಯ ಪವಿತ್ರ ನಾಡಿನ ಕಡೆಗೆ ನಡೆದುಬರುತ್ತಿರುವ ಯಾತ್ರಿಗಳು. ಕರ್ಮವು ಭಾರತದ ಸರ್ವಸ್ವವೂ ಆಗಿದೆ. ಅದು ಕರ್ಮ ದೈವತ್ವವನ್ನು ಮುಂದಿಡುತ್ತದೆ, ಸಮಸ್ತ ಕರ್ಮವನ್ನೂ ಆಧ್ಯಾತ್ಮಿಕ ಸಾಧನೆಯಾಗಿ ತಿರುಗಿಸುತ್ತದೆ. ಭಾರತಕ್ಕೆ ಪ್ರಶಂಸಾರೂಪವಾಗಿ ಸಂದಿರುವ ಆ ಹೆಸರುಗಳಿಗೆ ಇದೇ ಕಾರಣ.

ಈ ನಾಡಿನ ಪವಿತ್ರ ಗ್ರಂಥಗಳು (ಶ್ರುತಿ), ವ್ಯಕ್ತಿಯು ತಾನೇ ತನ್ನ ವಿಧಿಯ ಶಿಲ್ಪಿ ಎಂದು ಘಂಟಾಘೋಷವಾಗಿ ಸಾರುತ್ತವೆ. ಸಮಾಜದಲ್ಲಿ ಮೇಲಿನ ಅಥವಾ ಕೆಳಗಿನ ಸ್ಥಾನ, ಸಿರಿತನ ಅಥವಾ ಬಡತನ ಇವೆಲ್ಲಕ್ಕೂ ಅವನೇ ಕಾರಣ. ಶ್ರುತಿಯು ಹೀಗೆಂದು ಸಾರುತ್ತದೆ, "ಸ ಯಥಾ ಕ್ರತುರಸ್ಮಿನ್ ಲೋಕೇ ಪುರುಷೋ ಭವತಿ ತಥೇ ತಃ ಪ್ರತ್ಯೇ ಭವತಿ (ಈಗ ಈ ಜಗತ್ತಿನಲ್ಲಿ ಜೀವಿಸಿರುವಾಗ ವ್ಯಕ್ತಿಯು ಯಾವ ರೂಪಕ್ಕಾಗಿ ಹಂಬಲಿಸುತ್ತಾನೆಯೋ ಅದೇ ರೂಪವನ್ನು ಮರಣಾ ನಂತರ ಅವನು ಪಡೆಯುತ್ತಾನೆ)." ಆದ್ದರಿಂದ ಕರ್ಮವು ಜನ್ಮವನ್ನು ನಿರ್ಧರಿಸುತ್ತದೆ ಎಂಬುದು ಸ್ಪಷ್ಟವಾಗುತ್ತದೆ. ಸಿರಿತನ ಬಡತನ ಸಚ್ಚಾರಿತ್ರ್ಯ ಮತ್ತು ಮನೋಧರ್ಮ, ಬುದ್ಧಿಯ ಮಟ್ಟ, ಈ ಜನ್ಮದ ಸಂತೋಷ ದುಃಖಗಳು ಇವೆಲ್ಲ ಹಿಂದಿನ ಜನ್ಮಗಳಲ್ಲಿ ಸಂಗ್ರಹಸಿಕೊಂಡ ಸಂಪಾದನೆಗಳು. ಆದ್ದರಿಂದ ವ್ಯಕ್ತಿಯ ಮುಂದಿನ ಜನ್ಮವು ಈ ಜನ್ಮದಲ್ಲಿ ಈಗ ಅವನ ಮೇಲೆ ಪ್ರಭುತ್ವ ಮಾಡುವ ಬುದ್ಧಿಯ ಮಟ್ಟದಿಂದ ಪ್ರಚೋದಿತವಾದ ಕರ್ಮಗಳಿಗೆ ಅನುಗುಣವಾಗಿರುತ್ತದೆ ಎಂದು ಊಹಿಸುವುದು ಅನಿವಾರ್ಯವಾಗುತ್ತದೆ. ಕೆಲವು ವ್ಯಕ್ತಿಗಳು ಉದಾತ್ತ ಕುಟುಂಬಗಳಲ್ಲಿ ಜನಿಸಿದ್ದರೂ ದುಷ್ಟ ಕಾರ್ಯಗಳಲ್ಲಿ ತೊಡಗಿರುತ್ತಾರೆ. ಹಾಗೆಯೇ ಕೆಳಮಟ್ಟದವರೆಂದು ಭಾವಿಸುವ ಜಾತಿಗಳಲ್ಲಿ ಹುಟ್ಟಿದವರು ಸತ್ಕಾರ್ಯಗಳಲ್ಲಿ ತೊಡಗಿರುತ್ತಾರೆ. ಇದು ಹೇಗೆ ಸಾಧ್ಯವಾಗುತ್ತದೆ? ಅನೇಕ ವೇಳೆ ಈ ಸಮಸ್ಯೆಯು ನಮ್ಮನ್ನು ಕಾಡುತ್ತದೆ. ಬ್ರಾಹ್ಮಣರಾಗಿ ಜನಿಸಿದವರು ದುಷ್ಟಕಾರ್ಯಗಳಲ್ಲಿ ಪ್ರವೃತ್ತರಾಗಿರುತ್ತಾರೆ, ಅಂದರೆ ರಾಜಸಿಕ ಮತ್ತು ತಾಮಸಿಕ ಹಂತಗಳಿಗೆ ಅವರು ಇಳಿಯುತ್ತಾರೆ. ಕೆಳಜಾತಿಗಳಲ್ಲಿ ಜನಿಸಿದವರು ಸಾತ್ವಿಕ ಹಂತಕ್ಕೆ ಏರಿ ಒಳ್ಳೆಯ ಕೆಲಸಗಳಲ್ಲಿ ನಿರತರಾಗಿರುತ್ತಾರೆ. ಇಲ್ಲಿ ಸೂಚಿಸಿದಂಥವರು ಜನ್ಮಬ್ರಾಹ್ಮಣರೇ ಹೊರತು ಕರ್ಮಬ್ರಾಹ್ಮಣರಲ್ಲ. ಅವರು ಹುಟ್ಟಿನಿಂದ ಮಾತ್ರ ಬ್ರಾಹ್ಮಣರು, ತಮ್ಮ ಕರ್ಮಗಳಿಂದ ಅಲ್ಲ. ಇನ್ನೊಂದು ಗುಂಪಿನವರು ಜನನದಿಂದ ಕೆಳಮಟ್ಟದವರು, ತಮ್ಮ ಕರ್ಮದಿಂದ ಖಂಡಿತವಾ

ಗಿಯೂ ಕೆಳಮಟ್ಟದವರಲ್ಲ. ವೇದಗಳು ಜಾತಿಗಳಲ್ಲಿ ಜನ್ಮ ಮತ್ತು ನಡವಳಿಕೆಗಳೆರಡರ ಸಂಯೋಜನೆಯನ್ನು ಬಯಸುತ್ತವೆ.

ಶುದ್ಧ ಸಾತ್ವಿಕ ಸ್ವಭಾವದ ಜನರು ಈ ಪ್ರಪಂಚದಲ್ಲಿ ಬಹು ವಿರಳ. ಅವರು ಸಾತ್ವಿಕ ಲಕ್ಷಣದ ಬಣ್ಣ ತೊಡೆದುಕೊಂಡ ರಾಜಸಿಕ ಪ್ರವೃತ್ತಿಯವರಾಗಿರುತ್ತಾರೆ. ಇಂಥವರು ಉದಾತ್ತ ಕುಟುಂಬಗಳಲ್ಲಿ ಜನಿಸಿದರೂ ರಾಜಸಿಕ ಕರ್ಮಗಳಲ್ಲಿ ನಿರತರಾಗುತ್ತಾರೆ. ತಮ್ಮ ಕಾರ್ಯ ಚಟುವಟಿಕೆಗಳಿಂದ ತಾವು ಮಿಶ್ರಜಾತಿ ಎಂದು ಅವರು ತೋರಿಸಿಕೊಳ್ಳುತ್ತಾರೆ. ವೇದಗಳು ಇಂತಹ ಮಿಶ್ರವರ್ಣಗಳ ಮಾದರಿಗಳನ್ನೂ ಜಾತಿ ವ್ಯವಸ್ಥೆಯ ಮೇಲೆ ಅದರ ಪರಿಣಾಮಗಳನ್ನೂ ಅಲಕ್ಷಿಸಿಲ್ಲ. ವೇದಗಳು ನಿಷ್ಪಕ್ಷಪಾತವಾದುವು. ಯಾವುದೋ ಒಂದರ ಬಗ್ಗೆ ವಿಶೇಷ ಒಲವಾಗಲಿ, ಇನ್ನೊಂದರ ಬಗೆಗೆ ಪೂರ್ವಗ್ರಹವಾಗಲಿ ಅವುಗಳಿಗಿಲ್ಲ. ಕೆಲವರನ್ನು ಅವು ಉದ್ಧರಿಸಿ ಇನ್ನು ಕೆಲವರನ್ನು ತಿರಸ್ಕರಿಸುವುದಿಲ್ಲ. ಅವು ಸತ್ಯವನ್ನು ಸಾರುತ್ತವೆ ಅಷ್ಟೆ.

ಒಂದು ನಿದರ್ಶನವನ್ನು ನೋಡೋಣ. ಕೌಶಿಕನು ಒಬ್ಬ ಕ್ಷತ್ರಿಯ, ಅಂದರೆ ರಾಜಸಿಕ ಸ್ವಭಾವದ ವ್ಯಕ್ತಿಯಾಗಿದ್ದನು. ಆದರೂ ಹಿಂದಿನ ಜನ್ಮಗಳಲ್ಲಿನ ಅವನ ಕರ್ಮಗಳ ಫಲವಾಗಿ ಸಾತ್ವಿಕ ಪ್ರವೃತ್ತಿಗಳೂ ಮನೋಧರ್ಮಗಳೂ ಅವನ ಪ್ರಜ್ಞೆಯನ್ನು ಪ್ರವೇಶಿಸಿದುವು, ಅವನು ಕಟ್ಟುನಿಟ್ಟಾಗಿ ಸತ್ಯಕ್ಕೆ ಬದ್ಧನಾದನು. ತನ್ನನ್ನೇ ಪರಿವರ್ತಿಸಿಕೊಂಡು ತನ್ನ ಪ್ರಜ್ಞೆಯನ್ನು ಪರಿಶುದ್ಧ ಸ್ಥಿತಿಗೆ ಏರಿಸಿಕೊಂಡನು. ಆತ ಉಚ್ಚರಿಸಿದ ಮಂತ್ರ, ಅವನ ಆ ಉನ್ನತ ಪ್ರಜ್ಞಾಸ್ಥಿತಿಯಿಂದ ಮೂಡಿಬಂದ ಮಂತ್ರವೇ ಗಾಯತ್ರಿ. ಅವನು ವಿಶ್ವಾಮಿತ್ರನೆಂದು, ವಿಶ್ವಕ್ಕೆ ಗೆಳೆಯನೆಂದು ಪ್ರಖ್ಯಾತನಾದನು. ಏಕೆಂದರೆ ಅವನು ಇಡೀ ಜಗತ್ತಿನ ಹಿತಚಿಂತಕನಾದನು. ಬ್ರಾಹಣರು ಆ ಮಂತ್ರವನ್ನು ದೈವ ಮಂತ್ರ ಕೃಪೆಯೆಂದು ಸ್ವೀಕರಿಸಿಕೊಂಡಿದ್ದಾರೆ; ಅದನ್ನು ಗೌರವಿಸಿ, ಪಠಿಸುವುದರ ಮೂಲಕ ಅಪಾರ ಆನಂದವನ್ನು ಪಡೆದಿದ್ದಾರೆ. ಆದ್ದರಿಂದ ಕೌಶಿಕನು ಜನ್ಮಕ್ಷತ್ರಿಯನಾದರೂ ಕರ್ಮಬ್ರಾಹ್ಮಣನಾದನು. ಭಗವದ್ವಾಣಿಯಾದ ವೇದಗಳೂ ಅವನನ್ನು ಹಾಗೆಂದು ಅಂಗೀಕರಿಸಿದುವು. ಆದ್ದರಿಂದ ಒಂದು ವಿಷಯ ಸ್ಪಷ್ಟವಾಗುತ್ತದೆ. ವೇದಗಳು ಉತ್ತಮ ಪಥವನ್ನು ಮಾನವ ಸಮಸ್ತರಿಗೂ ಯಾವುದೇ ಪಕ್ಷಪಾತವಾಗಲಿ ಪೂರ್ವಗ್ರಹವಾಗಲಿ ಇಲ್ಲದೆ ತೆರೆದಿವೆ. ಅವು ವ್ಯಕ್ತಿಯ ಆಲೋಚನೆಗಳು ಮತ್ತು ಕಾರ್ಯ ಸ್ವರೂಪಗಳಿಗೆ ಮಾತ್ರ ಗಮನಕೊಡುತ್ತವೆ.

ಈ ವಿಷಯವನ್ನು ಕುರಿತು ಆಧುನಿಕ ಚಿಂತಕರು ಸಂದೇಹಪಡಬಹುದು. ಅದು ಸಹಜವಾದದ್ದೇ. ಆ ಸಂದೇಹವೇನೆಂದು ನೋಡೋಣ. ದೈವೀ ಸಂಕಲ್ಪವೇ ವರ್ಣಗಳನ್ನು ಸೃಷ್ಟಿಸಿರುವುದಾದ ಪಕ್ಷದಲ್ಲಿ ಎಲ್ಲ ದೇಶಗಳಲ್ಲೂ ಅವು ಇರಬೇಡವೇ? ಈ

ದೇಶಕ್ಕೆ ಮಾತ್ರ ಸೀಮಿತವಾಗಬಾರದಲ್ಲ ಎಂದು ಸಂದೇಹಿಗಳು ಹೇಳಬಹುದು. ಆದರೆ ಸೃಷ್ಟಿಯಾದದ್ದೆಲ್ಲವೂ ಎಲ್ಲ ಕಡೆಯೂ ಅಗತ್ಯವಾಗಿ ಕಾಣಿಸಬೇಕೆಂಬ ನಿಯಮವೇನೂ ಇಲ್ಲವಲ್ಲ! ಜೀವನದ ಪ್ರಕ್ರಿಯೆಯನ್ನು ಕುರಿತು ಸಂಹಿತೆಯನ್ನು ಒಳಗೊಂಡ ಸೀಮಿತಗಳನ್ನೂ, ಮೊದಲಾಯ್ಕೆಗಳನ್ನೂ ಆಯಾ ಪ್ರದೇಶ, ಅದರ ವಾತಾವರಣ, ಹವಾಮಾನ, ಅಲ್ಲಿಯ ವೈಚಿತ್ರ್ಯಗಳು ವೈಶಿಷ್ಟ್ಯಗಳು ಇವಕ್ಕೆ ಸಂಬಂಧಿಸಿದಂತೆಯೂ ರೂಪಿಸಬೇಕು, ಇದು ಸಹಜ. ಭಾರತದಲ್ಲಿ ಬೆಳೆಯುವ ಮರಗಳು ಬೇರೆ ದೇಶಗಳಲ್ಲೂ ಬೆಳೆಯಬೇಕು ಎಂಬ ನಿಯಮವಿಲ್ಲ. ಆಕಾಶವನ್ನು ಆವರಿಸಿಕೊಂಡಿರುವ ನಕ್ಷತ್ರಗಳು ಭೂಮಿಯ ಮೇಲೂ ಇರಬೇಕು ಎಂದು ನಾವು ವಾದಿಸಲು ಸಾಧ್ಯವಿಲ್ಲ. ನೀರಿನಲ್ಲಿ ಜೀವಿಸುವ ಮೀನುಗಳು ಬೆಟ್ಟಗಳ ಮೇಲೆಯೂ ಜೀವಿಸಿರಬೇಕೆಂದು ಕಡ್ಡಾಯವಿಲ್ಲ.

ಯಾವುದಕ್ಕೆ ಏನಾಗಬೇಕು, ಎಲ್ಲಿ ಆಗಬೇಕು ಎಂಬುದು ಭಗವಂತನಿಗೆ ಮಾತ್ರ ಗೊತ್ತು, ಮತ್ತು ಅವನು ಅದನ್ನು ನಿರ್ಧರಿಸುತ್ತಾನೆ. ಮಿಕ್ಕ ಯಾರಿಗೂ ಆ ಶಕ್ತಿಯಿಲ್ಲ. ಜನನದಂಥ ಘಟನೆಗಳು ದೇಶ, ಕಾಲ, ಕಾರಣ ಮೊದಲಾದವುಗಳಿಂದ ನಿರ್ಧಾರವಾಗುತ್ತವೆ. ನಮ್ಮ ಅಗತ್ಯಗಳಾಗಲಿ, ಹಿತಗಳಾಗಲಿ, ಪ್ರತಿಕ್ರಿಯೆಗಳಾಗಲಿ ಅಲ್ಲಿ ಏನೂ ಮಾಡಲಾರವು. ಈ ಕಾರಣಕ್ಕಾಗಿ, ಈ ಕಾರಣದಿಂದಲೇ ಯಾವುದು ಸ್ಪಷ್ಟವಾಗಿದೆಯೋ ಅದರ ವೀಕ್ಷಣೆ ಮತ್ತು ಅಧ್ಯಯನ ವರ್ಣಗಳನ್ನು ಕುರಿತು ಗೊಂದಲಕ್ಕೀಡು ಮಾಡುವ ಸಂದೇಹಗಳಿಗೆ ದಾರಿಯಾಗುತ್ತವೆ. ಅಂತಹ ಸಂದೇಹಗಳು ಅನಿವಾರ್ಯ. ಏಕೆಂದರೆ ಅವು ಅಹಂಕಾರದಿಂದ ಬೆಳೆದವು. ಸತ್ಯದ ತಿರುಳು ಬೇರೆ, ಅಹಂಕಾರದ ಸೃಷ್ಟಿಗಿಂತ ಬೇರೆ. ಜನರು ತಮಗೆ ಇಚ್ಛೆ ಬಂದಂತೆ ನಡೆಯತೊಡಗಿದರೆ, ಮನಸ್ಸಿಗೆ ಬಂದಂತೆ ಮಾತನಾಡತೊಡಗಿದರೆ, ಅದು ಕೇವಲ ಅಜ್ಞಾನದ ಮಾದರಿಗಳೆಂದು ಹೇಳಬೇಕಾಗುತ್ತದೆ.

ಅಧ್ಯಾಯ ೧೮

# ಕಾರ್ಯ ಮತ್ತು ಕರ್ಮ

ಜಗತ್ತಿನ ದೇಶಗಳು ಎರಡು ವರ್ಗಗಳಾಗಿವೆ: ಕರ್ಮಭೂಮಿ ಮತ್ತು ಭೋಗ ಭೂಮಿ. ಆಧ್ಯಾತ್ಮಿಕ ಪ್ರೇರಣೆಯುಳ್ಳ ಕರ್ಮಗಳಿಗೆ ತೆತ್ತುಕೊಂಡ ಜನರಿರುವ ದೇಶ ಗಳು ಹಾಗೂ ಯಾವುದೇ ಉನ್ನತ ಆದರ್ಶಗಳಿಲ್ಲದೆ ಇಂದ್ರಿಯಗಳನ್ನು ಬೆನ್ನಟ್ಟಿ ಓಡುವ ಜನರಿರುವ ದೇಶಗಳು. ಈ ವರ್ಗಗಳೇ ಅಲ್ಲಿಯ ಜನರ ಆದರ್ಶಗಳನ್ನು ಒತ್ತಿ ಹೇಳುತ್ತವೆ. ಯುಗ ಯುಗಾಂತರಗಳಿಂದ ಭಾರತವು ಕರ್ಮಭೂಮಿಯಾಗಿದೆ. ಇಲ್ಲಿ ಜನರು ಕಾರ್ಯ ಚಟುವಟಿಕೆಗೆ ಇರುವ ನಿಜವಾದ ಲಕ್ಷ್ಯವೇನೆಂಬುದನ್ನು ಕಂಡುಕೊಂಡಿದ್ದಾರೆ. ಅದೇ ಎಲ್ಲದರ ಒಳಗೂ ಹೊರಗೂ ನೆಲೆಸಿರುವ ಭಗವಂತ ನನ್ನು ಪೂಜಿಸುವುದು.

ಕರ್ಮವು ಅನಿವಾರ್ಯ; ಅದು ಪ್ರತಿಯೊಂದು ಆಲೋಚನೆಯಲ್ಲಿಯೂ ಅಡಗಿದೆ. ಅದು ಎರಡು ಬಗೆಯಾಗಿದೆ; ಲೌಕಿಕ (ಈ ಜಗತ್ತಿಗೆ ಸಂಬಂಧಪಟ್ಟವು) ಮತ್ತು ಆಧ್ಯಾತ್ಮಿಕ (ವೇದಗಳು ಅಥವಾ ಶಾಸ್ತ್ರಾದೇಶಗಳು ಹೇಳುವಂಥವು). ಕೇವಲ ಜೀವನಾಧಾರವಾಗಿರುವುವು ಲೌಕಿಕ ಕರ್ಮಗಳು; ಮಾನವನನ್ನು ದಿವ್ಯತೆಯ ಹಂತಕ್ಕೆ ಏರಿಸುವ ವೈದಿಕ ಕರ್ಮಗಳು ವೇದಗಳನ್ನೋ ಇಲ್ಲವೇ ಶಾಸ್ತ್ರಗಳು ಮತ್ತು ಸ್ಮೃತಿಗಳಂತಹ ಅನಂತರದ ಕೃತಿಗಳನ್ನೋ ಅವಲಂಬಿಸಿರುತ್ತವೆ. ಇವು ಮಾನಸಿಕ, ಭಾವನಾತ್ಮಕ ಅಥವಾ ದೈಹಿಕ—ಈ ಯಾವುದಾದರೂ ಒಂದು ಬಗೆಯಾಗಿರಬಹುದು. ವ್ಯಕ್ತಿಯು ಹಿಂದಿನ ಜನ್ಮಗಳಲ್ಲೋ ಈ ಜನ್ಮದಲ್ಲಿಯೋ ಅಳವಡಿಸಿಕೊಂಡ ಕಾರ್ಯ ಚಟುವಟಿಕೆಗಳಿಂದಲೂ ಅವು ನಿರ್ಧರಿತವಾಗಬ ಹುದು. ಹಿಂದಿನ ಜನ್ಮಗಳಲ್ಲಿ ಮಾಡಿದ ಕಾರ್ಯಗಳ ಪರಿಣಾಮಗಳು ಈ ಜನ್ಮದಲ್ಲಿ ಕಾಡುತ್ತಿದ್ದರೆ ಅವು ಪ್ರಾರಬ್ಧವೆನಿಸುತ್ತವೆ. ಈಗ ನಿರತನಾಗಿದ್ದು ಅವುಗಳ ಪರಿಣಾಮ ಗಳು ನಿಶ್ಚಯವಾಗಿಯೂ ಮುಂದಿನ ಜನ್ಮದಲ್ಲಿ ಫಲಿಸುವಂಥವು ಆಗಾಮಿ ಎನಿಸು ತ್ತವೆ; ವ್ಯಕ್ತಿಯು ನಿಧಾನವಾಗಿ ಜನ್ಮದಿಂದ ಜನ್ಮಕ್ಕೆ ಸಂಗ್ರಹಿಸುತ್ತಾ ಹೋಗುವುವು ಸಂಚಿತ ಕರ್ಮಗಳು. ಭಾರತದ ಶ್ರುತಿ ಮತ್ತು ಸ್ಮೃತಿಗಳು ಹೀಗೆ ಕರ್ಮವನ್ನು ವರ್ಗೀಕರಿಸಿವೆ. ವ್ಯಕ್ತಿಯ ಜೀವನದ ಮೇಲೆ ಅದು ಬೀರುವ ಪರಿಣಾಮವೇ ಅದಕ್ಕೆ ಆಧಾರ. ಕರ್ಮ ಎಂಬ ಪದವೇನೋ ಪುಟ್ಟದಾಗಿ, ಅಡಕವಾಗಿದೆ; ಧಾರಾಳವಾಗಿ

ಎಲ್ಲರೂ ಅದನ್ನು ಉಪಯೋಗಿಸುತ್ತಾರೆ. ಆದರೆ ಅದು ವ್ಯಕ್ತಪಡಿಸುವ ವಿಚಾರ ಮತ್ತು ಆದರ್ಶಗಳು ಮಾತ್ರ ಮಾನವ ಜನಾಂಗಕ್ಕೇ ಬಹು ಮಹತ್ವದ್ದಾಗಿವೆ. ಕರ್ಮವು ಕೇವಲ ದೈಹಿಕವಲ್ಲ; ಕಾಯೇನ, ವಾಚಾ, ಮನಸಾ ಆಚರಿಸುವಂಥದ್ದಾಗಿದೆ. ಪ್ರತಿಯೊಬ್ಬನೂ ತನ್ನ ವಿಚಾರಶಕ್ತಿಯು ತೋರಿಸಿಕೊಡುವಷ್ಟು ಮಟ್ಟಿಗೆ ಅದರ ಮೌಲ್ಯವನ್ನು ಅರ್ಥಮಾಡಿಕೊಳ್ಳಬಹುದು.

ಕರ್ಮವು ಮಾನವನ, ಲೌಕಿಕ, ಶಾಸ್ತ್ರವಿಹಿತ, ಆಧ್ಯಾತ್ಮಿಕ ಕಾರ್ಯ ಚಟುವಟಿಕೆಗಳೆಲ್ಲವನ್ನೂ ಒಳಗೊಳ್ಳುತ್ತದೆ. ನಿಜವಾಗಿ ನೋಡಿದರೆ, ಈ ಮೂರೂ ಎಳೆಗಳು ಒಂದಕ್ಕೊಂದು ಹೆಣೆದುಕೊಂಡಿವೆ. ಪ್ರಾಪಂಚಿಕವಾದ ಕರ್ಮವು ಪುಣ್ಯವನ್ನೋ ಪಾಪವನ್ನೋ ಅನಿವಾರ್ಯವಾಗಿ ತಂದೀಯುತ್ತದೆ; ಶಾಸ್ತ್ರವಿಹಿತ ಕರ್ಮವು ಅನೇಕ ಪೀಳಿಗೆಯ ಚಿಂತಕರ ಅನುಭವಗಳಿಂದ ಪರ್ಯಾಪ್ತವಾಗಿದೆ; ಇನ್ನು ಆಧ್ಯಾತ್ಮಿಕ ಕರ್ಮವಾದರೋ ಹೃದಯ ಪರಿಶುದ್ಧಿಗೆ ಗಮನಕೊಟ್ಟು, ಒಳಗೆ ನೆಲೆಸಿರುವ ಭಗವಂತನು ಅಲ್ಲಿ ಪ್ರತಿಬಿಂಬಿಸುವ ಹಾಗೆ ಮಾಡುತ್ತದೆ. ಕರ್ಮವು ಒಂದು ಚಕ್ರವಿದ್ದ ಹಾಗೆ. ಅದು ಹೆಚ್ಚು ಹೆಚ್ಚು ವೇಗವಾಗಿ ತಿರುಗುತ್ತಾ ಜೀವನ ಚಕ್ರವನ್ನು ಸದಾ ಸಕ್ರಿಯವಾಗಿರುವಂತೆ ಮಾಡುತ್ತದೆ.

ಕರ್ಮವೆಂದರೆ ಚಲನೆ, ಅಥವಾ ಚಲನೆಯನ್ನು ಪ್ರೇರಿಸುವಂಥದು. ಗಾಳಿಯು ಆಕಾಶದಲ್ಲಿ ಸಂಚರಿಸುತ್ತದೆ; ಚಲಿಸುವ ಗಾಳಿಯು ಶಾಖವನ್ನು ಉತ್ಪತ್ತಿ ಮಾಡುತ್ತದೆ. ವಾಯುಚಲನೆಯಿಂದ ಉಂಟಾದ ಘರ್ಷಣೆಯು ಸುಪ್ತವಾಗಿರುವ ಶಾಖವನ್ನು ವ್ಯಕ್ತವಾಗುವ ಹಾಗೆ ಮಾಡುತ್ತದೆ. ಎಲ್ಲಿಯವರೆಗೆ ಜೀವಿಗಳು ವಾಯುವನ್ನು ಒಳತೆಗೆದುಕೊಂಡು ಹೊರಬಿಡುತ್ತಿರುತ್ತಾರೋ ಅಲ್ಲಿಯವರೆಗೆ ದೇಹದ ಶಾಖವನ್ನು ಉಳಿಸಿಕೊಳ್ಳಲು ಸಾಧ್ಯವಾಗುತ್ತದೆ. ಉಸಿರಾಟ ವೇಗವಾದಷ್ಟೂ ದೇಹದ ಶಾಖ ಹೆಚ್ಚಾಗುತ್ತದೆ. ಶಾಖ ಅಗ್ನಿಯ ಲಕ್ಷಣ. ಅಗ್ನಿಯು ನೀರಿನ ಮೂಲ. ಎಲ್ಲರಿಗೂ ತಿಳಿದೇ ಇರುವಂತೆ ಸೂರ್ಯನು ಮೋಡಗಳನ್ನು ಉಂಟುಮಾಡುತ್ತಾನೆ. ಆಗ ನೀರಿನ ಕಣಗಳು ಇತರ ದ್ರವ್ಯಗಳೊಂದಿಗೆ ಕೂಡಿಕೊಂಡು ಭಾರವಾಗಿ ಭೂಮಿಗೆ (ಪೃಥ್ವಿ, ಮಣ್ಣು) ಇಳಿಯುತ್ತದೆ. ಮಣ್ಣು ಸಸ್ಯಗಳನ್ನೂ ವೃಕ್ಷಗಳನ್ನೂ ಉತ್ಪತ್ತಿ ಮಾಡಿ, ಪೋಷಿಸುತ್ತದೆ. ಅವು ಮನುಷ್ಯನನ್ನು ಪೋಷಿಸಿ ಅವನನ್ನು ಆರೋಗ್ಯಶಾಲಿಯಾಗಿರುವಂತೆ ಮಾಡುತ್ತವೆ. ಮನುಷ್ಯನ ಜೀವಿಕೆಗೆ ಆಧಾರವಾದ ಧಾನ್ಯಗಳನ್ನು ಅವು ನೀಡುತ್ತವೆ. ಸಂತಾನವನ್ನು ಉತ್ಪತ್ತಿಮಾಡುವ ವೀರ್ಯವು ಮನುಷ್ಯನಿಗೆ ಧಾನ್ಯದ ಕೊಡುಗೆ. ಹೀಗೆ ಸೃಷ್ಟಿ ಕರ್ಮವು ನಡೆಯುತ್ತದೆ, ಮುಂದುವರಿಯುತ್ತಿದೆ. ಸ್ಮೃತಿಯು ಈ ಪ್ರಕ್ರಿಯೆಯನ್ನು ಹೀಗೆ ವಿವರಿಸಿದೆ.

ಒಟ್ಟಿನಲ್ಲಿ, ಇಲ್ಲಿ ಕರ್ಮವನ್ನು ಚಲನೆಯಾಗಿ, ಪ್ರಗತಿಯಾಗಿ, ವಿಕಾಸವಾಗಿ ಮತ್ತು ಅನುವಂಶಿಕ ಪರಿಣಾಮವಾಗಿ ನೋಡಬಹುದಾಗಿದೆ. ಈ ಬೃಹತ್ ಪ್ರವಾಹಕ್ಕೆ, ಈ ನಿರಂತರ ಚಲನೆಗೆ ಅಚಲವೂ ಸ್ಥಿರವೂ ಆದ ಆಧಾರ ಅವಲಂಬನವೊಂದಿರಬೇಕು ಎಂದು ನಿರೀಕ್ಷಿಸುವುದು ಅತ್ಯಂತ ಸಹಜ ಮತ್ತು ಸುಸಂಗತ. ಇದನ್ನೇ ಆತ್ಮ ಅಥವಾ ಪರಬ್ರಹ್ಮ ಎಂಬುದಾಗಿ ಹೇಳಿರುವುದು. ಪರಬ್ರಹ್ಮವು ಪರಮೇಶ್ವರನಾಗಿ ಜ್ಞಾನ, ಇಚ್ಛೆ ಮತ್ತು ಕ್ರಿಯೆ ಎಂಬ ಮೂರು ಅಪೇಕ್ಷೆಗಳನ್ನು ವ್ಯಕ್ತಿಪಡಿಸಿದಾಗ ಮೊತ್ತ ಮೊದಲು ಆ ಸ್ಥಿರವಾದ ಆಧಾರದಲ್ಲಿ ಕಂಪನ ರೂಪದ ಚಲನೆಯುಂಟಾಯಿತು. ಆ ಪ್ರಪ್ರಥಮ ಚಲನೆಯನ್ನೇ ಆದಿಮ ಕರ್ಮ ಎಂದು ಕರೆಯಲಾಗಿದೆ. ಇರುವಿಕೆ, ಆಗುವಿಕೆ, ಪರಿವರ್ತನೆಗಳ ಕರ್ಮ, ಸೃಷ್ಟಿಯ ಕರ್ಮ ಎಂದು ಹೇಳಲಾಗಿದೆ.

ಭಗವತ್ತತ್ವವು ಬ್ರಹ್ಮ (ಸೃಷ್ಟಿಸುವ), ವಿಷ್ಣು (ಪಾಲಿಸುವ), ಮಹೇಶ್ವರ (ನಾಶ ಗೊಳಿಸುವ) ತ್ರಿವಳಿಯಾಗಿ ರೂಪುಗೊಳ್ಳುವಂತಾದದ್ದು ಕರ್ಮದ ಪ್ರಾಮುಖ್ಯವೇ. ಅಸಂಖ್ಯ ಗ್ರಹ ನಕ್ಷತ್ರ ನೀಹಾರಿಕೆಗಳ ಚಲನೆಯನ್ನೂ ಆಗಸದಲ್ಲಿರುವ ಇತರ ಕಾಯಗಳ ಚಲನೆಯನ್ನೂ ಆಳುವುದು ಕರ್ಮನಿಯಮವೇ. ಸಕಲ ಲೋಕಗಳಲ್ಲಿ ಸಂಭವಿಸುವ ಸಮಸ್ತವನ್ನೂ ನಿರ್ದೇಶಿಸಿ ನಿಯಂತ್ರಿಸುವುದು ಅದೇ ನಿಯಮ. ಅದರ ಸತ್ವವು ಅಮೇಯವಾದದ್ದು. ಕರ್ಮವಿದ್ದಿರದ ಕಾಲವಾಗಲಿ ದೇಶವಾಗಲಿ ಇದ್ದಿರಲೇ ಇಲ್ಲ. ಯಾವ ಘಟನೆಗಳು ಏಕೆ, ಯಾವಾಗ ಮತ್ತು ಹೇಗೆ ಸಂಭವಿ ಸುತ್ತವೆ ಎಂಬುದನ್ನು ಕರಾರುವಾಕ್ಕಾಗಿ ಭವಿಷ್ಯ ನುಡಿಯುವುದು ಮನುಷ್ಯನ ಶಕ್ತಿಗೆ ಮೀರಿದ್ದು. ಅವು ಅನಂತತೆಯಿಂದ ಅನಂತತೆಯವರೆಗೆ ಚಾಚಿಕೊಂಡಿವೆ.

ಮಾಡುತ್ತಿರುವ ಒಂದು ಕೆಲಸವನ್ನು ಕರ್ಮ ಎಂದು ಕರೆಯಬಹುದಾದಂತೆಯೇ ಯಾವ ಕೆಲಸವನ್ನೂ ಮಾಡದಿರುವ ಸ್ಥಿತಿಯೂ ಕರ್ಮವೇ! ಒಬ್ಬ ವ್ಯಕ್ತಿಯು ನಿಶ್ಶಬ್ದವಾಗಿ ಶಾಂತವಾಗಿ ಏನೂ ಮಾಡದೇ ಕುಳಿತಿದ್ದರೆ, ಅವನು ಕರ್ಮದಿಂದ ಮುಕ್ತನಾಗಿದ್ದಾನೆ ಎಂದು ಊಹಿಸುತ್ತೇವೆ. ಹಾಗಾದರೆ ಅವನು ಕರ್ಮನಿರತನಾಗಿ ದ್ದಾನೆ ಎಂದು ಹೇಳುವುದರ ಅರ್ಥವೇನು? "ಅವನು ಯಾವ ಕೆಲಸವನ್ನೂ ಮಾಡುತ್ತಿಲ್ಲ," ಎಂದು ಹೇಳಿದರೆ ಅದರ ಅರ್ಥವೇನು? ಅವನು ಯಾವುದೇ ಕಾರ್ಯವನ್ನು ಅಥವಾ ಕೆಲಸವನ್ನೂ ಮಾಡದೆ ತನ್ನಷ್ಟಕ್ಕೆ ಕುಳಿತಿದ್ದಾನೆ " ಎಂದಷ್ಟೇ ಅದಕ್ಕೆ ಅರ್ಥ. ಅಂದರೆ, ಕೆಲವು ಜನರು ಕೆಲವು ವೇಳೆ ಕೆಲಸದಲ್ಲಿ ಬಿರುಸಾಗಿ ತೊಡಗುತ್ತಾರೆ, ಇನ್ನು ಕೆಲವು ವೇಳೆ ಕೆಲಸವನ್ನು ತಮ್ಮ ಗಮನದಿಂದ ದೂರವಿಡು ವುದರಲ್ಲಿ ನಿರತರಾಗಿರುತ್ತಾರೆ ಎಂದು ಸ್ಥಿರೀಕರಿಸಬಹುದು. ಅಂದರೆ, ಅವರು ಕರ್ಮದಲ್ಲೂ ಅಕರ್ಮದಲ್ಲೂ ತೊಡಗಿರುತ್ತಾರೆ ಎಂದಾಯಿತು. ವ್ಯಕ್ತಿಯು ತಾನು ಮಾಡುತ್ತಿರುವ ಕರ್ಮದಲ್ಲಿ ಮೋಹಗೊಳ್ಳದೆ, ತನ್ನ ಕರ್ತವ್ಯವೆಂಬಂತೆ ಮಾಡುತ್ತಿ

ದ್ದಾಗ, ಪೂಜಾವಿಧಾನವೆಂಬಂತೆ ಮಾಡುತ್ತಿದ್ದಾಗ, ಅದರ ಫಲದ ಕಡೆಗೆ ಗಮನ ನೀಡದಿದ್ದಾಗ, ಆಗ ಅವನು ಕರ್ಮದಲ್ಲೂ ಅಕರ್ಮವನ್ನು ಅಭ್ಯಾಸ ಮಾಡ ಬಹುದು. ಇದು ಅತ್ಯುನ್ನತಮಟ್ಟದ ಸಾಧನೆ.

ಒಂದು ಜೀವಿಯು ಬದುಕಿನ ಮೊತ್ತಮೊದಲನೆಯ ಕ್ರಿಯೆ ಉಸಿರಾಟ ಮತ್ತು ಪ್ರಾಣವಾಯುವಿನ ಕಂಪನದಿಂದ ಪ್ರಾರಂಭವಾಗುತ್ತದೆ. ಅದರ ಬಗೆಗೆ ಸ್ವಲ್ಪ ಯೋಚಿಸಿದರೆ, ಆಶ್ಚರ್ಯವಾಗುತ್ತದೆ. ಅದೊಂದು ಅದ್ಭುತ. ಯಾವನೇ ಮಾನ ವನು ತನ್ನ ಇಹ ಜೀವನದಲ್ಲಿ ತನ್ನ ಸುತ್ತ ಎಲ್ಲೆಲ್ಲೂ ಇರುವ ವಾಯುವನ್ನು ಒಳಗೆಳೆದುಕೊಳ್ಳಲು, ಹೊರಕ್ಕೆ ಬಿಡಲು ನಿರ್ಧಾರ ಮಾಡುವುದಿಲ್ಲ. ಇಚ್ಛೆಯ ಹಂಗಿಲ್ಲದೆಯೇ ನಿರಪೇಕ್ಷವಾಗಿಯೇ ಅದು ಚಾಲನೆಗೊಳ್ಳುತ್ತದೆ. ಮನುಷ್ಯ ಮಾತ್ರ ವಲ್ಲ, ಪ್ರತಿಯೊಂದು ಜೀವಿಯೂ ಈ ಮಹಾ ಅದ್ಭುತಕ್ಕೆ ಸಾಕ್ಷಿ. ಇಲ್ಲೊಂದು ಸಂದೇಹವು ಏಳಬಹುದು. "ಮನುಷ್ಯನಿಗೆ ಅವನ ಅರಿವಿಲ್ಲದೆ, ಅವನ ಇಚ್ಛೆಯಿ ಲ್ಲದೆ ಏನಾದರೂ ಸಂಭವಿಸುವುದು ಹೇಗೆ ಸಾಧ್ಯ?" ಮನುಷ್ಯನಿಗೆ ಈ ರಹಸ್ಯ ಗಳನ್ನು ಪರಿಹರಿಸುವ ಶಕ್ತಿಯಿಲ್ಲ ಎಂದಷ್ಟೇ ಒಪ್ಪಿಕೊಂಡು ಈ ಸಂದೇಹಕ್ಕೆ ಉತ್ತರ ನೀಡಬಹುದು. ಒಂದು ವೇಳೆ ಪ್ರಕೃತಿಯು ಇದಕ್ಕೆ ಕಾರಣ ಎಂದು ಹೇಳಿದರೂ ಪ್ರಕೃತಿ ಎಂದರೇನು ಎಂಬ ಪ್ರಶ್ನೆ ಉಳಿದೇ ಉಳಿಯುತ್ತದೆ. ಜೀವವು ಪ್ರಾರಂಭವಾದಾಗ ಉಸಿರಾಟವು ಪ್ರಾರಂಭವಾಗುತ್ತದೆ; ಅದೊಂದು ಸ್ವಯಂ ಚಾಲಿತ ಸಹಜ ಕ್ರಿಯೆ ಎಂದು ಹೇಳಲಾಗುತ್ತದೆ. ಆದರೆ ಇದು ಅದೇ ಉತ್ತರವನ್ನೇ ಬೇರೆ ಪದಗಳಲ್ಲಿ ಹೇಳಿದ ಹಾಗೆ ಅಷ್ಟೆ. ಬೇರೆ ಏನನ್ನೂ ಅವು ವಿವರಿಸವು. ಯಾವಾಗ ಅತ್ಯಂತ ಅಗತ್ಯವೋ ಆ ಕ್ಷಣಕ್ಕೆ ಆ ಕ್ರಿಯೆ ಹೇಗೆ ಸಂಭವಿಸುತ್ತದೆಂಬುದು ನಮಗೆ ಗೊತ್ತಿಲ್ಲ ಎಂದು ಹೇಳಿಬಿಡಬಹುದು. ಉಸಿರಾಡುತ್ತಿರುವ ಮನುಷ್ಯನಿಗೆ ಉಸಿರಾಟ ಪ್ರಕ್ರಿಯೆಯು ಒಂದು ಬಿಡಿಸಲಾಗದ ಅದ್ಭುತ ರಹಸ್ಯವಾಗಿರುವುದು ಆಶ್ಚರ್ಯ.

ಯೋಗಿಗಳು ತಮ್ಮ ಇಚ್ಛೆಯಂತೆ ತಮ್ಮ ನಾಡಿಮಿಡಿತವನ್ನೂ, ಉಚ್ಛ್ವಾಸ ನಿಶ್ವಾಸ ಪ್ರಕ್ರಿಯೆಯನ್ನೂ ತಡೆದು ನಿಲ್ಲಿಸಬಲ್ಲರು ಎಂಬ ವಿಷಯವನ್ನು ಕುರಿತು ನಾವು ಆಲೋಚಿಸಿದಾಗ ಕರ್ಮವನ್ನು ಪ್ರೇರಿಸುವ ಇಚ್ಛಾಶಕ್ತಿಯ ಅರಿವು ನಮಗಾಗುತ್ತದೆ. ಕರ್ಮ ಎನ್ನುವುದು ಎಲ್ಲೋ ಆಕಾಶದಲ್ಲಿ ನೇತಾಡುತ್ತಿರುವ ವಸ್ತುವಲ್ಲ. ನಾವು ಕರ್ತೃಗಳಾಗದೆ ಕಾರ್ಯವು ನಮ್ಮಿಂದ ಘಟಿಸುವುದಿಲ್ಲ. "ನ ಜಾತಿ ಇಚ್ಛತಿ ಚೇತಥೇ (ವ್ಯಕ್ತಿಯು ಹೇಗೆ ತಿಳಿದು ಕೊಂಡಿದ್ದಾನೋ ಹಾಗೆ ಇಚ್ಛಿಸುತ್ತಾನೆ; ಹೇಗೆ ಇಚ್ಛಿಸುತ್ತಾನೋ ಹಾಗೆ ವರ್ತಿಸುತ್ತಾನೆ)," ಎಂಬುದು ನ್ಯಾಯಶಾಸ್ತ್ರದಲ್ಲಿ ಒಂದು ಸೂತ್ರ. ವೇದಾಂತ ಸೂತ್ರಗಳೂ ಇದೇ ಸತ್ಯವನ್ನು ಸಾರುತ್ತವೆ:

ಯತ್ ಧ್ಯಾಯಂತಿ ತದಿಚ್ಛತಿ ।
ಯತ್ ಇಚ್ಛತಿ ತತ್ ಕರೋತಿ ।
ಯತ್ ಕರೋತಿ ತತ್ ಭವತಿ ।

ಯಾವುದರ ಮೇಲೆ ಗಮನವು ನಿಲ್ಲುತ್ತದೆಯೋ ಅದರ ಬಗೆಗೆ ಅಪೇಕ್ಷೆಯುಂಟಾಗುತ್ತದೆ. ಯಾವುದರ ಬಗೆಗೆ ಅಪೇಕ್ಷೆಯುಂಟಾಗುತ್ತದೆಯೋ ಅದಕ್ಕಾಗಿ ಕಾರ್ಯಗಳನ್ನು ಮಾಡಲಾಗುತ್ತದೆ. ಯಾವುದಕ್ಕಾಗಿ ಕೆಲಸವನ್ನು ಮಾಡುತ್ತನೋ ಅದರಂತೆ ಆಗುತ್ತಾನೆ.

ವ್ಯಕ್ತಿಯ ವ್ಯಕ್ತಿ ಸ್ವರೂಪವನ್ನು ಇಚ್ಛೆಯು ರೂಪಿಸುತ್ತದೆ. ತನ್ನ ಬಯಕೆಗಳು, ಆಶೋತ್ತರಗಳು, ಪ್ರಯತ್ನಗಳು ಮತ್ತು ಸಾಧನೆಗಳಿಂದ ಅವನು ತನ್ನನ್ನು ರೂಪಿಸಿಕೊಳ್ಳುತ್ತಾನೆ. ಅವನು ತನ್ನ ಮುಂದಿನ ಜನ್ಮಕ್ಕೂ ಕೂಡ ಈಗಿನ ನಿರ್ಧಾರಗಳಿಂದಲೂ ಕಾರ್ಯಗಳಿಂದಲೂ ಆಕಾರ ಕೊಡುತ್ತಾನೆ. ಅವನ ಬುದ್ಧಿಯು ಅವನ ಮೇಲೆ ಬೀರುವ, ನಿರ್ದಿಷ್ಟ ದಿಕ್ಕುಗಳಲ್ಲಿ ಅವನ ಇಚ್ಛೆಯನ್ನು ನಿರ್ದೇಶಿಸುವ ಶಕ್ತಿಯನ್ನು ಪ್ರಕೃತಿ ಎಂದು ಕರೆಯಲಾಗುತ್ತದೆ. ವ್ಯಕ್ತಿಯ ಬುದ್ಧಿ ಶಕ್ತಿಯ ಮಟ್ಟವೇ ಅವನ ಒಲವುಗಳನ್ನೂ ಬಯಕೆಗಳನ್ನೂ ನಿರ್ಧರಿಸುವಲ್ಲಿ ಅತ್ಯಂತ ಮುಖ್ಯವಾದ ಅಂಶವಾಗುತ್ತದೆ ಎಂಬುದನ್ನು ಕಂಡುಕೊಂಡಾಗ, ಪ್ರಕೃತಿಯ ಮುಷ್ಟಿಯಿಂದ ಬಿಡಿಸಿಕೊಳ್ಳುವ ಬಗೆಯನ್ನು ಅರಿಯುವುದೂ ಅವನಿಗೆ ಸುಲಭವಾಗುತ್ತದೆ.

ಕರ್ಮವೆಂದರೆ ಸಾಮಾನ್ಯವಾಗಿ ಕೆಲಸ ಎಂದು ತಿಳಿಯಲಾಗುತ್ತದೆ. ಎಲ್ಲಾ ಬಗೆಯ ವ್ಯವಹಾರಗಳು, ಕ್ರಿಯೆಗಳನ್ನು ಕೆಲಸವೆಂದು ಹೇಳಬಹುದು. ಕೆಲಸದಲ್ಲಿ ಕೆಳಗಿನದು ಅಥವಾ ಮೇಲಿನದು ಎಂಬ ಹಂತಗಳಿಲ್ಲ. ಬದುಕನ್ನು ಉದ್ಧರಿಸಿಕೊಳ್ಳಲು, ಉತ್ತಮಪಡಿಸಿಕೊಳ್ಳಲು ಮಾಡುವುದಾದರೆ ಎಲ್ಲ ಕೆಲಸವೂ ಪವಿತ್ರವಾದುದೇ. ಆದ್ದರಿಂದಲೇ ಕರ್ಮವನ್ನು ಪರಮ ಪವಿತ್ರ, ಅಪೇಕ್ಷಣಿಯ ಎಂದು ಹೊಗಳಲಾಗಿದೆ; ಪುಣ್ಯ ಅಥವಾ ಪಾಪ ಫಲಗಳನ್ನು ಕೊಡುವ ಶಕ್ತಿಯುಳ್ಳದ್ದು ಎಂದು ಹೇಳಲಾಗಿದೆ.

ಹಿಂದೂಗಳು ಅದೃಷ್ಟ ದುರದೃಷ್ಟಗಳನ್ನೂ ನಲಿವು ನೋವುಗಳನ್ನೂ ಸುಖ ದುಃಖಗಳನ್ನೂ ಕರ್ಮದ ಅನಿವಾರ್ಯ ಫಲಕ್ಕೆ ಅನ್ವಯಿಸುತ್ತಾರೆ. ಹಾಗಾಗಿ ಅಲಸಿಗಳೆನಿಸಿಕೊಂಡ ಕೆಲವರು ದುಃಖ, ರೋಗ, ಮೊದಲಾದವು ಬಂದಡಸಿದಾಗ ಅವುಗಳನ್ನು ಗೆಲ್ಲಲು ಯಾವ ಪ್ರಯತ್ನವನ್ನೂ ಮಾಡುವುದಿಲ್ಲ. ಇದು ಭಾಗಶಃ ಪಕ್ಷವಾಯು ಪೀಡಿತ ದೃಷ್ಟಿ. ಅದು ನಿರ್ದೇಶ ತತ್ತ್ವಗಳನ್ನೂ ಅಂತರ್ವಾಹಿನಿಯಾಗಿರುವ ಕರ್ಮತತ್ತ್ವವನ್ನೂ ಅಲಕ್ಷಿಸುತ್ತದೆ; ಪ್ರಾಪಂಚಿಕವಾದ ಲೌಕಿಕ ಕಾರ್ಯ ಚಟುವಟಿಕೆಗಳಲ್ಲಿ

ಮಟ್ಟಿಗೆ ಅದು ಬಿಂಬಿತವಾಗುತ್ತದೆ ಎಂದು ಭಾವಿಸುತ್ತದೆ. ಈ ದೃಷ್ಟಿಯು ಒಂದು ವರ್ಗದವರು ಮಾತ್ರ ಪ್ರಗತಿ ಹೊಂದಲು ಅವಕಾಶ ಕಲ್ಪಿಸುತ್ತದೆ, ಅಷ್ಟೆ.

ನಿಮ್ಮದೇ ಅನುಭವದಿಂದ ಕೆಲವು ನಿದರ್ಶನಗಳನ್ನು ನೋಡಬಹುದು. ಒಂದು ಕಛೇರಿಯಲ್ಲಿ ಕೆಲಸ ಮಾಡುತ್ತಿರುವ ಗುಮಾಸ್ತ, ತನ್ನ ಬೆವರು ಹರಿಸಿ ದುಡಿದು ಬದುಕುವ ರೈತ, ಅಲ್ಪ ಜೀವಿಕೆಯನ್ನು ಸಂಪಾದಿಸಲು ತನ್ನ ದೇಹಬಲವನ್ನು ಅವಲಂಬಿಸುವ ಕೂಲಿಕಾರ, ಕಮ್ಮಾರ, ಬಡಗಿ, ಅಗಸ, ಕ್ಷೌರಿಕ ಇವರೆಲ್ಲರಿಗೂ ತಮ್ಮ ಕರ್ತವ್ಯಗಳಾವುವು ಎಂದೂ ಕರ್ತವ್ಯ ಪ್ರಜ್ಞೆಯಿಂದ ಅವುಗಳನ್ನು ಆಚರಿಸಬೇಕು ಎಂದೂ ಅರಿವಿದೆ. ಪ್ರತಿಯೊಬ್ಬನೂ ತನ್ನ ಭಾಗದ ಕರ್ತವ್ಯವನ್ನು ಶ್ರದ್ಧೆಯಿಂದ ಮಾಡದೆ ಹೋದರೆ ತಮ್ಮ ಎಲ್ಲರ ಜೀವನವು ಹಸನಾಗುವುದಿಲ್ಲ, ಸರಾಗವಾಗಿ ಸಾಗುವುದಿಲ್ಲ ಎಂದು ಅವರಿಗೆ ಗೊತ್ತು. ಆದ್ದರಿಂದ ಅವರು ತಮ್ಮ ಬುದ್ಧಿಶಕ್ತಿ, ಕೌಶಲ, ಆಶೋತ್ತರಗಳು ಎಷ್ಟು ಮಟ್ಟಿಗೆ ಇವೆಯೋ ಅಷ್ಟನ್ನೂ ಉಪಯೋಗಿಸಿ ತಮ್ಮ ವೃತ್ತಿಯಲ್ಲಿ ನಿರತರಾಗುತ್ತಾರೆ. ಅಂದಾಗ, ಅಂತಹ ಜನರನ್ನು ಇನ್ನಷ್ಟು ಕಾರ್ಯಶೀಲರಾಗುವಂತೆ ಮಾಡಲು, ಅಥವಾ ಅವರಿಗೆ ಎಚ್ಚರಿಕೆ ಕೊಡಲು ಮತ್ತು ಪ್ರೋತ್ಸಾಹಿಸಲು ಅಗತ್ಯವೆಲ್ಲಿದೆ? ಅವರು ತಮ್ಮ ಕರ್ತವ್ಯಗಳನ್ನು ನಿರ್ವಹಿಸಲು ಅಸಮರ್ಥರಾದಾಗ ಅಥವಾ ಇಚ್ಛೆಪಡದಾಗ ಮಟ್ಟಿಗೆ ನಾವು ಆ ಕೆಲಸ ಮಾಡ ಬಹುದು.

ಅರ್ಜುನನು ತನ್ನ ಕರ್ತವ್ಯದಲ್ಲಿ ಗೊಂದಲಕ್ಕೀಡಾಗಿ, ವೈರಾಗ್ಯ ಭಾವನೆಯು ಆವರಿಸಿ ಯುದ್ಧ ವಿಮುಖನಾದಾಗ, ಅವನನ್ನು ಕುರಿತು ಶ್ರೀಕೃಷ್ಣನು ಹೇಳಿದನು: "ನೀನು ನಿನ್ನ ಕಾರ್ಯದ ಮೇಲೆ ಕೇಂದ್ರೀಕರಿಸು. ನಿನ್ನ ಶಕ್ತಿಯಿರುವಷ್ಟು ಮಟ್ಟಿಗೆ ನಿರ್ವಹಿಸು. ಕೆಲಸ ಮಾಡುವುದು, ಕೆಲಸ ಮಾಡುವುದಷ್ಟೇ ನಿನಗೆ ವಿಧಿಸಿರುವ ಕರ್ತವ್ಯ." ಅದು ಭಗವಂತನ ಅಮೃತೋಪಮವಾದ ಸಲಹೆ. ಈ ಉಪದೇಶವನ್ನು ಅನೇಕರು ಉದ್ಧರಿಸುತ್ತಾರೆ. ಆದರೆ ಈ ಉಪದೇಶವನ್ನು ಧರ್ಮ ಸ್ಥಾಪನೆಯ ಸಂದರ್ಭದಲ್ಲಿ ನೀಡಲಾಯಿತು ಎಂಬುದನ್ನು ನೆನಪಿನಲ್ಲಿಡಬೇಕು. ಪವಿತ್ರ ಗ್ರಂಥ ಗಳು ಮತ್ತು ಶಾಸ್ತ್ರಗಳು ಅಂಗೀಕರಿಸುವ ಕಾರ್ಯಚಟುವಟಿಕೆಗಳಿಗೆ ಸಂಬಂಧಿಸಿ ದಂತೆ ಅದು ವ್ಯವಹರಿಸುತ್ತದೆಯೇ ಹೊರತು, ಪ್ರಾಪಂಚಿಕವೂ ಐಂದ್ರಿಯವೂ ಆಹಾರ, ವಸತಿ, ಮೈಥುನ ಮೊಲಾದ ಪಶು ಸಹಜವೂ ಆದ ವೃತ್ತಿಗಳಿಗೆ ಸಂಬಂಧಿಸಿದ್ದಲ್ಲ.

ಧರ್ಮರಾಜ ಮತ್ತು ಇತರರು ಪ್ರಾಪಂಚಿಕ ವ್ಯವಹಾರಗಳಲ್ಲಿ ನಿರತರಾಗಿದ್ದರು. ಸಮಾಜದ ನಾಲ್ಕು ವರ್ಣಗಳು ಮತ್ತು ಜೀವನದ ನಾಲ್ಕು ಆಶ್ರಮಗಳಿಗೆ ನಿಗದಿ

ಯಾದ ಕರ್ತವ್ಯಗಳು ಮತ್ತು ಹೊಣೆಗಾರಿಕೆಗಳನ್ನು ನಿರ್ವಹಿಸುವುದರಲ್ಲಿ, ಪ್ರಜೆಗಳು ನಿರ್ವಹಿಸುವಂತೆ ಮಾಡುವುದರಲ್ಲಿ ಒಂದೇ ಸಮನೆ ನಿರತರಾಗಿದ್ದರು. ಅಂದಾಗ, ಯುದ್ಧದಲ್ಲಿ ನಿರತನಾಗು ಎಂದು ಅವರಿಗೆ ಪ್ರೇರಣೆ ಕೊಡುವ, ಸಲಹೆ ನೀಡುವ ಅಥವಾ ಆದೇಶಿಸುವ ಅಗತ್ಯವೇನಿತ್ತು? ಕೃಷ್ಣನು ಅರ್ಜುನನಿಗೆ ಮಾತ್ರ ಬಿಲ್ಲು ಬಾಣಗಳನ್ನು ಮತ್ತೆ ಕೈಗೆತ್ತಿಕೊಳ್ಳುವಂತೆ ಅನೇಕ ವಾದಗಳನ್ನು ಅವನ ಮುಂದಿಟ್ಟು ಉಪದೇಶಿಸಿದನು. "ನೀನು ಕ್ಷತ್ರಿಯ ಕುಲದಲ್ಲಿ ಜನಿಸಿರುವೆ; ಆ ವರ್ಣಕ್ಕೆ ಅನ್ಯಾಯದ ವಿರುದ್ಧ ಕಾದಾಡುವ ಸಾಮಾಜಿಕ ಕರ್ತವ್ಯವನ್ನು ವಿಧಿಸಲಾಗಿದೆ. ದೌಷ್ಟ್ಯದ ವಿರುದ್ಧ ಯುದ್ಧ ಮಾಡುವುದು ನಿನ್ನ ಹೊಣೆಗಾರಿಕೆಯಾಗಿದೆ. ಆ ಕರ್ತವ್ಯವನ್ನು ತೊರೆಯಬೇಡ, ಆ ಗುರುತರ ಹೊಣೆಯನ್ನು ತಿರಸ್ಕರಿಸಬೇಡ. ಮನುಷ್ಯನು ತನ್ನಲ್ಲಿ ಪ್ರಕೃತಿಯು ನೆಟ್ಟಿರುವ ಪ್ರವೃತ್ತಿಗಳಿಗೆ ಕಟ್ಟುಬಿದ್ದಿದ್ದಾನೆ. ಮತ್ತೆ, ಇದನ್ನೂ ವಿಚಾರ ಮಾಡು. ಮನುಷ್ಯನು ಒಂದಿಲ್ಲೊಂದು ಕರ್ಮದಲ್ಲಿ ಸದಾ ತೊಡಗಿರುತ್ತಾನೆ; ಕರ್ಮವಿಲ್ಲದೆ ಅವನು ಒಂದು ಕ್ಷಣವೂ ಬದುಕಿರಲಾರ. ಆದ್ದರಿಂದ ನಿನ್ನ ಪಿತೃ ಪರಂಪರೆಯಿಂದಲೂ ವಂಶದಿಂದಲೂ ನಿನ್ನ ಮೇಲೆ ವಿಧಿಸಿರುವ ಪ್ರವೃತ್ತಿಗಳು ಮತ್ತು ಕೌಶಲಗಳಿಗೆ ತಕ್ಕಂತೆ ನೀನು ಈಗ ಕಾರ್ಯಶೀಲನಾಗುವುದು ಅತ್ಯುತ್ತಮ." ಇದು ಅವನಿಗೆ ಉಪದೇಶಿಸಿದ ಪಾಠ, ಕುಲಧರ್ಮ, ಅವನ ವರ್ಣ ಅಥವಾ ವರ್ಗಕ್ಕೆ ಅನ್ವಯಿಸಿದ ಮಾರ್ಗ.

ಕೆಲಸ ಎನ್ನುವುದು ಕೇವಲ ಆಹಾರ ಇತ್ಯದಿಗಳನ್ನು ಸಂಪಾದಿಸುವ ಕಾರ್ಯ ಚಟುವಟಿಕೆಗಳನ್ನು ಮಾತ್ರ ಸೂಚಿಸುವುದೇನು? ವಿಮಾನಗಳು, ಹಡಗುಗಳು, ಕಾರ್ಖಾನೆಗಳು, ಆಸ್ಪತ್ರೆಗಳು ಇವೆಲ್ಲ ಕೆಲಸದ ಉತ್ಪಾದನೆಗಳೇ. ಇವು ಕೂಡ ಕೇವಲ ಲೌಕಿಕ ಕರ್ಮವನ್ನು ಒಳಗೊಂಡಿವೆ ಎಂದು ಹೇಳಬಹುದು. ಈ ಬಗೆಯ ಕೆಲಸವು ಜೀವನಕ್ಕೆ ಮುಖ್ಯ. ಇಲ್ಲಿ ಸುಖವಾಗಿರುವುದು ಮುಂದಿನ ಜನ್ಮದ ಆಧ್ಯಾತ್ಮಿಕ ವಿಕಾಸಕ್ಕೆ ಸಿದ್ಧವಾಗಲು ಸಹಕಾರಿ. ಪ್ರಾಪಂಚಿಕ ವ್ಯವಹಾರಗಳಲ್ಲಿ ವ್ಯಕ್ತಿಯ ಚಟುವಟಿಕೆಯು ಹೆಚ್ಚು ದೋಷಯುಕ್ತವಾದ ಹಾಗೆಲ್ಲಾ ಅವನಿಗೂ ಸಮಾಜಕ್ಕೂ ದೇಶಕ್ಕೂ ಯಶಸ್ಸು ಕಡಮೆಯಾಗುತ್ತಾ ಹೋಗುತ್ತದೆ. ಈ ವಿಷಯಗಳಲ್ಲಿ ಎರಡು ಅಭಿಪ್ರಾಯಗಳು ಇರಲು ಸಾಧ್ಯವೇ ಇಲ್ಲ. ಆದರೂ ಜನರು ಪ್ರಾಪಂಚಿಕ ಯಶಸ್ಸು, ಕೀರ್ತಿಗಳಿಗಾಗಿ ಶ್ರಮಿಸುವ ಹಾಗೆ, ಉತ್ಸಾಹದಿಂದ ಕ್ಷಮತೆಯಿಂದ ಕಾರ್ಯಮಗ್ನವಾಗುವ ಹಾಗೆ ಆಧ್ಯಾತ್ಮಿಕ ಪ್ರಗತಿಗಾಗಿ ಶ್ರಮಿಸುವುದಿಲ್ಲ.

ಅಧ್ಯಾಯ ೧೯

# ಪ್ರಾರ್ಥನೆ

ಪ್ರಾಪಂಚಿಕ ಹಾಗೂ ಆಧ್ಯಾತ್ಮಿಕ ಕರ್ಮಗಳ ನಡುವಣ ಸಂಬಂಧವನ್ನೂ ಪರಿಶೀಲಿಸಬೇಕು. ಹೊಲವನ್ನು ಆಳವಾಗಿ ಉತ್ತು, ಬೀಜಗಳು ಬೆಳೆಯಲು ಅದು ಅರ್ಹವಾಗುವಂತೆ ಮಾಡುತ್ತೇವೆ. ಒಳ್ಳೆಯ ಬೀಜವನ್ನು ಆರಿಸಿಕೊಂಡು ನೇಗಿಲ ಗೆರೆಯ ಮೇಲೆ ಬಿತ್ತುತ್ತೇವೆ. ಸಸಿಗಳು ಮೊಳೆತಾಗ ಬಹು ಕಾಳಜಿಯಿಂದ ನೋಡಿಕೊಳ್ಳುತ್ತೇವೆ. ಅವಕ್ಕೆ ಹಾನಿಯುಂಟುಮಾಡುವ ಕಳೆಗಳನ್ನು ಕಿತ್ತೆಸೆಯುತ್ತೇವೆ. ಸಸಿಗಳಿಗೆ ಅಗತ್ಯವಾದಗಲೆಲ್ಲ ನೀರುಣಿಸುತ್ತೇವೆ. ಬೇಲಿ ಕಟ್ಟಿ ಫಸಲನ್ನು ರಕ್ಷಿಸುತ್ತೇವೆ. ರೋಗ ಪೀಡೆಗಳು ಸಸಿಗಳಿಗೆ ತಗುಲದಂತೆ ಕಣ್ಣಿಟ್ಟು ಕಾಯುತ್ತೇವೆ. ಈ ಮುಖ್ಯವಾದ ಕೆಲಸಗಳನ್ನೆಲ್ಲ ನಾವು ಶ್ರದ್ಧೆಯಿಂದ, ವಿಳಂಬವಿಲ್ಲದಂತೆ, ಅಗತ್ಯವಾದಾಗ ನೆರವೇರಿಸುತ್ತೇವೆ ಎಂದಿಟ್ಟುಕೊಳ್ಳೋಣ. ಇಷ್ಟೆಲ್ಲಾ ಇದ್ದರೂ ನಮ್ಮ ಪರಿಶ್ರಮದ ಫಲವಾಗಿ ಫಸಲು ನಮ್ಮ ಮನೆಗೆ ತಲುಪಿ, ನಮ್ಮ ಉಪಯೋಗಕ್ಕಾಗಿ ದಾಸ್ತಾನು ಮಾಡಿಕೊಳ್ಳಲು ಸಾಧ್ಯವಾಗುತ್ತದೆ ಎನ್ನುವುದಕ್ಕೆ ಏನು ಭರವಸೆ? ನೀರನ್ನು ಹರಿಯಿಸುತ್ತಿದ್ದ ನಾಲೆಯು ಒಂದು ದಿನ ಬತ್ತಿ ಒಣಗಿ ಹೋಗಬಹುದು. ಆಕಾಶವು ಧಾರಾಕಾರವಾಗಿ ಮಳೆ ಸುರಿಸಿಬಿಡಬಹುದು, ಇಲ್ಲವೆ ಪೂರ್ತಿಯಾಗಿ ತಡೆಹಿಡಿದು ಬಿಡಬಹುದು. ನಿಯಂತ್ರಿಸಲು ಸಾಧ್ಯವೇ ಇಲ್ಲದ ಪ್ರಮಾಣದಲ್ಲಿ ಸಸ್ಯರೋಗಗಳು ದಾಳಿ ಮಾಡಬಹುದು, ಇನ್ನೇನು ಬೆಳೆಯು ಕಣ್ಣಿಗೆ ಕಾಣಿಸುತ್ತದೆ ಎನ್ನುವಾಗ ಅವು ನಾಶ ಮಾಡಿಬಿಡಬಹುದು. ಆದರೆ ಅಂಥ ಗಂಡಾಂತರವು ಎದುರಾದಾಗಲೂ ಮನುಷ್ಯನು ಸರ್ವಸ್ವನ್ನೂ ಕಳೆದುಕೊಂಡುಬಿಟ್ಟಂತೆ ಕುಸಿಯಬಾರದು.

ಸಕಾಲಕ್ಕೆ ತನ್ನ ಬೆಳೆಗೆ ಮಳೆಯು ದೊರಕದಿದ್ದಾಗ, ಮನುಷ್ಯನು ವಿಮಾನದಲ್ಲಿ ಹಾರಿ ಮೋಡಗಳಿಗೆ ರಾಸಾಯನಿಕಗಳನ್ನು ಸಿಂಪಡಿಸಿ ಮಳೆ ಸುರಿಸುವಂತೆ ಕೃತಕ ವಿಧಾನದಿಂದ ಪ್ರಚೋದಿಸಬಹುದು, ಸರಿ. ಆದರೆ ಹಾಗೆ ಉತ್ಪನ್ನವಾದ ಮಳೆಯು ಅವನ ನೆಲದ ಮೇಲೆಯೇ ಸುರಿಯುತ್ತದೆಂಬ ಭರವಸೆಯೇನು? ಕೃತಕ ವಿಧಾನಗಳು ದೇವತೆಗಳ ಭಾವನೆಗಳ ಮೇಲೆ ಪರಿಣಾಮ ಮಾಡುವುದಿಲ್ಲ. ಅವರು ತಮ್ಮ ಇಚ್ಛೆ ಬಂದಂತೆ ನೆರವು ನೀಡುತ್ತಾರೆ ಅಥವಾ ತಡೆಯುಂಟುಮಾಡುತ್ತಾರೆ. ಎಲ್ಲಾ ದಾರಿಗಳೂ ಮುಚ್ಚಿಹೋಗಿ ಕೊನೆಗೆ ವ್ಯಕ್ತಿಯು ಮಳೆಗಾಗಿ ಪ್ರಾರ್ಥಿಸಲು

ನಿರ್ಧರಿಸುತ್ತನೆ. ಆಗ ಆ ಪ್ರಾರ್ಥನೆಯು ಹೇಗಿರಬೇಕು, ಹೇಗೆ ಅದನ್ನು ಪಠಿಸಬೇಕು ಎಂಬ ಸಮಸ್ಯೆಗಳು ಎದುರಾಗುತ್ತವೆ. ಗಂಡಾಂತರ ಸುಸ್ಪಷ್ಟವಾಗಿದೆ; ರಕ್ಷಣೆ ಪ್ರಾರ್ಥನೆಯೊಂದೇ. "ಓ ದೇವರೆ! ಮಳೆಯಿಲ್ಲದೆ ಅಪಾರ ತೃಷೆಯಿಂದ ನನ್ನ ಹೊಲದ ಬೆಳೆಯು ವೇಗವಾಗಿ ಒಣಗಿ ಹೋಗುತ್ತಿದೆ. ನಾಲೆಯಲ್ಲಿ ಜನರು ಹಾಗೂ ದನಕರುಗಳ ಬಾಯಾರಿಕೆ ತಣಿಸಲು ಒಂದೇ ಒಂದು ಹನಿ ನೀರೂ ಇಲ್ಲ. ನಮ್ಮ ಮೇಲೆ ಕರುಣೆ ತೋರಿಸು. ನಮಗೆ ಬೇಗನೆ ಸಮೃದ್ಧವಾಗಿ ಮಳೆಯನ್ನು ಕರುಣಿಸು."

ಈ ಮಧ್ಯೆ ಇನ್ನೊಂದು ಸಮಸ್ಯೆ ಉದ್ಭವಿಸಿದೆ ಎಂದಿಟ್ಟುಕೊಳ್ಳೋಣ. ಪಕ್ಕದ ಮನೆಯವನು ಯಾವುದೋ ಸಮಾರಂಭವನ್ನು ವ್ಯವಸ್ಥೆಗೊಳಿಸಿದ್ದಾನೆ, ಮಳೆಯು ಬಂದು ಬಿಟ್ಟರೆ ತಾನು ಯೋಜನೆ ಹಾಕಿದಂತೆ ಸಮಾರಂಭ ನಡೆಯದೆ ಹಾಳಾಗಿ ಬಿಡುತ್ತದೆ, ಭಾಗವಹಿಸಿದವರಿಗೆಲ್ಲ ತುಂಬಾ ಅನನುಕೂಲವಾಗುತ್ತದೆ. ಆದ್ದರಿಂದ ಬಹಳ ಕಾತರದಿಂದ ಪ್ರಾಮಾಣಿಕವಾಗಿ ದೇವರನ್ನು ಪ್ರಾರ್ಥಿಸುತ್ತಾನೆ: "ಓ ದೇವರೆ! ಈ ಸಮಾರಂಭ ಮುಗಿಯುವವರೆಗೆ ಮಳೆಯನ್ನು ತಡೆಹಿಡಿದು ಕೃಪೆ ಮಾಡು."

ಈ ಇಬ್ಬರು ಅಭ್ಯರ್ಥಿಗಳೂ ಭಗವಂತನ ಉತ್ತಮ ಭಕ್ತರೇಯೆ. ಒಬ್ಬನು ಮಳೆಗಾಗಿ ಹಂಬಲಿಸುತ್ತಿದ್ದಾನೆ; ಇನ್ನೊಬ್ಬನು ಮಳೆಯನ್ನು ವಿರೋಧಿಸುತ್ತಿದ್ದಾನೆ. ದೇವರು ಈ ಪರಿಸ್ಥಿತಿಯಲ್ಲಿ ಏನು ಮಾಡಬೇಕು? ಅವನು ಯಾರ ಕೋರಿಕೆಯನ್ನು ಈಡೇರಿಸಬೇಕು? ಪ್ರಾಮಾಣಿಕತೆ ತುಂಬಿದ ಪ್ರಾರ್ಥನೆಯನ್ನು ನಡೆಸಿಕೊಡುವುದು ಭಗವಂತನ ಲಕ್ಷಣ. ಆದರೆ ಭಕ್ತರ ಕೋರಿಕೆಗಳು ಪರಸ್ಪರ ಘರ್ಷಿಸಿದಾಗ, ತನ್ನ ಕೃಪೆಯನ್ನು ಅವನು ಹೇಗೆ ವಿನ್ಯಾಸಗೊಳಿಸಬೇಕು? ಭಗವಂತ ಸ್ವತಂತ್ರ, ಅವನ ಇಚ್ಛೆಯೇ ಶಾಸನ. ಆದರೆ ಒಂದು ಅರ್ಥದಲ್ಲಿ ತನ್ನದೇ ಪ್ರೇಮ ಮತ್ತು ಕರುಣೆಗಳಿಗೆ ಅವನು ಬದ್ಧನಾಗಿದ್ದಾನೆ.

ಒಂದು ದೇಶದ ಚಕ್ರವರ್ತಿಯು ತನ್ನ ಒಬ್ಬೊಬ್ಬ ಪ್ರಜೆಯ ಆಸೆಯನ್ನೂ ತೃಪ್ತಿಪಡಿಸುವುದು ಸಾಧ್ಯವಿಲ್ಲ. ಅವರ ಎಲ್ಲ ಅಗತ್ಯಗಳನ್ನೂ ಈಡೇರಿಸುವ ಅಧಿಕಾರವನ್ನು ಅವನು ಚಲಾಯಿಸಲು ಸಾಧ್ಯವಿಲ್ಲ. ಅಷ್ಟೇಕೆ, ತನಗಾಗಿಯೇ ತನ್ನ ಅಪೇಕ್ಷೆಗಳೆಲ್ಲವನ್ನೂ ಅವನು ಈಡೇರಿಸಿಕೊಳ್ಳಲಾರನು. ತನ್ನಲ್ಲಿ ಉದಿಸುವ ಇಚ್ಛೆಗಳೆಲ್ಲವನ್ನೂ ತೃಪ್ತಿಪಡಿಸಿಕೊಳ್ಳಲು ಅವನು ಪ್ರಯತ್ನಿಸಿದ್ದೇ ಆದರೆ, ಪ್ರಜೆಗಳು ಅವನ ವಿರುದ್ಧವಾಗಿ ಬಂಡೆದ್ದು, ಅವನನ್ನು ಅಧಿಕಾರದಿಂದ ಕೆಳಗೆಳೆದುಬಿಡುತ್ತಾರೆ. ಅವನ ಮೇಲೆ ಯಾವಾಗಲೂ ಅದೊಂದು ಅಪಾಯವು ತೂಗಾಡುತ್ತಿರುತ್ತದೆ. ಚಕ್ರವರ್ತಿಯು ಎಷ್ಟೇ ಬಲಿಷ್ಠನಾದರೂ ಅವನು ಕೆಲವು ನಿಯಮಗಳನ್ನು ಪಾಲಿಸಬೇಕು. ನ್ಯಾಯಯುತ ಆಡಳಿತಕ್ಕಾಗಿ ಹಾಕಿರುವ ಕೆಲವು ಮಿತಗಳನ್ನು ಗೌರವಿಸಬೇಕು. ಅವುಗಳನ್ನು

ಅದೇ ಚಕ್ರವರ್ತಿಯೇ ಜಾರಿಗೆ ತಂದಿರಬಹುದು. ಅವನೂ ಅವಕ್ಕೆ ಬದ್ಧನೇ. ಅವುಗಳನ್ನು ಅವನೂ ಗೌರವಿಸಲೇಬೇಕು. ಅವುಗಳನ್ನು ಅವನು ಅತಿಕ್ರಮಿಸಿದರೆ, ಅಥವಾ ಉಲ್ಲಂಘಿಸಿದರೆ ಅಥವಾ ದಾಟಿ ಹೋದರೆ ಪರಿಣಾಮ ಭೀಕರ ಅರಾಜಕತ್ವ. ಏಕೆಂದರೆ ಆಗ ಪ್ರಜೆಗಳೂ ಕೂಡ ಅದೇ ರೀತಿ ಸ್ವಚ್ಛಂದವಾಗಿ ವರ್ತಿಸತೊಡಗುತ್ತಾರೆ. "ಯಥಾ ರಾಜಾ ತಥಾ ಪ್ರಜಾ (ರಾಜನು ಹೇಗೋ ಪ್ರಜೆಗಳೂ ಹಾಗೆ)."

ಶಾಸನದ ಕರ್ತೃವಾದ ವ್ಯಕ್ತಿಯು ಮೊದಲು ತಾನು ಆ ಶಾಸನಕ್ಕೆ ವಿಧೇಯನಾಗಿರಬೇಕು. ಅದರಿಂದ ಅವನು ಹೊರತಲ್ಲ. ರಾಜನು ತನ್ನ ಪ್ರಜೆಗಳ ಕಲ್ಯಾಣವನ್ನೂ ಸಂತೋಷವನ್ನೂ ತನ್ನ ಅದರ್ಶವನ್ನಾಗಿರಿಸಿಕೊಳ್ಳಬೇಕು. ತನ್ನ ಕಲ್ಯಾಣಕ್ಕೂ ಸಂತೋಷಕ್ಕೂ ಅದು ಅತ್ಯಂತ ಅಗತ್ಯ. ಎರಡೂ ಅಷ್ಟು ನಿಕಟವಾಗಿ ಹೆಣೆದುಕೊಂಡಿವೆ.

ತನ್ನ ಪ್ರಜೆಗಳ ಸೂಕ್ತವೂ ಪ್ರಶಂಸನೀಯವೂ ಆದ ಇಚ್ಛೆಗಳನ್ನು ಪೂರೈಸುವುದು ರಾಜನು ತಪ್ಪಿಸಿಕೊಳ್ಳಲಾಗದ ಕರ್ತವ್ಯ. ಆದ್ದರಿಂದಲೇ ಅವನು ತನ್ನ ಕರ್ತವ್ಯಗಳನ್ನು ಪರಿಣಾಮಕಾರಿಯಾಗಿಯೂ ಸರಾಗವಾಗಿಯೂ ನಿರ್ವಹಿಸುವ ಸಲುವಾಗಿ, ಹಲವರು ಅಧೀನ ಅಧಿಕಾರಿಗಳಿಗೆ ನಿರ್ದಿಷ್ಟ ಕೆಲಸಗಳನ್ನು ಹಂಚಿದ್ದಾನೆ. ರಾಜ್ಯ ಹಾಗೂ ಪ್ರಜೆಗಳಿಗೆ ಸಂಬಂಧಿಸಿದ ಎಲ್ಲ ವಿಚಾರಗಳಿಗೂ ಅವನು ತಾನೇ ಗಮನಹರಿಸದೆ ಹೀಗೆ ಹಂಚಿದ್ದಾನೆ.

ಈ ಜಗತ್ತಿನ ರಾಜ್ಯಗಳ ಅರಸರೇ ಶಾಂತಿ, ಸುಭಿಕ್ಷೆ, ಪ್ರಗತಿಗಳನ್ನು ಕಾಪಾಡುವುದಕ್ಕಾಗಿ ಬಹಳ ಕಟ್ಟುನಿಟ್ಟಾದ ಮಿತಿಗಳನ್ನೂ ನಿಯಮಗಳನ್ನೂ ಕಾನೂನುಗಳನ್ನೂ ಕರ್ತವ್ಯಗಳನ್ನೂ ವಿಧಿಸುತ್ತಾರೆ ಎಂದ ಮೇಲೆ ಇಡೀ ಬ್ರಹ್ಮಾಂಡಕ್ಕೆ ಒಡೆಯನಾದ, ಹೊಣೆಗಾರನಾದ ಭಗವಂತನು ಅಂತಹ ಇನ್ನೆಷ್ಟು ನಿಯಮ ನಿಬಂಧನೆಗಳನ್ನು ವಿಧಿಸಬೇಕು ಎಂಬುದನ್ನು ನೀವೇ ಊಹಿಸಿಕೊಳ್ಳಬಹುದು! ಪ್ರಕೃತಿಯ ವಿವಿಧ ಮುಖಗಳ ಸರಾಗವಾದ ಕಾರ್ಯನಿರ್ವಹಣೆಗಾಗಿ ಅವನು ದೋಷರಹಿತವಾದ ನಿಯಮಗಳನ್ನು ವಿಧಿಸಬೇಕು. ಅವುಗಳ ಸಂಖ್ಯೆ ಎಷ್ಟಿರಬೇಕು, ಅವು ಎಷ್ಟು ಮಟ್ಟಿಗೆ ಸಾರ್ವತ್ರಿಕವಾಗಿರಬೇಕು ಎಂಬುದನ್ನು ಕುರಿತು ಆಲೋಚನೆ ಮಾಡಿ ನೋಡಿ! ಇವು ನಿಸರ್ಗದ ಪ್ರತಿಯೊಂದು ಕ್ರಿಯೆ ಹಾಗೂ ನಿಷ್ಕ್ರಿಯೆಗಳ ಮೇಲೆ ಪರಿಣಾಮ ಬೀರುತ್ತವೆ. ಪ್ರತಿಯೊಂದು ಘಟಕವೂ ತನ್ನದೇ ಆದ ವಿಶಿಷ್ಟ ನಿಬಂಧನೆಗಳನ್ನೂ ಸೀಮಿತಗಳನ್ನೂ ಹೊಂದಿರಬೇಕು (ಹೊಂದಿದೆ). ದೊಡ್ಡ ಚೌಕಟ್ಟಿನಲ್ಲೂ ಅದು

ಹಾಗೆಯೇ. ವಿವಿಧ ಅಂಗಗಳು, ಅವುಗಳ ಸಂಯೋಜಿತ ಕರ್ತವ್ಯಗಳು ಮತ್ತು ಹೊಣೆಗಾರಿಕೆಗಳು ಇರುವ, ಪರಸ್ಪರ ಸಹಕರಿಸುವ ಆಡಳಿತ ವ್ಯವಸ್ಥೆಯಿದೆ.

ನೊಂದಿರುವವನು ಸಕಾಲಿಕ ನೆರವಿಗಾಗಿಯೋ ಉಪಯುಕ್ತ ಮಾರ್ಗದರ್ಶನಕ್ಕಾಗಿಯೋ ಸಲ್ಲಿಸುವ ಪ್ರಾರ್ಥನೆಗಳನ್ನೂ ಆಯಾ ವಿಭಾಗವು ನೋಡಿಕೊಳ್ಳುತ್ತದೆ. ಆದ್ದರಿಂದ ಅಜ್ಞಾನದಿಂದಲೋ ಜಾಗರೂಕತೆಯಿಲ್ಲದೆಯೋ ಸೂಕ್ತವಲ್ಲದ ಮುಖಂಡನಿಗೆ ಬೇಡಿಕೆ ಸಲ್ಲಿಸಿದರೆ, ಪಾಪ ಅವನೇನು ಮಾಡಿಯಾನು? ತನಗೆ ಅದು ಸಂಬಂಧಿಸಿದ್ದಲ್ಲ, ತಪ್ಪಾಗಿ ತನಗೆ ಸಂಬೋಧಿತವಾಗಿದೆ ಎಂದು ಪಕ್ಕಕ್ಕೆ ಸರಿಸುತ್ತಾನೆ ಅಷ್ಟೆ. ಆದ್ದರಿಂದ ನಿರ್ದಿಷ್ಟ ಪ್ರಯೋಜನಗಳಿಗೆ ಮತ್ತು ವರಗಳಿಗೆ ಪ್ರಾರ್ಥನೆ ಸಲ್ಲಿಸುವಾಗ ಅವು ಸಂಬಂಧಿಸಿರುವ ವಿಭಾಗಕ್ಕೆ ನೇರವಾಗಿ ಸಲ್ಲಿಸಬೇಕು. ಮಳೆಗೆ ಸಂಬಂಧಿಸಿದ ದೇವತೆ ವರುಣ. ಮಳೆಗಾಗಿ ಅಥವಾ ಮಳೆಗೆ ಸಂಬಂಧಿಸಿದಂತೆ ಪ್ರಾರ್ಥನೆಯನ್ನು ವರುಣನಿಗೆ ನೇರವಾಗಿ ಸಲ್ಲಿಸಬೇಕು. ಆ ವಿಷಯ ವ್ಯವರಿಹಸಲು ಅವನಿಗೆ ಮಾತ್ರ ಅಧಿಕಾರವಿದೆ. ಹಾಗೆಯೇ ಸೂರ್ಯನು ಆರೋಗ್ಯ ಮತ್ತು ದೇಹಕಾಂತಿಗಳ ಕ್ಷೇತ್ರಕ್ಕೆ ಅಧಿಪತಿ. ಸತ್ಕಾರ್ಯಗಳಿಗೆ ಎದುರಾಗುವ ವಿಘ್ನಗಳನ್ನು ನಿವಾರಿಸುವ ವಿಭಾಗಕ್ಕೆ ಒಡೆಯ ಗಣಪತಿ. ಭೂದೇವಿಯು ಸಸ್ಯಕ್ಕೆ ಸಂಬಂಧಿಸಿದ ದೇವತೆ. ಬೆಳೆಗಳು ಮತ್ತು ಔಷಧೀಯ ಸಸ್ಯಗಳನ್ನು ಪೋಷಿಸುವವನು ಚಂದ್ರ. ಹೀಗೆ ಭಗವಂತ ಶಕ್ತಿಯ ಅವತಾರಗಳು ಮತ್ತು ಅಭಿವ್ಯಕ್ತಿಗಳ ಒಂದೊಂದು ವರ್ಗಕ್ಕೂ ಅದನ್ನು ಮೇಲು ವಿಚಾರಿಸಿಕೊಂಡು ವ್ಯವಹಾರ ನಡೆಸಲು ಕಡಿಮೆ ದೈವಶಕ್ತಿಯುಳ್ಳ ಅಧಿಕಾರವೊಂದಿರುತ್ತದೆ. ಅವರನ್ನು ದೇವತೆಗಳೆಂದು ಕರೆಯುತ್ತಾರೆ. ಮನುಷ್ಯನ ಇಂದ್ರಿಯಗಳೊಂದೊಂದನ್ನೂ ಮೇಲ್ವಿಚಾರಿಸಿ, ರಕ್ಷಿಸಿ, ನಿರ್ದೇಶಿಸಲು ದೇವತೆಗಳಿದ್ದಾರೆ.

ಹೀಗೆ ಕೇಳಬಹುದು: "ಭಗವಂತ ಒಬ್ಬನೇ. ನಮ್ಮ ಪ್ರಾರ್ಥನೆಗಳನ್ನು ಅವನೇ ಕೇಳಿ ತಾನೇ ಏಕೆ ಪೂರೈಸಬಾರದು?" ಈ ಪ್ರಶ್ನೆಯು ತಪ್ಪು ಗ್ರಹಿಕೆಯ ಮೇಲೆ ನಿಂತಿದೆ; ದುರ್ಬಲ ಶಕ್ತಿಯ ಕುರುಹಾಗಿದೆ. ನಿಜ, ದೇವರಿರುವುದು ಒಬ್ಬನೇ. ಆದರೆ ಬ್ರಹ್ಮಾಂಡದ ಆಡಳಿತ ನಿರ್ವಹಣೆಯಲ್ಲಿ ನಿಯಂತ್ರಿಸಬೇಕಾದ, ಆಳಬೇಕಾದ ಅನೇಕಾನೇಕ ಕ್ಷೇತ್ರಗಳಿವೆ. ಇವುಗಳಿಗೆ ಅಧೀನ ದೇವತೆಗಳಿದ್ದಾರೆ. ನೀವು ನನಗೆ ಒಂದು ಪತ್ರವನ್ನು ಬರೆದು ಅದನ್ನು ಬೇರೊಂದು ವಿಳಾಸಕ್ಕೆ ಕಳಿಸಿದರೆ, ಅದು ವಿಳಾಸದಾರರಿಗೆ ಮಾತ್ರ ತಲುಪುತ್ತದೆ ತಾನೆ? ನೀವು ಯಾರನ್ನು ಉದ್ದೇಶಿಸಿದ್ದೀರೋ ಅವರಿಗೆ ಆ ಪತ್ರವನ್ನು ತಲುಪಿಸಲು ಸಾಧ್ಯವಿಲ್ಲ ಅಲ್ಲವೇ? ಹಾಗೆಯೇ ನೀವು ಬೆಳೆಸಿಕೊಂಡ ಆಸೆಯನ್ನು ಪೂರೈಸಲು ಅಥವಾ ನಿರಾಕರಿಸಲು ಸಂಬಂಧಪಟ್ಟ ದೇವತೆಯನ್ನು ನೀವು ಸಂಬೋಧಿಸಬೇಕು. ಆಗ ದೇವತೆಯು ನಿಮ್ಮ

ಸಮಸ್ಯೆಯಲ್ಲಿ ಆಸಕ್ತಿ ವಹಿಸಿ ಪರಿಹರಿಸಲು ತನಗೆ ಸಾಧ್ಯವಿರುವ ಕ್ರಮಗಳನ್ನು ಕೈಗೊಳ್ಳುತ್ತಾನೆ.

ಪ್ರಾರ್ಥನೆ ಸಲ್ಲಿಸುವುದಕ್ಕೆ ಮೊದಲು ವ್ಯಕ್ತಿಯು ತನಗಿರುವ ಅರ್ಹತೆಗಳನ್ನು ಸ್ವಲ್ಪ ಪರೀಕ್ಷೆ ಮಾಡಿಕೊಳ್ಳುವುದು ಅಗತ್ಯ. ಈ ಪರೀಕ್ಷೆಯಿಂದ ತನ್ನ ಆಲೋಚನೆಗಳು, ನಿರ್ಣಯಗಳು, ಆಶೋತ್ತರಗಳು, ನಿರೀಕ್ಷೆಗಳು ದೃಢವಾದ ಶ್ರದ್ಧೆಯಿಂದ ಮೂಡಿ ಬಂದಿವೆಯೇ ಇಲ್ಲವೇ ಎಂಬುದು ಗೊತ್ತಾಗುತ್ತದೆ. ಸತ್ಯವನ್ನು ಪರೀಕ್ಷಿಸಿ ಕಂಡು ಹಿಡಿಯುವುದು ಹೇಗೆ? ಒಂದು ಚಿನ್ನದ ತುಂಡನ್ನು ಒಂದು ವಿಶಿಷ್ಟ ಕಲ್ಲಿನ ಮೇಲೆ ಗೀಚುತ್ತಾರೆ; ಅಲ್ಲಿ ಮೂಡಿದ ಗೆರೆಯನ್ನು ಪರೀಕ್ಷಿಸಿ ಆ ಚಿನ್ನದ ಗುಣಮಟ್ಟವನ್ನು ಅಳೆಯುತ್ತಾರೆ. ನಿಮ್ಮ ಶ್ರದ್ಧೆಯ ಗುಣಮಟ್ಟವನ್ನು ತೋರಿಸುವ ಪರೀಕ್ಷೆ, ಭಗವಂತನು ವಿಧಿಸಿರುವ ಆದೇಶಗಳನ್ನು ನೀವು ಪ್ರಾಮಾಣಿಕವಾಗಿ ಆಚರಿಸುತ್ತಿರುವಿರಾ ಎನ್ನುವುದು. ನಿಮ್ಮ ನಂಬಿಕೆಗಳು ಮತ್ತು ಕಾರ್ಯಚಟುವಟಿಕೆಗಳು ಆ ಶ್ರದ್ಧೆಯ ಅಭಿವ್ಯಕ್ತಿಯಾಗಿರಬೇಕು. ಅವು ಸಾರತಃ ಪವಿತ್ರವಾಗಿರಬೇಕು. ಅವು ಎಷ್ಟುಮಟ್ಟಿಗೆ ಪ್ರೇಮ ಮತ್ತು ಕರುಣೆಗಳಿಂದ ತುಂಬಿರಬೇಕೆಂದರೆ ಅವು ನಿಮ್ಮ ಕಡೆಗೆ ಭಗವದನುಗ್ರಹವನ್ನು ಸೆಳೆದು ತರಬೇಕು.

ಅಂತಹ ಪವಿತ್ರವಾದ ನಂಬಿಕೆ ಮತ್ತು ಶ್ರದ್ಧೆಗಳಿಂದ ಮೂಡಿದ ಕಾರ್ಯ ಚಟುವಟಿಕೆಯೇ ವೇದಶಾಸ್ತ್ರಗಳು ಹೇಳುವ ಕರ್ಮದ ಗುರಿ. ಅದು ಮಾನವ ಪ್ರಗತಿಯ ತಾಯಿ ಬೇರು; ಸಂತುಷ್ಟ ಮಾನವ ಅಸ್ತಿತ್ವದ ಉಸಿರು; ಮಾನವನ ಹಸಿವೆಯನ್ನು ನಿಜವಾಗಿ ಅಡಗಿಸುವ ಆಹಾರ; ಅದು ಅವನ ಬಾಯಾರಿಕೆಯನ್ನು ತಣಿಸುವ ಜೀವಜಲ. ಕರ್ಮವು ಮನುಷ್ಯನೊಂದಿಗೆ, ತನ್ನ ನಿಜವನ್ನು ಸಾಕ್ಷಾತ್ಕರಿಸಿಕೊಳ್ಳುವ ಅಗತ್ಯಕ್ಕೆ ಅನುಗುಣವಾಗಿ ಹೊಂದಿಕೊಂಡಿರುತ್ತದೆ. ಆದ್ದರಿಂದ ಮನುಷ್ಯನ ಮೊದಲ ಹಾಗೂ ನಿರಂತರವಾದ ಕರ್ತವ್ಯವು ವೇದಗಳಲ್ಲಿ ಬೋಧಿಸಿರುವ ಅಥವಾ ವೇದಗಳು ಅಂಗೀಕರಿಸಿರುವ ಕರ್ಮಗಳಲ್ಲಿ ತೊಡಗುವುದೇ ಆಗಿದೆ.

ಮೂರು ಬಗೆಯ ಕರ್ಮಗಳು ಭಗವಂತನನ್ನು ತಲುಪಿ ಅವನ ಅನುಗ್ರಹವನ್ನು ಗಳಿಸುತ್ತದೆ—ವೈಯಕ್ತಿಕವಾದ ಆಸೆಯಿಂದ ಪ್ರೇರಿತವಾಗಿಲ್ಲದ ಕಾರ್ಯ, ನಿಸ್ವಾರ್ಥ ಪ್ರೇಮದಿಂದ ಮೂಡುವ ಚಟುವಟಿಕೆ ಮತ್ತು ಪರಿಶುದ್ಧ ಹೃದಯಗಳಿಂದ ಉದಿಸುವ ಪ್ರಾರ್ಥನೆ. ಭಗವಂತನು ಬೆಲೆ ಕೊಡುವುದು ಇವಕ್ಕೆ. ಇವು ನೇರವಾಗಿ ಅವನನ್ನು ತಲುಪುತ್ತವೆ. ಮಿಕ್ಕವೆಲ್ಲವೂ ಕರ್ಮಗಳ ವಿನಿಯೋಗಕ್ಕೆ ನಿಗದಿಗೊಂಡ ದೇವತೆಗಳ ಕ್ಷೇತ್ರ. ಆದ್ದರಿಂದ ನಿಮ್ಮ ಪ್ರಾರ್ಥನೆಯು ಸ್ವಾರ್ಥರಹಿತವಾಗಿರಬೇಕು,

ಪ್ರೇಮದಿಂದ ಪರ್ಯಾಪ್ತವಾಗಿರಬೇಕು ಮತ್ತು ಪ್ರಾರ್ಥನೆ ತಂದೀಯಬಹುದಾದ ವರದಕಡೆಗೆ ಮೋಹದ ಸಣ್ಣ ಕುರುಹು ಕೂಡ ಅದರಲ್ಲಿ ಇರಬಾರದು.

ನಮ್ಮ ಪವಿತ್ರ ಧರ್ಮಗ್ರಂಥಗಳನ್ನು ಸೂಚಿಸಲು ಬಳಸುವ ಶಾಸ್ತ್ರ ಎಂಬ ಪದಕ್ಕೆ ಆದೇಶಿಸುವುದು, ಅಪ್ಪಣೆ ಮಾಡುವುದು, ಅಧಿಕಾರಯುತವಾಗಿ ನಿರ್ದೇಶಿಸುವುದು ಎಂದರ್ಥ. "ಆಹಾರವನ್ನು ಸೇವಿಸುವುದಕ್ಕೆ ಮುಂಚೆ ಅದನ್ನು ಚೆನ್ನಾಗಿ ಬೇಯಿಸು; ಬೀಜಗಳನ್ನು ಬಿತ್ತುವುದಕ್ಕೆ ಮುಂಚೆ ನೆಲವನ್ನು ಚೆನ್ನಾಗಿ ಉತ್ತು ಹಸನುಗೊಳಿಸು," ಇಂತಹ ವಿವರಣಾತ್ಮಕ ಆದೇಶಗಳನ್ನು ಶಾಸ್ತ್ರಗಳು ಕೊಡುವುದಿಲ್ಲ. ಕರುವಿನ ಹಸಿವೆಯ ಸಂಕಟವನ್ನು ಹೋಗಲಾಡಿಸಲು ತಾಯಿ ಹಸುವಿನ ಕೆಚ್ಚಲಲ್ಲಿ ಆಗಲೆ ಸಮೃದ್ಧವಾಗಿ ಹಾಲನ್ನು ತುಂಬಿಟ್ಟಿರುವಾಗ, ಹುಟ್ಟಿದ ಕರುವು ತನ್ನ ಆಹಾರವನ್ನು ಹುಡುಕಿಕೊಳ್ಳತಕ್ಕದ್ದು ಎಂದು ಆದೇಶಿಸುವವರು ಯಾರು ಮತ್ತು ಅಂತಹ ಆದೇಶ ಎಲ್ಲಿರುತ್ತದೆ? ಹುಟ್ಟಿದ ಶಿಶುವಿಗೆ ಪೋಷಣೆಯ ವ್ಯವಸ್ಥೆ ಮಾಡುವುದರೊಂದಿಗೆಯೇ ಜನನವು ಸಂಭವಿಸುತ್ತದೆ.

ಹಾಗೆ ನೋಡಿದರೆ ಮೊದಲು ಪೋಷಣದ್ರವ್ಯವು ಸಿದ್ಧವಾಗುತ್ತದೆ, ಆಮೇಲೆ ಆ ಪೋಷಣೆಯನ್ನು ಪಡೆಯುವ ಜೀವಿಯ ಜನನವು ಸಂಭವಿಸುತ್ತದೆ, ವ್ಯಕ್ತಿಯ ಆಹಾರವೂ ಜೀವನದ ಮಟ್ಟವೂ ಹಿಂದಿನ ಜನ್ಮಗಳಲ್ಲಿ ಸಂಗ್ರಹಿಸಿದ ಪಾಪ ಪುಣ್ಯಗಳನ್ನು ಅವಲಂಬಿಸಿ ಸಿದ್ಧವಾಗಿರುತ್ತವೆ. ಜೀವನದ ಹೋರಾಟದಲ್ಲಿ ಎದುರಾಗುವ ಅಡ್ಡಿಗಳನ್ನು ಗೆಲ್ಲಲು ಅವನು ತನ್ನ ಬುದ್ಧಿ ಶಕ್ತಿಯನ್ನು ಬಳಸಿ ತನ್ನ ಕೌಶಲವನ್ನು ಬೆಳೆಸಿಕೊಳ್ಳುತ್ತಾನೆ. ಆದರೆ ನಿಜವಾಗಿ ಮಾನವನ ಪ್ರಗತಿಗೆ ಸಾಧಕವಾದ ಅಮೂಲ್ಯ ಸಲಹೆ ಸೂಚನೆಗಳು ಅವನ ಅರಿವಿನಾಚೆಗಿವೆ, ಅವನ ಬುದ್ಧಿಶಕ್ತಿಗೆ ಅವು ಎಟುಕುವುದಿಲ್ಲ. ಆದರೂ ಅವನ ನಡವಳಿಕೆಯ ಲಕ್ಷಣಗಳನ್ನು, ಮನೋಧರ್ಮ ಪ್ರವೃತ್ತಿಗಳನ್ನು, ಅಭಿರುಚಿ ಆಸಕ್ತಿಗಳನ್ನು ವೇದಗಳಲ್ಲಿ ಹೇಳಲಾಗಿದೆ, ಶಾಸ್ತ್ರಗಳಲ್ಲಿ ನಿರ್ದಿಷ್ಟವಾಗಿ ಗುರುತಿಸಲಾಗಿದೆ. ಮನುಷ್ಯರಿಗೆ ಪ್ರಾಪಂಚಿಕತೆಯ ಮಟ್ಟದಲ್ಲಿ ಕರ್ಮವು ಎಷ್ಟು ಮಟ್ಟಿಗೆ ಅವಶ್ಯಕವೋ ಹಾಗೆ ವೇದಶಾಸ್ತ್ರಗಳಲ್ಲಿ ನಿರೂಪಿಸಿದ ರೀತಿಯಲ್ಲಿಯೂ ಅಷ್ಟೇ ಅಗತ್ಯವಾಗಿದೆ. ವೇದ ಶಾಸ್ತ್ರಗಳಲ್ಲಿ ಹೇಳಿದ ಕರ್ಮಗಳು ಮಾನವನ ಅತ್ಯುತ್ತಮ ಹಿತಾಸಕ್ತಿಗಳನ್ನು ಇಹ ಲೋಕದಲ್ಲಿ ರಕ್ಷಿಸುವುವಲ್ಲದೆ ಪರದಲ್ಲೂ ಶಾಂತಿ, ಸಾಮರಸ್ಯಗಳನ್ನು ಒದಗಿಸುತ್ತವೆ ಎಂಬುದನ್ನು ಜ್ಞಾನಿಯು ಅರ್ಥಮಾಡಿಕೊಳ್ಳಬೇಕು.

ಪ್ರಯೋಜನಕಾರಿಯಾದ ಕಾರ್ಯ ಚಟುವಟಿಕೆಯ ಕಲೆಯಲ್ಲಿ, ಮಾನವತೆಯ ಸೇವೆಗೆ ಅಗ್ರಸ್ಥಾನ. ಲಕ್ಷ್ಯವನ್ನು ಸಾಧಿಸಲು ಪ್ರಯತ್ನಿಸುತ್ತಾ ಮುಂದೆ ಸಾಗುತ್ತಿರುವ

ವ್ಯಕ್ತಿಯು ಬಹಳ ಮುಖ್ಯ ನಿಜ. ಏಕೆಂದರೆ ಅವನು ಸೇವೆಗೈಯ್ಯುವ ಜೀವಿ ಸಮುದಾಯದ ಕಲೆ. ಅದ್ಭುತ ಸಾಹಸ ಯಾತ್ರೆಯಲ್ಲಿ ಅವನದೂ ಸಹಯೋಗವಿದೆ. ಇದನ್ನು ತಿಳಿಯುವುದು, ಸೇವಾತತ್ಪರವಾದಾಗ ಈ ಸತ್ಯದ ಅರಿವನ್ನು ಹೊಂದಿರುವುದು ಇವೇ ಸೇವೆಗೆ ಅತ್ಯುತ್ಕೃಷ್ಟವಾದ ಪ್ರೇರಣೆಗಳು.

ಇಂದು ನಾವು ಎಲ್ಲೆಲ್ಲೂ, "ಮಾನವ ಸೇವೆಯೇ ಮಾಧವ ಸೇವೆ, ಲೋಕಸೇವೆಯೇ ಲೋಕೇಶ ಸೇವೆ, ಜನಸೇವೆಯೇ ಜನಾರ್ದನ ಸೇವೆ, ಜೀವ ಸೇವೆಯೇ ದೇವ ಸೇವೆ," ಎಂಬ ಘೋಷವಾಕ್ಯಗಳನ್ನು ಕೇಳುತ್ತಿರುತ್ತೇವೆ. ಇವುಗಳ ಒಟ್ಟು ವಿಚಾರ, ಮನುಷ್ಯನಿಗೆ ಮಾಡುವ ಸೇವೆಯು ಭಗವಂತನಿಗೆ ಅರ್ಪಿಸಿದ ಪೂಜೆಯಾಗುತ್ತದೆ ಎನ್ನುವುದು. ಈ ವಿಚಾರವೇನೋ ಸತ್ಯವಾದದ್ದು, ಬಹು ಮೌಲ್ಯಯುತವಾದ್ದು. ಆದರೆ ಸೇವೆಯ ವಿಧಾನವನ್ನು ಕುರಿತು ಅನೇಕರು ಚೆನ್ನಾಗಿ ಆಲೋಚನೆ ಮಾಡಿಲ್ಲ. ಮಾನವತೆಗೆ ಸೇವೆ ಮಾಡಬೇಕೆಂಬ ಕರೆ ಕೇಳಿಸುತ್ತದೆ, ಅದೇನೋ ಸ್ವಾಗತಿಸಲ್ಪಡುತ್ತದೆ. ಆದರೆ ಆ ಸೇವೆಯನ್ನು ಎಲ್ಲಿ, ಹೇಗೆ ಆಚರಿಸಬೇಕು ಎಂಬುದನ್ನು ತಿಳಿಸುವುದಿಲ್ಲ, ನಿರ್ಧರಿಸುವುದಿಲ್ಲ, ಒಬ್ಬೊಬ್ಬನು ತನಗೆ ಆ ಕ್ಷಣಕ್ಕೆ ಸರಿ ತೋರಿದ ಹಾಗೆ ವರ್ತಿಸುತ್ತಾನೆ. ಅವುಗಳಲ್ಲಿ ಅತ್ಯಂತ ಪ್ರಬಲವಾದ ಪ್ರೇರಣೆ ಸ್ವಪ್ರಶಂಸೆ, ಆತ್ಮ ವೈಭವೀಕರಣ. ಅದಕ್ಕೆ ಸೇವೆಯ ಮುಸುಕು ಹಾಕಲಾಗುತ್ತದೆ. ಸೇವೆಯ ಹೆಸರಿನಲ್ಲಿ ಐಹಿಕಾಭ್ಯುದಯವನ್ನಾಗಲಿ, ಆಧ್ಯಾತ್ಮಿಕ ಪ್ರಗತಿಯನ್ನಾಗಲಿ ಬೆಳೆಸುವ ಪ್ರಯತ್ನವಿಲ್ಲ. ಇದರಿಂದ ರಚನೆಗಿಂತ ಹೆಚ್ಚಾಗಿ ವಿನಾಶವು ಸಿದ್ಧಿಸುತ್ತದೆ. ಒಬ್ಬನಿಗೆ ಸಹಾಯ ಮಾಡುವುದು, ಇನ್ನೊಬ್ಬನೊಂದಿಗೆ ಸಹಕರಿಸುವುದು, ಇತರರೊಂದಿಗೆ ಅವರ ಸೋಲು, ರೋಗ, ಸಂಕಟಗಳ ಸಮಯದಲ್ಲಿ ಸಹಾನುಭೂತಿ ಹೊಂದಿರುವುದು ಇವೆಲ್ಲವೂ ವ್ಯಕ್ತಿಗೆ ಪ್ರಯೋಜನಕಾರಿಯಾಗಿರಬೇಕು, ಮಾತ್ರವಲ್ಲದೆ ಜಗತ್ತಿನ ಸಾಮರಸ್ಯ ಮತ್ತು ಸಂತೋಷಗಳಿಗೆ ಸಹಕಾರಿಯಾಗಿರಬೇಕು.

ಸೇವೆ ಮಾಡಬೇಕೆಂಬ ಪ್ರೇರಣೆಯ ವ್ಯವಸ್ಥೆ ಮತ್ತು ಅವುಗಳನ್ನು ಯಾವ ದಿಕ್ಕಿನಲ್ಲಿ ಹೇಗೆ ಅದನ್ನು ಹರಿಯಿಸಬೇಕು ಎಂಬ ವಿಚಾರಗಳನ್ನು ನಮ್ಮ ಪ್ರಾಚೀನ ಋಷಿಗಳು ಯುಗಗಳ ಹಿಂದೆಯೇ ಹಾಕಿಕೊಟ್ಟುಬಿಟ್ಟಿದ್ದಾರೆ. ವ್ಯಕ್ತಿಯ ಧರ್ಮಾಚರಣೆಯು ಜಾಗತಿಕ ಕಲ್ಯಾಣಕ್ಕೆ ಕೊಡುಗೆ ನೀಡುತ್ತದೆ, ಅದನ್ನು ಸೇವೆಯೆಂದು ಬೆಲೆ ಕಟ್ಟಬಹುದು ಎಂದು ಅವರು ನಂಬಿದ್ದರು. ಆನೆಯ ವಿಶಾಲವಾದ ದುಂಡನೆಯ ಭಾರವಾದ ಹೆಜ್ಜೆ ಗುರುತು ಇತರ ಅನೇಕ ಪ್ರಾಣಿಗಳ ಹೆಜ್ಜೆ ಗುರುತುಗಳನ್ನು ಒಳಗೊಳ್ಳಬಹುದು, ಹಲವನ್ನು ಅಳಿಸಿಯೇ ಬಿಡಬಹುದು. ಹಾಗೆಯೇ ಧರ್ಮದ ಮುದ್ರೆಯು ಸಮಾಜಕ್ಕೂ ಮಾನವ ಜನಾಂಗಕ್ಕೂ ಮಾಡುವ ಸೇವೆಯನ್ನು ಒಳಗೊಳ್ಳುತ್ತದೆ. ಋಷಿಗಳು ಇದನ್ನು ನಂಬಿದ್ದರು.

ಧರ್ಮವು ಉನ್ನತ ಆದರ್ಶಗಳನ್ನು ಪ್ರೇರಿಸುತ್ತದೆ. ನಮ್ಮ ಪ್ರಾಚೀನರು ತಮ್ಮ ತಾಯ ಸ್ತನ್ಯಪಾನದೊಂದಿಗೆಯೇ ಅದನ್ನು ಅರಗಿಸಿಕೊಂಡರು. ಆದ್ದರಿಂದ ಅವರ ಧರ್ಮಾಚರಣೆ ಪರಿಶುದ್ಧವಾಗಿತ್ತು, ಪ್ರಶಂಸನೀಯವಾಗಿತ್ತು, ಅತ್ಯುತ್ತಮವಾದ ಒಳಿತನ್ನು ಉಂಟುಮಾಡುತ್ತಿತ್ತು. ಆ ದಿನಗಳಲ್ಲಿ, ಹಸಿದವರಿಗೆ ಔತಣವನ್ನು ಬಡಿಸಿ ಊಟ ಮಾಡಿಸುವುದು, ವಸತಿಯಿಲ್ಲದವರಿಗೆ ಮನೆಗಳನ್ನು ಒದಗಿಸಿಕೊಡುವುದು, ದೇವಾಲಯಗಳನ್ನು ಕಟ್ಟಿಸುವುದು, ಕೆರೆ ಬಾವಿಗಳನ್ನು ತೋಡಿಸುವುದು—ಇವೆಲ್ಲ ಮನುಷ್ಯನ ಸಂತೋಷಕ್ಕೆ ಇಂಬುಗೊಡುವಂಥವು. ಅಂತಹ ಆದರ್ಶಗಳನ್ನು ಪ್ರಸಾರ ಮಾಡುವ ಸಜ್ಜನರನ್ನು ಕಂಡುಹಿಡಿದು, ಕಲೆಹಾಕಿ, ಅವರನ್ನು ಪೋಷಿಸಲಾಗುತ್ತಿತ್ತು. ಅವರಿಗಾಗಿ ಹಳ್ಳಿಗಳನ್ನೇ ಬಿಟ್ಟುಕೊಡಲಾಗುತ್ತಿತ್ತು. ಜೀವಿಕೆಗಾಗಿ ಬೇಕಾದ ಹಾಗೆ ಬೇಸಾಯದ ಭೂಮಿಯನ್ನು ಕೊಡುತ್ತಿದ್ದರು. ಈ ಮುಖ್ಯಸ್ಥರ ಹಾಗೂ ಸತ್ಪುರುಷರ ಕೀರ್ತಿಯೆಂಬ ಶೀತಲ, ಆಹ್ಲಾದಕರ ಬೆಳದಿಂಗಳು ಇಂದಿಗೂ ಉಳಿದುಕೊಂಡು ಬಂದಿವೆ; ಪ್ರೇಮ, ಕರುಣೆ, ಮಾನವತಾ ಸೇವೆಯಲ್ಲಿ ವಿವೇಕ—ಇವುಗಳಿಗೆ ಅಲುಗದ ಸ್ಥಿರ ಮಾದರಿಗಳನ್ನು ಒದಗಿಸುತ್ತಿವೆ.

ಅಧ್ಯಾಯ ೨೦

# ಮೂಲ ಉದ್ದೇಶ

ಮಾನವ ಜನಾಂಗಕ್ಕೆ ಶಾಂತಿ ಸಾಮರಸ್ಯಗಳು ದೊರಕಬೇಕಾದರೆ ಮೊದಲನೆಯ ಹೆಜ್ಜೆ, ಪ್ರತಿಯೊಬ್ಬ ವ್ಯಕ್ತಿಯೂ ಧರ್ಮವನ್ನೂ, ತನ್ನದೇ ಧರ್ಮವು ಹಾಕಿಕೊಟ್ಟಿರುವ ನಡವಳಿಕೆಯ ನೀತಿ ಸಂಹಿತೆಯನ್ನೂ ಪಾಲಿಸುವುದು. ತನ್ನ ಧರ್ಮ ಮತ್ತು ಅದರ ಮೂಲ ತತ್ತ್ವಗಳು ಕಡ್ಡಾಯವಾಗಿ ಪಾಲಿಸಬೇಕಾದವು ಎಂದು ಅವನು ಭಾವಿಸಿಕೊಂಡಾಗ, ತನಗೂ ಅತ್ಯುತ್ತಮವಾದ ಶ್ರೇಯಸ್ಸನ್ನು ಗಳಿಸಿಕೊಡುತ್ತಾನೆ, ಇತರರಿಗೂ ಉತ್ತಮ ಸೇವೆ ಸಲ್ಲಿಸುತ್ತಾನೆ. ಈ ಸಂದರ್ಭದಲ್ಲಿ ಧರ್ಮ ಎಂದರೆ, ದೇಶದ ಸಾಂಸ್ಕೃತಿಕ ಪರಂಪರೆಗೆ ಅನುಗುಣವಾದ ಕರ್ಮಗಳಲ್ಲಿ ನಿರತನಾಗಿ ರುವುದು. ಈ ದೇಶದ ಧರ್ಮದ ಪ್ರತಿಯೊಂದು ಮುಖದಲ್ಲೂ ವಿಶ್ವಶಾಂತಿ ಮತ್ತು ಲೋಕಾಭ್ಯುದಯಗಳ ಆದರ್ಶವು ಸೇರಿಕೊಂಡಿದೆ.

"ಅಥಾತೋ ಕರ್ಮ ಜಿಜ್ಞಾಸಾ (ಈಗ ಕರ್ಮದ ಪರಿಶೀಲನೆ)," ಎಂದು ಪ್ರಾರಂಭ ವಾಗುತ್ತದೆ ಕರ್ಮದ ರಹಸ್ಯವನ್ನು ಬೌದ್ಧಿಕವಾಗಿ ಭೇದಿಸುವ ಕೆಲಸ. ನಮ್ಮ ಶಾಸ್ತ್ರಗಳ ಬಹು ವ್ಯಾಪಕವಾದ ಕ್ಷೇತ್ರದಲ್ಲಿ ಅದು ಹರಡಿಕೊಂಡಿದೆ. ನಿದರ್ಶನಕ್ಕೆ ವಸ್ತುವನ್ನು ದಾನವಾಗಿ ಕೊಡುವುದು ಉಚಿತ ರೀತಿಯ ಕರ್ಮವೇನೋ ಹೌದು; ಆದರೆ ಅಹಂಕಾರವು ಅದನ್ನು ಮಲಿನಗೊಳಿಸಿ ಅನುಚಿತವಾಗಿ ಮಾಡದಂತೆ ಜಾಗರೂಕತೆ ವಹಿಸಿರಬೇಕು. ಈಗ ಈ ಜನ್ಮದಲ್ಲಿ ವಿಪುಲವಾಗಿ ದಾನ ಮಾಡಿದರೆ ಮುಂದಿನ ಜನ್ಮದಲ್ಲಿ ಸಂತೋಷವು ಖಚಿತವಾಗುತ್ತದೆ, ಈ ಅನುಕೂಲವನ್ನು ಉಪ ಯೋಗಿಸಿಕೊಂಡರೆ ಜನರು ಸತ್ಕರ್ಮ ನಿರತರಾಗುವಂತೆ ಮಾಡುತ್ತದೆನ್ನಲಾಗಿದೆ.

ಅನೇಕರಿಗೆ ಮುಂದಿನ ಜನ್ಮವೊಂದರ ಕಡೆಗೆ ದೃಷ್ಟಿಯಿರುವುದಿಲ್ಲವಾದರೂ ಸಾಮಾ ನ್ಯವಾಗಿ ದಾನವು ಅಹಂಕಾರಯುತ ಉದ್ದೇಶಗಳಿಂದಲೇ ಹರಿದು ಬರುತ್ತದೆ ಎಂದು ಸ್ಥಿರಪಡಿಸಬಹುದು. ಇದು ಎಲ್ಲರಿಗೂ ಸ್ಪಷ್ಟವಾಗಿಯೇ ತಿಳಿದಿರುವ ವಿಚಾರ. ತಾವು ಇತರರಿಗೆ ಸಹಾಯ ಮಾಡಿರುವುದಾಗಿ ಜನರು ಹೆಮ್ಮೆ ಪಡುತ್ತಾರೆ. ಉದಾರಿ, ಧಾರಾಳಿ, ಶ್ರೀಮಂತ ಎಂದು ಹೊಗಳಿಸಿಕೊಳ್ಳಲು ಅವರು ಕಾತರರಾಗಿದ್ದಾರೆ. ಈ ಮನೋಭಾವವು ಅವರ ಅಜ್ಞಾನವನ್ನು ತೋರಿಸುತ್ತದೆ; ಅದು ವಾಸ್ತವತೆಯನ್ನು ಅರಿಯದುದರಿಂದ, ಮಾಯೆಯಿಂದ ಹುಟ್ಟುತ್ತದೆ. ವೇದಗಳಲ್ಲಿ ಮತ್ತು ಶಾಸ್ತ್ರಗಳಲ್ಲಿ

ಋಷಿಗಳು ವಿಧಿ ನಿಷೇಧಗಳನ್ನು ವಿಸ್ತಾರವಾಗಿ ಪಟ್ಟಿ ಮಾಡುವಾಗ ಅಹಿಂಸೆ, ಕರುಣೆ, ಲೋಕಸೇವೆ, ದಾನಪರತೆ ಇವು ಗಳಿಸಬೇಕಾದ ಸದ್ಗುಣಗಳು ಎಂದು ಒತ್ತುಕೊಟ್ಟು ಹೇಳುತ್ತವೆ. ಮುನಿ ವಿದ್ಯಾರಣ್ಯರು ಇವುಗಳನ್ನು ಭಾರತೀಯ ಜ್ಞಾನದ ಸಾರ ಎಂದು ಹೆಸರಿಸಿದರು.

ವಿವೇಕವೆನ್ನುವುದು ಸಮಸ್ತ ಜ್ಞಾನಮೂಲಗಳಿಂದಲೂ ಸಂಗ್ರಹಿಸಿದ ಅಮೂಲ್ಯ ವಾದ ಅಮೃತ. ವಿವಿಧ ಶಾಸ್ತ್ರಗಳಿಂದ ಕಡೆದು ಸಂಗ್ರಹಸಿಕೊಟ್ಟ ಸಿಹಿಯಾದ ಬೆಣ್ಣೆ. "ಇದು ಚಪ್ಪಟೆಯಾಗಿದೆ," ಅಥವಾ "ಇದು ಗುಂಡಾಗಿದೆ," ಎಂದೋ ವಿವೇಚನೆ ಬಳಸಿ ಘೋಷಿಸುವ ಸಾಮರ್ಥ್ಯವೇ ವಿವೇಕ ಎಂದು ಸೂತ್ರೀಕರಿಸಲಾಗದು. ಅದು ಸಾಮಾನ್ಯ ಭಾವನೆ ಅಷ್ಟೆ. ಅದು ಜ್ಞಾನ ಮಾತ್ರ. ಆಮೇಲೆ ಉತ್ತಮ ಜ್ಞಾನ ಎಂದು ಕರೆಯಬಹುದಾದದ್ದು, ಸುಜ್ಞಾನ ಇದೆ. ಮನುಷ್ಯನು ತಪ್ಪು ಸರಿ, ಒಳಿತು ಕೆಡುಕುಗಳ ನಡುವೆ ವ್ಯತ್ಯಾಸವನ್ನು ಗುರುತಿಸಲು ಸಮರ್ಥನಾದಾಗ, "ಕರ್ಮವು ನನ್ನ ಒಳಿತಿಗಾಗಿ ಹಾಗೂ ಇತರರ ಒಳಿತಿಗಾಗಿ ಇದೆ," ಎಂದು ಕಂಡು ಹಿಡಿಯಲು ಶಕ್ತನಾದಾಗ ಜ್ಞಾನ ಸುಜ್ಞಾನ ಎರಡೂ ಮನುಷ್ಯನ ಬುದ್ಧಿಗೆ ಸೀಮಿತವಾಗುತ್ತವೆ. ಅದಕ್ಕಿಂತ ಉನ್ನತವಾದ ವಿಜ್ಞಾನ ಎಂಬ ಹಂತವಿದೆ. ಇಲ್ಲಿ ಸತ್ಯ, ಅಹಿಂಸೆ ಮತ್ತು ಕರುಣೆ ಇವುಗಳಿಗೆ ಬದ್ಧನಾಗುವುದರಿಂದ ಹೃದಯ ಪರಿವರ್ತನೆಯುಂಟಾಗುತ್ತದೆ. ಅಂತಹ ವ್ಯಕ್ತಿಯು ತನ್ನನ್ನೂ, ವಿಶ್ವಕ್ಕೂ ತನಗೂ, ಬ್ರಹ್ಮಾಂಡದ ಸೃಷ್ಟಿಕರ್ತನಿಗೂ ತನಗೂ ಇರುವ ಸಂಬಂಧವನ್ನ ಅರಿತುಕೊಳ್ಳುತ್ತಾನೆ. ಆ ಅರಿವಿನ ಪ್ರಕಾರ, ಸಂದೇಹವಾಗಲಿ ಅಸಂಗತತೆಯಾಗಲಿ ಇಲ್ಲದೆ ಅವನು ಬದುಕುತ್ತಾನೆ. ಅಜ್ಞಾನವು ದುಃಖವನ್ನು ಹುಟ್ಟಿಸುತ್ತದೆ; ವಿಜ್ಞಾನವು ಸಂತೋಷವನ್ನು ಪ್ರದಾನ ಮಾಡುತ್ತದೆ. ಯಾವುದೇ ಅನುಭವವನ್ನು ವಿಜ್ಞಾನ ಎಂದು ಕರೆಯಬಹುದೆ ಎಂದು ಯಾರಾ ದರೂ ಹಿಂದು ಮುಂದು ನೋಡುತ್ತಿದ್ದರೆ ಅದು ಲೌಕಿಕವೋ ಆಧ್ಯಾತ್ಮಿಕವೋ ಎಂದು ಪರೀಕ್ಷಿಸಲಿ. "ಇದು ನನಗೆ ಅಮಿಶ್ರಿತವಾದ ಶುದ್ಧ ಆನಂದವನ್ನು ನೀಡುತ್ತಿದೆಯೆ," ಎಂಬ ಒರೆಗಲ್ಲಿಗೆ ಉಜ್ಜಿ ಪರೀಕ್ಷಿಸಿ ನೋಡಲಿ. ಆಮೇಲೆ ತಕ್ಕ ರೀತಿಯಲ್ಲಿ ಅದನ್ನು ಅವನು ವರ್ಗೀಕರಿಸಬಹುದು. ವಿಜ್ಞಾನಕ್ಕೆ ಅಳತೆಗೋಲು ಧರ್ಮ. ವ್ಯಕ್ತಿಯು ಧರ್ಮವನ್ನು ಹೆಚ್ಚಾಗಿ ಆಚರಣೆಗೆ ತಂದಷ್ಟೂ ಅವನು ವಿಜ್ಞಾನದಲ್ಲಿ ಹೆಚ್ಚು ಆಳವಾಗಿ ಬೇರುಬಿಡುತ್ತಾನೆ.

ವಿಜ್ಞಾನ ಮೂಲವಾದ ಕರ್ಮವು ರಾಷ್ಟ್ರದ ಶಾಂತಿ ಮತ್ತು ಅಭ್ಯುದಯಗಳಲ್ಲಿ ಫಲಿಸುತ್ತದೆ. ಧರ್ಮದ ಅವನತಿಯು ವಿಜ್ಞಾನವು ಮಾಯವಾಗುವುದನ್ನು ಸೂಚಿ ಸುತ್ತದೆ. ಧರ್ಮಕ್ಕೆ ಕಟ್ಟು ಬೀಳುವುದು ಅಥವಾ ವಿಮುಖವಾಗುವುದು ಈ ಆಧಾರದಿಂದಲೇ ಯುಗಗಳನ್ನು ಬೇರೆ ಬೇರೆಯಾಗಿ ವಿಭಜಿಸುವುದು. ಧರ್ಮ,

ನ್ಯಾಯ, ಸಮರಸತೆಗಳು ಪೂರ್ಣವಾಗಿ ನಿರ್ಭೀತವಾಗಿ ಚಾಲ್ತಿಯಲ್ಲಿರುವಾಗ ಧರ್ಮವು ಸುದೃಢವಾಗಿ ನಾಲ್ಕೂ ಕಾಲುಗಳನ್ನು ಊರಿಕೊಂಡು ಭೂಮಿಯ ಮೇಲೆ ನಡೆದಾಡುತ್ತಿದೆ ಎಂದು ಹೇಳಲಾಯಿತು. ಅಂತಹ ಕಾಲವನ್ನು ಕೃತಯುಗ ಎಂದು ಹೆಸರಿಸಿದರು. ನ್ಯಾಯ ಪರತೆ, ಸಾಮರಸ್ಯಗಳು ಕಡಮೆಯಾಗುತ್ತಾ ಹೋದಂತೆ ಜನರು ಧರ್ಮವು ಕುಂಟುತ್ತಾ ಮೂರು ಕಾಲಿನ ಮೇಲೆ ನಡೆಯುತ್ತಿದೆ ಎಂದರು. ಈ ವಿಕಲತೆಯಿಂದ ಬಳಲಿದ ಯುಗವನ್ನು ತ್ರೇತಾಯುಗ ಎಂದು ಕರೆದರು. ನ್ಯಾಯ ಪರತೆ, ಧರ್ಮ, ಸಾಮರಸ್ಯಗಳು ಕೃತಯುಗದಲ್ಲಿದ್ದುದರ ಕಾಲು ಭಾಗದಷ್ಟು ಮಾತ್ರ ಇದ್ದಾಗ ಧರ್ಮವು ಎರಡೇ ಕಾಲುಗಳಿಂದ ಬಹು ಕಷ್ಟಪಟ್ಟು ನಡೆಯಬೇಕಾಯಿತು. ಅದು ದ್ವಾಪರಯುಗ. ಆ ಗುಣಗಳಿಗೆ ಯಾವ ಗೌರವವೂ ದೊರಕದೆ ಬಹುಮಟ್ಟಿಗೆ ಇಲ್ಲವೇ ಇಲ್ಲವಾದಾಗ ಧರ್ಮವು ಒಂಟಿಕಾಲಿನ ಮೇಲೆ ನಿಲ್ಲುತ್ತದೆ. ಇದೇ ಕಲಿಯುಗ. ಹಾಗೆಂದು ಶಾಸ್ತ್ರಗಳು ಹೇಳುತ್ತವೆ.

ಭಾರತೀಯರ ವಿವೇಕವನ್ನು ಧರ್ಮವು ಪರಿಪೋಷಿಸಿದೆ. ಭಾರತೀಯ ಚಿಂತನೆಯು ಈ ವಸ್ತು ಜಗತ್ತು ಮೂಲಭೂತವಾಗಿ ಅಸತ್ಯ ಎಂದು ಸ್ಥಿರೀಕರಿಸುತ್ತದೆ. ಜೀವನ ಮತ್ತು ಅದರ ಸಮಸ್ಯೆಗಳಲ್ಲಿ ನಾವು ತೊಡರಿಕೊಂಡಿರುವುದೇ ಒಂದು ಭ್ರಮಾತ್ಮಕ ಸಾಹಸ ಎಂದು ಬೋಧಿಸುತ್ತದೆ. ಹಾಗಿದ್ದರೂ ಆ ಚಿಂತನೆಯ ಬೇರುಗಳಾದ ಶಾಸ್ತ್ರಗಳು ಧರ್ಮವನ್ನು ತೊರೆಯುವಂತೆ ನಮಗೆ ಹೇಳುವುದಿಲ್ಲ. ಏಕೆಂದರೆ, ಅತ್ಯುನ್ನತವೂ ಅಂತಿಮವೂ ಆದ ಸತ್ಯವನ್ನು ಗ್ರಹಿಸಲು ಧರ್ಮವು ಅನಿವಾರ್ಯವಾಗುತ್ತದೆ. ಮಾನವ ಪರಿಶ್ರಮದ ನಾಲ್ಕು ಪಾರಂಪರಿಕ ಲಕ್ಷ್ಯಗಳು, ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ ಎಂಬ ಪುರುಷಾರ್ಥಗಳು ಪ್ರಪಂಚವು ಸತ್ಯ ಎಂದು ನಂಬುವವರಿಗಾಗಿ ಹೇಳಲ್ಪಟ್ಟಿವೆ.

ನಾಲ್ಕು ಪುರುಷಾರ್ಥಗಳಲ್ಲಿಯೂ ಕೂಡ ಧರ್ಮವನ್ನೇ ಮೊದಲನೆಯ ಮತ್ತು ಮುಖ್ಯವಾದ ಸ್ಥಾನದಲ್ಲಿ ಇರಿಸಿರುವುದನ್ನು ನೋಡಬಹುದು. ಮೊದಲ ಮೂರನ್ನು ಸಾಧನೆ ಮಾಡಿ ನಾಲ್ಕನೆಯದಾದ ಮೋಕ್ಷವನ್ನು ಪಡೆಯಬಹುದು. ಧರ್ಮವು ಹಾಕಿಕೊಟ್ಟ ದಾರಿಯಲ್ಲಿ ಸಂಪತ್ತನ್ನು ಗಳಿಸಿ ತನ್ನ ಬಯಕೆಗಳನ್ನೂ ಪೂರೈಸಿಕೊಳ್ಳುವವನು ಮಾತ್ರವೆ ಜಯಗಳಿಸುವನು. ಮನುಷ್ಯನಿಗೆ ಉನ್ನತತಮ ಆನಂದವನ್ನು ನೀಡುವ ಮೋಕ್ಷವಿರುವುದು ಆ ದಾರಿಯಲ್ಲಿ.

ಆದರೂ ಜೀವಿ ಅಥವಾ ವ್ಯಕ್ತಿಗತ ಸೀಮಿತ ಬದ್ಧಾತ್ಮನು ಆಸೆ ಅಥವಾ ಕಾಮದ ಬಲೆಯಲ್ಲಿ ಸಿಲುಕಿಕೊಂಡಿರುವುದರಿಂದ, ಧರ್ಮ ಮತ್ತು ಮೋಕ್ಷದ ಗುರಿಗಳು ಅದರ ದೃಷ್ಟಿಗೇ ಬೀಳುವುದಿಲ್ಲ, ಅವನಲ್ಲಿ ಯಾವ ಆಸಕ್ತಿಯನ್ನೂ ಉಂಟುಮಾಡು

ವುದಿಲ್ಲ. ಅರ್ಥ ಕಾಮಗಳ ಅಲೆಗಳ ಮೇಲೆ ಮುಳುಗುತ್ತಾ ತೇಲುತ್ತಾ ಇರುವುದರಲ್ಲೇ ಅವನು ಸಂತೋಷವನ್ನು ಪಡೆಯುತ್ತಾನೆ. ಇದು ಆ ಬಗೆಯ ಸ್ವಭಾವವಿರುವ ವ್ಯಕ್ತಿಗಳಲ್ಲಿ ಸಹಜವಾದದ್ದೇ.

ಆಹಾರವನ್ನು ಹುಡುಕುವುದು, ಭೀತಿಯನ್ನು ನಿವಾರಿಸುವುದು, ಆಲಸ್ಯ ನಿದ್ರೆಗಳಲ್ಲಿ ಸುಖಪಡುವುದು ಈ ಅಂಶಗಳಲ್ಲಿ ಮನುಷ್ಯನೂ ಪ್ರಾಣಿಯೂ ಸಮಾನರಾದವರು. ಇಬ್ಬರಲ್ಲೂ ಅಷ್ಟೇ ಕಾತರಿಕೆ, ಅಷ್ಟೇ ತೊಡಗಿಕೊಳ್ಳುವಿಕೆ. ಮೋಕ್ಷವನ್ನು ಅರಸುವುದು ಮತ್ತು ಧರ್ಮವನ್ನು ಪಾಲಿಸುವುದು ಇವು ಮನುಷ್ಯನನ್ನು ಪ್ರಾಣಿ ಹಂತಕ್ಕಿಂತ ಮೇಲಿನ ಉತ್ತಮ ಹಂತಕ್ಕೆ ಏರಿಸುತ್ತವೆ. ಆ ಹಂಬಲವು ಇಲ್ಲದೆ ಹೋದರೆ ಮನುಷ್ಯನು ಆ ಹೆಸರಿಗೆ ಅರ್ಹನಾಗಲಾರ.

ಭಾರತವು ವಿಜ್ಞಾನ ಅಥವಾ ಅತ್ಯುನ್ನತ ಜ್ಞಾನವನ್ನು ಆದರ್ಶವಾಗಿ ಇಟ್ಟುಕೊಂಡಿರುವುದಕ್ಕಾಗಿ ಭಾರತೀಯರೂ ಇತರ ದೇಶಗಳ ಜನರೂ ಕೊಂಡಾಡಿದ್ದಾರೆ. ಭಗವಂತನು ಎಲ್ಲಾ ನಾಡುಗಳಲ್ಲೂ ಇದ್ದಾನೆ ಎಂಬ ನಂಬಿಕೆ ಇಲ್ಲಿದೆ. ಧರ್ಮ ಮತ್ತು ಧರ್ಮವಲ್ಲದ್ದನ್ನು ಪ್ರತ್ಯೇಕಿಸುವ ನಿರಂತರ ಪರಿಶ್ರಮವನ್ನೂ ನ್ಯಾಯ ಮತ್ತು ಸದ್ಗುಣಗಳಿಗೆ ಮೌಲ್ಯವನ್ನೂ ಇಲ್ಲಿ ನೋಡಬಹುದು. ಜೀವಿಗಳನ್ನು ಕುರಿತು ಅನುಕಂಪೆ, ಹಾಗೂ ಅಹಿಂಸೆಗಳನ್ನು ದೈನಂದಿನ ನಡವಳಿಕೆಯ ಮಾರ್ಗದರ್ಶಕಗಳಾಗಿ ಇಟ್ಟುಕೊಂಡಿರುವುದೂ ಇಲ್ಲಿಯೇ. ಸತ್ಯ ಅಸತ್ಯಗಳನ್ನು ಪ್ರತ್ಯೇಕಿಸಲು ಇಲ್ಲಿ ಶ್ರಮಪಡಲಾಗುತ್ತದೆ. ದೇವಾಲಯಗಳು ಇನ್ನೂ ತಲೆಯೆತ್ತುತ್ತಿವೆ, ಆಧ್ಯಾತ್ಮಿಕ ಕಂಪನಗಳಿಂದ ತುಂಬಿವೆ. ಬೇರೆ ದೇಶಗಳಲ್ಲಿ ಮಾನವನು ನಿರ್ಮಿಸಿದ ಚರ್ಚು, ಮಸೀದಿಗಳಂತಹ ಅನೇಕ ದೇವ ಗೃಹಗಳನ್ನು ನೋಡುತ್ತೇವೆ. ಆದರೆ ಅವು ಯಾವುವೂ ಇಷ್ಟು ಪ್ರಾಚೀನವಲ್ಲ, ಮತ್ತು ಇಷ್ಟು ದೀರ್ಘಕಾಲ, ಇಷ್ಟು ಆಳವಾಗಿ ದಿವ್ಯತ್ವದಿಂದ ಆವೇಶಿತವಾದವಲ್ಲ.

ಎಲ್ಲ ಧರ್ಮಗಳೂ ಒಂದು ಎಂಬುದಾಗಿ ಈ ಭಾರತ ಭೂಮಿಯು ಘೋಷಿಸುತ್ತದೆ. ಅಂಗಗಳ ಸಂಖ್ಯೆಗಳಲ್ಲಿ, ಸ್ವರೂಪದಲ್ಲಿ ವ್ಯತ್ಯಾಸವಿರಬಹುದು ; ಅವು ಸಂವಹಿಸುವ ಸಂದೇಶ ಮಾತ್ರ ಮಿಕ್ಕೆಲ್ಲವುಗಳದ್ದೇ ಆಗಿದೆ. ಇದು ಭಾರತದ ಸಂಶೋಧನೆ ಮತ್ತು ಮಾನವಕುಲಕ್ಕೆ ಆಕೆ ನೀಡಿದ ಘೋಷಣೆ.

ಭಗವಂತನಿಗೆ ತಮ್ಮ ಪ್ರಾರ್ಥನೆಗಳನ್ನು ಸಲ್ಲಿಸಲು ಒಬ್ಬ ವ್ಯಕ್ತಿಯು ಒಂದು ಶಿಲೆಯನ್ನು ಸಂಕೇತವನ್ನಾಗಿ ಇಟ್ಟುಕೊಳ್ಳುತ್ತಾನೆ; ಇನ್ನೊಬ್ಬನು ಒಂದು ಲೋಹದ ತುಂಡನ್ನು; ಮೂರನೆಯವನು ಮರವನ್ನು ಇಟ್ಟುಕೊಳ್ಳಬಹುದು. ಎಲ್ಲರೂ ಪ್ರಾರ್ಥ

ನೆಗೆ ಬಹು ಪ್ರಾಮುಖ್ಯವನ್ನು ನೀಡಿ ಅದರ ಲಾಭಕರ ಪರಿಣಾಮಗಳನ್ನು ನಂಬು ತ್ತಾರೆ. ಒಬ್ಬ ವ್ಯಕ್ತಿಯು ಪ್ರಾರ್ಥನೆ ಸಲ್ಲಿಸುವಾಗ ಪೂರ್ವದಿಕ್ಕಿಗೆ ತಿರುಗುತ್ತಾನೆ; ಇನ್ನೊಬ್ಬನು ಪಶ್ಚಿಮವು ನಿಜವಾಗಿಯೂ ಪರಮ ಪವಿತ್ರವಾದ ದಿಕ್ಕೆಂದು ಪರಿಗಣಿ ಸುತ್ತಾನೆ. ಇಬ್ಬರ ಪ್ರಾರ್ಥನೆಯೂ ಅವೇ ಕೊರತೆಗಳು ಮತ್ತು ಅರಕೆಗಳನ್ನು ಕುರಿತಾಗಿರುತ್ತವೆ. ಭಾರತೀಯ ಋಷಿಗಳು, ಚಿಂತಕರು ಈ ನಿರ್ಣಯಕ್ಕೆ ಬಂದರು. ಪ್ರತಿಯೊಂದು ಧರ್ಮಕ್ಕೂ ಅದರವೇ ಶಾಸ್ತ್ರಗಳು ಮತ್ತು ಸಿದ್ಧಾಂತಗಳು ಇವೆ. ಆದರೆ ಒಂದೊಂದರ ವಿಶಿಷ್ಟ ಲಕ್ಷಣಗಳಿಗೂ ಗಮನ ನೀಡಬೇಕು. ಉದಾಹರಣೆಗೆ, ಭಗವಂತನನ್ನು ತನ್ನ ಅತ್ಯಂತ ಆತ್ಮೀಯನೆಂಬಂತೆ ಭಾವಿಸಲಾಗುತ್ತದೆ, ಪ್ರಾರ್ಥನೆ ಮಾಡುವಾಗ ಅವನನ್ನು ಏಕವಚನದಲ್ಲೇ ಸಂಬೋಧಿಸಲಾಗುತ್ತದೆ. "ನೀನು ಇದಿಷ್ಟನ್ನು ಮಾಡಲಾರೆಯಾ?" "ನನ್ನನ್ನು ರಕ್ಷಿಸಲು ನಿನಗೆ ಶಕ್ತಿಯಿಲ್ಲವೆ?" "ನಿನಗೆ ನನ್ನ ಮೊರೆ ಕೇಳಿಸುತ್ತಿಲ್ಲವೆ?" ಇಂಥ ಮಾತುಗಳನ್ನು ನೋಡಿ. ಇವು ಭಾರತೀಯರಲ್ಲಿ ಒಂದು ವಿಶಿಷ್ಟ ಲಕ್ಷಣವಾಗಿದೆ.

ವ್ಯಕ್ತಿಯು ಹೇಗೆ ಆಲೋಚಿಸಲಿ ಏನನ್ನೇ ಆಳವಾಗಿ ಚಿಂತಿಸಲಿ ಆ ಆಲೋಚನೆ ಚಿಂತನೆಗಳ ಮೂರ್ತಿಯಾಗಿ ತನ್ನನ್ನೇ ಪರಿವರ್ತಿಸಿಕೊಂಡು ಬಿಡುತ್ತಾನೆ. ತಾನು ದೇವರು ಎಂಬ ಸತ್ಯದಲ್ಲಿ ಅವನು ತಲ್ಲೀನನಾದ ಪಕ್ಷದಲ್ಲಿ ಅವನು ದೈವವೇ ಆಗುತ್ತಾನೆ. ಹಾಗೆಯೇ ತಾನು ದೇಶದ ರಾಜ ಎಂಬ ಅಸತ್ಯದಲ್ಲಿ ತಲ್ಲೀನನಾದರೆ ಅವನನ್ನು ಹುಚ್ಚನೆಂದೋ ದೇಶದ್ರೋಹಿಯೆಂದೋ ಪರಿಗಣಿಸಲಾಗುತ್ತದೆ. ಭಗ ವಂತನು ಯಾರನ್ನೂ ಹುಚ್ಚನೆಂದಾಗಲಿ, ಅಧೀನನೆಂದಾಗಲಿ ವ್ಯವಹರಿಸುವುದಿಲ್ಲ. ಪ್ರತಿಯೊಬ್ಬ ಜೀವಿಯೂ ದೈವವೇ. ಇದು ಭಾರತೀಯ ಜ್ಞಾನದ ಅಂತಿಮ ತೀರ್ಪು.

ತರ್ಕ ಮತ್ತು ಬೌದ್ಧಿಕ ಪರಿಶೋಧನೆಗಳು ಸತ್ಯದ ಪಾರ್ಶ್ವಿಕ ನಿರೂಪಣೆಯನ್ನು ಮಾತ್ರ ಕೊಡಬಲ್ಲವು. ಸೃಷ್ಟಿಯಲ್ಲಿರುವ ಪ್ರತಿಯೊಂದೂ ಅನೇಕ ಮುಖಗಳನ್ನೂ ಅನೇಕ ಕೋನಗಳನ್ನೂ ಹೊಂದಿದೆ. ತರ್ಕವು ಕೇವಲ ಒಂದು ಕೋನದಿಂದ ನೋಡಬಲ್ಲುದು. ಅದಕ್ಕೆ ಒಂದು ಆಯಾಮವು ಮಾತ್ರ ಕಾಣಿಸುತ್ತದೆ. ವೇದ ವಿಹಿತ ಕರ್ಮಗಳ ಮೂಲಕ ಪರಿಶುದ್ಧಗೊಂಡ, ಸಂಸ್ಕಾರಗೊಂಡ ಬುದ್ಧಿಯು ಮಾತ್ರ ಎರಡೂ ಮುಖಗಳನ್ನು ನೋಡಬಲ್ಲುದು. ಈ ಶುದ್ಧೀಕರಣ ಮತ್ತು ಸಂಸ್ಕರಣ ಪ್ರಕ್ರಿಯೆಗಳಿಗೆ ಒಳಗಾಗದೆ ಹೋದರೆ ವಿಚಾರವು ಲೌಕಿಕ ಪ್ರಪಂಚದ ಮಿತಿಗಳೊಳಗೆ ಮಾತ್ರ ಕೆಲಸಮಾಡುತ್ತಿರುತ್ತದೆ. ಆದ್ದರಿಂದ ಅದು ನಮ್ಮೆದುರಿಗೆ ಮಂಡಿಸುವ ನಿರ್ಣಯಗಳು ಭಾಗಶಃ ಸತ್ಯವಾಗಿರುತ್ತವೆ. ಆದರೆ ವೈದಿಕವಿಧಾನದಿಂದ ಶುಚಿ ಗೊಳಿಸಿ ನಿಶ್ಚಿತಗೊಳಿಸಿದ ಬುದ್ಧಿಯಾದರೋ ಪ್ರಪಂಚವನ್ನು ಕುರಿತ ಪೂರ್ಣಸತ್ಯದ ಚಿತ್ರವನ್ನು ನಮ್ಮೆದುರಿಗೆ ಒಪ್ಪಿಸುತ್ತದೆ. ಬಹುತೇಕ ಇತರ ಧರ್ಮಗಳು ವೇದಗಳು

ಹೇಳಿದ ಈ ಸಾಧನೆಗಳಿಗೆ ಒಳಪಡದ ವಿಚಾರವು ಯಾವ ತತ್ತ್ವಗಳನ್ನು ತಲುಪಿತೋ ಆ ತತ್ತ್ವಗಳನ್ನು ಮಾತ್ರ ಅವಲಂಬಿಸಿರುತ್ತವೆ. ತಾತ್ಕಾಲಿಕವೂ ಅನಿತ್ಯವೂ ಆದುದರ ಗಡಿಗಳಿಂದ ಆಚೆಗೆ ಬಹುದೂರದ ವಿಶಾಲಕ್ಷೇತ್ರವನ್ನು ಬೆಳಗುವ ಶಾಸ್ತ್ರಗಳು ಭಾರತೀಯರಲ್ಲಿವೆ.

ವಿಶ್ವವೊಂದು ಬೃಹತ್ ಬ್ರಹ್ಮಾಂಡ; ಬಿಡಿ ಜೀವಿಯು ಅಣು ಬ್ರಹ್ಮಾಂಡ. ಮೊದಲನೆಯದು ಬ್ರಹ್ಮಾಂಡವಾದರೆ ಎರಡನೆಯದು ಪಿಂಡಾಂಡ. ಆದರೆ ಎರಡರ ಮೂಲ ಸತ್ಯವೂ ಒಂದೇ ಆಗಿದೆ. ಅದು ಸ್ವತಂತ್ರವಾಗಿದೆ, ಬೇರೆ ಯಾವುದೇ ವಸ್ತು, ವಿಷಯದೊಂದಿಗೆ ಸಂಬಂಧಿಸಿಲ್ಲ.  ಅದನ್ನು ಈ ರೀತಿಯಲ್ಲಿ ಅರಿತಾಗ ಅದನ್ನು ಬ್ರಹ್ಮವೆಂದು ಕರೆಯಬಹುದು. ಅದು ವಿಶ್ವವಾಗಿ ಅರಿವನ್ನು ಪ್ರವೇಶಿಸಿದಾಗ ಅದನ್ನು ಪರಬ್ರಹ್ಮವೆಂದು ಉಲ್ಲೇಖಿಸಬಹುದು. ಆತ್ಮವೇ ವಿಶ್ವದ ಮೂಲ ಸತ್ಯ.  ವ್ಯಕ್ತಿಯ ಮೂಲಸತ್ಯವೂ ಅದೇ ಆತ್ಮವೇ. ಆತ್ಮಕ್ಕಿಂತ ಬೇರೆಯಾಗಿ ತೋರುವುದೆಲ್ಲವೂ ಮಾಯೆ ಅಥವಾ ಮಿಥ್ಯೆಯ ವಲಯಕ್ಕೆ ಸೇರಿದವು. ಮಿಥ್ಯೆ ಅಥವಾ ಮಾಯೆಯು, ವಿಚಾರ ಮಾಡಿನೋಡುವವರೆಗೂ ಸತ್ಯವಾಗಿ ಕಾಣಿಸುವ ಒಂದು ಸ್ಥಿತಿಯಾಗಿರುತ್ತದೆ. ವಿಚಾರ ಮಾಡಿದಾಗ ಅಸತ್ಯವೆಂದು ತಿಳಿದುಬರುತ್ತದೆ. ಈ ವಿಶ್ವವೂ ಮತ್ತು ಅದರ ಕಲ್ಪಿತ ಆಧಾರವೂ ಒಂದು ತೋರಿಕೆ ಮಾತ್ರ, ಅಜ್ಞಾನ ಅಥವಾ ಮಾಯೆಯು ಉಂಟುಮಾಡಿದ ತೋರಿಕೆ. ಸೃಷ್ಟಿಗೊಂಡ ಬ್ರಹ್ಮಾಂಡವು ಸತ್ಯ ಎಂದು ನಂಬುವಂತೆ ಮಾಡಿರುವ ನಮಗೆ ಮಂಕುಗವಿಸುವ ಶಕ್ತಿಯು ಉದಿಸಿ ಬಂದದ್ದು ಅದೇ ಆತ್ಮದಿಂದಲೇ. ಈ ಶಕ್ತಿಯು ಪ್ರವರ್ತಿಸಿ ಆತ್ಮಕ್ಕೆ ಆಚ್ಛಾದಿಸಿ ಕೊಂಡಾಗ ಅದನ್ನು ಪರಮಾತ್ಮ ಎಂದು ಉಲ್ಲೇಖಿಸಲಾಗುತ್ತದೆ.

ಆತ್ಮವು ಸಚ್ಚಿದಾನಂದ ಅಥವಾ ಸತ್ ಚಿತ್ ಆನಂದಗಳನ್ನು ಅವಿಭಾಜ್ಯ ಅಖಂಡ ವಸ್ತುವೆಂಬಂತೆ ಪರಿಗಣಿಸುವುದು. ಮಾಯೆಯು ಮೂರು ಗುಣಗಳ ಒಂದು ಮಿಶ್ರಣ. ಅವು ತಾಮಸಿಕ, ರಾಜಸಿಕ ಮತ್ತು ಸಾತ್ವಿಕ ಗುಣಗಳು. ಅವು ಇಚ್ಛಾಶಕ್ತಿ ಬಯಕೆ, ಕ್ರಿಯಾಶಕ್ತಿ ಕಾರ್ಯ ಮತ್ತು ಜ್ಞಾನಶಕ್ತಿ ಜ್ಞಾನಗಳಾಗಿ ವ್ಯಕ್ತಗೊಳಿಸಿಕೊಳ್ಳುತ್ತವೆ. ತಮಸ್ ಎಂಬ ಗುಣವು ವಿವಿಧತೆಯ ತೋರಿಕೆಯನ್ನು ಉಂಟುಮಾಡುತ್ತದೆ, ಏಕವೂ ಏಕ ಮಾತ್ರವೂ ಆದುದನ್ನು ಮರೆಮಾಡುತ್ತದೆ. ರಜಸ್ ಎಂಬ ಗುಣವು ಸತ್ಯವನ್ನೂ ಜ್ಞಾನದ ಸಂತೋಷವನ್ನೂ ಅರಸುತ್ತದೆ. ಸತ್ವ ಎಂಬ ಗುಣವಾದರೋ ಸ್ವಚ್ಛವಾದ ಕನ್ನಡಿಯಿದ್ದ ಹಾಗೆ. ತನ್ನೆದುರಿಗೆ ಇರುವ ವಸ್ತುಗಳ ಮತ್ತು ಘಟನೆಗಳ ಸರಿಯಾದ ಚಿತ್ರವನ್ನು ಕೊಡುತ್ತದೆ. ಅದು ಪರಬ್ರಹ್ಮವನ್ನು ಪ್ರತಿಬಿಂಬಿಸಿ ಈಶ್ವರ ಅಥವಾ ಭಗವಂತನನ್ನು ತೋರಿಸುತ್ತದೆ. ಹೀಗೆ ವ್ಯಕ್ತನಾದ ಭಗವಂತನು ತನ್ನ

ಸಂಕಲ್ಪದಿಂದ ಸೃಷ್ಟಿಗೊಂಡ ವಿಶ್ವ ಅಥವಾ ಜಗತ್ತಾಗುತ್ತಾನೆ. ಪ್ರತಿಬಿಂಬಿತನಾದ ಈಶ್ವರನಿಗೆ ಮಾಯಾ ಶಕ್ತಿಯಿಲ್ಲ.

ಸರೋವರದ ಸ್ವಚ್ಛವಾದ ನೀರು ಮೇಲೆ ನೊರೆಯನ್ನು ಗುಳ್ಳೆಗಳನ್ನೂ ಹೊಂದಿರುವ ಹಾಗೆ ಆತ್ಮದ ಮೂಲ ಸ್ವರೂಪವು ಮಾಯೆಯ ಮರುಳುಗೊಳಿಸುವ ತೋರಿಕೆ ಯಿಂದ, ಮಾಯೆಯ ಉತ್ಪನ್ನವಾದ ಅಸಂಖ್ಯ ವೈವಿಧ್ಯಪೂರ್ಣ ನಾಮ ರೂಪಗ ಳಿಂದ ಕೂಡಿದ ಜಗತ್ತು ಅಥವಾ ವಿಶ್ವದ ತೋರಿಕೆಯಿಂದ ಮಲಿನಗೊಂಡಂತೆ ಕಾಣುತ್ತದೆ. ಮಾಯೆಯ ಮೂರೂ ಗುಣಗಳು ಸಮತೋಲನದಲ್ಲಿರುವಾಗ, ಕಲಕಾಟವಿಲ್ಲದ ಶಾಂತ ಸ್ಥಿತಿಯಲ್ಲಿ ಇರುವಾಗ ವಿಶ್ವವು ಅವ್ಯಕ್ತವೆಂದು ಹೇಳಲಾಗು ತ್ತದೆ. ಇದು ಬೀಜ ಸ್ಥಿತಿ. ಮುಂದಿನ ಎಲ್ಲಾ ಏರುಪೇರುಗಳೂ ಅದರಲ್ಲಡಗಿವೆ, ಸುಪ್ತವಾಗಿವೆ. ತಮಸ್ಸು ಮತ್ತು ರಜಸ್ಸುಗಳ ಪ್ರಭಾವ ಹೆಚ್ಚಾಗಿದ್ದಾಗ ಸೃಷ್ಟಿಯು ಸಂಭವಿಸುತ್ತದೆ, ಬ್ರಹ್ಮಾಂಡವು ಹೊರಬರುತ್ತದೆ. ಅವು ಜೀವಿಗಳನ್ನು ಕ್ರಿಯಾಪರರ ನ್ನಾಗಿಸುತ್ತವೆ. ಮಾಯಾ ಶಕ್ತಿಯನ್ನು ಮೂರು ಗುಣಗಳು ತಮಗೆ ಬೇಕಾದಂತೆ ಉಪಯೋಗಿಸುತ್ತವೆ. ಒಂದೊಂದೂ ವ್ಯಕ್ತವಾಗಿ ಮಿಕ್ಕವುಗಳ ಮೇಲೆ ಪ್ರಭಾವ ಬೀರುತ್ತದೆ. ಸತ್ವವು ಪ್ರಧಾನವಾದಾಗ ಅದನ್ನು ಆತ್ಮ ಮಾಯಾ ಎಂದು ಕರೆಯಲಾ ಗುತ್ತದೆ. ರಜಸ್ಸು ಮೇಲುಗೈ ಆದಾಗ ಅದು ಅವಿದ್ಯೆಯಾಗುತ್ತದೆ ಮತ್ತು ತಮಸ್ಸು ಪ್ರಧಾನವಾದಾಗ ಅದು ತಾಮಸಿ ಅಥವಾ ಆಲಸ್ಯವಾಗುತ್ತದೆ. ಆತ್ಮವು ಸಾತ್ವಿಕ ಗುಣದಲ್ಲಿ ಪ್ರತಿಫಲಿತವಾದಾಗ ಆ ಪ್ರತಿಬಿಂಬವು ಈಶ್ವರ ಎನಿಸುತ್ತದೆ; ರಜೋಗುಣ ದಲ್ಲಿ ಪ್ರತಿಫಲಿಸಿದಾಗ ಜೀವ ಎನಿಸುತ್ತದೆ; ತಮೋಗುಣದಲ್ಲಿ ಪ್ರತಿಬಿಂಬಿತವಾದಾಗ ಜಡದ್ರವ್ಯವಾಗುತ್ತದೆ. ಈಶ್ವರ ಜೀವ ದ್ರವ್ಯಗಳ ನಡುವೆ ವ್ಯತ್ಯಾಸವನ್ನು ಕಲ್ಪಿಸುವುದು ಎರಕದ ಅಚ್ಚು, ಉಪಾಧಿ. ಉಪಾಧಿ ಅಥವಾ ಎರಕ ಅಥವಾ ಕೋಶ ಯಾವುದೂ ಇಲ್ಲದೆ ಹೋದಾಗ ಇವೆಲ್ಲವೂ ಆತ್ಮವೇ. ವಿಶ್ವವು ವ್ಯಕ್ತವಾಗಿರುವುದೇ ಜೀವಿಗಳ ಮತ್ತು ಅವುಗಳಲ್ಲಿ ಅತ್ಯಂತ ಬುದ್ಧಿವಂತನಾದ ಮಾನವನ ಹಿತವನ್ನು ಲಕ್ಷಿಸುವ ಸಲುವಾಗಿ. ಆತ್ಮವೇ ಸಾತ್ವಿಕ, ರಾಜಸಿಕ, ತಾಮಸಿಕ ಗುಣಗಳಲ್ಲಿ ಪ್ರತಿಫಲಿತವಾಗಿ ಈಶ್ವರ, ಜೀವ ಮತ್ತು ದ್ರವ್ಯಗಳ ಭಾವನೆಯನ್ನು ಉಂಟುಮಾಡುತ್ತದೆ. ಈ ಪ್ರಕ್ರಿಯೆಯಲ್ಲಿ ಒಂದು ಅಂಶವನ್ನು ಒತ್ತುಕೊಟ್ಟು ಹೇಳಬೇಕು. ಬಿಂಬವನ್ನು ತೋರಿಸುವ ಕನ್ನಡಿಗೆ ಸೀಮಿತವಾದ ಸಾಮರ್ಥ್ಯವಿದೆ. ಅದು ತನಗೆ ಎದುರಾಗಿರುವ ವಸ್ತುಗಳನ್ನು ಮಾತ್ರ ಪ್ರತಿಫಲಿಸಬಲ್ಲುದು. ಆದರೆ ಕನ್ನಡಿಯ ಮೇಲ್ಮೈ ಮೇಲೆ ಉಬ್ಬಿದರೆ ಅಥವಾ ತಗ್ಗಿದರೆ, ಅಥವಾ ಸಮತಟ್ಟಾದ ಮೇಲ್ಮೈ ಮೇಲೆ ಕೊಳೆಯು ಮೆತ್ತಿದ್ದರೆ ಪ್ರತಿಬಿಂಬವು ವಿಕೃತವಾಗುತ್ತದೆ ಇಲ್ಲವೆ ಅಸ್ಪಷ್ಟವಾಗಿತ್ತದೆ. ಇದರಿಂದ ಮೂಲವಸ್ತುವಿಗೇನೂ ಬಾಧಕವಿಲ್ಲ. ಪ್ರತಿಬಿಂಬವು ಮಟ್ಟಿಗೆ ವಿಕೃತಗೊಂಡಿದೆ.

ಆದರೆ ಪ್ರತಿಬಿಂಬದ ಆಧಾರದ ಮೇಲೆ ಮೂಲವಸ್ತುವನ್ನೇ ಸಾಮಾನ್ಯವಾಗಿ ತಿರಸ್ಕರಿಸಲಾಗುತ್ತದೆ.

ಮಾಯೆ ಅಥವಾ ಅಜ್ಞಾನದಿಂದಾಗಿ ಬ್ರಹ್ಮವೂ ವಿಕಾರವಾಗಿ ಕಾಣಿಸುತ್ತದೆ. ಈ ವಿಕಾರವು ಒಂದು ಆರೋಪವಷ್ಟೆ. ಅದು ಬ್ರಹ್ಮಕ್ಕೇ ಅನ್ವಯಿಸಿರುವಂತೆ ತಪ್ಪಾಗಿ ಭಾವಿಸಲಾಗುತ್ತದೆ. ದೇವೋತ್ತಮ ಪರಮಪುರುಷನಾದ ಪರಮೇಶ್ವರನ ಪ್ರತಿ ಬಿಂಬವು ಮಾಯೆಯ ಕನ್ನಡಿಯಲ್ಲಿನ ಒಂದು ಪ್ರತಿಬಿಂಬ. ಹಾಲು ಮೊಸರಾಗು ವಂತೆ, ಬ್ರಹ್ಮವು ಜಗತ್ತಾಗಿದೆ, ವಿಶ್ವವಾಗಿದೆ. ಈ ಪರಿವರ್ತನೆಯು ಮಾಯೆಯ ಕೌಶಲವಾಗಿದೆ. ಬ್ರಹ್ಮವು ಮಾಯೆಯ ಒಡೆಯನೇ ಹೊರತು ಅಧೀನನಲ್ಲ. ಅದು ಮಾಯಾ ಶಕ್ತಿಯನ್ನು ಬಿಡುಗಡೆಮಾಡಿ ಸರಿಯಾಗಿ ನಿರ್ದೇಶಿಸುತ್ತದೆ. ಆದ್ದರಿಂದ ಸಾಕಾರ ಬ್ರಹ್ಮ ಅಥವಾ ಪರಮೇಶ್ವರನು ಸರ್ವಶಕ್ತ, ಸರ್ವಜ್ಞ ಎನಿಸಿಕೊಳ್ಳುತ್ತಾನೆ. ವ್ಯಕ್ತಿಯ ಪ್ರಗತಿಗೆ ಜೀವ, ಈಶ್ವರ, ದ್ರವ್ಯ (ಭೂತ) ಈ ಮೂರೂ ತನ್ನದೇ ದಾರಿಯಲ್ಲಿ ಕೊಡುಗೆ ನೀಡುತ್ತವೆ.

ಈಶ್ವರ ಅಥವಾ ಭಗವಂತನು ಸಕಲ ಇಷ್ಟಾರ್ಥಗಳ ಪೂರೈಕೆ. ಈ ವಿಶ್ವದಲ್ಲಿ ಇರುವ ಸಮಸ್ತ ಭೋಗವಸ್ತುಗಳೂ ಅವನ ಇಚ್ಛೆಯಿಂದ ಉದಿಸುತ್ತವೆ, ಆದ್ದ ರಿಂದ ಅವನಿಗೆ ಕಾಮನೆಗಳೇ ಇಲ್ಲ. ಅವನು ಈ ವಿಶ್ವವನ್ನು ವ್ಯಕ್ತಪಡಿಸುವುದು ತನ್ನ ಯಾವುದೇ ಆಸೆಯನ್ನು ಪೂರೈಸಿಕೊಳ್ಳುವ ಸಲುವಾಗಿಯೋ ತನ್ನಲ್ಲಿರುವ ಯಾವುದೋ ಕೊರತೆಯನ್ನು ತುಂಬಿಕೊಳ್ಳುವುದಕ್ಕಾಗಿಯೋ ಅಲ್ಲ. ಅದು ಸಂಪೂರ್ಣವಾಗಿ ಲೋಕದ ಜೀವಿಗಳ ಕಲ್ಯಾಣಕ್ಕಾಗಿ. "ನ ಮೇ ಪಾರ್ಥ ಅಸ್ತಿ ಕರ್ತವ್ಯಂ ತ್ರಿಷು ಲೋಕೇಷು ಕಿಂಚನ (ಮೂರು ಲೋಕಗಳಲ್ಲೂ ನಾನು ನಿರ್ವಹಿಸ ಲೇಬೇಕಾಗಿರುವ ಯಾವುದೇ ಕರ್ತವ್ಯವಿಲ್ಲ)," ಎಂದು ಕೃಷ್ಣನು ಹೇಳುತ್ತಾನೆ. ಸೃಷ್ಟಿ, ಪ್ರಕಟವಾಗುವಿಕೆ, ಮೂಡುವಿಕೆ ಅವನ ಸಹಜ ಸ್ವರೂಪವೇ ಆಗಿದೆ. ಆದ್ದರಿಂದಲೇ ಅವನನ್ನು ಲೀಲಾವಿನೋದಿ, ವಿನೋದದಲ್ಲಿ ಆಸಕ್ತನು ಎಂಬ ವರ್ಣನೆಯನ್ನು ಅವನಿಗೆ ಅನ್ವಯಿಸಲಾಗುತ್ತದೆ. ಎಲ್ಲಾ ಜೀವಿಗಳಲ್ಲಿ ಪ್ರಜ್ಞೆಯನ್ನು ತುಂಬಿ ಅವರು ಜಾಗರೂಕರಾಗಿರುವಂತೆ, ಸಕ್ರಿಯರಾಗಿರುವಂತೆ ಮಾಡುವುದು ಅವನ ಸಂಕಲ್ಪವೇ. ಪ್ರತಿಯೊಬ್ಬನಿಗೂ ಅವನ ಆಲೋಚನೆ, ಮಾತು ಮತ್ತು ಕೃತಿಗಳಿಗೆ ತಕ್ಕ ಫಲಗಳನ್ನು ಅವನು ಕೊಡುತ್ತಾನೆ, ಆದ್ದರಿಂದ ಅವನನ್ನು ಕರ್ಮಫಲ ಪ್ರದಾತ ಎಂದು ಕರೆಯುತ್ತಾರೆ. ಭಗವಂತನ ಮಧ್ಯಪ್ರವೇಶವಿಲ್ಲದೆ, ಕರ್ಮವು ಫಲಿಸುವುದಿಲ್ಲ; ನಿರ್ದಿಷ್ಟ ಕರ್ಮವು ನಿರ್ದಿಷ್ಟವಾಗಿ ಗುರುತಿಸುವ ಹಾಗೆ ನಡೆಯುವುದೆಂಬ ಭರವಸೆ ಯಿರುವುದಿಲ್ಲ. ಅಲ್ಲದೆ ಕರ್ಮವು ಕ್ಷಣಿಕ ಎಂದು ಋಷಿಗಳು ಹೇಳುತ್ತಾರೆ. ಮೊದಲು ಆಲೋಚನೆ ಮೂಡುತ್ತದೆ, ಒಡನೆಯೇ ಕಾರ್ಯವು ಘಟಿಸುತ್ತದೆ;

ಕಾರ್ಯವನ್ನನುಸರಿಸಿ ಫಲ. ಆದರೆ ಫಲವು ಯಾವಾಗ ದೊರಕುತ್ತದೆ ಅಥವಾ ಅದರ ಸ್ವರೂಪವೇನಾಗಿರುತ್ತದೆ ಎಂಬುದನ್ನು ಮುಂದಾಗಿ ನುಡಿಯುವುದು ಸಾಧ್ಯವಿಲ್ಲ. ಆದ್ದರಿಂದ ಎಲ್ಲವೂ ದೈವಾಜ್ಞೆ ಎಂದು ಒಪ್ಪಿಕೊಳ್ಳಬೇಕಾಗುತ್ತದೆ. ನಮ್ಮ ಸೀಮಿತ ಬುದ್ಧಿಯು ಏನನ್ನು ವ್ಯಾಖ್ಯಾನಿಸಲು ಸಾಧ್ಯವಿಲ್ಲವೋ ಅದನ್ನು ಅವನ ಇಚ್ಛೆ ಎಂದು ಸುಮ್ಮನಾಗಬೇಕು.

ಬಿಡುವು ಎಷ್ಟೇ ದೀರ್ಘವಾಗಿರಲಿ, ಎಷ್ಟು ಜನ್ಮಗಳು ಕಳೆಯಲಿ, ವ್ಯಕ್ತಿಯು ತನ್ನ ಕರ್ಮಫಲಗಳನ್ನು ಅನುಭವಿಸದೆ ತಪ್ಪಿಸಿಕೊಳ್ಳುವ ಹಾಗಿಲ್ಲ. ಒಂದು ಕರ್ಮದ ಮೂಲ, ಅದು ಯಾವಾಗ ಸಂಭವಿಸಿತು ಮೊದಲಾದ ವಿಚಾರಗಳ ಪರೀಕ್ಷೆಗೆ ಇಲ್ಲಿ ಎಡೆಯೇ ಇಲ್ಲ. ಏಕೆಂದರೆ ಅದಕ್ಕೆ ಅವನು ಕಾಲದ ಆದಿಯನ್ನೇ ಹುಡುಕಿಕೊಂಡು ಹೋಗಬೇಕಾಗುತ್ತದೆ. ಭಗವಂತ, ವಿಶ್ವ, ಜೀವಿ, ಕರ್ಮ ಮತ್ತು ಅಜ್ಞಾನಗಳ ಆದಿಯನ್ನು ಕಂಡು ಹಿಡಿಯುವುದು ಸಾಧ್ಯವೇ ಇಲ್ಲ. ಅವೆಲ್ಲ ಕಾಲಾತೀತವಾದವು. ಭಗವದ್ಗೀತೆಯಲ್ಲಿ ಕೃಷ್ಣನು, "ಗಹನೋ ಕರ್ಮಣೋ ಗತಿಃ (ಕರ್ಮದ ಗತಿಯು ಸೂಕ್ಷ್ಮವಾದದ್ದು, ಕಂಡು ಹಿಡಿಯಲು ಸಾಧ್ಯವಿಲ್ಲ)," ಎಂದು ಹೇಳುತ್ತಾನೆ. ವ್ಯಕ್ತಿ ಮಾಡಿದ ಕರ್ಮದ ಫಲವು ಎಷ್ಟೋ ಜನ್ಮಗಳ ನಂತರವೂ ಅವನ ಎದುರಿಗೆ ಬಂದು ನಿಲ್ಲಬಹುದು. ಭಗವಂತನು ನಿತ್ಯಸಾಕ್ಷಿಯಾಗಿದ್ದಾನೆ. ಪ್ರತಿಯೊಂದು ಕ್ರಿಯೆಯನ್ನೂ ಆಳುವ ಶಕ್ತಿಯಾಗಿದ್ದಾನೆ. ಈ ದೃಷ್ಟಿಯಿಂದ ನೋಡಿದಾಗ, ದೇವ ಮತ್ತು ಜೀವರು ಬಿಡಿಸಲಾರದಷ್ಟು ಬಿಗಿಯಾಗಿ ಪರಸ್ಪರ ಬಂಧಿತರಾಗಿದ್ದಾರೆ ಎಂದು ಹೇಳಬೇಕಾಗುತ್ತದೆ. ಜೀವಿಗಳೇ ಇಲ್ಲದೆ ದೇವನಿಲ್ಲ. ಮಕ್ಕಳೇ ಇಲ್ಲದಾಗ ತಂದೆ ಎಂಬ ಪದವು ಹೇಗೆ ಅರ್ಥಪೂರ್ಣವಾದೀತು? ಆದ್ದರಿಂದ ಭಗವಂತನು ವಿಶ್ವವನ್ನು ಸೃಷ್ಟಿಸಿದ್ದು ಜೀವಿಗಳಿಗೆ ಕರ್ಮಕ್ಷೇತ್ರವನ್ನು ಒದಗಿಸಿ ಆ ಕರ್ಮಗಳಿಗೆ ತಕ್ಕ ಫಲಗಳನ್ನು ನೀಡುವ ಅವಕಾಶದ ಸಲುವಾಗಿ. ಪಂಚಭೂತಗಳೂ ಅದೇ ಉದ್ದೇಶವನ್ನು ಈಡೇರಿಸುತ್ತವೆ. ಆ ಫಲಗಳ ಪ್ರಮಾಣ ಮತ್ತು ಗುಣಮಟ್ಟಗಳಿಗನುಗುಣವಾಗಿ ಜೀವದ ಭೌತಿಕವಾಹಕಗಳನ್ನು ನಿರ್ಮಿಸುತ್ತವೆ. ಲೋಕಗಳು ಎಂಬ ಪ್ರದೇಶಗಳಿವೆ. ಈಗ ಪುಣ್ಯವನ್ನೋ ಪಾಪವನ್ನೋ ಬಹು ಪ್ರಮಾಣದಲ್ಲಿ ಸಂಗ್ರಹಿಸಿಕೊಂಡ ಜೀವಗಳು ಅಲ್ಲಿ ವಾಸ ಮಾಡುತ್ತವೆ. ಇವಕ್ಕೂ ನಮಗೆ ಕಾಣಿಸುವ ಪ್ರದೇಶಗಳು ಮತ್ತು ಜೀವಿಗಳೂ ಯಾವ ಸಂಬಂಧವೂ ಇಲ್ಲ.

ಜೀವ ತತ್ತ್ವ ಮತ್ತು ವ್ಯಕ್ತಿ ತತ್ತ್ವಗಳೆರಡೂ ಅದೇ ಅರ್ಥವನ್ನು ಹೊಂದಿವೆ. ಸತ್ಯದ ಅರಿವಿನ ಅಭಾವದಿಂದ ಅಥವಾ ಅಜ್ಞಾನದಿಂದ ಮೂಡಿವೆ. ಮತ್ತೆ ಇದಕ್ಕೆ ಕಾರಣವೂ ಗುಣಗಳೊಂದಿಗೆ ಅಥವಾ ಪ್ರವೃತ್ತಿಗಳೊಂದಿಗೆ ಬಂಧನ. ವ್ಯಕ್ತಿಯಲ್ಲಿ ರಜೋಗುಣವಿರುತ್ತದೆ, ಕಾರ್ಯಶೀಲ ಪ್ರವೃತ್ತಿಯಿರುತ್ತದೆ, ಮಿಕ್ಕ ಎರಡು ಗುಣ

ಗಳೂ ಬೀಜ ರೂಪದಲ್ಲಿರುತ್ತವೆ. ಸತ್ಯವು ಅವಿದ್ಯೆಯಲ್ಲಿ ಅಥವಾ ಮಾಯೆಯಲ್ಲಿ ಆಚ್ಛಾದಿತವಾದಾಗ ಜಗತ್ತು ಅಥವಾ ಸೃಷ್ಟಿಯು ಉದಿಸುತ್ತದೆ. ಅದೇ ಕ್ಷಣದಲ್ಲಿ ವ್ಯಕ್ತವಾದ ಗುಣಗಳು ಮತ್ತು ಮೂರು ಮುಖ್ಯಗುಣಗಳಲ್ಲಿ ಯಾವುದಾದರೂ ಒಂದರ ಪ್ರಾಧಾನ್ಯಕ್ಕನುಗುಣವಾದ ವ್ಯಕ್ತಿಗಳು ಹಲವು ಜನ್ಮಗಳಲ್ಲಿ ಮಾಡಿದ ಕರ್ಮದ ಒಟ್ಟು ಫಲ. ಸಾತ್ವಿಕಗುಣವು ಪ್ರಧಾನವಾಗಿದ್ದಾಗ ಅವನೊಬ್ಬ ಭಾಗವತ ನಾಗುತ್ತಾನೆ. ಭಗವದ್ಭಕ್ತಿಯಿಂದ ಪ್ರಚೋದಿತನಾಗಿ ಸದಾಕಾಲವು ಭಗವಂತನ ಮಹಿಮೆಗಳನ್ನು ಕೊಂಡಾಡುವುದರಲ್ಲಿ ಪೂಜಿಸುವುದರಲ್ಲಿ ಕಳೆಯುತ್ತಾನೆ. ರಾಜಸಿಕ ಗುಣಗಳ ಪ್ರಾಧಾನ್ಯವು ಅವನನ್ನು ಒಬ್ಬ ಬಲಿಷ್ಠ, ಬುದ್ಧಿವಂತ ವ್ಯಕ್ತಿಯನ್ನಾಗಿ ದಿವ್ಯತೆಯ ಕಡೆಗಿನ ಉನ್ನತ ಆದರ್ಶಗಳೇನೂ ಇಲ್ಲದ ತೃಪ್ತನನ್ನಾಗಿ ಮಾಡುತ್ತದೆ. ತಾಮಸಿಕ ಗುಣದ ಪ್ರಾಬಲ್ಯದಿಂದ ಅವನು ಪ್ರಾಣಿಗಳಂತೆ, ಪಕ್ಷಿಗಳಂತೆ, ದೇಹಕ್ಕೆ ಮತ್ತು ಅದರ ಅಗತ್ಯಗಳಿಗೆ ಬದ್ಧನಾಗುತ್ತಾನೆ. ಜೀವಿಯು ಮಾಯೆಯ ಸುರುಳಿ ಗಳಲ್ಲಿ ಸಿಲುಕಿಕೊಂಡಿರುವುದರಿಂದ ತಾನು ಒಂದು ಪರಿಣಾಮ ಎಂಬುದಾಗಿಯೂ ಯಾವುದೋ ಒಂದು ಕಾರಣಕ್ಕೆ ಬದ್ಧನಾಗಿರುವುದಾಗಿಯೂ ಕಲ್ಪಿಸಿಕೊಳ್ಳುತ್ತಾನೆ. ಈ ರೀತಿಯಲ್ಲಿ ಸತ್ಯವನ್ನು ಅರಿಯದಿರುವ ಸ್ಥಿತಿಯನ್ನು ಗೆಲ್ಲಬೇಕಾದರೆ ಆತ್ಮವಿದ್ಯೆ ಯಿಂದ ಸಾಧ್ಯ. ಅದು ಸಾಹಸವನ್ನು ಪ್ರಚೋದಿಸುತ್ತದೆ ಮತ್ತು ಯಶಸ್ಸಿನ ಭರವಸೆ ಕೊಡುತದೆ. ಅದು ಈಗ ನಂಬಿರುವಂತೆ ಜೀವ ಮತ್ತು ಜಗತ್ತು (ವ್ಯಕ್ತಿ ಮತ್ತು ವಸ್ತು, ಮನುಷ್ಯ ಮತ್ತು ಬ್ರಹ್ಮಾಂಡ)ಗಳ ನಡುವೆ ಕಲ್ಪಿಸುವ ವ್ಯತಾಸವನ್ನು ನಾಶಮಾಡುತ್ತದೆ. ಈ ಹೋರಾಟದಲ್ಲಿ ಮಾನವನಿಗೆ ನೆರವಾಗಲು, ಅವನಿಗೆ ಸತ್ಯದ ಅರಿವುಂಟುಮಾಡಲು ವೇದಗಳು ಸಮುಚಿತವಾದ ಕರ್ಮಗಳನ್ನು ವಿಧಿಸುತ್ತವೆ. ಅದೇ ಕರ್ಮಕಾಂಡ ಎಂದು ಕರೆಯಲ್ಪಡುತ್ತದೆ. ಅವಿದ್ಯೆಯಲ್ಲಿ ಸಿಕ್ಕಿಕೊಂಡಿರುವವ ರೆಗೆ, ಮನುಷ್ಯ ಮತ್ತು ವಿಶ್ವ, ಊರ್ಧ್ವಲೋಕ ಅಧೋಲೋಕಗಳು, ಧರ್ಮ ಅಧರ್ಮ, ಕರ್ಮ, ಭಕ್ತಿ, ಜ್ಞಾನ—ಈ ವಿಚಾರಗಳನ್ನು ಗೌರವಿಸಬೇಕು, ತನ್ನ ಬದುಕನ್ನು ಅದಕ್ಕೆ ತಕ್ಕಂತೆ ರೂಪಿಸಿಕೊಳ್ಳಬೇಕು. ವಿಶ್ವದಲ್ಲಿ ಕಾಣಿಸುವ ವಿವಿಧತೆ ಯನ್ನು ನಂಬುತ್ತಿರುವವರೆಗೆ ಸಾಕಾರ ಭಗವಂತ ಅಥವಾ ಈಶ್ವರನು ಹಾಕಿದ ಮಿತಿಗಳಿಗೆ ಒಳಪಟ್ಟು ಅವನು ವರ್ತಿಸುತ್ತಿರುತ್ತಾನೆ.

ಪ್ರತಿಯೊಬ್ಬ ಜೀವಿಗೂ ವಿಶ್ವವು ಮೂಲಭೂತವಾಗಿ ಅದರದೇ ಮಾನಸಿಕ ಚಿತ್ರ ವಲ್ಲದೆ ಬೇರೇನೂ ಅಲ್ಲ. ಆದ್ದರಿಂದ ಮನಸ್ಸು ಮತ್ತು ಅದರ ಪ್ರಕ್ರಿಯೆಗಳನ್ನು ತೆರೆಯದೆ ಬ್ರಹ್ಮತತ್ತ್ವವನ್ನು ಅರ್ಥ ಮಾಡಿಕೊಳ್ಳುವುದು ಕಷ್ಟ. ಆಕಾಶದ ನಿಜವಾದ ಸ್ವರೂಪವನ್ನು ತಿಳಿಯದವರು ಅದು ಹೊಗೆ ಮತ್ತು ಧೂಳಿನ ಒಂದು ಗುಮ್ಮಟ ವೆಂದು ಭಾವಿಸುತ್ತಾರೆ. ಹಾಗೆಯೇ ಅವಿದ್ಯೆಯಿಂದಾಗಿ, ಸತ್ಯವನ್ನರಿಯದೆ ಆತ್ಮವನ್ನು

ತಪ್ಪಾಗಿ ಭಾವಿಸಲಾಗುತ್ತದೆ. ಅದು ಬುದ್ಧಿಯ ರೂಪದಲ್ಲಿ ಕೋಶಸ್ಥವಾಗಿದೆ ಎಂದೂ ಕಾರ್ಯಶೀಲವಾಗಿದೆಯೆಂದೂ ಆ ಕರ್ಮಫಲಗಳನ್ನು ಅನುಭವಿಸುತ್ತಾನೆಂದೂ ಸಂತೋಷ ದುಃಖಗಳ ದ್ವಂದ್ವದ ಕಟ್ಟಿಗೆ ಸಿಲುಕಿರುವುದಾಗಿಯೂ ಹಾಗೆಯೇ ನೋವು ನಲಿವು, ಬಂಧ ಮೋಕ್ಷಗಳ ಗೋಜಲಿಗೆ ಒಳಪಟ್ಟಿರುವುದಾಗಿಯೂ ಭಾವಿಸಲಾಗುತ್ತದೆ. ವ್ಯವಹಾರದ ದೃಷ್ಟಿಯಿಂದ ಉನ್ನತ ಸತ್ಯವು ಸಹಜವಾಗಿಯೇ ಬೇರೆಯಾಗಿ ಕಾಣಿಸುತ್ತದೆ, ಅವು ಪ್ರತ್ಯೇಕಿಸಲಾರದಂತೆ ಪರಸ್ಪರ ಸಂಬಂಧಿಸಿದ್ದರೂ. ಆಕಾಶ ಒಂದೇ. ಆದರೆ, ಪಾತ್ರೆಗಳ ವಿವಿಧ ಸ್ವರೂಪಗಳಿಂದಾಗಿ, ಅದು ಮನೆಯಲ್ಲಿ, ಗಡಿಗೆಯಲ್ಲಿ, ಕಟ್ಟಡದಲ್ಲಿ, ಕ್ಯಾನ್ವಾಸಿನಲ್ಲಿ ಅಡಕವಾಗಿರುವಂತೆ ತೋರುತ್ತದೆ. ಹೀಗೆ ಪ್ರತ್ಯೇಕವಾಗಿ ತೋರುವ ಅಸ್ತಿತ್ವ ಸತ್ಯವಾದುದಲ್ಲ, ಮನೆ, ಸರೋವರ, ಬೆಟ್ಟ ಮೊದಲಾದ ಈ ಎಲ್ಲ ಪಾತ್ರೆಗಳಲ್ಲೂ ಇರುವ ಆಕಾಶ ಒಂದೇ. ಅವೆಲ್ಲ ಬೇರೆ ಬೇರೆ ಆಕಾರ, ವರ್ತನೆ, ಉಪಯೋಗಗಳಿರುವ ವಿವಿಧ ರೂಪಗಳು, ಆಕೃತಿಗಳು. ಹಾಗೆಯೇ ಜೀವಗಳು ಬೇರೆ ಬೇರೆ ನಾಮಗಳನ್ನೂ ರೂಪಗಳನ್ನೂ ಹೊಂದಿವೆ. ಉಪಯೋಗದಲ್ಲಿ ವರ್ತನೆಯಲ್ಲಿ ವೈಚಿತ್ರಗಳು, ವೈಶಿಷ್ಟ್ಯಗಳನ್ನು ಒಳಗೊಂಡಿವೆ. ಆದರೆ ಪ್ರತಿಯೊಂದು ಮಣಿಯ ಒಳಗೂ ಹಾದು ಅವುಗಳನ್ನು ಹಾರವಾಗಿ ಕಟ್ಟಿರುವ ದಾರದಂತೆ ಎಲ್ಲ ಜೀವಿಗಳ ಒಳಗಿರುವ ಉನ್ನತ ಪ್ರಜ್ಞೆಯು ಒಂದೇ ಆಗಿದೆ.

ಅದೇ ಆತ್ಮ, ಅಜ್ಞಾನದಿಂದಾಗಿ ಅದನ್ನು ನಾನು ಎಂದು ತಪ್ಪಾಗಿ ತಿಳಿದುಕೊಳ್ಳಲಾಗುತ್ತದೆ. ಈ ಸತ್ಯವನ್ನು ಗೆದ್ದುಕೊಳ್ಳುವವರೆಗೆ ಮನುಷ್ಯನು ವೈವಿಧ್ಯ ಹಾಗೂ ಪರಿವರ್ತನೆಗಳ ಹಿಡಿತದಿಂದ ತನ್ನನ್ನು ಬಿಡಿಸಿಕೊಳ್ಳಲು ಸಾಧ್ಯವಿಲ್ಲ. ಈ ಸತ್ಯವನ್ನು ಶಾಸ್ತ್ರಗಳು ನಮಗೆ ತಿಳಿಸಿಕೊಡುತ್ತವೆ ಮತ್ತು ನಾವೇ ಅದನ್ನು ಸಾಕ್ಷಾತ್ಕರಿಸಿಕೊಳ್ಳುವಂತೆ ಆದೇಶಿಸುತ್ತವೆ. ಯಾವುದನ್ನು ತಿಳಿದುಕೊಂಡರೆ ಮಿಕ್ಕೆಲ್ಲವನ್ನೂ ತಿಳಿದುಕೊಂಡಂತಾಗುತ್ತದೆಯೋ ಅದು ಏನು? ಆತ್ಮವನ್ನು ಅರಿತರೆ ಎಲ್ಲವನ್ನೂ ತಿಳಿದುಕೊಂಡಂತೆ ಎಂದು ಶ್ರುತಿಗಳು ಸಾರುತ್ತವೆ. ಜಗತ್ತು ಸಾಪೇಕ್ಷವಾಗಿ ಸತ್ಯ; ಭಾಗಶಃ ಅದು ಮಿಥ್ಯೆ. ಅದನ್ನು ತಿಳಿದುಕೊಳ್ಳುವುದರಿಂದ ಯಾವ ಪ್ರಯೋಜನವೂ ಇಲ್ಲ, ಮತ್ತು ಅದು ಅನಗತ್ಯವೂ ಹೌದು. ಅದು ಬದುಕಿನ ಶಾಸನಬದ್ಧ ಉದ್ದೇಶವಲ್ಲ. ಆತ್ಮ ತತ್ತ್ವವನ್ನು ಅರಿಯುವುದರಲ್ಲಿ ತೊಡಗಿಸಿದಾಗ ಬದುಕನ್ನು ಸಾರ್ಥಕವಾದ ರೀತಿಯಲ್ಲಿ ಕಳೆದಂತೆ, ಮಾನವ ಪರಿಶ್ರಮವನ್ನು ಅತ್ಯುತ್ತಮವಾಗಿ ಉಪಯೋಗಿಸಿದಂತೆ. ಇತರ ವ್ಯರ್ಥ ಪರಿಶ್ರಮಗಳ ವಿರುದ್ಧವಾಗಿ ಶ್ರುತಿಯು ಎಚ್ಚರಿಕೆ ಕೊಡುತ್ತದೆ. ಶ್ರುತಿಗಳು, ಸ್ಮೃತಿ ಇತಿಹಾಸ ಪುರಾಣ ಮೊದಲಾದ ತತ್ಸಂಬಂಧಿತ ಪವಿತ್ರ ಸಾಮಗ್ರಿ ಎಲ್ಲಿಯೂ ಈ ವಿಶ್ವವು ಹೇಗೆ ಸೃಷ್ಟಿಯಾಯಿತೆಂದು ಬೋಧಿಸುವುದಿಲ್ಲ, ಮೂಲ

ಹಾಗೂ ಪ್ರಕ್ರಿಯೆಗಳನ್ನು ಅಧ್ಯಯನ ಮಾಡಬೇಕೆಂದು ಹೇಳುವುದಿಲ್ಲ. ಆ ಜ್ಞಾನದ ಅಭಾವವು ಅಪಾಯಕಾರಿ ಎಂದು ಅವು ಸಾರುವುದಿಲ್ಲ, ಬದಲು ಆ ಕೆಲಸವು ಅಸಾಧ್ಯವಾದದ್ದು ಎಂದು ಒತ್ತಿ ಹೇಳುತ್ತವೆ.

"ವಿಶ್ವವು ಹೇಗೆ ಸೃಷ್ಟಿಗೊಂಡಿತೆಂದಾಗಲಿ, ಅದು ಯಾವಾಗ ನಾಶವಾಗುತ್ತದೆ ಎಂದಾಗಲಿ ತಲೆಕೆಡಿಸಿಕೊಳ್ಳುವುದೇಕೆ? ನಿಮ್ಮ ವಿಷಯ ನೀವು ಯೋಚನೆ ಮಾಡಿ." ಶಾಸ್ತ್ರಗಳು ಹೇಳುವ ಪಾಠ ಇದು, "ನಿನ್ನನ್ನು ಅರಿತುಕೋ." ಒಮ್ಮೆ ನಿಮ್ಮನ್ನು ತಿಳಿದುಕೊಂಡಿರಿ ಎಂದರೆ ಮಿಕ್ಕೆಲ್ಲವೂ ತನಗೆ ತಾನೆ ನಿಚ್ಚಳವಾಗುತ್ತದೆ. ನೀನು ಬ್ರಹ್ಮಾಂಡದಲ್ಲೊಂದು ಪಿಂಡಾಂಡ, ಸಮಷ್ಟಿಯೊಳಗಿನ ವ್ಯಷ್ಟಿ. ಎಲ್ಲಾ ಜೇಡಿಮಣ್ಣಿನ ಮಡಕೆಗಳ ಬಗೆಗೆ ತಿಳಿದುಕೊಳ್ಳಲು ಒಂದೇ ಒಂದು ಮಡಕೆಯ ವಿಷಯ ತಿಳಿದರೆ ಸಾಕು; ಹಾಗೆಯೇ ನಿಮ್ಮನ್ನು ನೀವು ಅರಿತಾಗ ಮತ್ತೆಲ್ಲವನ್ನೂ ಅರಿತಂತಾಗುತ್ತದೆ.

ಮಗುವು ಅಳುವನ್ನು ನಿಲ್ಲಿಸಿ ಮತ್ತೆ ನಲಿದಾಡುವಂತೆ ಮಾಡಲು ಆಯಾ ಒಂದು ಕತೆಯನ್ನು ಹೇಳುತ್ತಾಳೆ. ಮಗುವಿಗೆ ಅದು ತುಂಬಾ ಇಷ್ಟವಾಗುತ್ತದೆ. ಕತೆ ಹೇಳುವುದರಲ್ಲಿ ಆಯಾಗಿದ್ದ ಏಕೈಕ ಉದ್ದೇಶ ಮಗುವನ್ನು ಸಮಾಧಾನಪಡಿಸುವುದು. ಕತೆಯಾದರೋ ಅದರ ಬುದ್ಧಿಶಕ್ತಿಯ ಮಟ್ಟದಲ್ಲಿ ಸಂಯೋಜಿಸಿದ ಒಂದು ಕಾರ್ಯ ವಿಧಾನ. ಹಾಗೆ ಜೀವಿಯು, ಮಾಯೆಯ ಆದಿರಹಿತ ಆಕರ್ಷಣೆಯ ಸೆಳೆತಕ್ಕೆ ಸಿಕ್ಕಿ, ಹಿಂದಿನ ಅನೇಕ ಜನ್ಮಗಳಲ್ಲಿ ಬೆಳೆಸಿಕೊಂಡ ಪ್ರವೃತ್ತಿಗಳಿಂದ ಬದ್ಧನಾಗಿ ತನ್ನೆದುರಗಿರುವ ವಿಶ್ವದ ಮೂಲವನ್ನು ಕುರಿತು ವಿಚಾರ ಮಾಡದೆ ಇರಲಾರ. ಆ ವಿಚಾರಕ್ಕೆ ಶ್ರುತಿಯು ತಾತ್ಕಾಲಿಕ ಪರಿಹಾರ ಕೊಡುವ ಮಾತುಗಳಲ್ಲಿ ಉತ್ತರ ಕೊಡುತ್ತದೆ. ವಿಶ್ವವು ಹೇಗೆ ಸೃಷ್ಟಿಯಾಯಿತು ಎಂಬ ಪ್ರಶ್ನೆಯು ಸ್ವಪ್ನವು ಹೇಗೆ ಸೃಷ್ಟಿಯಾಗುತ್ತದೆ ಎಂಬ ಪ್ರಶ್ನೆಗೆ ಸಮನಾದ ನೆಲೆಯಲ್ಲೇ ಇದೆ. ಕನಸು ನಿದ್ರೆಯಿಂದ ಹುಟ್ಟುತ್ತದೆ; ವಿಶ್ವವು ಮಾಯೆಯ ಮೂಲಕ ಹುಟ್ಟುತ್ತದೆ. ಸ್ವಪ್ನಕ್ಕೆ ಒಂದು ಕ್ರಮವಾಗಲಿ ವ್ಯವಸ್ಥೆಯಾಗಲಿ ಹೇಗೆ ಇಲ್ಲವೋ ಹಾಗೆಯೇ ವಿಶ್ವವೂ ಅದ್ಭುತಗಳಿಂದಲೂ ರಹಸ್ಯಗಳಿಂದಲೂ ತುಂಬಿದೆ. ಅನೇಕ ವೇಳೆ ಸ್ವಪ್ನದಲ್ಲಿ ಆಗುವಂತೆ ಎರಡಲ್ಲ, ಇರುವುದು ಒಂದೇ ಒಂದು. ಇದೇ ಅದ್ವೈತ ಸಿದ್ಧಾಂತ. ಸೃಷ್ಟಿಯ ಮೂಲವನ್ನು ಕುರಿತ ಪ್ರಶ್ನೆಯಂತೆಯೇ ಮನುಷ್ಯನನ್ನು ಸಾಮಾನ್ಯವಾಗಿ ಕಾಡುವ ಇನ್ನೊಂದು ಸಮಸ್ಯೆ ಈ ಅಜ್ಞಾನವು ಹೇಗೆ ಉಂಟಾಯಿತು ಎನ್ನುವುದು. ಈ ಸಮಸ್ಯೆಗೆ ಉತ್ತರವನ್ನು ಋಷಿಗುರು ವಸಿಷ್ಠರು ಶ್ರೀರಾಮಚಂದ್ರನಿಗೆ ಹೀಗೆ ಹೇಳಿದ್ದಾರೆ, "ರಾಮ! ಅಜ್ಞಾನವು ಮನುಷ್ಯನನ್ನು ಹೇಗೆ ಪ್ರವೇಶಿಸಿತು ಎಂಬುದರ ಪರಿಶೀಲನೆಯಲ್ಲಿ ತೊಡಗುವುದಕ್ಕೆ ಬದಲಾಗಿ, ಅದನ್ನು ಕಳೆದುಕೊಳ್ಳುವ ಪ್ರಯತ್ನದಲ್ಲಿ ನೀನು ನಿರತನಾಗಬೇಕೆಂದು ನಾನು ಬಯಸುತ್ತೇನೆ." ಇದು ರಾಮನಿಗೆ ಮಾತ್ರವಲ್ಲ, ಇಡೀ

ಮಾನವ ಕೋಟಿಗೆ ನೀಡಿದ ಉಪದೇಶ. ಈ ವಸ್ತು ಜಗತ್ತಿನ ಹಿಂದಿರುವ ಸತ್ಯದ ಸಾಕ್ಷಾತ್ಕಾರ ಯಾರಿಗೆ ಆಗಿಲ್ಲವೋ ಅವರಿಗೆಲ್ಲ ಸಹಾಯ ಮಾಡುತ್ತದೆ. ವ್ಯಕ್ತಿಯು ತನ್ನ ಆಂತರಿಕ ಅನುಭವವನ್ನು ವಿಶ್ವವು ನಿತ್ಯ ಪರಿವರ್ತನ ಶೀಲವಾದ ವಸ್ತು ಎಂಬುದನ್ನು ಅಲಕ್ಷಿಸುವ ಸ್ಥಿತಿಗೆ ಕೊಟ್ಟಿರುವ ಹೆಸರೇ ಅಜ್ಞಾನ.

ಹಾಗಾದರೆ ಈ ಪ್ರಶ್ನೆ ನಮ್ಮನ್ನು ಕಾಡುವುದಾದರೂ ಏಕೆ? ಈ ಅಜ್ಞಾನ ನಿಮ್ಮಲ್ಲಿದೆ ಎಂದು ಒಪ್ಪಿಕೊಳ್ಳಿ. ಈ ಪರಿವರ್ತನಶೀಲ ಜಗತ್ತಿಗೆ ಹಾಗೂ ಅದರ ಸಂಗಾತಿಯಾದ ಜನನ ಮರಣ ಚಕ್ರಕ್ಕಂಟಿಕೊಂಡಿರುವ ಮೋಹವನ್ನು ಕಳೆದುಕೊಳ್ಳಲು ಮಾಡುವ ಹೋರಾಟವನ್ನು ನಿಲ್ಲಿಸಿ. ಅಜ್ಞಾನವು ಬ್ರಹ್ಮಕ್ಕೆ ಸೇರಿದೆಯೋ ಜೀವಿಯಿಂದ ಮೂಡುತ್ತದೆಯೋ ಎಂದು ವಾದಾಡುವುದು ಅಜ್ಞಾನದ ಇನ್ನೊಂದು ಸಮರ್ಥನೆ ಅಷ್ಟೆ. ಅಜ್ಞಾನವನ್ನು ಕಳೆದುಕೊಳ್ಳುವ ವಿಧಾನಗಳ ಮೇಲೆ ಗಮನವನ್ನು ಕೇಂದ್ರೀಕರಿಸುವುದು ಖಂಡಿತವಾಗಿಯೂ ಹೆಚ್ಚು ಅಗತ್ಯವಾದದ್ದು. ಏಕೆಂದರೆ ಅದು ಜ್ಞಾನದ ಎದುರಿಗೆ ಖಂಡಿತವಾಗಿಯೂ ಸೋಲುತ್ತದೆ. ಜ್ಞಾನವು ಬೆಳಕು; ಅಜ್ಞಾನವು ಕತ್ತಲೆ. ಬೆಳಕು ಹೊಳೆಯುವವರೆಗೆ ಮಾತ್ರ ಕತ್ತಲು ಇರಬಲ್ಲುದು.

ಅಧ್ಯಾಯ ೨೧

# ಅಂತರಂಗದ ಅನ್ವೇಷಣೆ

"ಜ್ಞಾನವು ಉದಿಸುತ್ತಿದ್ದಂತೆಯೇ ಇವೆಲ್ಲವೂ ತಮ್ಮ ವೈಯಕ್ತಿಕತೆಯನ್ನು ಕಳೆದು ಕೊಂಡು ಮಾಯವಾಗಿಬಿಡುತ್ತವೆ," ಎಂದು ಗುರು ವಸಿಷ್ಠರು ರಾಮನಿಗೆ ಹೇಳಿ ದರು. "ರಾಮ! ಈ ಅಜ್ಞಾನವು ಹೇಗೆ ಬೆಳೆಯಿತು ಎಂಬುದನ್ನೂ ಯಾವ ವಿಧಾನದಿಂದ ಅದನ್ನು ನಾಶಮಾಡಬಹುದು ಎಂಬುದನ್ನೂ ನೀನು ಅರ್ಥಮಾಡಿ ಕೊಳ್ಳಬೇಕು."

ಈ ಉಪದೇಶದಲ್ಲಿ ಒಂದು ರಹಸ್ಯ ಅಡಗಿದೆ. ಶತಶತಮಾನಗಳ ಅನ್ವೇಷಣೆ ಯಿಂದಲೂ ಈ ವಿಶ್ವವು ಎಲ್ಲಿಂದ ಹುಟ್ಟಿತು, ಹೇಗೆ ಹುಟ್ಟಿತು ಎಂಬ ರಹಸ್ಯವನ್ನು ಬಿಡಿಸಲು ಸಾಧ್ಯವಾಗಿಲ್ಲ. ಅದಕ್ಕೊಂದು ವ್ಯಕ್ತಿಗತ ಕಾರಣವಿದ್ದಿದ್ದರೆ ವಿಚಾರವು ಫಲಪ್ರದವಾಗುತ್ತಿತ್ತು. ವಿಶ್ವ ಅಥವಾ ಜಗತ್ತು ಒಂದು ವಸ್ತುವಲ್ಲ. "ಅದು ಹೇಗೆ ಹುಟ್ಟಿತು," "ಎಲ್ಲಿಂದ ಹುಟ್ಟಿತು," ಎಂಬ ಪ್ರಶ್ನೆಗಳು "ಹಾವು ಹಗ್ಗದ ಮೇಲೆ ಹೇಗೆ ಕಾಣಿಸಿಕೊಂಡಿತು, ಭಯವನ್ನುಂಟು ಮಾಡಿತು?" ಎಂಬ ಪ್ರಶ್ನೆಗೆ ಸಮನಾದುದು. ಅಲ್ಲಿರುವುದು ಹಗ್ಗ ಮಾತ್ರ, ಮುಸ್ಸಂಜೆಯ ಮಬ್ಬು ಬೆಳಕಿನಲ್ಲಿ ನೋಡುವವನ ದೋಷಪೂರ್ಣ ಬುದ್ಧಿಯಿಂದಾಗಿ ಹಾವು ಅದರ ಮೇಲೆ ಆರೋಪಿತವಾಯಿತು. ಅಂದರೆ, ತರ್ಕವು ಸೃಷ್ಟಿಸಿದ ಭ್ರಮೆ ಕಾರಣವಾಗಿ ಅದು ಹಾಗೆ ಆರೋಪಿತ ವಾಯಿತು. ಅಂದರೆ ಅಜ್ಞಾನವೇ ತಪ್ಪು ಕಲ್ಪನೆಗೆ ಆಧಾರವಾಯಿತು.

ಬ್ರಹ್ಮವು ಹಗ್ಗ, ಜಗತ್ತು ಮಾಯೆಯಿಂದ ಬಾಧಿತವಾದ ವಿಚಾರವು ಅದರ ಮೇಲೆ ಹೇರಿರುವ ಹಾವು. ನಾವು ಬ್ರಹ್ಮವನ್ನು ಜಗತ್ತಾಗಿ ನೋಡುತ್ತೇವೆ. ಎಲ್ಲಿಯವರೆಗೆ ಅಜ್ಞಾನವು ಪ್ರಭಾವಶಾಲಿಯಾಗಿರುತ್ತದೆಯೋ ಅಲ್ಲಿಯವರೆಗೆ ಒಂದನ್ನು ಇನ್ನೊಂ ದನ್ನಾಗಿ ನೋಡುತ್ತೇವೆ. ಆದ್ದರಿಂದ, ಜಗತ್ತು ನಮ್ಮದೇ ಬುದ್ಧಿಯಿಂದ ಮೂಡಿದ ವಸ್ತು, ಅದೇ ದೋಷಯುತ ಬುದ್ಧಿಶಕ್ತಿಯಿಂದ ಹುಟ್ಟಿದ್ದು ಎಂದು ನಿರ್ಣಯಿಸು ವುದು ಅತ್ಯುತ್ತಮ. ಹಾಗೆ ತಪ್ಪು ಗ್ರಹಿಕೆಯಿಂದ ಹುಟ್ಟಿದ, ವಿಕಲ ಬುದ್ಧಿಯಿಂದ ಸ್ಥಿರಗೊಂಡ ವಸ್ತುವು ಎಂದೂ ಸತ್ಯವಲ್ಲ. ಭ್ರಮೆಯು ಹೋದಾಗ, ವಿಕಲತೆಯು ಮಾಯವಾದಾಗ ಹಾಗೆ ಸೃಷ್ಟಿಗೊಂಡ ಜಗತ್ತು ಮಾಯವಾಗುತ್ತದೆ.

"ಅಹಂ ಅಜ್ಞಃ (ನಾನು ಅಜ್ಞಾನಿ)." ಪ್ರತಿಯೊಬ್ಬ ವ್ಯಕ್ತಿಯು ಈ ಅಂಶವನ್ನು ಒಪ್ಪಿಕೊಳ್ಳಬೇಕು. ಅವನು ತನ್ನನ್ನು ಕುರಿತು ಈ ಹೇಳಿಕೆಯನ್ನು ತಪ್ಪಿಸಿಕೊಳ್ಳಲಾರನು. ಎಲ್ಲ ಪವಿತ್ರ ಗ್ರಂಥಗಳೂ ಶಾಸ್ತ್ರಗಳೂ ಕೊಡುವ ನಿರ್ಣಯ ಇದೆಲ್ಲವೂ ಬ್ರಹ್ಮ ಎಂದು. ಇದನ್ನು ಒತ್ತಟ್ಟಿಗಿರಿಸಿ, ವ್ಯಕ್ತಿಯು ತಾನೇ ಅಹಂ ಎಂದುಕೊಳ್ಳುತ್ತಾ ಹೋದರೆ ತಾನು ಅಜ್ಞಾನಿ ಎಂಬುದನ್ನು ಸ್ಥಿರೀಕರಿಸಿಕೊಳ್ಳುತ್ತಿರುತ್ತಾನೆ.

ಇಲ್ಲೊಂದು ಸಂದೇಹ ಏಳಬಹುದು. ತನ್ನನ್ನು ಸಂಪೂರ್ಣವಾಗಿ ಮರೆತು ಇನ್ನೊಂದನ್ನಾಗಿ ತನ್ನನ್ನು ನಂಬುವುದು ಸಾಧ್ಯವಾಗುವ ವಿಚಾರವೆ ಎಂದು. ಮಿಥ್ಯೆಯನ್ನು ಒಪ್ಪಿಕೊಳ್ಳುವುದು ಅಜ್ಞಾನಿಯ ಕುರುಹು ಎಂಬುದನ್ನು ಈಗಾಗಲೇ ನೋಡಿದ್ದೇವೆ. ಮಬ್ಬು ಬೆಳಕಿನಲ್ಲಿ ಅಸತ್ಯವನ್ನು ಸತ್ಯದ ಮೇಲೆ ಹೇರಲಾಗುತ್ತದೆ; ದಾರಿಯಲ್ಲಿ ಬಿದ್ದಿದ್ದ ಹಗ್ಗದಲ್ಲಿ ಹಾವನ್ನು ನೋಡಲಾಗುತ್ತದೆ. ಮಾಯೆಯು ಬುದ್ಧಿಯನ್ನು ಮುಸುಕಿ, ಆನಂದವೇ ಆದ ತಮ್ಮ ಸಹಜ ಸ್ವರೂಪವನ್ನು ಮರೆಯುವಂತೆ ಮಾಡುತ್ತದೆ. ಅವರು ತಮ್ಮ ಮೇಲೆ ವೈಯಕ್ತಿಕತೆಯ ಸೀಮಿತಗಳನ್ನು ಹೇರಿಕೊಂಡು ತಾವು ಜೀವಿಗಳೆಂದು ಭಾವಿಸುತ್ತಾರೆ. ಸಂತೋಷವು ತಮ್ಮಿಂದ ಹೊರಗೆ, ವಸ್ತು ಜಗತ್ತಿನಲ್ಲಿದೆ ಎಂಬ ನಂಬಿಕೆಯನ್ನವರು ಸ್ವಾಗತಿಸುತ್ತಾರೆ. ಸಂಸಾರದಲ್ಲಿ, ಚಲನಶೀಲ ಪರಿವರ್ತನಶೀಲ ಅಶಾಂತ ಜಗತ್ತಿನಲ್ಲಿ ತೊಡರಿಕೊಳ್ಳುತ್ತಾರೆ. ಅದೃಷ್ಟ ದುರದೃಷ್ಟಗಳ ಜೋಡಿ ಹೊಡೆತವನ್ನು ಅನುಭವಿಸುತ್ತಾರೆ. ಅಂತಹ ವ್ಯಕ್ತಿಗಳಿಗೆ ಶ್ರುತಿಗಳು, ವೇದಗಳು, ಇತರ ಪವಿತ್ರ ಗ್ರಂಥಗಳು ಆತ್ಮವನ್ನು ಸಾಕ್ಷಾತ್ಕರಿಸಿಕೊಳ್ಳಲು ನಿರಂತರ ಶ್ರಮಿಸುವುದರ ಮೂಲಕ ತಮ್ಮ ಬದುಕುಗಳನ್ನು ಪರಿವರ್ತಿಸಿಕೊಳ್ಳಬೇಕೆಂದು ಕರೆಕೊಡುತ್ತವೆ.

ಅದ್ವೈತ ಪ್ರತಿಪಾದಕರು ಅಜ್ಞಾನ ಎಂಬುದಿದೆ ಎಂದು ಸಮರ್ಥಿಸಲು ಹೋಗುವುದಿಲ್ಲ. ನಾನು ಸಂತುಷ್ಟನಾಗಿಲ್ಲ. ನನಗೆ ಸಂತೋಷವಿಲ್ಲ. ನನಗೆ ಇದು ಬೇಕು. ಇದನ್ನು ನಾನು ಸಂಪಾದಿಸಬೇಕು—ಇಂತಹ ಹಾತೊರಿಕೆಗಳು ಕೂಡಿ ಜೀವಿ. ಈ ಪ್ರವೃತ್ತಿಯೇ ಅಜ್ಞಾನದ ಸಾರ. ವಸ್ತುಗಳನ್ನು ಪ್ರತ್ಯೇಕಿಸುವ ಅಜ್ಞಾನವನ್ನು ನಾಶಪಡಿಸಲು ಬಯಸುವಿರಾದರೆ, ಈ ಪ್ರವೃತ್ತಿಯನ್ನು ಬದಲಾಯಿಸಿಕೊಳ್ಳಬೇಕು. "ನಾನೇ ಆನಂದದ ಸಾಕಾರಮೂರ್ತಿ, ಬಯಕೆಗಳನ್ನು ಪೂರೈಸಿಕೊಂಡವನು," ಎಂಬ ನಂಬಿಕೆಯನ್ನು ಬಲಪಡಿಸಿಕೊಳ್ಳಬೇಕು. ಮೊದಲನೆಯ ಮನೋಧರ್ಮವನ್ನು ಹೊಂದಿರುವವನಲ್ಲಿ ಜೀವತ್ವ ಬುದ್ಧಿಯಿದೆ. ಎರಡನೆಯ ಮನೋಧರ್ಮವನ್ನು ಹೊಂದಿರುವವನಲ್ಲಿ ಜ್ಞಾನ ಅಥವಾ ಸಾಧಾರಣೀಕರಿಸಿದ ವಿವೇಕವಿದೆ. ಅಸ್ತಿತ್ವದಲ್ಲಿಲ್ಲದ ಸಮಸ್ಯೆಗಳ ಭಾರವನ್ನು ಸಹಿಸಿಕೊಂಡು, ಗೊಂದಲದಲ್ಲಿ ಸಿಕ್ಕಿ ಕೈಕಾಲು ಬಡಿಯುತ್ತಾ ಜನನ ಮರಣಗಳ ಚಕ್ರಕ್ಕೆ ಅಸಹಾಯಕತೆಯಿಂದ ಬಂಧಿತ

ನಾಗಿ ಮನುಷ್ಯನು ಹತಾಶೆಯಿಂದ ತನ್ನನ್ನೇ ಶಪಿಸಿಕೊಳ್ಳುತ್ತಾನೆ. ಅದ್ವೈತ ಕೃತಿಗಳು ರಚಿತವಾದದ್ದೇ ಈ ಅಜ್ಞಾನದ ವಿರುದ್ಧವಾಗಿ ಮಾನವನಿಗೆ ಎಚ್ಚರಿಕೆ ನೀಡಿ, ಅವನನನ್ನು ಯಾತನೆ ಮತ್ತು ತಪ್ಪು ಕಲ್ಪನೆಗಳಿಂದ ಬಿಡುಗಡೆ ಮಾಡುವ ಜ್ಞಾನವನ್ನು ಅವನಲ್ಲಿ ಉದ್ಬೋಧಿಸುವ ಸಲುವಾಗಿ. ನಿಜವಾಗಿ ಹೇಳಬೇಕೆಂದರೆ, ಎಲ್ಲಿಯವರೆಗೆ ನಾವು ಬಂಧನದಲ್ಲಿದ್ದೇವೆಂದು ಭಾವಿಸಿರುತ್ತೇವೆಯೋ ಅಲ್ಲಿಯವರೆಗೂ ಅಜ್ಞಾನಿಗಳು. ವಾಸ್ತವವಾಗಿ ನಾವು ಸೃಷ್ಟಿಗೊಂಡವರಲ್ಲ; ಸೀಮಿತಗೊಳ್ಳುವವರಲ್ಲ ಅಥವಾ ಸಂಕುಚಿತರಲ್ಲ.

"ಜಗತ್ತು ಎಂಬುದಿದೆ. ಅದರಲ್ಲಿ ಸಂತೋಷವನ್ನು ಅರಸುವ ಇತರರಂತೆಯೇ ನಾನೂ ಇದ್ದೇನೆ. ಆ ಅನ್ವೇಷಣೆಯಲ್ಲಿ ನಾನು ಸಂತೋಷ ದುಃಖಗಳನ್ನು ಅನುಭವಿಸಬಹುದು, ಜನನ ಮರಣಗಳನ್ನು ಎದುರಿಸಬಹುದು." ಇದು ಮೂಲಭೂತವಾದ ಅಜ್ಞಾನ. ನಮ್ಮ ಆಲೋಚನೆಗಳು ಹೇಗೋ ನಾವು ಹಾಗಾಗುತ್ತೇವೆ. ವಸ್ತು ಜಗತ್ತಿನ ಮೌಲ್ಯವನ್ನೂ ಅದರಿಂದ ದೊರಕುವ ಸುಖಗಳ ಮೌಲ್ಯವನ್ನೂ ಕುರಿತ ಆಲೋಚನೆಗಳು ಅಜ್ಞಾನದಿಂದ ಉದಿಸಿದುವಾದರೂ ನಮ್ಮನ್ನು ಒಳಗಿನಿಂದಲೇ ರೂಪಿಸುತ್ತವೆ. ನಾವು ಈ ಅಚ್ಚಿನಲ್ಲಿ ಏಕೆ ಸಿಕ್ಕಿಕೊಂಡಿದ್ದೇವೆ ಎಂಬುದಕ್ಕೆ ನಾಲ್ಕು ಅಗತ್ಯಗಳ ಅಭಾವ ಕಾರಣ—ಆಧ್ಯಾತ್ಮಿಕ ಪ್ರಗತಿಯ ಕಡೆಗೆ ಗಮನ; ಸ್ಥಿರವಾದ ನಂಬಿಕೆ; ಭಕ್ತಿ ಮತ್ತು ಭಗವಂತನ ಕೃಪೆ. ಇವುಗಳಲ್ಲಿ ಒಂದು ಇಲ್ಲದೆ ಹೋದರೂ ಮನುಷ್ಯನು ಪರವಸ್ತುವಿನ ಅತ್ಯುನ್ನತ ಆನಂದವನ್ನು ಸವಿಯಲಾರನು.

ನಮ್ಮ ಅನ್ವೇಷಣೆಯು ಸ್ಪಷ್ಟವಾಗಿ ಕಾಣಿಸುತ್ತಿರುವುದರ ಹಾಗೂ ತೋರಿಕೆಯ ವಸ್ತುವಿನ ಕಡೆಗೆ ಹಾಯಬಾರದು. ಆ ಬಗೆಯ ವಿಚಾರವು ನಮ್ಮನ್ನು ತಪ್ಪುದಾರಿಗೊಯ್ದು ವಿಶ್ವವಲ್ಲದ್ದನ್ನು ನಂಬುವಂತೆ ಮಾಡುತ್ತದೆ. ಈ ವಿಶ್ವ ಸಮಸ್ತವನ್ನೂ ಸೃಷ್ಟಿಸಿ ನಮ್ಮೆದುರಿಗೆ ಸತ್ಯವೆಂಬಂತೆ ಹಿಡಿಯುತ್ತಿರುವುದು ನಮ್ಮ ಮನಸ್ಸೇಯೇ ಎಂಬುದನ್ನು ನಾವು ಮರೆಯುವಂತೆ ಮಾಡುತ್ತದೆ.

ಈ ವಿಶ್ವವು ಅಂತಿಮವಾಗಿ ನಾನು ಅದನ್ನು ಹಾಗೆ ಭಾವಿಸುತ್ತೇನೆಯೆ ಇಲ್ಲವೆ ಎಂಬುದನ್ನು ಅವಲಂಬಿಸಿರುವುದೀಗ ಅತ್ಯಂತ ಆಶ್ಚರ್ಯದ ಸಂಗತಿ! ಅದು ಇದೆ ಎಂದು ನೀವು ಭಾವಿಸಿದರೆ ಇದೆ; ಅದಿಲ್ಲ ಎಂದುಕೊಂಡರೆ ಇಲ್ಲ! ಅಂದರೆ ಮನುಷ್ಯನ ಈ ಮನೋಪ್ರಕ್ರಿಯೆಯ ಒಳಕ್ಕೆ ಆಳವಾಗಿ ಇಳಿದು ನೋಡಬೇಕಾದ ಅವಶ್ಯಕತೆಯಿದೆ. ನಮ್ಮ ಸ್ಥಿರೀಕರಣವು ಒಂದು ವಸ್ತುವಿನ ಅಸ್ತಿತ್ವದಲ್ಲೂ ನಮ್ಮ ನಿರಾಕರಣವು ಅದು ಕಣ್ಮರೆಯಾಗುವುದರಲ್ಲೂ ಪರ್ಯವಸಾನವಾಗುವ ಇನ್ನೊಂದು ಸಂದರ್ಭವಿದೆಯೆ? ಅಥವಾ ಈ ನಿರ್ಣಯವು ಕಲ್ಪನೆಯ ತುಂಡೇನು?

ಈ ದಾರಿಯಲ್ಲಿ ನಡೆಯುವ ವಿಶ್ಲೇಷಣೆಯು ಖಂಡಿತವಾಗಿಯೂ ಸತ್ಯವನ್ನು ತೆರೆದು ತೋರುತ್ತದೆ. ಕತ್ತಲಿನಲ್ಲಿ ಹಗ್ಗವನ್ನು ನೋಡಿದಾಗ, ಅಜ್ಞಾನದ ತಪ್ಪು ಗ್ರಹಿಕೆಯಿಂದಾಗಿ ಅದರ ಸ್ಥಾನದಲ್ಲಿ ಹಾವು ಕಾಣಿಸಿಕೊಳ್ಳುತ್ತದೆ, ಹಗ್ಗವೆಂಬ ಸತ್ಯ ವನ್ನು ಮರೆ ಮಾಡುತ್ತದೆ. ಏನಾದರೂ ಕಾರಣಕ್ಕಾಗಿ ಸತ್ಯವನ್ನು ತಿಳಿದುಕೊಂಡಾಗ, ನೋಡುವವನು ಹೀಗೆ ಅಂದುಕೊಳ್ಳುತ್ತಾನೆ; "ಇಲ್ಲಿ ಹಾವಿಲ್ಲ, ಇದೊಂದು ಹಗ್ಗ." ಹಾವು ಮಾಯವಾಗುತ್ತದೆ, ಏಕೆಂದರೆ ಅದು ಕೇವಲ ಮಿಥ್ಯೆಯಾಗಿತ್ತು. ಆದ್ದ ರಿಂದ ಆಲೋಚನೆ ಅಥವಾ ಭಾವನೆಗೆ ಹಾವನ್ನು ಸೃಷ್ಟಿಸುವ ಶಕ್ತಿಯಿದೆ, ಅದನ್ನು ನಾಶಮಾಡುವ ಶಕ್ತಿಯೂ ಇದೆ. ಸ್ಥಿರೀಕರಣವು ಸೃಷ್ಟಿಸುತ್ತದೆ; ನಿರಾಕರಣವು ನಾಶಪಡಿಸುತ್ತದೆ. ಎರಡೂ ಮಾನಸಿಕ ಪ್ರಕ್ರಿಯೆಗಳೇ ಆಲೋಚನೆಗಳು ಎಂದು ಅವನನ್ನು ವರ್ಗೀಕರಿಸಬಹುದು.

ಬೇರೆ ಬೇರೆ ಮಟ್ಟಗಳು, ವರ್ಗಗಳು ಇದ್ದರೂ ಅವೆಲ್ಲವೂ ಆಲೋಚನೆಗಳೇ. ಈ ಆಲೋಚನೆಗಳು ಎಲ್ಲಿಂದ ಹುಟ್ಟಿಬರುತ್ತವೆ? ತಮಗೆ ತಾವೆ ಮೂಡಿಬರಲು ಅವಕ್ಕೆ ಸ್ವಾತಂತ್ರ್ಯವಿದೆಯೆ? ಈ ಪ್ರಶ್ನೆಗೆ ಉತ್ತರ ಬುದ್ಧಿಃ ಕರ್ಮಾನುಸಾರಿಣಿ (ನಮ್ಮ ಬುದ್ಧಿಯು ನಮ್ಮ ಕಾರ್ಯಚಟುವಟಿಕೆಗಳನ್ನು ಅನುಸರಿಸುತ್ತದೆ). ವ್ಯಕ್ತಿಯು ಬೆಳೆಸಿಕೊಳ್ಳುವ ಮೋಹ, ತನ್ನ ಕರ್ಮಗಳಿಗೆ ಅವನು ನಿರೀಕ್ಷಿಸುವ ಫಲ ಇವುಗಳಿಗೆ ಹೊಂದಿಕೊಂಡಂತೆ ಆಲೋಚನೆಗಳು ಉದಿಸುತ್ತವೆ. ಕರ್ಮಕ್ಕೆ ಮೊದಲ ಉದ್ದೇ ಶವೆ, "ನಾನು ಸಂತೋಷವನ್ನೂ ಸಾಮರಸ್ಯವನ್ನೂ ಪಡೆಯಬೇಕು," ಎನ್ನುವುದು. ಈ ಉದ್ದೇಶವು ಜಗತ್ತು ಸತ್ಯ ಎಂಬ ಅಜ್ಞಾನಯುತ ಭಾವನೆಯಿಂದ ಮೂಡುತ್ತದೆ.

ವಿವೇಕವಿಲ್ಲದ ಶಿಕ್ಷಣ, ವಿವೇಚನೆಯಿಲ್ಲದ ಬರಿಯ ವಿವೇಕ, ವಿಚಕ್ಷಣೆಯಿಲ್ಲದ ಕರ್ಮ, ವಿನಯವಿಲ್ಲದ ವಿದ್ವತ್ತು, ಅರ್ಹತೆಗಳಿಂದ ಸಮರ್ಥಿತವಾಗದ ಅಧಿಕಾರ, ಸತ್ಯದ ಆಧಾರವಿಲ್ಲದ ಹೇಳಿಕೆಗಳು, ಮಾಧುರ್ಯವಿಲ್ಲದ ಸಂಗೀತ, ಭಕ್ತಿಯ ಪೋಷ ಣೆಯಿಲ್ಲದ ಸ್ತೋತ್ರ, ಲೋಕಜ್ಞಾನ ಮತ್ತು ಸಚ್ಚಾರಿತ್ರ್ಯವಿಲ್ಲದ ವ್ಯಕ್ತಿ, ವಿನಯವಿಲ್ಲದ ವಿದ್ಯಾರ್ಥಿ, ಸ್ಫೂರ್ತಿಯನ್ನೊದಗಿಸದ ಪ್ರವಚನ—ಇವುಗಳಿಂದ ಯಾವ ಪ್ರಯೋ ಜನವೂ ಇಲ್ಲ.

ಧರ್ಮಗ್ರಂಥಗಳಿಂದ ಬಂದ ಜ್ಞಾನದ ಜೊತೆಗೆ ಅನುಭವದಿಂದ ವಿವೇಕವನ್ನೂ ಸಂಪಾದಿಸಬೇಕು. ವ್ಯಕ್ತಿಗತ ಅನುಭವವಿಲ್ಲದ ಜ್ಞಾನವು ವ್ಯರ್ಥ. ನಮ್ಮಲ್ಲಿ ನಿಂತಿರುವ ವಿವೇಕವು ನಿಂತ ನೀರಾದರೆ ಅದರಿಂದ ಉಪಯೋಗವಿಲ್ಲ. ಅದು ಕೇವಲ ಪಾಂಡಿತ್ಯದ ರೂಪವನ್ನು ಧರಿಸಿರುತ್ತದೆ. ಅಂತಹ ಜ್ಞಾನವನ್ನು ಆಚರಣೆಯ ಕಕ್ಷೆಗೆ ತಂದರೆ ಅದೀಗ ಪ್ರಶಂಸನೀಯ. ಧನವನ್ನು ಗಳಿಸಿ ಸಂಗ್ರಹಿಸಿಕೊಂಡಿದ್ದರೆ, ಅದನ್ನು

ಲೋಕ ಕಲ್ಯಾಣಕ್ಕಾಗಿ ಬಳಸದೆ ಹೋದರೆ ಏನೂ ಪ್ರಯೋಜನವಿಲ್ಲ. ಹಾಗೆಯೇ ಕೇವಲ ಪುಸ್ತಕಗಳಿಂದ ಜ್ಞಾನವನ್ನು ಸಂಪಾದಿಸುವುದು ವ್ಯರ್ಥವಾದ ಪರಿಶ್ರಮ. ಜ್ಞಾನವು ಕಾರ್ಯರೂಪಕ್ಕೆ ಬಂದು ಮಾನವತೆಯ ಒಳಿತನ್ನು ಸಾಧಿಸುವಂತಿದ್ದರೆ ಮಾತ್ರ ಅದು ಸಾರ್ಥಕ್ಯ ಪಡೆಯುತ್ತದೆ. ಹೀಗೆ ಜ್ಞಾನವನ್ನು ಅನುಭವಕ್ಕೆ ಅನುವಾದಿಸುವುದು, ತಿಳಿದುಕೊಳ್ಳುವುದು (ಜ್ಞಾತುಂ), ನೋಡುವುದು (ದ್ರಷ್ಟುಂ) ಮತ್ತು ಪ್ರವೇಶಿಸಿವುದು (ಪ್ರವೇಷ್ಟುಂ) ಎಂಬ ಮೂರು ಹಂತಗಳ ಮೂಲಕ ಹಾದು ಹೋದಾಗ ಮಾತ್ರ ಸಾಧ್ಯ.

ಮೊದಲು ಶಾಸ್ತ್ರಗ್ರಂಥಗಳು ಒಳಗೊಂಡಿರುವ ಅಮೂಲ್ಯ ಸತ್ಯಗಳನ್ನು ಆ ಕ್ಷೇತ್ರದಲ್ಲಿ ಪರಿಣತರಾದವರಿಂದ ಕೇಳಿ ತಿಳಿದುಕೊಳ್ಳಲು ಕಲಿಯಬೇಕು. ಅವುಗಳ ಬಗೆಗೆ ಕೇಳಿದಾಗ, ಸಹಜವಾಗಿಯೇ ಅವುಗಳಲ್ಲಿ ಆಸಕ್ತಿಯುಂಟಾಗುತ್ತದೆ. ಆಮೇಲೆ ಯಾವ ಬೆಲೆ ತೆತ್ತಾದರೂ ಸರಿ, ಆ ಸತ್ಯಗಳನ್ನು ನೀವೇ ಮನಗಾಣಲು ಒತ್ತಡ ನಿಮ್ಮಲ್ಲುಂಟಾಗುತ್ತದೆ. ಜ್ಞಾನದ ಮೊದಲನೆ ಹಂತ ಇದು.

ಎರಡನೆಯ ಹಂತದಲ್ಲಿ ನೀವು ಸರಿಯಾದ ಧರ್ಮಗ್ರಂಥಗಳನ್ನು, ಅವು ಎಲ್ಲೇ ಇರಲಿ, ಬಹು ಜಾಗರೂಕತೆಯಿಂದ ಪರಿಶೀಲಿಸಿ, ಪರೀಕ್ಷಿಸಿ, ಸಂಗ್ರಹಿಸುತ್ತೀರಿ. ನೀವೇ ಓದಿ ನೇರವಾಗಿ ಮನಗಾಣುತ್ತೀರಿ. ಪಟ್ಟಾಗಿ ಕುಳಿತು ವಿಚಾರ ಮಾಡುವಿರಿ, ಗ್ರಹಿಸಿ, ಸಂತೋಷಪಡುವಿರಿ. ಕೆಲವು ಮಹತ್ವದ ಸತ್ಯಗಳನ್ನು ತಿಳಿದುಕೊಂಡ ತೃಪ್ತಿ ನಿಮ್ಮದಾಗುತ್ತದೆ. ಇದು ದರ್ಶನದ ಎರಡನೆಯ ಹಂತ.

ಮೊದಲಿನೆರಡು ಹಂತಗಳಲ್ಲಿ ಪ್ರಗತಿ ಸಾಧಿಸಿದರೆ ಸಾಲದು. ನೋಡಿದ್ದನ್ನು ತಿಳಿದಿದ್ದನ್ನು ಅನುಭವಿಸಬೇಕು. ಅನುಭವದ ಕ್ಷೇತ್ರವನ್ನು ಪ್ರವೇಶಿಸಿದಾಗ, ಆದರ್ಶದೊಂದಿಗೆ ಸಂಪೂರ್ಣವಾಗಿ ಬೆರೆಯಬೇಕು. ಆಹಾರವನ್ನು ಸೇವಿಸಿದೊಡನೆಯೆ ಮಲಗಿದರೆ ಅಜೀರ್ಣವಾಗುತ್ತದೆ. ಅದಕ್ಕೆ ಬದಲು ನಿರ್ದಿಷ್ಟ ಪ್ರಮಾಣದ ಆಹಾರವನ್ನು ಪ್ರತಿದಿನವೂ ಸೇವಿಸಿ ದೈಹಿಕವಾಗಿ ಸ್ವಲ್ಪ ಶ್ರಮಪಡುತ್ತಿದ್ದರೆ ತಿಂದದ್ದು ಅರಗಿ, ರಕ್ತವಾಗಿ ಪರಿವರ್ತಿತವಾಗಿ ದೇಹಕ್ಕೆ ಪೋಷಣೆಯನ್ನು ನೀಡುತ್ತದೆ. ಅದೇ ರೀತಿಯಲ್ಲಿ ನಾವು ಏನನ್ನು ತಿಳಿದುಕೊಂಡಿದ್ದೇವೋ ನೋಡಿದ್ದೇವೋ ಅದನ್ನು ಅನುಭವವಾಗಿ ಅನುವಾದಿಸಿಕೊಳ್ಳಬೇಕು. ಅದು ಅರಗಿ ನಮ್ಮ ದೇಶದ ಪ್ರಗತಿಗೂ ಮಾನವ ಕುಲದ ಕಲ್ಯಾಣಕ್ಕೂ ಉಪಯೋಗವಾಗಬೇಕು.

ಗ್ರಂಥಗಳಿಂದ ಭಾಗಗಳನ್ನು ಬಾಯಿಪಾಠಮಾಡಿ ಉಪನ್ಯಾಸಗಳನ್ನು ನೀಡುವುದು ಸುಲಭ. ಬರಿದೆ ಪುಸ್ತಕಗಳನ್ನು ಓದಿ ಪಡೆಯುವ ಜ್ಞಾನವು ಪುಸ್ತಕಜ್ಞಾನ. ಅದು ಬಹು

ಸಾಮಾನ್ಯಮಟ್ಟದ ಜ್ಞಾನ. ಏನನ್ನು ಕೇಳಿದಿರೋ ನೋಡಿದಿರೋ ಅರ್ಥಮಾಡಿ ಕೊಂಡಿರೋ ಅದನ್ನು ಸ್ವಲ್ಪಮಟ್ಟಿಗಾದರೂ ಆಚರಣೆಯಲ್ಲಿ ತರಬೇಕು. ಇದು ಪ್ರವೇಶದ ಹಂತ.

ಪ್ರಾಚೀನ ಶಾಸ್ತ್ರಗ್ರಂಥಗಳಲ್ಲಿ ಹಲವು ಅಮೂಲ್ಯ ಸತ್ಯಗಳು ತುಂಬಿವೆ. ಅವುಗಳಲ್ಲಿ ಬೆಲೆ ಕಟ್ಟಲಾಗದ ರತ್ನಗಳು ಹುದುಗಿವೆ. ಪರಮಾಣುವನ್ನು ಕುರಿತ ಅನೇಕ ವೈಜ್ಞಾನಿಕ ಸಿದ್ಧಾಂತಗಳೂ ಅವುಗಳಲ್ಲಿವೆ. ವಿದ್ಯಾರ್ಥಿಗಳು ಸುಪ್ತವಾಗಿರುವ ಈ ಸತ್ಯಗಳನ್ನು ಹೊರಗೆಳೆದು ಅವುಗಳನ್ನು ಮಾನವ ಕಲ್ಯಾಣಕ್ಕಾಗಿ ವಿನಿಯೋಗಿಸಬೇಕು. ಇದು ವರೆಗೂ ಕಂಡುಹಿಡಿದಿರದ ಸತ್ಯಗಳನ್ನು ಹುಡುಕಿ ಹೊರತರಲು ಒತ್ತಡವೂ ದೃಢ ನಿರ್ಧಾರವೂ ಇರಬೇಕು. ಪ್ರವಚನಗಳನ್ನು ನೀಡುವುದರಲ್ಲಿ, ಚರ್ಚಾವೇದಿಕೆಗಳಲ್ಲಿ ಕಾಣಿಸಿ ಕೊಳ್ಳುವುದರಲ್ಲಿ ತೃಪ್ತಿಹೊಂದಬಾರದು.

ಅಸಲಿ ವಿಚಾರಶಕ್ತಿಯನ್ನು ಹೊಂದಿರುವವರು ಸ್ವಲ್ಪ ಮಟ್ಟಿಗೆ ನಿಜವಾದ ಜ್ಞಾನವನ್ನು ಅರಗಿಸಿಕೊಳ್ಳಲು ಶಕ್ತರಾಗುತ್ತಾರೆ. ತೇಲಿಕೆಯ ಜ್ಞಾನದಿಂದ ಏನೂ ಪ್ರಯೋಜನ ವಿಲ್ಲ. ಪ್ರತ್ಯಕ್ಷ ಅನುಭವದಿಂದ ಬರುವ ಜ್ಞಾನವನ್ನು ಮೀರಿಸುವಂಥದು ಬೇರೆ ಯಾವುದೂ ಇಲ್ಲ. ಪರಿಶ್ರಮ, ಆಸಕ್ತಿ, ನಿರ್ಧಾರ ಹಾಗೂ ಪಟ್ಟುಹಿಡಿದು ನುಗ್ಗುವ ಪ್ರವೃತ್ತಿಗಳಿಂದ ಅದನ್ನು ಸಂಪಾದಿಸಬೇಕು. ಅದನ್ನು ತಾಂತ್ರಿಕ ಪ್ರಗತಿಗಾಗಿ, ಉತ್ಪಾ ದನೆಯನ್ನು ಹೆಚ್ಚಿಸಿ ದೇಶಕ್ಕೆ ಒಳಿತು ಮಾಡುವ ಸಲುವಾಗಿ ವಿನಿಯೋಗಿಸಬೇಕು.

ಅನುಭವದಿಂದ ವಿವೇಕವನ್ನು ಪಡೆಯುವುದು ಅಗತ್ಯ; ಆದರೆ ವಿವೇಚನಾ ಶಕ್ತಿಯನ್ನು ಬೆಳೆಸಿಕೊಳ್ಳುವುದೂ ಅಷ್ಟೇ ಅಗತ್ಯ. ಅದನ್ನು ಬೆಳೆಸಿಕೊಂಡು ದೇಶದ ಒಳಿತಿಗಾಗಿ ಉಪಯೋಗಿಸಬೇಕು. ವಿವೇಚನೆಯಿಲ್ಲದ ಶಿಕ್ಷಣ, ವಿಚಕ್ಷಣೆಯಿಲ್ಲದ ವಿವೇಕ ಇವು ಉಪಯುಕ್ತವಲ್ಲ. ಶಿಕ್ಷಣ ಬೇರೆ, ವಿವೇಚನಾಶಕ್ತಿ ಬೇರೆ. ಒಳಿತನ್ನು ಕೆಡುಕಿನಿಂದ ಪ್ರತ್ಯೇಕಗೊಳಿಸಿ, ಒಂದು ಗೊತ್ತಾದ ಪರಿಸ್ಥಿತಿಯಲ್ಲಿ ಯಾವುದಕ್ಕೆ ಎಷ್ಟು ಪ್ರಾಮುಖ್ಯ ನೀಡಬೇಕೆಂಬುದನ್ನು ನಿರ್ಧರಿಸುವ ಶಕ್ತಿಯನ್ನು ವಿವೇಚನೆ ನಮಗೆ ಕೊಡುತ್ತದೆ. ವಿವೇಚನೆಯೂ ವಿವೇಕದ ಒಂದು ಅಂಗಾಂಶವೇ. ಅದಿಲ್ಲದೆ ವ್ಯಕ್ತಿಯು ಸರಿಯಾದ ಹಾದಿಯಲ್ಲಿ ನಡೆಯಲಾರನು. ಎಲ್ಲ ಕಾರ್ಯಗಳಲ್ಲಿಯೂ ವಿವೇಚನೆಯನ್ನು ಪ್ರದರ್ಶಿಸುವುದು ನಿಜವಾದ ಬುದ್ಧಿವಂತಿಕೆ. ಪರಮಾಣುಶಕ್ತಿಯ ಬಗೆಗೆ ಸಂಶೋಧನೆಗಳನ್ನು ನಡೆಸುವುದರ ಮೂಲಕ ಇಡೀ ಜಗತ್ತನ್ನು ಒಂದು ಕ್ಷಣದಲ್ಲಿ ಬೂದಿಯ ಗುಡ್ಡೆಯನ್ನಾಗಿ ಮಾಡಿಬಿಡುವ ಸಾಮರ್ಥ್ಯವುಳ್ಳ ಮಾರಕಾಸ್ತ್ರ ಗಳನ್ನು ಕಂಡುಹಿಡಿಯಬಹುದು. ಅದೇ ಪರಮಾಣು ಶಕ್ತಿಯನ್ನೇ ಮಿಲಯಗಟ್ಟಲೆ ಕಿಲೋವಾಟ್ ವಿದ್ಯುತ್ ತಯಾರಿಸಲು, ಕೈಗಾರಿಕೆಗಳಿಗೆ, ವ್ಯವಸಾಯಕ್ಕೆ ಅದನ್ನು

ಉಪಯೋಗಿಸಿ ಭೂಮಿಯನ್ನು ಒಂದು ನಗುವ ತೋಟವನ್ನಾಗಿ ಪರಿವರ್ತಿಸಲೂ ಬಹುದು. ವಿದ್ಯಾವಂತನಾದ ವ್ಯಕ್ತಿಯು ಈ ವಿಚಾರಗಳಲ್ಲಿ ವಿವೇಚನೆಯನ್ನು ಉಪ ಯೋಗಿಸಿ ಸರಿಯಾದ ಕಾರ್ಯವನ್ನು ಮಾಡಬೇಕು. ಮನುಷ್ಯನು ಕೈಗೊಳ್ಳುವ ಸಂಶೋಧನೆಗಳು ಮತ್ತು ಆವಿಷ್ಕಾರಗಳು ವಿನಾಶಕ್ಕೆ ದಾರಿಮಾಡುವ ದುರುದ್ದೇಶ ಗಳಿಂದ ಕೂಡಿರಬಾರದು; ಉತ್ಪಾದನೆಯನ್ನು ಅಧಿಕಗೊಳಿಸಿ ಮಾನವ ಕಲ್ಯಾಣ ವನ್ನು ಸಾಧಿಸಲು ಅವುಗಳನ್ನು ಉಪಯೋಗಿಸುವಂತೆ ವಿವೇಚನೆಯು ದಾರಿ ತೋರಿಸುತ್ತದೆ.

ವಿವೇಕ ಮತ್ತು ವಿವೇಚನೆಗಳಿರುವ ಮನುಷ್ಯನನ್ನು, ಅವನಿಗೆ ಐಶ್ವರ್ಯ, ಅಧಿಕಾರ, ಸ್ಥಾನಮಾನಗಳು ಇರದೆಹೋದರೂ ಗೌರವಿಸುತ್ತಾರೆ, ಕೊಂಡಾಡುತ್ತಾರೆ. ವಿವೇಕ ವಿವೇಚನೆಗಳಿಲ್ಲದವನು ದೊಡ್ಡ ಶಿಕ್ಷಣ ತಜ್ಞನಾಗಿರಬಹುದು, ಪ್ರಸಿದ್ಧ ವಿಜ್ಞಾನಿ ಯಾಗಿರಬಹುದು ಅಥವಾ ಲಕ್ಷಾಧಿಪತಿಯಾಗಿರಬಹುದು, ಆದರೆ ಆಧ್ಯಾತ್ಮಿಕವಾಗಿ ಮಾತ್ರ ಅವನು ಎಂದೂ ವಿಕಾಸಗೊಳ್ಳುವುದಿಲ್ಲ. ವಿವೇಕ ವಿವೇಚನೆಗಳಿಲ್ಲದವನಿಗೆ ಕೊನೆಗೆ ಧರ್ಮ ಯಾವುದು ಅಧರ್ಮ ಯಾವುದು ಎಂಬುದೂ ತಿಳಿಯುವುದಿಲ್ಲ. ಆದ್ದರಿಂದ ಪ್ರತಿಯೊಬ್ಬ ವಿದ್ಯಾರ್ಥಿಯೂ ತಾತ್ವಿಕವಾಗಿ ಜ್ಞಾನ ಸಂಪಾದನೆ ಮಾಡಿದ ಮೇಲೆ ಅಲ್ಲಿಗೆ ಸುಮ್ಮನಾಗದೆ ವಿವೇಕ ವಿವೇಚನೆಗಳನ್ನು ಬೆಳೆಸಿಕೊಳ್ಳಬೇಕು. ವಿವೇಕದ ಜೊತೆಗೆ ದೂರದೃಷ್ಟಿಯನ್ನೂ ಬೆಳೆಸಿಕೊಂಡು ಅದನ್ನು ಸಮಾಜದ ಉದ್ಧಾರಕ್ಕಾಗಿ ಬಳಸಬೇಕು.

ವಿವೇಕ, ವಿವೇಚನೆ ಮತ್ತು ಅನುಭವಗಳ ಜೊತೆಗೆ ಅವನಲ್ಲಿ ಸ್ಫೂರ್ತಿದಾಯಕವಾದ ಲೋಕಜ್ಞಾನವಿರಬೇಕು. ಅದನ್ನು ಪುಸ್ತಕಗಳಿಂದ ಪಡೆಯುವುದು ಸಾಧ್ಯವಿಲ್ಲ. ಅದಕ್ಕಾಗಿ ಅವನು ವ್ಯಾಪಕವಾಗಿ ದೇಶ ಸಂಚಾರ ಮಾಡಬೇಕು. ಆದ್ದರಿಂದಲೇ ನಮ್ಮ ಪ್ರಾಚೀನರು ತೀರ್ಥಯಾತ್ರೆ ಹೋಗುತ್ತಿದ್ದರು. ವಿವಿಧ ಪವಿತ್ರ ಕ್ಷೇತ್ರಗಳನ್ನು ನೋಡಿ ಅಲ್ಲಿರುವ ಮಹಾತ್ಮರ ಪಾದಸ್ಪರ್ಶ ಮಾಡಿ, ಅವರೊಂದಿಗೆ ಮಾತನಾಡಿ ಧನ್ಯರಾಗುತ್ತಿದ್ದರು. ಭಗವಂತನ ಈ ರಮ್ಯಾದ್ಭುತ ಸೃಷ್ಟಿಯ ಅನೇಕಾನೇಕ ದೃಶ್ಯ ಗಳನ್ನು ವಸ್ತುಗಳನ್ನು ನೋಡಿ ಅವರು ಪಾಠ ಕಲಿಯುತ್ತಿದ್ದರು. ಜ್ಞಾನ ದಾನ ಮಾಡುವ ಅಮೂಲ್ಯ ಪಾಠಗಳನ್ನು ಕೊಡುವ ಅಸಂಖ್ಯಾತ ವಸ್ತುಗಳು ನಿಸರ್ಗದ ಲ್ಲಿವೆ. ಲೋಕಜ್ಞಾನದ ಬೆಳವಣಿಗೆಯೆಂದರೆ, ಅಂತಹ ವಸ್ತುಗಳ ಮೂಲ ಮತ್ತು ಸ್ವರೂಪಗಳನ್ನು ಕುರಿತು ಆಲೋಚನೆ ಮಾಡುವುದು.

ಒಬ್ಬನು ಇತಿಹಾಸ, ಸಂಸ್ಕೃತಿ ಮತ್ತು ನಾಗರಿಕತೆಗಳ ಮಹತ್ವವನ್ನು ಗ್ರಹಿಸಿ ಅದನ್ನು ಪ್ರಸಾರ ಮಾಡಬಹುದು. ಅಂತಹ ಪ್ರಸಾರಕಾರ್ಯವನ್ನು ಕೈಗೊಳ್ಳ ಬಯಸುವ

ವನು ಮೊದಲು ಆತ್ಮಸ್ವರೂಪವನ್ನು ಗ್ರಹಿಸಬೇಕು. ಈ ಜಗತ್ತಿನಲ್ಲಿ ಭೌತವಿಜ್ಞಾನ, ಸಂಗೀತ, ಸಾಹಿತ್ಯ, ಕಲೆ, ಗಣಿತ ಮೊದಲಾದ ಹಲವು ಶಿಕ್ಷಣ ಶಾಖೆಗಳಿವೆ. ಜ್ಞಾನದ ಈ ಹಲವು ರೂಪಗಳಲ್ಲಿ ಆತ್ಮಜ್ಞಾನವು ಪರಮೋನ್ನತವಾದದ್ದು. ಅದನ್ನು ಗಳಿಸದೆ ವ್ಯಕ್ತಿಯು ಶಾಂತಿಯನ್ನು ಸವಿಯಲಾರನು. ಅವನಿಗೆ ಪ್ರಪಂಚದಲ್ಲಿ ಕೀರ್ತಿ ಪ್ರಸಿದ್ಧಿಗಳು ಧಾರಾಳವಾಗಿ ಒದಗಬಹುದು, ಆದರೆ ಆತ್ಮಜ್ಞಾನವಿಲ್ಲದೆ ಸಂತೋಷವು ಅವನ ಅನುಭವಕ್ಕೆ ಬರುವುದಿಲ್ಲ. ಆತ್ಮಜ್ಞಾನ, ಭಗವದರಿವು, ಆಧ್ಯಾತ್ಮಿಕ ಜ್ಞಾನ—ಈ ಉಕ್ತಿಗಳು ಆತ್ಮ ಮತ್ತು ಭಗವಂತನ ಪೂರ್ಣಜ್ಞಾನವನ್ನು ಬೆಳೆಸುವ ವಿವೇಕವನ್ನು ಸೂಚಿಸುತ್ತವೆ. ಯಾವುದನ್ನು ತಿಳಿದುಕೊಳ್ಳುವುದರಿಂದ ಎಲ್ಲವನ್ನೂ ತಿಳಿದುಕೊಂಡಂತಾಗುವುದೋ ಅದೇ ಆತ್ಮಜ್ಞಾನ. ಆತ್ಮಜ್ಞಾನವುಳ್ಳ ವ್ಯಕ್ತಿಯು ಸರ್ವಜ್ಞನಾಗಿದ್ದಾನೆ ಎಂದು ಹೇಳಬಹುದು.

ಲೌಕಿಕವಾದ, ಧರ್ಮನಿರಪೇಕ್ಷವಾದ ವಿದ್ಯೆಯು ನಮಗೆ ಪರಮೋನ್ನತ ಶಾಂತಿಯನ್ನು ನೀಡುವುದಿಲ್ಲ. ಆತ್ಮಜ್ಞಾನವನ್ನು ಸಾಧಿಸಲು ಶ್ರಮಿಸಬೇಕು. ಅದನ್ನು ಮನೋಪರಿಶುದ್ಧಿಯಿಂದ ಮಾತ್ರ ಪಡೆಯಲು ಸಾಧ್ಯ. ಮನೋಪರಿಶುದ್ಧಿಯು ಸತ್ಕಾರ್ಯಗಳಿಂದ, ಪುಣ್ಯಕರ್ಮಗಳಿಂದ, ದಾನಧರ್ಮಗಳು, ಕರುಣೆ, ಭಕ್ತಿಗಳಿಂದ ಉಂಟಾಗುತ್ತದೆ. ಭಗವಂತನಿಗೆ ಅರ್ಪಿಸಿದ ನಿಷ್ಕಾಮ ಕರ್ಮವು ಹೃದಯವನ್ನು ಪರಿಶುದ್ಧಗೊಳಿಸುತ್ತದೆ. ವಿವೇಕ ಸೂರ್ಯನು ಶುದ್ಧ ಹೃದಯದಲ್ಲಿ ಬೆಳಗುತ್ತಾನೆ. ಆ ವಿವೇಕೋದಯವೇ ಮಾನವನನ್ನು ದೇವತ್ವದ ನೆಲೆಗೆ ಏರಿಸುವಂಥದು.

ಪರಮೋನ್ನತ ದೇವತ್ವದ ನೆಲೆಯನ್ನು ಸಾಧಿಸಲು ಮನುಷ್ಯನು ಪ್ರಯತ್ನಿಸಬೇಕು. ಈ ಪರಿಶ್ರಮವು ಮೊದಲನೆಯ ಅಂಶ. ಭಗವಂತನ ಕೃಪೆ ಎರಡನೆಯ ಅಂಶ. ಯಾರು ಬೇಕಾದರೂ ಆತ್ಮಜ್ಞಾನವನ್ನು ಪಡೆಯಲು ಪ್ರಯತ್ನಿಸಬಹುದು, ಪಡೆಯಬಹುದು. ಗಂಡಸರು ಹೆಂಗಸರು, ಶ್ರೀಮಂತರು ಬಡವರು, ಎಲ್ಲರೂ ತಮ್ಮಲ್ಲಿ ಆಧ್ಯಾತ್ಮಿಕ ಜ್ಞಾನದ ಬೆಳಕನ್ನು ಹಚ್ಚಿಕೊಳ್ಳಲು ಅರ್ಹರಾಗಿದ್ದಾರೆ. ಜನಾಂಗ ಮತ್ತು ಧರ್ಮಗಳ, ಜಾತಿ ಮತ್ತು ಪಂಥಗಳ ವಿವಕ್ಷೆ ಇಲ್ಲಿ ಬರುವುದಿಲ್ಲ. ಲೌಕಿಕ ಶಿಕ್ಷಣವಿಲ್ಲದೆ ಹೋದರೆ, ಭೌತಿಕ ವಿಜ್ಞಾನಗಳ ಆಧಾರವಿಲ್ಲದೆ ಹೋದರೆ, ಜಾಗತಿಕ ವಿಷಯಗಳಲ್ಲಿ ಪರಿಣತಿಗೊಳಿಸದೆ ಹೋದರೆ ಏನೂ ಬಾಧಕವಿಲ್ಲ. ಆಧುನಿಕ ಪ್ರಪಂಚದಲ್ಲಿ ಈ ಆತ್ಮಜ್ಞಾನವನ್ನು ಸಂಪಾದಿಸುವುದು ಅಷ್ಟು ಸುಲಭವಲ್ಲ. ಆದರೆ ಹತಾಶೆಯಿಂದ ವ್ಯಕ್ತಿಯು ಪ್ರಯತ್ನವನ್ನು ಕೈ ಬಿಡಬಾರದು.

ಕೆಲವರು ಲೌಕಿಕ ಶಿಕ್ಷಣವನ್ನು ಬಲಿಕೊಟ್ಟು ಪಟ್ಟು ಹಿಡಿದು ಆಧ್ಯಾತ್ಮಿಕ ಜ್ಞಾನವನ್ನು ಅರಸುತ್ತಾರೆ. ಇದೂ ಅಪೇಕ್ಷಣೀಯವಲ್ಲ. ಅವರು ಎರಡನ್ನೂ ಕಳೆದುಕೊಂಡು

ನಡುವಂತರದಲ್ಲಿ ಗೊತ್ತುಗುರಿಯಿಲ್ಲದೆ ಅಲೆದಾಡುತ್ತಾರೆ. ಅಂತಹ ಸ್ಥಿತಿಯೂ ವಿಹಿತವಾದುದಲ್ಲ. ಲೌಕಿಕ ಶಿಕ್ಷಣವನ್ನು ತಿರಸ್ಕರಿಸಕೂಡದು. ಲೌಕಿಕ ವಿದ್ಯೆಯ ಮೇಲೆ ಪ್ರಭುತ್ವವನ್ನು ಸಾಧಿಸುತ್ತಿರುವಂತೆಯೇ ಆಧ್ಯಾತ್ಮಿಕ ದೃಷ್ಟಿಯನ್ನು ಬೆಳೆಸಿಕೊಳ್ಳ ಬೇಕು. ಅದರಿಂದ ಲಾಭವಿದೆ. ಆದ್ದರಿಂದ ತರುಣರು ಪ್ರತಿದಿನವೂ ಸ್ವಲ್ಪ ಸಮಯ ವನ್ನಾದರೂ ಭಗವದ್ಧ್ಯಾನಲ್ಲಿ ಕಳೆಯಬೇಕು.

ತರುಣರು ಕಾರ್ಯಶೀಲರಾಗಬೇಕು, ಮತ್ತು ನವಭಾರತದ ನಿರ್ಮಾಣಕ್ಕಾಗಿ, ಸಂತೋಷಭರಿತವಾದ ಶಾಂತಿಯುತ ಜಗತ್ತಿಗಾಗಿ ತಮ್ಮ ಶಕ್ತಿಯನ್ನು ಸಂಪೂರ್ಣ ವಾಗಿ ಉಪಯೋಗಿಸಬೇಕು. ಅವರು ಅಧಿಕಾರ ಮೋಹವನ್ನು ತೊರೆಯಬೇಕು. ಭ್ರಷ್ಟಾಚಾರ ಮತ್ತು ಅನೈತಿಕತೆಗಳನ್ನು ಕಿತ್ತೆಸೆಯುವ ಹಂಬಲ, ಕಷ್ಟಪಟ್ಟು ಕೆಲಸ ಮಾಡುವ ಬಯಕೆ ಇವು ಪ್ರತಿಯೊಬ್ಬ ವಿದ್ಯಾರ್ಥಿಯ ಹೃದಯದಲ್ಲೂ ಬೇರೂರ ಬೇಕು. ಭಾರತ ಮಾತೆಯ ಭವಿಷ್ಯವು ಅವರನ್ನು ಅವಲಂಬಿಸಿದೆ. ಆಕೆ ಅವರಿಗಾಗಿ ಕಾಯುತ್ತಿದ್ದಾಳೆ. ತಾಯಿಯ ಸೇವೆ ಮಾಡಿ, ಅವಳನ್ನು ಸಂತೋಷ ಪಡಿಸುವುದು ಹೇಗೆ ಮಕ್ಕಳ ಕರ್ತವ್ಯವೋ ಹಾಗೆಯೇ ಭಾರತ ಮಾತೆಯ ಪ್ರತಿಯೊಂದು ಮಗು ವಿನ ಕರ್ತವ್ಯ ಆಕೆಯನ್ನು ಸಂತೋಷಪಡಿಸುವುದು. ತಾಯಿನಾಡಿಗೆ ನಿಸ್ವಾರ್ಥ ಸೇವೆ ಸಲ್ಲಿಸುವುದು ಪ್ರತಿಯೊಬ್ಬ ವ್ಯಕ್ತಿಯ ಪವಿತ್ರ ಆದರ್ಶವಾಗಬೇಕು. ಸಮಸ್ತ ಭಾರತೀಯರ ಕರ್ತವ್ಯ ಭಾರತಮಾತೆಯ ಸೇವೆಗೆ ತಮ್ಮನ್ನು ಸಮರ್ಪಿಸಿಕೊಳ್ಳು ವುದು. ಅದನ್ನು ದೇಶನೀತಿ ಎಂದು ಕರೆಯಬಹುದು. ಆದ್ದರಿಂದ ಪ್ರತಿಯೊಬ್ಬ ವಿದ್ಯಾರ್ಥಿಯೂ ರಾಷ್ಟ್ರೀಯ ಭಾವೈಕ್ಯದ ಏಕತೆಯ ವ್ಯಾಪಕ ದೃಷ್ಟಿಯನ್ನು ಬೆಳೆಸಿ ಕೊಳ್ಳಬೇಕು. ಶೀಲವಿಲ್ಲದ ವ್ಯಕ್ತಿಯು ತನ್ನನ್ನು ಉದ್ಧರಿಸಿಕೊಳ್ಳಲಾರನು, ದೇಶಕ್ಕೂ ಯಾವ ಪ್ರಯೋಜನವಾಗಲಾರನು.

ತ್ಯಾಗವೂ ಶೀಲದ ಒಂದು ಅಂಶ. ಅದು ತರುಣರು ಬೆಳೆಸಿಕೊಳ್ಳಬೇಕಾದ ಗುಣ. ದಾನಶೀಲತೆ, ಔದಾರ್ಯಯುತ ಕಾರ್ಯಗಳೇ ತ್ಯಾಗ ಎಂದು ಅನೇಕ ವೇಳೆ ಭಾವಿಸ ಲಾಗುತ್ತದೆ. ಆದರೆ ದಾನಶೀಲತೆಗೂ ತ್ಯಾಗಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ದಾನಪರರಾದ ಜನರು ತಮ್ಮಲ್ಲಿರುವ ಅಪಾರ ಸಂಪತ್ತಿನ ಒಂದು ತುಣುಕನ್ನು ಇತರರಿಗೆ ದಾನಮಾಡುತ್ತಾರೆ. ಭೂದಾನ, ಅನ್ನದಾನ, ಶ್ರಮದಾನ, ವಿದ್ಯಾದಾನ ಇವೆಲ್ಲ ಈ ವರ್ಗಕ್ಕೆ ಸೇರುತ್ತವೆ. ಈ ದಾನಕಾರ್ಯಗಳಿಂದ ವ್ಯಕ್ತಿಯು ತನ್ನಲ್ಲಿರುವ ಸಮಸ್ತವನ್ನೂ ಬಿಟ್ಟುಕೊಡಲು ಎಂದಿಗೂ ಸಾಧ್ಯವಿಲ್ಲ. ದಾನ ಮಾಡದೆ ಹೋದರೆ ಯಾರೂ ದರಿದ್ರನೆಂದು ಶಾಪಹಾಕುವುದಿಲ್ಲ. ಇನ್ನೂ ಒಂದು ಹೆಜ್ಜೆ ಮೇಲೆ ಹೋಗಿ ಕೆಲವರು ನ್ಯಾಯಯುತವೂ ಅಗತ್ಯವೂ ಆದುದನ್ನು ತಮಗೆ ಉಳಿಸಿಕೊಂಡು, ಮಿಕ್ಕುದನ್ನು ಸಮಾಜಕ್ಕೆ ಕೊಡುತ್ತಾರೆ. ಅಂಥವರಿಗೆ ಜಗತ್ತಿನಲ್ಲಿ ತುಂಬ ಗೌರವ,

ಮರ್ಯಾದೆ. ನಮ್ಮ ಸೊತ್ತು ಸೊದೆಯ, ವರಮಾನದ ಒಂದು ಭಾಗವನ್ನು ಬಡವರಿಗೆ, ಅಸಹಾಯಕರಿಗೆ ನೀಡತಕ್ಕದ್ದು ಎಂದು ಶಾಸ್ತ್ರಗಳು ವಿಧಿಸಿವೆ. ಈ ಆದೇಶವನ್ನು ತಿರಸ್ಕರಿಸಿ, ವ್ಯಕ್ತಿಯು ಸ್ವಾರ್ಥದಿಂದ, ಅನ್ಯಾಯಯುತವಾಗಿ, ಅಧಾರ್ಮಿಕ ರೀತಿಯಲ್ಲಿ ಲಕ್ಷಾಂತರ ರೂಪಾಯಿಗಳನ್ನು ಸಂಗ್ರಹಿಸಿಟ್ಟುಕೊಳ್ಳಬಾರದು, ದುರಾಶಾ ಪೀಡಿತ ಹಣಹದ್ದಾಗಬಾರದು. ಅಂತಹ ಜಿಪುಣನು ಅವನತಿ ಹೊಂದುತ್ತಾನೆ, ಅಪಾಯಕ್ಕೆ ಸಿಲುಕುತ್ತಾನೆ. ಅದು ಅನಿವಾರ್ಯವಾಗುತ್ತದೆ.

ಅನ್ಯಾಯದ ವಿಧಾನದಿಂದ ಸಂಗ್ರಹಿಸಿಟ್ಟುಕೊಂಡ ಸಂಪತ್ತು ಬಡವರ ಬೆವರನ್ನು ಶೋಷಿಸಿರುವುದರ ಫಲ. ತರುಣರು ಅಂತಹ ಅನ್ಯಾಯ ಜೀವನದ ಗುಲಾಮರಾಗ ಬಾರದು, ಶೋಷಣೆಯನ್ನು ತಮ್ಮ ಜೀವನ ವಿಧಾನವನ್ನಾಗಿ ಆರಿಸಿಕೊಳ್ಳಬಾರದು. ಅಂತಹ ಸ್ವಾರ್ಥಪೂರಿತ ಶೋಷಕ ಜೀವನವನ್ನು ಭಗವಂತನೂ ಕ್ಷಮಿಸುವುದಿಲ್ಲ. ತಾನೂ ಸವಿಯದೆ, ಇತರರಿಗೂ ಕೊಡದೆ ಸಂಪತ್ತನ್ನು ಸುಮ್ಮನೆ ಸಂಗ್ರಹಿಸಿಟ್ಟು ಕೊಳ್ಳುವವನು ಮರಣಾನಂತರ ತಿರಸ್ಕೃತನಾಗುತ್ತಾನೆ; ಅಂತಹವರ ಸಂತಾನವೂ ತಿರಸ್ಕಾರಕ್ಕೆ ಒಳಗಾಗುತ್ತದೆ.

ಸಂಚಿತ ಧನಕ್ಕೆ ನಾಲ್ಕು ಜನರು ವಾರಸುದಾರರಾಗುತ್ತಾರೆ. ಮೊದಲನೆಯದು ದಾನ; ಎರಡನೆಯವನು ನಾಡಿನ ಅರಸ; ಮೂರನೆಯದು ಅಗ್ನಿ ಮತ್ತು ನಾಲ್ಕನೆಯವನು ಕಳ್ಳ. ಮೊದಲನೆಯ ವಾರಸಾದ ದಾನಕ್ಕೆ ಸಿಂಹಪಾಲು ಹೋಗಬೇಕು. ವಿದ್ಯಾರ್ಥಿಗಳು ಈ ಗಹನ ಸತ್ಯದ ಮಹತ್ವವನ್ನು ಗುರುತಿಸಬೇಕು, ತಾವು ಸಂಪಾದಿಸುವುದನ್ನು ಮಾನವ ಕಲ್ಯಾಣಕ್ಕಾಗಿ ವಿನಿಯೋಗಿಸಬೇಕು.

ತ್ಯಾಗವೆನ್ನುವುದು ಅತ್ಯುನ್ನತವಾದ ಹಂತ. ನಿಜವಾದ ತ್ಯಾಗಭಾವನೆಯಿರುವವನು ಯಾವುದೇ ಸಂಕೋಚವಿಲ್ಲದೆ, ಹಿಂದು ಮುಂದು ನೋಡದೆ, ನಗುನಗುತ್ತಾ ಸಂತೋಷವಾಗಿ, ತನಗೆ ತುಂಬ ಪ್ರಿಯವಾದುದನ್ನೂ ತನ್ನಲ್ಲಿರುವ ಅಮೂಲ್ಯವಾದುದನ್ನೂ ಇತರರಿಗೆ ಕೊಡುತ್ತಾನೆ. ಕರ್ಮಫಲವನ್ನು ಭಗವಂತನಿಗೆ ಅರ್ಪಿಸಿ ಬಿಡುವುದೀಗ ನಿಜವಾದ ತ್ಯಾಗ. ತ್ಯಾಗಿಯು ಸಂದರ್ಭ ಬಂದರೆ ತನ್ನ ದೇಹವನ್ನು ಒಂದು ಹುಲ್ಲು ಕಡ್ಡಿಗೆ ಸಮನೆಂದು ಪರಿಗಣಿಸಿ ಕೊಟ್ಟುಬಿಡಲು ಸಿದ್ಧನಾಗಿರುತ್ತಾನೆ. ತ್ಯಾಗವೆಂದರೆ ಚಿನ್ನ ಬೆಳ್ಳಿ ಮತ್ತಿತರ ವಸ್ತುಗಳನ್ನು ಕೊಡುವುದಕ್ಕಿಂತಲೂ ಮೇಲಾದದ್ದು. ಅನೇಕ ಜನ್ಮಗಳಿಂದ ಸಂಗ್ರಹವಾಗಿ ಬಂದಿರುವ ಈರ್ಷ್ಯೆ, ಅಸೂಯೆ, ದ್ವೇಷ, ಕ್ರೋಧ ಈ ಕೆಟ್ಟಗುಣಗಳನ್ನು ತೊರೆಯಬೇಕು. ತ್ಯಾಗ ಮಾಡುವುದರಿಂದ ದೊರಕುವ ಆನಂದಕ್ಕೆ ಎಣೆಯೇ ಇಲ್ಲ. ತ್ಯಾಗಿಗಳೀಗ ಅಮೃತ ಪುತ್ರರು, ಏಕೆಂದರೆ ಅವರು ಎಂದೆಂದೂ ಬದುಕಿರುತ್ತಾರೆ.

ನಮ್ಮ ಪುರಾಣೇತಿಹಾಸಗಳನ್ನು ಓದಿದರೆ ಅಂತಹ ತ್ಯಾಗ ಮನೋಧರ್ಮವನ್ನು ಪ್ರದರ್ಶಿಸಿದ ಅಸಂಖ್ಯಾತ ಮಹಾತ್ಮರನ್ನು ನಾವು ನೋಡುತ್ತೇವೆ. ಶಿಬಿ, ಬಲಿ ಮೊದಲಾದ ಚಕ್ರವರ್ತಿಗಳು, ದಧೀಚಿ, ಕರ್ಣ ಮೊದಲಾದ ನಾಯಕರು ಆ ಉಜ್ವಲ ಪಂಕ್ತಿಗೆ ಸೇರಿದವರು. ಇಂದು ನಮಗೆ ರಾಜಕೀಯ ಧುರೀಣರಲ್ಲಿ, ವಿದ್ಯಾರ್ಥಿಗಳಲ್ಲಿ ಅಂತಹ ಅಪ್ರತಿಮ ತ್ಯಾಗ ಮನೋಭಾವದ ಜನರು ಅಗತ್ಯವಾಗಿದ್ದಾರೆ. ಅವರು ಸ್ವಾರ್ಥವನ್ನು ಮರೆತು, ಅಹಂಕಾರವನ್ನು ಅರೆದು ಹಾಕಿ, ಅಧಿಕಾರಮೋಹವನ್ನು ಕಳೆದುಕೊಂಡು, ಮನಸ್ಸಿನ ಅಲ್ಪತೆಯನ್ನು ಕೊನೆಗೊಳಿಸಿ, ತಮ್ಮನ್ನು ನ್ಯಾಯಕ್ಕೂ ಲೋಕ ಕಲ್ಯಾಣಕ್ಕೂ ಅರ್ಪಿಸಿಕೊಳ್ಳಬೇಕು.

ದುರದೃಷ್ಟವಶಾತ್ ಪದಗಳು ತಮ್ಮ ಅರ್ಥವನ್ನು ಕಳೆದುಕೊಳ್ಳುತ್ತಿವೆ. ತ್ಯಾಗ, ನ್ಯಾಯ, ಧರ್ಮ, ಸೇವೆ ಮುಂತಾದ ಪದಗಳು ತಮ್ಮ ಅರ್ಥವನ್ನು ಕಳೆದುಕೊಂಡು ಕೇವಲ ವ್ಯಾಪಾರದ ವಸ್ತುಗಳಾಗಿಬಿಟ್ಟಿವೆ. ವಿದ್ಯಾರ್ಥಿಗಳು, ರಾಜಕಾರಣಿಗಳು ಮತ್ತು ಶಿಕ್ಷಣ ತಜ್ಞರಲ್ಲಿ ಸ್ವಾರ್ಥವೆನ್ನುವುದು ರುದ್ರತಾಂಡವವಾಡುತ್ತಿದೆ. ಮನುಷ್ಯನ ಮನಸ್ಸಿನಲ್ಲಿ ಇಂದು ಅತ್ಯಂತ ಮೇಲೆ ಇರುವುದು ಅಧಿಕಾರಕ್ಕಾಗಿ ಹಂಬಲ, ಸ್ಥಾನದ ಬಯಕೆ. ಒಮ್ಮೆ ನಮ್ಮ ದೇಶವು ತ್ಯಾಗದ, ಧ್ಯೇಯಕ್ಕೆ ಅರ್ಪಿತವಾದ ಬದುಕಿನ ನಾಡಾಗಿತ್ತು, ತಪೋಭೂಮಿಯಾಗಿತ್ತು. ಇಂದು ನಶ್ವರ ಸುಖಭೋಗಗಳ ಆಟದ ಬಯಲಾಗಿ ಪರಿಣಮಿಸಿದೆ. ದೇಶದ ಅನೇಕಾನೇಕ ಸಂಕಷ್ಟಗಳೂ ರೋಗಗಳಿಗೂ ಇದೇ ಕಾರಣ.

ಈ ಪರಿಸ್ಥಿತಿಯು ಕೊನೆಗೊಳ್ಳಲೇಬೇಕು. ಉತ್ತಮ ಸ್ಥಿತಿಗೆ ಬದಲಾಗಬೇಕು. ಆಗ ಇತಿಹಾಸವು ಮರುಕಳಿಸಿ ನಮ್ಮ ಪ್ರಾಚೀನ ವೈಭವವು ಮತ್ತೆ ಮೆರೆಯುತ್ತದೆ. ಸಹಸ್ರಾರು ತ್ಯಾಗಚೇತನಗಳು ನಿಮ್ಮ ನಡುವಣಿಂದ ಮೂಡಿಬರಬೇಕು. ಪ್ರತಿಯೊಬ್ಬ ತರುಣ ಭಾರತೀಯನೂ ಮತ್ತೊಮ್ಮೆ ತ್ಯಾಗಭಾವನೆಯಿಂದ ಉದ್ದೀಪ್ತನಾಗಬೇಕು.

ಭೋಗಕ್ಕಿಂತ ತ್ಯಾಗವು ಹೆಚ್ಚು ಸಿಹಿ. ತ್ಯಾಗವೇ ಬದುಕಿನ ಗುರಿಯಾಗಬೇಕು. ತ್ಯಾಗದ ಮೂಲಕವಾಗಿ ಮಾತ್ರವೆ ವ್ಯಕ್ತಿಯು ಶಾಂತಿಯನ್ನು ಪಡೆಯಲು ಸಾಧ್ಯ. ಎಲ್ಲಿಯವರೆಗೆ ಮನಸ್ಸು ತನ್ನಷ್ಟಕ್ಕೆ ತಾನು ತಣ್ಣಗಿರುವುದಿಲ್ಲವೋ ಅಲ್ಲಿಯವರೆಗೆ ದುಃಖಗಳು ನಮ್ಮನ್ನು ಬಿಟ್ಟು ಹೋಗುವುದಿಲ್ಲ. ಸಂಕಟವು ನಮ್ಮಲ್ಲಿ ಸ್ಥಿರವಾಗಿ ಉಳಿದುಬಿಡುತ್ತದೆ. ಮನಶ್ಶಾಂತಿಯಿಲ್ಲದೆ ಎಷ್ಟೇ ಸಂಪತ್ಸಮೃದ್ಧಿಯಿಂದ ಏನೇನೂ ಉಪಯೋಗವಿಲ್ಲ. ನಿಷ್ಪಕ್ಷಪಾತ ಮನಸ್ಸಿನಿಂದ ಕರ್ಮಫಲಗಳನ್ನು ಒಪ್ಪಿಸಿಬಿಡುವುದು ತ್ಯಾಗ ಎಂಬ ಹೆಸರಿಗೆ ಅರ್ಹವಾಗುತ್ತದೆ. ತ್ಯಾಗವೊಂದೇ ಅಮೃತತ್ವಕ್ಕೆ ಒಯ್ಯುತ್ತದೆ ಎಂದು ಉಪನಿಷತ್ತುಗಳು ಕಂಠೋಕ್ತವಾಗಿ ಸಾರಿವೆ. ಪರಿಶುದ್ಧನಾದ

ವನ ಮುಖ್ಯ ಲಕ್ಷಣವೇ ತ್ಯಾಗ. ಆದ್ದರಿಂದ ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನ ಜೀವನದಲ್ಲಿ ತ್ಯಾಗಭಾವನೆಯನ್ನು ಬೆಳೆಸಿಕೊಳ್ಳಬೇಕು. ಅವನು ಭೋಗದ ರೋಗಕ್ಕೆ ಬಲಿಯಾಗಬಾರದು.

ದುರದೃಷ್ಟವಶಾತ್ ಇಂದು ಶಿಕ್ಷಣವು ವೃತ್ತಿಗೋಸ್ಕರವಾಗಿಯೇ ಹೊರತು ಜ್ಞಾನದ ವಿಸ್ತರಣೆಗಲ್ಲ ಎಂಬ ವ್ಯಾಪಕ ಅಭಿಪ್ರಾಯವು ಪ್ರಚುರವಾಗಿದೆ. ಇದು ಬಹು ವಿಷಾದದ ಸಂಗತಿ. ವಿವೇಕವೇ ಬೆಳಕು. ಶಿಕ್ಷಣದ ಗುರಿ ಆ ವಿವೇಕದ ಬೆಳಕನ್ನು ಎಲ್ಲ ಕಡೆಗೂ ಪ್ರಸರಿಸುವುದು. ಅಂತಹ ವಿವೇಕವು ಮನುಷ್ಯನಿಗೆ ನಿಜವಾದ ಶಕ್ತಿಯನ್ನು ನೀಡುತ್ತದೆ. ಅದು ವಸ್ತುಗಳ ಮತ್ತು ವ್ಯಕ್ತಿಗಳ ನಡುವಣ ಪಾರಸ್ಪರಿಕ ಸಂಬಂಧವನ್ನು ಕಂಡುಕೊಳ್ಳಲು, ಹಾಗೆಯೇ ಪ್ರತಿಯೊಂದು ವಸ್ತುವಿನ ಪೂರ್ವೋತ್ತರಗಳನ್ನು ತಿಳಿದುಕೊಳ್ಳಲು ಸಹಾಯ ಮಾಡುತ್ತದೆ.

ಈ ಬೆಳಕು ಮನುಷ್ಯನನ್ನು ಪ್ರವೇಶಿಸುವುದು ಹೇಗೆ? ವೇದಗಳು, ವೇದಾಂತ, ಉಪನಿಷತ್ತುಗಳು, ಕುರಾನ್, ಗ್ರಂಥ ಸಾಹೇಬ್ ಮೊದಲಾದ ಪವಿತ್ರ ಕೃತಿಗಳನ್ನೂ ಉದಾತ್ತ ಚೇತನಗಳ ಜೀವನಚರಿತ್ರೆಗಳನ್ನೂ ಭೌತಿಕ ಹಾಗೂ ತಾಂತ್ರಿಕ ಜ್ಞಾನ ಸಂಬಂಧವಾದ ಪುಸ್ತಕಗಳನ್ನೂ ಮನೋವಿಜ್ಞಾನವನ್ನೂ ಅಧ್ಯಯನ ಮಾಡುವುದರಿಂದ ಈ ಬೆಳಕನ್ನು ಪಡೆಯಬಹುದು. ವಿವೇಕದ ಜೊತೆಗೆ ವಿವೇಚನಾಯುತ ನಡವಳಿಕೆ ತರ್ಕಬದ್ಧ ಆಲೋಚನೆ ಇವುಗಳನ್ನು ಅವುಗಳ ಅಧ್ಯಯನದಿಂದ ಪಡೆಯಬಹುದು. ಪವಿತ್ರಗ್ರಂಥಗಳಿಂದ ಬಂದ ಜ್ಞಾನದ ಮೇಲೆಯೇ ಸಂಪೂರ್ಣವಾಗಿ ಅವಲಂಬಿಸದೆ, ಅನುಭವದಿಂದ ಮೂಡಿಬರುವ ವಿವೇಕವನ್ನು ಅವಲಂಬಿಸಬೇಕು.

ಶಿಕ್ಷಣದ ಸ್ವರೂಪ ಮತ್ತು ವಸ್ತು ಬದಲಾಗಬೇಕು. ೧೯೭೨ರಲ್ಲಿ ದೆಹಲಿಗೆ ಬಂದಿದ್ದ ಸ್ಟಾಕ್‌ಹೋಮ್ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕ ಗುನ್ನಾರ್ ಮಿರ್ಡಾಲ್ ಹೇಳಿದರು: "ಭಾರತದ ಶಿಕ್ಷಣ ವ್ಯವಸ್ಥೆ ಪ್ರಗತಿಪರವಾಗಿಲ್ಲ. ನಮ್ಮ ಕೈಗಳನ್ನು ಕೊಳೆ ಮಾಡಿಕೊಳ್ಳಬಾರದು ಎಂಬ ಮನೋಭಾವವನ್ನು ಅದು ಪೋಷಿಸುತ್ತದೆ." ಎಲ್ಲ ಭಾರತೀಯರೂ ವಿಶೇಷವಾಗಿ ವಿದ್ಯಾರ್ಥಿಗಳು ಇದನ್ನು ಮನನ ಮಾಡಬೇಕು. ನಮ್ಮ ವಿದ್ಯಾರ್ಥಿಗಳು ವಿದ್ಯುತ್ ಫ್ಯಾನುಗಳ ಕೆಳಗೆ, ಹವಾನಿಯಂತ್ರಿತ ಕೊಠಡಿಗಳಲ್ಲಿ ಕುಳಿತು ಸುಖಜೀವನ ನಡೆಸುವುದನ್ನು, ದೈಹಿಕ ಶ್ರಮ, ಅದರ ಆಯಾಸ, ಬೆವರು, ಕೊಳೆಗಳನ್ನು ನಿವಾರಿಸಿ ತೊಟ್ಟ ಬಟ್ಟೆಯ ಮಡಿಕೆ ಹಾಳಾಗದ ಹಾಗೆ ಲೋಲುಪ ಜೀವನ ನಡೆಸುವ ಪ್ರವೃತ್ತಿಯನ್ನೂ ಅದು ಟೀಕಿಸಿದೆ.

ಶಿಕ್ಷಣವು ಉದ್ದೀಪಿಸಬೇಕಾದ ವಿನಯ ವಿಧೇಯತೆಯ ಭಾವನೆಗಳಿಂದ ಈ ಮನೋಧರ್ಮ ಬಹುದೂರವಾಗಿದೆ. ವಿದ್ಯಾರ್ಥಿಗಳು ತಾವು ಕಲಿತ ಪವಿತ್ರ ವಿಚಾರಗಳನ್ನು ಸಮಾಜದಲ್ಲಿ ತಮ್ಮ ಸುತ್ತುಮುತ್ತಿನವರಿಗೆ ಹರಡಬೇಕು. ಗ್ರಾಮ ಗಳಿಗೆ ಸಿಂಹದ ಮರಿಗಳಂತೆ ನೆಗೆದು ನುಗ್ಗಬೇಕು, ಅಲ್ಲಿ ತುಂಬಿ ತುಳುಕುತ್ತಿರುವ ಮಲಿನತೆಗಳನ್ನು ಶುಚಿಗೊಳಿಸಬೇಕು. ಗ್ರಾಮಗಳ ಅನಕ್ಷರಸ್ಥ ಜನರು ಗೌರವಾ ನ್ವಿತವೂ ಆರೋಗ್ಯಯುತವೂ ಆದ ಬಾಳ್ವೆ ನಡೆಸಲು ಕಲಿಸಬೇಕು. ಗ್ರಾಮಸ್ಥರ ಜೊತೆ ಜೊತೆಗೂ ಕಷ್ಟಪಟ್ಟು ಕೆಲಸಮಾಡಿ ಅವರನ್ನು ಮುಂದು ಮುಂದಕ್ಕೆ ಕರೆದೊಯ್ಯಬೇಕು. ಇಂದಿನ ವಿದ್ಯಾರ್ಥಿಗಳು ತಮ್ಮ ಮಾದರಿ ಜೀವನದಿಂದ ಜಗತ್ತಿನೆದುರು ಉನ್ನತ ಆದರ್ಶಗಳನ್ನು ನಿಲ್ಲಿಸಬೇಕು.

ಅಧ್ಯಾಯ ೨೨

# ನಿತ್ಯ ಸತ್ಯಗಳು

ವೇದವು ಸಕಲ ಶಾಸ್ತ್ರಗಳ ಮಾತೆ. ಅದು ಸಾಕ್ಷಾತ್ ಭಗವಂತನಿಂದ ಶ್ವಾಸೋಚ್ಛ್ವಾಸ ರೂಪದಲ್ಲಿ ಮೂಡಿತು. ದೀರ್ಘಕಾಲದ ತಪಸ್ಸಿನಿಂದ ಉದ್ದೀಪ್ತರಾದ ಋಷಿಗಳು ವೇದವನ್ನು ಧ್ವನಿಗಳ ಸರಣಿಯಾಗಿ ಸ್ವೀಕರಿಸಿದರು. ಗುರುವಿನಿಂದ ಶಿಷ್ಯನಿಗೆ ಕಂಠೋಕ್ತವಾಗಿ ಅದು ಹರಿದುಬಂದಿತು. ಜಗತ್ತಿನಾದ್ಯಂತ ವ್ಯಾಪಿಸಿತು. ವೇದವನ್ನು ಆಲಿಸಿ ಅನೇಕ ಪೀಳಿಗೆಗಳವರೆಗೆ ಕಾಪಾಡಿಟ್ಟುಕೊಂಡು ಬಂದುದರಿಂದ ಅದನ್ನು ಶ್ರುತಿ (ಕೇಳಲ್ಪಟ್ಟದ್ದು) ಎಂದು ಕರೆಯಲಾಗಿದೆ. ವೇದವು ಅಂತ್ಯರಹಿತ. ವೇದಗಳನ್ನು ರಚಿಸಿದವರು ಯಾರು? ಇಂದಿನವರೆಗೂ ಅವರ ಹೆಸರುಗಳನ್ನು ಕಂಡುಹಿಡಿಯುವುದು ಸಾಧ್ಯವಾಗಿಲ್ಲ. ಅದನ್ನು ಪಠಿಸಿದವರಿಗೆ ಪ್ರಸಿದ್ಧಿ ಪಡೆಯಬೇಕೆಂಬ ಹಂಬಲವಿರಲಿಲ್ಲವಾಗಿ ವೇದಗಳಲ್ಲಿ ಎಲ್ಲಿಯೂ ರಚಿಸಿದವರ ಹೆಸರುಗಳು ಕಂಡುಬರುವುದಿಲ್ಲ. ತಮ್ಮ ಹೆಸರಿಗಾಗಲಿ, ಕುಲ ಗೋತ್ರಗಳಿಗಾಗಲಿ ಅವರು ಯಾವ ಪ್ರಾಮುಖ್ಯವನ್ನು ಕೊಡಲಿಲ್ಲವೆಂದು ಕಾಣುತ್ತದೆ, ಅಥವಾ ಅವರಿಗೆ ಸಮೀಪದ ನೆಂಟರಿಷ್ಟರಾಗಲಿ, ಕುಲ ಬಾಂಧವರಾಗಲಿ ಇರಲಿಕ್ಕಿಲ್ಲ. ಆತ ಅಥವಾ ಅವರು ಯಾರೇ ಆಗಿರಲಿ, ಅವರು ಸಕಲ ಜ್ಞಾನಗಳಿಗೆ ಒಡೆಯರಾಗಿದ್ದರು. ಏಕೆಂದರೆ ವೇದಗಳಲ್ಲಿ ವ್ಯಕ್ತವಾಗುವ ಸಮಾನತೆ ಹಾಗೂ ಶಾಂತಿ ಅಂತಹ ಜ್ಞಾನಿಗಳ ಗುಣಗಳಾಗಿವೆ. ಆದ್ದರಿಂದ ಸಕಲ ಸಾಮರ್ಥ್ಯಶಾಲಿಗಳಾದ ವ್ಯಕ್ತಿಗಳೇ ವೇದವನ್ನು ಜಗತ್ತಿಗೆ ನೀಡಿದರೆಂದು ಊಹಿಸುವುದು ಸೂಕ್ತವಾಗುತ್ತದೆ.

ವೇದ ಎಂಬ ಪದವು ವಿದ್ ಎಂಬ ಧಾತುವಿನಿಂದ ಬಂದಿದೆ. ತಿಳಿದುಕೊ ಎಂದು ಅದರರ್ಥ. ವಿದಂ ತು ಅನೇನ ಇತಿ ವೇದಃ (ಯಾವುದು ಸಕಲ ಜ್ಞಾನವನ್ನು ತೋರಿಸಿಕೊಡುತ್ತದೋ ಸ್ಪಷ್ಟಪಡಿಸುತ್ತದೋ ಅದು ವೇದ). ಸೀಮಿತ ಬುದ್ಧಿಶಕ್ತಿಯಿಂದಾಗಲಿ, ಸೀಮಿತ ಅನುಭವದಿಂದಾಗಲಿ ವೇದವನ್ನು ಸ್ವಾಧೀನಪಡಿಸಿಕೊಳ್ಳುವುದು ಸಾಧ್ಯವಿಲ್ಲ. ವ್ಯಕ್ತಿಯ ಆಧ್ಯಾತ್ಮಿಕ ಪ್ರಗತಿಗೆ ಅಗತ್ಯವಾದ ಸಮಸ್ತವನ್ನೂ ಪವಿತ್ರ ವೇದವು ಬೋಧಿಸುತ್ತದೆ. ಸಕಲ ದುಃಖ ದುಮ್ಮಾನಗಳನ್ನು ಪರಿಹರಿಸಿಕೊಳ್ಳುವ ಮಾರ್ಗವನ್ನು ಅದು ಕಲಿಸಿಕೊಡುತ್ತದೆ. ಅಚಂಚಲವಾದ ಶಾಂತಿಯನ್ನು ದೊರಕಿಸಿಕೊಡುವ ಸಕಲ ಆಧ್ಯಾತ್ಮಿಕ ಸಾಧನೆಗಳನ್ನು ಅದು ಹೇಳಿ

ಕೊಡುತ್ತದೆ. ವೇದದ ಆದಿಯನ್ನಾಗಲಿ ಅಂತ್ಯವನ್ನಾಗಲಿ ಯಾರೊಬ್ಬರೂ ಅರಿಯರು. ಆದ್ದರಿಂದ ಅದನ್ನು ಅನಾದಿ ಮತ್ತು ಸನಾತನ ಎಂದು ಕೊಂಡಾಡಲಾಗಿದೆ. ವೇದದ ಮೊದಲಾಗಲಿ ಕಡೆಯಾಗಲಿ ತಿಳಿಯದಿರುವುದರಿಂದ ಅದು ನಿತ್ಯ. ಮಾನವ ಬುದ್ಧಿಗೆ ಮಾಲಿನ್ಯದ ಬಣ್ಣ ಮೆತ್ತಿರುತ್ತದೆ. ವೇದಗಳಲ್ಲಿ ಅದರ ಕುರುಹು ಕೂಡ ಇಲ್ಲವಾದ್ದರಿಂದ ಅದು ಮಾನವ ನಿರ್ಮಿತವಾಗಿರಲಾರದು. ಆದ್ದರಿಂದಲೇ ವೇದವನ್ನು ಅಪೌರುಷೇಯ (ಪುರುಷಕೃತವಲ್ಲದ್ದು) ಎಂದೂ ವರ್ಣಿಸಲಾಗಿದೆ.

ವೇದವು ತನಗೆ ತಾನೆ ಪ್ರಮಾಣ. ವೇದದ ಪ್ರತಿಯೊಂದು ಶಬ್ದವೂ ಪರಮ ಪವಿತ್ರವಾದದ್ದು. ವೇದದಲ್ಲಿ ಮತ್ತು ಅದರ ಪ್ರಾಮಾಣ್ಯದಲ್ಲಿ ನಂಬಿಕೆಯಿರುವವರಿಗೆ ಇದು ಅನುಭವಕ್ಕೆ ಬಂದಿರುತ್ತದೆ. ಪ್ರಾಚೀನ ಕಾಲದ ಋಷಿಮುನಿಗಳು ಅಂತಹ ಅನುಭವ ಶ್ರೀಮಂತಿಕೆಯನ್ನು ಪಡೆದಿದ್ದರು; ಎಂದೇ ಅದನ್ನು ಸಕಲ ಜ್ಞಾನದ ಮೂಲವೆಂದು ಕೊಂಡಾಡಿದರು. ಈ ಅನುಭವಗಳು ಕಾಲಕ್ಕಾಗಲಿ ದೇಶಕ್ಕಾಗಲಿ ಬದ್ಧವಾದವಲ್ಲ. ಅವುಗಳ ಮೌಲ್ಯವನ್ನು ಭಾರತದಲ್ಲಿ ಮಾತ್ರವಲ್ಲ, ಎಲ್ಲಾ ದೇಶಗಳ ಜನರೂ ಮನಗಂಡಿದ್ದಾರೆ. ಅವು ಮೂಲಭೂತ ಸತ್ಯಗಳನ್ನು ನಿರೂಪಿಸುತ್ತವೆ.

ವೈದಿಕಧರ್ಮವು ಯಾವಾಗ ಹುಟ್ಟಿತೆಂಬುದು ನಮಗೆ ಗೊತ್ತಿಲ್ಲ. ಮಿಕ್ಕ ಧರ್ಮಗಳು ಆಮೇಲಿನವು. ಅದೇ ವ್ಯತ್ಯಾಸ. ಆದ್ದರಿಂದ ಪರವಸ್ತುವನ್ನು ತಿಳಿದುಕೊಳ್ಳಬೇಕಾದರೆ, ಮನುಷ್ಯನ ಕೌಶಲ ಮತ್ತು ಸಾಮರ್ಥ್ಯಗಳ ನೆರವಿನಿಂದ ಸಾಧ್ಯವಾಗಲಾರದು. ಮಾನವ ಬುದ್ಧಿಯು ಕೆಲವು ಮಿತಿಗಳಲ್ಲಿ ಮಾತ್ರ ವರ್ತಿಸುವುದು. ಬುದ್ಧಿಗ್ರಾಹ್ಯಂ ಅತೀಂದ್ರಿಯಂ. ವೇದವಾದರೆ ಬುದ್ಧಿಯ ಎಟುಕಿಗೆ ಅತೀತವಾದದ್ದು. ಬುದ್ಧಿಯು ಮಿತವಾದದ್ದು. ಇಂದ್ರಿಯಗಳು ಕಂಡುಹಿಡಿಯಬಲ್ಲ ವಾಸ್ತವಾಂಶಗಳು ಮತ್ತು ಅವಕ್ಕೆ ಸಂಬಂಧಿಸಿದ ಅನುಭವಗಳು ಮಾತ್ರ ಅದರ ಪರಿಧಿಯಲ್ಲಿ ಬರುತ್ತವೆ. ಅದೇನಿದ್ದರೂ ಕಣ್ಣಿಗೆ ಕಾಣುವ, ಎಟುಕಿಗೆ ನಿಲುಕುವ ಕ್ಷೇತ್ರದಲ್ಲಿ ಮಾತ್ರ ವರ್ತಿಸುತ್ತದೆ.

ವೇದ ಮಾತೆಗೆ ತನ್ನ ಮಕ್ಕಳನ್ನು, ಮನುಕುಲವನ್ನು ಕಂಡರೆ ಅಪಾರ ಕರುಣೆ. ಮಾನವ ಜನಾಂಗದ ಹಂಬಲ ಹಾತೊರಿಕೆಗಳನ್ನು ಪವಿತ್ರಗೊಳಿಸಲು, ಉನ್ನತಿಗೇರಿಸಲು ಆಕೆಯು ಕಾಲದ ಕಲ್ಪನೆಯನ್ನು, ಅದರ ವಿವಿಧ ಅಂಗಗಳಾದ ವರ್ಷಗಳು, ಮಾಸಗಳು, ದಿನಗಳು, ಗಂಟೆಗಳು, ನಿಮಿಷ ಮತ್ತು ಸೆಕೆಂಡುಗಳನ್ನು ಒದಗಿಸಿಕೊಟ್ಟಿದ್ದಾಳೆ. ದೇವತೆಗಳೂ ಕಾಲಬದ್ಧರು. ಜೀವವು ಕಾಲ ದೇಶಗಳ ಚಕ್ರದಲ್ಲಿ ಸಿಲುಕಿಕೊಂಡು ಅದರಿಂದ ಬಿಡುಗಡೆ ಹೊಂದುವ ಯಾವ ವಿಧಾನವನ್ನೂ ತಿಳಿಯದೆ, ಆ ಚಕ್ರದೊಂದಿಗೆ ಸುತ್ತುತ್ತಲೇ ಇರುತ್ತದೆ. ಆದರೆ ನಿಜದಲ್ಲಿ,

ಅವನು ಕಾಲ ದೇಶಗಳ ಎಟುಕಿನ ಆಚೆಗಿದ್ದಾನೆ. ಈ ಸತ್ಯವನ್ನು ಅವನು ತಿಳಿದು ಕೊಳ್ಳುವಂತೆ ಮಾಡಿ, ಈ ಅಲ್ಪತೆಯಿಂದ ಅವನನ್ನು ಪಾರುಮಾಡುವುದು ವೇದದ ಉದ್ದೇಶವಾಗಿದೆ. ವೇದ ಮಾತೆಯು ಕರುಣಾಮಯಿ. ತನ್ನ ಮಕ್ಕಳನ್ನು ಸಂದೇಹ ಮತ್ತು ಅತೃಪ್ತಿಗಳ ಮುಷ್ಟಿಯಿಂದ ಸ್ವತಂತ್ರಗೊಳಿಸಲು ಅವಳು ಹಂಬಲಿಸುತ್ತಾಳೆ. ಕೆರಳಿಸುವುದರಲ್ಲಾಗಲಿ, ಗೊಂದಲ ಪಡುಸುವುದರಲ್ಲಾಗಲಿ ಅವಳಿಗೆ ಅಪೇಕ್ಷಯಿಲ್ಲ. ಜ್ಞಾನಿಗಳು ಇದನ್ನು ಚೆನ್ನಾಗಿ ಬಲ್ಲರು.

ಗುರುತ್ವಾಕರ್ಷಣೆಯು ಈ ಭೂಮಿಯ ಮೇಲೆ ಎಂದಿನಿಂದ ಇದೆ ಎಂದು ನಮಗೆ ಯಾರಿಗೂ ತಿಳಿಯದು. ಭೂಮಿಯು ಸೃಷ್ಟಿಗೊಂಡಂದಿನಿಂದಲೂ ಅದು ಇದೆ. ಭೂಮಿಯೂ ಗುರುತ್ವಾಕರ್ಷಣ ಶಕ್ತಿಯೂ ಪ್ರತ್ಯೇಕಗೊಳಿಸಲಾಗದಂಥವು. ಎಲ್ಲೋ ಕೆಲವರು ಅದನ್ನು ಗುರುತಿಸಲಿಲ್ಲವೆಂದ ಮಾತ್ರಕ್ಕೆ ಭೂಮಿಯ ಮೇಲೆ ಆ ಶಕ್ತಿಯಿಲ್ಲ ಎಂದು ಹೇಳುವುದು ಮೂರ್ಖತನವಾದೀತು! ಮನುಷ್ಯನು ತಿಳಿದುಕೊಳ್ಳುವುದಕ್ಕೆ ಮುಂಚಿನಿಂದಲೂ ಅದು ವರ್ತಿಸುತ್ತಲೇ ಇತ್ತು. ಕೊನೆಗೆ, ಹಲವಾರು ಸಿದ್ಧಾಂತ ಗಳನ್ನು ವಿಶ್ಲೇಷಿಸಿ, ಹಲವಾರು ಪ್ರಯೋಗಗಳನ್ನು ಗಮನಿಸಿ ಪಾಶ್ಚಾತ್ಯ ಭೌತವಿಜ್ಞಾನಿ ನ್ಯೂಟನ್ನನು ಭೂಮಿಯು ಗುರುತ್ವ ಶಕ್ತಿಯನ್ನು ಹೊಂದಿದೆ ಎಂದು ಘೋಷಿಸಿ ದನು. ಜಗತ್ತು ಅವನ ಹೇಳಿಕೆಯನ್ನು ಒಪ್ಪಿತು. ಅದರ ಸತ್ಯತೆಯಲ್ಲಿ ನಂಬಿಕೆಯನ್ನು ಇಟ್ಟುಕೊಂಡಿತು. ಆದರೆ ನ್ಯೂಟನ್ ಘೋಷಿಸುವಾಗಲೂ ಅದಕ್ಕಿಂತ ಮೊದಲೂ ಗುರುತ್ವಶಕ್ತಿಯು ವರ್ತಿಸುತ್ತಲೇ ಇತ್ತು. ದಿಢೀರನೆ ಎಂದೋ ಒಂದು ದಿನ, ಪ್ರಯೋಗವು ಸ್ಥಿರೀಕರಿಸಿದಂದು ವರ್ತಿಸತೊಡಗಲಿಲ್ಲ.

ವೇದಗಳು ನಿತ್ಯಸತ್ಯಗಳು; ಈ ದೇಶದ ಜನರು ಕಂಡುಹಿಡುಯುವುದಕ್ಕಿಂತಲೂ ಮುಂಚಿನಿಂದಲೇ, ಆಚರಿಸಿ ಅನುಭವಿಸುವುದಕ್ಕಿಂತಲೂ ಮುಂಚಿನಿಂದಲೇ ಅವು ಇದ್ದುವು. ಪಾಶ್ಚಾತ್ಯ ಭೌತ ವಿಜ್ಞಾನಿಗಳು ಹೇಗೆ ತಮ್ಮ ಪ್ರಯೋಗಗಳನ್ನು ಮಾಡಿದ ಅನಂತರ ಗುರುತ್ವ ಶಕ್ತಿಯನ್ನು ಪ್ರಕಟಿಸಿದರೋ ಹಾಗೆಯೇ ಈ ನಾಡಿನ ಪ್ರಾಚೀನರು ವೇದಗಳ ಪ್ರಾಮುಖ್ಯವನ್ನು ತಮ್ಮದೇ ಅನುಭವದ ಮೂಲಕ ಪ್ರಯೋಗತಃ ಮಾಡಿ ತೋರಿಸಿದರು. ಇಲ್ಲೂ ಅಷ್ಟೆ, ಕಂಡುಹಿಡಿದು ಆಚರಣೆಗೆ ತರುವುದಕ್ಕಿಂತಲೂ ಬಹು ಮುಂಚಿನಿಂದಲೇ ವೇದವು ಇದ್ದಿತು. ನ್ಯೂಟನ್ನನ ಗುರುತ್ವ ಸಿದ್ಧಾಂತಗಳು ಇಡೀ ಜಗತ್ತಿಗೆ ಲಾಭದಾಯಕವಾದುವು; ಎಲ್ಲ ಕಾಲಗಳಿಗೂ ಅನ್ವಯವಾಗುವ ಸಾರ್ವತ್ರಿಕ ತತ್ತ್ವಗಳನ್ನು ಅವು ವ್ಯಕ್ತ ಪಡಿಸುತ್ತವೆ. ಅವು ಪಾಶ್ಚಾತ್ಯ ದೇಶಗಳಿಗೆ ಮಾತ್ರ ಮೀಸಲಿಲ್ಲ, ಹಾಗೆಯೇ ವೇದವು ಭಾರತಕ್ಕೆ ಮಾತ್ರವಲ್ಲದೆ ಭೂಮಿಯ ಮೇಲಿನ ಎಲ್ಲಾ ಜನರಿಗೂ ಅನ್ವಯಿಸುವ ಸತ್ಯವಾಗಿದೆ.

ಭಾರತವೇ ವೇದಗಳ ಉಗಮಸ್ಥಾನ ಎಂದು ಹೇಳಿಕೊಳ್ಳುವುದು ಸರಿಯಲ್ಲ. ಹೆಚ್ಚೆಂದರೆ ಭಾರತದ ಜನರು ಅವುಗಳನ್ನು ಕಂಡುಹಿಡಿದರು ಎಂದು ಹೇಳ ಬಹುದು. ಒಂದು ಸ್ಥಳದಲ್ಲಿ ನಡೆದ ಘಟನೆಯು ಇನ್ನೊಂದು ಸ್ಥಳದಲ್ಲಿ ಏಕೆ ನಡೆಯಲಿಲ್ಲ ಎಂದು ಕೇಳುವುದೂ ಗೊಂದಲದ ಮನಸ್ಸಿಗೆ ಕುರುಹು. ಭಗವಂತ ನೆಂಬ ಕರ್ತೃವು ಎಲ್ಲಿ ಏನು ನಡೆಯಬೇಕೆಂಬುದನ್ನು ನಿರ್ಧರಿಸುತ್ತಾನೆ, ಅದು ಹಾಗೆ ನಡೆಯುತ್ತದೆ. ಭಾರತದ ವಾತಾವರಣವು ವೇದಗಳ ಆವಿಷ್ಕಾರಕ್ಕೆ ಮತ್ತು ಬೆಳವಣಿಗೆಗೆ ಅನುಕೂಲಕರವಾಗಿತ್ತು. ಈ ಕರ್ಮಭೂಮಿ, ಈ ಯೋಗಭೂಮಿ, ಈ ತ್ಯಾಗಭೂಮಿಯ ಮಹಾಮುನಿಗಳ ಹೃದಯದ ಕಡೆಗೆ ವೇದಗಳು ಆಕರ್ಷಿತವಾ ದುವು. ಇತರ ದೇಶಗಳು ಭೋಗಲಾಲಸವಾಗಿದ್ದವು, ಹಾಗಾಗಿ ಅಲ್ಲಿಯ ವಾತಾವ ರಣವು ಪ್ರಾಪಂಚಿಕ ಆಶೋತ್ತರಗಳಿಂದಲೂ ಸಾಧನೆಗಳಿಂದಲೂ ತುಂಬಿ ಹೋಗಿ ದ್ದಿತು. ಆದ್ದರಿಂದ ಅಲ್ಲಿ ವೈದಿಕ ಸಂದೇಶವನ್ನು ಸುಲಭವಾಗಿ ಗ್ರಹಿಸಲು ಅವಕಾಶ ವಿರಲಿಲ್ಲ. ಭಾರತದಲ್ಲಾದರೆ ಲೌಕಿಕ ಉದ್ದೇಶಗಳ ಜೊತೆಗೇ ಆಧ್ಯಾತ್ಮಿಕ ಅನ್ವೇಷಣೆ ಯನ್ನು ಪ್ರಾಮಾಣಿಕವಾಗಿ ಕೈಗೊಳ್ಳಲಾಯಿತು. ಆದ್ದರಿಂದ ವೇದ ಮಾತೆಯ ಅವತಾರದ ಸುದ್ದಿಯು ಇಲ್ಲಿನ ಜನರ ಪಾಲಿಗೆ ದೊರಕಿತು. ಅಂದರೆ, ವೇದ ಮಾತೆಯು ಇತರ ದೇಶಗಳನ್ನು ಅನುಗ್ರಹಿಸಲಿಲ್ಲವೆಂದಾಗಲಿ, ಅಲ್ಲಿ ಆ ಸತ್ಯಗಳು ಕಾಣಿಸುವುದಿಲ್ಲವೆಂದಾಗಲಿ ಅರ್ಥವಲ್ಲ. ಅದು ಎಲ್ಲಾ ಕಡೆಯೂ ಇರುವ ಗುರುತ್ವ ಶಕ್ತಿಯ ಹಾಗೆ ವ್ಯಾಪಕವಾಗಿದೆ. ವೇದವು ಸರ್ವವ್ಯಾಪಿ. ಭಾರತದ ಋಷಿಗಳು ತ್ಯಾಗ ವೈರಾಗ್ಯಗಳಿಂದ ಹಾಗೂ ಗಮನವನ್ನು ಕೇಂದ್ರೀಕರಿಸುವ ಶಕ್ತಿಯಿಂದ ಅದನ್ನು ಆಚರಿಸುವುದರ ಮೂಲಕ ಬರುವ ಶಾಂತಿಯನ್ನು ಸವಿಯುವ ಸಾಮರ್ಥ್ಯ ದಿಂದ ವೈದಿಕ ಸಂದೇಶವನ್ನು ಸ್ವೀಕರಿಸಲು ಶಕ್ತರಾದರು. ಅವರು ಎಷ್ಟುಮಟ್ಟಿಗೆ ಸ್ವಾರ್ಥರಹಿತರೂ ಕರುಣಾಪೂರ್ಣರೂ ಪ್ರೇಮಯುತರೂ ಆಗಿದ್ದರೆಂದರೆ, ತಾವು ಆಲಿಸಿದ್ದನ್ನು ತಾವು ಸವಿದುದನ್ನು ತಮ್ಮ ಸನಿಹಕ್ಕೆ ಬಂದವರೊಂದಿಗೆ ಹಂಚಿ ಕೊಂಡರು. ಆದ್ದರಿಂದಲೇ ಅವರನ್ನು ಮಂತ್ರದ್ರಷ್ಟರೆಂದು ಕರೆಯಲಾಯಿತು. ಅವರ ಶಿಷ್ಯರ ಸುದೀರ್ಘ ಪಂಕ್ತಿಯ ಮೂಲಕ ಆ ಸಂದೇಶವು ಯುಗಯುಗಾಂತರಗಳಲ್ಲಿ ಹೊಳೆಯಂತೆ ಹರಿದುಬಂದು ನಾಡಿನಾದ್ಯಂತ ಹರಡಿಕೊಂಡಿತು. ಮುನಿಗಳು ದ್ರಷ್ಟರಾಗಿ ವೇದವನ್ನು ದರ್ಶಿಸಿದರು. ಈ ದೇಶದ ಜನರಾದ ಭಾರತೀಯರಿಗೆ ಈ ಋಣದ ಬಗೆಗೆ ಅರಿವಿದೆ.

ಭಾರತದ ಧಾರ್ಮಿಕ ಸಾಹಿತ್ಯ—ವೇದವೇದಾಂಗಗಳು, ಉಪನಿಷತ್ತುಗಳು, ಸ್ಮೃತಿ ಗಳು, ಪುರಾಣ ಮತ್ತು ಇತಿಹಾಸಗಳು—ಇವೆಲ್ಲವೂ ಅಪಾರ ಜ್ಞಾನದ ಭಂಡಾರ ಗಳು. ಅವು ಒಂದೊಂದೂ ಸಿಹಿಯಾದ ಹಾಲಿನ ಸಮುದ್ರವಿದ್ದ ಹಾಗೆ. ಪ್ರತಿ

ಯೊಂದೂ ಪವಿತ್ರ, ಶುಭಕರ. ಎಷ್ಟು ಪಂಪುಗಳನ್ನು ತಂದು ನೀರನ್ನು ಎತ್ತಿ ಹಾಕಿದರೂ ಸಾಗರದ ನೀರು ಕಡಮೆಯಾಗುವುದಿಲ್ಲ. ಬಿಸಿಯಾದ ಸೂರ್ಯ ಕಿರಣಗಳಿಂದ ಬೃಹತ್ ಪ್ರಮಾಣದಲ್ಲಿ ನೀರು ಆವಿಯಾಗುತ್ತದೆ, ಮೋಡಗಳಾಗಿ ಹರಳುಗಟ್ಟುತ್ತದೆ, ಮತ್ತೆ ಮಳೆಯಾಗಿ ಭೂಮಿಯ ಮೇಲೆ ಸುರಿಯುತ್ತದೆ. ಧಾನ್ಯ ಗಳು ಬೆಳೆಯಲು, ನಾಡು ಸಸ್ಯ ಸಮೃದ್ಧಿಯಿಂದ ಹಸುರಾಗಿರಲು ಇದು ಸಹಾಯ ಮಾಡುತ್ತದೆ. ಹೀಗೆ ಅಗಾಧ ಪ್ರಮಾಣದಲ್ಲಿ ನೀರನ್ನು ಸೆಳೆದುಕೊಂಡರೂ ಸಮು ದ್ರದ ಮಟ್ಟವು ಒಂದು ಅಂಗುಲದಷ್ಟಾದರೂ ಕಡಮೆಯಾಗುವುದಿಲ್ಲ ಜೊತೆಗೆ ಪ್ರತಿಕ್ಷಣವೂ ಸಹಸ್ರಾರು ನದಿಗಳು ಅಗಾಧ ಪ್ರಮಾಣದ ನೀರನ್ನು ತಂದು ಸುರಿ ಯುತ್ತಿದ್ದರೂ ಆ ಮಟ್ಟವು ತುಸುವಾದರೂ ಹೆಚ್ಚಿದಂತೆ ತೋರುವುದಿಲ್ಲ. ಹಾಗೆಯೇ ಧರ್ಮಗ್ರಂಥಗಳಿಂದ ಪಡೆದ ಜ್ಞಾನಕ್ಕೆ ಪೂರಕವಾಗಿ ಅವುಗಳನ್ನು ಆಚರಿಸಿ ಅವುಗಳ ಮೌಲ್ಯವನ್ನು ಅರಿತವರು ಸ್ತುತಿಯಿಂದಾಗಲಿ, ನಿಂದೆಯಿಂದಾಗಲಿ ವಿಚಲಿತರಾಗು ವುದಿಲ್ಲ. ಅವರ ಹೃದಯಗಳು ಶುದ್ಧವಾಗಿ, ಅಬಾಧಿತವಾಗಿ, ಶಾಂತವಾಗಿ ಉಳಿಯುತ್ತವೆ. ಭಾರತದ ಶಾಸ್ತ್ರಗ್ರಂಥಗಳು ಅಂತಹ ಪೂರಕ ಪಾಠಗಳ ಭಂಡಾರ ಗಳಾಗಿವೆ.

ಹೇಗೇ ಇರಲಿ, ವ್ಯಕ್ತಿಯು ತನ್ನ ಸಹನೆ ಮತ್ತು ಬುದ್ಧಿಕೌಶಲಗಳಿಗೆ ತಕ್ಕ ಪ್ರಮಾಣದಲ್ಲಿ ಆ ಪಾಠಗಳನ್ನು ಪಡೆದುಕೊಳ್ಳಬಹುದು. ಪಠ್ಯಗಳನ್ನು ಕರಗತ ಮಾಡಿಕೊಂಡು, ಕಲಿತ ಪಾಠಗಳನ್ನು ವಾಸ್ತವ ಆಚರಣೆಯಲ್ಲಿ ತೋರಿಸುವುದರಿಂದ ವ್ಯಕ್ತಿಯು ಆ ಬೆಳಕನ್ನೂ ಆನಂದವನ್ನೂ ಇತರರೊಂದಿಗೆ ಹಂಚಿಕೊಳ್ಳಬಹುದು. ಭಾರತದ ಗ್ರಂಥಗಳು ವಾಸ್ತವ ಆಚರಣೆಯ ಮೌಲ್ಯವನ್ನು ಒತ್ತಿಹೇಳುತ್ತವೆ. ಆ ಸತ್ಯಗಳ ಪ್ರಭಾವವನ್ನು ಅನುಭವಿಸಿ ಸ್ಥಿರಪಡಿಸುವ ಅಗತ್ಯವನ್ನು ಒತ್ತಿ ಹೇಳುತ್ತವೆ.

ಭಾರತದ ಪವಿತ್ರ ಗ್ರಂಥಗಳನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಲು, ಅವುಗಳ ಸಂದೇಶ ವನ್ನು ಅರಗಿಸಿಕೊಳ್ಳಲು ಬಯಸುವವನು ಮೊದಲು ಸಂಸ್ಕೃತ ಭಾಷೆಯನ್ನು ಕಲಿಯಬೇಕು; ಆ ಹೊಣೆಗಾರಿಕೆಯನ್ನೂ ಕರ್ತವ್ಯವನ್ನೂ ಅವನು ಅಲಕ್ಷಿಸು ವಂತಿಲ್ಲ. ಸಂಸ್ಕೃತ ಎಂಬ ಮಾತನ್ನು ಕೇಳಿದೊಡನೆ ನಮ್ಮಲ್ಲಿ ಅನೇಕರಿಗೆ ಪೂರ್ವ ಗ್ರಹ ಪೀಡಿದ ಭಾವನೆಗಳೇಳುತ್ತವೆ. "ಅದು ಸಾಯುತ್ತಿರುವ ಸಂಸ್ಕೃತಿಯೊಂದರ ಸತ್ತ ಭಾಷೆ. ಗೊಡ್ಡು ಸಂಪ್ರದಾಯವಾದಿಗಳು ಅದಕ್ಕೆ ಕುರುಡಾಗಿ ಅಂಟಿಕೊಂಡಿ ದ್ದಾರೆ," ಎಂದು ಆಧುನಿಕರು ಹೀಯಾಳಿಸುತ್ತಾರೆ. ಅದು ಕೇವಲ ಅರ್ಥಶೂನ್ಯ ಸೂತ್ರಗಳಲ್ಲಿ ಉಳಿದಿದೆ, ವೇಗವಾಗಿ ಮಾಯವಾಗುತ್ತಿರುವ ಆಚರಣೆಗಳಲ್ಲಿದೆ, ವಿವಾಹ ಕರ್ಮಗಳೇ ಮೊದಲಾದ ವ್ಯರ್ಥ ಪರಿಶ್ರಮಗಳಲ್ಲಿದೆ ಎಂದು ಅವರು ಭಾವಿಸುತ್ತಾರೆ. ಅಲ್ಲದೆ ಅದು ಕಲಿಯಲು ಕಷ್ಟವಾದ ಭಾಷೆ ಎಂದು ಹೇಳಲಾಗುತ್ತದೆ.

ಇಂಥ ನಂಬಿಕೆಗಳು ಆಧುನಿಕ ಹೃದಯಗಳಲ್ಲಿ ಆಳವಾಗಿ ಬೇರುಬಿಟ್ಟಿವೆ. ಮೊದಲು ಜನರ ಮನಸ್ಸುಗಳಿಂದ ಈ ದುರ್ಭಾವನೆಗಳನ್ನು ಹೋಗಲಾಡಿಸಬೇಕು. ಸಂಸ್ಕೃತ ಅಮರ ಭಾಷೆ; ಅದರ ವಾಣಿ ಶಾಶ್ವತವಾದದ್ದು; ಅದರ ಕರೆ ಶತಮಾನಗಳಿಂದ ಮೊಳಗುತ್ತ ಬಂದಿದೆ. ಜಗತ್ತಿನ ಎಲ್ಲಾ ಭಾಷೆಗಳ ಮೂಲ ಪೋಷಣೆಯೂ ಅದರಲ್ಲಿ ಅಡಗಿದೆ. ಸಂಸ್ಕೃತವನ್ನು ಭಾಷೆಗಳ ತಾಯಿ ಎಂದು ಗೌರವಿಸಬೇಕು. ಅದರ ಮಹತ್ವವನ್ನು ಅಲಕ್ಷಿಸಬೇಡಿ, ಅಥವಾ ಅದನ್ನು ಕುರಿತು ಹೀನಾಯವಾಗಿ ಮಾತನಾಡಬೇಡಿ.

ವೇದಗಳು ನೀಡುವ ಅಮೃತದಿಂದ ನಿಮ್ಮ ತೃಷೆಯನ್ನು ತೀರಿಸಿಕೊಳ್ಳ ಬಯಸುವಿರಾದರೆ ನೀವು ಸಂಸ್ಕೃತವನ್ನು ಕಲಿಯಲೇಬೇಕು. ವೇದಗಳನ್ನು ವ್ಯಾಖ್ಯಾನಿಸಿ, ಅವುಗಳ ಅರ್ಥಗಳನ್ನೂ ರಹಸ್ಯಗಳನ್ನೂ ವಿಸ್ತರಿಸಲು ಋಷಿಗಳು ವ್ಯಾಕರಣ, ಕಾವ್ಯ ಮೀಮಾಂಸೆ, ತತ್ತ್ವಶಾಸ್ತ್ರ ಮತ್ತು ಜ್ಯೋತಿಷ್ಯ ಮೊದಲಾದ ಪೂರಕ ವಿಜ್ಞಾನ ಕೃತಿಗಳನ್ನು ಕೊಟ್ಟಿದ್ದಾರೆ. ಅವರ ಸಂಶೋಧನೆಗಳು ಮತ್ತು ಕೃತಿಗಳು ಖಗೋಳ ವಿಜ್ಞಾನ, ನ್ಯಾಯಶಾಸ್ತ್ರ, ನೀತಿಶಾಸ್ತ್ರ, ದರ್ಶನ, ಸಂಗೀತ, ಮನೋವಿಜ್ಞಾನ ಮತ್ತು ಛಂದಸ್ಸು ಹೀಗೆ ಹಲವಾರು ಜ್ಞಾನ ಕ್ಷೇತ್ರಗಳನ್ನು ವ್ಯಾಪಿಸಿವೆ. ನಮ್ಮ ಪ್ರಾಚೀನರು ತೋರಿಸಿಕೊಟ್ಟಿರುವ ಖಗೋಳ ವೈಜ್ಞಾನಿಕ ಅದ್ಭುತಗಳನ್ನೂ ಇತರ ವಿಜ್ಞಾನ ಶಾಖೆಗಳಲ್ಲಿ ತೆರೆದಿರುವ ಸತ್ಯಗಳನ್ನೂ ನೋಡಿ ಪಾಶ್ಚಾತ್ಯ ವಿಜ್ಞಾನಿಗಳು ಬೆರಗಾಗಿದ್ದಾರೆ. ನಮ್ಮ ಋಷಿಗಳು ಕೊಟ್ಟಿರುವ ಸೂಚನೆಗಳಿಂದ ಅವರು ಲಾಭ ಪಡೆದಿದ್ದಾರೆ. ಅವರು ಮಾಡಿದ ಸಂಶೋಧನೆಗಳಿಂದ ಪ್ರಭಾವಿತರಾಗಿ ತಾವು ಸಂಶೋಧನೆಗಳನ್ನು ಮುಂದುವರಿಸಿದ್ದಾರೆ. ಖಗೋಳ ವಿಜ್ಞಾನದಲ್ಲಿ ನಮ್ಮ ಋಷಿಗಳು ಪ್ರಾಚೀನ ಗ್ರೀಕರಿಂದ ಬಹಳ ಮುಂದಿದ್ದರು ಎಂದು ಒಪ್ಪಿಕೊಂಡಿದ್ದಾರೆ. ವೇದಗಳಲ್ಲೂ ಅವರು ನಿರ್ಮಿಸಿದ ಇತರ ಪೂರಕ ಸಾಹಿತ್ಯದಲ್ಲಿಯೂ ನಿಸರ್ಗದ ಹಲವು ರಹಸ್ಯಗಳನ್ನು ಆಗಲೇ ಬಿಡಿಸಿ ಬಿಟ್ಟಿರುವುದನ್ನು ನೋಡಬಹುದು. ಪರಮಾಣು ಸ್ವರೂಪ ಮತ್ತು ಅದರ ಅಗಾಧ ಸಾಧ್ಯತೆಗಳಂತಹ ಕ್ರಾಂತಿಕಾರಕ ಸಂಶೋಧನೆಗಳು ಅಲ್ಲಿವೆ. ಅಥರ್ವಣ ವೇದದ ಅನೇಕ ಭಾಗಗಳು ಅಂತಹ ಅತಿ ಮಹತ್ವದ ವಿಚಾರಗಳ ಗಣಿಗಳಾಗಿರುವುದನ್ನು ಪಾಶ್ಚಾತ್ಯರು ಪರೀಕ್ಷಿಸಿ ಕಂಡುಕೊಂಡರು! ನಾಡೀ ಗ್ರಂಥಗಳನ್ನೂ ಜಾತಕಗಳನ್ನೂ ಒಳಗೊಂಡ ಟನ್‌ಗಟ್ಟಲೆ ತಾಳೆ ಗ್ರಂಥಗಳನ್ನು ಓದಿ ಸಂಶೋಧನೆ ಮಾಡಲು ಜರ್ಮನರು ವಿಶೇಷ ಸಂಸ್ಥೆಗಳನ್ನೇ ಸ್ಥಾಪಿಸಿದರು. ಖಗೋಳ ವಿಜ್ಞಾನ, ವೈದ್ಯ, ರಸಾಯನ ವಿಜ್ಞಾನ, ವಿಷ ವೈದ್ಯ, ಗಣಿತವಿಜ್ಞಾನ ಇತ್ಯಾದಿ. ಈ ಸಂಶೋಧನ ಕಾರ್ಯವನ್ನು ಯಶಸ್ವಿಯಾಗಿ ನಡೆಸಲು ಅನುವಾಗುವಂತೆ ಅವರು ಸಂಸ್ಕೃತವನ್ನು ಕಲಿಯುತ್ತಿದ್ದಾರೆ. ಅಮೆರಿಕಾ,

ರಷ್ಯಾ, ಕೊನೆಗೆ ಆಫ್ಘಾನಿಸ್ಥಾನದಲ್ಲೂ ಕೂಡ ವಿಶ್ವವಿದ್ಯಾನಿಲಯಗಳು ಸಂಸ್ಕೃತವನ್ನು ಕಲಿಕೆಯ ವಿಷಯವಾಗಿ ಪ್ರವೇಶಗೊಳಿಸಲು ಆಸಕ್ತವಾಗಿರುವುದು ಮಾತ್ರವಲ್ಲ, ವಿದ್ವಾಂಸರು ಹಾಗೆ ಒತ್ತಾಯಿಸುತ್ತಾರೆ ಕೂಡ! ಭಾರತದ ಈ ಗ್ರಂಥಗಳನ್ನು ಅದೃಷ್ಟದ ಸಂಶೋಧನೆಯ ರತ್ನಗಳೆಂದು ಗೌರವಿಸುತ್ತಾರೆ.

ಹಿಂದೆ ಭಾರತೀಯರು ಯೋಗಕ್ಕೆ ಹೆಚ್ಚಿನ ಮಹತ್ವ ನೀಡಿದ್ದರು. ಈಗಲೂ ಜಗತ್ತಿನ ಹಲವು ರಾಷ್ಟ್ರಗಳಲ್ಲಿ ಅಧ್ಯಯನ ಅಭ್ಯಾಸ ಮಾಡಲಾಗುತ್ತಿದೆ. ಯೋಗಾಸನಗಳನ್ನು ಕಲಿಸಿಕೊಡುವ ಸಂಸ್ಥೆಗಳು ಅಮೆರಿಕಾದಲ್ಲೂ ರಷ್ಯಾದಲ್ಲೂ ಬೇಕಾದಷ್ಟಿವೆ. ಭಾರತ ದಲ್ಲಾದರೆ ಯೋಗದ ಅಭ್ಯಾಸ ಎಂಬ ಮಾತನ್ನು ಉಲ್ಲೇಖಿಸಿದೊಡನೆ ಜನರು ಅದೊಂದು ವೇದಾಂತ ದರ್ಶನದ ಶಾಖೆಯೆಂದು ಭಾವಿಸುತ್ತಾರೆ. ಯೋಗ ಎಂದೊಡನೆ ಎಲ್ಲೋ ದಟ್ಟವಾದ ಅರಣ್ಯದ ನಡುವೆ ಕಾವಿ ಉಡುಗೆಯನ್ನುಟ್ಟು, ಹಣ್ಣು ಗೆಡ್ಡೆಗೆಣಸುಗಳ ಮೇಲೆ ಜೀವಿಸುತ್ತಾ ಇರುವ ಸನ್ಯಾಸಿಗಳ ಚಿತ್ರವನ್ನು ಮನಸ್ಸಿಗೆ ತಂದುಕೊಳ್ಳುತ್ತಾರೆ. ಅವರ ಅಭಿಪ್ರಾಯದಲ್ಲಿ ಯೋಗಸಾಧನೆಯೆನ್ನುವುದು ಅಂಥ ವಸತಿಹೀನ ಸಾಧುಗಳು ಆಚರಿಸುವ ಪ್ರಾಚೀನವಾದ ಸಾಧನೆ. ಇದು ತಪ್ಪು ಕಲ್ಪನೆ, ಸತ್ಯವಲ್ಲ. ಪಾಶ್ಚಾತ್ಯ ದೇಶಗಳಲ್ಲಿ ಇಂದು ಭೌತವಿಜ್ಞಾನಿಗಳೂ ಇತರರೂ ಯೋಗ ವಿಜ್ಞಾನವನ್ನು ಕುರಿತು ಸಂಶೋಧನೆ ಮಾಡುತ್ತಿದ್ದಾರೆ.

ತಂತ್ರಜ್ಞಾನದ ಈ ಯುಗದಲ್ಲಿ ಶಾಂತಿಯುತ ಜೀವನ ನಡೆಸುವುದು ಬಹಳ ಕಷ್ಟ. ಜನರು ಹಲವು ಬಗೆಯ ಮಾನಸಿಕ ರೋಗಗಳಿಗೆ ಬಲಿಯಾಗುತ್ತಿದ್ದಾರೆ. ನಾಗರೀಕತೆಯ ಅಗ್ರ ಪಂಕ್ತಿಯ ರಾಷ್ಟ್ರಗಳಾದ ಅಮೆರಿಕ, ಇಂಗ್ಲೆಂಡ್‌ಗಳಲ್ಲಿ ಜನರು ರಾತ್ರಿ ವೇಳೆ ಸಹಜ ನಿದ್ರೆಯ ಸವಿಯನ್ನು ಕಳೆದುಕೊಂಡುಬಿಟ್ಟಿದ್ದಾರೆ. ಗುಳಿಗೆಗಳನ್ನು ನುಂಗಿ ಕೃತಕವಾಗಿ ನಿದ್ರೆಯನ್ನು ಬರಿಸಿಕೊಳ್ಳಬೇಕಾಗಿದೆ. ಇವುಗಳ ಮತ್ತು ಇತರ ರೋಗಗಳ ನಿವಾರಣೆಗಾಗಿ ನುಂಗುವ ಔಷಧಿಗಳ ಪರಿಣಾಮವಾಗಿ ಹೆಚ್ಚು ಹೆಚ್ಚಾಗಿ ಅವರು ಹೃದಯ ಸಂಬಂಧವಾದ ರೋಗಗಳು, ರಕ್ತದ ಒತ್ತಡ ಮೊದಲಾದವು ಗಳಿಂದ ಬಳಲುತ್ತಾರೆ. ಕೊನೆಗೆ ತಮ್ಮನ್ನು ತಾವು ಅನಾರೋಗ್ಯದ ಮೂಟೆಗಳಾಗಿ ಮಾಡಿಕೊಂಡುಬಿಡುತ್ತಾರೆ. ಅವರ ಜೀವನ ತುಂಬಾ ಕೃತಕ. ಜನರು ಭೀತಿ ಮತ್ತು ತಲ್ಲಣಗಳಿಂದ ಪೀಡಿತರಾಗಿದ್ದಾರೆ. ಒಂದು ಕಡೆ ಮಾನಸಿಕವಾಗಿಯೂ ಇನ್ನೊಂದು ಕಡೆ ದೈಹಿಕವಾಗಿಯೂ ಅವರಿಗೆ ವಿಶ್ರಾಂತಿಯಿಲ್ಲವಾಗಿದೆ. ಔಷಧಿಗಳು, ಮಾತ್ರೆಗಳು, ಕ್ಯಾಪ್ಸೂಲುಗಳು, ಗುಳಿಗೆಗಳನ್ನು ಮಿಲಿಯಗಟ್ಟಲೆ ಉತ್ಪಾದಿಸಲಾಗುತ್ತಿದೆ, ಆದರೂ ಸಾಮಾನ್ಯ ಆರೋಗ್ಯ ಮಾತ್ರ ಸುಧಾರಿಸಿಲ್ಲ. ಜೊತೆಗೆ ಹೊಸ ಬಗೆಯ ರೋಗಗಳು ಕಾಣಿಸಕೊಂಡು ವೇಗವಾಗಿ ಹರಡುತ್ತಿವೆ. ಕೆಲವು ಜನ ಪಾಶ್ಚಾತ್ಯರು ಮಾತ್ರ ಈ ಸ್ಥಿತಿಯಲ್ಲಿ ಯೋಗವೊಂದೇ ತಮಗೆ ಸೂಕ್ತ ಆಶ್ರಯ ಎಂದು ಅರ್ಥಮಾಡಿ

ಕೊಂಡಿದ್ದಾರೆ. ಪ್ರಯೋಗಗಳ ಮೂಲಕ ತಮ್ಮ ನಿರ್ಣಯವನ್ನು ಅವರು ಸ್ಥಿರಪಡಿಸಿದ್ದಾರೆ. ಹೆಚ್ಚು ಹೆಚ್ಚು ಶ್ರದ್ಧೆಯಿಂದ ಯೋಗವನ್ನು ಅಭ್ಯಸಿಸುತ್ತಿದ್ದಾರೆ.

ವೇದಗಳು ಅತ್ಯಂತ ಪ್ರಾಚೀನವಾದ ಸಾಹಿತ್ಯಕ ಸೃಷ್ಟಿ. ಈಗಲಾದರೆ ಕಾಲವನ್ನು ಕಳೆಯಲು ಮನಸ್ಸಿಗೆ ಬಂದದ್ದನು ಗೀಚುವ ಬರವಣಿಗೆಯನ್ನು ಸಾಹಿತ್ಯ ಎಂದು ಬಿಡುತ್ತಾರೆ. ಅವುಗಳಲ್ಲಿ ಆಂತರಿಕ ಮೌಲ್ಯವಾಗಲಿ ಮಹತ್ವವಾಗಲಿ ಇರುವುದಿಲ್ಲ. ಓದುಗನಲ್ಲಿರುವ ಸಚ್ಚಾರಿತ್ರದ ಲಕ್ಷಣಗಳನ್ನು ಹಾಳು ಮಾಡಿ, ಕೆಟ್ಟ ಅಭ್ಯಾಸಗಳನ್ನು ಭಾವನೆಗಳನ್ನು ಬೆಳೆಸುತ್ತವೆ. ಅವು ಸತ್ಯಕ್ಕೆ ಬದ್ಧವಾಗಿರುವುದಿಲ್ಲ. ಸಾಹಿತ್ಯ ಎಂಬ ಪದ ಮಿಥ್ಯಾ ಕಲ್ಪನೆಯ ಕತೆಗಳನ್ನೋ ಕವಿತೆಗಳನ್ನೋ ಸೂಚಿಸುವಂತೆ ಪ್ರಯೋಗಿಸಬಾರದು. ಅದು ವ್ಯಕ್ತಿಯ ಅಹಂಕಾರಯುತ ಕಲ್ಪನೆಗಳಿಂದ ಮೂಡಬಾರದು.

ವೇದಗಳು ಭಾರತದ ಆಧ್ಯಾತ್ಮಿಕ ಜೀವನವನ್ನು ಪೋಷಿಸುವ ಜೀವರಸ; ಜನರು ಜೀವಂತವಾಗಿರುವಂತೆ ಮಾಡಿರುವ ಉಸಿರು. ಅದ್ಭುತ ಪರಿಣಾಮಗಳಿಂದ ಕೂಡಿದ ದಿವ್ಯಶಕ್ತಿ ಅವುಗಳಲ್ಲಿದೆ. ಅವುಗಳಲ್ಲಿ ಮಂತ್ರಗಳ ಪವಿತ್ರ ಕಂಪನಗಳು ತುಂಬಿವೆ. ವೈಜ್ಞಾನಿಕವಾದ ವಿಧಾನದಿಂದ ಅವುಗಳನ್ನು ಅಭ್ಯಾಸಮಾಡುವವರಿಗೆ ಅದು ಅನುಭವಕ್ಕೆ ಬರುತ್ತದೆ. ತಾಂತ್ರಿಕ ಸಂಕೇತಗಳು ಮತ್ತು ಬೀಜಾಕ್ಷರಗಳಿಂದ ಬರುವ ಶಕ್ತಿಯನ್ನು ಅವು ನೀಡುತ್ತವೆ. ತಂತ್ರ ಎಂದರೆ ಮಂತ್ರಗಳನ್ನು ತನ್ನ ಒಳಿತಿಗಾಗಿ ಉಪಯೋಗಿಸುವ ವಿಧಾನ. ಮನುಷ್ಯನಿಗೆ ದೈಹಿಕ ಮತ್ತು ಲೌಕಿಕ ಶಕ್ತಿ ಮಾತ್ರ ಇವೆ. ಅವನ ಜೀವನಯಂತ್ರವನ್ನು ಮಂತ್ರವೂ ತಂತ್ರವೂ ಆಳಿದಾಗ ಅವನ ಕರ್ಮವು ಪವಿತ್ರವೂ ಮಂಗಳಕರವೂ ಆಗುತ್ತದೆ. ಈ ಸಾಧನೆಯ ತಂತ್ರವು ವೇದಗಳ ಕರ್ಮಕಾಂಡದಲ್ಲಿದೆ. ಪ್ರಾಚೀನ ಋಷಿಗಳು ಇದನ್ನು ತಿಳಿದುಕೊಂಡಿದ್ದರು, ನಾಲ್ಕು ವೇದಗಳಲ್ಲಿ ಅದನ್ನು ಮಾನವ ಕುಲಕ್ಕಾಗಿ ಕಾಪಾಡಿಟ್ಟರು.

ಈ ಸತ್ಯಗಳನ್ನು ಗ್ರಹಿಸಲು ಅಸಮರ್ಥರಾಗಿ ಆಧುನಿಕರೆಂದು ಬಡಾಯಿ ಕೊಚ್ಚಿಕೊಳ್ಳುವವರು ವೇದಗಳಲ್ಲಿ ಶ್ಲೋಕಗಳು ಮಂತ್ರಗಳು ಇವೆಯೆಂದೂ ಮುದಿಗೊಡ್ಡುಗಳು ಅವುಗಳನ್ನು ಕಂಠಪಾಠಮಾಡಿ ಹೇಳುತ್ತಿದ್ದಾರೆಂದೂ ಸಾರುತ್ತಾರೆ. ಈ ಆಧುನಿಕರಿರಲಿ, ಪಂಡಿತರಲ್ಲಿ ಅಗ್ರಗಣ್ಯರೆನಿಸಿಕೊಂಡವರೂ ನೆರೆದ ಜನರೆದುರಿಗೆ ಪ್ರವಚನ ಮಾಡಿ ಕೀರ್ತಿಯನ್ನು ಬಾಚಿಕೊಳ್ಳುವವರೂ ಕೂಡ ವೇದಗಳನ್ನು ತಮ್ಮ ಲೌಕಿಕ ಸುಖಜೀವನಕ್ಕಾಗಿ ಬಳಸುತ್ತಾರೆಯೇ ಹೊರತು ಜನರಿಗೆ ಆಧ್ಯಾತ್ಮಿಕ ಪಥದಲ್ಲಿ ಸಹಾಯ ಮಾಡುವುದಕ್ಕಾಗಲಿ ಅಲ್ಲ. ವೇದಗಳು ಯಾವ ಪವಿತ್ರ ಉದ್ದೇಶಕ್ಕಾಗಿ ಇವೆಯೋ ಅದನ್ನು ಕಂಡುಹಿಡಿಯಲು ಅವರು ಅಸಮರ್ಥರಾಗಿದ್ದಾರೆ.

ಅವಕಾಶ ಬಂದಾಗ ಅವರು ಪಾಂಡಿತ್ಯದಿಂದ ಪ್ರಯೋಜನ ಪಡೆದುಕೊಳ್ಳುತ್ತಾರೆ, ಆದರೆ ತಮ್ಮ ದೈನಂದಿನ ಬದುಕನ್ನು ಶುದ್ಧೀಕರಿಸಲು ವೇದಗಳನ್ನು ಅವರು ಬಳಸಿಕೊಳ್ಳಲಾರರು, ಆ ಆಸಕ್ತಿಯೂ ಅವರಿಗಿಲ್ಲ.

ಇದರ ಫಲವಾಗಿ, ಆಧುನಿಕರಿಗೆ ವೇದಗಳಲ್ಲಿ ನಂಬಿಕೆ ಬೆಳೆಯುವುದೇ ಸಾಧ್ಯವಿಲ್ಲ ವಾಗಿದೆ. ಪಂಡಿತರು ತಾವು ಕಲಿತ ವೇದಗಳನ್ನು ಆಚರಣೆಯಲ್ಲಿ ತರಲು ಅಸ ಮರ್ಥರಾಗಿರುವುದರಿಂದ, ವೇದಗಳ ಮಹತ್ವವನ್ನು ತಮ್ಮ ಮಕ್ಕಳಿಗೇ ಅವರು ಕಲಿಸಿಕೊಡಲು ಅಸಮರ್ಥರಾಗಿ ತಮಗೆ ನಂಬಿಕೆಯ ಕೊರತೆಯಿರುವುದನ್ನು ತೋರಿಸಿದ್ದಾರೆ; ಸಹಜವಾಗಿಯೇ ಅವರಿಗೆ ಸಮಾಜದಲ್ಲಿ ನಂಬಿಕೆಯಿಲ್ಲ.

ಇತರ ಕೆಲವರು ವೇದ ಮಂತ್ರಗಳ ಅರ್ಥ ತಿಳಿಯದಿದ್ದರೂ ಯಾಂತ್ರಿಕ ಸಾಂಪ್ರ ದಾಯಿಕತೆಯಿಂದ ಅವುಗಳನ್ನು ಪಠಿಸುತ್ತಾ ತಿರುಗುತ್ತಾರೆ. ವಿದೇಶೀಯರು, ವಿಶೇಷ ವಾಗಿ ಜರ್ಮನ್ ವಿದ್ವಾಂಸರು, ವೇದಗಳನ್ನು ಕಂಠಪಾಠ ಮಾಡಿಲ್ಲವಾದರೂ ಮಂತ್ರಗಳು ಅಗಾಧ ಶಕ್ತಿಯನ್ನು ಬೀರಬಲ್ಲವು ಎಂಬುದನ್ನು ಮನವರಿಕೆ ಮಾಡಿ ಕೊಂಡಿದ್ದಾರೆ. ಶತಮಾನದಲ್ಲಿ ಅವರು ವೇದಗಳ ಭಾಗಗಳನ್ನು ಕೊಂಡೊಯ್ದಿ ದ್ದಾರೆ, ಅಲ್ಲಿ ಬಹು ಶ್ರಮದಿಂದ, ಸಹನೆಯಿಂದ ಅವುಗಳನ್ನು ಕುರಿತು ಸಂಶೋಧನೆ ಮಾಡಿದ್ದಾರೆ. ಅದರ ಫಲವಾಗಿ ವಿಚಿತ್ರ ರಹಸ್ಯಗಳನ್ನು ಬಯಲಿಗೆಳೆದಿದ್ದಾರೆ. ಮಾನವನ ಪ್ರಗತಿಗೆ ಸಾಧಕವಾದ ಎಲ್ಲಾ ಕಲೆಗಳ ರಹಸ್ಯಗಳೂ ವೇದಗಳಲ್ಲಿ ಇವೆ ಎಂದು ಅವರು ಕಂಡುಕೊಂಡಿದ್ದಾರೆ.

ವೇದಗಳಿಗೆ ಅಂಗವಾಗಿ ಅನೇಕ ಶಾಸ್ತ್ರಗ್ರಂಥಗಳು ಹುಟ್ಟಿದವು. ಧನುರ್ವೇದ, ಆಯುರ್ವೇದ, ಜ್ಯೋತಿರ್ವೇದ (ಗ್ರಹ ನಕ್ಷತ್ರಗಳನ್ನು ಕುರಿತುದು) ಇತ್ಯಾದಿಗಳನ್ನು ರಚಿಸಿ ಪ್ರಚುರ ಪಡಿಸಲಾಯಿತು.

ವಿಶ್ವಾಮಿತ್ರ ಋಷಿಯು ಗಾಯತ್ರಿ ಎಂಬ ಹೆಸರಿನ ಮಂತ್ರವನ್ನು ಆವಿಷ್ಕರಿಸಿದನು. ಅದು ಸೂರ್ಯನ ಶಕ್ತಿಯನ್ನು ಸಂಬೋಧಿಸಿದ ಮಂತ್ರ. ಈ ಮಂತ್ರಕ್ಕೆ ಅಪಾರ ಸಾಮರ್ಥ್ಯವಿದೆ. ಆಶ್ಚರ್ಯಕರವಾದ ಕಂಪನಗಳುಳ್ಳ ಮಂತ್ರವಿದು. ಏಕೆಂದರೆ ಸೂರ್ಯನೇ ಅದರ ಅಧಿದೇವತೆ. ರಾಮಾಯಣವನ್ನು ಓದುವವರಿಗೆ ತಿಳಿಯು ತ್ತದೆ, ಇದೇ ವಿಶ್ವಾಮಿತ್ರ ಋಷಿಯು ರಾಮನಿಗೆ ಸೂರ್ಯಾರಾಧನೆಯ ರಹಸ್ಯವನ್ನು ಆದಿತ್ಯಹೃದಯ ಮಂತ್ರದ ಮೂಲಕ ಉಪದೇಶಿಸಿದರು. ಗಾಯತ್ರಿಯಿಂದಾಗಿ ವಿಶ್ವಾಮಿತ್ರರು ಹಲವು ಅಪರೂಪದ ಆಯುಧಗಳನ್ನು ಪ್ರಯೋಗಿಸಲು ಸಾಧ್ಯವಾ ಗಿತ್ತು. ಅವರ ಇಚ್ಛೆಗೆ ಅವು ಮಣಿಯುತ್ತಿದ್ದುವು. ಈ ರೀತಿಯಾಗಿ ಗಳಿಸಿದ ಶಕ್ತಿಗಳ

ಮೂಲಕ ವಿಶ್ವಾಮಿತ್ರರು ಒಬ್ಬ ದೊಡ್ಡ ವಿಜ್ಞಾನಿಯಾಗಿ ಇನ್ನೊಂದು ಬ್ರಹ್ಮಾಂಡವನ್ನೇ ಸೃಷ್ಟಿಸಲು ಸಾಧ್ಯವಾಯಿತು. ತನ್ನ ಕೈಗಳು ಮತ್ತು ಇಂದ್ರಿಯಗಳ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವವನನ್ನು ಈಗ ವಿಜ್ಞಾನಿ ಎಂದು ಭಾವಿಸಲಾಗುತ್ತದೆ. ಆದರೆ ಹಿಂದೆ ಯಾರು ಆಧ್ಯಾತ್ಮಿಕ ಶಕ್ತಿಯನ್ನು ಬೆಳೆಸಿಕೊಂಡು ಅಂತರಂಗದ ದೈವಶಕ್ತಿಯಲ್ಲಿ ರತನಾಗುವ ಸೂತ್ರವನ್ನು ಕಂಡುಹಿಡಿಯುವನೋ ಅವನನ್ನು ವಿಜ್ಞಾನಿ ಎಂದು ಯಥಾರ್ಥವಾಗಿ ಕರೆಯುತ್ತಿದ್ದರು. ಇದಕ್ಕೆ ಬದಲಾಗಿ ಇಂದಿನ ವಿಜ್ಞಾನಿಗಳು ಇಲ್ಲೊಂದು ಚೂರು ಅಲ್ಲೊಂದು ಚೂರು ವಿಷಯ ತಿಳಿದುಕೊಂಡಿರುತ್ತಾರೆ. ಅವರಿಗೆ ಆಡಂಬರ ಬೇಕು, ಅದ್ದೂರಿಯ ಪ್ರದರ್ಶನ ಬೇಕು. ಹೊಗಳಿಕೆಯ ಹೊಗೆಯನ್ನೇರಿ ಮುಗಿಲೆತ್ತರಕ್ಕೆ ಏರುತ್ತಾರೆ. ವಿಜ್ಞಾನಿಯ ನಿಜವಾದ ನಡವಳಿಕೆಗೆ ಇದು ತೀರಾ ವಿರುದ್ಧವಾದದ್ದು. ಏಕೆಂದರೆ ಅವನು ವಿನೀತನಾಗಿರುತ್ತಾನೆ, ಮೃದು ವಾಗಿರುತ್ತಾನೆ. ತನಗೆ ಎಷ್ಟೇ ತಿಳಿದಿದ್ದರೂ ಇನ್ನೂ ತಿಳಿದುಕೊಳ್ಳಬೇಕಾದ ಅಗಾಧ ಕ್ಷೇತ್ರವಿದೆ ಎಂದು ಅವನು ಬಲ್ಲನು. ತನಗೆ ತಿಳಿದಿರುವ ಅಲ್ಪಸ್ವಲ್ಪಕ್ಕೂ ಭಗವಂತನ ಅನುಗ್ರಹವೇ ಕಾರಣ ಎಂದು ಅವನು ತಿಳಿದುಕೊಳ್ಳುತ್ತಾನೆ.

ವಿಶ್ವಾಮಿತ್ರನು ಈ ಸತ್ಯವನ್ನರಿತಿದ್ದ ವಿಜ್ಞಾನಿ. ಆದ್ದರಿಂದ ಅವನಿಗಿಂತ ದೊಡ್ಡ ವಿಜ್ಞಾನಿ ಇನ್ನೂ ಬರಬೇಕಾಗಿದೆ. ಆದರೆ ಅಂತಹ ಅಗಾಧ ಸಾಮರ್ಥ್ಯವೂ ವಿಶಾಲ ಹೃದಯವೂ ಇದ್ದ ಮುನಿಯೊಬ್ಬನು ಭಾರತದಲ್ಲಿ ಜೀವಿಸಿದ್ದನು, ಈ ದೇಶದ ಜನ ಅವನನ್ನು ನೆನೆಯುವುದಿಲ್ಲ. ಆತನ ಮಹಿಮೆಯ ತುಣುಕನ್ನು ಅರಿತಿರುವ ವಿದೇಶೀಯರನ್ನು ಬೇಕಾದರೆ ಗೌರವಿಸುತ್ತಾರೆ. ವೇದಗಳಿಂದ ಅಮೂಲ್ಯವಾದ ಪಾಠಗಳನ್ನು ಕಲಿತ ವಿದೇಶೀ ವಿದ್ವಾಂಸರ ಮತ್ತು ಸಂಶೋಧಕರ ಮಾತುಗಳಲ್ಲಿ ನಂಬಿಕೆಯಿಡುತ್ತಾರೆ. ವೇದವು ಭಾರತದ ತಾಯಿ. ಆದರೆ ಮಕ್ಕಳು ತಾಯಿಯನ್ನು ಎಷ್ಟು ಮಾತ್ರಕ್ಕೂ ಗೌರವಿಸುತ್ತಿಲ್ಲ. ಮಲತಾಯಿಯನ್ನು ಗೌರವಿಸಿ, ಆಕೆಯನ್ನು ನಂಬುತ್ತಾರೆ! ಇದು ಆಂಗ್ಲ ವಿದ್ಯಾಭ್ಯಾಸ ಕ್ರಮದ ಫಲವಾಗಿದೆ.

ಪ್ರಾಚೀನ ಭಾರತದ ಋಷಿಗಳು ಸಾಧಿಸಿದ ವೈಜ್ಞಾನಿಕ ಮಹತ್ಸಾಧನೆಗಳು ಅನೇಕ. ಭರದ್ವಾಜ ಮುನಿಯು ವಿಮಾನಗಳನ್ನು ರಚಿಸಿ ಆಕಾಶದಲ್ಲಿ ಅವು ಹಾರುವಂತೆ ಮಾಡುವ ಬಗೆಯನ್ನು ವರ್ಣಿಸಿದ್ದಾನೆ. ಮನೋವಿಜ್ಞಾನವು ಎಷ್ಟು ಬೆಳೆದಿತ್ತು ಎಂದರೆ, ಏನು ನಡೆಯಿತೋ ಅದನ್ನು ಹಾಗೆಯೇ ಪುನರುಕ್ತಿಸಲು, ಮುಂದಾಗುವು ದನ್ನು ಈಗ ಕರಾರುವಾಕ್ಕಾಗಿ ಹೇಳಲು ಅವರು ಸಮರ್ಥರಾಗಿದ್ದರು. ವೈದ್ಯ ವಿಜ್ಞಾನವು ಭಾರತದಲ್ಲಿ ತುಂಬಾ ಬೆಳೆದಿತ್ತು. ಮಾನವ ಜನಾಂಗದ ಕಲ್ಯಾಣಕ್ಕಾಗಿ ಮುನಿ ಭರದ್ವಾಜನು ಈ ವಿದ್ಯೆಯನ್ನು ಬೋಧಿಸಿದನು. ಆತ್ರೇಯ ಮಹರ್ಷಿಯು ಈ ವಿದ್ಯೆಯನ್ನು ವಿಸ್ತರಿಸಿ ಚಿಕಿತ್ಸಾ ತಂತ್ರವನ್ನು ರೂಪಿಸಿದನು. ಈ ಕ್ಷೇತ್ರದಲ್ಲಿ ನಡೆದ

ಸಂಶೋಧನೆಗಳೆಲ್ಲವನ್ನೂ ಚರಕಮಹರ್ಷಿಯು ಕ್ರೋಡೀಕರಿಸಿ ಸಂಹಿತೆಯಾಗಿ ರೂಪಸಿದನು. ಅವನ ಹೆಸರಿನಲ್ಲೇ ಅದು ಪ್ರಖ್ಯಾತವಾಗಿದೆ. ರೋಗ ನಿದಾನ, ಚಿಕಿತ್ಸಾ ವಿಧಾನ, ಭ್ರೂಣದ ಬೆಳವಣಿಗೆ ಇತ್ಯಾದಿಯಾದ ಮೂಲಭೂತವಾದ, ಆದರೆ ಸುಲಭವಾಗಿ ಕಂಡಿಹಿಡಿಯಲು ಸಾಧ್ಯವಿರದ ವೈದ್ಯವಿಜ್ಞಾನದ ವಾಸ್ತವಾಂಶಗಳನ್ನು ರೂಪಿಸಿಕೊಟ್ಟನು. ಆ ಕಾಲದ ಸುಪ್ರಸಿದ್ಧ ವೈದ್ಯರು, ರೋಗವನ್ನು ಔಷಧಿಯಿಂದ ಪರಿಹರಿಸಲು ಸಾಧ್ಯವಿರದ ಸಂದರ್ಭಗಳಲ್ಲಿ ದೇಹದ ರೋಗಗ್ರಸ್ಥ ಭಾಗವನ್ನು ಶಸ್ತ್ರ ಚಿಕಿತ್ಸೆಯಿಂದ ತೆಗೆದುಹಾಕುತ್ತಿದ್ದರು, ಅಥವಾ ಸರಿಪಡಿಸುತ್ತಿದ್ದರು. ಸುಶ್ರುತ ಮುನಿಯು ಅನೇಕ ಶಸ್ತ್ರಚಿಕಿತ್ಸಾ ವಿಧಾನಗಳನ್ನು ಕುರಿತು ಅಮೋಘ ಕೃತಿಯನ್ನು ರಚಿಸಿದ್ದಾನೆ. ಈ ಕೃತಿಯು ಈಗ ಅಧ್ಯಯನಕ್ಕೆ ಲಭ್ಯವಿದೆ. ಧನ್ವಂತರಿ, ನಾಗಾರ್ಜುನ ಮೊದಲಾದ ಋಷಿವರ್ಯರು ಪ್ರಾಚೀನ ಭಾರತದ ಅನೇಕ ವೈದ್ಯಕೀಯ ಸಂಶೋಧನ ಮಾರ್ಗವನ್ನು ಅನುಸರಿಸಿದ್ದರು. ಹಾಗೆಯೇ ನೀತಿಶಾಸ್ತ್ರ, ನ್ಯಾಯಶಾಸ್ತ್ರ, ಮತ್ತಿತರ ಸಮಾಜ ಶಾಸ್ತ್ರಗಳಲ್ಲೂ ಎಲ್ಲ ಕಾಲಕ್ಕೂ ಅಮೂಲ್ಯವಾಗುವಂತಹ ಕೃತಿಗಳು ಹೊರಬಂದುವು. ಮನುವಿನ ಧರ್ಮಶಾಸ್ತ್ರ, ಗೌತಮನ ನ್ಯಾಯಶಾಸ್ತ್ರ ಇಂಥವು.

ವೇದಾಂತವು ಪ್ರತಿಯೊಂದು ಪ್ರದೇಶದ, ಜಾತಿ ಜನಾಂಗಗಳ, ಸಮುದಾಯದ, ಉಭಯಲಿಂಗಗಳ ನ್ಯಾಯಬದ್ಧ ಸೊತ್ತು. ವೇದಾಂತವೆಂದರೆ ವಿವೇಕ ಅಥವಾ ಜ್ಞಾನ. ಯಾವ ಕ್ಷೇತ್ರಕ್ಕೆ ಸಂಬಂಧಿಸಿದ ವಿವೇಕ? ಅದು ಆತ್ಮದ ಅರಿವನ್ನು ಆಧರಿಸಿದ ಜ್ಞಾನ. ವ್ಯಕ್ತಿಯು ತನ್ನ ಜೀವನದಲ್ಲಿ ಗಳಿಸಬಹುದಾದ ಪರಮೋನ್ನತವಾದಗಳಿಕೆ ಅದು. ಆತ್ಮವನ್ನು ಸಾಕ್ಷಾತ್ಕರಿಸಿಕೊಳ್ಳುವುದಕ್ಕಿಂತ, ಅಂದರೆ ತನ್ನನ್ನು ತಾನು ಅರಿಯುವುದಕ್ಕಿಂತ ದೊಡ್ಡ ಗಳಿಕೆಯು ಇನ್ನೊಂದಿಲ್ಲ. ಶ್ರುತಿ ಮತ್ತು ಸ್ಮೃತಿಗಳ ಪ್ರತಿಯೊಬ್ಬ ವಿದ್ಯಾರ್ಥಿಗೆ ಆತ್ಮಜ್ಞಾನದಲ್ಲಿ ನಂಬಿಕೆ ಅಗತ್ಯವಾಗಿದೆ.

ನೋಡುವ ವಸ್ತುವು ನೋಡುತ್ತಿರುವ ವ್ಯಕ್ತಿಗಿಂತ ಸ್ಪಷ್ಟವಾಗಿ ಬೇರೆಯಾದದ್ದು. ಇದು ಸಾರ್ವತ್ರಿಕವಾಗಿ ಒಪ್ಪಿಗೆಯಾಗಿರುವ ವಿಚಾರ. ನೋಡುವವನು ಯಾರು? ರೂಪ ಆಕಾರ ಇರುವ ಸಮಸ್ತವನ್ನು ಕಣ್ಣು ಗುರುತಿಸುತ್ತದೆ, ನೋಡುತ್ತದೆ. ಕಣ್ಣಲ್ಲಿ ಭೌತ ದೇಹವನ್ನು, ಇತರ ವ್ಯಕ್ತಿಗಳನ್ನು, ಕೊನೆಗೆ ಹುಳುಗಳು, ಕೀಟಗಳು ಮತ್ತಿತರ ವಸ್ತುಗಳನ್ನು ನೋಡುತ್ತದೆ. ತನ್ನ ವಲಯಕ್ಕೆ ಬರುವ ಪ್ರತಿಯೊಂದನ್ನೂ ಅದು ನೋಡುತ್ತದೆ. ಈ ದೇಹವೂ ಕಣ್ಣು ನೋಡುವಂತಹ ಒಂದು ವಸ್ತು, ಮಿಕ್ಕ ವಸ್ತುಗಳ ಹಾಗೆಯೇ. ಹಾಗಾದರೆ ದೇಹವೇ ನಾನು ಎಂದು ನಾವು ಹೇಗೆ ನಿರ್ಣಯಿಸಲು ಸಾಧ್ಯವಾಗುತ್ತದೆ?

ಹಾಗಾದರೆ ನಿಜವಾಗಿ ಈ ನಾನು ಎನ್ನುವುದು ಯಾವುದು? ಬೆಂಕಿಯು ಸುಡುತ್ತದೆ, ಬೆಳಗುತ್ತದೆ. ಅದು ಶಾಖದಿಂದ ಸುಡುತ್ತದೆ, ಬೆಳಕಿನಿಂದ ಬೆಳಗುತ್ತದೆ. ಯಾವ ವಸ್ತುಗಳ ಮೇಲೆ ಬೆಂಕಿಯು ಹೀಗೆ ವರ್ತಿಸುತ್ತದೆಯೋ ಅವುಗಳಿಗಿಂತ ಅದು ಬೇರೆಯೇ ಆಗಿದೆ. ಬೆಂಕಿಯೂ ಅದು ಸುಡುವ ವಸ್ತುವೂ ಬೇರೆ ಬೇರೆ ಎಂಬ ಸತ್ಯವನ್ನು ತಿಳಿದುಕೊಂಡಿರುವವನು ಯಾರು? ಅದೇ ಆತ್ಮ. ಮರದ ದಿಮ್ಮಿಯೊಂದು ಉರಿಯುತ್ತಿರುವಾಗ ಅದರ ಎಲ್ಲಾ ಕಡೆಯೂ ಬೆಂಕಿಯಿದೆ ಮತ್ತು ಕಾರ್ಯತತ್ಪರವಾಗಿದೆ. ಹಾಗೆಯೇ ಆತ್ಮವು ಇಡೀ ದೇಹವನ್ನು ವ್ಯಾಪಿಸಿಕೊಂಡಿದೆ, ದೇಹವು ಕೆಲಸ ಮಾಡುವಂತೆ, ಚಲಿಸುವಂತೆ, ಅಂಗಾಂಗಗಳ ಚಲನೆಯಾಗುವಂತೆ ಅದು ಮಾಡುತ್ತದೆ.

ದೀಪವು ಹೊಮ್ಮಿಸುವ ಬೆಳಕು ರಾತ್ರಿ ಸಮಯದಲ್ಲಿ ನಮಗೆ ವಸ್ತುಗಳನ್ನು ತಿಳಿಸಿಕೊಡುತ್ತದೆ: "ಇದು ಬಟ್ಟಲು, ಇದು ತಟ್ಟೆ," ಇತ್ಯಾದಿ. ಹಾಗೆಯೇ ಕಣ್ಣು ಕೂಡ ನಮಗೆ, "ಇದೊಂದು ಮನೆ, ಇದು ಮುಳ್ಳು, ಇದು ಕಲ್ಲು," ಎಂದು ತಿಳಿಸಿಕೊಡುವ ಉಪಕರಣ. ಕಣ್ಣು ಆತ್ಮವಲ್ಲ. ದೀಪವು ಇಲ್ಲದಾಗ ಕಣ್ಣಾಗಲಿ, ಕಣ್ಣಿಲ್ಲದಾಗ ದೀಪವಾಗಲಿ ಮನೆ, ಮುಳ್ಳು, ಕಲ್ಲು ತಟ್ಟೆ, ಬಟ್ಟಲು ಎಂದು ಗುರುತಿಸಲಾರದು. ದೀಪ ಮತ್ತು ಕಣ್ಣು ಎರಡೂ ಬೆಳಗುವ ವಾಹಕಗಳು ಅಥವಾ ಉಪಕರಣಗಳು.

ಉಪಕರಣವಾದ ಕಣ್ಣು ತಾನಿರುವ ದೇಹವನ್ನು ನೋಡುತ್ತದೆ. ಆದ್ದರಿಂದ ನೋಡಲ್ಪಟ್ಟ ದೇಹವೂ ಅಂಥದೇ ಒಂದು ಉಪಕರಣವಲ್ಲದೆ ಬೇರೇನೂ ಆಗಿರಲೂ ಸಾಧ್ಯವಿಲ್ಲ. ಇಂದ್ರಿಯಗಳು ಕೇಳುವುದು, ರುಚಿ ನೋಡುವುದು, ನೋಡುವುದು, ಸ್ಪರ್ಶಿಸುವುದು, ಆಘ್ರಾಣಿಸುವುದು ಈ ಅನುಭವಗಳನ್ನು ಪಡೆಯುವಂಥವು. ಕಣ್ಣು ಒಂದು ಉಪಕರಣವೆಂದಾದ ಮೇಲೆ ಉಳಿದ ನಾಲ್ಕು ಇಂದ್ರಿಯಗಳೂ ಮನಸ್ಸಿನ ಅಧೀನದಲ್ಲಿವೆ. ಮನಸ್ಸು ಅವುಗಳ ಒಡೆಯ. ಈ ಮನಸ್ಸನ್ನು ಬೇರಾವುದೋ ಒಂದು ಹತೋಟಿಯಲ್ಲಿ ಇರಿಸಿ ಕೊಂಡಿದೆ. ಆದ್ದರಿಂದ ಮನಸ್ಸೇ ಮನುಷ್ಯನ ಮೂಲತತ್ತ್ವವಾಗಲಾರದು.

ಮನಸ್ಸು ಒದಗಿಸುವ ಮಾಹಿತಿಯನ್ನು ಬುದ್ಧಿಯು ಪರೀಕ್ಷಿಸುತ್ತದೆ. ನಿರ್ಣಯಿಸುವ ಸಾಧನ ಅದು. ನಿದರ್ಶನಕ್ಕೆ ಒಂದು ಹರಿತವಾದ ಚೂರಿಯಿದೆ ಎಂದಿಟ್ಟುಕೊಳ್ಳಿ. ಅದೆಷ್ಟೇ ಹರಿತವಾಗಿದ್ದರೂ ತನಗೆ ತಾನೆ ಅದು ಹಣ್ಣನ್ನು ಕೊಯ್ಯಲಾರದು ಅತ್ಯಂತ ತೆಳುವಾದ ಒಂದು ದಾರದ ತುಂಡನ್ನೂ ಕತ್ತರಿಸಲಾರದು. ಯಾರಾದರೂ ಒಬ್ಬರು ಕೈಯಲ್ಲಿ ಹಿಡಿದು ಕೊಯ್ದಾಗ ಅದು ಕತ್ತರಿಸುವುದು. ಬುದ್ಧಿಯು ಆ ಚೂರಿಯ ಹಾಗೆ. ನಾನು ಅಥವಾ ಆತ್ಮ ಇಲ್ಲದೆ ಅದು ಸಂಪೂರ್ಣವಾಗಿ ಅಸಹಾಯಕ.

ಅಮೇಲೆ ಮನುಷ್ಯನ ಇನ್ನೊಂದು ಉಪಕರಣವನ್ನು ನಾವು ಪರಿಶೀಲಿಸಬೇಕು. ಅದು ಪ್ರಾಣ. ಅದನ್ನು ನಾನು ಎಂದು ಹೇಳಬಹುದೇ? ಗಾಢವಾದ ನಿದ್ರೆಯಲ್ಲಿ ತಾನು ಉಸಿರಾಡುತ್ತಿರುವುದೂ ಅವನ ಗಮನಕ್ಕೆ ಬರುವುದಿಲ್ಲ. ಪ್ರಾಣವಾಯುವು ಜಾಗ್ರತವಾಗಿರುವುದೂ ಅವನಿಗೆ ಅರಿವಾಗುವುದಿಲ್ಲ! ಜಾಗ್ರತ್, ಸ್ವಪ್ನ ಮತ್ತು ಸುಷುಪ್ತಿ ಎಂಬ ಮೂರೂ ಅವಸ್ಥೆಗಳಲ್ಲಿ ಪ್ರಾಣವು ಇದ್ದೇ ಇರುತ್ತದೆ. ಜಾಗ್ರತ್ ಸ್ಥಿತಿಯ ಅನುಭವಗಳು ಸ್ವಪ್ನ ಸ್ಥಿತಿಯಲ್ಲಿ ಇರುವುದಿಲ್ಲ; ಸ್ವಪ್ನ ಸ್ಥಿತಿಯ ಅನುಭವ ಗಳು ಜಾಗ್ರತ್ ಸ್ಥಿತಿಯಲ್ಲಿ ಇರುವುದಿಲ್ಲ. ನಿದ್ರಾ ಸ್ಥಿತಿಯಲ್ಲಿ ಪ್ರಾಣವು ಬುದ್ಧಿಯನ್ನಾ ಗಲಿ ಸ್ಮರಣಶಕ್ತಿಯನ್ನಾಗಲಿ ಕ್ರಿಯಾಶೀಲಗೊಳಿಸುವುದಿಲ್ಲ. ಅವು ಶಾಂತವಾಗಿರು ವಂತೆ ತೋರುತ್ತವೆ. ಒಡೆಯನು ಕಾರ್ಯಶೀಲನಾಗಿರುವಾಗ ಅಧೀನನಾದವನು ಸುಮ್ಮನೆ ನಿಷ್ಕ್ರಿಯವಾಗಿರಲು ಸಾಧ್ಯವಿಲ್ಲ. ಸದಾಕಾಲವೂ ಒಂದೇ ಸಮನಾಗಿ ಚಟುವಟಿಕೆಯಿಂದಿರದ ಕಾರಣ, ಪ್ರಾಣ ತತ್ತ್ವವನ್ನು ನಾನು ಅಥವಾ ಆತ್ಮ ಎಂದು ಹೇಳಲು ಸಾಧ್ಯವಿಲ್ಲ.

ಇನ್ನು ಅಹಂಕಾರದ ವಿಷಯ. ಅದು ವರ್ತಿಸುವ ಎರಡು ಕ್ಷೇತ್ರಗಳಿವೆ. ಆದ್ದ ರಿಂದ ಅದಕ್ಕೆ ಎರಡು ಅರ್ಥಗಳಿವೆ. ೧. ಆತ್ಮ ರತಿ, ಅಹಂಕಾರ, ದೇಹಾತ್ಮ, ಬಹಿರಂಗವಾದ ನಾನು. ೨. ಒಳಗಿನ ನಾನು, ಪ್ರತ್ಯಗಾತ್ಮ. ಈ ವ್ಯತ್ಯಾಸವನ್ನು ತಿಳಿಯದವರು ತಪ್ಪಾಗಿ ಭಾವಿಸಿ, ನಾನು ಎನ್ನುವುದು ದೇಹಾತ್ಮಕ್ಕೆ ಅನ್ವಯಿಸುವು ದಾಗಿ ಹೇಳುತ್ತಾರೆ. ಆದರೆ ಅದು ತಪ್ಪು. ನಾವು ನೋಡಿರುವಂತೆ ದೇಹವು ಒಂದು ಸಾಧನ, ಅದೊಂದು ವಸ್ತು; ಅದು ನೋಡಲ್ಪಟ್ಟ ವಸ್ತುವೇ ಹೊರತು ನೋಡುವವ ಅಲ್ಲ. ಹೀಗಿರುವಾಗ ಅದರೊಂದಿಗೆ ಸಮೀಕೃತವಾದ ಅಹಂಕಾರವು ಹೇಗೆ ಆತ್ಮವಾದೀತು? ಅಹಂಕಾರವೂ ನೋಡಲ್ಪಟ್ಟ ವಸ್ತುಗಳ ವರ್ಗಕ್ಕೆ ಸೇರಿದ್ದು. ಅದು ನಿದ್ರಾಸ್ಥಿತಿಯಲ್ಲಿ ಇರುವುದಿಲ್ಲ, ಸ್ವಪ್ನ ಸ್ಥಿತಿಯಲ್ಲಿ ತಪ್ಪಾಗಿ ವರ್ತಿಸುತ್ತದೆ. ಸತ್ಯವು ಹಿಂದೆ, ಇಂದು ಮತ್ತು ಮುಂದೆ ಅಬಾಧಿತವಾಗಿ ವರ್ತಿಸಬೇಕು. ಎರಡೂ ಸ್ಥಿತಿಗಳಲ್ಲಿ ಇರದ ಒಂದು ವಸ್ತುವು ಹೇಗೆ ತಾನೆ ಸಾಧ್ಯವಾದೀತು?

ಈ ಪರಿಶೀಲನೆಯಿಂದ ಒಂದು ಅಂಶವು ದೃಢಪಟ್ಟಂತಾಯಿತು. ಇಂದ್ರಿಯಗಳು, ಮನಸ್ಸು, ಬುದ್ಧಿ, ಪ್ರಾಣ—ಈ ಯಾವುದೇ ಒಂದನ್ನು ಆತ್ಮವೆಂದು ಪರಿಗಣಿಸಲು ಸಾಧ್ಯವಿಲ್ಲ. ಹಾಗಾದರೆ ಬೇರೆ ಯಾವುದು, ಬೇರೆ ಯಾರು ಆತ್ಮ? ಎಂಬ ಪ್ರಶ್ನೆಯು ಏಳುತ್ತದೆ.

ಅದಕ್ಕೆ ಪ್ರವೇಶವಾಗಲಿ ನಿರ್ಗಮನವಾಗಲಿ ಇಲ್ಲ; ಕೈಕಾಲುಗಳಿಲ್ಲ; ಅಂಗಾಂಗಗಳಿಲ್ಲ, ಕಳಂಕವಿಲ್ಲ, ಮಲಿನತೆಯಿಲ್ಲ. ಅದು ಸೂಕ್ಷ್ಮಗಳಲ್ಲಿ ಅತಿ ಸೂಕ್ಷ್ಮವಾದದ್ದು,

ಬೃಹತ್ತುಗಳಲ್ಲಿ ಅತಿ ಬೃಹತ್ತಾದುದು. ಆಕಾಶದಂತೆ ಅದು ಎಲ್ಲೆಲ್ಲೂ ಇದೆ. ಅದೇ ಸಮಸ್ತವೂ, ಆದ್ದರಿಂದ ನಾನು ಮತ್ತು ನನ್ನದು ಎನ್ನುವುದು ಅದಕ್ಕಿಲ್ಲ. ಅದು ಪ್ರಜ್ಞೆ, ಬೆಂಕಿಯ ಶಾಖವಿದ್ದ ಹಾಗೆ, ಸೂರ್ಯನ ಬೆಳಕಿದ್ದ ಹಾಗೆ ಅದಕ್ಕೆ ದುಃಖವಾಗಲಿ ಮಾಯೆಯಾಗಲಿ ಇಲ್ಲ. ಅದು ಪರಮೋನ್ನತವಾದ ನಿತ್ಯವಾದ ಆನಂದ, ಪರಮಾನಂದ. ಅದು ಎಲ್ಲ ಜೀವಿಗಳ ಕೇಂದ್ರ ಹೃದಯ. ಎಲ್ಲರಲ್ಲೂ ಅದು ಅರಿವಾಗಿದೆ. ಅದು ನೋಡಲ್ಪಟ್ಟ ಪ್ರತಿಯೊಂದರ ನೋಡುಗ. ಅದು ಸಕಲ ವಸ್ತುಗಳನ್ನೂ ನೋಡುತ್ತದೆ. ಇಂದ್ರಿಯಗಳಿಂದ ಸೇವೆಯನ್ನು ಪಡೆದು, "ನಾನು ನೋಡುತ್ತೇನೆ, ನಾನು ಕೇಳುತ್ತೇನೆ, ನಾನು ರುಚಿ ನೋಡುತ್ತೇನೆ," ಎಂದು ಹೇಳುವವನು ನಿಜವಾಗಿ ಉಪಕರಣಗಳನ್ನು ಕುರಿತು ಹೇಳುತ್ತಾನೆಯೇ ಹೊರತು ಆತ್ಮದ ಬಗೆಗಲ್ಲ. ಆತ್ಮನು ಭಾಗಶಃ ನೋಡುಗನಲ್ಲ, ಸರಣಿ ನೋಡುಗನಲ್ಲ, ನೋಡದೆ ಇರುವವನಲ್ಲ ಅಥವಾ ನಕಲಿ ನೋಡುಗನಲ್ಲ.

ಬುದ್ಧಿಯಲ್ಲಿ, ಚಂದ್ರನಹಾಗೆ, ಅದರದೇ ಬೆಳಕಿಲ್ಲ. ಚಂದ್ರನಂತೆಯೇ ಅದು ತನ್ನ ಪಕ್ಕದಲ್ಲಿರುವ ಬೇರೊಂದು ಮೂಲದ ಬೆಳಕನ್ನು ಪ್ರತಿಫಲಿಸುತ್ತದೆ. ಆ ಮತ್ತೊಂದು ಮೂಲವೇ ಆತ್ಮ. ಆತ್ಮವು ಪ್ರತಿನಿಧಿಸುವ ವಿಶ್ವ ಪ್ರಜ್ಞೆಯನ್ನು ಪ್ರತಿಫಲಿಸುವುದರಿಂದ ಮಾತ್ರವೇ ಬುದ್ಧಿಯು ವರ್ತಿಸಬಲ್ಲುದು.

ಸೂರ್ಯನನ್ನು ಜಗತ್ ಚಕ್ಷು, ವಿಶ್ವದ ಕಣ್ಣು ಎಂದು ಕರೆಯಲಾಗಿದೆ. ಇತರ ವಸ್ತು ಗಳೊಂದಿಗೆ ಸೂರ್ಯನ ಸಂಬಂಧ ಮತ್ತು ಸಾಮೀಪ್ಯಗಳನ್ನು ಆಧರಿಸಿ ಈ ಹೆಸರು ಬಂದಿದೆ. ಸೂರ್ಯನಲ್ಲಿ ಅಹಂಭಾವವಿಲ್ಲ. ತನ್ನದು ಎಂಬ ಭಾವನೆಯಾಗಲಿ, ಇಚ್ಛೆ ಅನಿಚ್ಛೆಯಾಗಲಿ ಇಲ್ಲ. ಅವನ ಅಸ್ತಿತ್ವವಷ್ಟರಿಂದಲೇ ಕತ್ತಲೆಯು ಮಾಯ ವಾಗುತ್ತದೆ. ಬೆಳಕು ಜಗತ್ತನ್ನು ಆವರಿಸಿಕೊಳ್ಳುತ್ತದೆ. ಆದ್ದರಿಂದ ಅವನನ್ನು ಬೆಳಗುವ ವನು ಎಂದು ಕರೆಯುತ್ತಾರೆ. ಆದರೆ ಅವನು ಆ ಕೆಲಸವನ್ನು ಕರ್ತವ್ಯ ಬುದ್ಧಿಯಿಂದ, ಪ್ರಜ್ಞಾಪೂರ್ವಕವಾಗಿ ಮಾಡುತ್ತಿಲ್ಲ. ಆತ್ಮಕ್ಕೂ ಅಷ್ಟೆ, ಕರ್ತವ್ಯವಾಗಲಿ, ಅನ್ವಯವಾ ಗಲಿ ಇಲ್ಲ. ಆತ್ಮವು ಹೇಗೆ ಕರ್ತೃವಾಗುತ್ತದೆ ಎಂದು ಕೇಳಿದರೆ, ಉತ್ತರ ಆಯ ಸ್ಕಾಂತವು ಕರ್ತೃವೇ ಎಂಬುದು! ಅದರ ಸಮೀಪದಲ್ಲಿರುವ ಕಬ್ಬಿಣದ ಸೂಜಿಯು ಚಲಿಸಿದ ಮಾತ್ರಕ್ಕೆ ಅದು ಕಾರ್ಯವನ್ನು ಮಾಡುವ ಕರ್ತವ್ಯವಾಗುತ್ತದೆಯೇ?

ಈಗ ಮೂಲಭೂತವಾದ ಪ್ರಶ್ನೆಯನ್ನು ಎತ್ತಿಕೊಳ್ಳಬಹುದು. ಆತ್ಮ ಎನ್ನುವುದು ಇದೆಯೆ? ಇರುವುದಾದರೆ ಹೇಗೆ ಮತ್ತು ಯಾವ ಸಮರ್ಥನೆಯಿಂದ ಅದನ್ನು ಸ್ಥಾಪಿಸಬಹುದು? ಆತ್ಮ ಇದೆಯೆಂದು ಸಮರ್ಥಿಸಬೇಕಾದ ಅಗತ್ಯವಿಲ್ಲ. ಏಕೆಂದರೆ, ಕೆಲವು ವಾದಗಳನ್ನು ಒಡ್ಡಿ, ತರ್ಕ ಮಾಡಿ ಆತ್ಮದ ಅಸ್ತಿತ್ವವನ್ನು ಸಾಧಿಸುವುದಾದರೆ,

ಹಾಗೆ ವಾದಗಳನ್ನೂ ತರ್ಕಗಳನ್ನೂ ಉಪಯೋಗಿಸುವ ಒಬ್ಬ ವ್ಯಕ್ತಿಯಿರುವುದನ್ನು ಒಪ್ಪಿಕೊಳ್ಳಬೇಕಾಗುತ್ತದೆ, ಆ ವ್ಯಕ್ತಿಯೂ ಆತ್ಮವೇ!

ಕೆಲವರು ಆತ್ಮದ ಅಸ್ತಿತ್ವಕ್ಕೆ ವೇದಗಳೇ ಪ್ರಮಾಣ. ವೇದಗಳ ಮೂಲಕ ಆತ್ಮವನ್ನು ಅನುಭವಕ್ಕೆ ತಂದುಕೊಳ್ಳಬಹುದು ಎಂದು ಕೆಲವರು ವಾದಿಸಬಹುದು. ವೇದಗಳು ಕೆಲವು ಕೆಲಸಗಳನ್ನು ಅನಾತ್ಮವೆಂದು ನಿಷೇಧಿಸುತ್ತದೆ. ಆತ್ಮವನ್ನು ನಂಬುವವನಿಂದ ನಿರೀಕ್ಷಿಸ ಬಹುದಾದ ಕಾರ್ಯಗಳಿಗೆ ಅವು ವಿರುದ್ಧವಾದವು ಎಂದು ಹೇಳುತ್ತವೆ. ದಾನಪರತೆ, ನೈತಿಕ ವರ್ತನೆ ಮೊದಲಾದ ಇತರ ಕೆಲವು ಚಟುವಟಿಕೆಗಳನ್ನು ಆತ್ಮ ಪರವಾದವು ಎಂದು ಶಿಫಾರಿಸು ಮಾಡುತ್ತವೆ. ಆದರೆ ಆತ್ಮವು ತನಗೆ ತಾನೇ ಸಮರ್ಥನೆ, ತನಗೆ ತಾನೇ ಸಾಕ್ಷಿ. ಇತರ ವಸ್ತುಗಳಿಂದ ಅಥವಾ ಅಂಶಗಳಿಂದ ಅದರ ಅಸ್ತಿತ್ವವನ್ನು ಸ್ಥಾಪಿಸಲು ಸಾಧ್ಯವಿಲ್ಲ.

ವೇದಗಳಿಗೆ ಪೂರಕ ಸಾಹಿತ್ಯವಾದ ಶಾಸ್ತ್ರಗಳು ಉತ್ಸಾಹ, ಸಾಹಸ, ಧೈರ್ಯ, ಸದ್ಬುದ್ಧಿ, ಶಕ್ತಿ, ಮತ್ತು ಪರಾಕ್ರಮ ಈ ಆರು ಗುಣಗಳು ಎಲ್ಲಿವೆಯೋ ಅಲ್ಲಿ ಭಗವಂತ ಇದ್ದಾನೆ ಎಂದು ಸಾರುತ್ತಾನೆ. ಮನುಷ್ಯನ ಆರಂಭದ ಪ್ರಾರ್ಥನೆ ಗಣಪತಿಯನ್ನು ಉದ್ದೇಶಿಸಿ ಈ ಆರೂ ಗುಣಗಳನ್ನು ಕರುಣಿಸು ಎಂದು ಕೋರುವುದಾಗಬೇಕು. ಅವು ಪ್ರಜ್ಞೆಯನ್ನು ಶುದ್ಧೀಕರಿಸಿ ಆತ್ಮವನ್ನು ತೋರಿಸಿಕೊಡುತ್ತವೆ. ಎದೆಯಲ್ಲಿ ಧೈರ್ಯ ತುಂಬಿಕೊಂಡು ವ್ಯಕ್ತಿಯು ತನ್ನ ಆತ್ಮವನ್ನು ಅನ್ವೇಷಿಸಬೇಕು; ಹೇಡಿಗಳಿಗೆ ಇದು ಹೇಳಿಸಿದ್ದಲ್ಲ. ದುಷ್ಟರು, ಚಂಚಲವಾದ ನಂಬಿಕೆಯುಳ್ಳವರು, ಸಂದೇಹಿಗಳು, ರೋಗಿಗಳಾಗುತ್ತಾರೆಯೇ ಹೊರತು, ಯೋಗಿಗಳಾಗುವುದಿಲ್ಲ.

ಜ್ಞಾನಿಯನ್ನು ಅಜ್ಞಾನಿಯಿಂದ ಬೇರ್ಪಡಿಸುವ ಗುರುತು ಇದೇಯೆ. ಕೃಷ್ಣನು ಉಕ್ಕಿ ಬರುತ್ತಿದ್ದ ಸಂತೋಷದಿಂದ ನಗುತ್ತಾ ಮಾತನಾಡಿದನು; ಅರ್ಜುನನು ದುಃಖದಿಂದ ಕುಸಿದು ಕೇಳಿದನು. ಜ್ಞಾನಿಯು ಸದಾ ಸಂತೋಷವಾಗಿರುತ್ತಾನೆ, ಅವನು ನಗುತ್ತಾನೆ; ಅಜ್ಞಾನಿಯು ದುಃಖ ಪೀಡಿತನಾಗಿದ್ದಾನೆ, ಅವನು ಅಳುತ್ತಾನೆ.

ಆತ್ಮಸ್ವರೂಪವನ್ನು ವಿಚಾರ ಮಾಡುತ್ತಾ ಜಯಗಳಿಸಬೇಕಾದರೆ ವ್ಯಕ್ತಿಯು ಸನಾತನ ಧರ್ಮವು ವಿಧಿಸಿರುವ ನಾಲ್ಕು ಆಶ್ರಮಗಳ ಮೂಲಕ ಹಾದು ಹೋಗಬೇಕು. ಪ್ರತಿ ಹಂತದಲ್ಲೂ ಅವನು ಅಲ್ಲಲ್ಲಿಗೆ ನಿಗದಿಯಾದ ಕರ್ತವ್ಯಗಳು ಮತ್ತು ಹೊಣೆಗಾರಿಕೆ ಗಳನ್ನು ತಿಳಿದುಕೊಂಡು ತಕ್ಕಂತೆ ನಡೆದುಕೊಳ್ಳುತ್ತಾನೆ, ಆತ್ಮದ ಅರಿವಿಗೆ ತಕ್ಕ ಜ್ಞಾನವನ್ನು ತಾನೆ ಸಂಪಾದಿಸಿಕೊಳ್ಳುತ್ತಾನೆ.

ಶೈಶವದ ವರ್ಷಗಳು ಕಳೆದ ನಂತರವೇ ಆಶ್ರಮದ ಪ್ರಭಾವವು ಅವನ ಮೇಲೆ ಬೀಳತೊಡಗುತ್ತದೆ. ಅದುವರೆಗೆ, ತನ್ನ ಕರ್ತವ್ಯ ಮತ್ತು ಹೊಣೆಗಾರಿಕೆಗಳ ವಿಷಯದಲ್ಲಿ ಅವನಿಗೆ ವಿಶೇಷವಾದ ಜ್ಞಾನವೇನೂ ಇರುವುದಿಲ್ಲ, ಬಾಲ್ಯ, ತಾರುಣ್ಯ, ಯೌವನ, ಮಧ್ಯವಯಸ್ಸು, ಮುಪ್ಪು ಹೀಗೆ ವ್ಯಕ್ತಿಯ ಬೆಳವಣಿಗೆಯ ಹಂತಗಳಿರುತ್ತವೆ. ಅವಕ್ಕೆ ಅನುಗುಣವಾಗಿಯೇ ಅವನಲ್ಲಿ ವಿವೇಕದ ಬೆಳವಣಿಗೆಯೂ ಇರುತ್ತದೆ.

ಬಾಲ್ಯದ ಮೊದಲನೆಯ ಹಂತದಲ್ಲಿ ಅವನು ಅಜ್ಞಾನ ಮತ್ತು ಮುಗ್ಧತೆಯ ನೆಲೆಯಿಂದ ಜ್ಞಾನದ ಜಗತ್ತಿಗೆ ಪ್ರವೇಶ ಮಾಡುತ್ತಾನೆ. ಒಬ್ಬ ಗುರುವು ಅವನನ್ನು ಶಿಷ್ಯನನ್ನಾಗಿ ಸ್ವೀಕರಿಸುತ್ತಾನೆ. ಆಮೇಲೆ ಅವನು ಗುರುಸೇವೆ ಮಾಡಿ ಗುರುವಿಗೆ ವಿಧೇಯನಾಗಿರಬೇಕು. ಅದೊಂದು ಹೊರೆಯೆಂಬಂತೆ, ತಾನು ಬಂಧಿತನಾಗಿದ್ದೇನೆಂಬಂತೆ ವರ್ತಿಸಬಾರದು. ಎರಡನೆಯ ತಾರುಣ್ಯ ಹಂತದಲ್ಲಿ ಸಮಾಜದ ಪ್ರಗತಿಗಾಗಿಯೂ ಭದ್ರತೆಗಾಗಿಯೂ ಇರುವ ಅವಕಾಶಗಳನ್ನೂ ಸಾಧನಗಳನ್ನೂ ಹಂಚಿಕೊಳ್ಳಬೇಕು. ತನ್ನ ಜೀವಿಕೆಗಾಗಿ ಸಂಪಾದಿಸಲು ಪ್ರಾರಂಭಿಸಬೇಕು. ವರಮಾನವನ್ನು ಬಹು ಬುದ್ಧಿವಂತಿಕೆಯಿಂದ ವೆಚ್ಚ ಮಾಡಬೇಕು. ತನಗಿಂತ ಕಿರಿಯರಾದವರಿಗೆ ಸರಿಯಾದ ಮಾದರಿಯಾಗಿ ಅವರನ್ನು ಸಾಮಾಜಿಕವಾಗಿ ಉಪಯುಕ್ತ ಮಾರ್ಗಗಳಲ್ಲಿ ನಡೆಸುವ ಕರ್ತವ್ಯವೂ ಅವನದು. ಅದೇ ಸಮಯದಲ್ಲಿ ತನಗಿಂತ ಹಿರಿಯರಾದವರ ಹೆಜ್ಜೆಗುರುತುಗಳಲ್ಲಿ ನಡೆಯುತ್ತಾ ತನ್ನ ಉದ್ಧಾರಕ್ಕಾಗಿ ಅವರಿಂದ ಪಾಠಗಳನ್ನು ಕಲಿಯಬೇಕು.

ತನ್ನ ಮೂರನೆಯ ಹಂತದಲ್ಲಿ ತನ್ನ ಪ್ರಗತಿಗೆ ಮಾತ್ರವಲ್ಲದೆ, ತನ್ನ ಕುಟುಂಬ ಮತ್ತು ಸಮಾಜದ ಏಳಿಗೆಗೆ ಮಾತ್ರವಲ್ಲದೆ, ಸಾಮಾನ್ಯ ಜನರ ಪ್ರಗತಿಗಾಗಿ ಅವನು ಗಮನ ಕೊಡುತ್ತಾನೆ. ಸಮಸ್ತ ಮಾನವತೆಯ ಶಾಂತಿ ಮತ್ತು ಸಮೃದ್ಧಿಗಳ ವ್ಯಾಪಕ ದರ್ಶನವನ್ನು ಅವನು ತನ್ನೆದುರಿಗೆ ಇಟ್ಟುಕೊಂಡಿರುತ್ತಾನೆ. ಶಕ್ತಿ ಮತ್ತು ಸಂಪನ್ಮೂಲವಿರುವಷ್ಟು ಮಟ್ಟಿಗೆ ಅದಕ್ಕಾಗಿ ತನ್ನ ಕೊಡುಗೆ ಸಲ್ಲಿಸುತ್ತಾನೆ.

ಮುಪ್ಪು ನಾಲ್ಕನೆಯ ಹಂತ. ಪ್ರಯಾಣದ ಈ ಹಂತಕ್ಕೆ ಬರುವ ವೇಳೆಗೆ ಈ ಜಗತ್ತಿನಲ್ಲಿ ದೊರಕುವ ಸಂತೋಷ ಅಲ್ಪ ಮತ್ತು ತಾತ್ಕಾಲಿಕ, ಚಂಚಲ ಎಂದು ಅವನು ಕಂಡುಹಿಡಿದಿರುತ್ತಾನೆ. ಆಧ್ಯಾತ್ಮಿಕ ಆನಂದದ ಉನ್ನತತರ ಜ್ಞಾನದಿಂದ ಅವನು ಸಜ್ಜುಗೊಂಡಿರುತ್ತಾನೆ. ಅನುಭವಗಳ ಮೂಲಕ ಅವನ ಹೃದಯವು ಮೃದುವಾಗಿರುತ್ತದೆ, ಕರುಣೆಯಿಂದ ತುಂಬಿರುತ್ತದೆ. ಯಾವುದೇ ವಿವಕ್ಷೆಯಿಲ್ಲದೆ ಸಮಸ್ತ ಜೀವಕೋಟಿಯ ಅಭ್ಯುದಯಕ್ಕಾಗಿ ಅವನು ಶ್ರಮಿಸುತ್ತಾನೆ. ತಾನು ಸಂಗ್ರಹಿ

ಸಿಕೊಂಡ ಜ್ಞಾನವನ್ನು, ಅನುಭವದ ಫಲವನ್ನು ಇತರರೊಂದಿಗೆ ಹಂಚಿಕೊಳ್ಳಲು ಕಾತರನಾಗಿರುತ್ತಾನೆ.

ಹೀಗೆ ವೃತ್ತಿಗಳು ಮತ್ತು ಅವುಗಳ ಫಲವಾದ ಮನೋಧರ್ಮಗಳು ಮಾನವ ಜೀವನದ ವಿವಿಧ ಹಂತಗಳಿಗೆ ನಿಗದಿಗೊಂಡಿವೆ. ವ್ಯಕ್ತಿಯ ಜ್ಞಾನವನ್ನು ಸ್ಥಿರೀಕರಿಸಲು ಹೇಗೆ ಓದು ಮುಖ್ಯವೋ ಹಾಗೆಯೇ ವಿವೇಕವನ್ನು ಸ್ಥಿರೀಕರಿಸಲು ಆಚರಣೆ ಮುಖ್ಯ. ಜ್ಞಾನದ ಜೊತೆ ಜೊತೆಗೇ ವಿನಯ, ಗುರುಭಕ್ತಿ, ದೈವಭಕ್ತಿ, ಕುಂದದ ಶ್ರದ್ಧೆ ಈ ಸದ್ಗುಣಗಳನ್ನು ತರುಣರು ಬೆಳೆಸಿಕೊಳ್ಳಬೇಕು. ಅವನು ಸತ್ಕಾರ್ಯಗಳಲ್ಲಿ ನಿರತನಾಗಿರಬೇಕು, ಅವು ಕೊಡುವ ಸಂತೋಷಕ್ಕಾಗಿ ಮಾತ್ರವೇ ಸತ್ಕಾರ್ಯಗಳಲ್ಲಿ ತೊಡಗಿರಬೇಕು. ಯೌವನದಲ್ಲಿ ಧನ ಸಂಪಾದನೆಯಲ್ಲಿ ಹಾಗೂ ಸಮಾಜದ ಉತ್ತಮಿಕೆಯಲ್ಲಿ ಭಾವಹಿಸುವುದರ ಜೊತೆಗೆ ಸದ್ಗುಣಗಳನ್ನು ಬೆಳೆಸಿ ಕಾಪಾಡಲು, ನೀತಿ ನಿಯಮಗಳನ್ನು ಪಾಲಿಸಲು ಕೂಡ ಗಮನ ಕೊಡಬೇಕು. ತನ್ನ ಧಾರ್ಮಿಕ ನಡವಳಿಕೆ ಹಾಗೂ ಆಧ್ಯಾತ್ಮಿಕ ಸಾಧನೆಗಳನ್ನು ಸುಧಾರಿಸಲು ಕ್ರಮಗಳನ್ನು ಕೈಗೊಳ್ಳಬೇಕು. ಪ್ರಜ್ಞೆಯ ಎಲ್ಲಾ ಹಂತಗಳನ್ನು ಮೊದಲು ಶುದ್ಧಗೊಳಿಸಿ ಆಮೇಲೆ ಪವಿತ್ರ ಕಾರ್ಯಗಳಿಗೆ ತೊಡಗಿಸಬೇಕು.

ಮಧ್ಯವಯಸ್ಸಿನಲ್ಲಿ ಕುಟುಂಬವನ್ನೂ, ಸಮಾಜವನ್ನೂ ಪೋಷಿಸುವುದರ ಜೊತೆಗೆ ತನ್ನ ಮಕ್ಕಳಿಗೆ ಸ್ಫೂರ್ತಿದಾಯಕವಾದ ಮಾದರಿಯ ಜೀವನವನ್ನು ನಡೆಸಬೇಕು, ಸಮಾಜದ ಎದುರಿಗೆ ಆಚರಿಸಲು ಯೋಗ್ಯವಾದ ಉನ್ನತ ಆದರ್ಶಗಳನ್ನು ಹಿಡಿಯಬೇಕು. ಸಮಾಜವನ್ನು ಕಡೆಗಣಿಸಿ ಕುಟುಂಬಕ್ಕೆ ಮಾತ್ರವೇ ಲಾಭವಾಗುವಂತಹ ಕಾರ್ಯಗಳನ್ನು ಕೈಗೊಳ್ಳಬಾರದು, ಅದು ವಿಫಲವಾಗುವುದು ಖಂಡಿತ. ತನ್ನ ಕಾರ್ಯವನ್ನು ಶುದ್ಧೀಕರಿಸಿಕೊಂಡು, ಅದನ್ನು ಎಲ್ಲರ ಸೇವೆಗಾಗಿ ಉಪಯೋಗಿಸುವುದರಿಂದ ಬ್ರಹ್ಮತತ್ತ್ವವನ್ನು ಸಾಕ್ಷಾತ್ಕರಿಸಿಕೊಳ್ಳಬಹುದು. ಎಲ್ಲಿಯವರೆಗೆ ತಾನು ಹುಟ್ಟಿರುವ ಜಾತಿಯನ್ನು ಅವಲಂಬಿಸಿರುತ್ತಾನೋ ಅಥವಾ ತಾನು ಗಳಿಸಿಕೊಂಡ ಬುದ್ಧಿಯನ್ನು ಅಥವಾ ವೇದ ಜ್ಞಾನವನ್ನು ಅವಲಂಬಿಸಿರುತ್ತಾನೋ ಅಲ್ಲಿಯವರೆಗೆ ಬ್ರಹ್ಮವನ್ನು ಸಾಕ್ಷಾತ್ಕರಿಸಿಕೊಳ್ಳಲು ಸಾಧ್ಯವಾಗುವುದಿಲ್ಲ.

ಹುಟ್ಟಿದವನು ಸಾವನ್ನು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಪ್ರತಿಯೊಂದು ಕ್ಷಣವೂ ಅನೇಕರು ಹುಟ್ಟುತ್ತಾರೆ, ಅನೇಕರು ಸಾಯುತ್ತಾರೆ. ಆದರೆ ಮನುಷ್ಯನು ಸಾವನ್ನು ನಿವಾರಿಸುವುದು ಹೇಗೆ ಎಂದು ಕಂಡುಹಿಡಿಯಬೇಕು. ಮನುಷ್ಯನ ಕೇಂದ್ರ ಸತ್ವವಾಗಿರುವ ಆತ್ಮವು ಹುಟ್ಟುವುದಿಲ್ಲ. ಹುಟ್ಟು ಅದಕ್ಕೆ ಇಲ್ಲವಾದ್ದರಿಂದ ಅದು ಸಾಯುವುದೂ ಇಲ್ಲ. ಅದರ ಸಹವಾಸದಲ್ಲಿರುವ, ಬೆರೆತಿರುವ ದೇಹಕ್ಕೆ ಸಾವು

ಸಂಭವಿಸುತ್ತದೆ. ದೇಹವೇ ಮೂಲವಸ್ತು, ದೇಹವೇ ಸತ್ಯ ಎಂಬ ಭ್ರಮೆಯೇ ಮರಣ. ಆ ಮಿಥ್ಯೆಯ ಸೋಂಕು ಹತ್ತುವುದೇ ಮರಣದ ಪ್ರಕ್ರಿಯೆ. ಆ ಮಾಯೆಯಿಂದ ಬಿಡುಗಡೆ ಹೊಂದುವುದೇ ಅಮೃತತ್ವವನ್ನು ಸಂಪಾದಿಸುವಿಕೆ. ಕ್ಷಯಿಸುವುದು ದೇಹವೇ ಹೊರತು ಆತ್ಮವಲ್ಲ. ದೇಹವು ಪ್ರತಿಯೊಂದು ಕ್ಷಣದಲ್ಲೂ ಪರಿವರ್ತನೆ ಹೊಂದುತ್ತದೆ, ಕೊನೆಯ ಪರಿವರ್ತನೆ ಮರಣ. ಆಗ ಪರಿವರ್ತನ ರಹಿತವಾದ ಆತ್ಮವು ಉಳಿದುಕೊಳ್ಳುತ್ತದೆ. ಬದಲಾಗುತ್ತಿರುವ ದೇಹವನ್ನೇ ನಾನು ಎಂದು ನಂಬಿ ಹಾಗೆ ಉಲ್ಲೇಖಿಸುತ್ತಿರುವವನ ದೇಹದೊಂದಿಗೆ ಅದೂ ಸತ್ತು ಹೋಗುತ್ತದೆ, ನಿಜವಾದ ನಾನು ಮರಣರಹಿತವಾಗಿ ಉಳಿಯುತ್ತದೆ.

ಉತ್ಕಟವಾದ ಉದ್ಧಾರ ಪ್ರಯತ್ನ ಹಾಗೂ ತನ್ನ ನಿಜವನ್ನು ಕುರಿತ ನಿರ್ಭೀತ ವಿಚಾರ ಇವು ಅಧಿಕಾಧಿಕವಾದಂತೆ, ದೇಹಾತ್ಮ ಭಾವನೆಯು ಹೊರಟುಹೋಗುತ್ತದೆ. ಹುಣಿಸೆಯ ಹಣ್ಣನ್ನು ಗಮನಿಸಿ, ಇನ್ನೂ ಮಾಗದಿದ್ದಾಗ ತೊಗಟೆಯಿಂದ ಹಣ್ಣನ್ನು, ಬೀಜವನ್ನು ಬೇರ್ಪಡಿಸುವುದು ಸುಲಭವಲ್ಲ. ಹಾಗೆಯೇ ಇಂದ್ರಿಯ ಕಾಮನೆಗಳಿಗೆ ಅಂಟಿಕೊಂಡಿರುವವರು, ದೇಹವನ್ನು ಪೋಷಿಸುವವರು ಆತ್ಮದ ಅರಿವನ್ನು ಗಳಿಸಲಾರರು. ಹುಣಿಸೆಕಾಯಿ ಹಣ್ಣಾದಾಗ ಸಿಪ್ಪೆಯನ್ನು ಸುಲಭವಾಗಿ ಒಡೆಯಬಹುದು, ತಿರುಳು ಬೀಜದಿಂದ ಬೇರೆಯಾಗುತ್ತದೆ, ಸ್ವಲ್ಪವೂ ಕಷ್ಟವಿಲ್ಲದೆ ಅದನ್ನು ಬೇರ್ಪಡಿಸಬಹುದು. ವಿಚಾರ ಮತ್ತು ನಿಸ್ವಾರ್ಥ ಚಟುವಟಿಕೆ ಪ್ರಜ್ಞೆಯನ್ನು ಪಕ್ವಗೊಳಿಸುತ್ತದೆ. ಆಗ ಆತ್ಮವನ್ನು ಸುಲಭವಾಗಿ, ಸ್ಪಷ್ಟವಾಗಿ, ಶುದ್ಧವಾಗಿ ದೇಹದಿಂದ ಬೇರ್ಪಡಿಸಬಹುದು.

ದೇಹದಲ್ಲಿ ಆತ್ಮವನ್ನು ಮರೆಮಾಡಿರುವ ಐದು ಕೋಶಗಳಿವೆ. ಇವನ್ನು ಮೂರು ವರ್ಗಗಳಾಗಿ ಗುಂಪು ಮಾಡಿದೆ. ಸ್ಥೂಲ, ಸೂಕ್ಷ್ಮ ಮತ್ತು ಕಾರಣ. ಅನ್ನಮಯ ಕೋಶ (ಮಾಂಸ, ರಕ್ತ, ಮೂಳೆ ಇತ್ಯಾದಿ) ಮತ್ತು ಪ್ರಾಣಮಯಕೋಶ (ಉಸಿರು) ಸ್ಥೂಲದೇಹಕ್ಕೆ ಸೇರುತ್ತವೆ. ಈ ಎರಡು ಕೋಶಗಳಿರುವ ಸ್ಥೂಲದೇಹವು ಬಿದ್ದಾಗ ಅಥವಾ ಕ್ಷಯಿಸಿದಾಗ ದೇಹವೂ ಬಿದ್ದು ಹೋಗುತ್ತದೆ.

ಸೂಕ್ಷ್ಮ ಎಂಬ ಪದಕ್ಕೆ ಸಂಸ್ಕೃತದಲ್ಲಿ ಅತಿ ಸಣ್ಣ ಎಂಬ ಸಾಮಾನ್ಯ ಅರ್ಥವಿದೆ. ವಿಸ್ತಾರವಾಗುವಂಥದು ಎಂಬ ಇನ್ನೊಂದು ಅರ್ಥವೂ ಅದಕ್ಕಿದೆ. ವಾಯುವು ನೀರಿಗಿಂತ ಹೆಚ್ಚಾಗಿ ಹರಡುತ್ತದೆ; ಆಕಾಶವು ವಾಯುವಿನಿಂದ ವ್ಯಾಪಕವಾದದ್ದು. ಮುಕ್ತಾತ್ಮದ ವೈಶಾಲಕ್ಕೆ ಹೋಲಿಸಿದರೆ ಆಕಾಶವು ಸ್ಥೂಲವೆನಿಸಿಬಿಡುತ್ತದೆ ! ಆವಿಯು ನೀರಿಗಿಂತ ಸೂಕ್ಷ್ಮ, ಒಂದು ಮಂಜುಗಡ್ಡೆಯ ತುಂಡು ಅಥವಾ ಕರ್ಪೂರದ ತುಂಡು

ಸ್ಥೂಲವೆಂಬಂತೆ ಕಾಣಿಸಿದರೂ ಕಾಯಿಸಿದಾಗ ಅಥವಾ ಹೊತ್ತಿಸಿದಾಗ ಕರಗಿ ಸೂಕ್ಷ್ಮವಾಗುತ್ತದೆ.

ಈ ಜಗತ್ತಿನ ನಿಯಮ, ಕಾಣಿಸುವುದು ಕಾಣಿಸದುದಕ್ಕೆ ಕಾರಣವಾಗುತ್ತದೆ, ವ್ಯಕ್ತವು ಅವ್ಯಕ್ತವನ್ನು ವಿವರಿಸುತ್ತದೆ ಎನ್ನುವುದು. ಆದರೆ ಆತ್ಮದ ಕ್ಷೇತ್ರದಲ್ಲಿನ ನಿಯಮವೇ ಬೇರೆ. ಸುಪ್ತವಾದ ಆತ್ವವು ವ್ಯಕ್ತವಾದ ಜಗತ್ತಿಗೆ ಕಾರಣವಾಗುತ್ತದೆ. ಆಗುತ್ತಿರುವುದರ ಹಿಂದೆ ಆಗಿರುವುದು ಇದೆ. ಕೊನೆಯದಾಗಿ, ಆಗುವಿಕೆಯು ಆಗಿರುವುದರಲ್ಲಿ ಲೀನವಾಗಿಬಿಡುತ್ತದೆ. ವ್ಯಕ್ತವನ್ನು ಅವ್ಯಕ್ತವು ಹೀರಿಕೊಂಡುಬಿಡುತ್ತದೆ. ಹಸುವಿನಿಂದ ಬರುವ ಹಾಲಿನಂತೆ, ಪರಮಪುರುಷನಿಂದ ಮಾಯಾಶಕ್ತಿಯು ಹರಿಯುತ್ತದೆ. ಅದೇ ಪಂಚಕೋಶ ರಚಿತ ವಿಶ್ವ (ಪ್ರಕೃತಿ). ವಿಶ್ವವೂ ಒಂದು ಸಂಯುಕ್ತ, ಹಾಲು ಹೇಗೆ ಕೆನೆ, ಮೊಸರು, ಬೆಣ್ಣೆಗಳ ಸಂಯುಕ್ತವಾಗಿದೆಯೋ ಹಾಗೆ. ಶಾಖ ಮತ್ತು ತಂಪುಗಳ ಕ್ರಿಯೆಯಿಂದ, ಕೆಲವು ಹನಿ ಹುಳಿ ಬೆರೆಸಿ, ಆಮೇಲೆ ಕಡೆಯುವುದರಿಂದ ಅವುಗಳನ್ನು ಪಡೆಯಬಹುದು. ಕಡೆಯುವುದರಿಂದ ಬೆಣ್ಣೆಯನ್ನು ಹಾಲಿನಿಂದ ಬೇರ್ಪಡಿಸಬಹುದು. ಹಾಗೆಯೇ ವಿಶ್ವ ಪ್ರಕ್ರಿಯೆಗಳಿಂದ ಶೀತೋಷ್ಣಗಳ ಆಘಾತ ಗಳಿಂದ, ಪಂಚಭೂತಗಳು ಪೃಥ್ವಿ, ಅಪ್, ಅಗ್ನಿ, ವಾಯು, ಆಕಾಶ ಪ್ರತ್ಯೇಕವಾದುವು. ಭೂಮಿಯೆಂಬ ಈ ಬೆಣ್ಣೆಯುಂಡೆಯು ಕಡೆತದ ಪರಿಣಾಮವಾಗಿ ಮೂಡಿ ಬಂದಿತು. ಯಾವನೇ ವ್ಯಕ್ತಿಗೆ ಅಥವಾ ವಸ್ತುವಿಗೆ ಗುಣತ್ರಯಗಳಲ್ಲಿ ಒಂದು ಪ್ರಧಾನ ಲಕ್ಷಣವಾಗಿದ್ದರೆ, ಅಂಥವನು ಎಂದು ನಿರ್ಣಯಿಸಿಬಿಡುತ್ತೇವೆ. ಹಾಗೆಯೇ ಸೃಷ್ಟಿಗೊಂಡ ವಸ್ತುವಿನಲ್ಲಿ ಯಾವ ದ್ರವ್ಯವು ಪ್ರಧಾನವಾಗಿದೆಯೋ ಅದು ತನ್ನ ಹೆಸರನ್ನು ಆ ವಸ್ತುವಿಗೆ ಕೊಡುತ್ತದೆ. ನಾವು ಜೀವಿಸಿರುವ ಈ ನೆಲವನ್ನು ಭೂಮಿ ಎಂದು ಕರೆಯಲು ಇದೇ ಕಾರಣ. ಆಕಾಶದಲ್ಲಿ ನೀರು ಪ್ರಧಾನವಾಗಿರುವ ವಲಯಗಳನ್ನು ಬುವರ್ಲೋಕ ಮತ್ತು ಸ್ವರ್ಲೋಕಗಳೆಂದು ಕರೆಯುತ್ತಾರೆ. ವಸ್ತುಗಳು ಅಲ್ಲಿ ಪ್ರವಾಹಗಳಾಗಿ ಹೊಳೆಗಳಾಗಿ ಹರಿಯುತ್ತವೆ.

ಅಡಕವಾಗಿ ಹೇಳಬೇಕೆಂದರೆ, ಪಂಚಭೂತ ನಿರ್ಮಿತವಾದ ಈ ವಿಶ್ವವು ಭಗವಂತನ ಮೇಲೆ ಹೇರಿದ ಹೇರಿಕೆ. ಅಸತ್ಯವಾದ ವ್ಯಕ್ತಿಗತ ಆತ್ಮವೂ ಪಂಚಭೂತಗಳು ನಿತ್ಯವಾದುದರ ಮೇಲಿನ ಹೇರಿಕೆಗಳು. ಅಸತ್ಯದ ಮೂಲಕ ನೋಡಿದ ಸತ್ಯವಾದ ದೇವರೇ ಪ್ರಕೃತಿಯಾಗಿ ತೋರುತ್ತಾನೆ. ಇದು ಈ ನಿತ್ಯ ಪರಿವರ್ತನಶೀಲ ವೈವಿಧ್ಯವು ಸತ್ಯದ ವಿಕೃತ ಸ್ವರೂಪವಾಗಿದೆ. ದೋಷವಿರುವುದು ಪ್ರತಿಫಲಿಸುತ್ತಿರುವ ಕನ್ನಡಿಯಲ್ಲಿ, ಗ್ರಹಿಸುವ ಮನಸ್ಸಿನಲ್ಲಿ, ಕಲ್ಪಿಸಿಕೊಳ್ಳುವ ಮಿದುಳಿನಲ್ಲಿ. ಕನ್ನಡಿಯು ಸತ್ಯವೆಂದು ಮುಂದಿಡುವುದಕ್ಕೆ ಪ್ರಾಮಾಣ್ಯವಿಲ್ಲ. ಕನ್ನಡಿಗೆ ಧೂಳು ಮೆತ್ತಿರಬಹುದು ಅಥವಾ ಅದರ ಮುಖವು ಸಮನಾಗಿರದೆ ಹೋಗಬಹುದು. ಭಗವಂತನಿಗೆ

ಮಾಯೆಯ ಬಂಧನವಿಲ್ಲ. ಮಾಯಾವಶನಾಗಬೇಕಾದ ಉದ್ದೇಶವಾಗಲಿ, ಅಗತ್ಯ ವಾಗಲಿ ಅವನಿಗಿಲ್ಲ. ಅಥವಾ ತಾನು ಮಾಯಾವಶನಾಗಬೇಕೆಂದು ಅವನು ಸಂಕಲ್ಪಿಸುವುದೂ ಇಲ್ಲ. ಆದರೆ ಮನುಷ್ಯನು ತನ್ನ ಅಜ್ಞಾನದಲ್ಲಿ, ಅಸ್ತಿತ್ವದಲ್ಲಿರದ ವಸ್ತುಗಳನ್ನು ನೋಡುತ್ತಾನೆ. ತಾನು ನೋಡುತ್ತಿರುವಂತೆಯೇ ಅವು ಇವೆ ಎಂದು ನಂಬುತ್ತಾನೆ. ಅವನ ಈ ದೌರ್ಬಲ್ಯವನ್ನು ಅಭ್ಯಾಸ ಎಂದು ಕರೆಯುತ್ತಾರೆ.

ಭಗವಂತನು ಪ್ರಕೃತಿಯಾಗಿ ಪ್ರತಿಫಲಿಸಿದಾಗ, ಪ್ರತಿಬಿಂಬವು ಮಾಯೆಯಾಗುತ್ತದೆ. ಹಾಲು ಮೊಸರಾಗುವ ಹಾಗೆ ಭಗವಂತನು ನಿತ್ಯ ಪರಿವರ್ತನ ಶೀಲವಾದ ಜಗತ್ತಾಗುತ್ತಾನೆ. ಅವನ ಇಚ್ಛೆಯು ಅವನ ಮೇಲೆ ಈ ಅಸತ್ಯವಾದ ವೈವಿಧ್ಯವನ್ನು ಉಂಟುಮಾಡುತ್ತದೆ. ಅವನೇ ತನ್ನ ಇಚ್ಛೆಯಿಂದ ಅದನ್ನು ಕೊನೆಗೊಳಿಸಬಹುದು. ಅವನೇ ಮಾಯೆಯಪ್ರಭು.

ಭಗವಂತನು ಸರ್ವವ್ಯಾಪಕ, ಸರ್ವಶಕ್ತ, ಪರಮಾತ್ಮ. ಆತ್ಮ ಮತ್ತು ಪ್ರಕೃತಿಗಳಲ್ಲಿ ಪ್ರಕೃತಿಯ ಉದ್ದೇಶ ಮಾನವನ ಇಚ್ಛೆಗಳನ್ನು ಪೂರೈಸುವುದು. ಭಗವಂತನಿಗೆ ಅಪೇಕ್ಷೆಗಳಾಗಲಿ ಇಚ್ಛೆಯಾಗಲಿ ಇಲ್ಲ. ಅವನೇ ಅತ್ಯಂತ ಪರಿಪೂರ್ಣ, ಮತ್ತು ಅತ್ಯುನ್ನತವಾದ ಸಿದ್ಧಿ. ಪ್ರತಿಯೊಬ್ಬ ಜೀವಿಯ ಆನಂದವು, ಪ್ರತಿಯೊಂದು ಜೀವಿಗೂ ಭಗವಂತನಿಂದ ತನಗೆ ತಾನೆ ಹರಿಯುತ್ತದೆ. ಗೀತೆಯಲ್ಲಿ ಅವನು ಅರ್ಜುನನಿಗೆ ಹೇಳಿದ ಮಾತುಗಳು: "ನಾನು ನಿರ್ವಹಿಸಬೇಕಾದ ಕರ್ತವ್ಯ ಯಾವುದೂ ಇಲ್ಲ. ಪಾರ್ಥ, ಮೂರು ಲೋಕಗಳಲ್ಲಿಯೂ ಅಂಥದೊಂದಿಲ್ಲ." ಅವನು ಕರ್ತವ್ಯ ಗಳನ್ನು ಸೃಷ್ಟಿಸಿರುವುದೇ ಸಕಲ ಜೀವಿಗಳ ಪ್ರಜ್ಞೆಯನ್ನು ಪೋಷಿಸುವುದಕ್ಕೋಸ್ಕರ ವಾಗಿ. ಅವನಿಗೆ ಯಾವ ಕರ್ಮವೂ ಇಲ್ಲ, ಕರ್ತವ್ಯವೂ ಇಲ್ಲ. ಅವನು ಪ್ರತಿ ಯೊಂದು ಕರ್ಮಕ್ಕೂ ಫಲವನ್ನು ಕೊಡುತ್ತಾನೆ. ಅವನಿಲ್ಲದೆ ಯಾವ ಕರ್ಮವೂ ಫಲಿಸಲಾರದು! ಯಾವ ಕೆಲಸಕ್ಕೆ ಏನು ಫಲ ಇರಬೇಕು ಎಂದು ಅವನು ನಿರ್ಧರಿಸುತ್ತಾನೆ.

ಅಧ್ಯಾಯ ೨೩

# ಪೂಜಾ ವಿಧಾನಗಳು

ವೇದವು ಮನುಷ್ಯನು ಕಂಡುಹಿಡಿದ ಅತ್ಯಂತ ಪ್ರಾಚೀನ ಹಾಗೂ ಅತ್ಯಂತ ಶಾಶ್ವತ ವಾದ ಜ್ಞಾನ (ಅಥವಾ ಶಾಸ್ತ್ರ) ಅಂದರೆ, ಮನುಷ್ಯನು ಅದನ್ನು ಆವಿಷ್ಕರಿಸಲಿಲ್ಲ; ಆತ್ಮದ ಗಂಭೀರ ನಿಶ್ಶಬ್ದದಲ್ಲಿ ಅದನ್ನು ಅವನು ಆಲಿಸಿ ಸಂಗ್ರಹಿಸಿಕೊಂಡನು. ಆದ್ದ ರಿಂದ ವೇದವು ಇಂದ್ರಿಯಗಳು ಮುಟ್ಟಲಾರದ, ಲೌಕಿಕ ಪ್ರಪಂಚಕ್ಕೆ ಸಂಬಂಧಿಸದ ಸತ್ಯದ ದರ್ಶನದತ್ತ ಒಯ್ಯಬಲ್ಲುದು. ಅದು ಭೌತಾತೀತವಾದ್ದರಿಂದ ಮಾನವ ತರ್ಕದ ಅಳವಿಗೆ ನಿಲುಕದು. ಆದ್ದರಿಂದ ಅದನ್ನು ಪರಮಂ ವ್ಯೋಮ ಮಹಾನ್ ರಕ್ಷಕ, ಅವಿನಾಶಿಯಾದ ತತ್ತ್ವ, ಸತ್ಯ ಎಂದು ವರ್ಣಿಸಿದ್ದಾರೆ. ಈ ಪದ್ಯಗಳು ಋಗ್ವೇದವೇ ಮೊದಲಾದ ನಾಲ್ಕೂ ವೇದಗಳನ್ನು ಸೂಚಿಸುತ್ತವೆ.

ವೇದ ಎಂಬ ಮಾತು ಮೂಲತಃ ಪರಮೋನ್ನತ ಪ್ರಭು ಪರಮೇಶ್ವರನಿಗೆ ಸರ್ವಜ್ಞ ನಿಗೆ ಅನ್ವಯವಾಗುತ್ತಿತ್ತು. ವೇತ್ತಿ ಇತಿ ವೇದಃ, ಯಾರು ತಿಳಿದುಕೊಂಡಿರುವನೋ ಅವನು ವೇದ. ಆಮೇಲೆ ಅದನ್ನು ಅರಿಯುವ ತತ್ತ್ವಕ್ಕೆ ಅನ್ವಯಿಸಲಾಯಿತು. ವೇದಯತಿ ಇತಿ ವೇದಃ, ಯಾವುದು ತಿಳಿಸಿಕೊಡುತ್ತದೆಯೋ ಅದು ವೇದ. ಋಗ್ ಮತ್ತು ಇತರ ವೇದಗಳು ಹೀಗೆ ಸಕಲವನ್ನೂ ತಿಳಿದುಕೊಂಡಿರುವ ಲಕ್ಷಣಗಳನ್ನು ಹೊಂದಿವೆ. ಆದ್ದರಿಂದ ಈ ಅರ್ಥವೂ ಸೂಕ್ತವಾದದ್ದು. ಮುಂದೆ ಈ ಪದವನ್ನು ವೇದಗಳಿಗನುಸಾರವಾದ ಕರ್ಮಗಳಿಗೆ ಅನ್ವಯಿಸಲಾಯಿತು. ಅಂದರೆ, ಧರ್ಮ ಅರ್ಥ ಕಾಮ ಮೋಕ್ಷ ಸಾಧಕವಾದ ಕರ್ಮಗಳಿಗೆ ಆ ಪದವನ್ನು ಹೇಳಲಾಯಿತು.

ಪರಮೇಶ್ವರನು ಎಲ್ಲವನ್ನೂ ನೋಡುತ್ತಾನೆ; ಎಲ್ಲ ವೇದಮಂತ್ರಗಳ ಲಕ್ಷ್ಯವೂ ಅವನೇ. ವೇದಗಳು ಭಗವಂತನ ದರ್ಶನ ಮಾಡಲು ಮನುಷ್ಯನಿಗೆ ನೆರವಾಗುತ್ತವೆ. ಆ ದರ್ಶನವನ್ನು ಪಡೆದವರು ಋಷಿಗಳು. ಅವರು ವೇದಗಳಿಂದ ಮಾರ್ಗದರ್ಶನ ಪಡೆದರು. ಅನೇಕಾನೇಕ ಸ್ತೋತ್ರಗಳು, ಶ್ಲೋಕಗಳು ಮತ್ತು ಘೋಷಣೆಗಳು ಅವ ರಿಂದ ಮೂಡಿದುವು. ಇದರ ಫಲವಾಗಿ ಪರಮಪುರುಷನನ್ನೇ ಬ್ರಹ್ಮಸೂತ್ರದಲ್ಲಿ ಮಹರ್ಷಿ ಎಂದು ಉಲ್ಲೇಖಿಸಿದೆ. ಶಿವನ ೧೦೮ ನಾಮಗಳಲ್ಲಿ ಮಹರ್ಷಿ ಮತ್ತು ಮುಖ್ಯರ್ಷಿ ಎಂಬುದನ್ನು ನೋಡುತ್ತೇವೆ. ಅದೇ ಕಾರಣಕ್ಕಾಗಿಯೇ ವೇದವನ್ನು ಮೂರ್ತೀಕರಿಸಿ, ಅದನ್ನೂ ಋಷಿ ಎಂದು ಕರೆಯಲಾಗಿದೆ. ಭಗವಂತನನ್ನೂ

ವೇದಗಳನ್ನೂ ಸೂಚಿಸುವ ಇನ್ನೊಂದು ಪದ ಬ್ರಹ್ಮನ್ ಎಂಬುದು. ಆದ್ದರಿಂದ ಬ್ರಹ್ಮವನ್ನಲ್ಲದೆ ಬೇರೇನನ್ನೂ ಪಡೆಯಲಿಚ್ಛಿಸದ ಎಲ್ಲ ಕರ್ಮಗಳೂ ಬ್ರಹ್ಮಯಜ್ಞ ಎನಿಸುತ್ತವೆ. ಋಷಿಯಜ್ಞ ಎನ್ನುವುದು ಒಂದು ಯಾಗ ಪ್ರಕ್ರಿಯೆ. ಫಲವನ್ನುಗಳಿಸುವ ಯಾವುದೇ ಅಪೇಕ್ಷೆಯಿಲ್ಲದೆ ಸತ್ಯದರ್ಶನಕ್ಕಾಗಿ ಕೈಗೊಳ್ಳುವ ಕರ್ಮ ಅದು.

ಯಾಗಗಳನ್ನು ಮಾಡುವಾಗ ಸ್ವಾಹಾ ಎಂಬ ಪದವನ್ನು ಬಳಸಲಾಗುತ್ತದೆ. ಯಜ್ಞಗಳು ಶುದ್ಧ, ಮಂಗಳಕರ, ಪವಿತ್ರ ಕರ್ಮಗಳು. ಹವಿಸ್ಸನ್ನು ಅರ್ಪಿಸುವಾಗ ಅಥವಾ ವೇದ ಪಠಣ ಮಾಡುವಾಗ ಉಪಯೋಗಿಸುವ ಈ ಸ್ವಾಹಾ ಎಂಬ ಶಬ್ದಕ್ಕೆ ಬಹಳ ಮಹತ್ವವಿದೆ. ಕೇಶವಾಯ ಸ್ವಾಹಾ, ಪ್ರಾಣಾಯ ಸ್ವಾಹಾ, ಇಂದ್ರಾಯ ಸ್ವಾಹಾ— ಹೀಗೆ ಅದನ್ನು ಪ್ರಯೋಗಿಸಲಾಗುತ್ತದೆ. "ಇದನ್ನು ಸೂಕ್ತವಾಗಿ ಸೇವಿಸಲಿ. ಈ ಪವಿತ್ರಾಗ್ನಿಯಲ್ಲಿ ಅರ್ಪಿಸುತ್ತಿರುವ ಈ ವಸ್ತುಗಳನ್ನು ಪೂರ್ತಿಯಾಗಿ ಸೇವಿಸಲಿ. ಈ ಹವಿಸ್ಸು ಯಾರಿಗೆ ಉದ್ದೇಶಿತವಾಗಿದೆಯೋ ಅವರಿಗೆ, ಕೇಶವ, ಪ್ರಾಣ, ಇಂದ್ರ ಇತ್ಯಾದಿ ಅಗ್ನಿಯ ಮೂಲಕ ತಲುಪಲಿ". ಅನಿವಾರ್ಯವಾದುದನ್ನು ಕುರಿತು ಪ್ರಾರ್ಥನೆ ಮಾಡಬೇಕಾದ ಅವಶ್ಯಕತೆಯೇನಿದೆ ಎಂದು ಸಂದೇಹವುಂಟಾಗಬಹುದು. ತನಗೆ ಸಿಕ್ಕಿದ ಎಲ್ಲವನ್ನೂ ಸುಡುವುದು ಬೆಂಕಿಯ ಸ್ವಭಾವವೇ ಆಗಿದೆ. ಆದರೆ ಶಾಸ್ತ್ರಗಳು ಇಲ್ಲಿ ಕೊಡುವ ಅರ್ಥ ಬೇರೆಯೇ. ಕಾಳಿದಾಸನು ಕುಮಾರಸಂಭವ ಕಾವ್ಯದಲ್ಲಿ ಹಿಮಾಲಯವನ್ನು ದೇವತಾತ್ಮಾ ಎಂದು ವರ್ಣಿಸುತ್ತಾನೆ. ದಿವ್ಯತೆಯೇ ಮೂರ್ತಿವೆತ್ತವನು ಎಂದು ಅದರರ್ಥ. ಪ್ರತಿಯೊಂದು ವಸ್ತುವೂ ಜೀವಿಯೂ ಹೊಂದಿರುವ ದಿವ್ಯದೇಹ ಹಾಗೂ ಜಡ ದೇಹಗಳ ನಡುವೆ ಶಾಸ್ತ್ರಗಳು ವ್ಯತ್ಯಾಸವನ್ನು ಕಲ್ಪಿಸುತ್ತವೆ. ದಿವ್ಯದೇಹವನ್ನು ಇಂದ್ರಿಯಗಳು ಗುರುತಿಸಲಾರವು. ಹವಿಸ್ಸನ್ನು ಅರ್ಪಿಸಿದಾಗ ಅದು ಪವಿತ್ರವಾಗುತ್ತದೆ. ಆಹುತಿಯು ಹವಿಸ್ಸಾಗಿ ಮಂಗಳಕರವಾಗುತ್ತದೆ.

ಆಹುತಿಯನ್ನು ವೇದದಲ್ಲಿ ವರ್ಣಿಸಿರುವುದು ಹೀಗೆ: ಸ್ವೀಕರಣದ ಮೂಲಕ ಅರ್ಪಣೆಯೂ ಅರ್ಪಿತನೂ ಒಂದಾಗುತ್ತಾರೆ. (ಅತ್ಥ ಮತ್ತು ಆದ್ಯ). ಇಲ್ಲಿ ಅರ್ಪಿತನು, ಸ್ವೀಕರಿಸುವವನು ಯಾರು? ಅವನೇ ಅಗ್ನಿ, ಬೆಂಕಿಯಲ್ಲಿ ಸೂರ್ಯನಲ್ಲಿ ಪ್ರಾಣವಾಯುವಿನ ಬಿಸುಪಿನಲ್ಲಿ ಅಡಗಿರುವ ದಿವ್ಯ ಶಕ್ತಿಯಾದ ಅಗ್ನಿ. ಸೂಕ್ತ ಮಂತ್ರಗಳನ್ನು ಉಚ್ಚರಿಸಿ ಸ್ವಾಹಾಕಾರದ ಮೂಲಕ ಅಗ್ನಿಯಲ್ಲಿ ದ್ರವ್ಯಗಳನ್ನು ಅರ್ಪಣೆ ಮಾಡಿದಾಗ, ಅದು ಕೇವಲ ಉದ್ಗಾರವಾಗಿರುವುದಿಲ್ಲ, ಅದು ಪರಿಹಾರಕ ಮಂತ್ರವಾಗುತ್ತದೆ. ಅದು ಆಚರಣೆಯು ಪ್ರತಿನಿಧಿಸುವ ಪ್ರಾರ್ಥನೆಯ ಈಡೇರಿಕೆಯಾಗುತ್ತದೆ.

ವೇದವನ್ನು ಛಂದಸ್ ಎಂದೂ ಕರೆಯಲಾಗುತ್ತದೆ. ಸಂತೋಷಕರವಾದ, ಉಲ್ಲಾಸ ಕರವಾದ ಎಂದು ಅದರರ್ಥ. ಬಲಿಷ್ಠ, ಮಹತ್ವಪೂರ್ಣ, ರಕ್ಷಿತ ಎಂಬ ಪೂರಕ ಅರ್ಥಗಳೂ ಅದಕ್ಕಿವೆ. ಎಲ್ಲ ಗುಣ–ಲಕ್ಷಣಗಳನ್ನು ವೇದಗಳಲ್ಲಿ ನೋಡಬಹುದಾದ್ದ ರಿಂದ ಈ ಹೆಸರು ವಿಹಿತವಾಗಿದೆ. ವೇದಗಳಲ್ಲಿ ಹೇಳಿರುವ ಆಚರಣೆಗಳು ಭಾಗವಹಿ ಸಿದವರಿಗೆ ಸಂತೋಷವನ್ನು ಕೊಡುವುದು ಮಾತ್ರವಲ್ಲ, ಇಡೀ ಜಗತ್ತಿಗೆ, ಜಗತ್ತಿನ ಆಚೆಗೂ ಸಂತೋಷವನ್ನು ಪಸರಿಸುತ್ತವೆ. ಸಕಲ ಆನಂದದ ಮೂಲವಾದ ಪರ ಮೋನ್ನತ ಪ್ರಭುವನ್ನು ಶಾಸ್ತ್ರಗಳಲ್ಲಿ ಯಜ್ಞಾಂಗ (ಯಜ್ಞಾಚರಣೆಗಳನ್ನು ಅಂಗಾಂಗ ಗಳಾಗಿ ಉಳ್ಳವನು), ಯಜ್ಞವಾಹನ (ಯಜ್ಞವನ್ನೇ ವಾಹನವಾಗಿ ಉಳ್ಳವನು), ಎಂದು ವರ್ಣಿಸಲಾಗಿದೆ. ಭಗವತ್ತತ್ವವೂ ಆಕಾರ ತಳೆದಾಗ ಮೊದಲನೆಯ ಅಭಿವ್ಯಕ್ತಿ ಹಿರಣ್ಯಗರ್ಭ. ಇವನೂ ಆನಂದದ ಸಾಕಾರವೇ. ಸೌಂದರ್ಯದ ರೆಕ್ಕೆಗಳುಳ್ಳ ಪಕ್ಷಿ ಗರುಡನೇ ಅವನಿಗೆ ವಾಹನ. ಭಗವಂತನಿಗೆ ವೃಷರಥ ಎಂದೂ ಹೆಸರು. ಧರ್ಮದ ಸಂಕೇತವಾದ ವೃಷಭ ಅವನಿಗೆ ವಾಹನ. ಆ ಕಾರಣದಿಂದಲೇ ವಿಷ್ಣುದೇವಾಲಯಗಳ ಮುಂದೆ ಗರುಡನನ್ನು ಕೆತ್ತಿಯೋ ವಿಗ್ರಹವಾಗಿಯೋ ಇಟ್ಟಿ ರುತ್ತಾರೆ. ಶಿವದೇವಾಲಯಗಳ ಮುಂದೆ ನಂದಿ ಅಥವಾ ವೃಷಭ ವಿಗ್ರಹವನ್ನು ಇಟ್ಟಿರುತ್ತಾರೆ.

ಛ ಅಥವಾ ಛಾದನ ಎಂಬ ಧಾತುವಿಗೆ ವೇದದ ಇನ್ನೊಂದು ಬಹು ಮುಖ್ಯವಾದ ಅರ್ಥವಿದೆ. ರಕ್ಷಿಸುವುದು, ಪೋಷಿಸುವುದು, ಯೋಗಕ್ಷೇಮ ಪಾಲನೆ, ಪ್ರಾಪಂಚಿಕ ವ್ಯವಹಾರದಲ್ಲಿ ಕೊನೆಯೇ ಇಲ್ಲದೆ ಮುಳುಗಿ ಹೋಗಿರುವವರ ಅಂತಿಮ ಬಿಡುಗಡೆ ಎಂಬ ಅರ್ಥ ಅದು. ಮನುಷ್ಯರು ಲಾಭವನ್ನು ಮಾತ್ರವೇ ಉದ್ದೇಶವಾಗಿಟ್ಟು ಕೊಂಡು ಕಾರ್ಯ ಚಟುಟಿಕೆಗಳಲ್ಲಿ ಮಗ್ನವಾಗಿರುತ್ತಾರೆ. ಅದೇ ಸಮಯದಲ್ಲೇ ಅವರನ್ನು ಧಾರ್ಮಿಕ ಸ್ತ್ರೀ ಪುರಷರನ್ನಾಗಿ ರೂಪಿಸಬೇಕಾಗಿರುತ್ತದೆ. ಹಣ್ಣು ಮತ್ತು ನೆರಳುಗಳನ್ನು ಕೊಡುವಂತೆ ಜೀವನ ವೃಕ್ಷವನ್ನು ಕಾಪಾಡಬೇಕಾಗಿದೆ. ಕರ್ಮಪ್ರೇಮಿ ಗಳನ್ನು ಅವರು ಅಧಾರ್ಮಿಕ ಕೃತ್ಯಗಳಲ್ಲಿ ತೊಡಗದಂತೆ; ಜ್ಞಾನಾನ್ವೇಷಕರು ಭೋಗವಿಲಾಸ ಇಂದ್ರಿಯಗಳ ಬೆನ್ನು ಹತ್ತದಂತೆ ವೇದವು ರಕ್ಷಿಸಬೇಕಾಗಿದೆ. ವೇದವು ದಾರಿತೋರಿಸುತ್ತದೆ ಹಾಗೂ ರಕ್ಷಿಸುತ್ತದೆ. ಆದ್ದರಿಂದ ಒಟ್ಟಿನಲ್ಲಿ ವೇದ ಮಂತ್ರಗಳೆಲ್ಲವನ್ನೂ ಛಂದಸ್ಸು ಎಂದು ಕರೆಯಲಾಗುತ್ತದೆ. ತಮ್ಮ ರಕ್ಷಕ ಪಾತ್ರದ ಮೂಲಕ ತಮ್ಮನ್ನು ಅವಲಂಬಿಸುವವರೆಲ್ಲರನ್ನು ಅವು ಕಾಪಾಡುತ್ತವೆ. ಛಾದನಾತ್ ಛಂದಾಸಿ, ಹೊದಿಸಿ ರಕ್ಷಿಸುವುದರಿಂದ ಅವು ಛಂದಸ್ ಆಗುತ್ತವೆ.

ವೇದಾಚರಣೆಗಳು ಅಂದರೆ ಯಜ್ಞವನ್ನು ಕುರಿತ ಒಂದು ಕಥೆಯಿದೆ. ಒಮ್ಮೆ ಯಜ್ಞವು ಒಂದು ಕಪ್ಪು ಜಿಂಕೆಯ ರೂಪವನ್ನು ಧರಿಸಿ ದೇವತೆಗಳ ಬಳಿಯಿಂದ ಓಡಿ

ಹೋಯಿತು; ದೇವತೆಗಳು ಅದನ್ನು ಹುಡುಕಿಕೊಂಡು ಹೋದರು. ಕೊನೆಗೆ ಆ ಜಿಂಕೆಯ ಚರ್ಮವು ಅವರಿಗೆ ದೊರಕಿತು. ಆ ಚರ್ಮವೇ ಯಜ್ಞ, ಪವಿತ್ರ ವಿಧಿಯ ಸಂಕೇತವಾಯಿತು. ಜಿಂಕೆಯ ಚರ್ಮದ ಮೇಲಿನ ಬಿಳುಪು, ಕಪ್ಪು, ಮತ್ತು ಕಂದು ಬಣ್ಣಗಳು ಋಗ್, ಯಜುರ್ ಮತ್ತು ಸಾಮ ವೇದಗಳನ್ನು ಪ್ರತಿನಿಧಿಸುತ್ತವೆ. ಈ ಕಾರಣದಿಂದಲೇ ಅದನ್ನು ಬಹು ಪವಿತ್ರವಾದುದೆಂಬಂತೆ ಕೊಂಡಾಡಲಾಗುತ್ತದೆ. ಈ ಕಾರಣದಿಂದಲೇ ಅದನ್ನು ತ್ರಿವಳಿ ಜ್ಞಾನದ ಕುರುಹು ಎಂದು ಗೌರವಿಸಲಾಗಿದೆ. ಅಂದರೆ ಮೂರೂ ವೇದಗಳ ಮೇಲೆ ಪ್ರಭುತ್ವವನ್ನು ಸೂಚಿಸುತ್ತದೆ. ಯಜ್ಞಗಳನ್ನು ಮಾಡಿಸುವ ಪುರೋಹಿತರು ಮತ್ತಿತರ ಭಾಗವಹಿಸಿದವರು, ಛಂದಸ್ ಎಂಬ ರಕ್ಷಾ ಮಂತ್ರಗಳನ್ನು ಉಚ್ಚರಿಸಲು ಅದನ್ನು ಉಪಯೋಗಿಸುತ್ತಾರೆ. ಮೂರು ಬಣ್ಣಗಳು ಮೂರು ಲೋಕಗಳನ್ನು ಪ್ರತಿನಿಧಿಸುತ್ತವೆ ಎಂದೂ ನಂಬಲಾಗುತ್ತದೆ. ಆದ್ದರಿಂದ ಜಿಂಕೆಯ ಚರ್ಮದ ಮೇಲೆ ಕುಳಿತವನು ಅಥವಾ ಅದನ್ನು ಧರಿಸಿದವನು, ತನ್ನ ವೇದ ಪಠಣದ ಮೂಲಕ, ಆಹುತಿಗಳ ಮೂಲಕ ಮೂರು ಲೋಕಗಳಿಗೂ ಲಾಭವನ್ನುಂಟುಮಾಡುತ್ತಾನೆ.

ವೈದಿಕ ಯಜ್ಞಾಚರಣೆಗಳ ಯಜಮಾನನನ್ನು 'ಗರ್ಭಸ್ಥ ಭ್ರೂಣ' ಎಂದು ವರ್ಣಿಸ ಲಾಗಿದೆ. ಭ್ರೂಣವು ಹೇಗೆ ಕ್ಷೇಮವಾಗಿ, ಸುಭದ್ರವಾಗಿ, ಕೈ ಬೆರಳುಗಳನ್ನು ಮುಷ್ಟಿ ಯಾಗಿಸಿಕೊಂಡು ದೇಹವನ್ನು ಬಾಗಿಸಿ ತಾಯ ಗರ್ಭದಲ್ಲಿ ಅಚ್ಛಾದಿತವಾಗಿ ಇರುತ್ತವೆಯೋ ಹಾಗೆ ಕರ್ತೃವು ವೇದ ಮಾತೆಯನ್ನು ಪ್ರತಿನಿಧಿಸುವ ಜಿಂಕೆಯ ಚರ್ಮವನ್ನು ಹೊದೆದುಕೊಂಡಿರಬೇಕು. ಸಾಧಾರಣ ಮಾನವ ಚಕ್ಷುವಿಗೆ ಅದು ಕೇವಲ ಒಂದು ಚರ್ಮ, ಆದರೆ ವೈದಿಕ ವಿಧಿಗಳ ಸಮಯದಲ್ಲಿ ಅದೊಂದು ಕವಚವಾಗುತ್ತದೆ. ಆದ್ದರಿಂದಲೇ ದೀಕ್ಷಿತನು ಅದನ್ನು ಧರಿಸುವುದಕ್ಕೆ ಮೊದಲು, "ಚರ್ಮ, ನೀನು ಕವಚವಾಗಿದ್ದೀಯೆ, ನನ್ನನ್ನು ಚರ್ಮದಂತೆ ಕಾಪಾಡು," ಎಂದು ಸ್ತುತಿ ಮಾಡುತ್ತಾನೆ. ಮನುಷ್ಯನನ್ನು ದುಃಖ, ಹಾನಿ, ದೋಷಗಳಿಂದ ರಕ್ಷಿಸುವುದ ರಿಂದ ಸಂತೋಷ, ಆನಂದ ಎಂಬರ್ಥವನ್ನು ಕೊಡುತ್ತದೆ. ತ್ರಿಮೂರ್ತಿಗಳಲ್ಲಿ ಎರಡನೆಯ ವಿಷ್ಣುವು ಆನಂದ ಸ್ವರೂಪಿ. ವೈದಿಕ ಯಾಗಗಳು ಆನಂದವನ್ನು ನೀಡುತ್ತವೆ. ವಿಷ್ಣುವನ್ನು ಯಜ್ಞವೆಂದೇ ಸ್ತುತಿಸಲಾಗಿದೆ (ಯಜ್ಞೋ ವೈ ವಿಷ್ಣುಃ) ಭಗವಾನ್ ವಿಷ್ಣುವು ಮೂರೂ ವೇದಗಳ ಮೂರ್ತರೂಪವಾಗಿದ್ದಾನೆ.

ಉಪಾಸನೆ ಎಂದರೆ ಭಗವಂತನ ಸಾಮೀಪ್ಯವನ್ನು ಪಡೆಯುವುದು, ಸ್ತೋತ್ರದ ಅನಂದವನ್ನು ಸವಿಯುವುದು. ಸಂಪ್ರದಾಯವು ಇದರ ಸಾಧನೆಗೆ ನಾಲ್ಕು ಅಧಿಕೃತ ಮಾರ್ಗಗಳನ್ನು ಅಂಗೀಕರಿಸಿದೆ. ಅವು ಸತ್ಯವತಿ, ಅಂಗವತಿ, ಅನ್ಯವತಿ ಮತ್ತು ನಿದಾನವತಿ. ಇವುಗಳನ್ನು ಸ್ವಲ್ಪ ವಿವರವಾಗಿ ಪರಿಶೀಲಿಸೋಣ.

**ಸತ್ಯವತಿ**—ಶಾಸ್ತ್ರಗಳು ಭಗವತ್ ಶಕ್ತಿಯನ್ನು ಹೀಗೆ ವಿವರಿಸುತ್ತವೆ ಸರ್ವವ್ಯಾಪಿನಂ ಆತ್ಮಾನಂ ಕ್ಷೀರೇ ಸರ್ಪಿತ್ರೈವ ಅರ್ಪಿತಂ, ಆತ್ಮವು ಎಲ್ಲೆಲ್ಲೂ ಇದೆ, ತುಪ್ಪವು ಹಾಲಿನ ಒಂದೊಂದು ಹನಿಯಲ್ಲೂ ಅಂತರ್ಗತವಾಗಿರುವ ಹಾಗೆ. ಈ ನಂಬಿಕೆಯಿಂದ ಸಾಧಕನು ಸತ್ಯವನ್ನು ಅನ್ವೇಷಿಸಲು ಹೊರಟರೆ ಅವನ ಸಾಧನೆಯು ಸತ್ಯವತಿ (ಸತ್ಯ ಆಧಾರಿತ) ಎನಿಸುತ್ತದೆ. ಮಾಯಾತೀತಂ ಇದಂ ಸರ್ವಂ ಜಗದವ್ಯಕ್ತ ಮೂರ್ತಿನಾ, "ನನ್ನ ವ್ಯಕ್ತ ರೂಪದಲ್ಲಿ ನಾನು ಸಮಸ್ತ ಸೃಷ್ಟಿಯಾಗಿದ್ದೇನೆ. ನನ್ನಲ್ಲಿ ಇದೆಲ್ಲವನ್ನೂ ನೋಡು," ಎಂದು ಭಗವಂತನು ಘೋಷಿಸಿದ್ದಾನೆ. ಈ ಪ್ರಯತ್ನದಲ್ಲಿ ಜಯಗಳಿಸಿದಾಗ ಸತ್ಯವತಿ ಮಾರ್ಗವು ಫಲಿಸುತ್ತದೆ. "ಇವೆಲ್ಲವೂ ಆಗಿ, ಇದೆಲ್ಲದ ರಲ್ಲೂ ನಾನು ನಿನಗೆ ಕಾಣಿಸುತ್ತೇನೆ," ಎಂದು ಭಗವಂತನು ಭರವಸೆ ಕೊಡುತ್ತಾನೆ. ಈ ಸತ್ಯವತಿ ಪಥದಲ್ಲಿ ಪ್ರಾಮಾಣಿಕವಾಗಿ ಕ್ರಮಿಸುವ ಎಲ್ಲರಿಗೂ ಈ ಅಂತರ್ಗತತ್ವ ಮತ್ತು ಅವೇ ತತ್ತ್ವಗಳ ದರ್ಶನದ ಭರವಸೆಯಿದೆ.

**ಅಂಗವತಿ**—ಅಗ್ನಿ, ವಾಯು, ಸೂರ್ಯ, ಚಂದ್ರ, ಮತ್ತಿತರ ವಸ್ತುಗಳು ವಿಶ್ವಾತ್ಮಕವಾದವು. ಅಗ್ನಿಯೇ ಎಲ್ಲ ಜೀವಿಗಳಲ್ಲೂ ಜೀವವನ್ನು ರಕ್ಷಿಸುವ ಉಸಿರು. ಅವನು ಎಲ್ಲವನ್ನೂ ಬೆಳಗುವ ಅಗ್ನಿ. ಪೋಷಣೆಯನ್ನು ಒದಗಿಸುವ ಸಸ್ಯಗಳನ್ನು ಪಾಲಿಸುವ ಮಳೆ ಅವನು. ಆದ್ದರಿಂದ ಅವನನ್ನು ಅಗ್ನಿ ಎಂದೂ ವಾಯು ಎಂದೂ ವರುಣ ಎಂದೂ ಸ್ತುತಿಸಬಹುದು. ಕೃಪೆಯಿಟ್ಟು ಅವನು ಆ ರೂಪಗಳನ್ನು ಧರಿಸಿದ್ದಾನೆ. ಹೀಗೆ ಅಂಗಗಳ ಮೂಲಕವಾದ ಧ್ಯಾನಕ್ರಮವೇ ಅಂಗವತಿ ಮಾರ್ಗ. ಅಂಗ ಎಂದರೆ ದೇಹಭಾಗ, ಒಂದು ವಿಷಯ, ಒಂದು ಅಂಶ.

**ಅನ್ಯವತಿ**—ಅನೇಕ ಮುಖವಾದ ದೈವವನ್ನು ಚಿತ್ರಿಸಿಕೊಂಡು ಗ್ರಹಿಸಬಲ್ಲ ವಿಧಾನಗಳಲ್ಲಿ ಅವುಗಳನ್ನು ಸಂಕೇತಿಸುತ್ತಾ ಸಾಧಕನು ದಿವ್ಯತೆಯ ಸಾನ್ನಿಧ್ಯವನ್ನು ಪಡೆಯಲು ಪ್ರಯತ್ನಿಸುತ್ತಾನೆ. ದೈವ ತತ್ತ್ವದ ಒಂದು ರೂಪವಾದ ಸರ್ವವ್ಯಾಪಿ ವಿಷ್ಣುವನ್ನು ಶಂಖ (ಆದಿ ಶಬ್ದ ಅಥವಾ ಧ್ವನಿಯ ಸಂಕೇತ), ಚಕ್ರ (ಕಾಲದ ಸಂಕೇತ) ಮತ್ತು ಗದೆಗಳನ್ನು (ಶಕ್ತಿ ಮತ್ತು ಗಾಂಭೀರ್ಯಗಳ ಸಂಕೇತ) ಹಿಡಿದುಕೊಂಡಿರುವಂತೆ ಚಿತ್ರಿಸಲಾಗಿದೆ. ವಿಘ್ನಗಳನ್ನು ನಿವಾರಿಸುವ ಶಕ್ತಿಯೂ ಆಸಕ್ತಿಯೂ ಇರುವ ಮುಖದಲ್ಲಿ (ವಿಘ್ನೇಶ್ವರ), ಏಕದಂತನು ನಿಶಿತಮತಿಯನ್ನು ಏಕಾಗ್ರತೆಯನ್ನು ಸಂಕೇತಿಸುತ್ತದೆ. ಈಶ್ವರ ಅಥವಾ ಶಿವನು (ಭಗವತ್ ಶಕ್ತಿಯ ಪ್ರಳಯ ಅಥವಾ ಲಯದ ಮುಖ) ತ್ರಿಶೂಲವನ್ನು ಹಿಡಿದಿದ್ದಾನೆ. ಅದರ ಮೂರುಮೊನೆಗಳು, ಭೂತ, ವರ್ತಮಾನ, ಭವಿಷ್ಯತ್ ಕಾಲಗಳನ್ನು ಸಂಕೇತಿಸುತ್ತವೆ. ಧರ್ಮದ ಮೂರ್ತಿಯಾದ ರಾಮನನ್ನು ಯಾವಾಗಲೂ ಕೋದಂಡ ಧನುಸ್ಸಿನೊಂದಿಗೆ ಚಿತ್ರಿಸಲಾಗುತ್ತದೆ. ಬಾಣವನ್ನು ನೇರವಾಗಿ ಗುರಿಗೆ ನಾಟುವ ಬಿಲ್ಲು ಅದು. ವಿಶ್ವ ಪ್ರೇಮದ ಅಭಿವ್ಯಕ್ತಿ

ಯಾದ ಕೃಷ್ಣನು ಮುಡಿಯಲ್ಲಿ ನವಿಲುಗರಿ ಧರಿಸಿದ್ದಾನೆ, ಸಾವಿರ ಕಣ್ಣಿನ ಕೃಪಾ ದೃಷ್ಟಿಯ ಸಂಕೇತವಾಗಿ. ಮೋಹಕ ರಾಗಗಳನ್ನು ಹೊಮ್ಮಿಸುವ ಕೊಳಲನ್ನು ಅವನು ಕೈಯಲ್ಲಿ ಹಿಡಿದಿದ್ದಾನೆ. ಕೊಳಲು ಅಹಂಕಾರ ರಹಿತ, ಕಾಮನಾ ರಹಿತ ಸಾಧಕನ ಸಂಕೇತ. ಜ್ಞಾನದ ಮುಖವನ್ನು ದೇವಿ ಸರಸ್ವತಿಯಾಗಿ ಚಿತ್ರಿಸಲಾಗಿದೆ. ಅವಳು ಕೈಯಲ್ಲಿ ವೀಣೆಯನ್ನು ಹಿಡಿದಿದ್ದಾಳೆ. ವೀಣೆ ಒಂದು ತಂತೀ ವಾದ್ಯ. ಸತ್ಯ ಶಿವ ಸುಂದರರ ಮೃದು ಸ್ಪರ್ಶಕ್ಕೆ ಸಮರಸತೆಯಿಂದ, ನಾದ ಮಾಧುರ್ಯದಿಂದ ಪ್ರತಿಸ್ಪಂದಿಸುವ ಹೃದಯತಂತುಗಳ ಸಂಕೇತ ಅದು. ಸಾಧಕರು ಈ ಮನೋಹರವಾದ ರೂಪಗಳ ಮೇಲೆ, ಆ ಸಂಕೇತಗಳ ಅರ್ಥದ ಮೇಲೆ ಕೇಂದ್ರೀಕರಿಸಿ ಧ್ಯಾನಿಸುತ್ತಾ ತಮ್ಮ ಹೃದಯಗಳಲ್ಲಿ ಮಡುಗಟ್ಟುವ ಆನಂದದಿಂದ ದೈವವನ್ನು ಕೊಂಡಾಡುತ್ತಾರೆ. ಇದು ಅನ್ಯವತಿ ಮಾರ್ಗವೆನಿಸುತ್ತದೆ. ಸಂಕೇತಿತ ದೈವತ್ವ, ಅನ್ಯ ಎಂದರೆ ಬೇರೊಂದು, ಪೋಷಕವಾದದ್ದು.

**ನಿದಾನವತಿ**—ಈ ಮಾರ್ಗವು ನಿಧಾನಗತಿಯದು. ಆದರೆ ಒಂದೊಂದು ಹಂತವನ್ನು ಯಶಸ್ವಿಯಾಗಿ ನಿರ್ವಹಿಸಿದಾಗಲೂ ಪ್ರಗತಿ ನಿಶ್ಚಿತವಾದದ್ದು. ಶ್ರವಣಂ (ಭಗವಂತನ ಮಹಿಮೆಗಳನ್ನು ಆಲಿಸುವುದು), ಕೀರ್ತನಂ (ಅವನ ವಿಶಿಷ್ಟ ಕರುಣೆಯನ್ನು ಸಂತೋಷವಾಗಿ ಹಾಡುವುದು), ವಿಷ್ಣೋಃಸ್ಮರಣಂ (ಸದಾ ಭಗವಂತನ ವೈಭವವನ್ನು ಕರುಣೆಯನ್ನು ಸ್ಮರಿಸುತ್ತಾ ಮನನ ಮಾಡಿಕೊಳ್ಳುತ್ತಿರುವುದು), ಪಾದಸೇವನಂ (ಭಗವಂತನ ಪಾದಕಮಲಗಳ ಮೇಲೆ ಬೀಳಲು ಬಯಸುವುದು) ಅರ್ಚನಂ (ಭಗವಂತನ ಪ್ರತಿಮೆಗೆ ಅಥವಾ ವಿಗ್ರಹಕ್ಕೆ ಪ್ರಾರ್ಥನೆ ಪೂಜೆಗಳನ್ನು ಸಲ್ಲಿಸುವುದು) ವಂದನಂ (ಪಡೆದ ಅನುಗ್ರಹಕ್ಕಾಗಿ ಕೃತಜ್ಞತೆಯನ್ನರ್ಪಿಸುವುದು), ದಾಸ್ಯಂ (ಭಗವಂತನ ಇಚ್ಛೆಗೆ ಶರಣಾಗುವುದು), ಸಖ್ಯಂ (ಅವನಲ್ಲಿ ಸಂಪೂರ್ಣವಾಗಿ ಆತ್ಮೀಯತೆಯಿಂದ ಹೇಳಿಕೊಳ್ಳುವುದು) ಆತ್ಮ ನಿವೇದನಂ (ಆಲೋಚನೆ, ಮಾತು, ಕೃತಿಗಳೆಲ್ಲವನ್ನೂ ಅವನಿಗೆ ಅರ್ಪಿಸುವುದು), ತನ್ಮಯ ಆಸಕ್ತಿ (ಅವನಲ್ಲಿ ಲೀನವಾಗಲು ಹಂಬಲಿಸುವುದು) ಪರಮ ವಿರಹ ಆಸಕ್ತಿ (ಅವನಿಂದ ತುಸು ಅಗಲಿದರೂ ಅಪಾರ ಸಂಕಟಪಡುವುದು)—ಇವು ಸಾಧಕನು ದಿವ್ಯಾನಂದದ ಶಿಖರವನ್ನು ಮುಟ್ಟುವುದಕ್ಕಾಗಿ ಹಾದುಹೋಗಬೇಕಾದ ಹನ್ನೊಂದು ಹಂತಗಳು. ಆದ್ದರಿಂದಲೇ ಈ ಮಾರ್ಗಕ್ಕೆ 'ನಿಧಾನ ಮತ್ತು ಖಚಿತ' (ನಿದಾನ) ಎಂದು ಹೆಸರು ಬಂದಿದೆ.

ಈ ನಾಲ್ಕೂ ಮಾರ್ಗಗಳೂ (ಸತ್ಯವತಿ, ಅಂಗವತಿ, ಅನ್ಯವತಿ ಮತ್ತು ನಿದಾನವತಿ) ಒಂದೊಂದೂ ಹಿಂದಿನದಕ್ಕಿಂತ ಹೆಚ್ಚು ಉತ್ತಮವಾದದ್ದು, ಹೆಚ್ಚು ಶಕ್ತಿ ನೀಡುವಂಥದು, ಸರಳತೆ ಮತ್ತು ಕಾರ್ಯ ಸಾಧ್ಯತೆಗಳ ದೃಷ್ಟಿಯಿಂದ, ಕೊನೆಯಲ್ಲಿ ಅವು

ಭಗವಂತನೊಂದಿಗೆ ಒಂದಾಗುವ ವರವನ್ನು ಅನುಗ್ರಹಿಸುತ್ತವೆ. ಶಾಸ್ತ್ರಗಳು ನಿರೂಪಿಸಿ ಸಾಧಕರು ಆಚರಿಸುತ್ತಿರುವ ಇತರ ಹಲವು ಸಾಧನೆಗಳು ಅಥವಾ ಉಪಾಸನೆಗಳೂ ಉಂಟು. ಪ್ರತೀಕೋಪಾಸನ (ವಿಗ್ರಹಾರಾಧನೆ) ಅಥವಾ ಪ್ರತಿರೂಪೋಪಾಸನವನ್ನು ಅಂಗವತಿ ಉಪಾಸನೆಯ ವರ್ಗಕ್ಕೆ ಸೇರಿಸಲಾಗುತ್ತದೆ. ಸರ್ವತಃ ಪಾಣಿ ಪಾದಂ ತತ್ ಸರ್ವತೋಕ್ಷಿ ಶಿರೋಮುಖಂ, "ಎಲ್ಲೆಲ್ಲೂ ಅವನ ಕೈಗಳು, ಕಾಲುಗಳು, ಎಲ್ಲೆಲ್ಲೂ ಅವನ ತಲೆ ಮುಖಗಳು." ಭಗವಂತನ (ಮಾಧವನ) ಕೈಗಳು ಎಲ್ಲೆಲ್ಲೂ ಇವೆ, ಏಕೆಂದರೆ ಅವನು ಎಲ್ಲದರಲ್ಲೂ ಇದ್ದಾನೆ. ಎಲ್ಲಾ ಕಣ್ಣುಗಳ ಮೂಲಕವೂ ಅವನೇ ನೋಡುತ್ತಾನೆ; ಎಲ್ಲಾ ತಲೆಗಳ ಮೂಲಕವೂ ಆಲೋಚಿಸುತ್ತಾನೆ, ಯೋಚಿಸುತ್ತಾನೆ, ನಿರ್ಧರಿಸುತ್ತಾನೆ; ಎಲ್ಲ ಬಾಯಿಗಳಿಂದಲೂ ಆಹಾರ ಸೇವಿಸುತ್ತಾನೆ, ಎಲ್ಲ ಕಿವಿಗಳಿಂದಲೂ ಆಲಿಸುತ್ತಾನೆ. ಒಂದು ರೂಪದಿಂದ ಅವನನ್ನು ನೀವು ಎಲ್ಲಾ ರೂಪಗಳಾಗಿ ಪೂಜಿಸಬಹುದು. ಇದು ಅತ್ಯುನ್ನತವಾದ ಆದರ್ಶ, ಸಕಲ ಜೀವಿಗಳಲ್ಲೂ ಅವನಿದ್ದಾನೆ; ಕಣ್ಣಿಗೆ ಕಾಣಿಸದಂತೆ ಎಲ್ಲರಲ್ಲೂ ಎಲ್ಲರ ಮೂಲಕವೂ ವರ್ತಿಸುತ್ತಾನೆ. ಇದೇ ಪ್ರತಿರೂಪ ಉಪಾಸನೆ. ಪ್ರತಿಯೊಂದರಲ್ಲೂ ಅವನಿದ್ದಾನೆ ಎಂದು ಭಾವಿಸಿ ಪೂಜಿಸುವುದು. ಶಾಸ್ತ್ರಗಳಲ್ಲಿ ಉಕ್ತವಾಗಿರುವ ಇನ್ನೂ ಕೆಲವು ಸಣ್ಣಪುಟ್ಟ ಉಪಾಸನಾ ಪದ್ಧತಿಗಳಿವೆ.

**ಭಾಣೋಪಾಸನೆ:** ಭಗವಂತನಿಗೆ ಅತ್ಯಧಿಕ ಕಾಂತಿಯನ್ನೂ ಅತ್ಯಂತ ಆಳವಾದ ಕರುಣೆಯನ್ನೂ ಅತ್ಯಧಿಕ ಸಾಮರ್ಥ್ಯವನ್ನೂ ಅನ್ವಯಿಸಿ ಪೂಜಿಸುವುದು.

**ಗೀತೋಪಾಸನೆ:** ಭಗವಂತನನ್ನು ಗೀತೆಯನ್ನು ಉಪದೇಶಿಸಿ ದಾರಿ ತೋರಿಸುವ ಗುರುವೆಂದು ಸ್ತುತಿಸಿ ಪೂಜಿಸುವುದು. ಮಹಾಭಾರತ ಕಾವ್ಯವನ್ನು ಪಂಚಮವೇದ ಎಂದು ಕರೆಯಲಾಗಿದೆ. ಇಹ ಪರಗಳಲ್ಲಿ ತನ್ನ ಲಕ್ಷ್ಯವನ್ನು ಸಾಕ್ಷಾತ್ಕರಿಸಿಕೊಳ್ಳುವ ಸಲುವಾಗಿ ಮನುಷ್ಯನು ಹೊಂದಿರಬೇಕಾದ ನೀತಿ ನಿಯಮಗಳನ್ನು ಅದು ಹಾಕಿಕೊಡುತ್ತದೆ. ಧಾರ್ಮಿಕ ಜೀವನ ಹಾಗೂ ಆಧ್ಯಾತ್ಮಿಕ ಉದ್ಧಾರಕ್ಕಾಗಿರುವ ಮಾರ್ಗದರ್ಶಕ ಸೂತ್ರಗಳ ಗಣಿಯೇ ಆಗಿದೆ. ಇಲ್ಲಿ, ಭಗವಂತನನ್ನು ಧರ್ಮಕ್ಷೇತ್ರದ ರಂಗಸ್ಥಳದಲ್ಲಿ ನೋಡುತ್ತೇವೆ. ಸಕಲ ಸಜ್ಜುಗಳೊಂದಿಗೆ ಪಾತ್ರಗಳು, ಕಥೆ ಮತ್ತು ವಸ್ತ್ರವಿನ್ಯಾಸಗಳಾಗಿ, ಅವನು ಅಭಿನಯಿಸಿದ ಅತ್ಯದ್ಭುತವಾದ ವಿಶ್ವನಾಟಕ, ಆ ಮಹಾಕಾವ್ಯ ಮಹಾಭಾರತ. ಈ ನಾಟಕದಲ್ಲಿ ನಟ ನಟಿಯರು, ಸಂಭಾಷಣೆ, ಸೂಚನೆಗಳು ಹಾಡುಗಳು, ಎಲ್ಲವನ್ನೂ ಅವನೇ ಯೋಜಿಸಿದ್ದಾನೆ. ಅವನೇ ಪಾತ್ರ, ಅವನೇ ನಿರ್ದೇಶಕ, ಪ್ರೇಕ್ಷಕ ಎಲ್ಲವೂ. ಸಕಲ ವಸ್ತುಗಳಲ್ಲೂ ಜೀವಿಗಳಲ್ಲೂ ಮಾಧವನೇ ಪ್ರಕಟವಾಗಿ ಅವುಗಳ ಮೂಲಕ ವ್ಯವಹರಿಸುತ್ತಾನೆ. ಅಧಾರ್ಮಿಕ ಲೋಭದಿಂದ ಚೋದಿತವಾದ ಅಸೀಮ ಲೌಕಿಕ ಶಕ್ತಿ ಒಂದು ಕಡೆ, ಸದಾ

ಧರ್ಮಶೀಲವಾದ ಸೀಮಿತ ಆತ್ಮಶಕ್ತಿ ಇನ್ನೊಂದು ಕಡೆ. ವಿಶ್ವಾದ್ಯಂತ ಈ ಎರಡು ಶಕ್ತಿಗಳ ನಡುವೆ ನಡೆಯುವ ಸಂಘರ್ಷದಲ್ಲಿ ಭಗವಂತನು ಮಧ್ಯಸ್ಥಗಾರನಾಗಿ ನಿಲ್ಲುತ್ತಾನೆ. ಬಲದ ಮೇಲೆ ಧರ್ಮವು ಗೆಲ್ಲುವುದರ ಪರಮೋನ್ನತ ಪ್ರತೀಕವಾಗುತ್ತಾನೆ. ಮಹಾಭಾರತದಲ್ಲಿ ದೊರಕುವ ಅಮೃತ ಭಗವದ್ಗೀತೆ, ದೈವ ಜಯದ ಗಾಥೆ, ಮಹಾಭಾರತ ಕಾವ್ಯವು ಏನನ್ನು ಬೋಧಿಸುವ ಉದ್ದೇಶದಿಂದ ರಚಿತವಾಯಿತೋ ಆ ಮೂಲ ಉಪದೇಶ ಗೀತೆಯಲ್ಲಿದೆ. ಸಾಧಕನು ಕರಿಷ್ಯೇ ವಚನಂ ತವ (ನಿನ್ನ ಮಾತುಗಳನ್ನು ಪಾಲಿಸುತ್ತೇನೆ) ಎಂದು ಶರಣಾಗತನಾಗುತ್ತಾನೆ. ಭಗವಂತನು ಅವನಿಗೆ ಸ್ವಧರ್ಮೇ ನಿಧನಂ ಶ್ರೇಯಃ (ನಿನಗೆ ನಿರ್ದಿಷ್ಟವಾಗಿರುವ ಕರ್ತವ್ಯಗಳನ್ನು ಪಾಲಿಸುವುದರಲ್ಲೇ ನಿನ್ನ ಶ್ರೇಯಸ್ಸು ಅಡಗಿದೆ) ಎಂದು ಹೇಳುತ್ತಾನೆ. ಪ್ರತಿಯೊಂದು ಕಾರ್ಯವನ್ನೂ ಈ ಮಾನಕದಿಂದ ಅಳೆಯಬೇಕು.

ಭಗವದಿಚ್ಛೆಗೆ ಸಂಪೂರ್ಣವಾಗಿ ಅರ್ಪಿಸಿಕೊಳ್ಳುವ ಮಾರ್ಗವನ್ನು (ಭಕ್ತಿ) ತೊರೆಯಬಾರದು. ಅದು ನಿಮಗೆ ಸರ್ವತೋಮುಖ ಆನಂದವನ್ನೂ ಶಾಂತಿಯನ್ನೂ ನೀಡುತ್ತದೆ. ಅದಕ್ಕೆ ಬದಲು ಅವನು ಕಣ್ಣುಗಳನ್ನು ಮುಚ್ಚಿಕೊಂಡು ತಾನೇ ಬ್ರಹ್ಮ ಎಂದು ಅಹಂಕಾರದಿಂದ ಬೀಗುತ್ತಿದ್ದರೆ, ಆ ಸಂತೋಷವನ್ನು ಅವನು ಕಳೆದುಕೊಳ್ಳುತ್ತಾನೆ, ದುಃಖಕ್ಕೆ ಬಲಿಯಾಗುತ್ತಾನೆ. ಹೊಟ್ಟನ್ನು ಕುಟ್ಟುತ್ತಿದ್ದರೆ ಅಕ್ಕಿಯು ಸಿಕ್ಕಬೇಕೆಂದು ನಿರೀಕ್ಷಿಸಬಾರದಲ್ಲವೆ? ಆ ಬ್ರಹ್ಮವೇ ಕೃಷ್ಣ!

**ಅದ್ವೈತೋಪಾಸನೆ:** ಹಸುವಿನ ದೇಹದಲ್ಲಿ ಹಾಲಿದೆ, ಹಾಲಿನಲ್ಲಿ ತುಪ್ಪವಿದೆ. ಆದರೆ ತುಪ್ಪವು ಸಲೀಸಾಗಿ ವ್ಯಕ್ತಿಯ ಶಕ್ತಿಗೆ ಮೂಲವಾಗಿ ದೊರಕಿಬಿಡುವುದಿಲ್ಲ. ಹಾಲನ್ನು ಕರೆದುಕೊಳ್ಳಬೇಕು, ಹುಳಿ ಸೇರಿಸಿ ಅದನ್ನು ಮೊಸರಾಗಿಸಬೇಕು, ಕಡೆದು ಬೆಣ್ಣೆಯನ್ನು ತೆಗೆಯಬೇಕು, ಅದನ್ನು ಕಾಯಿಸಿ ತುಪ್ಪವನ್ನು ಪಡೆಯಬೇಕು. ಅದನ್ನು ಸೇವಿಸಿದರೆ ವ್ಯಕ್ತಿಯಲ್ಲಿ ಸಾಮರ್ಥ್ಯವು ತುಂಬುತ್ತದೆ. ಹಾಗೆಯೇ ಭಗವಂತನು ಸರ್ವವ್ಯಾಪಕ, ಸರ್ವಚೋದಕ ಆಗಿದ್ದರೂ ಆನಂದವನ್ನೂ ಅರಿವನ್ನೂ ಪಡೆಯಲು ಅವನನ್ನು ಕಂಡುಹಿಡಿಯ ಬೇಕು, ಗುರುತಿಸಬೇಕು. ಸಾಸಿವೆಯಲ್ಲಿ ಎಣ್ಣೆಯಿರುವ ಹಾಗೆ, ಮೊಸರಿನಲ್ಲಿರುವ ಬೆಣ್ಣೆಯ ಹಾಗೆ, ಭೂಮಿಯೊಳಗೆ ನೀರಿರುವ ಹಾಗೆ, ಮರದಲ್ಲಿ ಬೆಂಕಿಯಿರುವ ಹಾಗೆ ಭಗವಂತನು ಎಲ್ಲ ವಸ್ತುಗಳಲ್ಲೂ ಇದ್ದಾನೆ, ಆದರೆ ಕಣ್ಣಿಗೆ ಕಾಣಿಸುತ್ತಿಲ್ಲ. ಅವನು ಮನುಷ್ಯ ದೇಹದಲ್ಲೂ ಮನುಷ್ಯನ ಮನಸ್ಸಿನಲ್ಲೂ ಇದ್ದಾನೆ. ಅಲ್ಲಿ ಇರುವ ಅವನನ್ನು ಅರಿಯಲು ವಿಶೇಷವಾದ ಪರಿಶ್ರಮ ಅತ್ಯಗತ್ಯ. ಹಾಗೆ ಸಾಧನೆ ಮಾಡತೊಡಗಿದಾಗ ಇಬ್ಬರ ನಡುವೆ ಐಕ್ಯವನ್ನು ಸಾಕ್ಷಾತ್ಕರಿಸಿಕೊಳ್ಳಬಹುದು. ಅಲ್ಲಿಂದ ಮುಂದಕ್ಕೆ ಎರಡು ಅಥವಾ

ವ್ಯತ್ಯಾಸ ಅನುಭವಕ್ಕೆ ಬರುವುದಿಲ್ಲ. ಎರಡಲ್ಲದ ಒಂದನ್ನು ಅರಿಯುವುದೇ ಮೋಕ್ಷ, ಬಂಧನದಿಂದ ಬಿಡುಗಡೆ.

**ವಿಶಿಷ್ಟಾದ್ವೈತ:** ಸಾಧಕನು ಯಾರನ್ನು ಪೂಜಿಸಿ, ಸತ್ಯವೆಂದು ಸಾಕ್ಷಾತ್ಕರಿಸಿಕೊಳ್ಳಲು ಬಯಸುವನೋ ಆ ಭಗವಂತನು ತನಗಿಂತ ಪ್ರತ್ಯೇಕವಾದವನು ಎಂದು ಭಾವಿಸಬೇಕೋ ಅಥವಾ ಅವನು ತನ್ನಲ್ಲಿಯೇ ಇದ್ದಾನೆ ಎಂದು ಭಾವಿಸಬೇಕೋ ಎಂಬ ಸಮಸ್ಯೆಯನ್ನು ರಾಮಾನುಜರು ಪರಿಶೀಲಿಸಿದರು. ಅವರು ಉತ್ತರ ನೀಡಿದ್ದು ಹೀಗೆ. ಪ್ರಾಣವು ದೇಹದ ಆತ್ಮ; ಭಗವಂತನು ಪ್ರಾಣದ ಆತ್ಮ. ಭಗವಂತನೇ ವರದಾಯಕನು, ಸಕಲ ಶಕ್ತಿ, ಸಕಲರನ್ನೂ ಪೋಷಿಸುವವನು. ಆ ದೃಷ್ಟಿಯಿಂದ ಅವನನನ್ನು ಅರಸಬೇಕು. ಸಕಲ ಭೂತಗಳೂ ಯಾರಲ್ಲಿ ನೆಲೆಸಿವೆಯೋ ಅ ಪರಮೋನ್ನತ ಪುರುಷನು, ಸಮಸ್ತ ಸೃಷ್ಟಿ ಅಂತರಂಗದಲ್ಲಿ ನೆಲೆಸಿ, ಸರ್ವರ ಪ್ರಚೋದಕನಾಗಿ ಇರುವ ಅವನನ್ನು ಸಂಪೂರ್ಣ ಶರಣಾಗತಿಯ ಮೂಲಕ ಅವನ ಕೃಪೆಯನ್ನು ಪಡೆದು ಸಾಕ್ಷಾತ್ಕರಿಸಿಕೊಳ್ಳಬಹುದು. ಅವನ ಸರ್ವಾತೀತತ್ವ ಮತ್ತು ಸರ್ವಾಂತರ್ಯಾಮಿತ್ವಗಳನ್ನು ಚೆನ್ನಾಗಿ ಅರ್ಥಮಾಡಿಕೊಂಡು, ತನ್ನ ಕೊರತೆಗಳನ್ನು ಅರಿತುಕೊಂಡು, ಅವನ ಮಹಿಮೆಯಲ್ಲಿ ಪಾಲುಗೊಳ್ಳುವ ಸಲುವಾಗಿ ತನ್ನ ಅಹಂಕಾರವನ್ನು ಪೂರ್ತಿಯಾಗಿ ಒಪ್ಪಿಸಿಬಿಡಬೇಕು. ಸಾಧಕನ ಮನೋಧರ್ಮವು ತ್ವಮ್ ಏವ ಸರ್ವಂ ಮಮ ದೇವ ದೇವ, "ಓ ನನ್ನ ದೇವರ ದೇವನೆ, ನೀವೇ ಸಮಸ್ತವೂ," ಎಂಬುದಾಗಬೇಕು. "ನೀನು ಪ್ರೇರಣೆ, ನೀನೇ ಪಥ, ನೀನೇ ಲಕ್ಷ್ಯ." ಆಧ್ಯಾತ್ಮಿಕ ಸಾದನೆಯು ಏಕಾಗ್ರವೂ ಅಚಂಚಲವೂ ಬಳಲಿಕೆಯಿಲ್ಲದುದೂ ಆಗಬೇಕು.

**ದ್ವೈತೋಪಾಸನೆ:** ದೇವ ಮತ್ತು ಜೀವರ ನಡುವಣ ಸಂಬಂಧವನ್ನು ಕುರಿತ ದ್ವೈತ ದೃಷ್ಟಿಯು ಪತಿ ಮತ್ತು ಪತ್ನಿಯ ನಡುವಣ ಸಂಬಂಧದ ಹಾಗೆ. ವಿಷ್ಣುವು ಸದಾ ಸ್ವತಂತ್ರ, ಸದಾ ಪೂರ್ಣ. ಪತ್ನಿಯು ಪತಿಯನ್ನು ಸ್ತುತಿಸುವ ಹಾಗೆ ಅವನನ್ನು ಸ್ತುತಿಸಬೇಕು. ಇಂತಹ ಸಾಧಕರಲ್ಲಿ ಚೈತನ್ಯರು ಅತ್ಯಂತ ಗಮನಾರ್ಹರಾದವರು. ಅವರು ವಿಶಿಷ್ಟವಾದ ಚೈತನ್ಯೋಪಾಸನೆಯನ್ನೇ ರೂಪಿಸಿದರು. ಭಗವಾನ್ ಕೃಷ್ಣ ಚರಣ ಕಮಲಗಳನ್ನು ಪಡೆಯಲು ಉತ್ಕಟವಾದ ಹಂಬಲವಿಲ್ಲದೆ ಹೋದರೆ ಮೋಕ್ಷವು ದೊರಕುವುದಿಲ್ಲ. ಅಷ್ಟೇಕೆ, ವ್ಯಕ್ತಿಯ ಬುದ್ಧಿಯ ಶುದ್ಧಿಕರಣವು ಅ ಹಂಬಲವಿಲ್ಲದೆ ಸಾಧ್ಯವಾಗುವುದಿಲ್ಲ. ಚೈತನ್ಯರು ಇದನ್ನು ಒತ್ತಿ ಹೇಳಿದರು. ಅಂತರಂಗದ ಆನಂದದಲ್ಲಿ ಲೀನವಾಗುವ ಸಾಮರ್ಥ್ಯವುಳ್ಳ ಋಷಿಗಳೂ ಮತ್ತಿತರರೂ ಭಗವಾನ್ ಶ್ರೀಹರಿಯ ಮಂಗಳಕರವೂ ಶಾಮಕವೂ ಶುದ್ಧಿಕಾರಕವೂ ಆದ ಗುಣಗಳ ಮನನದ ಮೂಲಕ ಪರಮೋನ್ನತ ಪ್ರಜ್ಞೆಯ ಆನಂದವನ್ನು ಸವಿಯುವರು. ಈ ಆನಂದವನ್ನು ಪಡೆಯಲು ಯಾವುದೇ ಶಾಸ್ತ್ರಗ್ರಂಥದ ಅವಶ್ಯಕತೆಯಿಲ್ಲ. ಆ ದಿವ್ಯಾನಂದದ

ಅಲೆಗಳಲ್ಲಿ ನಿಮಗ್ನನಾಗಿ ವ್ಯಕ್ತಿಯು ಸಾಮಾಜಿಕ ನೀತಿ ನಡವಳಿಕೆಗಳೆಲ್ಲವನ್ನೂ ಅಲಕ್ಷಿಸಿಬಿಡುತ್ತಾನೆ, ರೂಢಿ ಸಂಪ್ರದಾಯಗಳನ್ನು ತೊರೆಯುತ್ತಾನೆ. ಶ್ರೀಹರಿಯ ನಾಮಗಳನ್ನು ಜೋರಾಗಿ ಕೂಗಿ ಹಾಡುತ್ತಾನೆ, ಆನಂದದ ಕಣ್ಣೀರು ಹರಿಸುತ್ತಾನೆ, ದಿವ್ಯೋನ್ಮತ್ತನಾಗಿ ಕುಣಿಯುತ್ತಾನೆ, ಅಮಿಶ್ರಿತವಾದ ಅಸಲಿ ಆನಂದವನ್ನು ಮನಸಾರೆ ಸವಿಯುತ್ತಾನೆ. ಭಗವಂತನ ದಿವ್ಯ ಪಾದಗಳು ನೆಲದ ಪ್ರತಿಯೊಂದು ಅಂಗುಲ ವನ್ನೂ ಪವಿತ್ರಗೊಳಿಸಿವೆ ಎಂದು ಅವನು ಭಾವಿಸುತ್ತಾನೆ. ಹಾಗಾಗಿ ಭಗವದ್ಭಾವ ದೊಂದಿಗೆ ಸಂಪೂರ್ಣವಾಗಿ ಬೆರೆತುಕೊಂಡು ಮಹಿಮೆಗಳನ್ನು ಹಾಡುತ್ತಾನೆ. ಚೈತನ್ಯರು ಈ ಸಾಧನೆಯನ್ನು ಅತ್ಯಂತ ಸುಲಭವಾದ ಅತ್ಯಧಿಕ ಫಲಪ್ರದವಾದ ಸಾಧನೆಯಾಗಿ ರೂಪಿಸಿದರು. ಅವರ ಮುಖ್ಯವಾದ ಗುರಿಯು ಭಗವಂತನ ಮಹಿಮೆಗಳನ್ನೂ ಕೃಪೆಯನ್ನೂ ಕುರಿತು ಸಾಮೂಹಿಕವಾಗಿ ಮಧುರವಾಗಿ ಹಾಡು ವುದರ ಮೂಲಕ ಹರಿದು ಬರುವ ಆನಂದದ ಪ್ರವಾಹದಲ್ಲಿ ದೇಹ ಪ್ರಜ್ಞೆಯನ್ನು ತೊರೆಯಬೇಕು ಎನ್ನುವುದಾಗಿತ್ತು.

ಉಲ್ಲೇಖಿಸಬಹುದಾದ ಇನ್ನೂ ಕೆಲವು ಉಪಾಸನಾಪದ್ಧತಿಗಳಿವೆ. **ಗೌಡೀಯೋಪಾ ಸನೆ** ಅಂಥ ಒಂದು. ಶ್ರೀಕೃಷ್ಣನು ಅವ್ಯಕ್ತ ಅಂತರ್ಯಾಮಿತ್ವದಲ್ಲಿ ಪುರುಷೋತ್ತಮನಾ ಗಿಯೂ ರಾಧೆಯಾಗಿಯೂ ವ್ಯಕ್ತವಾದನು. ಅವ್ಯಕ್ತ ವಿಶ್ವಾತ್ಮಕ ಶಕ್ತಿಯಾಗಿ ರೂಪಿಸಿ ಕೊಂಡು ಅಳವಟ್ಟನು. ಅವರನ್ನು ಕೃಷ್ಣ ರಾಧೆ ಎಂದು, ಹೆಚ್ಚು ಪ್ರಚಲಿತವಾಗಿರು ವಂತೆ ರಾಧಾ ಕೃಷ್ಣ ಆಗಿ ದರ್ಶಿಸಲಾಗುತ್ತದೆ. ಕೃಷ್ಣನ ಮತ್ತೊಂದು ಹೆಸರು ಮಾಧವ. ಅವನು ವಿಶ್ವದ ಅಥವಾ ಪ್ರಕೃತಿಯ ಒಡೆಯ ಎಂಬುದನ್ನು ಅದು ಸೂಚಿಸುತ್ತದೆ. ಆದ್ದರಿಂದ ಈ ಉಪಾಸನೆ ಅಥವಾ ಪೂಜೆಯಲ್ಲಿ ಉಪಯೋಗಿಸುವ ಹೆಸರು ರಾಧಾ ಮಾಧವ ಎಂದು. ಈ ಉಪಾಸನಾ ಮಾರ್ಗವನ್ನು ಅನುಸರಿಸುವವರು ಭಗವಂತನ ಈ ನಾಮವು ಸಕಲ ಬಂಧನಗಳಿಂದ ಬಿಡುಗಡೆಯನ್ನು ತಂದೀಯಬಲ್ಲ ಆನಂದ ವನ್ನು ಕೊಡುವುದಾಗಿ ನಂಬುತ್ತಾರೆ. ಈ ಪಂಥದ ಪ್ರವರ್ತಕರು ಅದನ್ನು ಎಲ್ಲರೂ ಸಾಧಿಸಬಹುದಾದ ಲಕ್ಷ್ಯವೆಂದು ಸಾರುತ್ತಾರೆ. ಭಗವಂತನು ಆನಂದಾಮೃತ ಮೂರ್ತಿ. ಜೀವಿಗಳು ಆ ಅಮೃತವನ್ನು ಅರಗಿಸಿಕೊಂಡಾಗ, ಆಧ್ಯಾತ್ಮಿಕ ಆನಂದ ದಲ್ಲಿ ವಿಲೀನಗೊಳ್ಳುವರು. ಆನಂದದಲ್ಲಿ ಹುಟ್ಟಿದವರು ಕೇವಲ ಆನಂದದಲ್ಲಿ ಮತ್ತು ಆನಂದದ ಮೂಲಕ ಬದುಕಬಲ್ಲರು ಎಂದು ಶ್ರುತಿಗಳು ಹೇಳುತ್ತವೆ. ಆ ಅಮೂಲ್ಯ ಅಮೃತದ ಭಂಡಾರಕ್ಕೆ ರಾಧಾ ಮಾಧವ ಎಂಬ ಪವಿತ್ರ ನಾಮವೇ ಕೀಲಿಕೈ ಎಂದು ಹೇಳಲಾಗಿದೆ.

ರಾಧಾ ಮಾಧವರೇ ಪ್ರಕೃತಿ ಪುರುಷ. ಈ ಜೋಡಿಯು ಜೀವಾತ್ಮ ಪರಮಾತ್ಮ ಜೋಡಿಯನ್ನು ಪ್ರತಿನಿಧಿಸುತ್ತದೆಂದು ಭಾವಿಸಲಾಗುತ್ತದೆ. ಅದು ತರಂಗ ಮತ್ತು

ಸಾಗರ ಇದ್ದ ಹಾಗೆ. ರಾಧಾ ಮಾಧವ ಎಂಬ ಹೆಸರಿನ ಮೂಲಕ ಇಬ್ಬರಿಗೂ ಪೂಜೆಯನ್ನು ಅರ್ಪಿಸಲಾಗುತ್ತದೆ. ಕೃಷ್ಣಾಸ್ತು ಭಗವಾನ್ ಸ್ವಯಂ, ಕೃಷ್ಣನೇ ಭಗವಂತ ಎಂದು ವಲ್ಲಭಾಚಾರ್ಯರು ಸಾರಿದರು. ಅವನನ್ನು ಪಡೆಯುವುದೆಂದರೆ ವಿಶ್ವಾತ್ಮನಲ್ಲಿ ಲೀನವಾಗುವುದು, ಅದೇ ಪ್ರಾಮಾಣಿಕರಾದ ಅದ್ವೈತಿಗಳ ಗುರಿ.

**ಶೈವೋಪಾಸನೆ:** ಇದೂ ಗಮನಿಸಬೇಕಾದ ಒಂದು ಮಾರ್ಗ. ಲಿಂಗದ ಸಂಕೇತದಲ್ಲಿ ಅಳವಟ್ಟ ಶಿವನ ಆರಾಧನೆ ಇದು. ಲಿಂಗಂ ಸರ್ವಕಾಲಂ. ಅನಂತವಾದ ಲಿಂಗವು ಮೂಲಶಕ್ತಿಯ ಸಂಕೇತ. ಇದು ವಿಶ್ವದ ರಚನೆಗೆ ಆಧಾರವಾದ ದ್ರವ್ಯಗಳ ಜನನ, ಸ್ಥಿತಿ ಹಾಗೂ ಬೆಳವಣಿಗೆಗೆ ಮೂಲ ಕಾರಣವಾಗಿದೆ. ಲಿಂಗವೆನ್ನುವುದು ಶಿವನ ರೂಪವೇ. ಹಾಗೆ ಸಾಕ್ಷಾತ್ಕರಿಸಿಕೊಳ್ಳುವುದೇ ಅಂತಿಮ ಲಕ್ಷ್ಯವಾದ ಮೋಕ್ಷ.

**ವೀರಶೈವೋಪಾಸನೆ:** ಇದು ಪ್ರಭು ಅಥವಾ ಈಶ್ವರನಾದ ಶಿವನು ಎಲ್ಲ ಕಡೆಯೂ ಎಲ್ಲ ಕಾಲಗಳಲ್ಲೂ ಏಕ ಮಾತ್ರನಾಗಿದ್ದಾನೆ ಎಂದು ಹೇಳುತ್ತದೆ. ಜೀವಿಯು ಲಿಂಗ ಅಥವಾ ಈಶ್ವರನ ದಿವ್ಯ ಕಾಂತಿಯಲ್ಲಿ ಐಕ್ಯವಾಗುವುದೇ ಸಮಸ್ತ ಸಾಧನೆಯ ಸಾರ, ಮೋಕ್ಷದ ಸಾಧನೆ.

**ಪಾಶುಪತೋಪಾಸೆನೆ:** ಜೀವವು ಪ್ರಕೃತಿಯಿಂದ ಹುಟ್ಟುವ ಗುಣಗಳ ಪಾಶದಿಂದ ಬಂಧಿತವಾಗಿದೆ. ಆ ಭಂದನದಿಂದ ಬಿಡುಗಡೆ ಹೊಂದಲು ಪಶುಪತಿ (ಶಿವ) ಯನ್ನು ಪೂಜಿಸಲಾಗುತ್ತದೆ.

**ಶಾಕ್ತೋಪಾಸನೆ:** ಸರ್ವದೇವಮಯೀ ದೇವೀ (ದೇವಿಯೇ ಸಕಲ ದೇವತೆಗಳೂ). ಆದಿಮ ವಿಶ್ವಶಕ್ತಿ, ಆದಿಪರಾಶಕ್ತಿಯನ್ನು ದೈವಶಕ್ತಿಯ ಸಕಲ ರೂಪಗಳ ಮಾತೃಕೆಯಾಗಿ ಕಲ್ಪಿಸಿಕೊಳ್ಳಲಾಗುತ್ತದೆ. ವಿಶ್ವ ಪ್ರೇರಣೆಯಾದ ಪ್ರಕೃತಿಯು ಅಭಿವ್ಯಕ್ತಿಯ ವೈವಿಧ್ಯ ಮತ್ತು ಅನೇಕತೆಗಳ ಕಾರಣ. ಮಹೇಶ್ವರನಿಗೆ (ಪರಮೋನ್ನತ ದೈವತ್ವ) ಹಾಗೆ ವ್ಯಕ್ತವಾಗುವ ಶಕ್ತಿಯಿದೆ. ಮಹೇಶ್ವರ ಮತ್ತು ಪರಾಶಕ್ತಿ ಇಬ್ಬರೂ ಒಂದೇ ಶಕ್ತಿಯ ಎರಡು ಅಂಶಗಳು. ಈ ಯುಗಳ ಶಕ್ತಿಯು ವಿಶ್ವವನ್ನು ಪ್ರಚೋದಿಸುತ್ತದೆ, ವಿಶಾಲ ಆಕಾಶದಿಂದ ಸಮಸ್ತ ಭೂಮಂಡಲದವರೆಗೆ. ಅವ್ಯಕ್ತ ಪರಮ ಪುರುಷನು ವಿಶ್ವಾತ್ಮಕ ದೇವಿ, ಮಾಯೆ ಅಥವಾ ಪರಾಶಕ್ತಿಯಾಗಿ ವ್ಯಕ್ತವಾಗುತ್ತಾನೆ. ಪ್ರತಿಯೊಬ್ಬ ವ್ಯಕ್ತಿಯಲ್ಲೂ ಜ್ಞಾನವಾಗಿ, ಶಕ್ತಿಯಾಗಿ, ಚಟುವಟಿಕೆಯಾಗಿ ಅನುಭವಕ್ಕೆ ಬರುತ್ತದೆ.

**ಜೈನೋಪಾಸನೆ:** ಜೈನರು ಭಗವಂತನನ್ನು ಪೂಜಿಸುವಲ್ಲಿ ವೈಷ್ಣವ ಒಲವನ್ನು ತೋರಿಸುತ್ತಾರೆ. ಸಾಂಪ್ರದಾಯಕ ಶೈಲಿಯಂತೆ ಶಂಖ, ಚಕ್ರ, ಗದಾ ಪದ್ಮ ಧಾ

ರಿಯಾದ ವಿಷ್ಣು ಮೂರ್ತಿಗಳು ಜೈನ ದೇವಾಲಯಗಳಲ್ಲಿ ಕಾಣುತ್ತವೆ) ಜೈನರ ಮಂತ್ರ ಇದು.

ನಮೋ ಅರಿಹಂತಾಣಂ ನಮೋ ಸಿದ್ಧಾಣಂ
ನಮೋ ಅಯಿರಿಯಾಣಂ ನಮೋ ಉವಜ್ಝಾಯಾಣಂ
ನಮೋ ಲೋಯೇ ಸಬ್ಬ ಸಾಹೂಣಂ

ಆಸೆಗಳನ್ನು ಗೆದ್ದ ಮಹಾವೀರ ಅರಿಹಂತರಿಗೆ ನಮಸ್ಕಾರ; ಸಿದ್ಧರಿಗೆ ನಮಸ್ಕಾರ; ಆಚಾರ್ಯರಿಗೆ ನಮಸ್ಕಾರ; ಉಪಾಧ್ಯಾಯರಿಗೆ ನಮಸ್ಕಾರ; ಲೋಕದ ಸರ್ವ ಸಾಧುಗಳಿಗೂ ನಮಸ್ಕಾರ.

ಈ ಪಂಚ ನಮಸ್ಕಾರವೂ ಸಮಸ್ತ ಪಾಪಗಳ ದುಷ್ಪರಿಣಾಮಗಳೆಲ್ಲವನ್ನೂ ದಹಿಸುತ್ತದೆ. ಈ ಮಂತ್ರದ ಅರ್ಥವನ್ನು ಅನುಭವಕ್ಕೆ ತಂದುಕೊಳ್ಳುವವನಿಗೆ ಅಭ್ಯುದಯ. ಹೀಗೆ ವಿಶ್ವಾತ್ಮಕ ಸ್ತೋತ್ರದಲ್ಲಿ ಮುಳುಗಿದಾಗ ವ್ಯಕ್ತಿಯು ಬಿಡುಗಡೆ ಹೊಂದಿ ಮೋಕ್ಷವನ್ನು ಸಂಪಾದಿಸುತ್ತಾನೆ ಎಂದು ಜೈನರು ಸಾರುತ್ತಾರೆ.

**ಸಿಖ್ ಉಪಾಸನೆ:** ಆತ್ಮವನ್ನು ತೋರಿಸಿಕೊಟ್ಟ, ಅದೇ ತನ್ನ ನಿಜವೆಂದು ಅರಿತುಕೊಳ್ಳುವಂತೆ ಮಾಡುವ ಗುರುವಿಗೆ ಈ ಆರಾಧನೆಯಲ್ಲಿ ಅಗ್ರಸ್ಥಾನ. ಗುರುಗಳ ಬೋಧನೆಯ ಸಂಗ್ರಹವನ್ನು ಗ್ರಂಥಸಾಹೇಬ್ ಎಂದು ಕರೆಯುತ್ತಾರೆ. ಅದನ್ನು ಸಿಕ್ಖರು ಪೂಜಿಸುತ್ತಾರೆ. ಭಾರತೀಯ ಆಧ್ಯಾತ್ಮಿಕ ಪರಂಪರೆಯ ಮೂಲಸ್ತೋತ್ರದಿಂದ ಹರಿದು ಬಂದಿರುವ ವಾಣಿಯದು. ಅಲ್ಲಿಯ ವಿಚಾರಗಳು ಭಾರತೀಯ ಸಂಸ್ಕೃತಿಯ ಸಾರವೇ ಆಗಿವೆ.

**ಕ್ರೈಸ್ತ ಉಪಾಸನೆ:** ಯೇಸು ಪ್ರಭುವು ಜಗದ್ರಕ್ಷಕ. ಮನುಷ್ಯನು ಸಹಜವಾಗಿಯೇ ಪಾಪಕಾರ್ಯದಲ್ಲಿ ತಿಳಿದೋ ತಿಳಿಯದೆಯೋ ತೊಡಗುತ್ತಾನೆ. ಮನುಷ್ಯನನ್ನು ಪಾಪದಿಂದ ಮುಕ್ತನನ್ನಾಗಿಸಿ ಅವನ ಆತ್ಮವನ್ನು ತೊಳೆಯಲು ಯೇಸುವು ಶಿಲುಬೆಗೇರಿದನು, ತನ್ನ ರಕ್ತವನ್ನು ಬಸಿದನು. ಬೈಬಲ್ಲಿನಲ್ಲಿರುವ ಈ ಪ್ರಭುವಿನ ವಾಣಿಯನ್ನು ಅನುಸರಿಸಬೇಕು, ಅವನನನ್ನು ಪೂಜಿಸಬೇಕು. ಇದೇ ಕ್ರೈಸ್ತ ಉಪಾಸನೆ. ಅವನ ಮಹಿಮೆಯನ್ನು ಹಾಡಿ ಸ್ತೋತ್ರಗಳ ಮೂಲಕ ಕೊಂಡಾಡಬೇಕು.

**ಮಹಮದೀಯ ಉಪಾಸನೆ:** ಇಮಾಮ್ದಾರೀ ಖಲ್ದಾಮೇ ಹೋ, ಪೈಗಂಬರ್ ಮೇ ಭರೋಸಾ (ಆತ್ಮವಿಶ್ವಾಸವನ್ನು ಗಳಿಸಿ ಭಗವಂತನ ಮೇಲೆ ಎಲ್ಲ ಭಾರವನ್ನು

ಹೊರಿಸಿರಿ). ಬದುಕಿನ ಪ್ರತಿಯೊಂದು ಕ್ಷಣದಲ್ಲೂ ಭಗವಂತನ ಶಕ್ತಿಯ ಮೇಲೆ ಗಾಢವಾದ ನಂಬಿಕೆಯನ್ನಿಡಿ; ಅದನ್ನು ಪ್ರತಿಯೊಂದು ಕ್ಷಣದಲ್ಲೂ ಗುರುತಿಸಿ; ಇವು ಅರ್ಥಪೂರ್ಣ ಜೀವನಕ್ಕೆ ಹೇಳಿದ ನಿಯಮಗಳು. ವ್ಯಕ್ತಿಯು ಇಲ್ಲಿ ದೇಹತ್ಯಾಗ ಮಾಡಿದ ನಂತರ ಭಗವಂತನ ದರ್ಬಾರಿನಲ್ಲಿ ತಾನು ನಡೆಸಿದ ಉತ್ತಮ ಜೀವನ ವನ್ನು ಸಮರ್ಥಿಸಿಕೊಳ್ಳಬೇಕಾಗುತ್ತದೆ. ಆದ್ದರಿಂದ ದೇವರು ಹಾಕಿಕೊಟ್ಟಿರುವ ನೇರ್ಮೆಯ ದಾರಿಯನ್ನು ಜೀವನದುದ್ದಕ್ಕೂ ಕಟ್ಟುನಿಟ್ಟಾಗಿ ಅನುಸರಿಸಬೇಕು. ಇದಕ್ಕೆ ಪವಿತ್ರ ಕೊರಾನ್ ಮಾರ್ಗದರ್ಶಿಯಾಗುತ್ತದೆ. ಅದನ್ನು ಪೂಜಿಸಬೇಕು, ಅದರ ಒಂದೊಂದು ಅಕ್ಷರವನ್ನೂ ಬಿಡದೆ ಪಾಲಿಸಬೇಕು. ಈ ಉಪಾಸನೆಯಲ್ಲಿ ಅನುಸರಿಸಬೇಕಾದ ಆಧ್ಯಾತ್ಮಿಕ ಬೋಧನೆ ಇದೇಯೆ.

ಅಲ್ಲಾ ಹೋ ಅಕ್ಬರ್; ಲಾ ಇಲ್ಲಾಹ್ ಇಲ್ ಅಲ್ಲಾಹ್. ಇದು ಇಸ್ಲಾಂ ಧರ್ಮದ ಪವಿತ್ರ ಮಂತ್ರ. ಭಗವಂತನೇ ಪರಮೋನ್ನತ ಪ್ರಭು (ಅಲ್ಲಾಹ್), ಸೃಷ್ಟಿಯ ನಿರ್ವಿವಾದ ಪ್ರಭು. ಅವನೊಬ್ಬನೇ ಪೂಜೆಗೆ ಅರ್ಹನಾದವನು. ಭಗವದ್ಗೀತೆಯಲ್ಲಿ ಕೃಷ್ಣಭಗವಂತನು, "ನನಗಿಂತ ಉನ್ನತವಾದದ್ದು ಬೇರೆ ಯಾವುದೂ ಇಲ್ಲ," ಎಂದು ಹೇಳಿದ್ದಾನೆ. ಕೊರಾನಿನ ಈ ಸೂತ್ರವೂ ಅದನ್ನೇ ಹೇಳುತ್ತದೆ. ಮಹಮ ದೀಯ ಉಪಾಸನೆಯೂ ಅದೇ ಸತ್ಯವನ್ನು ಆಧರಿಸಿದ ಅದೇ ಆಧ್ಯಾತ್ಮಿಕ ಸಾಧನಾ ರೂಪ.

ಮನುಷ್ಯನು ತನ್ನ ನಿಜವನ್ನು ಕುರಿತು ಅನ್ವೇಷಣೆ ಮಾಡಲು ಪ್ರಾರಂಭ ಮಾಡಿದಂದಿ ನಿಂದಲೂ, ವಿಶೇಷವಾಗಿ ಭಾರತದಲ್ಲಿ, ಬೃಹತ್ ಪ್ರಮಾಣದ ಆಧ್ಯಾತ್ಮಿಕ ಸಂಪತ್ತನ್ನು ಸಂಗ್ರಹಿಸಿದ್ದಾನೆ. ಆ ಭಂಡಾರವು ಅವನನ್ನು ದುಃಖದಿಂದಲೂ ಬಂಧನದಿಂದಲೂ ಬಿಡುಗಡೆ ಮಾಡಬಲ್ಲದು. ಅದು ಎಷ್ಟು ಅಗಾಧವೂ ಆಳವೂ ಆಗಿದೆಯೆಂದರೆ, ಶತಶತಮಾನಗಳು ಉರುಳಿದರೂ ಹಾಗೆಯೇ ಆಳವಾಗಿ ವಿಶಾಲವಾಗಿ ಉಳಿದು ಕೊಂಡಿದೆ. ಬೇರೆ ಬೇರೆ ಧರ್ಮಗಳ ಉಪಾಸನೆಗಳ ಒಳಹರಿವು ಅದರ ಮೇಲೆ ಯಾವ ಅಡ್ಡಪರಿಣಾಮವನ್ನೂ ಮಾಡಿಲ್ಲ.

ಅಲ್ಲದೆ ಇಂದು ಭಾರತದ ಆಧ್ಯಾತ್ಮಿಕ ಜ್ಞಾನದ ಬೆಳಕು ದಟ್ಟವಾಗಿ ಹರಡುತ್ತಿರುವ ಕತ್ತಲಲ್ಲಿ ದಾರಿತೋರುವ ದೀಪಸ್ತಂಭವಾಗಿದೆ. ಎಲ್ಲ ನಾಡುಗಳ ಎಲ್ಲಾ ಜನಾಂಗ ಗಳನ್ನು ಅದು ಆವರಿಸಿಕೊಂಡು ಇಡೀ ಮಾನವಕುಲಕ್ಕೆ ದಾರಿತೋರಿಸುತ್ತಿದೆ.

ಈ ಪವಿತ್ರಭೂಮಿ ಭಾರತದಲ್ಲಿ ಹುಟ್ಟುವುದಕ್ಕಿಂತ ದೊಡ್ಡ ಸುದೈವ ಇನ್ನೊಂದಿಲ್ಲ, ಇದು ಜಗತ್ತನ್ನು ರಕ್ಷಿಸುವಂತಹ ಅದ್ಭುತ ಭವ್ಯ ಸಂಸ್ಕೃತಿಯ ಭಂಡಾರವಾಗಿದೆ. ಈ ಧನ್ಯತೆಯನ್ನು ಅರಿಯುವುದೇ ಅನುಪಮವಾದ ಆನಂದದ ಒರತೆಯಾಗಿದೆ.

ಅಧ್ಯಾಯ ೨೪

# ಪುರುಷೋತ್ತಮನ ದೇಹ

ಭಾರತೀಯ ಸಂಸ್ಕೃತಿಯ ಸಮಾಜಶಾಸ್ತ್ರೀಯ ಆಧಾರವನ್ನು ಸ್ಪಷ್ಟವಾಗಿ ಅರ್ಥ ಮಾಡಿಕೊಳ್ಳಬೇಕು. ಸ್ವಭಾವ ಮತ್ತು ಪ್ರವೃತ್ತಿಗಳನ್ನು ಪರಿಶೀಲಿಸಿ ಮಾನವ ಜನಾಂಗ ವನ್ನು ನಾಲ್ಕು ವರ್ಗಗಳಾಗಿ ವಿಭಾಗಿಸಿದೆ. ಅವಕ್ಕೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂದು ಹೆಸರಿಡಲಾಗಿದೆ. ಈ ವಿಭಜನೆಯು 'ಮೇಲಿನವರು ಕೆಳಗಿನವರನ್ನು' ತುಳಿಯಲು ಮಾಡಿಕೊಂಡ ದುರುದ್ದೇಶದ ಒಳಸಂಚಲ್ಲ. ಅಥವಾ ಮಾನವನ ಪ್ರಗತಿಯನ್ನು ಕುಂಠಿತಗೊಳಿಸುವ ಒಂದು ಕುತಂತ್ರದ ಪರಿಣಾಮವೂ ಅಲ್ಲ, ಪ್ರತಿಯೊಬ್ಬ ವ್ಯಕ್ತಿಯ ಒಲವನ್ನೂ ಅಭಿರುಚಿಯನ್ನೂ ಪರಿಶೀಲಿಸಿ ಅವುಗಳನ್ನು ಪೋಷಿಸುವುದರ ಮೂಲಕ ಮಾನವ ಸಾಧನೆಯನ್ನು ಉನ್ನತಿಗೇರಿಸಲು ಹಾಕಿದ ಯೋಜನೆ ಎಂದು ಅದನ್ನು ಪರಿಭಾವಿಸುವುದು ಉತ್ತಮ. ಮಾನವ ಪ್ರಗತಿ ಸಾಧನೆಗೆ ಅದು ಹೆದ್ದಾರಿ. ಸಾಮರಸ್ಯ ಹಾಗೂ ಸಾಮಾಜಿಕ ಅಭ್ಯುದಯಗಳು ಖಚಿತವಾಗುವಂತೆ ಮಾನವ ಚಟುವಟಿಕೆಗಳನ್ನು ನಿಯಂತ್ರಿಸುವುದೇ ಅದರ ಉದ್ದೇಶ.

ಎಲ್ಲರಿಗೂ ತಿಳಿದಿರುವಂತೆ ಗೀತಾಚಾರ್ಯನಾದ ಕೃಷ್ಣ ಭಗವಂತನು

> ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣ ಕರ್ಮ ವಿಭಾಗಶಃ ।
> ತಸ್ಯ ಕರ್ತಾರಮಪಿ ಮಾಂ ವಿದ್ಧಿ ಅಕರ್ತಾರಂ ಅವ್ಯಯಂ ॥

ಎಂದು ಹೇಳಿದ್ದಾನೆ. "ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ನಾಲ್ಕು ವರ್ಣ ಗಳನ್ನು ನಾನು ಸೃಷ್ಟಿಸಿದ್ದೇನೆ. ಅವರವರ ಸಹಜ ಗುಣ ಹಾಗೂ ಅವರು ಮಾಡುವ ಕೆಲಸ 'ಕರ್ಮ' ಇವೇ ಅದಕ್ಕೆ ಆಧಾರ. ಇವುಗಳ ಕರ್ತೃ ನಾನೆಂದು ತಿಳಿ. ಹಾಗೆಯೇ ಪರಿವರ್ತನ ರಹಿತನಾದ ನಾನು ಅಕರ್ತನೂ ಆಗಿದ್ದೇನೆ."

ಹೀಗೆ ವರ್ಣವ್ಯವಸ್ಥೆಯು ಗುಣಗಳು ಮತ್ತು ಕರ್ಮಗಳ ಮೇಲೆ ಆಧಾರಗೊಂಡಿ ದ್ದಿತು. ಪ್ರಾರಂಭದಲ್ಲಿ ಜಗತ್ತು ಸ್ವಭಾವತಃ ಸಾತ್ವಿಕ ಪ್ರಧಾನವಾಗಿತ್ತು. ಪರಿಣಾಮವಾಗಿ ಎಲ್ಲರೂ ಕೇವಲ ಬ್ರಾಹ್ಮಣರಾಗಿದ್ದರು. ಆಮೇಲೆ ಬೇರೆ ಬೇರೆ ವೃತ್ತಿಗಳನ್ನು

ಅವಲಂಬಿಸಿದಾಗ, ವಿವಿಧ ಒಲವುಗಳು, ಮೊದಲಾಯ್ಕೆಗಳು ಕಾಣಿಸಿಕೊಂಡಾಗ ಜನರನ್ನು ಬೇರೆ ಬೇರೆ ವರ್ಣಗಳಾಗಿ ಗುರುತಿಸಬೇಕಾಯಿತು. ಮುಂದೆ ಸಾಮಾಜಿಕ ನ್ಯಾಯ ಮತ್ತು ಸಾಮರಸ್ಯಗಳನ್ನು ಕಾಪಾಡುವ ಸಲುವಾಗಿ ಏಕೈಕ ಬ್ರಾಹ್ಮಣ ವರ್ಗವೆಂದು ಋಷಿಗಳು ಸಾಧುಗಳನ್ನು ಗುರುತಿಸಬೇಕಾಯಿತು. ಮಹಾಭಾರತದ ಶಾಂತಿಪರ್ವದಲ್ಲಿ ಭೃಗು ಮಹರ್ಷಿಯು ಕೇಳಿದ ಪ್ರಶ್ನೆಗೆ ವಿಸ್ತಾರವಾಗಿ ಉತ್ತರ ಕೊಡುತ್ತಾನೆ. ಪ್ರಾಪಂಚಿಕ ಸುಖಭೋಗಗಳಲ್ಲಿ ಆಸಕ್ತ ಬ್ರಾಹ್ಮಣರು ಅಹಂಕಾರಗ್ರಸ್ತ ರಾಗಿ ಕ್ರೋಧ, ಕಾಮ ಮತ್ತಿತರ ಭಾವಾವೇಶಗಳಿಗೆ ವಶವಾಗಿ ತಮ್ಮ ಮೂಲ ಸಾತ್ವಿಕ ಗುಣದ ಜೊತೆಗೆ ರಜೋಗುಣ ಮಿಶ್ರಿತರಾಗುತ್ತಾರೆ. ಅವರನ್ನು ಕ್ಷತ್ರಿಯರೆಂದು ವರ್ಗೀಕರಿಸಲಾಗುತ್ತದೆ. ವಾಸ್ತವವಾಗಿ ಎಲ್ಲ ಬ್ರಾಹ್ಮಣರು ಮುಖ್ಯವಾಗಿ ಸಾತ್ವಿಕ ಸ್ವಭಾವದವರಾಗಿರುವುದಿಲ್ಲ. ಹಾಗೆಯೇ ಎಲ್ಲರೂ ಶುದ್ಧಾಂಗವಾಗಿ ಧಾರ್ಮಿಕ ಚಟುವಟಿಕೆಗಳಲ್ಲಿ ತೊಡಗಿರುವುದೂ ಸಾಧ್ಯವಿಲ್ಲ. ಯಾರು ಸತ್ಯದ ಸಾತ್ವಿಕ ಆದರ್ಶಕ್ಕೆ ಬದ್ಧರಾಗಿರುವುದಿಲ್ಲವೋ ಯಾರು ರಜೋಗುಣದ ಜೊತೆಗೆ ತಮೋ ಗುಣದ ಲಕ್ಷಣಗಳನ್ನು ಪ್ರದರ್ಶಿಸುತ್ತಾರೆಯೋ ಅವರನ್ನು ವೈಶ್ಯರೆಂದು ಕರೆಯಲಾ ಯಿತು. ಮಿಕ್ಕವರು, ಹಿಂಸೆಯನ್ನೊಳಗೊಂಡ ವೃತ್ತಿಗಳನ್ನು ಅನುಸರಿಸುವವರು, ಸ್ವಚ್ಛತೆಗೆ ಗಮನ ಕೊಡದವರು, ತಾಮಸಿಕ ಜೀವನೋಪಾಯಗಳನ್ನು ಹಿಡಿದವರು ಶೂದ್ರನೆಂಬ ವರ್ಗವಾದರು. ಹೀಗೆ ವಿವಿಧ ವರ್ಗಗಳನ್ನು ರಚಿಸಿ ಮಾನವ ಸಮಾ ಜದ ಭದ್ರತೆಯನ್ನೂ ಕಲ್ಯಾಣವನ್ನೂ ಸಾಧಿಸಲಾಯಿತು. ಶ್ರುತಿಗಳೇ ಹೀಗೆಂದು ಸ್ಥಿರೀಕರಿಸಿವೆ.

ಶುದ್ಧ ಸಾತ್ವಿಕ ಲಕ್ಷಣಗಳಿರುವವರು ಬ್ರಾಹ್ಮಣರು: ರಾಜಸಿಕಗುಣಗಳಿದ್ದು, ಧೈರ್ಯ ಪರಾಕ್ರಮಗಳಿಂದ ಕೂಡಿದವರು ಕ್ಷತ್ರಿಯರು; ಜನತೆಯನ್ನು ಯಾವುದೇ ಅಪಾಯ ದಿಂದ ರಕ್ಷಿಸುವ ಹೊಣೆ ಹೊತ್ತವರು. ಪರಾಕ್ರಮವಾಗಲಿ ವೀರವಾಗಲಿ ಇಲ್ಲದೆ, ವ್ಯವಹಾರ ಚಾತುರ್ಯವಿದ್ದವರು, ಸೂಕ್ತ ವಿಧಾನಗಳಲ್ಲಿ ಈ ಕೌಶಲವನ್ನು ಉಪ ಯೋಗಿಸಬಲ್ಲವರು ವೈಶ್ಯರು. ಈ ವರ್ಗದಲ್ಲಿ ರಜೋಗುಣ, ತಮೋಗುಣಗಳು ಮಿಶ್ರಿತವಾಗಿವೆ. ಇತರರು, ವೈರಾಗ್ಯವನ್ನಾಗಲಿ ವಿದ್ವತ್ತನ್ನಾಗಲಿ ಪಡೆಯಲು ಆಸಕ್ತಿ ಯಿಲ್ಲದವರು, ಸಾಧನೆ ಮಾಡದವರು, ದೈಹಿಕ ದಾರ್ಢ್ಯವಾಗಲಿ, ಯುದ್ಧಕ್ಕೆ ಅಗತ್ಯವಾದ ಮಾನಸಿಕ ಸ್ಥೈರ್ಯವಾಗಲಿ ಇರದವರು, ವ್ಯವಹಾರ ವಾಣಿಜ್ಯಗಳಿಗೆ ಅಗತ್ಯವಾದ ಕೌಶಲವೂ ಇಲ್ಲದವರು, ಗುಣದಲ್ಲಿ ತಾಮಸಿಕರಾಗಿದ್ದು, ತಾಮಸಿಕ ವೃತ್ತಿಗಳಲ್ಲಿ ನಿರತರಾಗಿರುತ್ತಾರೆ. ಇವರು ಶೂದ್ರರು. ಶ್ರಮದಾನ ಮಾಡುತ್ತಾ ಇವರು ವಿಶ್ವಶಾಂತಿಯ ಅಭ್ಯುದಯಕ್ಕೆ ತಮ್ಮ ಕೊಡುಗೆಯನ್ನು ಸಲ್ಲಿಸುತ್ತಾರೆ.

ಈ ಮೇಲಿನ ನಾಲ್ಕೂ ಜಾತಿಗಳು ಒಂದು ದೇಹದ ಅಂಗಗಳಿದ್ದ ಹಾಗೆ; ಅವು ಬೇರೆ ಬೇರೆ ವಸ್ತುಗಳಲ್ಲ. ಒಂದು ಮೇಲು ಇನ್ನೊಂದು ಕೀಳು ಎಂದು ಹೇಳಲು ಯಾವ ಆಧಾರವೂ ಇಲ್ಲ. ದೇಹವು ಆರೋಗ್ಯವಾಗಿಯೂ ಸಂತೋಷವಾಗಿಯೂ ಇರುವ ಸಲುವಾಗಿ ಒಂದೊಂದು ಅಂಗವೂ ತನ್ನ ಕರ್ತವ್ಯವನ್ನು ನಿರ್ವಹಿಸುತ್ತದೆ. ಆಗ ಪ್ರತಿಯೊಂದು ಅಂಗವೂ ತನ್ನ ಪಾತ್ರ ನಿರ್ವಹಣೆಯಲ್ಲೇ ಅತ್ಯುನ್ನತ ಪ್ರಜ್ಞೆಯ ಸ್ಥಿತಿಯನ್ನು ಪಡೆಯಬಹುದು. ಹಾಗಾಗಿ ಪ್ರಾಚೀನವಾದ ವಿಶಾಲ ತಳಹದಿಯ ವೈದಿಕ ವರ್ಣ ವ್ಯವಸ್ಥೆಯನ್ನು ದೈವಿಕ ಯೋಜನೆಯೆಂದು ಪರಿಗಣಿಸಲಾಯಿತು. ನಾಲ್ಕು ವರ್ಣಗಳು ವಿಶ್ವವಿರಾಟ್ ಪುರುಷನ, ಭಗವಂತನ ನಾಲ್ಕು ಅಂಗಗಳು ಎಂದು ಕಲ್ಪಿಸಲಾಯಿತು.

ಋಗ್ವೇದದಲ್ಲಿ ಬರುವ ಪುರುಷಸೂಕ್ತದ ದೈವಿಕ ಹೇಳಿಕೆಯನ್ನು ಪರಿಶೀಲಿಸಿದರೆ ಈ ಸತ್ಯವು ನಮಗೆ ಸ್ಪಷ್ಟವಾಗುತ್ತದೆ.

ಬ್ರಾಹ್ಮಣೋಽಸ್ಯ ಮುಖಮಾಸೀತ್ ।
ಬಾಹೂ ರಾಜನ್ಯಃ ಕೃತಃ ।
ಊರೂ ತದಸ್ಯ ಯದ್ವೈಶ್ಯಃ ।
ಪದ್ಭ್ಯಾಗ್ಂ ಶೂದ್ರೋ ಅಜಾಯತ ।

ಈ ಹೇಳಿಕೆಯಲ್ಲಿ ಶುದ್ಧ ಸಾತ್ವಿಕ ಸ್ವಭಾವದವರು, ಅತ್ಯುನ್ನತ ಜ್ಞಾನದ ನೆಲೆಯಲ್ಲಿರುವ ಬ್ರಾಹ್ಮಣರು ವಿಶ್ವಪುರುಷನ ಮುಖ ಎಂದು ಹೇಳಲಾಗಿದೆ; ಪ್ರಧಾನವಾಗಿ ಧೈರ್ಯವಂತರೂ ದೇಹ ದಾರ್ಢ್ಯವುಳ್ಳವರು, ಸಾತ್ವಿಕ ರಾಜಸಿಕ ಮಿಶ್ರವಾದ ಗುಣಗಳುಳ್ಳವರೂ ಆದ ಕ್ಷತ್ರಿಯರು ಆ ಪುರುಷನ ತೋಳುಗಳು; ರಾಜಸಿಕ ಮತ್ತು ತಾಮಸಿಕ ಗುಣಗಳ ಮಿಶ್ರ ಸ್ವಭಾವವುಳ್ಳವರಾದ, ವ್ಯವಹಾರ ಕಲೆಯಲ್ಲಿ ನಿಷ್ಣಾತರೂ ಆದ ವೈಶ್ಯರು ಆ ವಿರಾಟ್ ಪುರುಷನ ತೊಡೆಗಳು; ದೈಹಿಕ ಶ್ರಮದಲ್ಲಿ ನಿರತರಾದವರು, ತಾಮಸಿಕ ಗುಣವುಳ್ಳವರು, ಶೂದ್ರರು ವಿರಾಟ್ ಪುರುಷನ ಪಾದಗಳು. ಋಗ್ವೇದದಲ್ಲಿ ಹೀಗೆ ಅದ್ಭುತ ಭವ್ಯ ಮೂರ್ತಿ ಸ್ವರೂಪವನ್ನು ಚಿತ್ರಿಸಿದೆ.

ಆದರೆ, ಈ ಪವಿತ್ರವೂ ಅಗಾಧ ಮಹತ್ವಯುತವೂ ಆಗಿದ್ದ ವರ್ಣವ್ಯವಸ್ಥೆಯು ಅಜ್ಞಾನಿಗಳಾದ, ಅಲ್ಪದೃಷ್ಟಿಯೂ ಸೀಮಿತ ಆದರ್ಶಗಳೂ ಇದ್ದ ಸ್ವಾರ್ಥಿ ಜನರ ಕೈಗೆ ಸಿಕ್ಕಿಕೊಂಡಿತು. ತಮ್ಮ ಮನಸ್ಸಿಗೆ ಬಂದಂತೆ ಅವರು ಜಗತ್ತಿಗೆ ಅಪಾರ ಹಾನಿಯುಂಟುಮಾಡಿದರು. ಇದರ ಫಲವಾಗಿ, ಇಂದು ಈ ಅದ್ಭುತ ವ್ಯವಸ್ಥೆಯನ್ನು

ಬಹುಮತದ ಜನರು ಅಲ್ಪಮತೀಯರನ್ನು ತುಳಿಯಲು ಮಾಡಿಕೊಂಡ ಹುನ್ನಾರು ಎಂದು ಹೀಯಾಳಿಸಲಾಗುತ್ತಿದೆ!

ವರ್ಣವು ಮಾನವ ಸಮುದಾಯವಾಗಿ ಪ್ರಕಟವಾದ ವಿರಾಟ್‌ಪುರುಷನ ದೇಹವೇ ಆಗಿದೆ. ಅದು ಪ್ರತಿಯೊಂದು ಅಂಗವೂ ಮನೋಹರವಾಗಿರುವ, ಕಣ್ಣಿಗೆ ಕಾಣುವ ಭಗವಂತನ ರೂಪ. ಈ ಸತ್ಯವನ್ನು ವ್ಯಾಪಕವಾಗಿ ಗುರುತಿಸದಿರುವುದೀಗ ಬಹು ವಿಷಾದದ ಸಂಗತಿ. ಸಾಕ್ಷಾತ್ ಭಗವಂತನೇ ವರ್ಣ ಅಂಗಾಂಗಗಳ ಸಂಯೋಜನೆಯಾಗಿ ಮಾನವ ಕುಲದ ಏಳಿಗೆಯನ್ನೂ, ಶಾಂತಿ ಸಾಮರಸ್ಯಗಳನ್ನೂ ತಿಳಿಸುವ ಅದ್ಭುತ ಕಲ್ಪನೆಯಿರುವ ಈ ಭಾರತ ದೇಶವೇ ಪುಣ್ಯಭೂಮಿ. ಈ ಸತ್ಯವನ್ನು ಅರಿಯದೆ, ಜನರು ಈ ವ್ಯವಸ್ಥೆಯು ಒಂದು ಮಾನವ ನಿರ್ಮಿತ ಕುತಂತ್ರ ಎಂದು ಸಾರುತ್ತಾರೆ. ಎಲ್ಲರೂ ಸಮಾನ ಎಂದು ವಾದಿಸುತ್ತಾರೆ. ತಮ್ಮ ಈ ನಿರ್ಣಯಕ್ಕೆ ಆಧಾರವಾಗಿ ಬಾಹ್ಯ ಲಕ್ಷಣಗಳನ್ನು ಮಾತ್ರ ತೆಗೆದುಕೊಳ್ಳುತ್ತಾರೆ. ಇಡೀ ಮಾನವ ವರ್ಗವು ಒಂದೇ ಜೀವಿವರ್ಗ ಎಂಬ ಆಧಾರದ ಮೇಲೆ ಅವರು ಸಮಾನತವಾದವನ್ನು ಮುಂದಿಡುತ್ತಾರೆ. ನಿಜ, ಎಲ್ಲ ಮಾನವರೂ ಒಂದೇ ಜೀವವರ್ಗಕ್ಕೆ ಸೇರಿದವರು. ಆದರೆ ಗುಣಗಳಲ್ಲಿ ಮತ್ತು ಅವರು ಅನುಸರಿಸುವ ವೃತ್ತಿಗಳಲ್ಲಿ ಇರುವ ವ್ಯತ್ಯಾಸಗಳಿಂದಾಗಿ ಬೇರೆ ಬೇರೆಯ ವರ್ಗಗಳಾಗುತ್ತವೆ. ಇದು ಅನಿವಾರ್ಯವಾದ ಬೆಳವಣಿಗೆ. ಇದನ್ನು ಯಾರೂ ಅಲ್ಲಗಳೆಯುವಂತಿಲ್ಲ. ಈ ಮಾನವ ಜಗತ್ತಿನಲ್ಲಿರುವ ಎಲ್ಲರೂ ಸಾತ್ವಿಕಗುಣವುಳ್ಳವರಲ್ಲ; ಎಲ್ಲೋ ಕೆಲವು ಜನ ಮಾತ್ರ ಆ ಸ್ವಭಾವದವರು. ಕಣ್ಣಿಗೆ ಕಾಣಿಸುವ ಆಕಾರ ಸಾಮ್ಯತೆಯೊಂದನ್ನೇ ಆಧಾರವಾಗಿಟ್ಟುಕೊಂಡು ಎಲ್ಲ ಮನುಷ್ಯರೂ ಒಂದೇ ಎಂದು ನಿರ್ಣಯಿಸಲು ಬರುವುದಿಲ್ಲ. ಸಾತ್ವಿಕ, ರಾಜಸಿಕ, ತಾಮಸಿಕ ಎಂದೋ ಅವುಗಳಲ್ಲಿ ಒಂದರ ಅಥವಾ ಹಲವು ಗುಣಗಳ ಹಲವು ಮಿಶ್ರಣಗಳಿಂದಲೋ ಬೇರೆ ಬೇರೆಯಾಗಿ ನಿರ್ದಿಷ್ಟ ಗುಂಪುಗಳನ್ನು ಮಾಡಲೇಬೇಕಾಗುತ್ತದೆ. ಇದನ್ನು ತಪ್ಪೆಂದು ಯಾರೂ ಹೇಳುವುದಿಲ್ಲ.

ಸಾಮಾನ್ಯವಾಗಿ ತಾಮಸಿಕ ಗುಣ ಪ್ರಧಾನ ಸ್ವಭಾವವುಳ್ಳವರು ಶೂದ್ರರೆಂಬ ವರ್ಗವಾಗುತ್ತಾರೆ; ಆದರೆ ಅವರಲ್ಲಿ ಶುದ್ಧ ಸಾತ್ವಿಕ ಗುಣವುಳ್ಳ ಅನೇಕರು ಕಾಣಿಸುವುದಿಲ್ಲವೆ? ಶುದ್ಧ ಸಾತ್ವಿಕ ವರ್ಗವಾದ ಬ್ರಾಹ್ಮಣ ವರ್ಗದಲ್ಲಿ ತಾಮಸಿಕ ಗುಣ ಪ್ರಧಾನವಾದವರಿಲ್ಲವೆ? ಆದ್ದರಿಂದ ಭಾರತದ ವೈದಿಕ ಧರ್ಮವು ಅತ್ಯಂತ ಸ್ಪಷ್ಟವಾದ ಮಾತುಗಳಲ್ಲಿ ಸಾರಿ ಹೇಳಿದೆ. ತೋರಿಕೆಯಾಗಲಿ, ಯಾವುದೋ ನಿರ್ದಿಷ್ಟ ಕುಟುಂಬದಲ್ಲಿ ಜನಿಸಿರುವುದಾಗಲಿ ಜಾತಿಯನ್ನು ನಿರ್ಧರಿಸಕೂಡದು; ಗುಣ ಮತ್ತು ವೃತ್ತಿಗಳ ಆಧಾರದಿಂದ ಮಾತ್ರ ಅದನ್ನು ನಿರ್ಣಯಿಸಬೇಕು.

ಚಾತುರ್ವರ್ಣಗಳು ಏಕೈಕವಾದ ಭಗವಂತನ ದೇಹದ ಅಂಗಗಳು. ಅವುಗಳಲ್ಲಿ ಒಂದೊಂದೂ ತನ್ನ ವಿಶಿಷ್ಟ ಪಾತ್ರದಲ್ಲಿ ಅತಿ ಮುಖ್ಯವಾದದ್ದು ಮತ್ತು ಅನಿವಾರ್ಯ ವಾದದ್ದು. ಪ್ರತಿಯೊಂದರ ಗುರಿಯೂ ಮಾನವನಿಗೆ ಸೇವೆ ಸಲ್ಲಿಸುವುದರ ಮೂಲಕ ಭಗವಂತನನ್ನು ಸೇವಿಸಿಸುವುದು. ತನ್ನ ಧರ್ಮದಂತೆ, ತನಗೆ ವಿಧಿಸಿದ ಕಟ್ಟು ಕಟ್ಟಲೆಗಳಂತೆ, ನಡವಳಿಕೆಯ ನಿಯಮಗಳಂತೆ ನಡೆದುಕೊಂಡು ಆ ಗುರಿಯನ್ನು ಸಾಧಿಸುವುದು.

ಶೂದ್ರರಿಗೆ ಆಧ್ಯಾತ್ಮಿಕ ಸಾಧನೆಯನ್ನಾಗಲಿ ತಪಸ್ಸನ್ನಾಗಲಿ ಆಚರಿಸುವ ಹಕ್ಕಿಲ್ಲ, ಆ ಹೊಣೆಗಾರಿಕೆಯೂ ಇಲ್ಲ. ಅವು ಬ್ರಾಹ್ಮಣರಿಗೆ ಸೇರಿದವು ಎಂದು ಕೆಲವು ಜನರು ವಾದಿಸುತ್ತಾರೆ. ನಾವಿಲ್ಲಿ ನೆನಪಿನಲ್ಲಿಟ್ಟುಕೊಳ್ಳಬೇಕಾಗಿರುವುದು, ಮಿತಿಯನ್ನು ಹಾಕಿ ರುವುದು ಶೂದ್ರ ಸ್ವಭಾವಕ್ಕೆ ಹೊರತು ಶೂದ್ರರಾಗಿ ಹುಟ್ಟಿರುವ ವ್ಯಕ್ತಿಗಳಿಗಲ್ಲ ಎಂಬುದನ್ನು. ಸಾಧನೆ ಮಾಡಲು ಅನುಮತಿಯಿರುವುದು ಬ್ರಾಹ್ಮಣ ಸ್ವಭಾವಕ್ಕೇ ಹೊರತು ಬ್ರಾಹ್ಮಣನಾಗಿ ಹುಟ್ಟಿದ ಪ್ರತಿಯೊಬ್ಬ ವ್ಯಕ್ತಿಗೂ ಅಲ್ಲ. ಹಸುಗಳು ಸವಾರಿ ಮಾಡಲು ಪ್ರಾಣಿಗಳಾಗಿ ಅನುಪಯುಕ್ತ; ಕುದುರೆಗಳು ಹಾಲು ಕರೆಯುವ ಪ್ರಾಣಿಗಳಾಗಿ ನಿರುಪಯುಕ್ತ. ಈ ಹೇಳಿಕೆಗೆ ಆಯಾ ಪ್ರಾಣಿವರ್ಗವನ್ನು ಕುರಿತ ದ್ವೇಷವಾಗಲಿ ಅಸಮಾಧಾನವಾಗಲಿ ಖಂಡಿತವಾಗಿಯೂ ಆಧಾರವಲ್ಲ; ಆಯಾ ಪ್ರಾಣಿಯ ಸ್ವಭಾವ ಮತ್ತು ಲಕ್ಷಣಗಳ ಆಧಾರದಿಂದ ನೀಡುವ ಹೇಳಿಕೆ ಅದು. ಹಸು, ಕುದುರೆ ಎರಡೂ ಚತುಷ್ಪಾದಿ ಪ್ರಾಣಿಗಳೇ. ಆದರೂ ಅವುಗಳ ನಿರ್ದಿಷ್ಟ ಸ್ವಭಾವವು ಒಂದನ್ನು ಹಾಲು ಕರೆಯಲು ಉಪಯೋವಾಗುವ, ಇನ್ನೊಂದನ್ನು ಸವಾರಿ ಮಾಡಲು ಉಪಯೋಗವಾಗುವ ಪ್ರಾಣಿಗಳನ್ನಾಗಿ ವರ್ಗೀಕರಿಸಿದೆ. ಅದೇ ರೀತಿಯಾಗಿ ವರ್ಣಗಳನ್ನು ಜನಾಂಗ ಅಥವಾ ಜನನದ ಆಧಾರದ ಮೇಲೆ ವರ್ಗೀಕರಿಸದೆ, ಆಂತರಿಕ ಸ್ವಭಾವ, ಮತ್ತು ಪ್ರವೃತ್ತಿಗಳು, ಅವರವರು ನಿರ್ವಹಿಸುವ ವೃತ್ತಿಗಳ ಆಧಾರದ ಮೇಲೆ ವರ್ಗೀಕರಿಸಿದೆ.

ಕಿಡಿಗಳೆಲ್ಲವೂ ಬೆಂಕಿಯೇ. ಇರುವುದೊಂದೇ ಜಾತಿ, ಮಾನವ ಜಾತಿ. ಅವರನ್ನು ಬೇರೆ ಬೇರೆ ಎಂದು ಘೋಷಿಸಲು ಬರುವುದಿಲ್ಲ, ಅಥವಾ ಅವರು ಬೇರೆಬೇರೆಯಲ್ಲ ಎಂದು ಸ್ಥಿರೀಕರಿಸುವ ಅಗತ್ಯವೂ ಇಲ್ಲ. ಹಾಗೆಯೇ ಮನುಷ್ಯರು ಅಥವಾ ಜೀವಿಗಳು ಬ್ರಹ್ಮದಿಂದ ಬೇರೆಯಲ್ಲ. ಅವರು ಬೇರೆ ಬೇರೆಯಲ್ಲ ಎಂದು ಸ್ಥಿರ ಪಡಿಸುವ ಅಗತ್ಯವು ಇಲ್ಲ. ಬ್ರಹ್ಮ ಮತ್ತು ಜೀವಗಳ ನಡುವಣ ಸಂಬಂಧ ಸಮ ರೂಪತೆ ಅಥವಾ ಏಕತೆಯದ್ದಲ್ಲ; ಬದಲಿಗೆ, ಅದು ಕಾರಣ, ಪರಿಣಾಮ ಸಂಬಂಧ. ಮೋಕ್ಷವು ಸಿದ್ಧಿಸುವವರೆಗೆ ನಿರ್ದಿಷ್ಟವು ವಿಶಿಷ್ಟವೂ ಭಿನ್ನವೂ ಆಗಿರುತ್ತದೆ. ಬಿಡುಗಡೆ ಹೊಂದಿದಾಗ ವ್ಯಕ್ತೀಕರಣದ ಕಾರಣವೇ ಇಲ್ಲವಾದ್ದರಿಂದ ಜೀವವು ಬ್ರಹ್ಮದೊಂ

ದಿಗೆ ಒಂದಾಗುತ್ತದೆ. ಜೀವ ಬ್ರಹ್ಮದ ಪ್ರತ್ಯೇಕತೆ ಮತ್ತು ಏಕತೆಗಳು ಬಂಧನ ಮತ್ತು ಬಿಡುಗಡೆಯ ಭ್ರಮೆಯ ಪರಿಣಾಮಗಳು.

ಬ್ರಹ್ಮವು ಸ್ವಯಂ ಜ್ಯೋತಿ, ಸ್ವಯಂ ಪ್ರಕಾಶ. ಅದು ಪ್ರಜ್ಞೆಯ 'ವಸ್ತು' ವಲ್ಲ ; ಅದು ಎಲ್ಲ ವಸ್ತುಗಳನ್ನೂ ಗ್ರಹಿಸುತ್ತದೆ. ಎಲ್ಲ ವಸ್ತುಗಳೂ ಜೀವಗಳೂ 'ದೃಷ್ಟ', 'ತಿಳಿದದ್ದು' 'ಗಮನಿಸಲ್ಪಟ್ಟದ್ದು' ಎಂಬ ವರ್ಗಕ್ಕೆ ಸೇರುತ್ತವೆ. ಅದು ನೋಡುವವನೇ ಹೊರತು ನೋಡಲ್ಪಟ್ಟ ವಸ್ತುವಲ್ಲ. ಒಂದು ಆಕಾರವನ್ನು 'ನೋಡಿ'ದಾಗ, ಅಲ್ಲಿ ನೋಡಿದ್ದು ಮನಸ್ಸು. ಹಾಗೆಯೇ ಬುದ್ಧಿಯ ಚಟುವಟಿಕೆಗಳೂ ಮನಸ್ಸು 'ನೋಡಲ್ಪಟ್ಟಾಗ' ಅಥವಾ 'ಗಮನಿಸಲ್ಪಟ್ಟಾಗ' ಸಾಕ್ಷೀಭೂತವಾದ ಪ್ರಜ್ಞೆಯೇ ನೋಡುವವ.

ಈ ಸಾಕ್ಷಿಯನ್ನು ಯಾರೂ ನೋಡಲು ಸಾಧ್ಯವಿಲ್ಲ. ಗ್ರಹಿಸಬಹುದಾದ ಎಲ್ಲ ವಸ್ತುಗಳೂ ಆತ್ಮದ ದೇಹವೇ ಹೊರತು ಆತ್ಮವಲ್ಲ. ಅವು ಜೇಡಿಮಣ್ಣಿನ ಮಡಕೆಗಳು ಮತ್ತು ತಟ್ಟೆಗಳ ಹಾಗೆ ನಾಮ-ರೂಪ ಮಿಶ್ರಣಗಳು; ಪ್ರಜ್ಞೆಗೆ 'ನೋಡಿದವು' ಎಂಬ ಭಾವನೆಯನ್ನು ತಂದಿತ್ತು, ಬೆಳ್ಳಿ ಅಥವಾ ಮುತ್ತಿನ ಚಿಪ್ಪು ಎಂಬ ಭ್ರಮೆಯನ್ನುಂಟು ಮಾಡುತ್ತವೆ. ಆತ್ಮ ಇದೆ, ಅದರಿಂದಲೇ ಅದಕ್ಕಾಗಿಯೇ ಇದೆ. ವಿಶ್ವಕ್ಕೆ ಆಂತರಿಕವಾದ ಸತ್ಯತೆ ಇಲ್ಲ. ಅದು ಬ್ರಹ್ಮದಿಂದ ಮೂಡಿದೆ, ಅದರ ಸತ್ಯವು ಬ್ರಹ್ಮದ ಸತ್ಯತೆಯ ಮೇಲೆ ನಿಂತಿದೆ. ಆದ್ದರಿಂದ ಅದರ ವಾಸ್ತವತೆಯು ಬ್ರಹ್ಮದ ವಾಸ್ತವತೆಗಿಂತ ಕೆಳಮಟ್ಟದ್ದು.

ಮಂತ್ರವಾದಿಯು ಇತರರನ್ನು ಮರುಳುಗೊಳಿಸಲು ಹಾಕಿದ ಮೋಡಿಯು ಮಂತ್ರ ವಾದಿಯ ಮೇಲೆ ಯಾವ ಅಡ್ಡ ಪರಿಣಾಮವನ್ನೂ ಬೀರಲಾರದು. ಅದೇ ರೀತಿಯಲ್ಲಿ ಈ ವಿಶ್ವವನ್ನು ಬ್ರಹ್ಮವು ರೂಪಿಸಿರುವುದರಿಂದ ಅದು ಬ್ರಹ್ಮದ ಮೇಲೆ ಯಾವ ದುಷ್ಪರಿಣಾಮವನ್ನೂ ಬೀರಲಾರದು ಎಂಬುದು ಸ್ಪಷ್ಟವಾಗಿದೆ.

ಈ ವಿಶ್ವವು ಅಥವಾ ಜಗತ್ತು ಉದಿಸಿರುವಂತೆ, ಅನುಭವ ವೇದ್ಯವಾಗುತ್ತಿರುವಂತೆ, ಕ್ಷಯಿಸುತ್ತಿರುವಂತೆ ತೋರುತ್ತಿದೆ. ಈ ಮೂರೂ ಪರಿವರ್ತನ ರಹಿತ ಸತ್ಯದ ಮೇಲೆ ಹೇರಿದ ಮೂರೂ ಭಾವನೆಗಳು. ಮುಚ್ಚಂಜೆಯ ಹೊತ್ತಿನಲ್ಲಿ ಹಗ್ಗದ ಮೇಲೆ ಆರೋಪಿಸಿದ ಹಾವಿನ ಹಾಗೆ. ಇದು ಮಾಯೆಯ ಕೆಲಸ. ಅದು ಏಕಕಾಲದಲ್ಲಿ ಮುಚ್ಚಿಡುತ್ತದೆ ಮತ್ತು ತೆರೆದು ತೋರಿಸುತ್ತದೆ. ಮಾಯೆಯನ್ನು ಅಸತ್ಯವೆನ್ನುವಂತಿಲ್ಲ. ಹಾವಿನಂತೆ ತೋರುವ ಹಗ್ಗವು ಮತ್ತೆ ಹಗ್ಗವಾಗಿಯೇ ಉಳಿಯುತ್ತದೆ, ಹಾವು ಮಾಯವಾದಾಗ. ಆದರೆ ವಿಶ್ವವು ಹಾಗೆ ಮಾಯವಾಗುವು ದಿಲ್ಲ. ಅದರ ಅಸ್ತಿತ್ವವನ್ನು ವಿವರಿಸಲೂ ಸಾಧ್ಯವಿಲ್ಲ. ಅದೊಂದು ವಿಶಿಷ್ಟವಾದ ಘಟನೆ. ಬೇರೆ ಯಾವುದರೊಂದಿಗೂ ಅದನ್ನು ಹೋಲಿಸ ಬರುವುದಿಲ್ಲ. ಅಸತ್ಯ

ವೆಂದು ಅದನ್ನು ತಳ್ಳಿಹಾಕುವುದೂ ಸಾಧ್ಯವಿಲ್ಲ, ಸತ್ಯವೆಂದು ಒಪ್ಪಿಕೊಳ್ಳುವುದೂ ಸಾಧ್ಯವಿಲ್ಲ.

ಕೆಲವು ಕಾಲ ಇದ್ದಿದೆಯಾದ್ದರಿಂದ ಅದು ಸತ್ಯ; ಎಲ್ಲ ಕಾಲದಲ್ಲೂ ಇರುವುದಿಲ್ಲ ವಾದ್ದರಿಂದ ಅಸತ್ಯ. ಎಲ್ಲಿಯವರೆಗೆ ಒಂದು ವಸ್ತುವು ಬೇರೆಯಾಗಿರುವುದಿಲ್ಲವೋ ಅಲ್ಲಿಯವರೆಗೆ ಅದು ಸತ್ಯವಾಗಿರುತ್ತದೆ. ತಾತ್ಕಾಲಿಕ, ಕಾರ್ಯ ಸಾಧ್ಯ, ಸಾಪೇಕ್ಷ ಮಟ್ಟದಲ್ಲಿ ವ್ಯವಹರಿಸುವಾಗ ವಿಶ್ವವು ವಿಶ್ವವಾಗಿಯೇ ಉಳಿದಿರುತ್ತದೆ. ಅದು ಸಾಪೇಕ್ಷವಾಗಿ ಸತ್ಯ. ಸತ್ಯ ಒಂದೇ ಒಂದು, ಅದಕ್ಕೆ ಇರುವುದು ಒಂದೇ ಲಕ್ಷಣ. ವಿಶ್ವಕ್ಕಾದರೋ ಕಾಲ, ದೇಶ, ಕಾರಣಗಳ ಮೂಲಕವಾಗಿ ಅನೇಕ ಲಕ್ಷಣಗಳಿವೆ. ಆದ್ದರಿಂದ ಅದು ಅಸತ್ಯ. ಶಂಕರರು ಜಗತ್ತು ಅಥವಾ ವಿಶ್ವವನ್ನು ಮಿಥ್ಯೆ ಎಂದು ಸಾರಿದರು. ಅತ್ಯುನ್ನತವಾದ ಸತ್ಯವನ್ನು ಅರಿತಾಗ, ವಿಶ್ವವು ಸತ್ಯದ ಮೇಲೆ ಆರೋಪಿಸಿದ ಒಂದು ತೋರಿಕೆಯಾಗಿ ಕಂಡುಬರುತ್ತದೆ. ಜಗತ್ತು ಬ್ರಹ್ಮ ಸತ್ಯದ ಮೇಲೆ ಮನಸ್ಸು ಆರೋಪಿಸಿದ್ದಾದುದರಿಂದ ಅದೂ ಒಂದು ಬ್ರಹ್ಮ ವಸ್ತುವೆಂದೇ ಪರಿಗಣಿಸಬೇಕು. 'ಸರ್ವಂ ಖಲ್ವಿದಂ ಬ್ರಹ್ಮ'; ವಾಸ್ತವವಾಗಿ ಇದೆಲ್ಲವೂ ಬ್ರಹ್ಮವೇ.

ಹಾಗೆ ನೋಡಿದರೆ, ಬ್ರಹ್ಮಕ್ಕೂ ಮಾಯೆಗೂ ಆತ್ಮೀಯವಾದ ಸಂಬಂಧವಿದೆ. ಸತ್ಯವು ಒಮ್ಮೆ ಸ್ಥಾಪಿತವಾಯಿತೆಂದರೆ ಎಂದಿಗೂ ಪರಿಣಾಮರಹಿತವಾಗಿ ಉಳಿಯುತ್ತದೆ. ಮಾಯೆಯಾದರೋ ಮೂಲಭೂತವಾಗಿ ಸತ್ಯವಲ್ಲ. ತೋರಿಕೆಯ ಪ್ರಭಾವದಿಂದ ಕಲಿತದ್ದು ಜ್ಞಾನದ ಆಭಾಸ. ಮಿಥ್ಯಾ ಜ್ಞಾನ; ಅದು ಅವಿದ್ಯೆ. ತೋರಿಕೆಯನ್ನು ತಿರಸ್ಕರಿಸಿ ಸತ್ಯವನ್ನು ಗ್ರಹಿಸಿದ ಕ್ಷಣವೇ ಮಿಥ್ಯೆ ಅಥವಾ ಅವಿದ್ಯೆಯು ಮಾಯವಾಗುತ್ತದೆ. ಮಾಯೆಯು ಅಪ್ರಮಾಣವೂ ಅಲ್ಲ, ಪ್ರಮಾಣವೂ ಅಲ್ಲ. ವಿಶ್ವವು ಪ್ರತಿಯೊಬ್ಬನಿಗೂ ಅವನ ದೃಷ್ಟಿಕೋನಕ್ಕೆ ಅನುಗುಣವಾಗಿ ತೋರುತ್ತದೆ. ಅದಕ್ಕೆ ನೋಡುಗನು ಪ್ರಕ್ಷೇಪಿಸಿದ ಹಾಗಲ್ಲದ ಸ್ವತಂತ್ರವಾದ ಅಸ್ತಿತ್ವವಿಲ್ಲ. ಅದರ ಅವಲಂಬನವೂ ಪೋಷಣೆಯೂ ಬ್ರಹ್ಮವೇ. ಬ್ರಹ್ಮವು ಪರಿಣಾಮರಹಿತವಾದ ಕಾರಣ ಪರಿಣಾಮವು ಅದರ ಮೇಲೆ ಯಾವ ಪ್ರಭಾವವನ್ನೂ ಬೀರದು. ಮಾಯೆಯು ಅನಿವಾರ್ಯ ಪರಿವರ್ತನೆಗೆ ಒಳಪಡುವ ಪರಿಣಾಮ. ಬ್ರಹ್ಮವು ಮಾಯೆಯ ಪ್ರಭಾವದಿಂದ ಜಗತ್ತಿನ ಅಸಂಖ್ಯಾತ ವೈವಿಧ್ಯವನ್ನು ಧರಿಸಿದ ಏಕೈಕ ಪರಮ ಸತ್ಯ. ಬ್ರಹ್ಮವನ್ನು ಮಾಯಾ ಸಹಿತವಾಗಿ ಗ್ರಹಿಸಿದಾಗ ಅದು ಜಗತ್ತಿನ ಭೌತಕಾರಣವಾಗುತ್ತದೆ. ಬ್ರಹ್ಮವನ್ನು ಜಗತ್ತಿಗೆ ಕಾರಣವೆಂದು ಹೇಳಿದರೂ ಕಾರಣ ಮತ್ತು ಪರಿಣಾಮ ಎರಡಕ್ಕೂ ಅತೀತವಾಗಿದೆ, ಅದು ಕಾರಣವಾಗಲು ಸಾಧ್ಯವಿಲ್ಲ.

ಜಗತ್ತನ್ನು ಒಂದು ಚಿತ್ರಪಟವನ್ನಾಗಿ ಕಲ್ಪಿಸಿಕೊಳ್ಳಬಹುದು. ಖಾಲಿಯಾದ ಕ್ಯಾನ್ವಾಸ್ ಬ್ರಹ್ಮದ ಹಾಗೆ; ಅದರ ಮೇಲೆ ಹರಡಿದ ವರ್ಣಗಳು ಜಗತ್ತಿನ ಹಾಗೆ. ಜಗತ್ತಿನ ಚಿತ್ರವು ಕ್ಯಾನ್ವಾಸಿನ ಮೇಲೆ ಮೂಡಿದೆ. ಮಾನವನ ಆಕಾರಗಳು ಗಾಢವರ್ಣದಲ್ಲಿವೆ. ಜೀವವು ಜಗತ್ತಿನೊಂದಿಗೆ ಹೊಂದಿರುವ ಸಂಬಂಧಕ್ಕೆ ಅನುಗುಣವಾಗಿ ದುಃಖ ವನ್ನು ಅನುಭವಿಸುತ್ತಾನೆ. ಅವನು ನೋಡಲ್ಪಟ್ಟವನು, ಗಮನಿಸಲ್ಪಟ್ಟವನು. ಬ್ರಹ್ಮವು ಸತ್ಯ; ಜಗತ್ತು ಒಂದು ನಾಟಕ, ಒಂದು ಮೂಕಾಭಿನಯ, ಒಂದು ಕ್ರೀಡೆ. ಅದು ಬ್ರಹ್ಮದಲ್ಲಿ ಸುಪ್ತವಾಗಿರುವ ಇಚ್ಛೆಯ ಅಭಿವ್ಯಕ್ತಿ. ನಾಟಕದ ಹಿಂದಿರುವ ಆ ಇಚ್ಛೆಯನ್ನು ಗುರುತಿಸುವುದೇ ಮೋಕ್ಷ.

ಧ್ಯಾನ, ಪೂಜೆ, ಕರ್ಮ ಮತ್ತು ಇತರ ಚಟುವಟಿಕೆಗಳನ್ನು ಹೇಳಿರುವುದು ಆ ಇಚ್ಛೆಯನ್ನು ಗುರುತಿಸಲು ಸಾಧ್ಯವಿಲ್ಲದಷ್ಟು ಮಂದಮತಿಗಳಾಗಿರುವವರಿಗಾಗಿ. ಲೌಕಿಕ ಪರಿಶ್ರಮದ ಮೂರೂ ಫಲಗಳನ್ನು ಯಾರು ತ್ಯಾಗಮಾಡುವರೋ ಅವರು ಜ್ಞಾನ ಮಾರ್ಗವನ್ನು ಹಿಡಿಯಲು ಅರ್ಹತೆ ಉಳ್ಳವರಾಗುತ್ತಾರೆ. ವೇದಾಂತ ಮಾರ್ಗದ ಸಾಧಕರು ಇವುಗಳಿಂದ ಸಜ್ಜುಗೊಂಡಿರಬೇಕು:

೧. ಅನಿತ್ಯವಾದುದನ್ನು ನಿತ್ಯವಾದುದರಿಂದ ಪ್ರತ್ಯೇಕಿಸಬಲ್ಲ ವಿವೇಚನೆ,

೨. ಲೌಕಿಕ ಅಥವಾ ಪಾರಲೌಕಿಕ ಸುಖಗಳನ್ನು ತೊರೆಯುವ ನಿರ್ಧಾರ,

೩. ಇಂದ್ರಿಯ ನಿಗ್ರಹ, ಆತ್ಮ ನಿಯಂತ್ರಣ, ನಿರ್ಮೋಹ, ಸಹನೆ, ಶ್ರದ್ಧೆ, ಸಮಚಿತ್ತ ಇವುಗಳ ಗಳಿಕೆ ಹಾಗೂ

೪. ಮೋಕ್ಷಕ್ಕಾಗಿ ಉತ್ಕಟವಾದ ಹಂಬಲ.

ಎಲ್ಲ ವಸ್ತುಗಳೂ ದೈವೇಚ್ಛೆಯ ಉತ್ಪನ್ನಗಳು ಎಂದು ಭಾವಿಸಬೇಕು, ಈ ಅರಿವು ಪ್ರಜ್ಞೆಯನ್ನು ಬೆಳಗುತ್ತದೆಂಬ ಪೂಜ್ಯಭಾವದಿಂದ ಅವುಗಳನ್ನು ಬಳಸಬೇಕು. ಪವಿತ್ರ ಕರ್ಮಗಳ ಮಾರ್ಗ ಹಾಗೂ ಬೌದ್ಧಿಕ ವಿವೇಚನೆಯ ಮಾರ್ಗ, ಕರ್ಮ ಮತ್ತು ಜ್ಞಾನ ಮಾರ್ಗಗಳು ಬೇರೆ ಬೇರೆ ಸಾಧಕರಿಗೆ ಹೇಳಿಸಿದಂಥವು. ಎರಡನ್ನೂ ಮಿಶ್ರ ಮಾಡಿ ಒಟ್ಟಿಗೆ ಆಚರಿಸುವುದು ಸಾಧ್ಯವಿಲ್ಲ. ಧಾರ್ಮಿಕ ಜೀವನವು ನೂತನ ಚೈತನ್ಯವನ್ನು ಕೊಡಬಲ್ಲುದು; ಅಭ್ಯುದಯವೂ ಧರ್ಮ ಪರಿಜ್ಞಾನದ ಕೊಡುಗೆಯೇ; ಮೋಕ್ಷವು ಬ್ರಹ್ಮಜ್ಞಾನದ ಉಡುಗೊರೆ. ಬ್ರಹ್ಮದ ಅರಿವಿಗೆ ಅದರ ಮುಂದುವರಿಕೆಗೆ ಯಾವನೇ ಸಾಧಕನ ಆಚರಣೆ ಅಗತ್ಯವಿಲ್ಲ. ಯಾವುದೇ ನಿರ್ದಿಷ್ಟ ಆಚರಣೆಯನ್ನು ಅದು ಅವಲಂಬಿಸಿರುವುದಿಲ್ಲ.

ಮೋಕ್ಷವು ಎರಡು ಬಗೆಯಾಗಿದೆ; ತತ್‌ಕ್ಷಣ ಮುಕ್ತಿ ಮತ್ತು ಕ್ರಮ ಮುಕ್ತಿ. ಮೊದಲನೆಯದು ಜ್ಞಾನ ಸಂಪಾದನೆಯ ಪರಿಣಾಮ. ಎರಡನೆಯದು ಉಪಾಸನೆ, ಆಧ್ಯಾತ್ಮಿಕ ಅಧ್ಯಯನ, ಸಾಧನೆ ಇವುಗಳ ಫಲ. ಜ್ಞಾನವು ಶುದ್ಧ, ಅಮಿಶ್ರಿತ ಅದ್ವೈತಾನುಭವ. ಭಕ್ತಿಯು ಪರಮ ಪ್ರೇಮರೂಪವಾಗಿದೆ, ಭಗವಂತನಿಗಾಗಿಯೇ ಭಗವಂತನನ್ನು ಪ್ರೀತಿಸುವ ಶುದ್ಧ ಪ್ರೇಮವಾಗಿದೆ.

✍ ಟಿಪ್ಪಣಿ

# ಶ್ರೀ ಸತ್ಯಸಾಯಿ ಪಬ್ಲಿಕೇಷನ್ಸ್ ಸೊಸೈಟಿ (ರೆ)

'ಸಾಯಿ ಗೀತಾಂಜಲಿ', ಜೇ.ಪೀ. ನಗರ, ಬೆಂಗಳೂರು ೫೬೦೦೭೮ ✆ +91 94488 08670

## ಪ್ರಕಟಣೆಗಳು

| # | ಶೀರ್ಷಿಕೆ | ₹ | # | ಶೀರ್ಷಿಕೆ | ₹ |
|---|---|---|---|---|---|
| 1 | ಸತ್ಯಂ ಶಿವಂ ಸುಂದರಂ – ಭಾಗ ೧ | 120 | 38 | ಶ್ರೀ ಸಾಯಿ ಸಂಕೀರ್ತನ | 10 |
| 2 | ಸತ್ಯಂ ಶಿವಂ ಸುಂದರಂ – ಭಾಗ ೨ | 72 | 39 | ಶ್ರೀ ಸತ್ಯಸಾಯಿ ಎಜುಕೇರ್ | 10 |
| 3 | ಸತ್ಯಂ ಶಿವಂ ಸುಂದರಂ – ಭಾಗ ೩ | 25 | 40 | ಭಕ್ತರಿಗೆ ಶ್ರೀ ಸತ್ಯಸಾಯಿ ಎಜುಕೇರ್ | 10 |
| 4 | ಸತ್ಯಂ ಶಿವಂ ಸುಂದರಂ – ಭಾಗ ೪ | 26 | 41 | ಬಾಲ ವಿಕಾಸ – ೧ | 80 |
| 5 | ಸತ್ಯಂ ಶಿವಂ ಸುಂದರಂ – ಭಾಗ ೫ | 65 | 42 | ಬಾಲ ವಿಕಾಸ – ೨ | 55 |
| 6 | ಸತ್ಯಂ ಶಿವಂ ಸುಂದರಂ – ಭಾಗ ೬ | 105 | 43 | ಬಾಲ ವಿಕಾಸ – ೩ | 70 |
| 7 | ಸತ್ಯಂ ಶಿವಂ ಸುಂದರಂ – ಭಾಗ ೭ | 130 | 44 | ಬಾಲ ವಿಕಾಸ ೧–೩ರ ಅನುಬಂಧ | 20 |
| 8 | ಶ್ರೀ ಸತ್ಯಸಾಯಿ ವಾಣಿ – ಭಾಗ ೧ | 35 | 45 | ಬಾಲವಿಕಾಸ ಗುರುಗಳ ಕೈಪಿಡಿ | 15 |
| 9 | ಶ್ರೀ ಸತ್ಯಸಾಯಿ ವಾಣಿ – ಭಾಗ ೨ | 35 | 46 | ಈಶ್ವರಮ್ಮ | 40 |
| 10 | ಶ್ರೀ ಸತ್ಯಸಾಯಿ ವಾಣಿ – ಭಾಗ ೩ | 30 | 47 | ಶ್ರೀ ಕೃಷ್ಣ – ಶ್ರೀ ಸತ್ಯಸಾಯಿ | 40 |
| 11 | ಶ್ರೀ ಸತ್ಯಸಾಯಿ ವಾಣಿ – ಭಾಗ ೪ | 46 | 48 | ಸಾಧನಾ, ಅಂತರ್ಮುಖಿ ಯಾತ್ರೆ | 38 |
| 12 | ಶ್ರೀ ಸತ್ಯಸಾಯಿ ವಾಣಿ – ಭಾಗ ೫ | 53 | 49 | ಭರವಸೆಯ ಹೊಂಗಿರಣ | 32 |
| 13 | ಶ್ರೀ ಸತ್ಯಸಾಯಿ ವಾಣಿ – ಭಾಗ ೬ | 25 | 50 | ಶ್ರೀ ಸತ್ಯಸಾಯಿ ಹೃದಯಸ್ಥಾಯಿ | 30 |
| 14 | ಶ್ರೀ ಸತ್ಯಸಾಯಿ ವಾಣಿ – ಭಾಗ ೭ | 30 | 51 | ಪ್ರಶಾಂತಿ ನಿಲಯಂ | 8 |
| 15 | ಶ್ರೀ ಸತ್ಯಸಾಯಿ ವಾಣಿ – ಭಾಗ ೮ | 35 | 52 | ವಾಕ್ಯ–ವಿಭೂತಿ | 10 |
| 16 | ಸತ್ಯಸಾಯಿ ವಾಹಿನಿ | 55 | 53 | ಸ್ವಾಮಿಯೆಡೆಗೆ ತಡೆಯೋಟ | 8 |
| 17 | ವಿದ್ಯಾ ವಾಹಿನಿ | 20 | 54 | ಹೆತ್ತವರ–ಪಾಲಕತ್ವದ ಪಾತ್ರ | 10 |
| 18 | ಜ್ಞಾನ ವಾಹಿನಿ | 15 | 55 | ಶ್ರೀ ಗುರುಚರಣ | 15 |
| 19 | ಉಪನಿಷತ್ ವಾಹಿನಿ | 20 | 56 | ಸಾಯಿತ್ರೀ | 30 |
| 20 | ಧ್ಯಾನ ವಾಹಿನಿ | 20 | 57 | ಶ್ರೀ ಸತ್ಯಸಾಯಿ ಅಷ್ಟೋತ್ತರಶತ | |
| 21 | ಪ್ರೇಮ ವಾಹಿನಿ | 20 | | ರತ್ನಮಾಲೆ | 18 |
| 22 | ಪ್ರಶಾಂತಿ ವಾಹಿನಿ | 20 | 58 | ಜ್ಯೋತಿರ್ಧ್ಯಾನ | 13 |
| 23 | ಪ್ರಶ್ನೋತ್ತರ ವಾಹಿನಿ | 20 | 59 | ಭಗವಲ್ಲೀಲಾ | 35 |
| 24 | ಧರ್ಮ ವಾಹಿನಿ | 25 | 60 | ಚಮತ್ಕಾರ ವಾಣಿ | 15 |
| 25 | ಸಂದೇಹ ನಿವಾರಿಣಿ | 25 | 61 | ಕೋಽಹಂ? ಸೋಽಹಂ! | 15 |
| 26 | ಸೂತ್ರ ವಾಹಿನಿ | 20 | 62 | ನೀತಿ ಪಾಠಗಳು | 30 |
| 27 | ಲೀಲಾ ಕೈವಲ್ಯ ವಾಹಿನಿ | 10 | 63 | ಸಂಧ್ಯಾವಂದನ ವಿಧಿ | 10 |
| 28 | ಭಾಗವತ ವಾಹಿನಿ | 60 | 64 | ಭಜನೆಗಳು | 10 |
| 29 | ಗೀತಾ ವಾಹಿನಿ | 50 | 65 | ಶ್ರೀ ಸತ್ಯಸಾಯಿ ಹೃದಯಸ್ಥಾಯಿ | |
| 30 | ರಾಮಕಥಾರಸ ವಾಹಿನಿ | 120 | | (ಸಾರ ಸಂಗ್ರಹ) | 11 |
| 31 | ಶ್ರೀ ಸತ್ಯಸಾಯಿ ಆನಂದದಾಯಿ | 50 | 66 | ಆತ್ಮಾವಲೋಕನ | 10 |
| 32 | ಶ್ರೀ ಸತ್ಯಸಾಯಿ ಆರಾಧನಾ | | 67 | ಅವತಾರ ಘೋಷಣೆ | 12 |
| | ಸ್ತೋತ್ರ ಸೌರಭ | 12 | 68 | ಶ್ರೀ ಸತ್ಯಸಾಯಿ ಪೂಜಾ ವಿಧಿ | 21 |
| 33 | ಶ್ರೀ ಸತ್ಯಸಾಯಿ ಸಂಸ್ಥೆ (ಭಾರತ) – | | 69 | ರಸಪ್ರಶ್ನೆಗಳು ಶ್ರೀ ಸತ್ಯಸಾಯಿ ಬಾಬಾ | 20 |
| | ನಿಯಮ ಮತ್ತು ನಿಬಂಧನೆಗಳು | 40 | 70 | ರಸಪ್ರಶ್ನೆಗಳು ರಾಮಾಯಣ | 16 |
| 34 | ಶ್ರೀ ಸತ್ಯಸಾಯಿ ದೃಷ್ಟಾಂತ ಸೌರಭ | 15 | 71 | ರಸಪ್ರಶ್ನೆಗಳು ಮಹಾಭಾರತ | 17 |
| 35 | ಸೂಕ್ತಿ ಸೌರಭ – ಭಾಗ ೧ | 10 | 72 | ರಸಪ್ರಶ್ನೆಗಳು ಭಾಗವತ | 17 |
| 36 | ಸೂಕ್ತಿ ಸೌರಭ – ಭಾಗ ೨ | 25 | 73 | ರಸಪ್ರಶ್ನೆಗಳು ಭಗವದ್ಗೀತೆ | 9 |
| 37 | ಸಾಯಿ ಭಜನೆಗೆ ಮಾರ್ಗದರ್ಶಿ | | 74 | ತ್ವಮೇವ ಮಾತಾ | 20 |
| | ಸೂತ್ರಗಳು | 10 | | ಮುಂದುವರಿದಿದೆ ... | |

ಪ್ರತಿಗಳ ಲಭ್ಯತೆಯನ್ನು ಸೊಸೈಟಿಯ ಕಛೇರಿಯಲ್ಲಿ ವಿಚಾರಿಸುವುದು.

# ಶ್ರೀ ಸತ್ಯಸಾಯಿ ಪಬ್ಲಿಕೇಷನ್ಸ್ ಸೊಸೈಟಿ (ರಿ)

‘ಸಾಯಿ ಗೀತಾಂಜಲಿ’, ಜೇ.ಪೀ. ನಗರ, ಬೆಂಗಳೂರು ೫೬೦ ೦೭೮ ✆ +91 94488 08670

## ಪ್ರಕಟಣೆಗಳು

| # | ಶೀರ್ಷಿಕೆ | ₹ | # | ಶೀರ್ಷಿಕೆ | ₹ |
|---|---|---|---|---|---|
| 75 | ನನ್ನ ಆಧ್ಯಾತ್ಮಿಕ ದಿನಚರಿ | 10 | 97 | Sri Sathya Sai, The Indweller | 15 |
| 76 | ಉತ್ಕೃಷ್ಟತೆಯೆಡೆಗೆ ನನ್ನ ವಿಕಾಸ | 8 | 98 | Guidelines for Sai Bhajans | 10 |
| 77 | ಅಮರಪುರಿಯ ಆನಂದ ಯಾತ್ರೆ | 10 | 99 | Balavikas - 1 | 75 |
| 78 | ಪರಮ ವೈದ್ಯ | 28 | 100 | Balavikas - 2 | 70 |
| 79 | ಶ್ರೀ ಸತ್ಯಸಾಯಿ ಪರಮಸುಖದಾಯಿ | 45 | 101 | Balavikas - 3 | * |
| 80 | ಯುಗಾವತಾರಿ ಶ್ರೀ ಸತ್ಯಸಾಯಿ | 60 | 102 | Supplement to Balavikas 1 | 10 |
| 81 | ನನ್ನ ನೆಚ್ಚಿನ ಬಾಬಾ | 45 | 103 | Supplement to Balavikas 2 | 10 |
| 82 | ಸೇವೆಯೇ ಸಾಧನೆ | 31 | 104 | Supplement to Balavikas 3 | 10 |
| 83 | ಶ್ರೀ ಸತ್ಯಸಾಯಿ ಗೀತೆ | 36 | 105 | Sri Sathya Sai Educare | 10 |
| 84 | ವಿದ್ಯಾ ಸಂಸ್ಥೆಗಳಲ್ಲಿ ನೈತಿಕ ವಿದ್ಯೆಯ ಅವಶ್ಯಕತೆ | 10 | 106 | Sai Educare for Devotees | 10 |
| 85 | ವೇದ ಮಂಜರಿ | 60 | 107 | Sandhyavandana Vidhi | 10 |
| 86 | ವೇದ ಮಂತ್ರಗಳು (ಬಾಲವಿಕಾಸ ಮಕ್ಕಳಿಗಾಗಿ) | 30 | 108 | Sainama Kirtana Kaliyuga Sadhana | 100 |
| 87 | ಶ್ರೀ ಸತ್ಯಸಾಯಿ ಸಂಸ್ಥೆಗಳ ಮಾರ್ಗದರ್ಶಿ ಸೂತ್ರಗಳು | 25 | 109 | Educare, Veda of Twenty First Century | 60 |
| 88 | ಶ್ರೀ ಸತ್ಯಸಾಯಿ ಮಧುರ ಸ್ಮೃತಿ | 60 | 110 | Namo Namah Sri Guru Padukabyam | 60 |
| 89 | ಭಾರತದ ಸಂತರು | 50 | 111 | Sri Sathya Sai Balvikas: The Pathway to Excellence–2 | * |
| 90 | ಶ್ರೀ ಸತ್ಯಸಾಯಿ ಮುರುಗನ ಕರುಣಾಮೃತ | 40 | 112 | Brindamrutam | 225 |
| 91 | ದಿವ್ಯ ಪಥ ಭಾಗ – ೧ | 50 | 113 | Sri Sathya Sai Madhura Smrithi | 90 |
| 92 | ಹರಿ ಭಜನ ಬಿನಾ | 30 | 114 | Bhagavallila | 35 |
| 93 | ಒಂದು ದಿವ್ಯ ಜೀವನ | 63 | | | |
| 94 | ದಿವ್ಯ ತಪ | 40 | | | |
| 95 | ಬಾಲ ವಿಕಾಸ ಮಕ್ಕಳ ನಾಟಕಗಳು | 65 | | | |
| 96 | ಸತ್ಯಸಾಯಿ ಈಗಲೂ ಇದ್ದಾರೆ | 105 | | | |

ಪ್ರತಿಗಳ ಲಭ್ಯತೆಯನ್ನು ಸೊಸೈಟಿಯ ಕಛೇರಿಯಲ್ಲಿ ವಿಚಾರಿಸುವುದು.